UNIVERSAL
LIBRARY
OU_200389
UNIVERSAL
LIBRARY

ಶ್ರೀಯುತ ಪಾಂಚಕೊರಿ ದೇ ಮಹಾಶಯರ

ಮಾಯಾವಿ

ಎಂ. ವೆಂಕಟಾದ್ರಿಶಾಸ್ತ್ರಿಗಳಿಂದ

ಪರಿವರ್ತಿತವಾಯಿತು

ಪ್ರಥಮ ಮುದ್ರಣ ೧,೦೦೦

ಬೆಂಗಳೂರಲ್ಲಿರುವ

ಬೆಂಗಳೂರು ಪ್ರೆಸ್ಸಿನಲ್ಲಿ ಮುದ್ರಿತವಾಗಿ

ಕೆ. ಮಾಣಿಕಂ ಕಂಪೆನಿಯವರಿಂದ

ಪ್ರಕಟಿತವಾಯಿತು

(ಎಲ್ಲ ಬಾಧ್ಯತೆಗಳನ್ನೂ ಕಾಯ್ದುಕೊಳ್ಳಲಾಗಿದೆ)

ನನ್ನ ಪರಮಾಪ್ತೇಷ್ಟರೂ

ಮಧುರವಾಣೀ ಪತ್ರ ಸಂಪಾದಕರೂ

ಮಾತೃಭಾಷಾ ಸೇವಕರೂ ಆದ

ಬಹುಮಂಗಳ

ಕೆ. ಹನುಮುದಾಸರ

ಬ್ಯಾಪಕಾರ್ಥವಾಗಿ.

ವಿಜ್ಞಾಪನೆ

ಪೊಲೀಸ್ ಇಲಾಖೆಯಲ್ಲಿ ಪತ್ತೇದಾರಿಯ ಶಾಖೆಯೊಂದು ಇರುವಂತೆಯೇ ಸಪನ್ಯಾಸದಲ್ಲಿ 'ಪತ್ತೇದಾರರ ಸಾಹಸ ಕಥೆಗಳು' ಎಂಬ ಸಾಹಿತ್ಯವಿಶೇಷವುಂಟು. ರಹಸ್ಯವಾಗಿ ನಡೆದ ಕೊಲೆ, ಕಳವು, ದರೋಡೆ ಮುಂತಾದುವುಗಳ ಕಾರಣವನ್ನು ಅಮೂಲಾಗ್ರವಾಗಿ ಶೋಧಿಸಿ, ದೋಷಿಯನ್ನು ದಂಡನೆಗೆ ಗುರಿಪಡಿಸಿದ ಪ್ರಸಿದ್ಧ ಪತ್ತೇದಾರರ ಸಾಹಸ ಕಾರ್ಯಗಳೂ, ತಾವು ನಿರ್ದೋಷಿಗಳೆಂದು ತೋರ್ಪಡಿಸಿಕೊಳ್ಳುವುದ ಕ್ಕಾಗಿ ಕೊಲೆಪಾತಕರು ನಡೆಯಿಸುವ ಭಯಂಕರ ಸನ್ನಾಹಗಳೂ ಇಂತಹ ಸಾಹಿತ್ಯದಲ್ಲಿ ಚಿತ್ರಿತವಾಗಿರುತ್ತವೆ. ಇಂತಹ ಪುಸ್ತಕಗಳು ಜನ ಸಾಮಾನ್ಯರ ಪಾಠನಾಭಿರುಚಿಯನ್ನು ಸೃಷ್ಟಿಗೊಳಿಸುವುದೂ ಅಲ್ಲದೆ ಪ್ರಾಸಂಗಿಕ ಸ್ವಭಾವದಲ್ಲಿನ ಯುಕ್ತಾಯುಕ್ತ ವಿಚಾರಗಳನ್ನೂ ಸಾಧಾರಣಾಸಾಧ್ಯ ವಿವೇಚನೆಯನ್ನೂ ತರಿತುಕೊಳ್ಳುವ ಪುಟ್ಟಿಗೆ ಜನರ ಮನಶ್ಶಕ್ತಿಯನ್ನು ಪಕಸನಗೊಳಿಸತಕ್ಕುದಾಗಿಯೂ ಇರುತ್ತವೆ. ಇಂತಹ ಗ್ರಂಥಗಳು ಪಾಶ್ಚಾತ್ಯ ಸಾಹಿತ್ಯದಲ್ಲಿ ವಿಪುಲವನ್ನೂ ಸ್ಪುಟವಾಗುತ್ತಿರುವ ಪಾಗೆಯೇ ಪೌರ್ವೀಯರು ಕೂಡ ದೇಶೀಯರ ಮುಖ್ಯ ಬಲದ ಸಂಧಾರಣೆಗಾಗಿ ಇಂತಹ ಪುಸ್ತಕಗಳನ್ನು ಹೇರವಾಗಿ ಪ್ರಕಟಿಸಲು ಪ್ರಯತ್ನಿಸಬೇಕಾಗಿದೆ.

ಈ ಪುಸ್ತಕದ ಮೂಲಗ್ರಂಥಕಾರರಾದ ಶ್ರೀಯುತ ಬಾಬು ಸಾಂಡಿಕೊಲು ದೇ ಮುಖಾಶಯರು ಈ ತಮ್ಮ ಸಂಗಭಾಷೆಯ ಗ್ರಂಥ ಲೇಖನದಲ್ಲಿ ಸಿದ್ಧಹಸ್ತರು. ಇವರಿಂದ ಲಿಖಿತವಾದ ಪರಿಮಳಾ, ಮನೋರಮಾ ಎಂಬ ಪತ್ತೇದಾರೀ ಕಥೆಗಳನ್ನು ಬಹುಮಂದಿ ಪ್ರೌಢ ಕನ್ನಡಿಗರು ಈ ಮೊದಲೇ ಕನ್ನಡಿಸುವುದರ ಮೂಲಕ ಕನ್ನಡಿಗರಿಗೆ ದೇ ಮುಖಾಶಯರ ರಚನಾ ಕೌಶಲದ ಪರಿಚಯವನ್ನು ಮಾಡಿಕೊಟ್ಟಿರುತ್ತಾರೆ. ಆದರೂ ಈ ಕಥೆಯಲ್ಲಿ ಚಿತ್ರಿತವಾಗಿರುವಂತಹ ಭೀಷಣ ಘಟನಾವಳಿಗಳನ್ನೂ ಅಲೌಕಿಕ ವ್ಯಾಪಾರಗಳನ್ನೂ ಕನ್ನಡಿಗರು ಓದಿ ಅರಿಯರು. ನಿಷ್ಕರುಣಿಯಾದ ಕೊಲೆಪಾತಕಿಯ ಸಾಹಸ ಕಾರ್ಯ ಕೌಶಲಗಳನ್ನೂ, ಕೊಲೆಪಾತಕನನ್ನು ಬಹಿರಂಗಪಡಿಸುವುದಕ್ಕೆ ಪ್ರಸಿದ್ಧ

ಪತ್ತೇದಾರನಾದ ಅರಿಂದಮನು ಇವಲಂಬಿಸಿದ ರೀತಿ ನೀತಿಗಳನ್ನೂ, ನಸ್ಯುದಳದವರ ಪತ್ತಾರಹಸ್ಯಗಳನ್ನೂ, ಪಾಯವಾಪಿಸಿಯಾದ ಜಂಪುಲೆಯ ಸಾಹಸ ಪೂರ್ಣವಾದ ಕಪಟಾಚರಣೆಗಳನ್ನೂ ಈ ಕಾದಂಬರಿಯಲ್ಲಿ ಕೌತುಕಪ್ರದವಾಗಿ ಚಿತ್ರಿಸಿ, 'ಅಧರ್ಮಕ್ಕೆ ಎಂದಿಗೂ ಜಯವಿಲ್ಲ' ಎಂಬುದನ್ನು ಸಿದರ್ಶನಗೊಳಿಸಿದೆ.

ಇದರ ಪರಿವರ್ತನ ಕಾರ್ಯವನ್ನು ಮುಗಿದು ಸುಮಾರು ವರ್ಷಗಳೇ ಆಗಿದ್ದರೂ ಕೆಲವು ಅನಿವಾರ್ಯಗಳ ದೆಸೆಯಿಂದ ಇಂದಿಲ ನನ್ನ ಲೇಖನಗಳಿಗೆ ಉದಾರಾಶ್ರಯ ಕೊಡುತ್ತಿದ್ದ ಶ್ರೀ ಕೃಷ್ಣಸೂಕ್ತಿ ಪತ್ರಿಕೆಯ ಪಶಾತಾತ್ಯಾಗಿ ನಿಂತುಹೋದುದರಿಂದಲೂ ಈ ಪುಸ್ತಕವನ್ನು ಸ್ವತಂತ್ರ ಗ್ರಂಥವಾಗಿ ಮುದ್ರಿಸಿ ಪ್ರಕಾಶಪಡಿಸಬೇಕೆಂದು ಕುತೂಹಲಪಡುತ್ತಿದ್ದ ಮೈಸೂರು ಪುಥುರವಾಣೀ ಸಂಪಾದಕರಾದ ಶ್ರೀ ಹನುಮಂದಾಸರವರ ಅಕಾಲ ಸಿಧನದಿಂದಲೂ ನನ್ನ ಸಂಕಲ್ಪವು ಪೂರ್ಣವಾಗುವುದಕ್ಕೆ ಈವರೆಗೆ ಸಾಧಕಾಶವಾಯಿತು. ಪ್ರಕೃತದಲ್ಲಿ, ಇದನ್ನೂ ನನ್ನ ಇತರ ಪುಸ್ತಕಗಳನ್ನೂ ಪ್ರಕಟೀಕರಿಸುವುದಾಗಿ ಭರವಸೆಕೊಟ್ಟು ಇದರ ಪ್ರಕಟಣ ಕಾರ್ಯವನ್ನು ಕೈಗೊಂಡ ಮುಸರ್ಾ. ಕೆ. ಪಾಂಡಿಕಂ ಕಂಪೆನಿಯವರಿಗೆ ಈ ಮುದ್ರಣದ ಅಧಿಕಾರವನ್ನು ಪಡಿಸಿಕೊಟ್ಟಿರುತ್ತೇನಲ್ಲದೆ ಅವರಿಗೂ ಮೂಲಗ್ರಂಥಕಾರರಿಗೂ ನಾನು ತುಂಬ ಋಣಿಯಾಗಿರುತ್ತೇನೆ. ನನಗೋಸ್ಕರ ಮೂಲಗ್ರಂಥಕಾರರಿಂದ ಅನುಜ್ಞಾ ಪತ್ರವನ್ನು ತರಿಸುವ ಪ್ರಯತ್ನದಲ್ಲಿ ಕೃತಕಾರ್ಯರಾದ ಉಡುಪಿಯ ಶ್ರೀ ಕೃಷ್ಣಸೂಕ್ತಿ ಕರ್ತರು ಶ್ರೀಯುತ ಬಿ.ಎ. ರಾಜಗೋಪಾಲಕೃಷ್ಣರಾಯರಿಗೂ, ಇದನ್ನು ಅದಷ್ಟು ಜೇಗ ಮುದ್ರಿಸಿ ಕೊಟ್ಟುದಕ್ಕಾಗಿ ಬೆಂಗಳೂರು ಪ್ರೆಸ್ಸಿನವರಿಗೂ ನಾನು ಕೃತಜ್ಞನಾಗಿದ್ದೇನೆ.

ಸದಸದ್ವಿವೇಚಕರಾದ ಪಾತಕಿ ಪಾತಕಿಯರ ಅದರಕ್ಕೆ ಈ ಪುಸ್ತಕವೂ ಪಾತ್ರವಾಗುವುದಾದರೆ ನನ್ನ ಶ್ರಮವು ಸಾರ್ಥಕವಾಯಿತೆಂದು ಭಾವಿಸುತ್ತೇನೆ.

ಬೆಂಗಳೂರು,
ತಾ: 23-1-28.

ಸಜ್ಜನ ವಿಧೇಯ,
ಪರಿವರ್ತನಕಾರ.

ವಿಷಯಾನುಕ್ರಮಣಿಕೆ

ಉಪಕ್ರಮಣಿಕೆ

ಪರಿಚ್ಛೇದ	೧.	ನದಿಯ ತೀರದಲ್ಲಿ	.. ..	ಪುಟ ೧
,,	೨.	ರಹಸ್ಯಮಯವಾದ ಕೊಲೆ	.. ..	೭
,,	೩.	ಕೊಲೆಪಾತಕನು ಯಾರು ?	.. ..	೯
,,	೪.	ಕೊಲೆಗಾರನ ವೀರತ್ವ	.. ..	೧೭
,,	೫.	ಅರಿಂದಮನ ನೈಪುಣ್ಯ	.. ..	೧೫

೧ ನೆಯ ಭಾಗ ೧೯–೨೫

ಪರಿಚ್ಛೇದ	೧.	ಪ್ರಾಂತರದಲ್ಲಿ	.. ..	೧೯
,,	೨.	ಈ ಬಾಲಕಿ ಯಾರು ?	.. ..	೨೪
,,	೩.	ಯದುನಾಥಗೋಸ್ವಾಮಿ	.. ..	೨೯
,,	೪.	ಬಂಧಿನೀ	.. ..	೩೧
,,	೫.	ಮರ್ಮಾಹತಳು	.. ..	೩೫
,,	೬.	ಬಿಡುಗಡೆ	.. ..	೩೮
,,	೭.	ಹೆಣ್ಣುಹುಲಿ ಮತ್ತೂ ಸರ್ಪ	.. ..	೪೦
,,	೮.	ಮೋಹಿನಿ ಮತ್ತೂ ರೇವತಿ	.. ..	೪೭
,,	೯.	ಕೇಶವಚಂದ್ರನ ಬಿಡುಗಡೆ	.. ..	೪೪
,,	೧೦.	ಮೋಹಿನಿಯ ಸಂಧಾನ	.. ..	೪೬
,,	೧೧.	ವಿಚಾರಣೆ	.. ..	೫೧
,,	೧೨.	ಪದಚಿಹ್ನೆ	.. ..	೫೫
,,	೧೩.	ಈ ಸುಂದರಿ ಯಾರು ?	.. ..	೬೨
,,	೧೪.	ಹಿಂಬಾಲಿಸಿದಾಗ	.. ..	೬೬
,,	೧೫.	ಮಲ್ಲಯುದ್ಧ	.. ..	೬೯
,,	೧೬.	ವೇಷಾಂತರದಲ್ಲಿ	.. ..	೭೩

ಪರಿಚ್ಛೇದ	೯.	ಗುಪ್ತದ್ವಾರ	.. ..	ಪುಟ ೨೮೦
,,	೧೦.	ಭೂಗರ್ಭದಲ್ಲಿ	.. ..	೨೮೨

ಭಾಗ ೪ನೆಯ ಭಾಗ ೨೮೬—೩೫೧

ಪರಿಚ್ಛೇದ	೧.	ಭಯಂಕರ ಸನ್ನಾಹ	.. ..	೨೮೬
,,	೨.	ಭೀಷಣ ದುರಾಲೋಚನೆ	.. ..	೨೮೯
,,	೩.	ಮೋಹಿನಿಯ ಕಡೆಯ ಪ್ರಯತ್ನ	.. ..	೨೯೫
,,	೪.	ಅರಿಂದಮನ ಸನ್ನಾಹ	.. ..	೩೦೫
,,	೫.	ಸ್ವಾಗತ ಸನ್ನಾಹ	.. ..	೩೧೦
,,	೬.	ಗುಪ್ತದ್ವಾರ	.. ..	೩೧೫
,,	೭.	ನೂತನ ಪ್ರಕ್ರಿಯೆ	.. ..	೩೨೯
,,	೮.	ಕೊಲೆಗಾರನ ಹೇಳಿಕೆ	.. ..	೩೩೨
,,	೯.	ಭೀಷಣ ಪ್ರತಿಹಿಂಸೆ	.. ..	೩೩೭
,,	೧೦.	(* * * *)	.. ..	೩೪೧
,,	೧೧.	ಸನ್ನಾರ್ಗದ ತೀರ್ಪಿಕೆ	.. ..	೩೪೪
,,	೧೨.	ಸನ್ನಾರ್ಗದ ಅಭಿನಯ	.. ..	೩೪೭
,,	೧೩.	ಪ್ರಮಾಣಪತ್ರ	.. ..	೩೪೧
,,	೧೪.	ನಿರುಪಮೆ	.. ..	೩೪೫
,,	೧೫.	ಪರಿಶಿಷ್ಟ	.. ..	೩೪೮

ಶ್ರೀಃ

॥ ಶ್ರೀನಿವಾಸಾಯ ನಮಃ ॥

ಮಾಯಾವಿ

ಉಪಕ್ರಮಣಿಕೆ

ಒಂದನೆಯ ಪರಿಚ್ಛೇದ

ನಮಯ ತೀರದಲ್ಲಿ

ಸೋಫಿಸಿಗೆ ಬರಬರುತ್ತ ಅಸಹಾಯಕಾದ ಹಚ್ಚಿತು. ಸೋಫಿಸಿಯ ಹಗಲೂ ರಾತ್ರಿ ಯಾರನ್ನೋ ಕುರಿತು ಚಿಂತಿಸುವಳು, ಸೋಫಿಸಿಯು ಏಟಿನವಾದ ಕೆಡೆ ಕಾಲುಸೀಟು ಕುರಿತು ಆಲೋಚಿಸುವಾಗ ಸೋಫಿಸಿಯು ಬಿದ್ದುಬನ್ನು ಕುಬ್ಜಿಕೊಳ್ಳುವಳು, ಯಾಗೆಯ ಬರಹು ಕೈಗಳಿಂದಲೂ ತನ್ನ ತಲೆಗೂದಲನ್ನೇ ಕೆತ್ತಿಸೆಯುವಳು ಗಟ್ಟಿ ವಳು. ಬಂದೊಂದು ನೇರ ಸೋಫಿಸಿ ಆಲೋಚಿಸುವ್ಯಾಗೆಲ್ಲೋ ನಗೆ ಉಕ್ಕುಬುಸುಬುಸುಗುವಳು, ನಗುತ ನಗುತಲೆಬನ್ನು ನುಚ್ಚಿ ಅಳುವಳು; ಸೋಫಿಸಿಯು ಮುಚ್ಚಿಯಾಗಿ ಹೋಗಿದ್ದಾಳೆ, ಇನ್ನೂ ಅಗುವುದರಲ್ಲಿದ್ದಾಳೆ ಈಗ ಸೋಫಿಸಿಗೆ ಬಿದ್ದುದ್ದೆಲ್ಲವೂ ಸೊಡಲಿನ ಆ ಕಟಾಕ್ಷವೆ ಸೋಫಿಸಿಗೆ ಸೊಡಲಿನ ಆ ಸೋಫಿಸೀ ಶಕ್ತಿಯೂ ಈಗ ಇಲ್ಲ; ಸೋಫಿಸಿಯ ಇಷ್ಟರ ವ್ಯಸನಕ್ಕೆ ಕಾರಣವೇನು? ಹೇಳುತ್ತೇನೆ.

ರಾತ್ರಿ ಕಗ್ಗತ್ತಲೆ; ಜೆಕಕು ಹುರಿವುದಕ್ಕೆ ಹೆಚ್ಚು ಬೆಳಂಜಿಯ ಇದಕ್ಕೆ ಮೊದಲು, ಬಹಳ ಹೊತ್ತಿಗೆ ಮುಂಚೆ, ಬಂದು ಹದ ಒಳ್ಳೆ

ಮಳೆಯಾಗದೆ; ಅದರೂ ಬಿಕಾಶವನ್ನು, ಅನಂತವಾಗಿ, ಇನ್ನೂ ಮೋಹವು ಅಪರಿಸಿದೆ; ನೋಟದಲ್ಲಿ ಇನ್ನೊಂದು ಪದ ಮುಳಿಗರೆಯುದೆ ಸ್ವಲ್ಪವಾದರೂ ಮುಂದಕ್ಕೆ ನಡೆಯುವ ಹಾಗಿಲ್ಲವೆಂದು ತೋರುತ್ತದೆ. ಐನೆರಡು ಒಗೆಯ ಕಬ್ಬಿಗಳಾಗುತ್ತಿದ್ದುದರಿಂದ ಆ ರಾತ್ರಿಯು ಕೇವಲ ನೀರವ-ನಿಸ್ತಬ್ಧವಾಗಿರುತ್ತಿತ್ತೆಂದು ಹೇಳಬರುವುದಿಲ್ಲ; ಬಹಿರಾಗಾರುವ ನದಿಯ ಕಲಕಲನಾದ-ಇದು ನಿರಂತರವಾದದ್ದು; ನಡುಮ ತೀರದಲ್ಲಿ ಲಕ್ಕೂಕಲಕ್ಕಿ ಘೂಳ್ಗೆಗಳ ಏಕ ಕಂಠದ ಆರ್ತನಾದ-ಇದೂ ನಿರಂತರವಾದದ್ದು; ಗೂಡುಸಲ್ಲ ಬಚ್ಚಿರಗೊಂಡ ಪಕ್ಷಿಯ ರಕ್ಕೆ ಬಡಿತದ ಕಬ್ಬ-ಇದು ಒಂದೊಂದು ನೇಳೆ; ಸಮಾಧಾನ ಪಳಿದುಳ್ಳ ನಿದ್ದೆಯಿಂದೆದ್ದು ಯಾವುದೋ ಮುಗುಟನ ಕರುಣಕ್ರಂದನ-ಕೊಂಚಹೊಟ್ಟಿಗೆ, ಆತಿ ದೂರದಲ್ಲಿ ನಾಯಿ ಜೊಗಳಿದ ಕಬ್ಬ-ಇದೂ ಒಂದೊಂದು ನೇಳೆ. ನಡುಮ ಇಳ ! ಒಂದೊಂದು ಅಲೆಯುಳ್ಳಲ್ಲಿಯೂ ನೋಡಬಹಾದೆಯೂ ಅಂಧ ಕಾ ಸೆರಿ ನಕ್ಷತ್ರದ ಪ್ರತಿಬಿಂಬವಿರುವಂತೆ; ಬಿಜ್ಜಿ ಸ್ಪಷ್ಟವಿಲ್ಲ ತೀರದಲ್ಲಿ ಬೆ ... ಆಸ್ಪಷ್ಟಮಸ್ಪಷ್ಟವಾಗಿ ಎತ್ತಲಕೆಯೋ ಸೊಂಡಿಲೆತ್ತಿದಾನೆ. ಆ ಕ್ಷಿಯಿಲ್ಲಿಯೂ ನೋಡಬಹುದಾಗಿದೆ. ಆ ಕಾಳಿಯಲ್ಲಿ ನೋಡಬಹುದಾದ ಸೆಳೆಯ ಅಂಧಕಾರವನ್ನು ಹುಡುಕ್ಕಿ ಸಿಂ ಳುಹಿಸಿದಾಗ ಅಂಧಕಾರವುಳಿದಾಗ ನಡುಮ ಸಕ್ಕಿಸುವನ್ನು ಹುಡುಕ್ಕಿಸಿ ರುಹಿಸಿಯೂ ಉಳಿದಾಗ. ಹುಡಾಡುತ್ತಿರುತ್ತೆ. ಆಗ ಕಾಯಿಲೆ ಬಾಸಿರು ವವನ್ನು ಮೃಗಾಲಯವಾಸಿಗಳಿಕ್ಕೆಂಡಿರುವ ಬಂದೊಂದು ಸಾ ಕೊಂಚ ಕ್ಷಯಿಸಿ ಕ್ಷಯಿಸಿ ಹುಡುಕ್ಕಿದ್ದರು; ಅದೂ ಕ್ಷಯಿಸಿ ಸಾಗಿತ್ತು.

ನಡುಮ ತೀರದಲ್ಲಿದ್ದ ಸಕ್ಕಿಯ ಏಂಥಾಗನ್ನು, ಕ್ಷಯಿಸಿಗೂ ಸಾಗಿಸಿಯೂ ಹುಲಕಾಗಿ ಚೆಲುವಾದ ಚೆಲುವನ್ನು ಕೆಲವೆಲ್ಲ ಏಮಿನುಕೆಂಡಾ, ಸ್ವಲ್ಪಸಾಗಿ ಬೆಟ್ಟಿಗಳಿಸಿಯಾಕ್ಕೆ ಹುಂಬಿರಿದು ಬಿರುತ್ತಿದ್ದರು; ಬಿಟ್ಟಿಂಧಿದ್ದಾಗಾದ ಆ ಅಂಧಕಾರದಲ್ಲಿ ಆನಕ ಬರದು ಕಣ್ಮಿಗಳನು ಶಾಚಿಯ ಕಣ್ಮಿಗಳ ಬಾಗೆ ಕೆಲಸಗೆ ಬಾರುವೆಂಬರಾಗಿ ಬ್ಲೂಬಸು ನ್ಯಾಸ್ಯ.

ನೋಂಪಿಸಿಯು ತನ್ನ ನಡಾಡಕ್ಕೆ ಒಂದೆಂದು ತೋರುಬಾಗ ಆ ಕ್ಷಿಯು ಏಂಬರಾಗಿ ನೋಡದೆಯೋ, ನೋಂಪಿಸಿ! ಎಂದು ಹುನಃ

ನನ್ನನ್ನು ರೇಗಿಸಲು ಬಂದೆಯಾ? ಅನ್ನು ಸುಬಾಷಕ್ಕೆ ಬರಜೇಡ, ನನ್ನನ್ನು ಹೊಟಿಯುತ್ತೀಯೇನು? ಹಾಗಾದ್ರೆ ಸೀನು ಸೀನಾ ಗುಜೇ ಸಾಯುನೆ,—ಬಂದು ನಗುತಾ ಹೇಳಿದನು.

ಪತಾಕಳಾದ ಹೊಳಿಬಿಸಿಲು ಬಿಸ್ಸುಮಗೊಂಡಬಳಾಗಿ ಅಲ್ಲಲ್ಲಿಜೋ ಸಿಂತುಕೊಂಡಳು. ನುತ್ತೆ ಅನು ಗುಂಬಿರಿಯುತೆ ಹೇಳಿದಳು. ''ನಾನು ಸತ್ತೇ ಇದ್ರೇನೆ; ನುರಣಿಸೆಂಬುದು ಅನ್ನು ಜೀವಿ ಇರುವ್ದು ದೇನು? ಅದರೆ, ಬಿಸೂರಿ, ನೀನು ಬಯಸುವಾ ಬಂದು ಬನುಕಿ ಕೊಂಡಹಾಗಾಯ್ತು. ಬಂದು ಬಿಸು,—ಅಂತಹ ಬಿಸುವೊ ಬರುತ್ತೆ, ಆ ಬಿಸುವ ಈ ಜಗುಲಿಯೊ ನನ್ನ ಬ್ಯಾಣಯುಲ್ಲಿ ಎಂದ್ಯೂಗಾಗಾ ನಟ್ಟಿರುವ್ದ ದನ್ನು ನೀನೇ ಕಾಣುತ್ತೀಯೆ.''

ಬಿಸೂರಿದರಾಜನು—''ಬದು ನುಡಿದ ಮುಗುವನ್ನು ಜೀಗೆ ಧುಯೆಂಬುಬುದ್ದು ಅಪರಾಧವಾಗುವುಬುಲ್ಲ; ನದಿಗೇಜಿ, ಹೊಂಬಿಬಿ?'' ಬಂದು ಬೇರೆ ಹುಟಾಡಿದನು ಸಚ್ಚನು.

ತ ನಾಯಿಗೆ ಹೊಂಬಿಬಿಲ್ಲ ಬಿಸೂರಿದ್ದಿರನನ್ನು ಕೊಲೆಮಲ್ಲ.

ಬಿಸೂರಿದರಾಜನು ಜೋರಾಗಿ—''ಹೊಂಬಿ, ಹೊಂಬಿಬಿ! ನೀನು ಈ ಸಂಕಲ್ಪವನ್ನು ಬದು. ನೀನು ನನ್ನನ್ನು ಕೊಂದುಬಿಂಬಿಬಿಬೇನು? ನೀನು ಬಿನು ಹುಡಾಬಿದರೂ ನನ್ನ ಲಿಂದರಲ್ಲಿ ಬಂದು ನಾಯಿ ನನ್ನ ನುಣಾದಾಂತೆ; ಆದರೆ, ನಾನು ಬಂದಾಗಿ ನುದಕ್ಕ್ಯಾ ಬಿಬಿಸಿನಿಲ್ಲ, ಕೂಬಲೆ ಬಿನ್ನ ಬೆಂಗಾವಲ್ಲಿ ಬಿಬು ಬಾಬಿ ಮಾಬಿಬಿಬಿಬಿಸಿಬಿಲ್ಲ! ತ ಪಾಪಾಬುಧ್ಯನ್ನು ನಾಬಿಬಿಬಿಲ್ಲ ಕೊಂ ಬಿಲ್ಲಿಂ ಬಿಬು ಬಿಂದರೆ ಬಿನಗೆ ತಿಳಿಬಿಬೆಂದೂ ಹೇಳಬಿಬಿಲ್ಲ. ನೀನು ಬಾಗೆ ಜಿಂದಿಬಿ ಬಿಬಿಂ ಬಿಂಬಿ ಬಿಂದು, ನೆಂದೂ ತಿಂಬಿಂದ್ದಬಿಲ್ಲ. ಬಿನ್ನ ನೆಬೆಬಿಂದಿಬಿ ಬಿನಗೆ ಬಾಪಾನಬೆಂದೂ ಕೆಟ್ಟಕ್ಕ ಆಗುಬಿಬಿದಾಗಿದು ಬಿತ್ತನ್ನು ಎನಕ್ಕೆ ಸ್ವಬ್ಧಾಬಿಬಿಂದ ಬಿಬಿಕಾಬ ಬಿಬ್ಬಿದ್ದಬಿಲ್ಲ. ನಿನೊರಿದರಾಜನು, ''ಬಿಬ್ಬು ಬಿನಗಳಬೆಗೆ, ನಿನ್ನ ಅಪರಾಧಗಳಿಬಿಬಿನನ್ನು ಬಿಂಬಿಲ್ಲ ಬಿಬಿಂ ನಿನ್ನನ್ನು ಬಿಬುಂಬಿಂಬಿಬಿಬಿರಬಿಲ್ಲ. ನನ್ನನ್ನು ಹುಬ್ಬುಂಕಿಕೊಂಬಿ ಬಿಸೆಬಿಂದಿಬಿ ನೂಬಿ ಸತ್ತೇಂದಾರಬಿ

(Detectives) ಅಲೆದಾಡುತ್ತಿದ್ದಾರೆಂಬುದು ನಿನಗೆ ಗೊತ್ತು; ನನ್ನನ್ನು ಜೀವಿತಾವಸ್ಥೆಯಲ್ಲಿಯೇ ಆಗಲಿ ಇಲ್ಲವೆ ಶವರೂಪದಲ್ಲಿಯೇ ಆಗಲಿ, ಹೇಗಾದರೂ ಸರಿ, ಪಿಡಿಯಬೇಕೆಂದು ಅವರು ಪ್ರಾಣಪಣಮಾಡಿ ಅಲೆದಾಡುತ್ತಿದ್ದಾರೆ. ನಾನು ಅದರಿಂದ ಕೊಂಚವಾದರೂ ಭಯ ಪಟ್ಟಿರುವೆನೆ? ಅಥವಾ ಕೊಂಚವಾದರೂ ಆಲೋಚಿಸುವೆನೋ? ಮೋಲಾಗಿ, ನೀನೊಬ್ಬ ಹೆಂಗಸು, ನಿನ್ನನ್ನು ಕಂಡು, ಅಥವಾ ನಿನ್ನ ಕೈಯ್ಯೊಳಗಿನ ಚೂರಿಯನ್ನು ಕಂಡು ನಾನು ಭಯಗೊಂಡು ಬೆಬ್ಬಸುರೆಯುವೆನೆ? ಆದ್ದರಿಂದ ಹೇಳುತ್ತೇನೆ, ನಾನು ನಿನ್ನಲ್ಲಿ ಪ್ರೀತಿಗೊಂಡಿರುವುದರಿಂದ ಹೀಗೆ ಹೇಳುವೆನೇ ಹೊರತು ಭಯಪಟ್ಟು ಹೇಳುತ್ತಿರುವೆನೆಂದು ತಿಳಿಯಬೇಡ; ಈಗಲೂ ನಾನು ನಿನ್ನನ್ನು ಮೊದಲಿನಂತೆ ಅದೇ ಸೌಖ್ಯದಲ್ಲಿ ಇರಿಸಿರಲು ಸಿದ್ಧನಾಗಿದ್ದೇನೆ; ಅದೇ ತರನ ದೊಡ್ಡ ಮನೆಯಲ್ಲಿ ಇರುವೆಯಂತೆ; ದಾಸದಾಸಿಯರೂ ಇರುತ್ತಾರೆ; ಮತ್ತೆ ಯಾವುದನ್ನು ಆಪೇಕ್ಷಿಸುವೆಯೋ ಅದನ್ನು ಕೂಡಲೇ ಪಡೆಯುವೆ. ನೀನು ಯಾವುದರ ಅಭಾವವನ್ನೂ ಅನುಭವಮಾಡಬೇಕಾಗುವುದಿಲ್ಲ. ನಡೆ, ಹೀಗೆ ಬೇದಿ ಬೇದಿ ಅಲೆಯುತ್ತ ಬಹುಬಿನ ಕಳೆಯಲಾರದೆ?''

ಪೋಪಿಸಿಯು ಏನೋದನ ಒಂದೊಂದು ಮಾತನ್ನೂ ಚೆನ್ನಾಗಿ ಮನಸ್ಸಿಟ್ಟು ಕೇಳುತ್ತಿದ್ದಳು; ಕೋಪದಿಂದ ಅವಳ ಆಸಾದಮಸ್ತಕವೂ ಉರಿಯುತ್ತಲಿತ್ತು. ಬರುಬರುತ್ತ ಅದೂ ಅಸಹ್ಯವಾಗಿ ತೋರಿತು; ಕ್ರೋಧ ಕಂಪಿತಸ್ವರದಿಂದ ಹೇಳಿದಳು—''ಏಕಾಜ, ಪುನಃ ಕಪಟಾಚರಣೆಯೇ? ಪೋಪಿಸಿಯು ಪುನಃ ನಿನ್ನ ಕಾಪಟ್ಯಕ್ಕೆ ಮರುಳಾಗುವಳೆಂದು ಭಾವಿಸಿದೆಯಾ? ನಿನಗಿನ್ನೂ ತೃಪ್ತಿಯಾಗಲಿಲ್ಲವೆ? ಇನ್ನೂ ನಿನ್ನ ಮನೋಭಾವವು ಪೂರ್ಣವಾಗಲಿಲ್ಲವೇ? ಯಾವ ಸುಖವನ್ನು ಬಯಸಿ ನಾನು ಮತ್ತೆ ನಿನ್ನ ಕೃಪೆಯನ್ನು ಕೋರಲಿ? ಯಾವುದನ್ನು ಒಂದು ಬಾರಿ ಕಳೆದುಕೊಂಡುದಾದರೆ ಪುನಃ ಪಡೆಯುವುದು ಅಸಾಧ್ಯವೋ ಅಂತಹ ಧರ್ಮವು ನಿನ್ನ ಮೋಸದಿಂದ ನಷ್ಟವಾಯಿತು. ಪುನಃ ನಿನ್ನ ಮೋಹ ಮಂತ್ರಕ್ಕೆ ಮರುಳಾಗಿ ಮುಸಲಮಾನಿಯಾದೇನೆಂದು ಎಣಿಸಿದೆಯಾ?

ಎಂದಿಗೂ ಇಲ್ಲ. ನೀನು ನನ್ನ ಸರ್ವನಾಶ ಮಾಡಿದವನಲ್ಲವೆ? ಧರ್ಮ ಭ್ರಷ್ಟಳಾದ ರಮಣಿಯ ಪರಿಣಾಮವೇನೆಂಬುದನ್ನು ನಾನು ಈಗ ಅನುಭವ ಮಾಡುತ್ತಿದ್ದೇನೆ, ನೀನು ನೋಡುತ್ತಿದ್ದೀಯೆ, ಜಗತ್ತಿನಲ್ಲಿ ಎಲ್ಲರೂ ನೋಡುತ್ತಾರೆ; ಆದರೆ, ನೀನು ಒಬ್ಬ ವಿಧವೆಯ ಸರ್ವಸ್ವವನ್ನೂ ಅಪಹರಿಸಿ, ಅವಳನ್ನು ಒಬ್ಬ ಬೀದಿಯ ಭಿಕಾರಿಣಿಯನ್ನಾಗಿ ಮಾಡಿದ್ದೀಯೆ. ಪರಮಪಾಪಿಯಾದ ನೀನು ನಿನ್ನ ಪಾಪದ ಫಲವನ್ನು ಹೇಗೆತಾನೇ ಅನುಭವಿಸದಿರುವೆ? ಇಂದು, ಹತ್ತು ವರ್ಷದ ಮಾತು ಹೇಳುತ್ತೇನೆ; ಆಗ ನನಗೆ ಹದಿನೆಂಟು ವರ್ಷ ವಯಸ್ಸು, ಆಗ ಯೌವನವೆಂಬುದು ಪ್ರಬಲವಾದ ಪರಾಕ್ರಮದಿಂದ ಸಹಾಯಹೀನೆ ಯಾಗಿದ್ದ ನನ್ನ ಈ ಹೃದಯದಲ್ಲಿ ಯಾವುದೋ ಒಂದು ಬೆಳೆಯ ಆತ್ಮ ವಿಸ್ಮೃತಿಯ ತುಮುಲತರ ವಿಪ್ಲವವನ್ನೇ ಉಂಟುಮಾಡಿತ್ತು; ಆಗ ನಾನು ಬಾಲ-ವಿಧವೆ ಎಂಬುದನ್ನು ಒಂದು ಸಲವಾದರೂ ಆಲೋಚಿಸಿದವಳಲ್ಲ; ಯಾವಾಗ ಮುದುವೆ ಆಯಿತು, ಯಾರ ಸಂಗಡ? ಆತನು ಯಾರು? ಎಂಥವನು? ಈಗ ಎಲ್ಲಿದ್ದಾನೆ? ಈ ಎಲ್ಲ ವಿಚಾರಗಳ ಸ್ಮರಣೆಯೂ ಆಗ, ಆ ಉದ್ದಾವು ಯೌವನದ ಆ ಆತ್ಮವಿಸ್ಮೃತಿಮಯವಾದ ತುಮುಲ ವಿಪ್ಲವದಲ್ಲಿ, ಕಳೆದೇ ಹೋಗಿದ್ದುವು; ಆಗ ನೀನು ಪಾಪಮಯವಾದ ಸಾಮರಾರು ಕಪಟಾಚರಣೆಗಳೊಂದಿಗೆ, ತೃಷಿತವೂ ಲಾಲಸಾಮಯವೂ ಆದ ನನ್ನ ಕಣ್ಣಿದಿರಿಗೆ ಬಂದು ನಿಂತುಕೊಂಡುದು ಬ್ಲಾಪಕವಿದೆಯೆ? ಆಗ, ಸಹಾಯಹೀನವಾದ ಹೃದಯವನ್ನು ನೀನು ಸಹಜವಾಗಿಯೇ ಕೈವಶಮಾಡಿಕೊಂಡೆ. ಕ್ರಮ ಕ್ರಮವಾಗಿ ನನ್ನನ್ನು ನರಕದ ಹಾದಿಗೆ ಎಳೆದೆ; ಆಗ, ಕೇವಲ ಮರುತ್ಪುಂಗ್ಪಳಾದವಳ ಹಾಗೆ ನಾನು ನಿನ್ನನ್ನು ಅನುಸರಣಮಾಡಿದೆ. ಆ ಸಮಯದಲ್ಲಿ, ಹೆತ್ತ ತಂದೆಯ ಮುಖ ನೋಡಲಿಲ್ಲ, ಸ್ನೇಹಮಯಿಯಾದ ತಾಯಿಯ ಮುಖ ನೋಡಲಿಲ್ಲ, ಹೆಣ್ಣು ನಾಯಿಯ ಹಾಗೆ ನಿನ್ನನ್ನು ಅನುಸರಿಸಿದೆ; ಕಡೆಗೆ, ಗಂಡನ ಕಡೆಯಿಂದ ಬಂದಿದ್ದ ಸುಮಾರು ಏಳುಸಾವಿರ ರೂಪಾಯಿ ಬೆಲೆ ಬಾಳುವ ಚಿನ್ನಾಭರಣಗಳನ್ನು ತಂದುಕೊಟ್ಟು ನಿನ್ನ ಸಂಗಡ ಕುಲತ್ಯಾಗಿಯಾಗಿ ಬಿಟ್ಟೆ. ನೀನು

ಎರಡು ವರ್ಷಗಳ ಬಳಗಾಗಿ ನನ್ನ ಸಗಗಳನ್ನೆಲ್ಲಾ ಒಂದೊಂದಾಗಿ ಅಪಹಾರವಾಡಿ, ನನ್ನನ್ನು ಬದ್ಕು ನೂರಕ್ಕೆ ಅಟ್ಟಿದೆ. ನೀನು ಅರ್ಥ ಪಿಶಾಚಿ; ಕೆಲವು ದಿನಗಳನಂತರ ಹಣದಾಸೆಯಿಂದ ಸುಸಲವಾದ ನಾಗಿ, ಬಿಟ್ಟು ಸುಸಲವಾದ ರಮಣಿಯನ್ನು ಮದುವೆಯಾದೆ; ಪರ್ಯವಸಾನದಲ್ಲಿ ನನಗೆ ತಂದ ಅವಸ್ಥೆಯನ್ನೇ ಅವಳಿಗೂ ತಂದೆ. ನಾನು ಸಾಕು, ಸಾಕಾದ ಫಲವನ್ನು ಅನುಭವಿಸುತ್ತಿದ್ದೇನೆ; ಅವಳು ಸತ್ತು ಬದುಕಿಕೊಂಡಳು. ಆದಾದನೋಲೆ, ನೀನು ಬಂಟು ವರ್ಷ ಗಳಬರೆಗೆ ಬಲ್ಲೆ ಹೋಗುದ್ದೆಯೋ ಗೊತ್ತಾಗಲಿಲ್ಲ. ನೀನು ಹಿಂದಿರುಗಿ ಬಂದಾಗ, ಮುತ್ತೈದ್ದಿಳನ್ನು ಮದುವೆ ಪಾಡಿಕೊಂಡು ಬಂದಿರುವುದು ಗೊತ್ತಾಯಿತು. ನೀನು ಬಂಧನಸೋ, ಅಂಧನಳೇ ಈ ಬಾರಿ, ನಿನಗೆ ಗಂಟುಬಿದ್ದಾಳೆ; ನೀನು ಬಂತಹ ಪಿಶಾಚಿಯೋ, ಅದೇ ಪಾದರಿಯ ಪಿಶಾಚಿನಿಯೋ ನಿನಗೆ ಸಿಕ್ಕಿದ್ದಾಳೆ; ಈಗ ನೀನು ಸುಖಿಯಾದೆ; ಅದರೆ, ಏನೋದ! ನನ್ನ ಸುಖಜೀವನ್ನ ನಷ್ಟಪಡಿಸಿ ನೀನು ಸುಖಿಯಾಗಿರುವ ಯೊಂದೂ, ನಾನು ನಿರೀಹಳಾದ ಕಾರಣಾಂಗನೆಯಂತೆ ನಾಚಿಬುದುಂ ಟಾದ ಪಶ್ಚಾನದ್ಯಷ್ಟಿಯಿಂದ ನಿನ್ನ ಸುಖಶಾಂತಿಗಳನ್ನು ನೋಡುತ್ತಲಿ ರುವೆನೆಂದೂ ಭಾವಿಸಬೇಡ. ಸ್ವತೀಕಾರವನ್ನು, ಒಂದಲ್ಲ ಬಂದುದಿನ, ಈ ಚಾಕುವಿನಿಂದ ಪಡಿಯೇ ಪಡಿತ್ತೇನೆ. ನನ್ನನ್ನು ನೀನು ಬಷ್ಟು ಪಾಪಪಾಸ್ಕ ಬಂದು ತಿಳಿದಿರುವೆಯೋ, ನಾನು ಅಷ್ಟು ಪಾಪಪಾಸ್ಕ ಯಲ್ಲ; ಬಂದು ದಿನ ನಿನ್ನ ಈ ಘೃಣೆಯನ್ನು ತೊಲಗಿಸಿಬಿಡುತ್ತೇನೆ: ಹೆಂಗಸು ಬಂದುಸಲ ಧರ್ಮಭ್ರಷ್ಟಳಾಗಿ ಪಾಪಿಷ್ಠಳಾದಳೆಂದರೆ ಅವಳು ಯಾವ್ದದನ್ನೂ ಪಡಿಯಬಲ್ಲಳು; ಅಂತಹಳಿಗೆ ಅಕಾಧ್ಯವಾದುದು ಈ ಜಗತ್ತಿನಲ್ಲಿ ಒಂದೂ ಇರುವುದಿಲ್ಲ ಎಂಬುದು ಆಗ ನಿನಗೇ ಗೊತ್ತಾ ಗುವುದು.''

ಹೀಗೆ ಹೇಳಿ ಹುಬ್ಬುಗಂಟಿಕ್ಕಿ, ದರ್ಪದಿಂದ ಹೆಜ್ಜೆ ಹಾಕುತ್ತಾ ಪೋಲಿಸಿಯು ಆಗಲೇ ಅಲ್ಲಿಂದ ಹೊರಟುಹೋದಳು. ಕೈಯ್ಯಲ್ಲಿದ್ದ ಆ ದೀರ್ಘವಾದ ಜೂರಿಯು ಅವಳಂತೆಯೇ ದರ್ಪದಿಂದ ಗಂಭೀರವಾಗಿ ತೂಗಾಡುವಂತೆ ತೋರಿತು.

ಏನೋ ಯೋಚಿಸುತ್ತಾ ಕೇವಲ ಚಿಂತಾಪರನಾಗಿ, ಅಲ್ಲಿಯೇ ಬೆಳಕು ಹರಿಯುವವರೆಗೂ ಕುಳಿತಿದ್ದನು.

ಎರಡನೆಯ ಪರಿಚ್ಛೇದ

ರಹಸ್ಯಮಯವಾದ ಕೊಲೆ

ನಾವು ಯಾವ ಸಮಯದ ಕಥೆಯನ್ನು ಹೇಳುವೆವೋ ಆ ಸಮಯದಲ್ಲಿ ಅರಿಂದಮನೆಂಬವನು ಒಬ್ಬ ಪ್ರಖ್ಯಾತನಾದ ಪತ್ತೇದಾರನೆಂದು ಹುಗಲೀ ಚಿಲ್ಲೆಯ ಅಬಾಲವೃದ್ಧವನಿತೆಯರೆಲ್ಲರೂ ಬಲ್ಲರು. ಕಾರ್ಯಾರಂಭದ ಹೊಸಲು ಕಾರ್ಯಸಿದ್ಧಿಯವರೆಗೂ ಆತನು ತೋರುತ್ತಿದ್ದ ಉತ್ಸಾಹ-ಉದ್ಯಮಗಳು, ಪ್ರಾಣಾಂತವಾದ ಪ್ರಯತ್ನ-ಪರಿಶ್ರಮಗಳು, ಹಾಗೆಯೇ ಆತನ ಅಸಾಧಾರಣವಾದ ಧೈರ್ಯ-ಸ್ಥೈರ್ಯಗಳು ಇವುಗಳಿಂದ ಆ ಕಾಲದ ದಸ್ಯುಗಳು, ದರೋಡೆಯವರು, ಘಾತಕರು, ಕೊಲೆ ಪಾತಕರು ಮುಂತಾದವರಲ್ಲಿ ಆತನು 'ಅರಿಂದಮ'ನೆಂದೇ ಪರಿಚಿತನಾಗಿದ್ದನು. ನಾವು ಹೇಳತೊಡಗಿರುವ ಈ ಕಥೆಯಲ್ಲಿ ಆತನು ನಿರ್ವಹಿಸಿದ ಘೋರ ಘಟನೆಯೊಂದನ್ನು ಬರೆದಿದೆ.

ಹುಗಲೀ ಚಿಲ್ಲೆಗೆ ಸೇರಿದ ಕಾಮುದೇವಪುರವು ಅರಿಂದಮನ ವಾಸಸ್ಥಳ. ಒಂದು ದಿನ ಬೆಳಕು ಹರಿಯುವಷ್ಟರಲ್ಲೇ, ಸ್ಥಳದ ಪೊಲೀಸ್ ಠಾಣೆಯ ಅಧ್ಯಕ್ಷನಾದ ಯೋಗೇಂದ್ರನಾಥನು ಅರಿಂದಮನ ಮನೆಗೆ ಬಂದನು. ಆಗ ಆತನು ತಾನು ವಾಸವಾಗಿರುವ ಮನೆಯ ಹೊರಭಾಗದ ಒಂದು ಕೊಠಡಿಯಲ್ಲಿ ಕುಳಿತುಕೊಂಡಿದ್ದನು. ಯೋಗೇಂದ್ರನಾಥನು ಬಂದ ಕೂಡಲೇ ಆತನು ಅವನ ಕೈಹಿಡಿದು ಮುಯರ್ಾದೆಯಾಗಿ ಕುಳಿತುಕೊಳ್ಳೆಂದು ಹೇಳಿದನು.

ಯೋಗೇಂದ್ರನಾಥನು ಕುಳಿತುಕೊಳ್ಳಲಿಲ್ಲ. ಎರಡು ಕೈಗಳಿಂದಲೂ ಅರಿಂದಮನ ಕೈಹಿಡಿದುಕೊಂಡು "ತಾವು ಬೇಗ ಬರಬೇಕು, ತಮ್ಮನ್ನು

ಕಂಡಮೇಲೆ. ಇನ್ನು ಸಾವಕಾಶ ಮಾಡುವುದಾಗುವುದಿಲ್ಲ'' ಎಂದು ಹೇಳಿದನು.

ಅರಿಂದಮನು ಅವನ ಆ ಉತ್ಕಂಠಿತ ಭಾವವನ್ನು ಕಂಡು ಏಸ್ಮಿತನಾಗಿ, ''ಏಕೆ, ಏನಾಗಿದೆ? ಎಲ್ಲಿಗೆ ಹೋಗಬೇಕು?'' ಎಂದು ಕೇಳಿದನು.

ಯೋಗೇಂದ್ರ—ತಾಣೆಗೆ; ತಾವ್ರ ದಮುವಾಡಿ, ಅಲ್ಲಿಗೆ ಹೋದ ನಂತರ ಎಲ್ಲವನ್ನೂ ನೋಡಬಹುದು, ಎಲ್ಲವನ್ನೂ ಕೇಳಬಹುದು, ನಾನು ಏನೊಂದನ್ನೂ ಇಲ್ಲಿ ಹೇಳುವುದಿಲ್ಲ.

ಹೀಗೆ ಹೇಳಿ ಯೋಗೇಂದ್ರನಾಥನು ಅರಿಂದಮನ ಕೈಹಿಡಿದು ಎಳೆದು ಬಲಾತ್ಕಾರವಾಗಿ ಅತನನ್ನು ತಾಣೆಗೆ ಕರೆದುಕೊಂಡು ಹೊರಟನು.

* * * *

ಅರಿಂದಮನ ಮನೆಯಿಂದ ತಾಣೆಗೆ ಬಹಳ ದೂರವಿಲ್ಲ. ಸ್ವಲ್ಪ ಹೊತ್ತಿನೊಳಗಾಗಿಯೇ ಅರಿಂದಮನನ್ನು ಕರೆದುಕೊಂಡು ಯೋಗೇಂದ್ರನಾಥನು ತಾಣೆಗೆ ಬಂದನು. ಅಲ್ಲಿಯ ಬಂದು ಕೊತವಟಿಗೆ ಬೇಗ ಹಾಕಿತ್ತು; ಅದರ ಬೇಗದ ಕೈ ಯೋಗೇಂದ್ರನಾಥನಲ್ಲಿಯೇ ಇದ್ದಿತು; ಅವನು ಬೇಗವನ್ನು ತೆರೆದು ಅರಿಂದಮನನ್ನು ಕೊತವಿಯೊಳಕ್ಕೆ ಕರೆದು ಕೊಂಡುಹೋಗಿ ಬಾಗಿಲನ್ನು ಮುಚ್ಚಿ ಒಳಗಿನ ಅಗಣಿ ಹಾಕಿದನು. ಆ ಕೊತವಿಯ ಒಂದು ಮೂಲೆಯಲ್ಲಿ ದೊಡ್ಡದೊಂದು ಮರದ ಪೆಟ್ಟಿಗೆ ಇದ್ದಿತು. ಪೆಟ್ಟಿಗೆ ಇನ್ನೂ ತೆರೆದಿರಲಿಲ್ಲ; ಆ ಕೊತವಿಯಲ್ಲಿ ಕುಳಿತು ಕೊಳ್ಳುವುದಕ್ಕೆ ಸರಿಯಾದುದು ಯಾವುದೂ ಇರಲಿಲ್ಲವಾದ್ದರಿಂದ ಅರಿಂದಮನು ಆ ಪೆಟ್ಟಿಗೆಯಮೇಲೆ ಕುಳಿತುಕೊಳ್ಳಲು ಹೋದನು; ಯೋಗೇಂದ್ರನಾಥನು ಅದನ್ನು ನಿಷೇಧಿಸಿದನು; ಹಾಗೆಯೇ ಆ ಪೆಟ್ಟಿಗೆಯನ್ನು ಒಹು ಬೇಗನೆ ತೆರೆದು ಅರಿಂದಮನಿಗೆ ತೋರಿಸಿದನು. ನೋಡಿದುದೇ, ಅರಿಂದಮನಿಗೆ ನಡುಕವುಂಟಾಯಿತು; ಏಸ್ಮಯ ಏಸ್ಕಾರಿತ್ರವಾದ ಅತನ ಕಣ್ಣುಗಳು ಬಿಚ್ಚಿಯಿಕ್ಕದೆ ಬಹಳ ಹೊತ್ತಿನವರೆಗೆ ಆ ಪೆಟ್ಟಿಗೆಯನ್ನೇ ನೋಡುತ್ತಿದ್ದುವು; ಅರಿಂದಮನು ಶಿಲಾಪ್ರತಿಮೆಯ ಹಾಗೆ,

ರುದ್ಧಶ್ವಾಸನಾಗಿ, ಪ್ರಜ್ಞೆಯಿಲ್ಲದವನಂತೆ, ಮೌನವಾಗಿ ಅಲುಗದೆ ಇದ್ದನು.

ಆ ಪೆಟ್ಟಿಗೆಯೊಳಗೆ ಹನ್ನೆರಡು ವರ್ಷಗಳಿಗೆ ಕಡಿಮೆ ಇಲ್ಲದ ಹುಡುಗಿಯೊಬ್ಬಳ ಮೃತದೇಹ. ಆ ಮೃತದೇಹದಲ್ಲಿ ನೂರಾರು ಕಡೆ ಶಸ್ತ್ರದ ಗಾಯಗಳು ; ಶರೀರವು ರಕ್ತದಿಂದ ತೊಯ್ದುದೆ, ಅಲ್ಲದೆ ಅನೇಕ ಕಡೆಗಳಲ್ಲಿ ಮೂಳೆ ಕಾಣುತ್ತಿದೆ; ಬಲಗೈ ಪೂರ್ಣವಾಗಿ ಕತ್ತರಿಸಿ ಹೋಗಿದೆ. ಬಹಳ ಭಯಂಕರ! ಈ ಬಾಲಕಿಯು ಎಂತಹ ಭಯಂಕರವಾದ ಪೈಶಾಚಿಕ ಕಠೋರತೆಯಿಂದ ಕೊಲೆಮಾಡಲ್ಪಟ್ಟಿರುವಳೆಂಬುದನ್ನು ಆಲೋಚಿಸಿದರೂ ಕೂಡ ಎದೆ ನಡುಕವುಂಟಾಗುತ್ತದೆ! ಆ ಮೃತದೇಹದಕಡೆ ನೋಡಿದರೆ ಈ ಕಾರ್ಯವು ಮನುಷ್ಯನಾತ್ಮನಿಂದ ನಡೆದುದೆಂದು ತೋರುವುದಿಲ್ಲ. ಈ ಸಣ್ಣ ಹುಡುಗಿಯ ಕಮಲಕೋಮಲ ದೇಹದಲ್ಲಿ ಪರಿತವಾದ ಚೂರಿಯಿಂದ ನೂರಾರು ಗಾಯಮಾಡುವುದಕ್ಕೂ ಯೇಸನಂತಹ ಸ್ನೇಹಿತನು ಯಾಪನಾಗಿರಬಹುದು?

ಮೂರನೆಯ ಪರಿಚ್ಛೇದ

ಕೊಲೆಪಾತಕನು ಯಾರು?

ಅರಿಂದಮನು ಬರಡು ಕೈಗಳಿಂದಲೂ ತನ್ನ ಆ ಮೃತದೇಹವನ್ನೆತ್ತಿ ಪೆಟ್ಟಿಗೆಯಿಂದ ಹೊರಕ್ಕೆ ತೆಗೆದನು. ಸಕ್ಕದಲ್ಲಿಯೇ, ತೆರೆದಿದ್ದ ಕಿಟಕಿಯಿಂದ ಬಾಲಸೂರ್ಯನ ರಕ್ತಕಿರಣಗಳು ಆ ರಕ್ತಾಕ್ತವಾದ ಮೃತದೇಹದ ಮೇಲೆ ಬಿದ್ದು, ಆ ಭಯಾನಕ ದೃಶ್ಯವನ್ನು ಮತ್ತೂ ಭಯಂಕರವಾಗಿ ಮಾಡುತ್ತು. ಅರಿಂದಮನು ಯೋಗೇಂದ್ರನಾಥನನ್ನು ಕುರಿತು "ಯೋಗೇಂದ್ರಬಾಬು, ಸಮಾಚಾರವೇನು?" ಎಂದನು.

ಯೋಗೇಂದ್ರ—ವ್ಯಾಪಾರವೇನು! ನಾನು ಏನು ಹೇಳಲಿ? ಯಾವುದನ್ನು ನೋಡುತ್ತಿರುವಿರೋ, ಅದೇ; ಈ ವ್ಯಾಪಾರವೇನೆಂಬುದನ್ನು ತಾವು ತಿಳಿದು ಹೇಳಬಲ್ಲಿರಿ. ಅದಕ್ಕಾಗಿಯೇ ತಮ್ಮನ್ನು ಕರೆತಂದಿದ್ದೇನೆ.

ಅರಿಂದಮನು ಮುಂದಹಾಸದೊಡನೆ—"ಯಥಾ ಸಮಯದಲ್ಲಿ ನಾನೇ ಇದನ್ನು ತಿಳುಹಿಸುತ್ತೇನೆ. ಈ ಕೊಲೆಪಾತಕರು ಯಾರು?" ಎಂದು ಕೇಳಿದನು.

ಯೋಗೇಂದ್ರ—ತಮಗೆ ಗೊತ್ತು, ತಾವು ಅದನ್ನು ಹೇಳಬೇಕು.

ಅರಿಂದಮ—ಒಳ್ಳೆಯದು, ನಾನೇ ಒಂದು ವಿಷಯ ಹೇಳುತ್ತೇನೆ. ಈ ಶವವನ್ನು ಎಲ್ಲಿಗೆ ಯಾವಲ್ಲಿ, ಯಾವ ರೀತಿಯಲ್ಲಿ ದೊರಕಿತೋ ಹೇಳಿ, ನೋಡೋಣ?

ಯೋಗೇಂದ್ರ—ಇಲ್ಲಿಯೇ-ಕಾಣೆಯಲ್ಲಿ. ನಿನ್ನೆಯ ರಾತ್ರಿ, ಒಂಬತ್ತು ಗಂಟೆಯಮೇಲೆ, ಕೂಲಿ ಆಳಿನಂತೆ ಒಬ್ಬ ಹಿಂದುಸ್ತಾನಿಯವನು ಈ ಪೆಟ್ಟಿಗೆಯನ್ನು ತಲೆಯಮೇಲೆ ಹೊತ್ತುಕೊಂಡು ನಮ್ಮ ಈ ಕಾಣೆಯ ಮಾರ್ಗವಾಗಿಯೇ ಹೋಗುತ್ತಿದ್ದನು. ಅಂತಹ ಅನೇಕರಲ್ಲಿ ಇಷ್ಟು ದೊಡ್ಡ ಪೆಟ್ಟಿಗೆ ಹೊತ್ತುಕೊಂಡು ಅವನು ಹೋಗುತ್ತಿರುವುದನ್ನು ನಮ್ಮ ಹೊಲ್ಕೀಪ್ ಕಾನಿಸ್ಟೇಬಲ್ ರಾಮುವೀನನು ನೋಟ ಮಾಡಿ ಹಿಂಬಾಲಿಸಿ, ಕೂಡಲೇ ನನಗೆ ವರ್ತಮಾನ ಕಳುಹಿಸಿದನು. ನಾನು ಆ ಮನುಷ್ಯನನ್ನು ಒಡನೆ ಹಿಡಿದುತರುವಂತೆ ರಾಮುವೀನನಿಗೆ ಹೇಳಿದೆನು. ರಾಮುವೀನನು ಆ ಮನುಷ್ಯನನ್ನು ಹಿಡಿದು ತಂದಾಗ ಅವನ ಹತ್ತಿರ ಆ ಪೆಟ್ಟಿಗೆಯ ಬೀಗದಕೈ ಇರುವುದೇ ಎಂದು ಹಿಂದುಸ್ತಾನಿಯವನನ್ನು ಕೇಳಿದೆ. ಅದಕ್ಕೆ ಅವನು ಬೀಗದಕೈ ಇಲ್ಲ ಎಂದು ಹೇಳಿದ. ಅವನು ಕಳ್ಳನಾಗಿರಬೇಕೆಂದು ಆಗ ನನಗೂ ಸಂದೇಹವಾಯಿತು; ಅವನು ಎಂದುದೆಲ್ಲಿಂದ, ಹೋಗುವುದೆಲ್ಲಿಗೆ, ಪೆಟ್ಟಿಗೆ ಯಾರದು? ಎಂದು ಮುಂತಾಗಿ ಅವನನ್ನು ಅನೇಕವಾಗಿ ಪ್ರಶ್ನಿಸಿದೆನು. ಅದಕ್ಕೆ ಅವನು ತಮ್ಮ ಹೆಸರು ಹೇಳಿದ; ಅವನು ಈ ಪೆಟ್ಟಿಗೆ ತೆಗೆದುಕೊಂಡು ಹೋಗುತ್ತಿದ್ದುದು ತಮ್ಮಲ್ಲಿಗೇ ಎಂದು.

ಅರಿಂದಮ—(ವಿಸ್ಮಯದಿಂದ) ನನ್ನಲ್ಲಿಗೆ!

ಯೋಗೇಂದ್ರ—ಕಲಕತ್ತೆಯಲ್ಲಿ ಯಾರೋ ತಮ್ಮ ಸ್ನೇಹಿತರೊಬ್ಬರು ಇರುವಂತೆ, ಅವರು ಈ ಪೆಟ್ಟಿಗೆಯನ್ನು ತಮಗೆ ಕಳುಹಿಸಿ

ಕೊಟ್ಟಂತೆ ಅವನು ಹೇಳಿದ. ಮನುಷ್ಯನ ಲಕ್ಷಣ ನೋಡಿ ನನಗೆ ಬಹಳ ಸಂಶಯವಾದ್ದರಿಂದಲೇ ಅವನನ್ನು ಹಾಗೆಯೇ ಹೋಗಗೊಡಲಿಲ್ಲ—ಅವನನ್ನು ಅಡ್ಡಿಪಾಡಿ ಸಿಲ್ಲಿಸಿದ್ದೇನೋ ಸರಿ, ಆದರೆ ತಪ್ಪು ಕಡೆಯವನೆಂದು ಹೇಳಿದ ಕಾರಣ ಅವನ ಪಕ್ಷದಲ್ಲಿ ಅಷ್ಟು ಎಚ್ಚರ ಏಂದ ಇರಜೇಕಾದ ಆವಶ್ಯಕ ನನಗೆ ತೋರಲಿಲ್ಲ. ಈ ಪೆಟ್ಟಿಗೆಯನ್ನು ಮಾತ್ರ ಈ ಕೊಠಡಿಯಲ್ಲಿ ಬರಿಸಿ ಭದ್ರಪಡಿಸಿದೆನು. ಅನಂತರ ನೋಡಿದಾಗ, ಬೆಳಗಾಗುವದರೊಳಗಾಗಿ, ಆ ಮನುಷ್ಯನು ಪರಾರಿಯಾಗಿ ಹೋಗಿದ್ದಾನೆ. ಬೆಳಿಗ್ಗೆ ಬಂದು ಪೆಟ್ಟಿಗೆಯನ್ನು ನಿಮ್ಮ ಮನೆಗೆ ಕಳುಹಿಸೋಣವೆಂದು ಪೆಟ್ಟಿಗೆಯನ್ನು ಹೊರಕ್ಕೆ ತರಿಸಿ ನೋಡುವಲ್ಲಿ ತಳಭಾಗದ ಹಲಗೆಯ ಸೇರುವೆಯಲ್ಲೆಲ್ಲಾ ನಾಲ್ಕು ಕಡೆಗಳಲ್ಲಿಯೂ ರಕ್ತದ ಕಲೆಗಳು ಕಾಣಿಸಿದುವು. ಆಗ ನಾನು ಪೆಟ್ಟಿಗೆಯನ್ನು ಬಿಡದು ಮಾಡಿದೆ.

ಅರಿಂದಮ—ಈ ಪೆಟ್ಟಿಗೆಯನ್ನು ಹೊತ್ತು ತಂದಿದ್ದ ಮನುಷ್ಯನು ನೋಡುವದಕ್ಕೆ ಹೇಗಿದ್ದನು? ಪ್ರಾಯದವನು ಏಷ್ಟು?

ಯೋಗೇಂದ್ರ—ಪ್ರಾಯವನ್ನು ಮೂವತ್ತು ವರ್ಷಗಳೆಂದಿರಬಹುದು. ಏಂದುಸ್ತಾನಿಯವನು. ಆಕಾರವು ಹೆಕಟೆಯೆಂದೇ ಹೇಳಜೇಕು. ಮುಖವು ನೋಡುವದಕ್ಕೆ ಮುತ್ತೂ ಹೆಕಟೆತರ; ಅವನನ್ನು ಹಠಾತ್ತಾಗಿ ನೋಡಿದರೆ ಮನುಷ್ಯನೆಂದೇ ಗೊತ್ತಾಗುವದಿಲ್ಲ. ಮೂಗು ಪೂರಾ ಗಾತ್ರ, ಕಣ್ಣುಗಳೆರಡೂ ಸಣ್ಣ, ತುಟಿಗಳೆರಡೂ ಗಾತ್ರವಾಗಿ ಅವು ಪೂರ್ಣವಾಗಿ ತೆರುಗಿರುವೆಯೋ ಏನ್ನುವ ಹಾಗಿರುವುದು; ಅವನ ಮೈ ಬಣ್ಣವೋ—ಸತ್ತನಂತರ ಅವನ ಚರ್ಮವು ಸಿಕ್ಕಿದಪಕ್ಷದಲ್ಲಿ ಬಳ್ಳಿಯ ವಾರ್ನೀಸು ಬಳಿದ ಬಂದು ಜತೆ ಬೂಟ್ಸು ಮಾಡಿಸಿಕೊಳ್ಳ ಬಹುದು; ಅಷ್ಟು ಅಚ್ಚಕಪ್ಪು. ಹಣೆಯಮೇಲೆ ಮೂರು ನಾಲ್ಕು ಕತ್ತಿಯ ಗಾಯದ ಗುರುತುಗಳು.

ಆಗ ಅರಿಂದಮನು ಆ ಬಾಲಕೆಯ ಮೃತದೇಹವನ್ನು ಬಹು ತೀಕ್ಷ್ಣದೃಷ್ಟಿಯಿಂದ ನೋಡತೊಡಗಿದನು. ಮೃತಳಾಗಿದ್ದ ಬಾಲಕೆಯ

ಸಡಿಲವಾದ ತಲೆಯುಗಂಟಿನಲ್ಲಿ ಬೆಳ್ಳಿಯಿಂದ ಮಾಡಿದ್ದ ಎರಡು ಹೆರಳು ಸೂಜಿಗಳು (Hair-Pins) ಇದ್ದವು; ಅವನ್ನು ಆತನು ಸಭಾಪದಲ್ಲಿ ಇಟ್ಟುಕೊಂಡನು.

ನಾಲ್ಕನೆಯ ಪರಿಚ್ಛೇದ

ಕೊಲೆಗಾರನ ವೀರತ್ವ

ಈ ಸಮಯಕ್ಕೆ ಸರಿಯಾಗಿ ಪೋಲೀಸಿನವನೊಬ್ಬನು ಮುಚ್ಚಿದ್ದ ಬಾಗಿಲನ್ನು ಹೊರಗಿನಿಂದ ತಟ್ಟಿದನು. ಯೋಗೇಂದ್ರನಾಥನು ಬಾಗಿಲನ್ನು ತೆರೆದನು. ಪೋಲೀಸಿನವನು ಒಂದು ಕಾಗದವನ್ನು ತಂದು ಯೋಗೇಂದ್ರನ ಕೈಗೆ ಕೊಟ್ಟನು. ಯೋಗೇಂದ್ರನಾಥನು ಕೂಡಲೇ ಆ ಕಾಗದವನ್ನು ಒಡೆದು ಓದತೊಡಗಿದನು. ಕಾಗದವನ್ನು ಓದುವುದರ ಒಳಗಾಗಿಯೇ ಅವನ ಮುಖಭಾವವು ಕ್ಷಣಕ್ಷಣಕ್ಕೂ ನೂರಾರು ಬಗೆಯಾಗಿ ಪಲಾಪ್ಪುಗೊಳ್ಳುತ್ತಿತ್ತು. ಓದಿ ಮುಗಿಸಿದನಂತರ ಆ ಕಾಗದವನ್ನು ಅರಿಂದಮನ ಕೈಗೆ ಕೊಟ್ಟು ಯೋಗೇಂದ್ರನಾಥನು "ಅರಿಂದಮ ಬಾಬು, ಕಾಗದದಲ್ಲಿ ಬರೆದಿರುವುದನ್ನು ನೋದಲೂ ನೋಡುವುದಾಗಲಿ; ಅವನು ಯಾವನೇ ಆಗಲಿ, ಅವನು ಸಾಧಾರಣ ಮನುಷ್ಯನಲ್ಲ" ಎಂದನು.

"ಇಷ್ಟವಾಗದ್ದರೆ ಕೊಲೆಮಾಡು, ಶವವನ್ನು ತಾಜಿಗೆ ಕಳುಹಿಸಿ ತಮಾಷೆಮಾಡುವ ಸಾಹಸವು ಯಾರಿಗೆತಾನೇ ಇಲ್ಲಿತು?" ಎಂದು ಹೇಳಿ, ಅರಿಂದಮನು ಕಾಗದವನ್ನು ಓದಲು ಉಪಕ್ರಮಿಸಿದನು. ಕಾಗದದಲ್ಲಿ ಹೀಗೆ ಬರೆದಿತ್ತು:—

"ಯೋಗೇಂದ್ರಬಾಬು,

ನೀನು ನನ್ನನ್ನು ಬಲ್ಲೆ, ನಾನು ಕೂಡ ನಿನ್ನನ್ನು ಬಲ್ಲೆ. ಇಷ್ಟಾದರೂ ನೀನು ನನ್ನನ್ನು ಹಿಡಿವುದಕ್ಕಾಗಿ ಏನೊಂದು ತಂತ್ರವನ್ನೂ ಮಾಡಲಾರದವನಾಗಿರುವೆ. ಹಾಗಾದ ಪಕ್ಷದಲ್ಲಿ ಪೋಲೀಸಿನಲ್ಲಿ ನೌಕರಿ ಮಾಡು

ವುದು ನಿನ್ನಂತಹ ಕೇವಲ ಅರ್ವಾಚೀನ (ಪುರಾತನ ಪದ್ಧತಿಯವ)ನಿಗೆ ಯೋಗ್ಯವಲ್ಲ. ಪೆಟ್ಟಿಗೆಯ ಒಳಗೆ ಯಾವ ಹುಡುಗಿಯ ರವವನ್ನು ನೀನು ನೋಡುವೆಯೋ ಅವಳು ನನ್ನ ಕೈಯಿಂದ ಆ ರೀತಿ ಕೊಲ್ಲಲ್ಪಟ್ಟಿರುವಳು ಎಂದು ತಿಳಿ. ಆ ಹುಡುಗಿ ಯಾರು? ಏತಕ್ಕಾಗಿ ಕೊಲ್ಲಲ್ಪಟ್ಟಳು? ನಾನು ಯಾರು, ನಾನಾದರೂ ಅವಳನ್ನು ಏಕೆ ಕೊಲ್ಲಬೇಕಾಗಿದ್ದಿತು—ಇವೇ ಮುಂತಾದವುಗಳಲ್ಲಿ ಒಂದು ವಿಷಯವನ್ನಾದರೂ ನೀನು ನಿನ್ನ ಜೀವಮಾನಕಾಲದೊಳಗಾಗಿ ಕಂಡುಹಿಡಿಯಲಾರೆ. ಇದಕ್ಕಾಗಿ ನೀನು ನಿನ್ನ ಪ್ರಿಯ ಸ್ನೇಹಿತನಾದ ಅರಿಂದಮನ ಸಹಾಯ ತೆಗೆದುಕೊಳ್ಳುವೆ; ಆದರೆ ಅಂತಹ ಹತ್ತುಮಂದಿ ಅರಿಂದಮರು ಬಂದರೂ ಏನೂ ಸಾಗದೆಂದು ಖಂಡಿತವಾಗಿ ತಿಳಿದಿರು. ಈ ಹುಡುಗಿಯ ಕೊಲೆಯ ಲೆಕ್ಕವನ್ನೂ ಸೇರಿಸಿಕೊಳ್ಳುವುದಾದರೆ ಈವರೆಗೆ ನಾನು ಮಾಡಿದ ಕೊಲೆಗಳ ಸಂಖ್ಯೆ—ಪದಿನೆಂಟು. ಯಾವ ಕಾಲದಲ್ಲಿ, ಎಲ್ಲಿ, ಯಾವ ರೂಪದಲ್ಲಿ ಇದ್ದುಕೊಂಡು ನಾನು ಈ ಎಲ್ಲ ಕೊಲೆಗಳನ್ನೂ ನಿರ್ವಿಘ್ನವಾಗಿ ನೆರವೇರಿಸಿದೆನೋ, ಆ ವಿವರವನ್ನೆಲ್ಲಾ ನಿನಗೆ ಹೇಳಬೇಕಾದ ಅವಶ್ಯಕತೆಯೇನೂ ಕಾಣುವುದಿಲ್ಲ.

ನಾನು ಮಾಡಿದ ಕೊಲೆಗಳ ಒಟ್ಟು ಸಂಖ್ಯೆಯು ಪೂರ್ತಿಯಾಗಿ ಇಪ್ಪತ್ತಾಗಲು ಏನುಮಾಡಬೇಕೋ ಅದನ್ನು ಈ ವಾರದೊಳಗಾಗಿ ಮಾಡುತ್ತೇನೆ: ಮೊದಲು ಅರಿಂದಮನನ್ನು ತೀರಿಸುತ್ತೇನೆ, ಅನಂತರ ನಿನ್ನನ್ನು ಕೊಲ್ಲುತ್ತೇನೆ. ಆತನನ್ನು ಎಚ್ಚರಿಸಿಬಿಮ, ಅಲ್ಲವೆ ನೀನೂ ಜಾಗರೂಕನಾಗಿದ್ದುಕೊ. ನಿಮ್ಮಂತಹ ಒಬ್ಬ-ಇಬ್ಬರನ್ನು ಕೊಲೆಮಾಡುವುದಕ್ಕೆ ನನ್ನಿಂದ ಸಾಧ್ಯವಿಲ್ಲವಾದರೆ ನಾನು ಇನ್ನೇನುತಾನೇ ಮಾಡುವುದು ಸಾಧ್ಯ!

ನೀನು ನನ್ನ ಈ ಕಾಗದವನ್ನು ಓದುವ ಸಮಯದಲ್ಲಿ ನಿನ್ನ ಮುಖಭಾವವು ಹೇಗಾಗುವುದೋ, ನೀನೇನು ಮಾಡುವೆಯೋ—ಅವೆಲ್ಲವನ್ನೂ ನಿನ್ನ ಇವಿರಿನಲ್ಲಿಯೇ ಇದ್ದುನೋಡಿ ಸಂತೋಷಪಡಬೇಕೆಂಬ ಆಸೆ ಇದ್ದಿತು. ಯಾವುದೋ ಕಾರಣವಿಶೇಷದಿಂದ ನಾನು ಆ ಆಸೆಯನ್ನು ಬಿಡಬೇಕಾಯಿತು.

ಇನ್ನು ಒಂಬೆರಡು ದಿನಗಳ ಬಾಳಿಕೆಗಾಗಿ, ಈ ಹುಡುಗಿಯ ಕೊಲೆ ಮಾಡಿದವನನ್ನು ಹುಡುಕಿ ಹಿಡಿವುದಕ್ಕೋಸ್ಕರ ಬರೀ ಪ್ರಯಾಸಪಡುವೆ? ಒಂಬೆರಡು ದಿನಗಳನಂತರ ಒಟ್ಟಿಗೆ ಅರಿಂದಮನ ಕೊಲೆಮಾಡಿದವನನ್ನೂ ಹುಡುಕುತ್ತಾ ಹೊರಡಲೇಬೇಕಾಗುವುದು.

ಇತಿ,

ನಿನ್ನ ಚಿರಪರಿಚಿತ ರತ್ನ.''

ಅರಿಂದಮನು ಕಾಗದವನ್ನು ಓದಿ ಯೋಗೇಂದ್ರನ ಕೈಗೆ ಪುನಃ ಕೊಟ್ಟುಬಿಟ್ಟನು; ಯಾವ ಮಾತೂ ಆಡಲಿಲ್ಲ.

ಯೋಗೇಂದ್ರ—ಅರಿಂದಮಬಾಬೂ, ನೀವು ಮತ್ತೆ ಯಾವಾಗ ಬಾದರೂ ಅಂತಹ ನಡವಳಿ ಕಂಡಿರುವುದುಂಟೆ?

ಅರಿಂದಮ—ಇಲ್ಲ, ಮನುಷ್ಯನು ಸಾಧಾರಣನಲ್ಲ; ಏನಾದರೂ ಆಗಲಿ, ಈಗ ಅವನನ್ನು ಸಾಧಾರಣನನ್ನಾಗಿ ಮಾಡಲು ನಿನೇನು ಅವಶ್ಯಕವೋ ಅಷ್ಟೆಲ್ಲವನ್ನೂ ಮಾಡಲೇಬೇಕು. ಕಾಗದವನ್ನು ಓದಿದುದರಲ್ಲಿ ಅನಾಮಯನು ನಿನ್ನನ್ನು ಬಲ್ಲನು. ನೀನೂ ಅನಾಮಯನನ್ನು ಬಲ್ಲೆ. ಬಂಧುಗಳಿಗೆ ಕಾರಾಗೃಹವೆಂತು. ಅಷ್ಟರ ಪರಿಚಯವೆಂದಾದರೂ ಕೂಡ ಅವನು ಅಷ್ಟು ರಗಳೆಪಡುವಿನಾನೆ. ಏನೇ ಆಶ್ಚರ್ಯವಾದರು ಕೆಲಸ!

ಯೋಗೇಂದ್ರ—ನನಗೆ ಪರಿಚಿತರಾಗಿರುವವರಲ್ಲಿ ಅಂತಹ ಮನುಷ್ಯನು ಯಾರೆಂಬುದನ್ನು ಸರಿಯಾಗಿ ಊಹಿಸಿ ತಿಳಿಯುವುದಕ್ಕೂ ಸಾಧ್ಯವಿಲ್ಲವಲ್ಲ. ಸಾಲದುದಕ್ಕೆ ನಿನ್ನ ಸಾಲಾಕ್ಕರು ಬಿಸಗಳಲ್ಲಿ ತಮ್ಮನ್ನೂ ಕೊಲೆಮಾಡುವುದಾಗಿ ಬೆದರಿಸುತ್ತಾನೆ; ತಮಗೆ ಅಂತಹ ರತ್ನಗಳು ಯಾರು?

ಅರಿಂದಮ—ರತ್ನಗಳು ಯಾರೆ? ಅನೇಕರು! ಯಾರು ಕಳ್ಳರೋ ಅವರು, ಯಾರು ಸ್ಮಗ್ಲರೆ ಮಾಡುವರೋ ಅವರು, ಯಾರು ಕೊಲೆ ಸಾತಕರೋ ಅವರು—ಈ ಮೂರು ಬಗೆಯ ರತ್ನಗಳ ದೆಸೆಯಿಂದಲೇ ನಾನು ಜೀವನೋಪಾಯ ಮಾಡಬೇಕಾಗಿದೆ. ಅವನು ಯಾವನಾದರೂ ಆಗಲಿ, ಈಗ ಈ ಅನಾಮಯನನ್ನು ಹುಡುಕಿ ಹಿಡಿಯಲೇಬೇಕು.

ಐದನೆಯ ಪರಿಚ್ಛೇದ

ಅರಿಂದಮನ ನೈಪುಣ್ಯ

ಆಗ ಅರಿಂದಮನು ಆ ಪೆಟ್ಟಿಗೆಯೊಳಗಿನಿಂದ ಕರಿಯ ಬನಾತಿನ ಒಂದು ಅಂಗಿಯನ್ನೂ, ಹುರಿದುಹೋಗಿರುವ ಒಂದು ಕರಿಯಬಣ್ಣದ ಪೆತ್ತಲನ್ನೂ ಹೊರಕ್ಕೆ ತೆಗೆದನು. ರಕ್ತದಲ್ಲಿ ಸಂಪೂರ್ಣವಾಗಿ ನೆನೆದು ಹೋಗಿದ್ದರಿಂದ ಆ ಕರಿಯಬನಾತಿನ ಅಂಗಿಯು ಶುದ್ಧ ಪಾಟಲವರ್ಣವಾಗಿ ತೋರುತ್ತಿದ್ದಿತು. ಅಂಗಿಯನ್ನು ಪರೀಕ್ಷಿಸಿದನು. ಈ ಅಂಗಿಯನ್ನು ತೊಟ್ಟುಕೊಂಡೇ ಅವನು ಕೊಲೆಮಾಡಿರಬೇಕು; ಅಂಗಿಯು ರಕ್ತದಲ್ಲಿ ತೊಯ್ದಿದುಹೋಗಿರುವುದರಿಂದಲೂ ಪೆತ್ತಲ ಹೇಗೋ ಮುರಿದುಹೋಗಿರುವುದರಿಂದಲೂ ಉಪಯೋಗಿಸಿಲ್ಲವೆಂದು ತೋರಿದುದರಿಂದ ಈ ಪೆಟ್ಟಿಗೆಯಲ್ಲಿ ಸೇರಿಸಿದ್ದಾನೆ. ಆ ಮನುಷ್ಯನ ಜಾಡರೆ ಹೋಗಬಹುದೆಂಬುದನ್ನು ಇನ್ನೊಬ್ಬರ ಸಹಾಯವಿಂದಲೇ ನಾನು ಊಹಿಸಬಲ್ಲೆ. ಅವನಾದರೂ ಐದು ಅಡಿ, ಆರು ಅಂಗುಲಕ್ಕಿಂತ ಜಾಸ್ತಿ ಎತ್ತರವಾಗಿರಲಿಕ್ಕಿಲ್ಲ.

ಯೋಗೇಂದ್ರ—ಅದು ತಮಗೆ ಗೊತ್ತಾದುದು ಹೇಗೆ?

ಅರಿಂದಮನು ಆ ಮುರಿದ ಪೆತ್ತಲನ್ನು ತೋರಿಸಿ, "ಯಾವನು ಕೊಲೆಮಾಡಿದನೋ, ಈ ಪೆತ್ತಲವು ಅವನದೇ ಆಗಿದ್ದಲ್ಲಿ, ಹಾಗೆಯೇ ಇದು ಅವನ ಆಕಾರಕ್ಕೆ ತಕ್ಕುದಾಗಿಯೂ ಇದರ ಬಳಕೆಯು ಅವನಿಗೆ ಪಿತಕರವಾಗಿಯೂ ಇದ್ದಲ್ಲಿ ನನ್ನ ಊಹೆಯು ಸುಳ್ಳಾಗುವುದಿಲ್ಲ. ಈ ಆಳತೆ ನೋಡಿದರೆ ಐದು ಐದು ಅಡಿ, ಆರು ಅಂಗುಲ ಎತ್ತರದ ಮನುಷ್ಯನಿಂದಲೇ ಉಪಯೋಗಿಸಲ್ಪಡತಕ್ಕದ್ದು. ಅವನಿಂದೆಯೂ ತುಸ್ಟು ಗಡ್ಡಾಗಿಯೂ ಇಲ್ಲ, ಅಷ್ಟು ಉದ್ದವಾಗಿಯೂ ಇಲ್ಲ; ಅವನ ಬಡೆ ಪ್ರಶಸ್ತವಾದುದ್ದು, ಬಲಿಷ್ಠವಾದ ಭುಜಗಳು, ನಡು ಅಷ್ಟೇನೂ ದಪ್ಪವಲ್ಲ, ಎದೆಯು ಅಳತೆಗಿಂತಲೂ ಸ್ವಲ್ಪ ಕಡಿಮೆ. ಇದರಿಂದ ಗೊತ್ತಾಗುವುದೇನಂದರೆ, ಅವನು ಅಷ್ಟೇನೂ ದಪ್ಪನಲ್ಲ; ಮಾಂಸಪೂರ್ಣವಾದ

ವಕ್ಷಸ್ಥಳ ಮತ್ತೂ ಭುಜಗಳು ಉಬ್ಬಿವೆ; ಕುತ್ತಿಗೆ ಗಾತ್ರದಲ್ಲಿ ಸ್ವಲ್ಪ ಹೆಚ್ಚು.

''ನೀವು ಇದೆಲ್ಲವನ್ನೂ ಹೇಗೆ ಊಹಿಸುವಿರೋ ನನಗೆ ತಿಳಿಯುವುದೇ ಇಲ್ಲ'' ಎಂದು ಯೋಗೇಂದ್ರನು ನಗುತ್ತಾ ಹೇಳಿದನು.

ಅರಿಂದಮ—ಈ ಅಂಗಯಷ್ಟಿಯನ್ನು ಕತ್ತರಿಸಿ ಹೊಲಿದಿರುವುದನ್ನೂ ಗುಂಡಿ ಕೊಕ್ಕಿ ಮುಂತಾದುವುಗಳನ್ನೂ ನೋಡಿ ನಾನು ಏನು ಹೇಳಿರುವೆನೋ ಅದನ್ನು ನೀನು ಅಂಗಯಿ ಅಳತೆಪಟ್ಟಿ ನೋಡಿದಾಗ ಸರಿಯೆಂದು ತಿಳಿಯುವೆ. ಅಸಾಧಾರಣ ಕೂದಲು ಸ್ವಲ್ಪ ಬಾಗಿರುವುದು. ಅಂಗಯಿ ಗುಂಡಿಗೆ ಮೂರು ನಾಲ್ಕು ಕೂದಲು ತಗುಲಿಕೊಂಡಿವೆ. ಆ ಮನುಷ್ಯನು ಕೊಲೆಯಾಗಿದ ಕಾಲದಲ್ಲಿ ತನ್ನ ಮುಖ, ಕಣ್ಣು, ತಲೆ ಇವುಗಳಮೇಲೆ ಬಿದ್ದಿದ್ದ ರಕ್ತವನ್ನು ಈ ಅಂಗಯಿಂದಲೇ ಒರಸಿಕೊಂಡಿರಬೇಕು. ಆಗಲೇ ಗುಂಡಿಯ ಸಂಗಡ ಮೂರು ನಾಲ್ಕು ಕೂದಲು ಸಿಕ್ಕಿ ಕೆತ್ತಿಹೋಗಿರಬೇಕು. ಎಲ್ಲವೂ ಒಂದೇ ಸಮನಾಗಿವೆ, ಕೊಂಚ ಕೊಂಚ ತೊಂಕು.

ಯೋಗೇಂದ್ರ—ಇವು ತಲೆಯ ಕೂದಲಾಗಿರದೆ ಗಡ್ಡ ಅಥವಾ ಮೀಸೆಯ ಕೂದಲಾಗಿದ್ದರೋ? ತಲೆಯನ್ನು ಒರಸಿಕೊಳ್ಳುವಾಗ ಅವನು ಆಗಕ್ಕಾಗಿಯೂ ಬಂದುಸಲ ಇದೇ ಅಂಗಯಿಂದಲೇ ಮುಖವನ್ನೂ ಒರಸಿಕೊಂಡಿರಬಹುದು.

ಅರಿಂದಮ—ಅಲ್ಲ ಅಲ್ಲ; ಹಾಗಿದ್ದ ಪಕ್ಷದಲ್ಲಿ ತಿಳಿದುಹೋಗುತ್ತಿದ್ದಿತ್ತು. ಗಡ್ಡ ಅಥವಾ ಮೀಸೆಯ ಕೂದಲು ಸ್ವಭಾವವಾಗಿ ಬುಡದಿಂದಲೇ ಧನುಸ್ಸಿನ ಆಕಾರವಾಗಿ ಬಂದೇಕಡೆಗೆ ಕೊಂಚ ಬಾಗಿರುತ್ತದೆ; ಆದರೆ ತಲೆಯ ಕೂದಲು ಬುಡದಿಂದ ಸ್ವಲ್ಪ ಹೆಚ್ಚು ಕಡಿಮೆ ಅರ್ಧ ಅಂಗುಲದವರೆಗೆ ನೇರವಾಗಿರುತ್ತದೆ. ಬಂದುಮೇಲೆ ಗುಂಗುರು ಕೂಡ ಬಾಗಿದ್ದ ಪಕ್ಷದಲ್ಲಿ ಅದು ಅಗ್ರಭಾಗದ ಕಡೆಗೇ ಬಾಗಿರುತ್ತದೆ; ಆದರೆ ಕಾಫ್ರೀಯರ ಕೂದಲಸಂತೆ ಕೇವಲ ಒರಟು ಕೂದಲಾದರೆ, ಅದರದೇ ಬೇರೆ ಪಾತ್ರ. ಅದರ ಅಗ್ರ ಮೂಲಗಳು ಪ್ರಾಯಃ ಸಮಾನವಾಗಿಯೇ

ಇರುತ್ತದೆ. ಗಡ್ಡ ಏಸಗಳ ಕೂದಲಗೂ ತಲೆಯ ಕೂದಲಿಗೂ ಎಷ್ಟರ ವ್ಯತ್ಯಾಸವಿರುವುದೆಂಬುದನ್ನು ಸ್ವಲ್ಪ ಪ್ರಯತ್ನಮಾಡಿ ಪರೀಕ್ಷಿಸಿದರೆ ತಿಳಿಯಬಹುದು. ಇದರಿಂದ ಈ ಆಸಾಮಿಗೆ ಗಡ್ಡ ಏಸಗಳೊಂದೂ ಇಲ್ಲವೆಂದು ತೋರುತ್ತದೆ. ಇದ್ದಿದ್ದಪಕ್ಷದಲ್ಲಿ ಗಡ್ಡ ಏಸಗಳದೂ ಒಂದೆರಡು ಕೂದಲು ಅಂಟಿಕೊಂಡೇ ಇರುತ್ತಿದ್ದಿತು. ಅವನು ಖಂಡಿತ ಬಾಗಿಯೂ, ಇದರಿಂದಲೇ ಅವನ ತಲೆ ಮುಟ್ಟಿ ಮುಂತಾದುವನ್ನು ಒತ್ತಿ ಬರಸಿಕೊಂಡಿರಬೇಕು—ಏತಕ್ಕೆಂದರೆ ರಕ್ತದ ಕಲೆಗಳು ಬೇಗ ಹೋಗುವುದಿಲ್ಲ; ಮತ್ತೂ ಕೊಲೆ ಮಾಡುವ ಸಮಯದಲ್ಲಿ ಮನುಷ್ಯನ ಕೈಕಾಲುಗಳಲ್ಲಿ ಅದೊಂದು ಬಗೆಯ ಪೈಶಾಚಿಕ ಶಕ್ತಿಯು ಸಂಚಾರ ಮಾಗುತ್ತದೆ. ಆ ಸಮಯದಲ್ಲಿ ಮನುಷ್ಯನು ಯಾವ ಕೆಲಸ ಮಾಡಿದರೂ ಎಲ್ಲದರಲ್ಲಿಯೂ ಉದ್ದಿಶ್ಯವಿಲ್ಲದೆ ವ್ಯರ್ಥವಾಗಿಯೇ ಒಲಪುಯೋಗ ಮಾಡುತ್ತಾನೆ. ಆದಕಾರಣ ಆ ಸಮಯದಲ್ಲಿ ಪ್ರೌಢೋದ್ರೇಕವು ಒಟ್ಟಿಗೆ ಹಾಗೆ ಉಪಯೋಗವಾಗಲಿಲ್ಲವಾದ್ದರಿಂದಲೆ ಗಡ್ಡ ಏಸಗಳೆಂದಲೂ ಒಂದೆರಡು ಕೂದಲು ಕೆತ್ತಲಿಂದಿರುತ್ತಿದ್ದಿತು. ಈ ಎಲ್ಲವುಗಳ ಮಷ್ಯ—ಆ ಮನುಷ್ಯನು ಗೌರವರ್ಣದವನೆಂದು ವ್ಯಕ್ತವಾಗುತ್ತದೆ.

ಯೋಗೇಂದ್ರನು ಅರಿಂದಮನ ಮಾತುಕೇಳಿ ಏಸ್ಮಿತನಾದನು; ಆದರೆ, ಕಡೆಯಲ್ಲಿ ಹೇಳಿದ ಗೌರವರ್ಣದ ಮಾತುಗಳಿಂದ ಅವನನ್ನು ಹಾಸ್ಯಮಾಡುವುದಕ್ಕೆಂದೂ, ಒಂದು ಅವಕಾಶವನ್ನು ತಾನಾಗಿ ಕಲ್ಪಿಸಿ ಕೊಂಡನು. ಅವನು—"ಅರಿಂದಮರಾಯರುಗಳೇ, ಅದು ಹೇಗೆ? ಮೈ ಬಣ್ಣವು ಸ್ವಲ್ಪ ಅಂಗಿಯೊಂದಿಗೆ ಬದ್ಧ ಬಂದಿರುತ್ತದೆಯೇನು?" ಎಂದು ಹೇಳಿ ಗಹಗಹಿಸಿ ನಕ್ಕನು.

ಅರಿಂದಮ—ಕಣ್ಣಿದ್ದರೆ ಅದನ್ನೂ ನೋಡಬಹುದು. ಕಣ್ಣಿ ರುವುದು ಕೇವಲ ನಿಮ್ಮನ್ನೂ ನನ್ನನ್ನೂ ಗಿಡುಮರಗಳನ್ನೂ ಮನೆಮತ ಗಳನ್ನೂ ನೋಡುವುದಕ್ಕಲ್ಲ—ನೋಡುವುದನ್ನು ಕಲಿತು ಇನ್ನೂ ಅನೇಕ ನೋಡತಕ್ಕ ದಿನಸುಗಳನ್ನು ನೋಡಬೇಕು. ಇದು ಹೊರ ಗಣ್ಣಿನ ಕೆಲಸವಲ್ಲ.

ಯೋಗೇಂದ್ರ—ಅಂಗಯೊಂದಿಗೆ ಶರೀರದ ಬಣ್ಣವು ಎದ್ದು ಬಾರದಿರುವುದಾದರೆ, ಅವನು ಗೌರವರ್ಣದವನೆಂದು ತಿಳಿದುಕೊಳ್ಳುವುದಕ್ಕೆ ಮತ್ತಾವ ಉಪಾಯವೂ ನನಗೆ ಕಂಡುಬರುವುದಿಲ್ಲ.

ಅರಿಂದಮ—ಕಪ್ಪಗಿರುವ ಮನುಷ್ಯನು ಕರಿಯ ಬಣ್ಣವನ್ನು ಅಷ್ಟಾಗಿ ತೋರಿಸುವುದಿಲ್ಲ; ಯಾಗಿಲ್ಲದಿದ್ದರೆ ಅಂಗ ಮತ್ತೂ ಪೈತ್ರ ಎರಡೂ ಕರಿಯಬಣ್ಣವಾಗಿರುತ್ತಿರಲಿಲ್ಲ. ಬಂದುದೇಳೆ ಅಂಗಯು ಕಪ್ಪಾಗಿದ್ದರೂ ಪೈತ್ರವು ಸಿಜವಾಗಿ ಮತ್ತಾವುದಾದರೂ ಬಣ್ಣದ್ದಾಗಿ ಇರುತ್ತಿದ್ದಿತು. ಆಸಾಮಿಯ ವಯಸ್ಸನ್ನು ನಾಲ್ಕುತ್ತಕ್ಕೆ ಕಟ್ಟಿಸುಯಿಲ್ಲ.

ಯೋಗೇಂದ್ರ—ಹಾಗಾದರೆ ಪಕ್ಷದಲ್ಲಿ ಸಿಪ್ಪೆ ಊಹೆಯ ಮೇರೆಗೆ ಆಸಾಮಿಯ ವಯಸ್ಸನ್ನು ನಾಲ್ಕುತ್ತು, ಗೌರವರ್ಣ, ಪರಾಂಸಪೇಶಿತ ಪಕ್ಷ ಮತ್ತು ಉಬ್ಬಿದ ಕುತ್ತಿಗೆ; ಕೂದಲು ಸ್ವಲ್ಪ ಗುಂಗುರು, ಆಜಾನು ಗಡ್ಡ ಏನಾಸೆಗಳಿಲ್ಲದವನು, ಎತ್ತರದಲ್ಲಿ ೫ ಅಡಿ ಆರು ಅಂಗುಲಗಳಿಗಿಂತ ಹೆಚ್ಚಿಲ್ಲ. ಕುತ್ತಿಗೆ ಸ್ವಲ್ಪ ದಪ್ಪ, ನಡು ಸ್ವಲ್ಪ ಚಿಕ್ಕದು. ಪತ್ತಾಕಾರಿ ಕೈಗೆ ಸಿಕ್ಕಿದಾಗ—ಈ ಸಿಪ್ಪೆ ಊಹೆಗಳೆಲ್ಲವೂ ಎಷ್ಟೊದೂರ ಸಿಜವಾಗುವವೋ ನೋಡಬೇಕು.

ಅರಿಂದಮ—ಹಾಗೆಯೇ ಆಗಬಹುದು; ಈಗ ಹೊರಟೆ.

ಯೋಗೇಂದ್ರ—ಪುನಃ ಯಾವಾಗ ನಿಮ್ಮನ್ನು ನೋಡುವುದು?

ಅರಿಂದಮ—ನೋಡುವುದರಿಂದ ಫಲವುಂಟೆಂದು ತಿಳಿದಕೂಡಲೇ. ಈ ಹುಡುಗನು ಬಂದು ಭಾವಚಿತ್ರವನ್ನು ತೆಗೆಯುವನು.

ಹೀಗೆಂದು ಹೇಳಿ ಅರಿಂದಮನು ಅಲ್ಲಿಂದ ಹೊರಟುಹೋದನು.

ಶ್ರೀ

ಮಾಯಾವಿ

ಎರಡನೆಯ ಭಾಗ



ಒಂದನೆಯ ಪರಿಚ್ಛೇದ

ಪ್ರಾಂತರದಲ್ಲಿ

ರಾತ್ರಿ ಬರಡು ಭೂಮಿ, ಹುಲ್ಲುಪುಲ್ಲದ ಬೆರಂಸಾದ ಗಾಳಿಮುಳಿಗಳಿಂದ ಆ ರಾತ್ರಿ ಮತ್ತಷ್ಟು ಭಯಂಕರವಾಗಿದೆ! ಆಕಾಶದ ಪೂರ್ವದಿಗೆ ಕರಿಯು ಬಟ್ಟೆಯು ಘರದೆ ಹಾಕಿದಂತಿದೆ; ಆಕಾಶದ ಒಂದು ಕಡೆಯಿಂದ ಇನ್ನೊಂದು ಕಡೆಯವರೆಗೂ ಮೋಘ ಹರಡಿದೆ; ಆ ಮೋಘವು ದಟ್ಟವಾಗಿದೆ. ಛಿದ್ರಶೂನ್ಯವಾಗಿದೆ ಮತ್ತೂ ಅಂಧಕಾರಮಯವಾಗಿದೆ. ಭೂಮಿಯಿಂದ ಆಕಾಶದತನಕ ಕಗ್ಗತ್ತಲೆಯು ದಟ್ಟವಾಗಿ ತುಂಬಿಕೊಂಡಂತಿದೆ. ಅಡಿಗಡಿಗೆ ಸಿಡಿಲು ಗುಡುಗುಗಳ ಭಯಂಕರ ಗರ್ಜನೆ; ಆ ಗರ್ಜನೆಯನ್ನು ಕೇಳಿದರೆ ಎಂತಹ ಸಾಹಸಿಯು ಹೃದಯವಾದರೂ ಕಂಪಿಸುವಷ್ಟಿಗೆ ಬೆಕಟವಾಗಿಯೂ ಭೀತಿಜನಕವಾಗಿಯೂ ಇರುತ್ತಿದೆ. ಒಂದೊಂದು ಸಲ ಬಾಂಜುವ್ಯದೇಸೋ ಸಿಕ್ಕಾಯ; ಅದರೆ, ಅದರ ಜೆಳಕಿಗಿಂತ ಕಗ್ಗತ್ತಲೆಯೇ ಎಷ್ಟೋ ಮೇಲು. ಘೋರತರವಾದ ಈ ಮುಯೋಗದಲ್ಲಿ ಬರಂಗಾಳಿಯಿಂದ ಕೂಡಿ ರಭಸವು ವಾಗಿಯೂ, ಭಯಪೂರ್ಣವಾಗಿಯೂ ಬರುವ, ಮತ್ತೂ ಜನರಹಿತವಾಗಿಯೂ ತಾರಕಾಶೂನ್ಯವಾಗಿಯೂ ಬದ್ದು ದಿಗ್ಭಾಂತಗಳನ್ನು ಗುರ್ತಿಸಲಾಗದಿರುವ ಆ ಮಹಾಂಧಕಾರ ಮುಹೂರ್ತದಲ್ಲಿ ಹದಿನಾಲ್ಕು ವರ್ಷದ ಬಾಲಕಿಯೊಬ್ಬಳು ಸಸ್ತಾರವಾದ ಒಂದು ಪ್ರಾಂತರದಿಂದ ಪಾರಾಗಿ ಹೋಗುವುದಕ್ಕೋಸ್ಕರ ಊರ್ಧ್ವಶ್ವಾಸದಿಂದ ಓಡುತ್ತಿದ್ದಾಳೆ. ಏಂಚಿದಾಗಲೆಲ್ಲಾ ಬಾಲಕಿಯು ಒಂದುಸಲ ಪ್ರಾಂತರದ ಉತ್ತರಕಡೆಯನ್ನೂ ಇನ್ನೊಂದು ತಡವೆ ಉತ್ತರಕಡೆಯನ್ನೂ ಭಯಚಕಿತ ದೃಷ್ಟಿ

ಯಿಂದ ನೋಡುತ್ತಿದ್ದಳು. ಆ ಬೆಳಕಿನಲ್ಲಿ ಯಾರಾದರೂ ತನ್ನನ್ನು ಕಂಡಾರೆಂದು ಅವಳು ಭಯಪಟ್ಟಿದ್ದಳು. ಬೆಳಕು ಸರಿದು ಕತ್ತಲೆ ಮುಸುಕಿದಾಗ ಆ ಬಾಲಕಿಯು ಬಹಳ್ಬೇ ಸಮಾಧಾನದಿಂದ ನಿರ್ಭಯವಾಗಿ ಪುನಃ ಇನ್ನಷ್ಟುದೂರ ಮುಂಬರಿಯುತ್ತಿದ್ದಳು. ಹೀಗೆ ಮಿಂಚಿನಿಂದ ಭಯಂಕರವಾದ, ನೀರಾಕಳಿಯಿಂದ ಕಷ್ಟಾದ, ಮಳೆಯಿಂದ ಒದ್ದೆಯಾದ, ನಿರ್ಜನವಾದ ಆ ಪ್ರಾಂತರದಲ್ಲಿ, ನಿಶಾಸಮಯದಲ್ಲಿ ಓಡುತ್ತಿರುವ ಆ ಹುಡುಗಿ ಯಾರಾಗಿರಬಹುದು?

ಈ ಹುಡುಗಿ ಬಹಳ್ಕಾಲದಿಂದ ಹೀಗೆ ಕಷ್ಟಪಡುತ್ತಿರುವಳೋ ತಿಳಿಯದು; ಆದರೆ, ಅವಳು ಸಂಪೂರ್ಣವಾಗಿಯೂ ದಣಿದಿದ್ದಳು. ಅವಳ ನಾಜೂಕಾರಂಭ್ರದಿಂದಲೂ ಬಾಲ್ಯದಿಂದಲೂ ಬಹು ಜೋಗ ಜೋಗ ಉಸಿರಾಡುತ್ತಿದ್ದಿತು. ಪ್ರಯತ್ನಪೂರ್ವಕ ಸ್ವಲ್ಪದೂರ ಕೊಂಚ ಜೋಗ ನಡೆಯುವಳು, ಆದರೆ ಉತ್ತರಕ್ಷಣದಲ್ಲಿಯೇ ಆ ನಡೆಯ ವೇಗವು ಪುನಃ ಕಡಿಮೆಯಾಗಿ ಹೋಗುವುದು—ಅನಂತರ ಸಾಧ್ಯವೇ ಇಲ್ಲ. ಕಾಲು ಕುಸಿದುಬಿದ್ದಿತೋ ಬಸ್ಸಿನ ಹಾಗೆ ಕಾಲು ಮುತ್ತಿ ಮುಂದಕ್ಕೇ ಹೊರಡದು. ಆ ಪ್ರಕಾರವಾದ ಪರಿಶ್ರಮದಿಂದ ಪೂರಾ ಆಗುವುದರಲ್ಲಿ ಆ ಬಾಲಕಿಯು ಬಹಳ್ಬೇ ತಡಪಿ ನೆಲಕ್ಕೆ ಬಿದ್ದು ಉರುಳಿದಳು; ಬಹಳ್ಬೇ ಸಲ ಬಡಪಿ ಬೇಳುವುದರಲ್ಲಿದ್ದಳು. ಮಳೆಯು ನೀರಿನಿಂದ ತೊಯ್ದಿಂದ ಅವಳ ಸೀರೆಯು ನೆರಿಗೆ ಆ ಬಾಲಕಿಯು ಕಾಲಿಗೆ ತೊಡರುಕೊಂಡು ಅವಳನ್ನು ಬಹಳ್ಬೇ ತಡವೆ ನೆಲಕ್ಕೆ ಕೆಡಹಿತು. ಹೇಲೆ ನೋಪವು ಓಡುತ್ತಿದೆ; ನೋಪದ ಹಿಂದೆ ನೋಪವು ಓಡುತ್ತಿದೆ; ನೋಪದೊಡನೆ ನೋಪವು ಸೇರಿ ನೋಪವು ಮತ್ತಷ್ಟು ದಟ್ಟವಾಗಿ ಹರಿಯುತ್ತಿದೆ; ಅದರ ಅಡಿಯಲ್ಲಿ ಬಿರುಗಾಳಿ ಬೀಸುತ್ತಿದೆ; ಬಿರುಗಾಳಿಯು ಬಿರುಗಾಳಿಯೊಡನೆ ಸೇರಿ ಇನ್ನಷ್ಟು ಭಯಂಕರ ವೇಗವಾಗಿ ಓಡುತ್ತಿದೆ. ಅವುಗಳ ಅಡಿಯಲ್ಲಿ ಸಹಾಯ ಹೀನೆಯಾದ ಆ ಬಾಲಕಿಯು ಪ್ರಾಣ ಭಯದಿಂದ ನಿರ್ವಾಹವಿಲ್ಲದೆ ಓಡುತ್ತಿದ್ದಾಳೆ!

ಪರಿಶ್ರಮವನ್ನು ಕಳೆದು ಬಂದಾಗ ಆ ಬಾಲಕಿಗೆ ಒಂದು ಪಣ್ಣ ಗ್ರಾಮವು ಕಾಣಿಸಿತು. ಆದರೆ ಆ ಸಮಯದಲ್ಲಿ ಆ ಗ್ರಾಮವು

ಕೂಡ ನಿರ್ಜೀವವಾಗಿ ಕಾಣಿಸಿತು. ಜನ ಜಂತುಗಳ ವಾಸಸ್ಥಾನ ವೆಂಬುದಕ್ಕೆ ಯಾವ ಚಿಹ್ನೆಯೂ ಇಲ್ಲ. ಬಾಲಕಿಯು ಊರೊಳಕ್ಕೆ ಬಂದು ಹತಾಶಳಾಗಿ, ನಿರ್ಜೀವವಾದ ಆ ಗ್ರಾಮದ ನಾಲ್ಕೂ ಕಡೆ ಗಳನ್ನು ಕಾತರದೃಷ್ಟಿಯಿಂದ ನೋಡಿದಳು. ಚಪಲಸ್ವಭಾವದ ಆ ಮುಂಚು ಮರಣೋನ್ಮುಖವಾಗಿ ಹತಾಶಳಾದ ಬಾಲಕಿಯ ದೃಷ್ಟಿಗೆ ಆ ನಿರ್ಜೀವ ಗ್ರಾಮದ ಚಿತ್ರವನ್ನು ಮತ್ತಿ ತೋರಿಸಿ ಪರಿಹಾಸ್ಯ ಮಾಡು ವುದೋ ಏನೋ ಬನ್ನವಹಾಗೆ ಇದ್ದಿತು; ಆದರೆ ಅದರಿಂದ ಬಾಲಕಿಯು ದುರ್ಬಲವಾದ ಮತ್ತೂ ಯಾತನಾಪೂರ್ಣವಾದ ಹೃದಯಕ್ಕೆ ಬಹು ಮಟ್ಟಿಗೆ ಸಮಾಧಾನವೇ ಆಯಿತು. ಅವಳು ಬೇಗನೆ ಗ್ರಾಮ ಮಧ್ಯಕ್ಕೆ ಬಂದಳು.

ಬಾಲಕಿಯು ಬಳಲಿ ಹೊತ್ತಿನಿಂದ ಮುಳಿಯುಲ್ಲೆ ತೊಯಿದಿದ್ದಾಳೆ, ಮತ್ತೂ ಸಹಿಸಲಸಾಧ್ಯವಾದ ಛಳಿಯಿಂದ ಅವಳ ಮೈಯೆಲ್ಲವೂ ನಡುಗುತ್ತಿದೆ. ಉಜ್ವಲವಾಗಿ ಗೌರವರ್ಣದಿಂದ ಇದ್ದ ಅವಳ ಶರೀರ ಮತ್ತೂ ಮುಖಕಾಂತಿ ಇವು ಈಗ ಬಳುಪಾಗಿವೆ; ಅಂಗಾಂಗಗಳು ದುರ್ಬಲವಾಗಿವೆ; ನನೆದು ರಾತಿಯಾದ ಅವಳ ಕೃಷ್ಣ ಕೇಶದಾಮವು ಅವಳ ಜೆನ್ನು, ಬೆಪೆ, ಭುಜ, ತೋಳು ಮುಂತಾದ ಕತೆಗಳಲ್ಲಿ ಗುಚ್ಛ ಗುಚ್ಛವಾಗಿ ಅಂಟಿಕೊಂಡಿರುತ್ತದೆ.

ಬಾಲಕಿಯು ಗ್ರಾಮ ಮಧ್ಯಕ್ಕೆ ಬಂದು ನೋಡಿದಳು; ಹತ್ತಿರ ದಲ್ಲಿಯೇ ಒಂದು ಮನೆಯಲ್ಲಿ ಇಗಲೂ ದೀಪ ಉರಿಯುತ್ತಿದ್ದಿತು. ಏಕವಾತ್ರವಾದ ಆ ದೀಪದ ಜೆಳಕನ್ನೇ ಲಕ್ಷ್ಯವಾಗಿಟ್ಟುಕೊಂಡು ಆ ಬಾಲಕಿಯು ನೂತನ ಬಲದಿಂದ ಮತ್ತಷ್ಟು ವೇಗವಾಗಿ ನಡೆದಳು. ಹತ್ತಿರ ಹೋಗಿ ನೋಡಿದಳು, ಅದೊಂದು ಚಿಲ್ಲರೆ ಅಂಗಡಿ. ಅಲ್ಲಿ ನಾಲ್ಕೈದು ಮಂದಿ ಕುಳಿತು ಇಸ್ಪೀಟಾಡುತ್ತಲಿದ್ದರು, ಬಹ್ವಂಶರು ತಂಬಾಕು ಸೇದುತ್ತಿದ್ದರು. ಆ ಸಮಯದಲ್ಲಿ ಕೆಲವರು ನಗುತ್ತಿದ್ದರು, ಕೆಲವರು ಮಾತನಾಡುತ್ತಿದ್ದರು. ಒಬ್ಬನು ಅನ್ಯಮನಸ್ಕನಾಗಿ ಅಸುಚ್ಛ ಸ್ವರದಿಂದ ಹಾಡುತ್ತಿದ್ದನು. ಅಂಗಡಿಯವನೂ ಕೂಡ ಆಟವಾಡುವರ

ಸಂಗಡ ಸೇರಿದ್ದಾನೆ; ಅವನ ಹೆಸರು ವಲಾಯಿಮುಂಡಲ ಎಂದು. ಉಳಿದ ಮೂರುನಾಲ್ಕು ಮಂದಿಯು ಅದೇ ಊರಿನವರು. ಈ ದುರ್ಯೋಗ ಸಮಯದಲ್ಲಿ ಅಂಗಡಿಯವನು ಗಿರಾಕಿಗಳು ಬಂದಾರೆಂಬ ಭರವಸೆಗೆ ಜಲಾಂಜಲಿ ಕೊಟ್ಟಿದ್ದನು. ಮಿಕ್ಕವರು ಈ ಗಾಳಿ ಮಳೆಯಲ್ಲಿ ಮನೆಗೆ ಹೋಗುವುದು ಅಸಾಧ್ಯವೆಂದು ಭಾವಿಸಿ, ಮತ್ತೇನೂ ಕೆಲಸವಿಲ್ಲದ್ದರಿಂದ ಇಸ್ಪೀಟಾಟಕ್ಕೆ ಮನಸಿಗೊಟ್ಟಿದ್ದರು. ಈ ಜೇಳೆಗೆ ಆಟವು ಇನ್ನೂ ನಡೆಯುತ್ತಿದ್ದಿತು ಮತ್ತೂ ಜಮಾವಣಿಯಾಗಿ ಸೇರಿಯೂ ಇದ್ದಿತು.

ಆಟವು ಚೆನ್ನಾಗಿ ಸೇರಿದ್ದ ಸಮಯದಲ್ಲಿ ಆ ಬಾಲಕಿಯು ಅಲ್ಲಿಗೆ ಬಂದು, ಇಲ್ಲಿ "ಗೋಸ್ವಾಮಿಪುರವ ಎಲ್ಲಿದೆ ಎಂಬುದನ್ನು ಯಾರಾದರೂ ಬಲ್ಲಿರಾ?" ಎಂದು ಕಂಪಿತ ಕಂಠದಿಂದ ಕೇಳಿದಳು.

ಸೊಡಲು ಯಾರೂ ಪ್ರಾತನಾಡಲಿಲ್ಲ. ಯಾರು ಇಸ್ಪೀಟಾಡುತ್ತಿದ್ದರೋ ಅವರ ಆಟವು ಅಷ್ಟಕ್ಕೇ ನಿಂತಿತು; ತಂಬಾಕು ಸೇದುತ್ತಿದ್ದವನ ಕೈಯ್ಯಲ್ಲಿದ್ದ ಹುಕ್ಕೆಯು ನಡನಡುಗುತ್ತ ಅವನ ಕಯ್ಯಿಂದ ಜಾರಿ ನೆಲಕ್ಕೆ ಬಿದ್ದು ಶಬ್ದವಾಡಿತು; ಕತೆ ಹೇಳುತಿದ್ದವನು ಆ ವೇಳೆಗೆ ಬಂದು ಭೂತದ ಕತೆ ಹೇಳುತ್ತಾ ಅರ್ಧವಾತ್ರ ಹೇಳಿದ್ದನು; ಈಗ ಅವನಿಗೆ ಪ್ರಾತನಾಡುವ ಶಕ್ತಿಯೇ ಅಡಗಿಹೋಯಿತು; ಅಸ್ಫುಟಸ್ವರದಿಂದ ಹಾಡುತ್ತಿದ್ದವನ ಸಂಗೀತವು ಮುಕ್ತಾಯಕ್ಕೆ ಬರುವ ಮೊದಲೇ ನಿಂತುಹೋಯಿತು; ಹೀಗೆ ಎಲ್ಲರ ವಾಕ್ಕ್ರಿಯೆಯೂ ಅಡಗಿಹೋಗಿ ಎಲ್ಲರೂ ಆ ಬಾಲಕಿಯ ಮುಖವನ್ನೇ ನೋಡುತ್ತಲಿದ್ದರು.

ಬಾಲಕಿಯು ಪುನಃ ಕೇಳಿದಳು. ಆದರೂ ಯಾರೂ ಉತ್ತರ ಕೊಡಲಿಲ್ಲ. ಮುಖ್ಯವಾಗಿ, ಆ ಭೂತದ ಕತೆ ಹೇಳುತ್ತಿದ್ದವನು, ಕೆಲವು ದಿನಗಳ ಮುಂಚೆ, ಅಮಾವಾಸ್ಯೆಯ ರಾತ್ರಿ, ತಾನು ಕಣ್ಣಾರೆ ಪಿಶಾಚವನ್ನು ನೋಡಿದ್ದವನಂತೆ ಆ ಅದ್ಭುತ ಚರಿತ್ರೆಯನ್ನು ಬಹು ಸಾಹಸದೊಡನೆ ಹೇಳುತ್ತಿದ್ದನು. ಈ ಬಾಲಕಿಯನ್ನು ಕಂಡು ಭಯದಿಂದ ಅವನಿಗೆ ಎದೆ ನಡುಕವುಂಟಾಯಿತು; ಹಾಗೆಯೇ ಅವನ ಹೃದಯರಕ್ತವು ಕಾದು ಕುದಿಯತೊಡಗಿತು. ಆಗ ಅವನು ಆತ್ಮಸಂರಕ್ಷಣೆ

ಗಾಗಿ ಮೆಲ್ಲಮೆಲ್ಲಗೆ, ರಕ್ಷಾಮಂತ್ರವನ್ನು ಪುನಶ್ಚರಣಮಾಡತೊಡಗಿದನು.

ಬಾಲಕಿಯು ಇನ್ನೊಂದುಸಲ "ಗೋಸ್ವಾಮಿಪುರವೆಂಬುದು ಎಲ್ಲಿದೆ?" ಎಂದು ಕೇಳಿದಳು.

ಅವರ ಮುದ್ದು ಮಲಾಯಿಚಾಂಡನು "ನೀನು ಯಾರು? ಎಲ್ಲಿಂದ ಬಂದೆ?" ಎಂದು ಕೇಳಿ, ತನ್ನ ಅಸಮಾನವಾದ ಸಾಹಸದ ಪರಿಚಯ ಮಾಡಿಕೊಟ್ಟನು.

ಹುಡುಗಿಯು ಆ ಮಾತಿಗೆ ಯಾವ ಉತ್ತರವನ್ನೂ ಹೇಳದೆ, "ನಾನು ತುಂಬಾ ಕಷ್ಟಕ್ಕೆ ಸಿಕ್ಕಿದ್ದೇನೆ, ನನಗೆ ನಿಲ್ಲುವುದಕ್ಕೂ ಸಾಮರ್ಥ್ಯವಿಲ್ಲ; ಗೋಸ್ವಾಮಿಪುರವು ತಿಳಿದಿರುವುದಾದರೆ ಅದು ಎತ್ತಕಡೆ ಬಂಬುದನ್ನು ನನಗೆ ಬೇಗ ಹೇಳಿಬಿಡಿ, ನಾನು ಮಹಾಪತ್ತಿಗೆ ಸಿಕ್ಕಿದ್ದೇನೆ" ಎಂದು ಹೇಳಿದಳು.

ಮಲಾಯಿಚಾಂಡನ ಸಾಹಸವನ್ನು ಅಲ್ಲಿಯೇ ಇದ್ದ ಹಲಧರ ನೆಂಬವನು ನೋಡಿದನಾಗಿ ಅವನು ತನ್ನ ಸಾಹಸವನ್ನೂ ಕೂಡ ಮೇರೆವಿಚಾರುವಂತೆ ಮಾಡಿದನು. ಆಗ ಅವನು ಒಂದು ಸಲ ಬಾಲಿಕಾ ರೂಪದ ಆ ಪಿಶಾಚಿಯ ಸಂಗಡ "ಗೋಸ್ವಾಮಿಪುರದಲ್ಲಿ ಯಾರಲ್ಲಿಗೆ ಹೋಗುವೆ?" ಎಂದು ಮಾತನಾಡಿ ತನ್ನ ಸಾಹಸದ ಪರಿಚಯ ಮಾಡಿಕೊಟ್ಟನು.

ಬಾಲಕಿಯು ಒಂದುಸಲ ಹಿಂದು ಮುಂದು ಆಲೋಚಿಸಿದಳು: ಹೆಸರು ಹೇಳಲಿಲ್ಲ.

ಹೆಸರನ್ನು ಕೇಳಿ ತಿಳಿಯಲೇಬೇಕೆಂಬ ಸಂಕಲ್ಪವು ಹಲಧರನಿಗೇನೂ ಇರಲಿಲ್ಲ; ಅವನು ಆ ಬಾಲಕಿಯ ಸಂಗಡ ಮಾತನಾಡಿ, ತನ್ನ ಸಂಗಡಿಗರಿಗೆ ತನ್ನ ಅಸಮಾನ ಸಾಹಸ ಪರಾಕ್ರಮಗಳ ಪರಿಚಯ ಮಾಡಿಕೊಟ್ಟು, ಅವರನ್ನು ಸುರುಳುಮಾಡುವುದಕ್ಕಾಗಿಯೇ ಆ ರೀತಿ ಉಪಕ್ರಮಿಸಿದ್ದು. ಬಾಲಕಿಯು ಮಾತನಾಡದಿದ್ದುದನ್ನು ಕಂಡು ಅವನು

ತನ್ನ ಅಮಾನುಷಿಕವಾದ ಸಾಹಸವನ್ನು ತೋರಿಸಿ, ''ಗೋಸ್ವಾಮಿ ಪುರವು ಇಲ್ಲಿಗೆ ಬಹುದೂರ. ಈ ದಿಕ್ಕಿಗೆ ಹೋಗುವ ಕಾಲುವೆಯ ಕಟ್ಟೆಯ ಮೇಲೆ, ನೇರವಾಗಿ ದಕ್ಷಿಣಕ್ಕೆ ಹೋದರೆ ಸುಮಾರು ಮುಕ್ಕಾಲು ಮೈಲಿ ದೂರದಲ್ಲಿ ಗೋಸ್ವಾಮಿಪುರವಿದೆ. ಈ ಮುಳಿ ಗಾಳಿಗಳಲ್ಲಿ ನೀನೊಬ್ಬಳೇ ಹೋಗಲಾರೆ; ಬಲ್ಲಿಯಾದರೂ ಹಾದಿಗೀದಿ ತಪ್ಪಿತೆಂದರೆ ಪ್ರಾಣವೇ ಹೋಗುವುದು'' ಎಂದು ಹೇಳಿದನು.

ಬಾಲಕಿಯು ಮತ್ತೆ ಯಾವ ಮಾತನ್ನೂ ಆಡದೆ ಭಯಗೊಂಡು ಅಲ್ಲಿಂದ ಸರಿದುಹೋದಳು. ಆ ಮುಳಿ ಗಾಳಿಗಳನ್ನು ಲಕ್ಷಿಸದೆ ಸೂತನ ಶಕ್ತಿಯಿಂದ ದಕ್ಷಿಣಾಭಿಮುಖವಾಗಿ ಮುತ್ತೈ ಹೊರಟಳು.

ಈ ಬಾಲಕಿ ಯಾರು?

ಎರಡನೆಯ ಪರಿಚ್ಛೇದ

ಈ ಬಾಲಕಿ ಯಾರು?

ನೋಡುತ್ತಿದ್ದ ಹಾಗೆಯೇ ಬಾಲಕಿಯು ಬಸೆಯುಕ್ಕುವುದರ ಒಳಗಾಗಿ ಹೊರಗಡೆಯ ಆ ಕಗ್ಗತ್ತಲಲ್ಲಿ ಬಲ್ಲಿಯೋ ಪುರೆಯನಾದು ದನ್ನು ಕಂಡು, ಅಲ್ಲಿದ್ದ ಬಲ್ಲರ—ಸಾಹಸಿಯಾದ ಪಲಾಯಿಮಂಡಲ, ಅವಸಿಗಂತಲೂ ಪ್ರಬಲ ಸಾಹಸಿಯಾದ ಹಲಧರ—ಬಲ್ಲರ ಮುಖವೂ ಬಾಡಿ ಭಯದಿಂದ ಬತ್ತಿಹೋಯಿತು. ಮುಂದೇನು ಮಾಡಬೇಕೆಂಬುದನ್ನು ತರಿಯದೆ ಬಲ್ಲರೂ ನಿಶ್ಚೇಷ್ಟಿತರಾಗಿದ್ದರು.

ಇದಕ್ಕೆ ಸ್ವಲ್ಪ ಘಂಟೆಯ ಕೆಳೆ ಹೇಳುತ್ತಿದ್ದ ಪ್ರಹಸನ ಪೆಸರು ಹಾರಾಣಚಂದ್ರ. ಅವನು ಹೇಳಿದನು—''ಇದು ಮುತ್ತೈಸರೂ ಅಲ್ಲಪಯ್ಯಾ, ಹಲಧರ; ನಾನು ಈಗ ಯಾರ ಪಾತ್ರ ಹೆಂಳುತ್ತಿದ್ದೆನೋ ಅದೇ ಇದು; ಆ ಪೆದರುಸೆಳೆದು ಮುತ್ತರ ಯಾವುದನ್ನು ಸೋಪಿದ್ದೆನೋ ಸಿಶ್ಚಯವಾಗಿಯೂ ಅದೇ ಇದು. ಒಂದು ಸಲ ಬಚ್ಚರಿಕೆ ಕೊಟ್ಟು ಹೋಯಿತು. ಈಗ ಸೋಡು, ಬಸ್ಟು ರಾತ್ರಿಯಲ್ಲಿ—ಇದೂ ಅಲ್ಲದೆ

ಇಂದು ಶನಿವಾರ, ಈ ಮಳೆಗಾಳಿಗಳು, ಆ ಸುದ್ದಿ ಬತ್ತಿದ್ದೇ ಒಳ್ಳೆಯದಾಗಲಿಲ್ಲ; ಹಾಗಲ್ಲವಾದರೆ ಈ ಮಳೆಗಾಳಿಯಲ್ಲಿ ಹೊರಗೆ ಹೊರಟು ಬರುವುದಕ್ಕೆ ಮನುಷ್ಯನ ಅಪ್ಪನಿಗೆ ತಾನೇ ಸಾಧ್ಯವೇನಯ್ಯಾ; ಸನಗೆ ಚೆನ್ನಾಗಿ ಗೊತ್ತಾಯಿತು. ಕುತ್ತಿಗೆಗೆ ನೇಣುಹಾಕಿಕೊಂಡು ಹೋದ ಳಲ್ಲಾ ಅವಳೇ!—ಆ ಘೋಷಾಲರ ಕಿರಿಯ ಸೊಸೆ."

ಇನ್ನೊಬ್ಬ—ಬಡುಬಡಯ್ಯ, ಅವಳು ಶಷ್ಟ ಚೆನ್ನಾಗಿದ್ದಳೇನು; ಇವಳ ಕಣ್ಣು ಮುಖಗಳನ್ನು ನೀನು ಸರಿಯಾಗಿ ನೋಡಿದ ಹಾಗಿಲ್ಲ; ಸಾಕ್ಷಾತ್ ದುರ್ಗಾಪ್ರತಿಮೆಯೇ ಸರಿ.

ಆಗ ಹಾರಾಣಚಂದ್ರನು—ನಾನು ಚೆನ್ನಾಗಿ ನೋಡಿದೆ; ಅವಳು ಇಲ್ಲಿ ನಿಂತಿರುವತನಕ ಅವಳ ನೆರಳು ಸ್ವಲ್ಪವಾದರೂ ಕಾಣಿಸಲಿಲ್ಲ. ಕುತ್ತಿಗೆಗೆ ನೇಣು ಹಾಕಿಕೊಂಡು ಸತ್ತುಹೋದ ಘೋಷರ ಚಿಕ್ಕ ಸೊಸೆಯೇ ಹೊರತು ಬೇರೆ ಅಲ್ಲ. ನಾನು ಇದಕ್ಕೆ ಮೊದಲೇ ಬಂದು ಬಿನ ಇವಳನ್ನು ಕಣ್ಣಾರೆ ಕಂಡಿದ್ದೇನೆ; ರೂಪ-ಕುರೂಪಗಳ ಮಾತು ಕಟ್ಟಿಡು. ಅವು ಯಾವರೀತಿ ಆಗಬೇಕೆಂದರೆ ಆ ರೀತಿ ಆಗಬಲ್ಲವು; ಈ ದಿನ ಬನು ಕಂಡೆ, ನಾನು ಆ ದಿನ ನೋಡಿದಾಗ ರೂಪವು ಹೋಪಿಸಿಯು ಹಾಗಿದ್ದಿತು; ಆ ದಿನ ಮತ್ತೆ ಯಾರಾದರೂ ಆಗಿದ್ದಪಕ್ಷದಲ್ಲಿ ಅದರ ನೋಸಕ್ಕೆ ಒಳಗಾಗುತ್ತಿದ್ದರು—ಅದರಿಂದ ನಾಯುತ್ತಿದ್ದರು, ನಾನು ಕಾಣಯ್ಯ, ಧೀರ, ತಪ್ಪಿಸಿಕೊಂಡುಬಂದೆ;—ಬಂದು ಅನೇಕ ಹಾಗು ಕಠಿಣ ಪ್ರಮಾಣಗಳನ್ನು ಮಾಡುತ್ತಾ ಹೇಳಿದನು.

ಬಲಾಯಿಮಂತಲನು ಮುಕ್ತಾಯದು ದಾರಿ ಹಿಡಿದು "ಇದೆಲ್ಲಾ ಕೆಲಸಕ್ಕೆ ಬಂದ ಮಾತಲ್ಲ, ಗೋಸಾಯಿವುರದಲ್ಲಿ ಯಾರ ನುಗಳೂ ಆಗಿರಜೇಕು: ನೋಡಿದರೆ ಅತ್ತೆಮನೆಯಲ್ಲಿ ತುಂಬಾ ಕಷ್ಟಪಟ್ಟಿರಜೇಕು: ಅದರಿಂದ ಈ ದಿನ ಈ ಮಳೆಗಾಳಿ ಬಂದದ್ದೇ ಅನುಕೂಲವೆಂದುಕೊಂಡು, ತಂದೆಯ ಮನೆಗೆ ತಪ್ಪಿಸಿಕೊಂಡು ಬಂದಿರಜೇಕು" ಎಂದು ಹೇಳಿದನು.

ತಂಬಾಕು ಸೇದುವುದನ್ನು ನಿಲ್ಲಿಸಿ, ಇಸ್ಪೀಟಾಟವನ್ನು ನಿಲ್ಲಿಸಿ, ಕತೆ ಹೇಳುವುದನ್ನು ನಿಲ್ಲಿಸಿ, ಅಸ್ಖಟಸ್ವರದಿಂದ ಹಾಡುವುದನ್ನು ನಿಲ್ಲಿಸಿ

ಸುಮಾರು ಅರ್ಧಗಂಟೆಯವರೆಗೂ ಅವರು ಈ ವಿಚಾರವನ್ನು ಕುರಿತೇ ಮಾತನಾಡುತ್ತಿದ್ದರು; ಅಷ್ಟು ಹೊತ್ತಿಗೆ ಅಲ್ಲಿಗೆ ಮತ್ತೊಂದು ಮೂರ್ತಿಯು ಓಡೋಡಿ ಬಂದು ನಿಂತಿತು.

ಆ ಭಯಂಕರನ ರೀತಿಯನ್ನು ನೋಡಿ ಎಲ್ಲರೂ ಭಯಪಟ್ಟರು. ವಿಕಟವಾದುದಕ್ಕಿಂತಲೂ ವಿಕಟವಾದ, ಕುತ್ಸಿತರೂಪಕ್ಕೂ ಕುತ್ಸಿತ ರೂಪವಾದ ಆ ಮಾದರಿಯ ಮನುಷ್ಯನನ್ನು ಅವರೆಗೂ ಅವರು ಕಂಡು ವಿಲ್ಲವೆಂದೇ ಅವರು ಭಯಪಟ್ಟದ್ದು. ಅವನ ಅಜಾನುಬಾಹುವಾದ ಬಲಿಷ್ಠ ಶರೀರ, ಉದ್ದುದ್ದವಾದ ಕೈಕಾಲುಗಳು, ಅವನ ದೇಹದ ಅಚ್ಚುಕಪ್ಪು ಬಣ್ಣ,—ಅವನ ಮೈಬಣ್ಣದ ಉಜ್ವಲತೆಯು ಬಣ್ಣಕ್ಕೆ ವಿರುದ್ಧವಾದ ಮಸಿಯು ಉಜ್ವಲತೆಯನ್ನೂ ನಾಚಿಸುತ್ತಿದೆ,—ದೊಡ್ಡದಾದ ಮುಖ ಮಂಡಲ, ಆ ದೊಡ್ಡ ಮುಖಮಂಡಲದಲ್ಲಿ ಕೆಂಡಗಳಂತಿರುವ ಬಹು ಸಣ್ಣವಾದ ಎರಡು ಕಣ್ಣುಗಳು, ಪ್ರಶಸ್ತವಾದ ಮೂಗು, ವಿಕಾರವಾದ ದಂತಪಙ್ಕ್ತಿ!

ಇಷ್ಟರಮೇಲೆ ಇದಕ್ಕೆ ಸಮಾನವಾಗಿಯೇ ಇರುವ ಕರ್ಕಶ ಕಂಠದಿಂದ "ಏನಯ್ಯಾ, ಇತ್ತಕಡೆ ಒಬ್ಬ ಹುಡುಗ ಹೋಗುತ್ತಿದ್ದನ್ನನ್ನು ನೋಡಿದಿರಾ?" ಎಂದು ಕೇಳಿದನು.

ಯಾರೂ ಯಾವುದೊಂದು ಮಾತನ್ನೂ ಆಡಲಿಲ್ಲ.

ಆಗ, ಆ ವಿಕಟ ಭಯಂಕರನ ವಿಕಟತರವಾದ ಕರ್ಕಶ ಸ್ವರವು ಸಪ್ತಮಕ್ಕೆ ಏರಿ ಮತ್ತಷ್ಟು ಕರ್ಕಶವಾಗಿ ಕೇಳಿಸಿತು. "ಏನ್ರೋ, ನೀವು ಯಾರೂ ಮಾತನಾಡುವುದಿಲ್ಲ? ಮೂಕರಲ್ಲವಷ್ಟೆ? ನಿಶ್ಚಯ ನನ್ನ ಹೇಳಿದಿರುವಿರಾದರೆ ಕಂಡಿರುವಿರೋ ಇಲ್ಲವೊ ನನ್ನ ಕೈಲಿರುವುದನ್ನು?" ಎಂದು ಹೇಳಿ ಬಂದು ದೀರ್ಘವಾದ ಚೂರಿಯನ್ನು ಹೊರಗೆ ತೆಗೆದು ತೋರಿಸಿದನು.

ಆಗ, ಆ ಬಹು ಸಾಹಸಿಗನಾದ ಹುಲಧರನು ಭಯಗೊಂಡು ನಡುಗುವ ಸ್ವರದಿಂದ "ಹ್ಲಾ, ಅರ್ಧಘಂಟೆಯಾಗಿರಬಹುದು, ಒಬ್ಬ

ಹುಡುಗಿಯು ದಕ್ಷಿಣ ಕಡೆ ಇರುವ ದೊಡ್ಡ ಕಾಲುವೆಯ ಮೇಲಿಂದ ಗೋಸ್ವಾಮಿಪುರದ ಕಡೆ ಹೋದಳು'' ಎಂದು ಹೇಳಿದನು.

ಕೇಳಿದುದೇ, ಆಗಂತುಕನು ಅಲ್ಲಿ ಅರೆಗಳಿಗೆಯೂ ನಿಲ್ಲಲಿಲ್ಲ. ಬಾಲಕಿಯ ಬೆನ್ನಟ್ಟುವುದಕ್ಕಾಗಿ ಹೊರಟುಹೋದನು. ಅತಿ ಸಾಹಸಿಯಾದ ಹಲಧರನು ಆಗ ನಿರ್ಧಾರ ಸೂಚಕವಾದ ದೀರ್ಘವಾದೊಂದು ನಿಟ್ಟುಸಿರಿಟ್ಟು ಬದುಕಿಕೊಂಡನು.

ಹಲಧರ—ವ್ಯಾಪಾರವೇನಿರಬಹುದು, ಹೇಳು ನೋಡೋಣ.

ಪಲಾಯಿಮುಂಡಲ—ಯಾವುದೂ ಗೊತ್ತಾಗುವ ಹಾಗಿಲ್ಲ, ಇದರಲ್ಲಿ ಏನೋ ಗೂಢವಾದ ರಹಸ್ಯವಿರುತ್ತದೆ.

ಹಾರಾಣಚಂದ್ರ—ಇದು ಮತ್ತೇನೂ ಅಲ್ಲ; ಎಲ್ಲವೂ ಭೂತದ ಆಟ.

ಪಲಾಯಿಮುಂಡಲ—ಅಲ್ಲ ಅಲ್ಲ; ಭೂತವಲ್ಲ. ಈ ಮನುಷ್ಯನಿಗೆ ಏನೋ ದುರುದ್ದೇಶವಿದೆ.

ಇದೇ ರೀತಿಯಾಗಿ ಕೊಂಚ ಕಾಲದವರೆಗೆ ಮಾತು ಕತೆಗಳಾಗುತ್ತಿದ್ದುವು. ಅಕಸ್ಮಾತ್ತಾಗಿ, ಯಾರೋ ದೂರದಲ್ಲಿ, ಸ್ತ್ರೀ ಕಂಠದಿಂದ, ''ಅಯ್ಯೋ ಯಾರಿದ್ದೀರಪ್ಪ, ಬೇಗ ಬನ್ನಿ, ಬೂಸಿ, ಬೂಸಿ ಮಾಡುತ್ತಾನೆ, ಬೂಸಿ—ಬೂಸಿ'' ಎಂದು ಆರ್ತನಾದ ಮಾಡಿದರು.

ಪಲಾಯಿಮುಂಡಲನು ಎದ್ದು ನಿಂತು:—''ಈಗಲೇಗ ಸರಿ ಹೋಯಿತು, ಆ ಮನುಷ್ಯನೇ ರಾಕ್ಷಸ, ಆ ಹುಡುಗಿಯನ್ನು ಕೊಲೆಮಾಡಿದ್ದಾನೆ. ನಡೆಯಿರಿ, ಸುಮ್ಮನೆ ಕುಳಿತಿದ್ದರೆ ಸಾಗುವುದಿಲ್ಲ. ಬನ್ನಿ, ಎಲ್ಲರೂ ಸೇರಿ ಈಗಲಾದರೂ ಆ ಹುಡುಗಿಯನ್ನು ಬದುಕಿಸ ಬಹುದೋ ಏನೋ ನೋಡೋಣ'' ಎಂದು ಹೇಳಿದನು.

ಆಗ ಮುಂಡಲನು ದಪ್ಪದಪ್ಪನಾದ ಮೂರು ನಾಲ್ಕು ದೊಣ್ಣೆಗಳನ್ನು ಹೊರಕ್ಕೆ ತೆಗೆದನು. ಒಬ್ಬೊಬ್ಬರೂ ಒಂದೊಂದು ದೊಣ್ಣೆ ಪಿಡಿದರು; ಎಲ್ಲರೂ ದೊಣ್ಣೆ ಎತ್ತಿಕೊಂಡರು; ಕೇವಲ ಹೀರಕುಲ

ಚೂಡಾಮಣಿಯಾದ ಹಾರಾಣಚಂದ್ರನು ಪಾತ್ರ ದೊಗ್ಗಿ ಪಿಡಿಯಲಿಲ್ಲ. ''ನಿಮ್ಮ ಪಾತ್ರಗಳಿಗೆ ಸುರುಳಾಗಿ ನಾನು ಪ್ರಾಣ ಕಳೆದುಕೊಳ್ಳಲಾರೆ. ಹೋಗುವುದಾದರೆ, ನೀವುಗಳು ಹೋಗಿ; ನಾನಾದರೋ ಪ್ರಾಣ ಏರುವವರೆಗೂ ಬರಲಾರೆ. ಭೂತಗಳು ಇಂತಹ ಅನೇಕ ತಂತ್ರಗಳನ್ನೂ ಬಲ್ಲುವು. ಈ ಉಪಾಯದಿಂದ ಸುರುಳುಮಾಡಿ ಒಂದು ಸಲ ಕಾಲ್ಚೆಯ ಕಡೆ ಕರೆದುಕೊಂಡು ಹೋದರೆ ತೀರಿತು. ಅನಂತರ ಅದರ ಜೀವಾಳವನ್ನು ಜೆನ್ನಾಗಿಯೂ ನೋಡಬಹುದು. ಅಲ್ಲವೇನಯ್ಯ ಹಲಧರ?'' ಎಂದು ಹೇಳಿದನು.

ಹಲಧರನು ''ಹೌದು'' ಅಥವಾ ''ಅಲ್ಲ'' ಎಂಬುದನ್ನೂ ಹೇಳಲಿಲ್ಲ.

ಹಾರಾಣಚಂದ್ರನು ಬಹುತೊಂದರೆಗೆ ಸಿಕ್ಕಿದನು. ಒಂದುಪೇಳೆ ಎಲ್ಲರೂ ಹೊರಟುಹೋದರೆ, ಹಾಗಾದರೆ ಆ ಸಮಯದಲ್ಲಿ ತಾನು ಅಲ್ಲಿ ಬಿಚ್ಚುಂಟಿಗನಾಗಿ ಇರಬೇಕಾಗುವುದು. ಅಲ್ಲದೆ ಅವರ ಸಂಗಡ ಹೋದರೆ ಉಂಟಾಗುವುದೆಂದು ಶಂಕಿಸಿರುವ ಉಪತ್ರವಾದರೂ ತಾವಾಸ್ಪದವಾದುದಲ್ಲ; ಆದಕಾರಣವೇ ಹಾರಾಣಚಂದ್ರನು ಹಲಧರನನ್ನು ತನ್ನಂತೆ ಮಾಡಿಕೊಳ್ಳಲು ಪ್ರಯತ್ನಿಸಿದನು. ಆತನ ಪ್ರಯತ್ನವು ಕೂಡ, ಬಗಲೇ ಯಾರಿಗೂ ತಿಳಿಯದ ಹಾಗೆ, ಸಫಲವಾಯಿತು. ಹಾರಾಣಚಂದ್ರನು, ಇತರರು ನೋಡದ ಹಾಗೆ, ಕಣ್ಣು ಮಿಟಿಕಿಸಿ, ಒಂದೆರಡು ಸಲ ಹಲಧರನ ಮೈ ಚಿವುಟಿ, ಸನ್ನೆ ಸಂಜ್ಞೆಗಳನ್ನು ಮಾಡಿ, ಹಲಧರನ ಮೈತುಂಬ ಮೂಢಾಳಿಯವನ್ನು ತುಂಬಿದನು. ಅದರಿಂದ ಹಲಧರನು ಅವರ ಸಂಗಡ ಹೊರಡಲು ಹೇಗೂ ಸಮ್ಮತಿಸದವನಾದನು. ಆಗ ಹಲಧರ ಮತ್ತು ಹಾರಾಣಚಂದ್ರರ ಏನಾ ಉಳಿದ ಸುರುಳುಮುಂಟು ಬಂದು ಲಾಂಡ್ರುವನ್ನು ಕೈಯ್ಯಲ್ಲಿ ತೂಗಾಡಿಸುತ್ತೆ ಹೊರಗೆ ಹೊರಟರು.

ಮೂರನೆಯ ಪರಿಚ್ಛೇದ

ಯದುನಾಥಗೋಸ್ವಾಮಿ

ಅಲಾಯಿಮುಂಡಲನು ಮೆತ್ತಿಬ್ಬರನ್ನು ಸಂಗಡ ಕರೆದುಕೊಂಡು ಆಶ್ಚರ್ಯಪಿತಳಾದ ಆ ಬಾಲಕಿಯನ್ನು ಹುಡುಕುತ್ತಾ ಹೊರಡುವ ಹೊತ್ತಿಗೆ ಅಕಾಶವು ಬಹು ಪರಿಷ್ಕಾರವಾಗಿತ್ತು; ಬೆರುಗಾಳಿಯು ವೇಗವು ಬಹಳ್ಬೀ ಕಡಿಮೆಯಾಗಿ ಹೋಗಿತ್ತು ಮತ್ತೂ ಮಳೆಹನಿಗಳು ಕೊಂಚವಾಗಿ ಪಾತ್ರ ಬೀಳುತ್ತಿದ್ದವು. ಗೋಸ್ವಾಮಿಪುರದ ಪಾರ್ಶ್ವ ನೆಂದು ಪಲಫರನು ಯಾವ ಕಾಲುದೆಯು ಹಾದಿಯನ್ನು ತೋರಿಸಿ ದ್ದನೋ ಅದೇ ದಾರಿಯನ್ನೇ ಹಿಡಿದು ಎಲ್ಲರೂ ನಕ್ಷತ್ರಾಲೋಕವಾಗಿ ಹೊರಟರು. ಸ್ವಲ್ಪಹೊತ್ತಿನೊಳಗಾಗಿಯೇ ಅವರು ಆ ಕಾಲುದೆಯ ದಾರಿಗೆ ಬಂದು ಸೇರಿದರು. ಅಲ್ಲಿ ಯಾರನ್ನೂ ಕಾಣಲಿಲ್ಲ; ಅಲ್ಲಿ ನಾಲ್ಕೂ ಕಡೆಯೂ ಅವರು ಹುಡುಕಲು ಅರಂಭಿಸಿದರು. ಪ್ರಾಯಃ ಅರ್ಧ ಗಂಟೆಯ ಹೊತ್ತು ಬಡುಬಲ್ಲದೆ ಕಷ್ಟಪಟ್ಟುದಕ್ಕೆ ಯಾವುದೊಂದು ಫಲವನ್ನು ಕಾಣದೆ ಹೋದರಾದರೂ ಯಾರೊಬ್ಬರೂ ಸುಮ್ಮನಾಗಲಿಲ್ಲ; ಅನ್ನೂ ಹುಡುಕುತ್ತಲೇ ಇದ್ದರು; ಸಾಧ್ಯವಾದರೆ ಆ ಬಾಲಕಿಯನ್ನು, ಅಲ್ಲವಾದರೆ ಅವಳ ಪ್ರೇತವನ್ನು—ಈ ಎರಡರಲ್ಲಿ ಒಂದನ್ನು ಅವರು ಹೇಗಾದರೂ ಸಾಟಿ, ಕಂಡುಪಿಡಿಯಬೇಕೆಂದು ನಿಶ್ಚಯಮಾಡಿ ಕೊಂಡರು.

ಈ ರೀತಿಯಲ್ಲಿ ಇನ್ನೂ ಅರ್ಧಗಂಟೆ ಕಳೆಯಿತು. ಕಾಲುದೆಯ ಇನ್ನೊಂದು ಪಾರ್ಶ್ವದಲ್ಲಿ ಯಾವನೋ ಒಬ್ಬನು ಜೋಗಜೋಗನೆ ಹೋಗು ತ್ತಿರುವುದನ್ನು ಅವರು ನೋಡಿದರು. ಆಗ ಎಲ್ಲರೂ ಸೇರಿ ಅತ್ತಕಡೆಗೆ ಓಡಿದರು. ಹತ್ತಿರಕ್ಕೆ ಹೋಗಿ ಲಾಂದ್ರದ ಬೆಳಕನ್ನು ಹಿಡಿದು ನೋಡಿ ದರು; ಆ ಮನುಷ್ಯನು ತನ್ನೆಲ್ಲರಿಗೆ ಪರಿಚಿತನಾದ ಯದುನಾಥ ಗೋಸ್ವಾಮಿ. ಆಗ ಅವರೆಲ್ಲರೂ ಅತನಿಗೆ ಒಂದೊಂದು ನಮಸ್ಕಾರ ಮಾಡಿ ಪತ್ತಿರದಲ್ಲಿ ನಿಂತುಕೊಂಡರು.

ಗೋಸ್ವಾಮಿ ಮಹಾಶಯನು ಅವರುಗಳ ಆ ರೀತಿಯನ್ನು ಕಂಡು ಏಸ್ಮಯಗೊಂಡು ''ಏನಯ್ಯಾ ಮುಂಡಲ, ಇಂತಹ ರಾತ್ರಿಯಲ್ಲಿ ದೊಣ್ಣೆಗಳನ್ನು ಹಿಡಿದು ಇಲ್ಲಿ ತಿರುಗುತ್ತಿದ್ದೀರಿ?'' ಎಂದು ಕೇಳಿದನು.

ಪಲಾಯಮುಂಡಲನು ಆಗ ಚತಸಿಗೆ ಬಂದೊಂದಾಗಿ ಎಲ್ಲ ಸಂಗತಿಗಳನ್ನೂ ಹೇಳಿದನು. ಅದನ್ನು ಕೇಳಿ ಗೋಸ್ವಾಮಿಯು ''ಹಾಗಾದರೆ ಸರಿಹೋಯಿತು. ನಾನೂ ಕೂಡ ಒರುವಕ್ಕಾ ದಾಳಿಯಲ್ಲಿ ಬಂದು ರಕ್ತದ ಕಲೆಯ ಬಟ್ಟೆ ಬದ್ದಿರುವುದನ್ನು ಕಂಡೆನು'' ಎಂದು ಉತ್ತರ ಹೇಳಿದನು.

ಆಗ ಪಲಾಯಮುಂಡಲನು, ''ನಮೋಪಾಟು, ಆ ಬಟ್ಟೆ ಎಲ್ಲಿ ಬಿದ್ದಿದ್ದಿತೋ ಅಲ್ಲಿಗೆ ನಮ್ಮನ್ನು ಕರೆದುಕೊಂಡು ನಡೆಯಿರಿ; ಆ ಬಟ್ಟೆಯನ್ನು ನೋಡಿದರೆ ನಾವು ಗುರ್ತಿಸಬಲ್ಲೆವು'' ಎಂದು ಹೇಳಿದನು.

ಮೊದುನಾಥಗೋಸ್ವಾಮಿಯು ಹೊರಡಲು ಒಂದೆರಡು ಸಲ ಒಪ್ಪಿಕೊಳ್ಳಲಿಲ್ಲ; ಕಡೆಗೆ ಪಲಾಯಮುಂಡಲನ ಪ್ರಬಲವಾದ ಒತ್ತಾಯದಿಂದ ಅವರ ಸಂಗಡ ಹೊರಡಲು ಒಪ್ಪಿಕೊಂಡನು.

* * * *

ಮೊದುನಾಥ ಗೋಸ್ವಾಮಿಯು ಪಲಾಯಮಂದ ಮತ್ತೂ ಚತಸ ಇಬ್ಬರು ಚತೆಗಾರರನ್ನೂ ಸಂಗಡ ಕರೆದುಕೊಂಡು ಹೊರಟನು. ಸ್ವಲ್ಪ ದೂರ ಬಂದು ಮೊದುನಾಥಗೋಸ್ವಾಮಿಯು ಎಲ್ಲರನ್ನೂ ಕರೆದುಕೊಂಡು ಹತ್ತಿರದಲ್ಲಿನ ಬಂದು ಅರಣ್ಯದೊಳಕ್ಕೆ ಪ್ರವೇಶಿಸಿದನು. ಅಲ್ಲಿಂದ ಬಹಳ ದೂರ ಹೋಗಲಿಲ್ಲ. ನಾಲಾಕ್ಕಾರು ಹೆಜ್ಜೆ ಮುಂದರಿಯುವುದರೊಳಗಾಗಿ ಅವರು ಚಾಂದ್ರದ ಬೆಳಕಿನಲ್ಲಿ ಆ ರಕ್ತದ ಕಲೆಯುಳ್ಳ ಬಟ್ಟೆಯನ್ನು ನೋಡಿದರು. ರಕ್ತದ ಕಲೆಯ ಬಟ್ಟೆಯೊಂದನ್ನೇ ಅಲ್ಲ, ಆ ಸ್ಥಳದಲ್ಲಿ ದೊಡ್ಡದಾದ ಬಂದು ಜೂಡಿ, ಬರಡು ಸೂರು ಬೆಳ್ಳಿಯ ಹೇರ್ ಪಿನ್ (Hair pin) ಗಳೂ ಬಿದ್ದಿರುವುದನ್ನು ಕಂಡರು.

ಪಲಾಯಮುಂಡಲನು ಆ ಬಟ್ಟೆಯನ್ನು ನೋಡಿದವನೇ ಅದು ಆಶ್ರಯರಹಿತಳಾದ ಆ ಬಾಲೆಯದು, ಎಂದು ಗುರ್ತಿಸಿದನು. ಯದು

ನಾಥಗೋಸ್ವಾಮಿಯೊಬ್ಬನ ಏನಾ ಉಳಿದವರೆಲ್ಲರೂ ಭಯದಿಂದ ನಡು ಗಿದರು. ಭಯಂಕರವಾದ ಕೊಲೆ ನಡೆದಿರುವುದಕ್ಕೆ ಸಾಕ್ಷಿಗಳಂತೆ ಬಿದ್ದಿರುವ ಆ ರಕ್ತದಕಲೆಯ ಬಟ್ಟೆ, ಚೂರಿ ಮುಂತಾದವುಗಳನ್ನು ಸ್ಪರ್ಶ ಮಾಡುವುದು ಹಾಗಿರಲಿ, ಹೆಚ್ಚು ಹೊತ್ತು ಅಲ್ಲಿ ನಿಂತಿರುವುದಕ್ಕೆ ಕೂಡ ಆಗದಹಾಗೆ ಕೈಕಾಲುಗಳು ಭಯದಿಂದ ನಡುಗತೊಡಗಿದುವು; ರಕ್ತದ ಸಂಗಡ ಯಾವಾಗಲೂ ಈ ಪಾದರಿಯ ಭಯವೊಂದು ಸೇರಿಯೇ ಇರುತ್ತದೆ. ಆಗ ಅವರ ಕೈಯೊಳಗಿನ ದೊಣ್ಣೆಗಳೂ ಕೈಯ್ಯ ಲಾಂದ್ರವೂ ಕೈಯ್ಯಲ್ಲಿಯೇ ಇದ್ದುವು, ಅವರು ಬಹಳ ಸಾಹಸದಿಂದ ಅಷ್ಟೂದೂರ ಮುಂದರಿದರೋ ಆ ಸಾಹಸವು ಮಾತ್ರ ಅವರ ಮನಸ್ಸಿನೊಳಗೇ ಇಂದು ಜಾಲಕನ ಕೈಯೊಳಗಿನ ಗೊಂಬೆಯಹಾಗೆ ಯಾರಿಗೂ ಕಾಣಿಸಿಕೊಳ್ಳದೆ ಎಲ್ಲಿಯೋ ಪಾಯವಾಗಿ ಹೋಯಿತು.

ಎಲ್ಲರೂ ಹಿಂದಿರುಗಿ ಬಂದರು.

ನಾಲ್ಕನೆಯ ಪರಿಚ್ಛೇದ

ಬಂದಿನೀ

ಹಗಲೇ ಜಿಲ್ಲೆಯಲ್ಲಿರುವ ಜೀವನಪಾಲನ ತೋಟದ ಪ್ರಾಪ್ತಿಯನ್ನು ಅನೇಕರು ಬಲ್ಲರು. ಒಂದಾನೊಂದು ಸಮಯದಲ್ಲಿ ದಸ್ಯುಗಳ ಭಯ ದಿಂದ ಹಗಲು ಹೊತ್ತಿನಲ್ಲಿ ಕೂಡ ಆ ಮಾರ್ಗವಾಗಿ ಯಾರೂ ಪ್ರಯಾಣಮಾಡುತ್ತಿರಲಿಲ್ಲ. ನಾವು ಯಾವ ಕಾಲದ ಕತೆಯನ್ನು ಹೇಳುತ್ತಿರುವೆವೋ ಆ ಕಾಲದಲ್ಲಿ ಅದು ಬಹು ದಟ್ಟವಾದ ಅರಣ್ಯವಾಗಿ ದ್ದಿತು. ಆಗ ಹಗಲು ಹೊತ್ತಿನಲ್ಲಿಯೂ ಅಲ್ಲಿ ದಸ್ಯುಗಳು ತಮ್ಮ ಅತ್ಯಾ ವ್ಯಾಪಾರಗಳನ್ನು ನಿರ್ಭಯವಾಗಿ ನೆರವೇರಿಸುತ್ತಿದ್ದರು.

ಜೀವನಪಾಲನ ತೋಟಕ್ಕೆ ಉತ್ತರ ಕಡೆ ಜೀರ್ಣವಾಗುತ್ತಿರುವ, ಹಳೆಯದಾದ, ಬಿದ್ದು ಹೋಗುವುದೋ ಎಂಬ ಹಾಗಿರುವ ಮುರುಕು ಮನೆಯೊಂದು ಇದ್ದಿತು. ಅದರ ಕೆಲವು ಭಾಗಗಳು ಒಟ್ಟಿಗೆ ಮುರಿದು

ಬಿದ್ದಿವೆ. ಇನ್ನು ಕೆಲವು ಭಾಗಗಳು ಬೀಳುವುದರಲ್ಲಿವೆ. ಭಾವಣೆಯು ಮೇಲ್ಭಾಗದಲ್ಲಿ ದೊಡ್ಡ ದೊಡ್ಡ ಆಲ, ಅತ್ತಿ, ಅಶ್ವತ್ಥಮರಗಳು ಪುತ್ರ ಪೌತ್ರ ಪರಿವಾರದಿಂದ ಪರಿವೃತವಾಗಿ ಆವರಿಸಿಕೊಂಡಿವೆ. ಆ ಮನೆಯು ಕೊಠಡಿಗಳೆಲ್ಲವೂ ಬಿದ್ದುಹೋದುವು, ಮಲಿನವಾದುವು, ಜಾಡಸ ವೊರೆಯಿಂದ ತುಂಬಿದುವು ಮತ್ತೂ ಮನುಷ್ಯ ಸಂಚಾರದ ಗುರುತು ಸಹ ಇಲ್ಲದುವು.

ನಿರ್ಜನವಾದ ಆ ಮುರುಕು ಮನೆಯಲ್ಲಿ, ಸಾಧ್ಯವಾದಮಟ್ಟಿಗೂ ಪರಿಷ್ಕಾರ ಮಾಡಿದ್ದ ಒಂದು ಕೊಠಡಿಯೊಳಗೆ, ಅನಿಂದಿತ ಗೌರಕಾಂತಿಯುಳ್ಳ ಸ್ನಿಗ್ಧಜ್ಯೋತಿರ್ಮಯರೂಪಿಣಿಯಾದ ಇನ್ನೂ ಬಾಲ್ಯದ ಎಲ್ಲೆಯಲ್ಲಿಯೇ ಇರುವ ಬಾಲಕಿಯೊಬ್ಬಳು ನೀರವಪ್ರಭಾವದಿಂದ ಕಣ್ಣೀರು ಕರೆಯುತ್ತಿದ್ದಾಳೆ. ಹಿಮದಲ್ಲಿ ತೊಯ್ದಿದ ಕಮಲದಂತೆ ಅವಳ ಮುಖವು ಕಣ್ಣೀರಿನಿಂದ ನನೆದು ತುಂಬ ಕಾಂತಿ ಕುಗ್ಗಿದೆ; ಲಾವಣ್ಯಮಯವಾದ ಅವಳ ಶರೀರವು ಕಷ್ಟಾಗಿ ಜೀರ್ಣವಾಗಿ ಹೋಗಿದೆ; ಕೇಶರಾಶಿ ಒರಟು, ಸೌಂದರ್ಯಲತೆಯಿಂದ ಕೆಡರಿ ಬಿದ್ದಿದೆ. ಬಾಲಕಿಯು ಮುಖ ತಗ್ಗಿಸಲಾಗಿ, ಒಂದೊಂದು ನಿಶ್ವಾಸವನ್ನೂ ಬಹು ಕಷ್ಟದಿಂದ ಒರಡು ಬಾರಿ ಮೂರು ಬಾರಿಯಾಗಿ ಸೇದಿಕೊಳ್ಳುತ್ತಿದ್ದಾಳೆ. ಬಾಲಕಿಯು ಪರಮಸುಂದರವಾದ ಆ ಮುಖವು ಪ್ರಕೃತದಲ್ಲಿ ಅತ್ತೂ ಅತ್ತೂ ಕಳೆಗುಂದಿರುವುದಾದರೂ ಅವಳ ಆ ಆಕರ್ಣಾಯತವಾದ, ಅರಳಿದ ತಾವರೆಯ ಹಾಗಿರುವ ಕಣ್ಣುಗಳೂ, ಹಾಗೆಯೇ ಆ ವಿಸ್ತಾರವಾದ ಕಣ್ಣುಗಳ ಸುಂದರವಾದ ಲೀಲಾಚಂಚಲ ದೃಷ್ಟಿಯೂ, ಆ ಮ್ಲಾನಮುಖದಲ್ಲಿ ಹಿಂದೆ ಯಾವಾಗಲೂ ಅನುಭವ ಮಾಡದಂತಹ ಸೌಂದರ್ಯವನ್ನು ಏಕಾಸನಗೊಳಿಸಿದ್ದುವು. ಆ ಕೊಠಡಿಯಲ್ಲಿ ಆ ಬಾಲಿಕೆ ಕುಳಿತಿದ್ದಳು, ಆ ಕೊಠಡಿಗೆ ಹೊರಗಡೆ ಬೀಗ ಹಾಕಿದ್ದಿತು. ಬಾಲಕಿಯು ಬಂದಿನೀ.

ಬಹುಕಾಲ ಅತ್ತೂ ಅತ್ತೂ ಹೃದಯದ ಆವೇಗವು ಕೊಂಚ ಕಡಮೆಯಾದನಂತರ ಬಾಲಿಕೆಯು ಪಶ್ಚಿಮ ಕಡೆಯ ಒಂದು ಕಿಡಕಿಯ ಬಳಿ ಬಂದು ನಿಂತುಕೊಂಡಳು. ಆ ಕಿಡಕಿಯಿಂದ ವಾಯು ಪ್ರವಾಹವು

ಪ್ರವೇಶಮಾಡಿ ಬರುತ್ತಾ ಸಿಕ್ಕು ಸಿಕ್ಕಾಗಿ ಒರಟಾಗಿರುವ ಬಾಲಕೆಯ ನೀಲಕುಂತಲವನ್ನು ಹಾರಿಸುತ್ತಾ ಒಂದೊಂದುಸಲ ಅದನ್ನು ಅವಳ ಮುಖದ ಮೇಲಕ್ಕೆ ತಂದು ಬಿಡುವುದು; ಪುನಃ ಹಾರಿಸಿ ಸುತ್ತಿಸಿ ಸುತ್ತಿಸಿ ಪುನಃ ಏಷಾದ ಮೇಘವು ಮುಸುಕಿ ಮಲಿನವಾಗಿರುವ, ಕಣ್ಣೀರಿನಿಂದ ತೊಯಿದು ಬಣ್ಣಗೆಟ್ಟಿರುವ ಆ ಮುಖವನ್ನೇ ಮತ್ತೆ ಮುಸುರುವಂತೆ ಮಾಡುವುದು. ಇಷ್ಟು ಸುಂದರವಾದ ಮುಖ! ಹೀಗೆ ಮ್ಲಾನವಾಗಿರುವುದೆ? ಇದನ್ನು ಯಾರಿಗೂ ಗೋಚರವಾಗದ ಹಾಗೆ ಮರೆಮಾಡಿಡುವುದೇ ಉತ್ತಮ–ಎಂಬುವುದೇ ವಾಯುವಿನ ಉದ್ದೇಶ್ಯ ವಿರಬಹುದೆಂದು ಕಾಣುತ್ತಿದ್ದಿತು; ವಾಯುವಿನ ಉದ್ದೇಶ್ಯವು ಯಾವುದಾದರೂ ಆಗಲಿ, ಅದರಿಂದ ಬಾಲಕೆಯು ತುಂಬ ಬೇಸರಪಡುತ್ತಿದ್ದಳು.

ಬಾಲಕೆಯು ನಟ್ಟನೋಟದಿಂದ ನೋಡುತ್ತಿದ್ದಳು. ಸ್ವಿಗೊಧ್ವೀಜ್ವಲವಾಗಿ ಕೆಂಬಣ್ಣಕ್ಕೆ ತಿರುಗಿರುವ ನೀಲಪಾಮಯವಾದ ಸಂಧ್ಯಾಗಗನದಲ್ಲಿ ಕೆಂಪಾಗಿರುವ ಸೂರ್ಯನು ಕ್ರಮ ಕ್ರಮವಾಗಿ, ಮೆಲ್ಲ ಮೆಲ್ಲಗೆ ಮುಳುಗುತ್ತಿದ್ದುದು ಅವಳ ದೃಷ್ಟಿವಿಷಯವಾಗಿದ್ದಿತು; ಇಷ್ಟೇ ಅಲ್ಲ, ಇನ್ನೂ ಸ್ವಲ್ಪ ದೂರದಲ್ಲಿ, ಸಂಧ್ಯಾಸಮಯದ ಪ್ರೇಮಕಿರಣದಿಂದ ತುಂಬಿರುವ ದಿಕ್ಚಕ್ರವಾಳ ಆಕಾಶದಲ್ಲಿ, ಮಧುರವಾಗಿಯೂ ಮನೋಹರವಾಗಿಯೂ ಇರುವ ಆ ದೃಶ್ಯವನ್ನು, ಸಿಬಿಡವಾದ ಮೇಘಮಾಲೆಯು ವ್ಯಾಪಿಸಿ, ಕ್ರಮ ಕ್ರಮವಾಗಿ, ದಟ್ಟವಾಗಿ ಹಬ್ಬಿ, ಅದೊಂದು ಭಯಂಕರ ರೂಪದಿಂದ ನಾಲ್ಕು ಕಡೆಯೂ ಹರಡಿಕೊಳ್ಳುತ್ತಿದ್ದಿತು. ಬಾಲಕೆಯು ಇವೆಲ್ಲವನ್ನೂ ಎವೆಯಿಕ್ಕದೆ ನೋಡುತ್ತಿದ್ದಳು. ಸಖೂಪದಲ್ಲಿ ಆಗ ತಾನೇ ಅರಳುತ್ತಿರುವ ಬಗೆ ಬಗೆಯ ವನಕುಸುಮಗಳ ಮಧುರವಾದ ಪರಿಮಳಗಳು ಒಂದಾಗಿ ಸೇರಿ ಮತ್ತಷ್ಟು ಮಧುರವಾಗಿರಲು, ಬೇಸಗೆಯ ಸಂಧ್ಯಾಕಾಲದ ಮಂದಮಾರುತನು ಆ ಆಮೋದವನ್ನು ಹೊತ್ತು ತಂದು, ಅಳುತ್ತಲಿರುವ, ಧೂಳಿನಿಂದ ಬಣ್ಣಗೆಟ್ಟಿರುವ, ಕಣ್ಣೀರು ಸುರಿಯಿಸುತ್ತಿರುವ, ತನಗುಂಟಾದ ವಿಪತ್ತನ್ನು ಕಂಡು ಭೀತಳಾಗಿರುವ ಬಾಲಕೆಯು, ಶಿಲಾನಿರ್ಮಿತವಾದ ದುಃಖಮಯಪ್ರತಿಮೆಯ ಹಾಗೆ,

ಮುಖವನ್ನು ಸ್ವಲ್ಪ ಪಾತ್ರ ಎತ್ತಿಕೊಂಡು ನೀರವಭಾವದಿಂದ ಬಲ್ಲೆ ನಿಂತಿದ್ದಳೋ ಅಲ್ಲಿ, ಆ ಅಪರೂಪ ರೂಪಶಾಲಿನಿಯಾದ ಕಿಶೋರಿಯ ನಾಲ್ಕೂ ಕಡೆಗಳಲ್ಲಿ, ಅಮೂಲ್ಯವಾದ ಉಪಹಾರದಂತೆ ತುಂಬು ತ್ತಿದ್ದನು. ದೂರದಲ್ಲಿನ ವನಾಂತರದಿಂದ ಮಧುರಸ್ವರವುಳ್ಳ ಹಕ್ಕಿಗಳ ಅಮೃತ ಧಾರೆಗರೆಯುವ ಕಲಕಂಠ ಗೀತವು ಆ ಬಾಲಕಿಗೆ ಸಖಾಪ ವಾಗಿರುವ ಬಲ್ಲ ಕಡೆಗಳನ್ನೂ ಮುಖರಿತವನ್ನಾಗಿ ಮಾಡುತ್ತಿದ್ದಿತು. ಬಾಲಕಿಯು ಇದಾವುದನ್ನೂ ಗಮನಿಸಿರಲಿಲ್ಲ. ಬಾಲಕಿಯು ಆ ಸ್ಥಳ ದಲ್ಲಿ, ಹಾಗೆಯೇ ನಿಶ್ಚಲಭಾವದಿಂದ, ಶಿಲಾಪ್ರತಿಮೆಯು ಹಾಗೆ, ಬಹಳ ಹೊತ್ತಿನಿಂದಲೂ ನಿಂತುಕೊಂಡೇ ಇದ್ದಾಳೆ.

ಶಾಂತವಾಗಿರುವ ಮನಸ್ಸಿನಲ್ಲಿ ಧೂಸರಮನಸೆಯಾದ ಸಂಧ್ಯೆಯು ಅಂಧಕಾರವು ಸ್ವಲ್ಪಸ್ವಲ್ಪವಾಗಿ ಪುಷ್ಟಿಗೊಳ್ಳುತ್ತಿದ್ದಿತು. ಹಾಗೆಯೇ ಆ ಸಂಧ್ಯಾಕಾಲದ ಅಲ್ಪಸ್ವಲ್ಪವಾದ ಅಂಧಕಾರದಿಂದಲೂ, ಪಶ್ಚಿಮ ಗಗನದಲ್ಲಿ ನಿಬಿಡವಾಗಿರುವ ಮೋಘದ ಕೃಷ್ಣಚ್ಛಾಯೆಯಿಂದಲೂ, ಸಂಧ್ಯಾಸಮಯದ ಅಸ್ಪುಟವಾದ ಬೆಳಕು ಕಳೆಕುಗ್ಗಿ ಮಲಿನವಾಗುತ್ತ ಬಂದಿತು; ಆಗ, ಬಾಲಕಿಯು ಉದಾಸೀನವಾಗಿದ್ದ ದೃಷ್ಟಿಯು ಚಾಂಚಲ್ಯ ಗೊಂಡು ಪ್ರಕೃತಿಯ ಅಪೂರ್ವವಾದ ಆ ಪರಿವರ್ತನೆಯು ಪಾರಂಪರ್ಯ ದಿಂದ ಬಸ್ಮಾಯದ ಕಡೆಗೆ ತಿರುಗತೊಡಗಿತು; ಸಖಾಪವಾದ ಸಂಧ್ಯಾ ಕಾಲದ ಅಸ್ಪಷ್ಟವಾದ ಬೆಳಕಿನಲ್ಲಿ ಹತಾತ್ತಾಗಿ ಮನಸ್ಸೋ ಸೋತು ಬಾಲ ಕಿಯು ನಡುಗಿದಳು, ಅವಳ ಮುಖವು ಕಂಗೆಟ್ಟಿತು, ಸಿಟಿಲು ಸೋಂಕಿದ ವಳಂತೆ ಅವಳು ಅಲ್ಲಿಂದ ಸರಿದು ಆ ಕೊಠಡಿಯ ಒಂದು ಮೂಲೆಗೆ ಹೋಗಿ ನಿಂತುಕೊಂಡಳು; ನಿಂತುಕೊಂಡಿದ್ದ ಹಾಗೆಯೇ ಬಾಲಕಿಯು ನಡುಗುವುದಕ್ಕೂ ಉಪಕ್ರಮಿಸಿದಳು.

ಐದನೆಯ ಪರಿಚ್ಛೇದ

ಮರ್ಮಾಹತಳು

ಕೊಂಚ ಹೊತ್ತಿನೊಳಗಾಗಿಯೇ ಹಾಕಿದ್ದ ಬಾಗಿಲನ್ನು ತೆರೆದು ಕೊಂಡು ಒಬ್ಬ ವ್ಯಕ್ತಿಯು ಆ ಕೊಠಡಿಯೊಳಕ್ಕೆ ಪ್ರವೇಶವಾಡಿದನು. ಹುಡುಗಿಯು ಮಲಗಿಕೊಳ್ಳುವುದಕ್ಕೋಸ್ಕರವಾಗಿ, ಒಂದು ಮೂಲೆಯಲ್ಲಿ, ಒಂದು ಹಾಸುಗೆ ಇತ್ತು. ವ್ಯಕ್ತಿಯು ಅದರ ಸೋಲಿ ಕುಳಿತು ಕೊಂಡನು. ಬಾಲಕಿಯು ಆ ಹಾಸುಗೆಯ ಪಕ್ಕದಲ್ಲಿ ನಿಂತಿದ್ದಳು. ಅವನು ಸಮಾಪಕ್ಕೆ ಬಂದುದನ್ನು ಕಂಡು ಮತ್ತೊಂದು ಕಡೆಗೆ ನಡೆದು ನಿಂತುಕೊಂಡಳು.

ಆ ಅಗಂತುಕನ ವಯಸ್ಸನ್ನು ನಾಲ್ವತ್ತೈದು ವರ್ಷಕ್ಕೆ ಕಡಿಮೆಯಿಲ್ಲ; ಅದರೆ ಅವನನ್ನು ನೋಡಿದರೆ ಮೂವತ್ತೈದು ವರ್ಷಕ್ಕೆ ಮಿಗಿಲಾದವನೆಂದು ತೋರುವುದಿಲ್ಲ. ಅವನ ಶರೀರವು ಬಲಿಷ್ಠವಾದದ್ದು, ಕೈಕಾಲುಗಳು ಪ್ರಮಾಣಪೂರ್ಣವಾಗಿ ಉದ್ದುದ್ದುಪ್ಪ, ಎದೆಯು ವಿಸ್ತಾರವಾಗಿಯೂ ಭುಸ್ತಾರವಾಗಿಯೂ ಬಿದ್ದಿತಲ್ಲದೆ ಸಂಪೂರ್ಣವಾದ ಆರೋಗ್ಯವನ್ನೂ ಅಸಮವಾದ ಶಕ್ತಿಯನ್ನೂ ಸೂಚಿಸುವಂತಿದ್ದಿತು; ಮುಖದ ಆಕಾರವು ಕೆಟ್ಟುದೇನೂ ಅಲ್ಲ; ಮತ್ತೂ ಯೌವನದ ಆರಂಭದಲ್ಲಿ ಈ ಮುಖವು ನೋಡುವರಿಗೆ ಸುಂದರವಾಗಿಯೇ ಇದ್ದಿರಬೇಕೆಂದು ಊಹಿಸುವುದಕ್ಕೆ ಈಗಲೂ ಅವಕಾಶವಿರುತ್ತದೆ; ಶರೀರದ ಕಾಂತಿಯು ಗೌರವರ್ಣ.

ಅಗಂತುಕನು ಬಾಲಕಿಯನ್ನು ಸಂಬೋಧಿಸಿ,—"ರೇವತಿ, ಇನ್ನೆಷ್ಟು ದಿನ ಈ ಯಾತನೆಯನ್ನು ಸೈರಿಸುವೆ? ಇನ್ನು ನನ್ನ ಮಾತಿಗೆ ಅಸಮ್ಮತಿಸಲಾಗಬೇಡ. ನಿನಗೋಸ್ಕರವಾಗಿ ನಾನು ಇಷ್ಟು ಮಟ್ಟಿಗೆ ಮೋಹಿತನಾಗಿರುವುದನ್ನು ನೋಡಿಯೂ ಕೂಡ, ನಿನಗೆ ಕೊಂಚವಾದರೂ ದಯೆಯುಂಟಾಗಲಿಲ್ಲವೆ?" ಎಂದನು.

ರೇವತಿಯು ಮಾತನಾಡಲಿಲ್ಲ.

ಆಗಂತುಕನು ಪುನಃ ಹೇಳಿದನು—"ರೇವತಿ ಮಾತನಾಡು, ಇಷ್ಟುದೂರ ಬಂದು ನಿನ್ನದೊಂದು ಪ್ರಿಯವಚನವನ್ನು ಕೇಳುವ ಅದೃಷ್ಟವೂ ನನಗಿಲ್ಲವೆ?"

ರೇವತಿಯು ಮೃದುಸ್ವರದಿಂದ—"ನಾನು ಈಗಲೂ ಹೇಳುತ್ತೇನೆ, ಈ ಜೀವಪರ್ಯಂತವೆಲ್ಲ ನಾನು ಎಂದಿಗೂ ನಿನ್ನ ಪ್ರಸ್ತಾವಕ್ಕೆ ಸಮ್ಮತಿಸಲಾರೆ. ನಿನ್ನನ್ನು ಮದುವೆಯಾಗಿ, ನೂರಾರು ಮಂದಿ ದಾಸದಾಸಿಯರಿಂದ ಪರಿವೃತಳಾಗಿ, ಅಪರಿಮಿತವಾದ ಐಶ್ವರ್ಯವನ್ನು ಅನುಭವಿಸುವುದಕ್ಕಿಂತಲೂ ಈ ಕಾಡು ಮನೆಯಲ್ಲಿ ಎಂದೆಂದೂ ಬಂದಿನಿಯಾಗಿ ವ್ಯಥೆಪಡುವುದೇ ಪ್ರಕೃತದಲ್ಲಿ ನನಗೆ ಮಹಾಸುಖವಾಗಿದೆ" ಎಂದಳು.

ಆಗಂತುಕನು ಕೊಂಚಹೊತ್ತು ಸುಮ್ಮನಿದ್ದು ಏನನ್ನೊ ಭಾವಿಸಿಕೊಂಡು, ದೀರ್ಘಶ್ವಾಸವನ್ನು ಬಿಟ್ಟು, "ಹಾಗಾದರೆ ಈ ಅನಂತ ಸೌಖ್ಯವನ್ನೇ ಅನುಭವಿಸುತ್ತಾ ನಿನ್ನ ಜೀವಮಾನವನ್ನೆಲ್ಲಾ ಇಲ್ಲಿಯೇ ಮುಗಿಯಿಸು; ಆದರೆ, ಇದೊಂದು ಮಾತು ಚೆನ್ನಾಗಿ ಜ್ಞಾಪಕಪರಲಿ; ನನ್ನ ಮಾತು ಕೇಳದಿರುವೆಯಾದರೆ ಏತರಿಂದಲೂ ನಿನಗೆ ಒಡುಗಡೆಯಿಲ್ಲ. ನೀನು ಇಷ್ಟು ಕಠಿಣಳೇ, ನಾನೂ ಕೂಡ ಕಠಿಣಹೃದಯದಿಂದ ನಿನ್ನ ವಿಷಯದಲ್ಲಿ ಇದೇರೀತಿ ಕಠಿಣತಮವಾದ ಕಾರ್ಯಗಳನ್ನೇ ಕ್ರಮ ಕ್ರಮವಾಗಿ ಮಾಡುತ್ತೇನೆ. ರೇವತಿ! ನಾನು ನಡೆದಷ್ಟು ದಿನವೂ ನಿನ್ನಲ್ಲಿ ಏನೀತಭಾವದಿಂದ ಇರತಕ್ಕವನಲ್ಲ. ಹೀಗೆಯೇ ನಿನ್ನ ಅನುಗ್ರಹವನ್ನು ಪ್ರಾರ್ಥಿಸುತ್ತಾ ಇರಲಾರೆ. ಯಾವ ರೀತಿಯಿಂದಲಾದರೂ ಸರಿ, ನಾನು ನನ್ನ ಕಾರ್ಯವನ್ನು ಸಾಧಿಸಿಯೇ ಸಾಧಿಸುತ್ತೇನೆ. ಈಗ ನನ್ನ ಧರ್ಮಪತ್ನಿಯಾಗಿ ಎಂತಹ ಸುಖಗಳನ್ನು ಅನುಭವಿಸುವುದಕ್ಕೆ ನೀನು ಇಚ್ಛೆಪಡುವುದಿಲ್ಲವೋ, ಅಂಥವುಗಳಿಗಾಗಿ ಅನಂತರ ನನ್ನ ಉಪಪತ್ನಿಯಾಗಿರಲು ನೀನು ನೀನಾಗಿಯೇ ಅಪೇಕ್ಷಿಸುವೆ. ನೀನು ಎಂದಿನವರೆಗೆ ಆ ಅಲ್ಪ ಜೀವಿಯಾದ ದೇವೇಂದ್ರನನ್ನು ಮರೆಯಲಾರೆಯೋ ಅಂದಿನವರೆಗೆ ನನ್ನ ಪ್ರಸ್ತಾಪಕ್ಕೆ ಸಮ್ಮತಿಸಲಾರೆಯೆಂದು ಕಾಣುತ್ತದೆ; ಒಳ್ಳೆಯದು, ಇದಷ್ಟು ಬೇಗ ಅವನ ತಲೆಯು, ಇಲ್ಲಿಯೇ, ನಿನ್ನ ಪದತಲದಲ್ಲಿ ಉರುಳುವುದನ್ನು ನೀನೇ ನೋಡುವೆ" ಎಂದು ಹೇಳಿದನು.

ಹೀಗೆಂದು ಹೇಳಿ ಆಗಂತುಕನು ಹುಬ್ಬು ಗಂಟುಹಾಕಿಕೊಂಡು ಸರಳಚಿತ್ತಳಾದ ಆ ಬಾಲಕೆಯನ್ನು ನೋಡಿದನು; ಬಾಲಕೆಯು ಏನೋ ಹೇಳಬೇಕೆಂದಿದ್ದವಳು ಆವನ ಆ ನೋಟವನ್ನು ನೋಡಿ ಭಯಪಟ್ಟು ಹೇಳಲಾರದೇ ಹೋದಳು. ಅವಳಿಗೆ ಗಂಟಲು ಕಟ್ಟಿತು. ಅವಳ ಒಂದೊಂದು ನರಗಳಲ್ಲಿಯೂ ಹರಿದೋಡುವ ರಕ್ತಪ್ರವಾಹವು ಏಂಚಿನ ವೇಗದಿಂದ ಹರಿದು ಹೃತ್ಪಿಂಡವನ್ನು ತುಂಬುವಂತೆ ತೋರಿತು. ಬಾಲಕೆಯು ಅತ್ತುಬಿಟ್ಟಳು—ಕಾಂತಿರಹಿತವಾದ ಅವಳ ಕಣ್ಣುಗಳಿಂದ ಕಣ್ಣೀರು ದರದರನೆ ಧಾರೆಯಾಗಿ ಹರಿಯಿತು.

ಭೀತಿಏಹ್ವಲಳಾದ ರೇವತಿಯು ಆಗಂತುಕನಿಗೆ ಇದಿರಾಗಿ ಒಂದು, ಮುಂಡಿಯೂರಿ ಕುಳಿತು, ಗಾಳಿಯಿಂದ ಕಿತ್ತುಬಿದ್ದ ವಾಸಂತೀ ಲತೆಯಹಾಗೆ ನೆಲಕ್ಕೆ ಉರಳಿದಳು; ಹಾಗೆಯೇ ಳಳುತ್ತಾ ಗದ್ಗದ ಕಂಠದಿಂದ, "ಕೇಶವಜಾಬೂ, ನಾನು ತಂದೆತಾಯಿಯಿಲ್ಲದವಳು, ಪತಿ ಭಾಗ್ಯನೀ. ನನ್ನ ಮುಖವನ್ನು ನೋಡಿಯೂ ನನ್ನ ಈ ಯಾತನೆಯನ್ನು ನೋಡಿಯೂ ನಿನಗೆ ಕೊಂಚವಾದರೂ ವ್ಯಥೆಯುಂಟಾಗುವುದಿಲ್ಲವೆ? ಕರುಣೆಯುಂಟಾಗುವುದಿಲ್ಲವೆ? ನಮ್ಮ ಚಿಕ್ಕಪ್ಪನಿಗೂ ನಿನಗೂ ಅದೆಷ್ಟು ಪ್ರೀತಿ. ಚಿಕ್ಕಪ್ಪನು ನಿನ್ನನ್ನು ಎಷ್ಟೋ ಪ್ರೀತಿಸುತ್ತಾನೆ. ನಾನು ಅವನ ಅಣ್ಣನ ಮಗಳು. ಹೀಗಿದ್ದರೂ ಕೂಡ ಯಾವ ಉದ್ದೇಶದಿಂದ ನನ್ನನ್ನು ಈ ಸ್ಥಳದಲ್ಲಿ ನಿರ್ಬಂಧಿಸಿ ಹೀಗೆ ಸಹಿಸಲಾಗದ ಯಾತನೆಗಳನ್ನು ಉಂಟುಮಾಡುತ್ತಿರುವೆ? ನೀನು ಸುಮಾರು ಒಂದು ವರ್ಷದಿಂದಲೂ ನಮ್ಮ ಚಿಕ್ಕಪ್ಪನನ್ನು ನೋಡುವ ನೆಲುವಾಗಿ ನಿತ್ಯವೂ ನಮ್ಮ ಮನೆಗೆ ಬರುತ್ತಲಿದ್ದೆ; ನನ್ನನ್ನೂ ನನ್ನ ತಂಗಿಯನ್ನೂ ನೀನು ಎಷ್ಟೋ ಪ್ರೀತಿಯಿಂದ ಕಾಣುತ್ತಿದ್ದೆ; ನಮ್ಮಲ್ಲಿ ಎಷ್ಟೋ ವಿಶ್ವಾಸದಿಂದಿದ್ದೆ; ಆದರೆ ಅಂದಿನ ಪ್ರೀತಿಯಲ್ಲಿ ಇಂತಹ ದುರುದ್ದೇಶಗಳು ಯಾವುವೂ ಇರಲಿಲ್ಲ. ನಮ್ಮ ಚಿಕ್ಕಪ್ಪನು ನಮ್ಮನ್ನು ಹೇಗೆ ಪ್ರೀತಿಯಿಂದ ಕಾಣುತ್ತಿದ್ದನೋ ಹಾಗೆಯೇ ನೀನೂ ನಮ್ಮನ್ನು ಪ್ರೀತಿಯಿಂದ ಕಾಣುತ್ತಿದ್ದೆ. ಆಗ ನಿನ್ನ ಕಣ್ಣುಗಳಲ್ಲಿ ಈ ದುರುದ್ದೇಶದ

ಚಿಹ್ನೆಯು ಬಂದು ದಿನವಾದರೂ ಕಂಡುಬರಲಿಲ್ಲ. ನಾನು ನಿನ್ನನ್ನು ಕಂಡರೆ ತಂದೆಯನ್ನು ಕಂಡಹಾಗೆ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದೆನು; ಆ ನನ್ನ ಭಕ್ತಿಗೆ ಪ್ರತಿಯಾಗಿ ನಿನ್ನಿಂದ ಎಂತಹ ಪ್ರೀತಿಯನ್ನು ನಿರೀಕ್ಷಿಸುತ್ತಿದ್ದೆನೋ ಅಂತಹುದನ್ನು ಕೊಡದೆ ನೀನು ನನ್ನಲ್ಲಿ ಹೇಯವಾದ ಈ ಪ್ರಸ್ತಾಪ ಮಾಡಬಹುದೆ? ಕೇಶವಬಾಬೂ, ನನ್ನನ್ನು ಬಿಟ್ಟುಬಿಡು, ನನ್ನನ್ನು ನಮ್ಮ ಮನೆಗೆ ಕಳುಹಿಸಿಕೊಡು; ನಾನು ನನ್ನ ಪ್ರಾಣ ಹೋಗುವುದಾದರೂ ಈ ನಿನ್ನ ಸಮಾಚಾರಗಳಿಂದನ್ನೂ ಬಹಿರಂಗಪಡಿಸುವುದಿಲ್ಲ. ನನಗಾಗಿ ಈಗ ಅಲ್ಲ ಆದೆಷ್ಟು ಹಾಹಾಕಾರವುಂಟಾಗಿದೆಯೋ ನಾನು ಬೇರೆ ಕಾಣೆ'' ಎಂದು ಹೇಳಿದಳು.

ಆರನೆಯ ಪರಿಚ್ಛೇದ

ಬಿಡುಗಡೆ

ರೇವತಿಯ ಆ ಪರಿತಾಪಕರವಾದ ಕಾತರೋಕ್ತಿಗಳಿಗೆ ದುರಾಲೋಚನೆಯುಳ್ಳ ಪಾಪಿಷ್ಠ ಕೇಶವಚಂದ್ರನು ಕಿವಿಗೊಡಲಿಲ್ಲ; ಅದಕ್ಕೆ ಬದಲಾಗಿ ತನ್ನ ಅಭೀಷ್ಟಸಿದ್ಧಿಗಾಗಿ ಪ್ರಯತ್ನಮಾಡುತ್ತಲೇ ಇದ್ದನು. ಮೊದಲು ಕಣ್ಣೀರಿನಿಂದ ತೊಯ್ದಿದ ಬಾಲಕೆಯ ಕಣ್ಣುಗಳೆರಡನ್ನೂ ಒರಸಿದನು, ಅನಂತರ ಅವಳನ್ನು ಬಳೆದುಕೊಂಡು ತನ್ನ ಬದೆಯಮೇಲೆ ಹಾಕಿಕೊಳ್ಳಲು ಪ್ರಯತ್ನ ಮಾಡಿದನು.

ಆಗ, ಕೆದರಿದ ಕೇಶಪಾಶವುಳ್ಳ ರೇವತಿಯು, ಹೆಣ್ಣುಸಿಂಹದಹಾಗೆ, ಆತ್ಮ ಬಲದಿಂದ ಎದ್ದು ದೂರ ನಿಂತಳು. ಹಿಮುಡಲ್ಲಿ ತೊಯ್ದಿದ ಕಮಲದ ಹಾಗೆ ಕಂದಿಹೋಗಿರುವ ಅವಳ ಮುಖವು ಕೋಪದಿಂದ ಕೆಂಪೇರಿ ಹೋಗಿ, ಅನ್ನೊಂದು ಬಗೆಯಾದ ಅಪರೂಪ ಕಾಂತಿಯನ್ನು ಧಾರಣ ಮಾಡಿತು. ಹೆಡೆಯಮೇಲೆ ಕಾಲಿಟ್ಟ ಸರ್ಪದ ಹಾಗೆ ಬಾಲಕೆಯು ರೇಗಿ ರೇಗಿ, ಕೋಪ ಕರ್ಕಶ ಕಂಠದಿಂದ, ''ಪಿಶಾಚ, ನಿನ್ನನ್ನು ಸುಡು! ನಿನ್ನ ಮುಖವನ್ನು ನೋಡುವುದರಿಂದಲೂ ಪಾಪವುಂಟು; ಇಲ್ಲಿಂದ

ಈಗಲೇ ತೊಲಗು ಹೋಗು. ಏನೇನು ಮಾಡಬೇಕೆಂದಿರುವೆಯೋ ಅವೆಲ್ಲವನ್ನೂ ಮಾಡು. ಎಂತಹ ಯಾತನೆಗಳನ್ನು ಉಂಟುಮಾಡ ಬೇಕೆಂದಿರುವೆಯೋ ಮಾಡು. ಇನ್ನು ಮುಂದೆ ನಾನು ನಿನಗೆ ಭಯ ಪಡುವುದಿಲ್ಲ. ನಿನ್ನಂತಹ ಪಾಪಿಯಲ್ಲಿ ದಯಾಭಿಕ್ಷೆ ಬೇಡುವುದಕ್ಕಿಂತ ಸಾವಿರಾರು ಬಗೆಯ ನರಕ ಬಾಧೆಗಳನ್ನುಂಟುಮಾಡಬಹುದಾದ ಮರಣವೇ ಮೇಲು'' ಎಂದು ಗದ್ಗರಿಸಿದಳು.

ಕೋಪವೇರಿದ ರೇವತಿಯ ಪ್ರಕಾಶಮಾನವಾದ ಕಣ್ಣುಗಳಿಂದ ಬೆಂಕಿಯೂ ಕಿಡಿಗಳೇ ಹೊರಹೊಮ್ಮುವಂತೆ ತೋರಿತು; ನಾಸಾರಂಧ್ರ ಗಳಿಂದಲೂ ಮತ್ತು ಬಾಯಿಯಿಂದಲೂ ನಿಶ್ವಾಸೋಚ್ಛ್ವಾಸಗಳು ಬೇಗ ಬೇಗ ಹೋಗಿ ಬರುತ್ತಿದ್ದುವು. ಹಾಗೆಯೇ ಆ ನಿಶ್ವಾಸೋಚ್ಛ್ವಾಸಗಳಿಂದ ಬಾಲಕೆಯ ಪಕ್ಷಸ್ಥಲವು ಬೇಗ ಬೇಗನೆ ಉಬ್ಬುತ್ತಲೂ ಇಳಿಯುತ್ತಲೂ ಕಂಪಿಸುತ್ತಲೂ ಇದ್ದಿತು.

ಬಾಲಕೆಯ ಆ ಭಾವವನ್ನು ಕಂಡು ಕೇಶವಚಂದ್ರನು ಕೊಂಚ ಮಟ್ಟಿಗೆ ವಿಸ್ಮಿತನಾದನು, ಕೊಂಚ ಮಟ್ಟಿಗೆ ಸ್ತಂಭಿತನಾದನು, ಸ್ವಲ್ಪ ಮಟ್ಟಿಗೆ ಭೀತನೂ ಆದನು. ಹಾಗಿದ್ದರೂ ಆ ಪಾಪಿಯು ತನ್ನ ಸಂಕಲ್ಪ ವನ್ನು ಬಿಡದೆ ರೂಪವತಿಯಾದ ಬಾಲಕೆಯ ಕಡೆಗೆ ಮುತ್ತಿ ಮುಂದರಿ ದನು. ಚೇಟಿಗಾರನು ಪೆನ್ನಟ್ಟಿಬಂದ ಜಿಂಕೆಯು ಪರಿಯಹಾಗೆ ಬಾಲಕೆಯು ಓಡಿ ಹೊರಕ್ಕೆ ಬಂದು ಬಿಟ್ಟಳು. ಕೇಶವಚಂದ್ರನೂ ಕೂಡ ಆ ಹುಡುಗಿಯನ್ನು ಹಿಡಿದುಕೊಳ್ಳುವುದಕ್ಕೋಸ್ಕರ ಹೊರಕ್ಕೆ ಬರು ತ್ತಿದ್ದನು. ಹೊರಗಡೆ, ಬಾಗಿಲ ಪಕ್ಕದಲ್ಲಿಯೇ, ಒಬ್ಬ ಹೆಂಗಸು ನಿಂತು ಕೊಂಡಿದ್ದಳು. ಕೇಶವಚಂದ್ರನು ಹೊರಕ್ಕೆ ಬಂದಕೂಡಲೇ, ಆ ಹೆಂಗಸು ಅವನಿಗೆ ಬಲವಾದ ಒಂದು ಪೆಟ್ಟುಕೊಟ್ಟಳು; ಅದರಿಂದ ಅವನು ಬೀಳಲಿಲ್ಲವಾದರೂ ಹತ್ತು ಹೆಜ್ಜೆ ಹಿಂದಕ್ಕೆ ಸರಿದು ನಿಂತನು. ಆ ಹೆಂಗ ಸನ್ನು ಕಂಡು ಅರಗಳಿಗೆಯತನಕ ಏನವಾಡಬೇಕೆಂಬುದನ್ನೇ ಅರಿಯ ದವನಾಗಿ ಇದ್ದಲ್ಲಿಯೇ ಅವನು ನಿಂದಿರಬೇಕಾಯಿತು. ಆ ಅರಗಳಿಗೆ ಯೊಳಗಾಗಿ ಹೆಂಗಸು ತನ್ನೆರಡು ಕೈಗಳಿಂದಲೂ ಅತುರದಿಂದ ಬಾಗಿ

ಲನ್ನೆಳದು, ಹೊರಗಡೆಯಿಂದ ಚಿಲುಕಹಾಕಿಬಿಟ್ಟಳು. ಆದಾದನಂತರ ರೇವತಿಯು ಕೈಪಿಡಿದುಕೊಂಡು ಅಲ್ಲಿಯೇ ನಿಂತುಕೊಂಡಳು. ರೇವತಿಯು ವಿಸ್ಮಯಗೊಂಡವಳಾಗಿ, ನಟ್ಟ ದೃಷ್ಟಿಯಿಂದ ಆ ಹೆಂಗಸಿನ ಮುಖವನ್ನೇ ನೋಡುತ್ತಾ ಇದ್ದಳು.

ವಿಳನೆಯ ಪರಿಚ್ಛೇದ

ಹೆಣ್ಣುಹುಲಿ ಮತ್ತೂ ಸರ್ಪ

"ಮೋಹಿನಿ, ಮೋಹಿನಿ, ಏಕೆ ನಾಯುತ್ತೀಯೆ, ತೆಗೆ, ಬಾಗಿಲನ್ನು ತೆಗೆ, ಸುಮ್ಮನೆ ನಾಯುಬೇಡ! ಎಂದು ಕೇಶವಚಂದ್ರನು ಪಂಜರದಲ್ಲಿ ನಿರ್ಬಂಧಿಸಲ್ಪಟ್ಟ ಹಸಿದ ಹುಲಿಯಹಾಗೆ ಒಳಗಿನಿಂದಲೇ ವಿಕಾರವಾಗಿ ಗರ್ಜಿಸತೊಡಗಿದನು. ಹಾಗೆಯೇ ಅಡಿಗಡಿಗೂ ಬಾಗಿಲಮೇಲೆ ಬಲವಾಗಿ ಒದೆಯುತ್ತಲೂ ಇದ್ದನು. ಮತ್ತೋಮರದ ಆ ಬಾಗಿಲು ಅವನ ಸೂರಾರು ಪಾದಪ್ರಹಾರಗಳಿಂದ ಕೊಂಚವಾದರೂ ಬಿನ್ನವಾಗದೆ, ನಿರಾಶ್ರಿತಳಾದ ಆ ಬಾಲಕೆಯ ಮುಖವನ್ನು ನೋಡುತ್ತಾ ಮೊದಲಿನ ಹಾಗೆ ಸ್ಥಿರವಾಗಿದ್ದಿತೆಂದು ತೋರುತ್ತದೆ.

ನಾವು ಯಾವ ಹೆಂಗಸಿನ ವಿಚಾರವನ್ನು ಕುರಿತು ಹೇಳಿದೆವೋ, ಆವಳು ನಮ್ಮ ಆ ಮೋಹಿನಿ, ನಿರಾಶಾಪೀಡಿತಳಾದ ದುಃಖಿನಿ, ಬಾಲವನ್ನು ತುಳಿದು ಕೆರಳಿಸಿದ ಸರ್ಪಿಣಿ, ಮಹಾ ಖುನ್ನಾದಿನಿ ಎಂಬುದನ್ನು ಪಾಠಕರು ತಿಳಿದಿರಬಹುದು.

ಒಳಗಡೆ ಕೇಶವಚಂದ್ರನು ತನ್ನ ಶಕ್ತಿಯನ್ನೆಲ್ಲ ವಿನಿಯೋಗಿಸಿ ಮುಚ್ಚಿದ್ದ ಬಾಗಿಲನ್ನು ಒದೆಯುತ್ತಲೂ, "ಮೋಹಿನಿ, ಪಿಶಾಚಿ, ಈಗ ಬಾಗಿಲನ್ನು ತೆರೆಯೆ, ಏಕೆ ನಾಯುತ್ತೀಯೆ?" ಎಂದು ಸಿಡಿಲಿನಂತೆ ಗರ್ಜಿಸುತ್ತಲೂ ಇದ್ದನು.

ಮೋಹಿನಿಯು ಕಿಟಕಿಯ ಹತ್ತಿರ ನಿಂತುಕೊಂಡು ಪರಿಹಾಸ ಮಾಡಿ ನಗುತ್ತ, "ನನ್ನ ಮರಣದ ಸಲುವಾಗಿ ನಿನ್ನ ಮೇಲೆ ಆಲೋ

ಚಿಸಬಹುದು. ಅದಕ್ಕೆ ಅವಕಾಶ ಬಹಳವಿದೆ; ಈಗ ನಿನ್ನ ಮರಣದ ವಿಚಾರವಾಗಿಯೇ ಮೊದಲು ಆಲೋಚಿಸು. ಇದು ಅಂತಿಂತಹ ಮರಣವಲ್ಲ, ಇದೇ ಸ್ಥಳದಲ್ಲಿ—ಆಹಾರವಿಲ್ಲದೆ—ಹಸಿವಿನಿಂದ ಎದೆಯೊಡೆದ ಮರಣ—ನಿನಗೆ ಯೋಗ್ಯವಾದ ಮರಣ. ಕೊಂಚಕೊಂಚವಾಗಿ, ಅನೇಕ ದಿನಗಳವರೆಗೆ, ವಿಳಂಬವಾಗುವ ಬಹು ಕಷ್ಟಕರವಾದ ದೀರ್ಘಕಾಲದ ಮರಣ. ನಿನ್ನ ಮರಣವನ್ನು ಇದಿರು ನೋಡುತ್ತಾ ಇನ್ನೂ ನಾನು ಸಾಯಲಿಲ್ಲ. ಮೊದಲು, ನಿನ್ನನ್ನು ಆರಾಧಿಸಬೇಕೆಂದು ಹಗಲೂ ರಾತ್ರಿಯೂ ಹೇಗೆ ತವಕಗೊಳ್ಳುತ್ತಿದ್ದೆನೋ—ಈಗ ಹಾಗೆಯೇ ಹಗಲೂ ರಾತ್ರಿ ನಿನಗೆ ಮರಣವನ್ನು ಬಯಸಿ ತವಕಗೊಳ್ಳುತ್ತಿದ್ದೇನೆ. ಈಗ ನಿನ್ನನ್ನು ಆ ಮರಣದ ಮುಖಕ್ಕೆ ಬಯ್ದು ಇಟ್ಟುದರಿಂದ ಬಹು ಮಟ್ಟಿಗೆ ನಿಶ್ಚಿಂತಳಾಗಿರಬಲ್ಲೆನು'' ಎಂದು ಹೇಳಿದಳು.

ಕೇಶವಚಂದ್ರನು ಬಳಸುತ್ತಿದ್ದ ಬೀಗ ಬೀಗದ ಕೈಗಳು ಚಿಲುಕದ ಕೊಂಡಿಗೆ ತಗಲಹಾಕಿತ್ತು; ಮೋಹಿನಿಯು ಶಬ್ದಮಾಡುತ್ತಾ ಚಿಲುಕಕ್ಕೆ ಬೀಗವನ್ನು ಹಾಕಿ ಬೀಗದ ಕೈಯ್ಯನ್ನು ಬಸಮುಚ್ಚಿ ದೂರವಾಗಿ ಎಸೆದು ಬಿಟ್ಟಳು.

ಕೇಶವಚಂದ್ರನು, ''ಮೋಹಿನಿ, ಈಗಲಾದರೂ ಬಾಗಿಲನ್ನು ತೆರೆ. ಸುಮ್ಮನೇ ಏಕೆ ಸಾಯುತ್ತೀಯೆ'' ಎಂದು ಪುನಃ ಹೇಳಿದನು.

ಮೋಹಿನಿಯು, ''ಯಾರನ್ನು ಭಯಪಡಿಸುತ್ತೀಯೆ? ನನಗೆ ಇನ್ನು ಮರಣದ ಭೀತಿಯಿಲ್ಲ'' ಎಂದು ನಗುತ್ತಾ ಉತ್ತರ ಹೇಳಿದಳು.

ಕೇಶವಚಂದ್ರ—ಇದರಿಂದ ನನಗೆ ಎಷ್ಟರ ನಷ್ಟವಾಗುವುದೆಂಬುದನ್ನು ನೀನು ಕಾಣೆ.

ಮೋಹಿನಿ—ನಿನ್ನ ನಷ್ಟದಿಂದ ನನಗೆ ಎಷ್ಟು ಲಾಭವೆಂಬುದನ್ನು ನೀನು ಕಾಣೆ.

ಕೇಶವಚಂದ್ರ—ಇದಕ್ಕಾಗಿ ನಾನು ನಿನ್ನನ್ನೆಂದಿಗೂ ಕ್ಷಮಿಸಲಾರೆ.

ಮೋಹಿನಿ—ಕ್ಷಮಿಸಬೇಕೆಂದು ಯಾರೂ ನಿನ್ನನ್ನು ಬೇಡುವುದಿಲ್ಲ.

ಎಂಟನೆಯ ಪರಿಚ್ಛೇದ

ಮೋಹಿನಿ ಮತ್ತು ರೇವತಿ

ಮೋಹಿನಿಯು ರೇವತಿಯನ್ನು ಬದಿಯಲ್ಲಿ ಕರೆದುಕೊಂಡು ಬೇಗ ಬೇಗ ಮನಮುಧ್ಯವನ್ನು ಪ್ರವೇಶಿಸಿದಳು. ಅಲ್ಲಿ, ರೇವತಿಯಿಂದಲೇ ಅವಳ ದುರವಸ್ಥೆಯ ಎಲ್ಲ ಸಮಾಚಾರಗಳನ್ನೂ ಮೋಹಿನಿ ಕೇಳಿ ತಿಳಿದು ಕೊಂಡಳು. ಕೇಳಿದವಳೇ ಮೋಹಿನಿಯು, "ಈಗ ಏನ ಮಾಡುವೆ? ಯಾವ ರೀತಿಯಲ್ಲಿ ಮನೆಗೆ ಹಿಂದಿರುಗಿ ಹೋಗುವೆ? ವೇಣೀಮಾಧವ ಪುರಕ್ಕೆ ಇಲ್ಲಿಂದ ಇಪ್ಪತ್ತೈದು ಹರದಾರಿ ದೂರವಿದೆ, ಇಷ್ಟು ದೂರ ನೀನು ಒಬ್ಬಂಟಿಗಳಾಗಿ ಹೋಗುವುದು ಈ ಸಂದರ್ಭದಲ್ಲಿ ಸಾಧ್ಯವಿಲ್ಲ; ಹಾಗೆ ಮಾಡುವುದರಲ್ಲಿ ಗಂಡಾಂತರಗಳೂ ಉಂಟು; ಪುನಃ ಸಿಕ್ಕಿ ಬಿದ್ದರೂ ಬೀಳಬಹುದು. ಕೆಲವು ದಿನಗಳ ಮಟ್ಟಿಗೆ ತಲೆಮರೆಸಿಕೊಂಡಿರುವುದಕ್ಕೆ ನಿನಗೆ ಆಶ್ರಯಕೊಡಬಲ್ಲ ಆತ್ಮೀಯರು ಈ ಹುಗಲೀ ಬಿಲ್ಲೆಯಲ್ಲಿ ಯಾರೂ ಇಲ್ಲವೆ?—ಎಂದು ಹೇಳಿದಳು.

ರೇವತಿಯು ನಿಟ್ಟುಸಿರುಬಿಟ್ಟು—ಯಾರಿದ್ದಾರೆ? ಇಲ್ಲ, ಅಂತಹ ಆತ್ಮೀಯರು ಯಾರೂ ಇಲ್ಲ. ಆದರೆ ಚಂದನ ನಗರದ ಬಳಿ ಗೋಸಾಯಿ ಪುರದಲ್ಲಿ ನಮ್ಮ ಗುರು ಒಬ್ಬನಿದ್ದಾನೆ; ಆತನನ್ನು ನೋಡುವುದು ಸಾಧ್ಯವಾದರೆ, ಆತನು ಆಶ್ರಯ ಕೊಟ್ಟರೂ ಕೊಡಬಹುದು.

ಮೋಹಿನಿ—ಚಂದನ ನಗರವು ಇಲ್ಲಿಗೆ ಐದು ಹರದಾರಿಗೂ ಸ್ವಲ್ಪ ಹೆಚ್ಚಾಗಿದೆ. ಘೋರ ಸ್ವರೂಪವನ್ನು ಧಾರಣಮಾಡಿರುವ ಆಕಾಶವನ್ನು ನೋಡಿದರೆ ಈಗಲೇ ಮಳೆ ಬರುವಂತೆ ಇದೆ. ದಾರಿಯಲ್ಲಿ ನಿನಗೆ ತೊಂದರೆಯಾದೀತು. ಒಂದು ಪೇಳೆ ಹೊರಡುವ ಪ್ರಯತ್ನ ಮಾಡುವುದಾದರೆ ನಾನು ನಿನಗೆ ದಾರಿ ತೋರಿಸಿಕೊಡುತ್ತೇನೆ. ಆ ಮಾರ್ಗವಾಗಿ ಹೋದರೆ ನಿನಗೆ ಯಾವ ತೊಂದರೆಯೂ ಇಲ್ಲ.

ರೇವತಿ—ನೀನು ಇಲ್ಲಿ ಇರುವುದೆಲ್ಲಿ? ಈ ರಾತ್ರಿಯು ಮಟ್ಟಿಗೆ ನಿನ್ನ ಸಂಗಡ ಇಲ್ಲಿಯೇ ಇರಬಹುದಲ್ಲ?

ಮೋಹಿನಿ—ನಾನಿರುವುದಕ್ಕೆ ಗೊತ್ತಾದ ಸ್ಥಳ ಒಂದೂ ಇಲ್ಲ; ಯಾವಾಗ ಎಲ್ಲಿಗೆ ಹೋಗುವೆನೋ ಅಲ್ಲಿಯೇ ಸ್ವಲ್ಪ ವಿಶ್ರಮಿಸಿಕೊಳ್ಳುವುದಕ್ಕೆ ಅನುಕೂಲವಾಡಿಕೊಳ್ಳುತ್ತೇನೆ. ಹೀಗೆ ಹಗಲೂ ರಾತ್ರಿ ಕಾಡು ಮೇಡುಗಳಲ್ಲಿ ಅಲೆಯುತ್ತಿದ್ದೇನೆ.

ರೇವತಿ—ನಿನಗೆ ಯಾರೂ ಇಲ್ಲವೆ?

ಮೋಹಿನಿ—ಇದ್ದಾನೆ, ಸ್ವಾಮಿ.

ರೇವತಿ—ಆತನು ನಿನ್ನ ಕ್ಷೇಮಲಾಭವನ್ನು ನೋಡುವುದಿಲ್ಲವೆ?

ಮೋಹಿನಿ—ಆತನ ಅನುಗ್ರಹ.

ರೇವತಿ—ಆತನು ಇರುವುದೆಲ್ಲಿ?

ಮೋಹಿನಿ—ಯಾವನು ನಿನ್ನನ್ನು ನನ್ನ ಸವತಿಯನ್ನಾಗಿ ಮಾಡಬೇಕೆಂದು ನಿನ್ನೊಡನೆ ಅಸಾಧ್ಯವಾದ ವರ್ತನಗಳನ್ನೆಲ್ಲಾ ನಡೆಸಿದನೋ ಅವನೇ ಅವನು.

ರೇವತಿ—(ವಿಸ್ಮಿತಳಾಗಿ) ಅವನೆ? ಅಂತಹ ಸ್ವಾಮಿ!

ಮೋಹಿನಿ— (ಚೂರಿಯನ್ನು ತೋರಿಸಿ) ಅಂತಹ ಸ್ವಾಮಿಯಾದ್ದರಿಂದಲೇ ಈ ಚೂರಿಯನ್ನು ಹಿಡಿದು ಅಲೆಯುತ್ತಿದ್ದೇನೆ. ಈ ಜನ್ಮದಲ್ಲಂತೂ ಅವನನ್ನು ಹೊಂದಲಿಲ್ಲ–ಹೊಂದಲಾಗಲಿಲ್ಲ–ಆದರೆ ಕಳಂಕವನ್ನು ಮಾತ್ರ ಹೊಂದಿದೆ. ಆತನನ್ನು ಇಹಲೋಕದಲ್ಲಿ ಹೊಂದಲು ಆಗಲಿಲ್ಲವೆಂದು ಹೇಳಿ ಪರಲೋಕದಲ್ಲಿ ಸೇರುವ ಆಸೆಯನ್ನೇಕೆ ಬಿಡಲಿ? ಒಂದು ದಿವಸ—ಯಾವ ದಿವಸ ಪರಲೋಕಯಾತ್ರೆಯು ಸಮಯವು ಸನ್ನಿಹಿತವಾಗುವುದೋ ಆ ದಿವಸ,–ಇದೇ ಚೂರಿಯು ಆತನ ಹೃದಯರಕ್ತಕ್ಕೂ ಹಾಗೆಯೇ ನನ್ನ ಹೃದಯರಕ್ತಕ್ಕೂ ಜೇರ್ಪಡಿಸಲಾಗದಂತಹ ಅಕ್ಷಯವಾದ ಸಂಯೋಗವನ್ನು ಮಾಡಿಬಿಡುತ್ತದೆ. ನಡೆ, ನಿನಗೆ ದಾರೀ ತೋರಿಸಿ ಬರುತ್ತೇನೆ. ನಾನು ಈಗಲೇ ಹಿಂದಿರುಗಿ ಬರಬೇಕು.

ರೇವತಿ—ನಿನ್ನ ಗತಿಯೇನು? ಅವನು ನಿನ್ನ ಮೇಲೆ ಹಾಗೆ ಕೋಪಿಸಿಕೊಂಡನಲ್ಲ, ಅದರಿಂದ ನಿನ್ನ ಪರಿಣಾಮವೇನಾಗುವುದೋ ಯಾರು ಬಲ್ಲರು? ನನಗಾಗಿ ನೀನೇಕೆ ಏಪತ್ತಿಗೆ ಸಿಕ್ಕಬೇಕು?

ಮೋಹಿನಿ—ಇದಕ್ಕೆ ಮೊದಲೇ ಇಂತಹ ಅನೇಕ ಏಪತ್ತುಗಳು ನನ್ನ ಜೀವನವನ್ನು ಹಾದು ಹೊರಟುಹೋಗಿವೆ. ಈಚಿಗೆ ಬಹು ದಿನಗಳಿಂದ ಯಾವುದೊಂದೂ ಇಲ್ಲ. ಆದ್ದರಿಂದ ಬೇಸರವಾಗಿದೆ. ಏಪತ್ತುಗಳೆಂದರೆ ನಿನಗೆ ಸೇರದು; ಆದರೆ ನಾನು ನಿತ್ಯವೂ ಏಪತ್ತುಗಳೊಡನೆ ಇರುವುದರಿಂದ ಏಪತ್ತುಗಳನ್ನು ಸ್ವಲ್ಪ ಮಟ್ಟಿಗೆ ಪ್ರೀತಿಸುವುದನ್ನು ಕಲಿತಿದ್ದೇನೆ; ಆದ್ದರಿಂದಲೇ ನಾನು ಏಪತ್ತುಗಳನ್ನು ಪ್ರೀತಿಸುವುದು, ನಿನ್ನ ಏಪತ್ತನ್ನು ನಾನು ತೆಗೆದುಕೊಂಡ ಪಕ್ಷದಲ್ಲಿ ಅದರಿಂದ ನಿನಗೇನು ದುಃಖ? ಈಗ ಬಾ, ನಿನ್ನನ್ನು ಇಲ್ಲಿಂದ ಕಳುಹಿಸಿ ಬಿಡುವವರೆಗೂ ನಿನ್ನ ಏಪತ್ತನ್ನು ನಾನು ಸಂಪೂರ್ಣವಾಗಿ ಪಡಿಸಿಕೊಂಡಂತೆ ಆಗುವುದಿಲ್ಲ.

ಹೀಗೆಂದು ಹೇಳಿ ಮೋಹಿನಿಯು ರೇವತಿಯ ಕೈಗಳನ್ನು ಹಿಡಿದು ಅವಳನ್ನು ಸರಸರನೆ ಎಳೆದುಕೊಂಡು ಹೋದಳು.

ಒಂಭತ್ತನೆಯ ಪರಿಚ್ಛೇದ

ಕೇಶವಚಂದ್ರನ ಬಿಡುಗಡೆ

ರೊರಗೆ ಬರುವುದಕ್ಕೆ ಯಾವ ಉಪಾಯವನ್ನೂ ಕಾಣದೆ ಕೇಶವ ಚಂದ್ರನು ತಾನು ನಿರ್ಬಂಧಿತನಾಗಿದ್ದ ಕೊಠಡಿಯಲ್ಲಿ ಸುಮ್ಮನೆ ಕುಳಿತಿದ್ದನು. ಕ್ರಮವಾಗಿ ಸಂಧ್ಯೆಯು ಕಳೆಯಿತು. ಮುತ್ತೂ ಎಲ್ಲೆಲ್ಲಿಯೂ ಅಂಧಕಾರವು ನಿಬಿಡವಾಗಿ ವ್ಯಾಪಿಸಿದ್ದರಿಂದ ಭಯಂಕರವಾದ ವನಭೂಮಿಯು ಭೀಷಣವಾಗಿ ಕಾಣುತ್ತಿದ್ದಿತು. ಹಾಗೆಯೇ ಗರ್ಜನ ಮಾಡುತ್ತಾ ಬೆಳಸೆ ಬಿರುಗಾಳಿ ಜೀಸಲಾರಂಭಿಸಿತು; ಹಾಗೆಯೇ ಬಿರುಗಾಳಿಯ ದೆಸೆಯಿಂದ ತೂಗಾಡುತ್ತಿರುವ ಅಸಂಖ್ಯವಾದ ಕಾಡು ಮರ

ಗಳ ಸಂಗಡ ನಿಬಿಡತರವಾದ ಅಂಧಕಾರವು ಸಂಕ್ಷುಬ್ಧವಾದ ಸಮುದ್ರದ ಹಾಗೆ ಭಯಪಡಿಸುತ್ತಿತ್ತು. ಮೇಘಪೂರ್ಣವಾಗಿ, ಕಾಡಿಗೆಯು ಹಾಗೆ ಕಪ್ಪಾಗಿರುವ ಆಕಾಶದ ಸಂಗಡ, ಅದಕ್ಕೆ ಅನುರೂಪವಾದ ವನಸ್ಥಳವು ಒಂದಾಗಿ ಸೇರಿ, ನೀಲವರ್ಣವನ್ನು ಮುಚ್ಚಿ, ನಕ್ಷತ್ರಗಳನ್ನು ಮುಚ್ಚಿ, ಚಂದ್ರನನ್ನು ಮುಚ್ಚಿ, ಪ್ರಕೃತಿಯು ಪಕ್ಷದಲ್ಲಿ ಚಿತ್ರ ವೈಚಿತ್ರ್ಯ ಗಳೊಂದೂ ಇಲ್ಲದಂತೆ ಮಾಡಿನೆ; ದೃಷ್ಟಿಯು ಓಡುವವರೆಗೆ ಎತ್ತಕಡೆ ನೋಡಿದರೂ ಏಸ್ತಾರವಾದೊಂದು ಕರಿಯ ಬಣ್ಣದ ತೆರೆ ಬಿಟ್ಟಿರುವ ಹಾಗೆ ಕಾಣುತ್ತಿದೆ.

ಸ್ವಲ್ಪ ಹೊತ್ತಿನ ಮೇಲೆ, ಆ ಅಂಧಕಾರದಲ್ಲಿ, ಮತ್ತೊಬ್ಬ ಕರಿಯನು ಬಂದು ಕೇಶವಚಂದ್ರನು ನಿರ್ಬಂಧಿಸಲ್ಪಟ್ಟಿದ್ದ ಕೊಠಡಿಯ ಮುಂದೆ ನಿಂತು "ರೇವತಿ, ರೇವತಿ!" ಎಂದು ಕೂಗಿದನು.

ಅವನ ಕಂಠಸ್ವರವನ್ನು ಕೇಳಿದುದೇ ತಡ, ಸತ್ತುಹಾಗೆ ಬಿದ್ದಿದ್ದ ಕೇಶವಚಂದ್ರನಿಗೆ ಜೀವಬಂದಂತೆ ಆಯಿತು. ಕುಳಿತಿದ್ದವನು ಆತುರದಿಂದ "ಯಾರು ಗೋರಾಚಾಂದ? ಇಲ್ಲಿ ಸರ್ವನಾಶವಾಗಿ ಹೋಯಿತು." ಎಂದು ಹೇಳುತ್ತಾ ಹಾಕಿದ್ದ ಬಾಗಿಲ ಬಳಿ ಬಂದು ನಿಂತುಕೊಂಡನು.

ಗೋರಾಚಾಂದ—ನೀವು ಇಲ್ಲಿಯೇ ಇದ್ದೀರಿ; ನಿಮ್ಮನ್ನು ಹುಡುಕಿಕೊಂಡೇ ನಾನು ಇಲ್ಲಿಗೆ ಬಂದೆ. ಬಾಗಿಲು ತೆರೆಯಿರಿ, ಅನೇಕ ಸಮಾಚಾರಗಳುಂಟು.

ಕೇಶವಚಂದ್ರ—ಬಾಗಿಲು ತೊರಗಡೆ ಬೀಗವಾಕಿನೆ. ಬೇಗ ಬಾಗಿಲನ್ನು ತೆರೆ.

ಕತ್ತಲೆಯಲ್ಲಿ ಹುಡುಕಿ ಗೋರಾಚಾಂದನು ಚಿಲುಕವಿರುವ ಸ್ಥಳ ವನ್ನು ಗುರ್ತಿಸಿದನು. ನೋಡಿದನು, ಅದಕ್ಕೆ ಬೀಗಹಾಕಿದೆ; ಹೇಳಿದನು, "ಡಾಕ್ಟರ ಬಾಬೂ, ಯಾವ ಬೀಗದ ಕೈಯ್ಯಿಂದ ಇದನ್ನು ತೆಗೆಯಲಿ? ತಮ್ಮಲ್ಲಿ ಬೀಗದ ಕೈ ಇದೆಯೆ?

ಕೇಶವಚಂದ್ರ—ಬೀಗದ ಕೈ ಇಲ್ಲ, ಹೇಗಾದರೂ ಮಾಡು, ಈಗ ಅದನ್ನು ಒಡದುಬಿಡು.

ಗೋರಾಚಾಂದನು ಏಸ್ಮಿತನಾಗಿ, ಇದೇನು ವ್ಯಾಪಾರ? ನನಗೆ ಒಂದೂ ತಿಳಿಯುವ ಹಾಗಿಲ್ಲ, ಏನು ಸಮಾಚಾರ? ಎಂದು ಕೇಳಿದನು.

ಕೇಶವಚಂದ್ರ—ಸರ್ವನಾಶವಾಯಿತು. ಪಕ್ಕಿ ಹಾರಿಹೋಯಿತು. ತುಂಬಿದ ಹಡಗು ಮುಳುಗಹೋಯಿತು. ಒಂದೇ ಗಂಟಿನಲ್ಲಿ ಇಪ್ಪತ್ತು ಸಾವಿರ ರೂಪಾಯಿ ನಷ್ಟವಾಯಿತು. ಮೊದಲು ಬಾಗಿಲನ್ನು ತೆರೆ. ಎಲ್ಲ ಸಮಾಚಾರವನ್ನೂ ಹೇಳುತ್ತೇನೆ.

ಗೋರಾಚಾಂದನು ಬಹುವಾಗಿ ಹುಡುಕಿ, ಆ ಮುರುಕು ಮನೆಯಲ್ಲಿ ಇತ್ತಲೂ ಅತ್ತಲೂ ಸುತ್ತಿ, ಮುರಿದುಹೋದ ಕಿಟಿಕಿಯೊಂದರ ಕಪ್ಪಿಣದ ಕಂಬಿಯೊಂದನ್ನು ಬತ್ತಿಕೊಂಡು ಬಂದನು. ಅದರಿಂದಲೇ ಅವನ ಕೆಲಸವಾಯಿತು; ಆ ಕಂಬಿಯನ್ನು ಚಿಲುಕದೊಳಕ್ಕೆ ಹಾಕಿ ಬಂದು ಸುತ್ತು ಸುತ್ತುವನೇಳಿಗೆ ಚಿಲುಕವು ಕೆತ್ತು ಬಾಗಲು ತೆರೆಯಿತು. ಕೇಶವಚಂದ್ರನು ಅವಸರವಸರದಿಂದ ಹೊರಕ್ಕೆ ಬಂದನು.

ಹತ್ತನೆಯ ಪರಿಚ್ಛೇದ

ಮೋಹಿನಿಯ ಸಂಧಾನ

ಕೇಶವಚಂದ್ರನು ಹೊರಗೆ ಬಂದು ಗೋರಾಚಾಂದನನ್ನು ಕುರಿತು, "ಗೋರಾಚಾಂದ, ರೇಬತಿಯು ಓಡಿಹೋಗಿದ್ದಾಳೆ" ಎಂದನು. ಗೋರಾಚಾಂದನು ಏಸ್ಮಿತನಾಗಿ, 'ಅಜೀನು! ಎಲ್ಲಿಗೆ ಹೋದಳು? ಯಾವಾಗ?' ಎಂದು ಕೇಳಿದನು.

ಕೇಶವಚಂದ್ರ—ಎಲ್ಲಿಗೆ ಹೋದಳೋ ತಿಳಿಯದು. ಸುಮಾರು ಒಂದು ಗಂಟೆಯಾಗಿರಬಹುದು, ನನ್ನ ಕಣ್ಣೆದಿರಾಗಿಯೇ ಅವಳು ಓಡಿ ಹೋದಳು.

ಕೇಶವಚಂದ್ರನು ಒಂದೊಂದಾಗಿ ಎಲ್ಲ ಸಮಾಚಾರವನ್ನೂ ಗೋರಾಚಾಂದನಿಗೆ ಹೇಳಿದನು. ಅದೆಲ್ಲವನ್ನೂ ಕೇಳಿ ಗೋರಾಚಾಂದ

ನಿಗೆ ಮತ್ತಷ್ಟು ಏನ್ಮಯವಾಯಿತು; ಹೇಳಿದನು, "ಇಂದೆಂತಹ ಸರ್ವನಾಶ! ಈಗಲೇ ರೇವತಿಯನ್ನು ಕಂಡುಹಿಡಿಯಬೇಕು."

"ಈಗಲೇ ಏನು, ಈ ಕ್ಷಣದಲ್ಲಿಯೇ ಹೇಗಾದರೂ ಮಾಟ, ಅವಳನ್ನು ಹಿಡಿದು ತರಬೇಕು, ಇಲ್ಲವಾದರೆ ಬಲ್ಲವೂ ವ್ಯರ್ಥವಾಗುವುದು. ಇಷ್ಟು ತೊಂದರೆಗಳಿಗೂ ನೀನೇ ಕಾರಣ, ನೀನು ಹಿಂದಿರುಗಿ ಬರಬೇಕಾದರೆ ಇಷ್ಟು ಸಾವಕಾಶವೇಕಾಯಿತೋ ಕಾಣೆ. ಸೂಳೇ ಮಗನೆ, ಒಂದು ಗಂಟೆಗೆ ನೊಡಲು ಹಿಂದಿರುಗಿದ್ದರೆ ನಾನು ಹೀಗೆ ಮುಳುಗಿ ಹೋಗುತ್ತಿರಲಿಲ್ಲ. ಈಗ ನಿನ್ನ ತಲೆಯೊಡೆದು ಬಿಡಲೆ,—ಏನ್ಮಷ್ಟು ಕೋಪಬಂದಿದೆ"

"ಹ್ಹಾ, ನನ್ನದೆ ಮೊಷ್ಟ ತಪ್ಪಾಯಿತಲ್ಲಪೆ; ಸಿರ್ಬಂಧಕ್ಕೆ ಸಿಕ್ಕಿ ತಪ್ಪಿಗೆ ಕುಳಿತುಕೊಂಡಿದ್ದಿರಿ, ನಾನು ಬಂದು ನಿಮ್ಮನ್ನು ಬಿಡುಗಡೆ ಮಾಡಿದೆ; ಇದೇ ನನ್ನ ತಪ್ಪು?"

(ಕೋಪದಿಂದ) ತಪ್ಪಲ್ಲವೇನೋ, ನೀನು ಬಲ್ಲಿಗೆ ಹೋದರೆ ಅಲ್ಲಯೇ ನಿನಗೆ ದೊಡ್ಡಮ್ಮನ ಆವೇಶವಾಗುತ್ತದೆ. ಬಂದು ಗಂಟೆಯ ಕೆಲಸಕ್ಕೆ ಹತ್ತು ಗಂಟೆ ಕಳೆದು ಬರುತ್ತೀಯೆ, ನಿನ್ನನ್ನು ಕಟ್ಟಿಕೊಂಡು ನನ್ನ ಕೆಲಸ ನಡೆಸುವುದು ತುಂಬ ಕಷ್ಟವಾಗಿದೆ.

"ನಾನು ಸಾಯಂಕಾಲಕ್ಕೆ ಹೊಡಲೇ ಹಿಂದಿರುಗಿ ಬಂದೆ, ಇಪ್ಪತ್ತ್ನಾಲುಮೈಲಿ ದೂರವೇನು ಸಾಮಾನ್ಯವಲ್ಲ; ಅವೇಲೆ ನಿಮ್ಮ ಮನೆಗೆ ಹೋಗಿ ನೋಡಿದೆ, ನೀವು ಅಲ್ಲಿ ದೊರಿಯಲಿಲ್ಲ; ಅಲ್ಲಿಂದ ಪುನಃ ತಮ್ಮಾಜ್ಞೀನಸ ಮನೆಗೆ ಹೋದೆ. ಅವನ ಮಗಳನ್ನು ಕಂಡು ತಮ್ಮ ಏಚಾರ ಕೇಳಿದೆನೋ ಇಲ್ಲವೋ, ಆ ಬಜಾರಿ 'ಇಲ್ಲ' ಎಂದು ಹೇಳಿ ಮುಖ ತಿರುಗಿಸಿಕೊಂಡು ಹೊರಟುಹೋದಳು. ಅದೆಲ್ಲವೂ ಆದ ಮೇಲೆ ಇಲ್ಲಿಗೆ ಬಂದು ಈ ಸುದ್ದಿ ಕೇಳಿದೆ. ಇದನ್ನು ಕೇಳಿದ್ದೇ ಬಸೆ ಯೊಡೆಯಿತು."

"ನಿನ್ನನ್ನು ಬಲ್ಲಿಗೆ ಕಳುಹಿಸಿದ್ದೆನೋ ಅಲ್ಲಿ ಏನೇನು ಮಾಟ ಕೊಂಡು ಬಂದಿರುವೆಯೋ ಹೇಳು ನೋಡೋಣ. ಅವನು ಏನು ಹೇಳಿದ?"

''ನನ್ನನ್ನು ನೋಡಿದಕೂಡಲೇ ಅವಸರವಸರವಾಗಿ ನಿರ್ಜನವಾದ ಮನೆಯೊಂದಕ್ಕೆ ಕರೆದುಕೊಂಡು ಹೋಗಿ ಕುಳ್ಳಿರಿಸಿದನು. ಅಲ್ಲಿ ನಾನು ಅದನ್ನು ಅವನ ಕೈಗೆ ಕೊಟ್ಟೆ, ನೋಡಿ ತುಂಬಾ ಆನಂದಿಸಿದ''

''ರೂಪಾಯಿ ವಿಚಾರವೇನಾಯಿತು?''

''ಆ ವಿಷಯವಾಗಿಯೇ ಸ್ವಲ್ಪ ತೊಂದರೆಗಿಟ್ಟಿದೆ; ಎರಡು ಕೆಲಸಗಳನ್ನೂ ಮುಗಿಸಬೇಕಂತೆ; ಹಾಗೆ ಮಾಡದಿದ್ದರೆ ಹಣಕಾಸಿನ ವಿಷಯ ಏನೂ ಆಗುವ ಹಾಗಿಲ್ಲ. ಮೊದಲು ಒಂದು ಕೆಲಸವನ್ನು ಮುಗಿಸಿ ಕೊಟ್ಟು ಕೊಂಚ ಹಣವನ್ನು ಕೈಗೆ ಹಾಕಿಕೊಳ್ಳಬೇಕೆಂದೂ ಅನಂತರ ಅವನನ್ನು ಪದರಿಸಿ ಪದರಿಸಿದರೆ ಅವನ ಜವಾನುದಾರಿ, ಆಸ್ತಿ ಪಾಸ್ತಿಯೆಲ್ಲವೂ ಸುಲಭವಾಗಿ ಕೈಸೇರುವುದೆಂದೂ ನೀವು ಊಹಿಸಿದ್ದಿರಿ; ಅದು ಹೇಗಾಯಿತು ನೋಡಿದಿರಾ? ಅವನು ಪೂರಾ ಘಾಟೀಕೋರ, ನಮ್ಮ ವಿಷಯದಲ್ಲಿ ಅವನ ನಡವಳಿಯೇ ಬಂದು ಮಾದರಿ; ಅವನು ಹೇಳುವುದೇನಂದರೆ,—''ಇಬ್ಬರ ದೆಸೆಯಿಂದ ನನಗೆ ಯಾವ ಭಯ ವುಂಟೋ ಒಬ್ಬರಿಂದಲೂ ಅಷ್ಟೇ; ಆದ್ದರಿಂದ ಈಗ ಕೆಲಸವಾಯಿತೆಂದು ಹೇಳುವುದು ಹೇಗೆ?'' ಎಂದು.

''ಇದುವರೆಗಣ ಆಲೋಚನೆ, ಪ್ರಯತ್ನ, ಪರಿಶ್ರಮ ಎಲ್ಲವೂ ವ್ಯರ್ಥವಾದ ಹಾಗೆಯೇ ತೋರುತ್ತದೆ.''

''ಆಗಲೇ ಹೇಳಿದೆ; ಇಬ್ಬರನ್ನೂ ಒಟ್ಟಿಗೆ ತೀರಿಸಿಬಿಡ ಬೇಕೆಂದೆ; ಅದನ್ನು ನೀವು ಕೇಳಲಿಲ್ಲ. ಕೇಳಿದ್ದರೆ ಈಗ ಇಪ್ಪತ್ತು ಸಾವಿರ ರೂಪಾಯಿಗಳ ಥೈಲಿ ಮನೆಗೆ ಬರುತ್ತಿದ್ದಿತು, ಬಡವನ ಮಾತು ಅನುಭವಕ್ಕೆ ಬಂದ ನಂತರವೇ ರುಚಿಸುವುದು. ನೀವು ದುರಾಶೆಗೆ ಬಿದ್ದಿರಿ; ಸಹಜವಾಗಿ ಅತಿಯಾಸೆಯಿಂದ ಪಾಪ, ಪಾಪದಿಂದ ಮರಣ.''

''ಏಕೆ? ಆತನ ಸಂಗಡ ನಾವು ಮಾಡಿಕೊಂಡಿದ್ದ ಒಪ್ಪಂದವೇ ಸಂಬಂಧವನ್ನು ಅವನಿಗೆ ಹೇಳಲಿಲ್ಲವೆ? ಕೆಲಸವು ಒಂದೊಂದಾಗಿ ಮುಗಿಸಲ್ಪಡುತ್ತದೆ, ಒಂದೊಂದು ಕೆಲಸಕ್ಕೆ ಹತ್ತು ಹತ್ತು ಸಾವಿರ ರೂಪಾಯಿ;

ಹೀಗೆಯೇ ನಾವು ಮಾತನಾಡಿದ್ದದ್ದು ; ಕೆಲಸವೊಂದಕ್ಕೆ ಹತ್ತು ಸಾವಿರ ರೂಪಾಯಿಯ ಹಾಗೆ ಎರಡು ಕೆಲಸಗಳಿಗೆ ಇಪ್ಪತ್ತು ಸಾವಿರ ರೂಪಾಯಿ ಕೊಡತಕ್ಕುದೆಂದು ಕಾಗದ ಪತ್ರಗಳಲ್ಲಿಯೂ ಬರೆದಿದೆಯಲ್ಲ?''

''ಅದು ಗೊತ್ತಾಯಿತು, ಆದರೆ ಆ ಇಪ್ಪತ್ತು ಸಾವಿರ ರೂಪಾಯಿಗಳನ್ನು ಎರಡು 'ಪಿಸ್ತೂ'ಗಳಲ್ಲಿ ಕೊಡುವುದೆಂದಿಲ್ಲ, ಒಂದೇ ಗಂಟಿನಲ್ಲಿ ಕೊಡುವುದೆಂದಿದೆ. ಈಗ ಇಲ್ಲಿಗೆ ಬಂದು ನೋಡುವುದರಲ್ಲಿ ನಿಮ್ಮಷ್ಟಕ್ಕೆ ನೀವೇ ಇಕ್ಕಟ್ಟಿಗೆ ಸಿಕ್ಕಿಕೊಂಡಿದ್ದೀರಿ ; ಇಪ್ಪತ್ತು ಸಾವಿರ ರೂಪಾಯಿ ಬರುವ ಕಡೆ ಈಗ ಇಪ್ಪತ್ತು ಕಾಸುಗಳು ಕೂಡ ಬರುವ ಹಾಗಿಲ್ಲ.''

ಕೇಶವಚಂದ್ರನು ಅರೆಗಳಿಗೆ ಸುಮ್ಮನಿದ್ದು ಏನೋ ಆಲೋಚಿಸಿದನು. ಆಲೋಚಿಸಿ ಹೇಳಿದನು, ''ಗೋರಾಚಾಂದ, ನೀನು ಹೊರಡು, ಹೇಗಾದರೂ ಮಾಡು, ರೇವತಿಯನ್ನು ಪಿಡಿದುಕೊಂಡು ಬಾ; ಅವಳನ್ನು ಜೀವಸಹಿತವಾಗಿ ತರಬಹುದಾದರೆ, ಹೊದಲು ಆ ಪ್ರಯತ್ನಮಾಡು. ನಾನು ಅವಳನ್ನು ನನ್ನ ಕೈಯ್ಯಾರ ಕೊಲ್ಲುತ್ತೇನೆ. ಬಂದು ವೇಳೆ, ಅಂತಹ ತೊಂದರೆಗಳೇನಾದರೂ ಕಾಣಬಂದರೆ, ಆಗ ಅವಳನ್ನು ಕೊಂದು ಅವಳ ಮೃತದೇಹವನ್ನು ಎತ್ತಿಕೊಂಡು ಬಾ; ಒದುಕಿರಲಿ ಅಥವಾ ಸತ್ತಿರಲಿ, ಯಾವ ಅವಸ್ಥೆಯಲ್ಲಿಯಾದರೂ ಸರಿ ರೇವತಿಯು ನನಗೆ ಬೇಕೇ ಬೇಕು ; ಇಲ್ಲವಾದರೆ ಇಪ್ಪತ್ತು ಸಾವಿರ ರೂಪಾಯಿ ಒಟ್ಟಿಗೆ ಮುಳುಗಿಹೋಗುತ್ತದೆ. ಅತಿಯಾಗಿ ಆಸೆ ಪಡುವುದು ತಪ್ಪೆಂದು ಈಗ ತಿಳಿಯಿತು. ನೀನು ರೇವತಿಯನ್ನು ಹುಡುಕಿಕೊಂಡು ಹೊರಡು ; ನಾನು ಪೋಪಿಸಿಯನ್ನು ಹುಡುಕಿಕೊಂಡು ಹೋಗುತ್ತೇನೆ. ಈ ಇಪ್ಪತ್ತು ಸಾವಿರ ರೂಪಾಯಿಗಳ ನಷ್ಟವನ್ನು ನಾನು ಪೋಪಿಸಿಯ ಮೇಲೆ ಹೊರಿಸಿ ಬಿಡುತ್ತೇನೆ; ಈವರೆಗೆ ಅವಳು ಬಹು ಸಾಮಾನ್ಯಳೆಂದು ಉಲಕ್ಷ್ಯಮಾಡಿದೆ; ನಾನು ಹೇಗೆ ಭಾವಿಸಿದ್ದೆನೋ ಅವಳು ಹಾಗೆ ಇಲ್ಲ; ಅವಳೇ ನನಗೆ ಭಯಂಕರ ಶತ್ರುವಾಗಿದ್ದಾಳೆ.''

ಆಗ 'ಹತ್ತಿರದಲ್ಲಿಯೇ' ವನಮಧ್ಯದಲ್ಲಿ ಸ್ತ್ರೀಕಂಠದಿಂದ, ಶತ್ರು ವಂತೆ ಶತ್ರು, ಪರಮಶತ್ರು. ಆ ಶತ್ರುವನ್ನು ಹುಡುಕಿಕೊಂಡು ಎಲ್ಲಿಗೂ ಹೋಗಬೇಕಾಗಿಲ್ಲ; ಇಲ್ಲಿಯೇ ಇದ್ದಾಳೆ; ನಿನ್ನನ್ನು ಬಿಟ್ಟು ಅವಳು ಆರೆಗಳಿಗೆಯೂ ಇರಲಾರಳು. ಹಾಗೆ ಇರುತ್ತಿದ್ದ ಪಕ್ಷದಲ್ಲಿ ಅವಳು ನಿನಗೆ ಶತ್ರುವಾದಾಳೇನು? ದೂರದಲ್ಲಿಯೇ ಇದ್ದಿದ್ದ ಪಕ್ಷದಲ್ಲಿ, ವಿನೋದ, ಆ ಶತ್ರು ನಿನಗೆ ಅಡಿಗಡಿಗೂ ಶತ್ರುತಾಚರಣೆ ಮಾಡುವುದು ಹೇಗೆ ಸಾಧ್ಯ?—ಎಂದು ಯಾರೋ ಸ್ತ್ರೀಕಂಠದಿಂದ ಕೂಗಿದರು.

ಪ್ರಾತಕ್ಕ, ಏನೋದಲಾಲನೇ ಕೇಶವಚಂದ್ರ. ಪ್ರತ್ಯೇಕ ಸ್ಪಷ್ಟತೆ ಯಿಲ್ಲ.

ಕೇಶವಚಂದ್ರನು, ಆ ಕಂಠಸ್ವರದಿಂದ ಅವಳು ಮೋಹಿನಿ ಎಂದು ತಿಳಿದನು; ಆದರೆ ನಾಲ್ಕು ಕಡೆಗಳಲ್ಲಿಯೂ ಭಯಂಕರವಾದ ಕತ್ತಲೆ ಕವಿದಿದೆ; ತೀಕ್ಷ್ಣದೃಷ್ಟಿಯಿಂದ ಅಂಧಕಾರವನ್ನು ಛೇದಿಸಿ ನೋಡಿದರೂ ಅವಳನ್ನು ಎಲ್ಲಿಯೂ ಕಾಣಲಿಲ್ಲ; ಆಷ್ಟು ಹೊತ್ತಿಗೆ ಮಳೆಗೆ ಆರಂಭವಾಗಿತ್ತು. ಆಗ ಬಿರುಗಾಳಿಯೂ ಕೂಡ ಪ್ರಬಲ ವೇಗದಿಂದ ಗರ್ಜಿಸಿಕೊಂಡು ಬೀಸುತ್ತಿದ್ದಿತು. ಆ ಬಿರುಗಾಳಿ ಮಳೆಗಳ ಸಂದಣಿಯಲ್ಲಿ ಕೇಶವಚಂದ್ರನು ಯಾವುದನ್ನೂ ನಿಶ್ಚಯಿಸಲಾರದವನಾದನು. ಮೋಹಿನಿಯು ಎಲ್ಲಿಯೋ ನಿಂತು ಅವನನ್ನು ಪರಿಹಾಸ್ಯ ಮಾಡಿದಳು. ಪುನಃ ತೀಕ್ಷ್ಣದೃಷ್ಟಿಯಿಂದ ನಾಲ್ಕೂ ಕಡೆ ನೋಡಿದನು, ಕಗ್ಗತ್ತಲೆ ದಟ್ಟವಾಗಿ ಕವಿದಿದ್ದುದರಿಂದ ಯಾವುದೂ ಕಾಣಿಸಲಿಲ್ಲ.

"ನನ್ನನ್ನು ನೋಡಲಾರೆಯೋ? ಇದೋ, ಇಲ್ಲಿಯೇ ಇದ್ದೇನೆ" ಎಂದು ಹೇಳುತ್ತಾ ಮೋಹಿನಿಯು ಬಂದು ದಟ್ಟವಾದ ವನದೊಳಗಿಂದ ಹೊರಕ್ಕೆ ಬಂದಳು. ಕೇಶವಚಂದ್ರನು ಕೆರಳಿದ ಹುಲಿಯ ಹಾಗೆ ಏಕಟವಾಗಿ ಗರ್ಜಿಸುವಾಡುತ್ತಾ ಮೋಹಿನಿಯನ್ನು ಹಿಡಿವುದಕ್ಕೆಂದು ಓಡಿದನು. ಅದೇ ಮುಹೂರ್ತದಲ್ಲಿ ಮೋಹಿನಿಯು ಭಯಪಟ್ಟವಳಂತೆ, ಸರ್ವ ಸಂಕುಲವಾದ ಆ ವನಮಧ್ಯೆ ಪುನಃ ಪ್ರವೇಶಿಸಿ ಅದೃಶ್ಯಳಾದಳು. ಒಂದು ಕಡೆ ಗಾಢತಮ ಅಂಧಕಾರ; ಏಸ್ಸೊಂದು ಕಡೆ ಬಿರುಗಾಳಿಯಿಂದೊಡ

ಗೂಡಿನ ಬಿರುಸಾದ ಮಳೆಯು ಹೊಡತ. ಅಂತಪ ಕಾಡಿನೊಳಗೆ ಕೇಶವ ಚಂದ್ರನೂ ಗೋರಾಚಾಂದನೂ ಮೋಪಿಸಿಯನ್ನು ಬಹಳವಾಗಿ ಹುಡು ಕಿದರು ; ಮೋಪಿಸಿ ಸಿಕ್ಕಲಿಲ್ಲ.

ಕೇಶವಚಂದ್ರ— ಒಂದು ಕೆಲಸಕ್ಕೆ ಇಬ್ಬರು ಸಿಲ್ಲುವುದರಿಂದ ಫಲವಿಲ್ಲ. ಗೋರಾಚಾಂದ, ರೇವತಿಯನ್ನು ಹುಡುಕುವುದಕ್ಕೆ ಹೊರಡು, ಹೇಗಾದರೂ ಮಾಡಿ ರೇವತಿಯನ್ನು ಹಿಡಿದು ತಾ. ನಾನು ಇಲ್ಲಿಯೇ ಇರುತ್ತೇನೆ. ಮೋಪಿಸಿಯನ್ನು ಕೊಂದುಹಾಕಿದಲ್ಲದೆ ಮತ್ತೊಂದು ಕೆಲಸಕ್ಕೆ ಕೈಹಾಕುವುದಿಲ್ಲ. ಈ ವಿಶಾಚಿಯು ನನ್ನ ಆಲೋಚನೆಗಳನ್ನೆಲ್ಲಾ ವ್ಯರ್ಥಮಾಡಿದ್ದಾಳೆ.

ಗೋರಾಚಾಂದನು ಹೊರಟುಹೋದನು.

ಹನ್ನೊಂದನೆಯ ಪರಿಚ್ಛೇದ

ವಿಚಾರಣೆ

ಆತಕ, ಪ್ರಕೃತದಲ್ಲಿ ಕೇಶವಚಂದ್ರ, ಗೋರಾಚಂದ ಮೋಪಿಸೀ ಮೊದಲಾದವರ ವೃತ್ತಾಂತವನ್ನು ಇಷ್ಟಕ್ಕೇ ನಿಲ್ಲಿಸಿ, ಐದನೆಯ ಪರಿ ಚ್ಛೇದದಲ್ಲಿ ಯಾವ ದುರ್ಘಟನೆಯು ವಿಚಾರವನ್ನು ಕುರಿತು ಹೇಳಿದೆಯೋ ಅದನ್ನೇ ಕುರಿತು ಈ ನಮ್ಮ ಕಥೆಯಲ್ಲಿ ಸಂಬಂಧಿಸಬೇಕೆಂದಿರುವೆವು. ಆ ಕಾಲುವೆಗೆ ಸಮೀಪವಾದ ಕಾಡಿನಲ್ಲಿ ರಕ್ತಕಲೆಯು ಬಿದ್ದಿ, ದೀರ್ಘ ವಾದ ಚೂರಿ ಮುಂತಾದುವು ಬಿದ್ದಿದ್ದುವಷ್ಟೆ? ಅವುಗಳ ವಿಚಾರವಾಗಿ ಪಾರಸೆಯು ದಿನ ಜೆಳಿಗ್ಗೆ ಊರಿನಲ್ಲಿ ಅದೊಂದು ಬಗೆಯ ಹಾಹಾಕಾರ ವುಂಟಾಯಿತು. ಆದರ ಸುದ್ದಿಯು ಚಿತ್ರವಿಚಿತ್ರವಾಗಿ ಹೊರಟು ಆ ಗ್ರಾಮವಾಸಿಗಳಾದ ಆಬಾಲ-ವೃದ್ಧ-ವನಿತೆಯರ ಮುಖದಲ್ಲೆಲ್ಲಾ ನರ್ತಾಡುವಂತಾಯಿತು.

ಗೋವರ್ಧನನ ಮನೆಯು ಇದಿರಾಗಿರುವ ಆಲದ ಮರದ ತಣ್ಣನೆಯ ನೆರಳಿನಲ್ಲಿ, ಗಂಭೀರ ಮುಖದಿಂದಲೂ ಸ್ಥಿರವಾದ ನೇತ್ರಗಳಿಂದಲೂ

ಇರುವ ವೈದ್ಯರು ಹುಲ್ಲಿನ ಮೇಲೆ ಕುಳಿತು ಹುಕ್ಕೆಯನ್ನು ಕೈಯಲ್ಲಿ ಹಿಡಿದು, ಕೆಮ್ಮುತ್ತಾ ಈ ಮಾತನ್ನೇ ಕುರಿತು ಮಾತನಾಡುತ್ತಿದ್ದಾರೆ. ನದಿಯ ಘಾಟಿಯಲ್ಲಿ, ಕೊಂಕುಳಲ್ಲಿ ಕೊಡವನ್ನು ಹೊತ್ತ ವಾಮೆ, ಮಸೀಮಯವಾದ ಮುಸುರೆ ಪಾತ್ರೆಗಳನ್ನು ಕೈಯಲ್ಲಿ ಹಿಡಿದಿರುವ ಶ್ಯಾಮೆ, ಚೌಳಿನಲ್ಲಿ ನೀರಿನಲ್ಲಿ ತೊಯಿದ ಬಟ್ಟೆಯ ರಾಶಿಯನ್ನು ಹೆಗಲ ಮೇಲೆ ಹೇರಿಕೊಂಡಿರುವ ಭೀಮೆ, ಹಾಗೆಯೇ ಎಣ್ಣೆ ಹಚ್ಚಿಕೊಂಡು ಬಂದಿರುವ ಕಾಮುಸಿ, ಸಂಗಡ ಬಂದಿರುವ ಭಾಮುಸಿ ಮೊದಲಾದವರು ಇದೇ ಸುದ್ದಿಯನ್ನೇ ಕುರಿತು ಮಾತನಾಡುತ್ತಾ ಬಂದೊಂದು ರೀತಿಯಾಗಿ ತಂತಮ್ಮ ದೃಷ್ಟಾಭಿಪ್ರಾಯಗಳನ್ನು ಹೇಳಿಕೊಳ್ಳುತ್ತಿದ್ದರು.

ಬೆಳಗಾಗುವ ವೇಳೆಗೆ ಯೋಗೇಂದ್ರನಾಥನೂ ಅರಿಂದಮನೂ ಕೃತ್ಯ ನಡೆದ ಸ್ಥಳಕ್ಕೆ ಬಂದು ಸೇರಿದರು. ಜತೆಯಲ್ಲಿ ಆರೇಳು ಮಂದಿ ಪೋಲೀಸಿನವರೂ ಇದ್ದರು. ಪಲಾಯಿಮುಂಡಲ ಮತ್ತೂ ಅವನ ಸ್ನೇಹಿತರ ಹೇಳಿಕೆಯನ್ನು ಅರಿಂದಮನು ಬಂದೊಂದನ್ನಾಗಿ ಬರೆದು ಕೊಂಡನು. ಅವರು ತಿಳಿದುದ್ದುದನ್ನೆಲ್ಲಾ ಸರಿಯಾಗಿ ಹೇಳಿದರು. ಸಿರ್ಕಂಧದಿಂದ ಬಾಮು ಬಿಡಿಸುವ ಪ್ರಯತ್ನಗಳೊಂದೂ ಅವರ ವಿಷಯದಲ್ಲಿ ಜೀಕಾಗಿಬರಲಿಲ್ಲ. ಯಾವ ಸ್ಥಳದಲ್ಲಿ ಸುಳ್ಳಿನ ಸುಳಿವು ಉಂಟೋ ಅಲ್ಲಿ ತೊಂದರೆಯ ತೊಡಕೂ ಉಂಟು. ಇಂತಹ ತೊಡಕಿಗೆ ಯದುನಾಥ ಗೋಸ್ವಾಮಿಯು ಸ್ಥಲ್ಪ ಸಿಕ್ಕಿದನು. ಅರಿಂದಮನು ಆತನನ್ನು ಕುರಿತು —ತಾವು ನಿನ್ನೆ ರಾತ್ರಿ ಅಂತಹ ದುರ್ಯೋಗದಲ್ಲಿ ಎಲ್ಲಿಂದ ಬರುತ್ತಿದ್ದಿರಿ? ಎಂದು ಪ್ರಶ್ನೆಮಾಡಿದನು.

ಯದುನಾಥ—ಗೋಸ್ವಾಮಿಪುರದಲ್ಲಿ ನಮ್ಮ ಭಾವನ ಮನೆ ಇದೆ; ಅಲ್ಲಿ ನನ್ನ ತಂಗಿ ಬಾಯಿಲೆಯಾದ್ದರಿಂದ ಅವಳನ್ನು ನೋಡುವುದಕ್ಕೆ ಹೋಗಿದ್ದೆ. ಅಲ್ಲಿಂದ ಹಿಂದಿರುಗಿ ಬರುತ್ತಲಿದ್ದೆ.

ಅರಿಂದಮ—ಹಿಂದಿರುಗಿ ಬರುವಾಗ ಈ ರಕ್ತಕಲೆಯು ಬಟ್ಟೆಯನ್ನು ನೀವೇ ಮೊದಲು ನೋಡಿದಿರೋ? ಅಥವಾ ಆ ಸಮಯದಲ್ಲಿ ನಿಮ್ಮ ಸಂಗಡ ಯಾರಾದರೂ ಇದ್ದು ಅವರು ಇದನ್ನು ನಿಮಗೆ ತೋರಿಸಿದರೋ?

ಯದುನಾಥ—ಇಲ್ಲ, ನನ್ನ ಸಂಗಡ ಮತ್ತೆ ಯಾರೂ ಇರಲಿಲ್ಲ; ನಾನೇ ಅದನ್ನು ಮೊದಲು ನೋಡಿದೆ.

ಅರಿಂದಮ—ಒಳ್ಳೆಯದು, ಇದನ್ನು ನೋಡುವುದಕ್ಕೆ ಮೊದಲು ಈ ಅರಣ್ಯದೊಳಕ್ಕೆ ತಾವು ಹೋಗಬೇಕಾದ ಆವಶ್ಯಕತೆ ಏನಾದರೂ ಇದ್ದಿತ್ತೇ?

ಯದುನಾಥ—ಇಲ್ಲ, ನಾನು ಅದರೊಳಕ್ಕೆ ಏಕೆ ಹೋಗಲಿ?

ಅರಿಂದಮ—ಹಾಗಿದ್ದಪಕ್ಷದಲ್ಲಿ, ಆ ಅಂಧಕಾರದಲ್ಲಿ ಅರಣ್ಯದೊಳಗಡೆ ಬಿದ್ದಿದ್ದ ಈ ಬಟ್ಟೆಯನ್ನು ತಾವು ಹೇಗೆ ನೋಡಿದಿರೋ ನನಗೆ ತಿಳಿಯಲಿಲ್ಲ.

ಯದುನಾಥ—ಯಾಕೆ? ಮಿಂಚಿನ ಬೆಳಕಿನಲ್ಲಿ ನಾನು ಅದನ್ನು ನೋಡಿದೆ.

ಅರಿಂದಮ—ಬಟ್ಟೆಯನ್ನು ನೋಡಿದ ನಂತರ, ಬಲಾಯಿಮುಂತಾದ ನನ್ನ ನೋಡುವುದಕ್ಕೆ ಮೊದಲು ತಾವು ಈ ಕಾಡಿನೊಳಕ್ಕೆ ಹೋಗಿದ್ದಿರಾ?

ಯದುನಾಥ—(ಸ್ವಲ್ಪ ಆಲೋಚನೆ)

ಅರಿಂದಮ—ಹೇಳಬಾರದೆ, ಇದರಲ್ಲಿ ಯೋಚಿಸಿ ಹೇಳುವುದೇನಿದೆ?

ಯದುನಾಥ—ಇಲ್ಲ.

ಅರಿಂದಮ—ವಯಸ್ಸು ನಾಲ್ವತ್ತಕ್ಕೆ ಏರಿದ್ದರೂ ಕೂಡ ನಿಮ್ಮ ದೃಷ್ಟಿಶಕ್ತಿಯು ಇಷ್ಟು ಪ್ರಬಲವಾಗಿರುವುದನ್ನು ಕಂಡು ಆಶ್ಚರ್ಯಪಡುತ್ತೇನೆ. ಹಗಲುಹೊತ್ತು ಪ್ರಯತ್ನಪಟ್ಟು ನೋಡಿದರೂ ಹೊರಗಡೆ ಇರುವವರಿಗೆ ಈ ಬಟ್ಟೆ ಕಾಣುವುದು ಸಾಧ್ಯವಿಲ್ಲವೆಂದು ತೋರುತ್ತದೆ; ಅಂತಹುದನ್ನು ತಾವು ಹೊರಗಡೆಯಿಂದಲೇ ರಾತ್ರಿಯು ಮಿಂಚಿನ ಬೆಳಕಿನಲ್ಲಿ ನೋಡಿರುವಿರಿ; ಅದೂ ಅಲ್ಲದೆ ಬಟ್ಟೆಯು ರಕ್ತಕಲೆಯುಳ್ಳದೆಂಬುದನ್ನೂ ತಾವು ಹೊರಗಡೆಯಿಂದಲೇ ನಿರ್ಧರಿಸುವ ಶಕ್ತಿ ತಮಗಿದೆ.

ಏನು ಗೋಸ್ವಾಮಿ ಮಹಾಶಯರೆ, ಇವೆಲ್ಲವೂ ಕೊಂಚ ಅಸಂಭವ ವೆಂದು ತೋರುವುದಿಲ್ಲವೆ?

ಯದುನಾಥ—ನಾನು ನಿಮ್ಮಲ್ಲಿ ಸುಳ್ಳು ಹೇಳುತ್ತಿರುವೆನೆಂದು ತಾವು ತಿಳಿದಿರೊ ಹೇಗೆ?

ಅರಿಂದಮ—ಹಾಗೇಕೆ ತಿಳಿಯಲಿ! ಆದರೆ ತಾವು ನಿಶ್ಚಯವನ್ನು ಹೇಳುತ್ತಿದ್ದೀರೆಂದು ಮಾತ್ರ ನಂಬಲಾರೆ. ಗೋಸ್ವಾಮಿ ಮಹಾಶಯರೇ, ಕೇಳಿ. ನೀವು ಹೇಳಿದ್ದನ್ನೆಲ್ಲಾ ನಂಬುವುದಕ್ಕೆ ಬಲಾಯಿಮಂಡಲಸಹಾಗೆ ನಾನು ಕೂಡ ಒಬ್ಬ ಸರಳ ಏಶ್ವಾಸಿಯೆಂದು ತಿಳಿದುಕೊಳ್ಳಬೇಡಿ. ಅಲ್ಲದೆ ನಾವುಗಳು ಕಣ್ಣುಮುಚ್ಚಿ ಬರೀ ವಿಶ್ವಾಸದಿಂದಲೇ ಕೆಲಸ ಮಾಡತಕ್ಕವರಲ್ಲ. ಪ್ರತಿಯೊಬ್ಬರ ಬಂದೊಂದು ಮಾತಿನಮೇಲೂ ಊಹೆ ಕಟ್ಟುತ್ತಿದ್ದರೆ, ಬಂದಲ್ಲ ಬಂದು ದಾರಿ ಸಿಕ್ಕುವುದು. ಆ ಸೂತ್ರವನ್ನು ಅನುಸರಿಸಿಯೇ ನಮ್ಮ ಕೆಲಸವನ್ನು ಸಾಧಿಸಬೇಕಾಗುವುದು. ಜನರು ಪ್ರಕೃತದ ವರ್ತಮಾನವನ್ನು ಕುರಿತು ಎಲ್ಲಿಯವರೆಗೆ ಯಾವ ವಿಷಯವನ್ನೂ ಸುರೆ ಮಾಜದೆ ನಿಷ್ಕಪಟಿಗಳಾಗಿ ನಮಗೆ ಹೇಳುತ್ತಾ ಬಂದರೋ ಅಲ್ಲಿಯವರೆಗೆ ನಮ್ಮ ಕಾರ್ಯಸಾಧನೆಯ ಮಾರ್ಗವು ನಮಗೆ ತಿಳಿಯಲೇ ಇಲ್ಲ. ಈಗೀಗ ಸ್ವಲ್ಪ ಸುಳ್ಳಿನ ಸುಳುವನ್ನು ಕಂಡುದರಿಂದ ತುಂಬಾ ಭರವಸೆಯುಳ್ಳವನಾಗಿದ್ದೇನೆ; ತಾವು ಹೇಳಿದ ಬಂದೆರಡು ಮಾತು ಕೇಳಿದ್ದರಿಂದ ನಾನು ನಿಮ್ಮ ಸಹಾಯದಿಂದಲೇ ಬೇಗ ಕೃತಕಾರ್ಯನಾಗಬಹುದೆಂದು ನನಗೆ ತುಂಬ ಭರವಸೆಯುಂಟಾಗಿದೆ. ತಾವು ಈ ಕೊಲೆಯ ರಹಸ್ಯದಲ್ಲಿ ಬಂದಲ್ಲ ಬಂದು ಬಗೆಯಲ್ಲಿ ಸೇರಿರುವೆನೆಂಬುವುದು ನಿಮ್ಮ ಮಾತುಗಳಿಂದ ತೋರುತ್ತಲಿದೆ. ಆಗಲಿ, ಹೇಗಾಗುವುದೊ ನೋಡೋಣ.''

ಯದುನಾಥ—(ಕೋಪದಿಂದ) ಆಗಲಿ, ನಾನೇ ಕೊಲೆ ಮಾಡಿದ್ದೇನೆ, ನನ್ನನ್ನೇ ಶಿಕ್ಷೆಗೆ ಗುರಿಮಾಡಿ. ನಿಮ್ಮಲ್ಲಿ ಏಳು ಪಾಲು ಅಧರ್ಮವಿಲ್ಲದಿದ್ದರೆ ಯಾರೂ ನಿಮ್ಮ ಅತ್ಯಾಚಾರಕ್ಕೆ ಸಿಕ್ಕುವಾರರು, ನೀವು ಠಾಣೆಯ ಪೋಲೀಸಿನವರು; ಏನಬೇಕಾದರೂ ಮಾಡಬಲ್ಲಿರಿ.

ಅರಿಂದಮ—(ಮಂದಹಾಸದಿಂದ) ಆಹಾ! ತಾವು ಏಕೆ ಕೋಪಿಸಿ ಕೊಳ್ಳಬೇಕು? ತಾವು ಈಗ ಸ್ವಚ್ಛಂದವಾಗಿ ಸ್ವಸ್ಥಾನಕ್ಕೆ ಪ್ರಸ್ಥಾನ ಮಾಡಬಹುದು. ತಮ್ಮನ್ನು ನಾವು ಇನ್ನೇನೂ ಕೇಳತಕ್ಕದ್ದಿಲ್ಲ.

ಯದುನಾಥಗೋಸ್ವಾಮಿಯು ಮುಖವನ್ನು ಗಂಟುಹಾಕಿ ಕೊಂಡು ಅಲ್ಲಿಂದ ಹೊರಟುಹೋದನು. ಅವನು ಮರೆಯಾಗುವ ತನಕ ಅರಿಂದಮನು ಅವನನ್ನು ಸ್ಥಿರದೃಷ್ಟಿಯಿಂದ ನೋಡುತ್ತಲೇ ಇದ್ದನು.

ಹನ್ನೆರಡನೆಯ ಪರಿಚ್ಛೇದ

ಪದಚಿಹ್ನೆ

ಯೋಗೇಂದ್ರನಾಥನು ಅರಿಂದಮನನ್ನು ಕುರಿತು, — "ಈ ಕೊಲೆಯು ಸಂಬಂಧದಲ್ಲಿ ಯದುನಾಥಗೋಸ್ವಾಮಿಯು ಹೇಳಿ ನಿಮಗೆ ಸಂದೇಹವೆ?

ಅರಿಂದಮನು,—ಯೋಗೇಂದ್ರಬಾಬೂ, ಕೊಲೆಯೆಲ್ಲಿ ಬಂತು? ಆ ಬಾಲಕೆಯನ್ನು ಕೊಂದುಹಾಕಿರುವರೆಂದು ನೀವು ತಿಳಿದಿದ್ದೀರೇನು?

ಯೋಗೇಂದ್ರ—ಈ ರಕ್ತದ ಗುರ್ತುಗಳ ಬಟ್ಟೆ ಮತ್ತೂ ಚೂರಿಗಳನ್ನು ನೋಡಿದರೆ ಕೊಲೆಯಲ್ಲದೆ ಮತ್ತೇನಾಗಿರಬಹುದು? ಮುಖ್ಯವಾಗಿ, ದಸ್ಯುವೊಬ್ಬನು ಚೂರಿಯನ್ನು ಹಿಡಿದು ಆ ಬಾಲಕೆಯನ್ನು ಹಿಂದಟ್ಟಿ ಬಂದನೆಂದು ಕೇಳಿದೆವಷ್ಟೆ. ತಾವು ಏನು ಹೇಳುವಿರಿ?

ಅರಿಂದಮ—ಆ ಬಾಲಕೆ ಮೃತಳಾಗಿಲ್ಲ, ಎಲ್ಲಿಗೂ ಹೋಗಿಯೂ ಇಲ್ಲ. ಈ ಊರಲ್ಲಿಯೇ ಇದ್ದಾಳೆ. ಇಷ್ಟುಮಾತ್ರ ನನ್ನ ಕ್ಷುದ್ರ ಬುದ್ಧಿಗೆ ತೋರಿದಂತೆ ಹೇಳುತ್ತಿದ್ದೇನೆ.

ಯೋಗೇಂದ್ರ—ಆ ಬಾಲಿಕೆಯು "ಕೊಲೆ ಮಾಡಿದರು" ಎಂದು ಬಾರಿ ಬಾರಿಗೂ ಆರ್ತನಾದ ಮಾಡಿದ್ದನ್ನು ವಲಾಯಿಮಂಡಲನು ಕೇಳಿದನಷ್ಟೆ. ಅದೇನು ಅವನ ಸ್ವಪ್ನವಾಗಿರಬಹುದೆ?

ಅರಿಂದಮ—ಸ್ವಪ್ನವಲ್ಲ, ಅದೇ ಕಾರಣದಿಂದ ನನ್ನ ಮನಸ್ಸಿನಲ್ಲಿಯೂ ಸ್ವಲ್ಪ ಶಂಕೆಯುಂಟಾಗಿದ್ದಿತು. ಆದರೆ, ಇಲ್ಲಿಗೆ ಬಂದು ಏನು ಕೇಳಿದೆನೋ, ಮತ್ತೆ ಯಾವುದನ್ನು ನೋಡಿದೆನೋ ಅವುಗಳಿಂದ ಬಾಲಕೆಯು ಇನ್ನೂ ಮೃತಳಾಗಿಲ್ಲ ಎಂಬುವುದು ಚೆನ್ನಾಗಿ ವ್ಯಕ್ತವಾಗುತ್ತಿದೆ.

ಯೋಗೇಂದ್ರ—ಆ ಹುಡುಗಿ ಬದುಕಿರುವಳೆಂಬುದಕ್ಕೆ ನಿಮಗೆ ದೊರೆತ ಪ್ರಮಾಣವೇನು?

ಅರಿಂದಮ—ನನಗೆ ದೊರೆತಿರುವ ನಾಲ್ಕಾರು ಪ್ರಮಾಣಗಳಿಂದ ಬಹುದೂರ ಭರವಸೆಯುಳ್ಳವನಾಗಿದ್ದೇನೆ. ಮೊದಲನೆಯದು, ಈ ಅರಣ್ಯದ ಒಳಗೂ ಹೊರಗೂ ಕೆಸರಿನಲ್ಲಿ ಕಾಣುವ ಹೆಜ್ಜೆಯ ಗುರ್ತುಗಳಲ್ಲಿ ಬಂದಾದರೂ ಆ ಹುಡುಗಿಯ ಹೆಜ್ಜೆಯ ಗುರ್ತೆಂದು ತೋರುವುದಿಲ್ಲ. ಎಲ್ಲವೂ ಉದ್ದವಾಗಿಯೂ ಅಗಲವಾಗಿಯೂ ಇರುತ್ತಿವೆ.

ಯೋಗೇಂದ್ರ—ಹಾಗಿದ್ದರೂ ಇರಬಹುದು, ಆದರೆ ಕೊಲೆಪಾತಕನವನು ಮತ್ತೆಲ್ಲಿಯೋ ಆ ಬಾಲಕೆಯನ್ನು ಕೊಂದು ರಕ್ತದ ಕಲೆಯುಳ್ಳ ಬಟ್ಟೆಯನ್ನೂ ಚೂರಿಯನ್ನೂ ಈ ಅಡಪಿಯಲ್ಲಿ ಬಿಸಾಡಿ ಹೋಗಿರಬಹುದು.

ಅರಿಂದಮ—ಎರಡನೆಯದಾಗಿ, ಕೊಲೆಪಾತಕಿಯ ಯಾವುದೊಂದು ಚಿಹ್ನೆಯೂ ಕಾಣಬರುವುದಿಲ್ಲ; ಈ ಅರಣ್ಯದಲ್ಲಿ ಕೇವಲ ನಾಲ್ಕು ಜನರ ಪದಚಿಹ್ನೆಗಳು ಕಾಣುತ್ತಿವೆ; ನಾಲ್ಕು ಮಂದಿಯಲ್ಲಿ ಒಬ್ಬನು ಪಲಾಯಿಮುಂಡಲ, ಒಬ್ಬನು ಸಾಧುಚರಣ, ಒಬ್ಬನು ಹರೇಕೃಷ್ಣ, ಮತ್ತೊಬ್ಬನು ನಮ್ಮ ಗೋಸ್ವಾಮಿ ಮಹಾಶಯ. ಈ ನಾಲ್ಕು ಮಂದಿಯೇ ಅರಣ್ಯದೊಳಕ್ಕೆ ಪ್ರವೇಶಮಾಡಿದ್ದವರು—ಬಂದು ಗೊತ್ತಾಗುತ್ತದೆ; ನಾಲ್ಕು ಮಂದಿಯ ಕಾಲಿನ ಗುರ್ತು ಕಾಣಿಸುತ್ತಾ ಇದೆ; ಈ ನಾಲ್ವರ ಹೊರತು ಈ ಅರಣ್ಯದೊಳಕ್ಕೆ ಯಾರೂ ಬಂದಿಲ್ಲ; ಬಂದಿದ್ದ ಪಕ್ಷದಲ್ಲಿ ಈ ನಾಲ್ಕು ಚಿಹ್ನೆಗಳ ಜತೆಗೆ, ಒಂದಲ್ಲ ಒಂದುಕಡೆ ಮತ್ತೊಂದು ಹೆಜ್ಜೆಯ ಗುರ್ತೂ ಕಾಣಿಸುತ್ತಲೇ ಇದ್ದಿತು. ಒಂದುವೇಳೆ, ಬಾಲಿಕೆಯು

ನಿಜವಾಗಿಯೂ ಕೊಲೆಯಾಗಿರುವುದಾದರೆ ಈ ನಾಲ್ವರಲ್ಲಿಯೇ ಒಬ್ಬನು ಆ ಬಾಲಕಿಯನ್ನು ಕೊಂದವನಾಗಿರಬೇಕು.

ಹೀಗೆ ಹೇಳುತ್ತಾ ಅರಿಂದಮನು ಎದ್ದನು; ಹೇಳಿಕೆ ಕೊಡುವುದಕ್ಕೋಸ್ಕರ ಬಂದಿದ್ದ ಪಲಾಯಿಮುಂಡಲ, ಸಾಧುಚರಣ, ಹರೇಕೃಷ್ಣ ಮತ್ತು ಯದುನಾಥಗೋಸ್ವಾಮಿ ಇವರುಗಳೆಲ್ಲರ ಹಜ್ಜೆಯ ಗುರ್ತುಗಳು ಕೆಸರಿನಲ್ಲಿರುವುದನ್ನು ಅತನು ನೋಡಿದ್ದನಷ್ಟೆ; ಅವುಗಳೊಡನೆ ಅರಣ್ಯದೊಳಗಡೆ ಇರುವ ಪದಚಿಹ್ನೆಗಳನ್ನು ಒಂದೊಂದನ್ನಾಗಿ ಅಳತೆಗೆ ಸರಿಮಾಡಿ ಯೋಗೇಂದ್ರನಾಥನಿಗೆ ತೋರಿಸಿದನು. ಅಳತೆಯಲ್ಲಿ ಅವೆಲ್ಲವೂ ಸರಿಹೋದುವು. ಯಾವ ಯಾವುದು ಯಾರ ಯಾರ ಕಾಲಿನ ಗುರ್ತೆಂಬುದನ್ನೂ ಹೇಳಿಬಿಟ್ಟನು. ಯೋಗೇಂದ್ರನು ವಿಸ್ಮಯ ವಿಸ್ಫಾರಿತ ನೇತ್ರನಾಗಿ, ಮಾತನಾಡುವುದಕ್ಕೂ ತೋರದೆ, ಒಹಳ ಹೊತ್ತು ಅರಿಂದಮನ ಮುಖವನ್ನೇ ನೋಡುತ್ತಿದ್ದನು.

ಅರಿಂದಮ—ಇನ್ನೂ ಒಂದು ರಹಸ್ಯವಿದೆ; ಈ ಬಟ್ಟೆಗೆ ರಕ್ತ ತಗಲಿರುವ ರೀತಿಯನ್ನು ನೋಡಿದರೆ ಕೊಲೆಯಾಗಿರುವುದೆಂದು ಹೇಳುವುದಕ್ಕೆ ಯಾವ ಪ್ರಮಾಣವೂ ಸಿಗುವ ಹಾಗಿಲ್ಲ. ನನಗೆ ತೋರುವುದೇನೆಂದರೆ, ಯಾರೋ ಬಟ್ಟೆಗೆ ರಕ್ತವನ್ನು ಸವರಿರಬೇಕು. ಮತ್ತು ಈ ಚೂರಿಯಿಂದ ಅಥವಾ ಈ ಬಗೆಯ ಯಾವ ಅಸ್ತ್ರದಿಂದಲಾಗಲೀ ಆ ಬಾಲಕಿಯ ಕೊಲೆ ನಡೆದಿರುವ ಪಕ್ಷಕ್ಕೆ ಈ ಬಟ್ಟೆಯ ಯಾವುದಾದರೊಂದು ಭಾಗದಲ್ಲಿ ಸಂಪೂರ್ಣವಾಗಿ ರಕ್ತವು ತುಂಬಿರುತ್ತಿತ್ತು; ಹೀಗಲ್ಲಿ ಕೊಂಚ, ಅಲ್ಲಿ ಕೊಂಚವಾಗಿ ನಾಲ್ಕು ಕಡೆಯಲ್ಲಿಯೂ ರಕ್ತವಾಗುವುದಕ್ಕೇನು ಕಾರಣ? ಕೊಲೆಮಾಡಿದವನ ಬಟ್ಟೆಗೆ ಈ ರೀತಿಯಾಗಿ ರಕ್ತ ತಗಲಿತೆಂದರೆ ಅಸಂಭವನೇನೂ ಅಲ್ಲ. ಮೇಲಾಗಿ ಕೊಲೆಮಾಡಿದ ನಂತರ ಮೃತದೇಹದಿಂದ ಬಟ್ಟೆಯನ್ನು ಬಿಚ್ಚಿ ತೆಗೆಯುವುದಕ್ಕೂ ಕಾರಣ ತೋರುವುದಿಲ್ಲ. ಹತ್ಯಾಕಾರಿಯು ಮೃತದೇಹದೊಡನೆ ಈ ಬಟ್ಟೆಯನ್ನು ಹೊರುವುದು ಕಷ್ಟಕರವೆಂದು ಭಾವಿಸಿದನೆಂದು ಹೇಳುವುದಕ್ಕೆ ಈ ಬಟ್ಟೆ ಅಷ್ಟು ಭಾರವಾದ ವಸ್ತುವೂ ಅಲ್ಲ.

ಯೋಗೇಂದ್ರ—(ಮುಗ್ಧಚಿತ್ತನಾಗಿ) ತಾವು ಈ ಸಾಮಾನ್ಯ ವಿಷಯಗಳಿಂದ ಇಷ್ಟುದೂರ ನಿರ್ಧಾರಮಾಡಿರುವಿರಲ್ಲ! ಇದೀಗ ಆಶ್ಚರ್ಯ; ನಾನು ಇವುಗಳೆಲ್ಲದರ ಬಂದು-ವಿಸರ್ಗಗಳನ್ನೂ ಗಮನಿಸಲಿಲ್ಲ.

ಅರಿಂದಮ—ಇದು ತಾನೇ ಏನು, ಅನೇಕ ಸಂದರ್ಭಗಳಲ್ಲಿ ಸಾಮಾನ್ಯವಾದೊಂದು ತಲೆಗೂದಲಿನ ಮೇಲೆ ಭರವಸೆಯಿಟ್ಟು ನಾವು ಕೆಲಸ ಮಾಡಬೇಕಾಗುತ್ತದೆ. ಸಂದೇಹ ಪಡುವುದಕ್ಕೆ ಸ್ವಲ್ಪ ಅವಕಾಶ ಸಿಕ್ಕಿದರೂ ಸಾಕು, ಅದನ್ನೇ ಹಿಡಿದು ನಾವು ಸಾವಿರ ಬಾರಿ ಅಳೆದೂ ಸುರಿದೂ ಶೋಧನೆಮಾಡಿ ನೋಡಬೇಕಾಗುವುದು.

ಯೋಗೇಂದ್ರ—ಕೊಲೆಯೇ ಆಗದಿರುವ ಸಂದರ್ಭದಲ್ಲಿ, ಬಾಲ ಕೆಯು ಬದುಕಿರುವುದಾದರೆ, ಯದುನಾಥಗೋಸ್ವಾಮಿಯ ಮೇಲೆ ತಾವು ನಿರರ್ಥಕವಾಗಿ ಸಂದೇಹಪಟ್ಟುದೇಕೆ?

ಅರಿಂದಮ—ಕೊಲೆಯಾಗಿಲ್ಲ ಎಂಬ ಕಾರಣದಿಂದ ಯಾರಮೇಲೂ ಸಂದೇಹಿಸಬಾರದೆಂಬುದು ಎಂತಹ ಮಾತು? ಗೋಸ್ವಾಮಿಯು ಕೊಲೆ ಮಾಡಿರುವನೆಂದು ನಾನು ಊಹಿಸಿಲ್ಲ. ಗೋಸ್ವಾಮಿ ಈ ರಹಸ್ಯದಲ್ಲಿ ಬಂದಿಲ್ಲದಿದ್ದರೆ ಬಂದು ಅಂಶವನ್ನಾದರೂ ತಿಳಿದವನಾಗಿಯೇ ಇರಬೇಕೆಂದು ಊಹಿಸುತ್ತೇನೆ; ಇಲ್ಲವಾದರೆ ಅವನು ಯಾವ ಉದ್ದೇಶದಿಂದ ಸುಳ್ಳು ಹೇಳಿರಬೇಕು. ಅವಶ್ಯಕವಾಗಿಯೂ ಸುಳ್ಳುಹೇಳಿ ಯಾವುದೋ ವಿಷಯವನ್ನು ನಮ್ಮ ದೃಷ್ಟಿಗೆ ಬೇಳದಂತೆ ಮಾಡಬೇಕೆಂದೇ ಅವನು ಪ್ರಯತ್ನಿಸಿರಬೇಕು. ಗೋಸ್ವಾಮಿ ಮಹಾಶಯನು ತಾನು ಈ ಅರಣ್ಯದೊಳಕ್ಕೆ ಪ್ರವೇಶಮಾಡಿದ್ದು ಬಂದೇಜಾರಿ ಎಂದೂ, ಪುನಃ ಪ್ರವೇಶ ಮಾಡಲೇ ಇಲ್ಲವೆಂದೂ ಹೇಳಿದನಲ್ಲವೆ? ಆದರೆ ಅವನು ಈ ಅರಣ್ಯದೊಳಕ್ಕೆ ಬರಬೇಜಾರಿ ಹೋಗಿದ್ದನೆಂಬುದಕ್ಕೆ ಪ್ರಮಾಣವು ಇಲ್ಲವೆ, ನೋಡಿ; ಗೋಸ್ವಾಮಿಯು ಕಾಲಿನ ಗುರುತು ಒಂದೇ ಕಡೆಗೆ ಬರಬೇಜಾರಿ ಬಿದ್ದಿದೆ. ಇಲ್ಲಿ ನೋಡಿ, ಇದು ಗೋಸ್ವಾಮಿ ಮಹಾಶಯನ ಬಲಗಾಲ ಹೆಜ್ಜೆಯ ಗುರುತು. ಇದಕ್ಕೆ ಬಂದು ಅಂಗುಲ ದೂರದಲ್ಲಿ, ಸ್ವಲ್ಪ

ಹೆಚ್ಚು ಕಡಿಮೆ ಪಕ್ಕದಲ್ಲಿಯೇ ಇದೇ ರೀತಿಯಾಗಿ, ಇದೇ ಕಡೆಗೆ ತಿರುಗಿರುವ ಮತ್ತೂ ಒಂದು ಬಲಗಾಲ ಹೆಜ್ಜೆಯ ಗುರುತಿದೆ. ಈ ಚಿಹ್ನೆಗಳು ಜೇರೆ ಜೇರೆ ಕಡೆಗೆ ತಿರುಗಿಬಿದ್ದಿದ್ದ ಪಕ್ಕದಲ್ಲಿ ಈ ಬಲಗಾಲು ಗುರುತು ಹಿಂದಿರುಗುವಾಗ ಬದ್ದುದೆಂದು ಊಹಿಸಬಹುದಾಗಿದ್ದಿತು.

ಯೋಗೇಂದ್ರ—ಅದು ಹೀಗಿದ್ದರೂ ಇರಬಹುದು, ಇದರೊಳಕ್ಕೆ ಹೋಗುವಾಗ ಆತನು ಈ ಸ್ಥಳದಲ್ಲಿ ಸ್ವಲ್ಪಹೊತ್ತು ನಿಂತಿರಬಹುದು. ಯಾವುದೋ ಕಾರಣದಿಂದ ಪುನಃ ಸ್ವಲ್ಪ ಪಕ್ಕಕ್ಕೆ ಸರಿದು ನಿಂತಿರಬಹುದು. ಇದರಿಂದ ಒಂದೇ ಕಾಲಿನ ಗುರ್ತು ಒಂದೇ ಮುಖವಾಗಿ ಹೀಗೆ ಅಕ್ಕಪಕ್ಕದಲ್ಲಿ ಬೇಳುವುದೇನೂ ವಿಚಿತ್ರವಲ್ಲ.

ಅರಿಂದಮ—ಒಂದು ಕಡೆಯಲ್ಲಿ ಮಾತ್ರ ಹೀಗೆ ಬಿದ್ದಿದ್ದ ಪಕ್ಕದಲ್ಲಿ ನಿಮ್ಮ ಯುಕ್ತಿಯು ನ್ಯಾಯವಾಗಿಯೇ ಇರುತ್ತಿದ್ದಿತು. ನೋಡಿರಿ, ಒಂದೊಂದು ಕಡೆಯೂ ಈ ರೀತಿಯಾದ ಚಿಹ್ನೆಗಳೇ ಇವೆ; ಕೆಲವು ಕಡೆಗಳಲ್ಲಿ ಸ್ವಲ್ಪ ದೂರದಲ್ಲಿ ಬಿದ್ದಿದೆ. ಹಿಂದಿರುಗುವಾಗ ಮಾತ್ರ ಪದಚಿಹ್ನವು ಹೀಗೆ, ಒಂದೇ ಕಾಲಿನ ಗುರ್ತು ಒಂದರ ಪಕ್ಕದಲ್ಲೊಂದರ ಹಾಗೆ ಒಂದೇ ಕಡೆಗೆ ತಿರುಗಿಬಿದ್ದಿರುವಂತೆ ಕಾಣುವುದಿಲ್ಲ. ಇದಕ್ಕೆ ಕಾರಣವಿದೆ, ಆತನು ಮೊದಲನೆಯ ಸಲ ಈ ಮಾರ್ಗವಾಗಿ ಬಂದಷ್ಟು ಇದೇ ದಾರಿಯಿಂದಲೇ ಹಿಂದಿರುಗಿ ಹೋಗಿಲ್ಲ. ಇಲ್ಲಿ ನೋಡಿ, ಉತ್ತರ ಕಡೆ ಎಲ್ಲರ ಪದಚಿಹ್ನಗಳು ಜೇರೆಜೇರೆ ಕಡೆಗೆ ಹೋಗಿವೆ. ಇವೂಕೂಡ ಗೋಸ್ವಾಮಿ ಮಹಾಶಯನವು. ಆತನು ಒಂದು ಸಲ ಈ ಉತ್ತರ ಕಡೆಯಲ್ಲಿ ಕಾಡಿನಿಂದ ನಡೆದುಹೋಗಿದ್ದಾನೆ. ನಾನು ಈ ಗುರುತುಗಳನ್ನು ನೋಡಿ ಗುರ್ತಿಸಿಯೂ ಇದ್ದೇನೆ; ಇವು ಗೋಸ್ವಾಮಿ ಮಹಾಶಯನವು; ಆದರೆ ನಿಮಗೆ ಅಳತೆಮಾಡಿ ತೋರಿಸದಿದ್ದರೆ ನೀವು ಗುರ್ತಿಸಲಾರಿರಿ.

ಹೀಗೆಂದು ಹೇಳಿ ಅರಿಂದಮನು ಯೋಗೇಂದ್ರನಾಥನಿಗೆ ಆ ಪದಚಿಹ್ನೆಗಳನ್ನು ಅಳತೆಮಾಡಿ ತೋರಿಸಿದನು. ಅನಂತರ ಹೇಳಿದನು. "ಗೋಸ್ವಾಮಿ ಮಹಾಶಯನು ಈ ಸ್ಥಳಕ್ಕೆ ಎರಡಾವರ್ತಿ ಬಂದಿದ್ದ

ಸೆಂಬುದರ ಪ್ರಮಾಣವನ್ನು ನೀವು ಈಗ ಸ್ಪಷ್ಟವಾಗಿ ತಿಳಿದಿರುತ್ತೀರಿ; ಆದರೆ ಗೋಸ್ವಾಮಿ ಮಹಾಶಯನು ತಾನು ಇಲ್ಲಿಗೆ ಪ್ರವೇಶಮಾಡಿದ್ದು ಒಂದೇಬಾರಿ ಎಂದು ಸುಳ್ಳು ಹೇಳಿರುವುದರಲ್ಲಿ ಯಾವುದೋ ರಹಸ್ಯವಾದ ಅಭಿಪ್ರಾಯವು ಇದ್ದೇ ಇರಬೇಕು. ಇದೂ ಅಲ್ಲದೆ ಈ ಚೂರಿಯ ಬಗ್ಗೆ ವಿಚಾರವಾಗಿಯೂ ಒಂದೆರಡು ಮಾತು ಹೇಳುವುದಿದೆ; ಚೂರಿಯು ಉದ್ದವಾಗಿಯೂ ಅಗಲವಾಗಿಯೂ ಇರುವುದರಿಂದ ಇದು ಕೊಲೆಗಾರನ ಚೂರಿಯಾಗಿರುವುದೇನೋ ನಿಶ್ಚಯ. ಆದರೇನು? ಚೂರಿಯಿಂದ ಬಾಲಕಿಗೆ ಏನೋ ವಿಷಪ್ರಯೋಗವಾಗಿದೆಯೆಂದು ತೋರುವ ಹಾಗೆ, ಏನೂ ಇರುವುದಿಲ್ಲ. ಹಾಗಿದ್ದ ಪಕ್ಷದಲ್ಲಿ ಈ ಚೂರಿಯ ಒಂದು ಕಡೆಯಲ್ಲದಿದ್ದರೆ ಇನ್ನೊಂದು ಕಡೆಯಲ್ಲಿಯಾದರೂ ರಕ್ತದ ಕಲೆಯನ್ನು ಸ್ವಲ್ಪವಾದರೂ ಕಾಣಬೇಕಾಗಿತ್ತು.

ಯೋಗೇಂದ್ರ—ಈ ರೀತಿ ಮಳೆ ಸುರಿಯಿತು, ಅದರಿಂದ ರಕ್ತದ ಕಲೆ ತೊಳೆದುಹೋಗಿರಬಹುದಲ್ಲ?

ಅರಿಂದಮ—ಚೂರಿಯ ಯಾವ ಭಾಗವು ಮೇಲಿನ ಭಾಗವಾಗಿದ್ದಿತೋ ಆ ಭಾಗದ ರಕ್ತ ಕಲೆಯು ಮಳೆಯಿಂದ ತೊಳೆದು ಹೋಗಿರಬಹುದು; ಆದರೆ ತಳಭಾಗದಲ್ಲಿ ಕೊಂಚವಾದರೂ ರಕ್ತದ ಕಲೆ ಕಂಡು ಬರುವುದಿಲ್ಲ. ಕೈ ಹಿಡಿಯ ಗೂಡಿನಲ್ಲಿಯಾದರೂ ಅಲ್ಪಸ್ವಲ್ಪ ರಕ್ತವು ಇದ್ದಿರಬೇಕು; ಒಟ್ಟಿನಲ್ಲಿ, ಅಂತಹ ಭಾರಿ ಮಳೆಯಾಯಿತೆಂದೂ ತೋರುವುದಿಲ್ಲ. ಅಂತಹ ಮಳೆಯಾಗಿದ್ದ ಪಕ್ಷದಲ್ಲಿ ಈ ಪದಚಿಹ್ನೆಗಳೆಲ್ಲ ಇಷ್ಟು ಸ್ಪಷ್ಟವಾಗಿ ಕಾಣುತ್ತಿರಲ್ಲಿಲ್ಲ. ಅಲ್ಲದೆ ಬಟ್ಟೆಗೆ ತಗಲಿರುವ ರಕ್ತದ ಕಲೆಯೂ ಇಷ್ಟು ಗಾಢತರವಾಗಿರುತ್ತಿರಲಿಲ್ಲ. ಮಳೆಯು ನೀರಲ್ಲಿ ಹೆಚ್ಚಾಗಿ ತೊಯ್ದುಹೋಗಿ ಬಹುಮಟ್ಟಿಗೆ ವಿವರ್ಣವಾಗಿ ಕಾಣಿಸುತ್ತಿದ್ದಿತು. ಇನ್ನು ಈ ಹೆರಳ ಸೂಜಿಯು ವಿಚಾರವಾಗಿ ಒಂದೆರಡು ಮಾತು ಹೇಳುವುದಿದೆ. ಈ ಎರಡು ಸೂಜಿಗಳ ದೆಸೆಯಿಂದ ನನ್ನ ಇನ್ನೊಂದು ಕೆಲಸಕ್ಕೆ ತುಂಬ ಸಹಾಯವಾಗುವ ಹಾಗಿದೆ. ಎರಡು ದಿನಗಳ ಹಿಂದೆ ಠಾಣೆಯಲ್ಲಿ, ಪೆಟ್ಟಿಗೆಯೊಳಗೆ ಯಾವ ಬಾಲಿಕೆಯ ಮೃತ

ದೇಹವನ್ನು ನೋಡಿದ್ದೆನೋ ಆ ಬಾಲಕೆಯ ಕೊಲೆಗೆ ಈ ದಿನದ ಘಟನೆಯು ಬಹುಮಟ್ಟಿಗೆ ಸಂಬಂಧಿಸಿರುವುದಾಗಿ ಕಾಣಿಸುತ್ತದೆ. ಅಂದು, ಪೆಟ್ಟಿಗೆಯಲ್ಲಿ ಎರಡು ಹೆರಳು ಸೂಜಿಗಳು ಸಿಕ್ಕಿದುವು; ಇಂದು ಇಲ್ಲಿ ಎರಡು ಸೂಜಿಗಳು ಸಿಕ್ಕಿದುವು; ಒಬ್ಬನೇ ಕೆಲಸಗಾರನಿಂದ ತಯಾರಾದವು, ಒಂದೇ ಅಳತೆ, ಒಂದೇ ಮಾದರಿ.

ಹೀಗೆಂದು ಹೇಳಿ ಹಿಂದೆ ಸಿಕ್ಕಿದ್ದ ಆ ಎರಡು ಹೆರಳು ಸೂಚಿಗಳನ್ನು ಹೊರಕ್ಕೆ ತೆಗೆದು ಮತ್ತೆರಡರ ಜತೆಗೆ ಸೇರಿಸಿ ಯೋಗೇಂದ್ರನಾಥನ ಮುಂದೆ ಹಿಡಿದು,—ಈಗ ಈ ಸೂಜಿಗಳಲ್ಲಿ ಹಿಂದೆ ಸಿಕ್ಕಿದ್ದ ಆ ಎರಡು ಸೂಜಿಗಳನ್ನು ತೋರಿಸಬಲ್ಲಿರಾ?— ಎಂದು ಅರಿಂದಮನು ಪ್ರಶ್ನೆ ಮಾಡಿದನು.

ಯೋಗೇಂದ್ರನಾಥ—ಎಲ್ಲವೂ ಒಂದೇ ಮಾದರಿ. ಹೇಗೆ ಗುರ್ತಿಸಲಿ?

ಅನಂತರ ಅರಿಂದಮನು ತನ್ನ ಕಿಸೆಯ ಪುಸ್ತಕವನ್ನು ತೆಗೆದು ಕಡೆಯ ಹಾಳೆತೆರೆದು ಯೋಗೇಂದ್ರನಾಥನ ಕೈಗೆ ಕೊಟ್ಟನು. ಅದನಲ್ಲಿ * ಈ ಬಗೆಯಾಗಿ ಅಗಸನ ಗುರುತು ಹಾಕಿರುವ ಬಟ್ಟೆಯ ಒಂದು ತುಂಡು ಅಂಟಿಸಿತ್ತು. ಯೋಗೇಂದ್ರನಾಥನು ನೋಡಿ,—ಇದೇನು ಮತ್ತೆ—ಏನೂ ಗೊತ್ತಾಗುವುದಿಲ್ಲವಲ್ಲ. ನಿನ್ನ ಸಹವಾಸವಲ್ಲವೂ ಅನ್ಯಥವಾದುದೇ—ಎಂದು ಹೇಳಿದನು.

ಅರಿಂದಮ—ಅಂತಹ ವಿಶೇಷವೇನೂ ಇಲ್ಲ. ಆದರೆ ಇದರಿಂದ ಈಗ ತುಂಬ ಅನುಕೂಲವೇ ಆಯಿತೆಂದು ಹೇಳಬೇಕು. ತಾಣೆಯಲ್ಲಿ ಸಿಕ್ಕಿದ ಆ ಮೃತ ಬಾಲಕೆಯ ಬಟ್ಟೆಯಲ್ಲಿ ಅಗಸರ ಗುರುತು ಯಾವ್ದಿದ್ದಿತೋ ಅದೇ ಇದು; ಇಂದು ಇಲ್ಲಿಯ ಘಟನೆಯಲ್ಲಿ ಸಿಕ್ಕಿರುವ ಈ ರಕ್ತ ಕಲೆಯ ಬಟ್ಟೆಯಲ್ಲಿ ಇರುವ ಅಗಸರ ಗುರುತಿಗೂ ಇದಕ್ಕೂ ಏನೂ ವ್ಯತ್ಯಾಸ ಕಾಣುವುದಿಲ್ಲ; ಆದುದರಿಂದಲೇ ಅಂದಿನ ಘಟನೆಗೂ ಇಂದಿನ ಘಟನೆಗೂ ಬಹುವಾಗಿ ಸಂಬಂಧವುಂಟೆಂದು ಹೇಳುತ್ತೇನೆ. ಆದಿನ ಆ ಬಾಲಕೆಯ ಮೃತದೇಹವನ್ನು ನೋಡಿದಾಗ ಈ ಹೆರಳು ಸೂಜಿ ಮತ್ತೂ ಈ ಅಗಸರ ಗುರ್ತು ಇವುಗಳ ಹೊರತು ಪತ್ತಾಕಾರಿಯನ್ನು

ಹಿಡಿವುದಕ್ಕೆ ಯಾವ ಸೂತ್ರವೂ ಸಿಕ್ಕಲಿಲ್ಲ. ಅಂದಿನದಿನ ನೀವು ಹೇಳಿದುದನ್ನು ಕೇಳಿದಾಗಲಂತೂ ಬಹು ರಹಸ್ಯಮಯವಾದುದೆಂದು ತೋರಿತು; ಹೇಗಾದರೂ ಆಗಲಿ, ಮುಂದೆ ಕೃತಕಾರ್ಯನಾಗಬಲ್ಲೆನೆಂದು ಈಗ ಭರವಸೆಯಾಯಿತು.

ಯೋಗೇಂದ್ರನಾಥನೊಡನೆ ಅರಿಂದಮನು ಮತ್ತೇನೂ ಮಾತನಾಡಲಿಲ್ಲ. ಯೋಗೇಂದ್ರನಾಥನು ಒಬ್ಬ ಪೋಲೀಸಿನವನ ಮೂಲಕ ಆ ರಕ್ತದ ಕಲೆಯ ಬಟ್ಟೆಯನ್ನೂ ಚೂರಿಯನ್ನೂ ತಾಣಕ್ಕೆ ತೆಗೆಯಿಸಿಕೊಂಡು ಹೋದನು. ಅರಿಂದಮನು ಮನೆಗೆ ಹಿಂದಿರುಗಿದನು.

ಹದಿಮೂರನೆಯ ಪರಿಚ್ಛೇದ

ಈ ಸುಂದರಿ ಯಾರು?

ಮರುದಿನ ಮಧ್ಯಾಹ್ನದ ಮೇಲೆ, ಅರಿಂದಮನು ಒಬ್ಬಂಟಿಗನಾಗಿ ಹೊರಟನು. ಯದುನಾಥಗೋಸ್ವಾಮಿಯ ಮನೆಗೆ ಇದಿರಾಗಿಯೇ ಹೋದನು. ಅಲ್ಲಿಗೆ ಹೋಗಿ ಸೇರುವ ಹೊತ್ತಿಗೆ ಹೊತ್ತು ಮುಳುಗುತ್ತ ಬಂದಿತು. ಯದುನಾಥಗೋಸ್ವಾಮಿಯ ಮನೆ ಬಂದಂತಸ್ತಿನದು; ಸಣ್ಣವೂ ದೊಡ್ಡವೂ ಸೇರಿ ಬಲ್ಲ ನಾಲ್ಕೈದು ಕೊಠಡಿಗಳಿವೆ; ಮನೆ ಹಳೆಯದು, ಹೊರಗಡೆ ನಾಲ್ಕೂ ಕಡೆ ಗೋಡೆಗೆ ಉಪ್ಪು ಪಿಡಿದು ಮಣ್ಣು ಉದುರುತ್ತಿದೆ. ಒಂದು ಕಡೆ ಕುಂಬಳ, ಇನ್ನೊಂದು ಕಡೆ ಹೂಗುಂಬಳ, ಮತ್ತೊಂದು ಕಡೆ ಸೋರೆ, ಇನ್ನೊಂದು ಕಡೆ ಹೀರೆ ಮೊದಲಾದ ತರಕಾರಿಯ ಬಳ್ಳಿಗಳು ಛಾವಣಿಗೆ ಹಬ್ಬಿ ಮನೆಯ ಛಾವಣಿ ಮನ್ನೆಲ್ಲಾ ಆವರಿಸಿದ್ದುವು. ಕಡೆಗೆ ಸ್ಥಳವು ಸಾಲದೇ ಹೋದ್ದರಿಂದ ನಾಲ್ಕು ಕಡೆ ಮೇಲ್ಛಾವಣಿಯಿಂದಲೂ ತೂಗಾಡುತ್ತಿದ್ದುವು.

ಇವೆಲ್ಲವನ್ನೂ ನೋಡುತ್ತಿದ್ದಹಾಗೆಯೇ ಅರಿಂದಮನ ದೃಷ್ಟಿಯು ತೆರೆದಿದ್ದ ಕಿಟಕಿಯೊಂದರ ಮೇಲೆ ಬಿದ್ದಿತು; ಅವನು ಅತ್ತಕಡೆ ನೋಡದಿರೆ ಇಲ್ಲವೋ ಒಬ್ಬ ಹೆಂಗಸು ಭಯಚಕಿತಳಾಗಿ ಅಲ್ಲಿಂದ ಸರಿದು

ಹೋದಳು; ಇದನ್ನು ಅರಿಂದಮನು ನೋಡಿದನು. ಏಂಬಚಿಗೂ ಸಹ ಅವಳ ವೇಗವು ಇರುವುದಿಲ್ಲವೆಂದು ತೋರುತ್ತದೆ. ಎವೆಯಿಕ್ಕುವುದರೊಳಗಾಗಿ ಏನನ್ನು ನೋಡಿದನೋ ಅಷ್ಟರಿಂದಲೇ ಅರಿಂದಮನು ಆ ಹೆಂಗಸು ವಯಸ್ಸಾದವಳಲ್ಲ, ಬಹು ರೂಪವತಿ, ಒಹು ಸುಂದರವಾದ ಮುಖ; ಆದರೆ ಅದೆಷ್ಟು ಸುಂದರವಾಗಿದ್ದಿತೋ ಅದಕ್ಕೆ ತಕ್ಕಹಾಗೆ ಪ್ರಫುಲ್ಲವಾಗಿಲ್ಲ ಎಂಬಷ್ಟನ್ನೂ ತಿಳಿದನು. ಪುನಃ ಅವಳನ್ನು ನೋಡುವ ಸಲುವಾಗಿ ಅರಿಂದಮನು ಇನ್ನೂ ಸ್ವಲ್ಪ ಹೊತ್ತು ಎವೆಯಿಕ್ಕದೆ ಅತ್ಯಾಕಾಂಕ್ಷೆಯೇ ನೋಡುತ್ತ ನಿಂತಿದ್ದನು; ಆದರೆ ಅವಳನ್ನು ಕಾಣಲಿಲ್ಲ. ಇವಳು ಯಾರು? ಯದುನಾಥಗೋಸ್ವಾಮಿಯ ಮಗಳಾಗಿದ್ದರೂ ಇರಬಹುದು; ಆದರೆ, ಯದುನಾಥಗೋಸ್ವಾಮಿಗೆ ಮಕ್ಕಳಿಲ್ಲವೆಂದು ಬಲರಾಮಮಂಡಲನಿಂದ ಕೇಳಿದೆನು. ಹೆಂಡತಿಯೊಬ್ಬಳ ಏನಾ ಅವನ ಕುಟುಂಬದಲ್ಲಿ ಮತ್ತಾರೂ ಇಲ್ಲವಂತೆ. ಬ್ರಾಹ್ಮಣರಲ್ಲಿ ಆಸೇಕರು ತಮ್ಮ ಜೀವಮಾನದ ಚರಮಾವಸ್ಥೆಯಲ್ಲಿರುವಾಗಲೂ ಕೂಡ ಕುಲಗೌರವಗಳ ಬಲದಿಂದ ಮದುವೆಯಾಗುವುದುಂಟು; ಆದೃಷ್ಟಬಲದಿಂದ ಗೋಸ್ವಾಮಿ ಮಹಾಶಯನಿಗೆ ಇನ್ನೂ ಐವತ್ತು ವರುಷವಾಗಿಲ್ಲ. ಆನಕಾರಣ ಈಗ ನೋಡಿದವಳು ಇವನ ಮಗಳಲ್ಲ, ಈ ವೃದ್ಧನ ತರುಣೀ ಭಾರ್ಯೆಯಾಗಿದ್ದರೂ ಇರಬಹುದು—ಎಂದುಕೊಂಡನು.

ಈ ರೀತಿಯಾಗಿ ಅರಿಂದಮನು ಆಲೋಚಿಸುತ್ತಿರುವಾಗ್ಗೆ ತೆರೆದಿದ್ದ ಆ ಕಿಟಕಿಯಲ್ಲಿ ವಯಸ್ಸಾದ ಹೆಂಗಸೊಬ್ಬಳು ಕಾಣಬಂದಳು. ಅವಳು ಕೂಡ ಒಂದು ಸಲ ಅರಿಂದಮನನ್ನು ನೋಡಿ ಕೂಡಲೇ ಅಲ್ಲಿಂದ ಹೊರಟುಹೋದಳು. ಅರಿಂದಮನ ಸಂಶಯವು ಮತ್ತೂ ಹೆಚ್ಚಿತು. ಆಲೋಚಿಸಿದನು; ಇವಳು ಗೋಸ್ವಾಮಿ ಮಹಾಶಯನ ಹೆಂಡತಿಯಾಗಿರಬೇಕು; ಅದರೆ ಇವಳನ್ನು ನೋಡುವುದಕ್ಕೆ ಮೊದಲು ನೋಡಿದೆನಲ್ಲಾ ಆ ಯುವತಿ ಯಾರು? ಗೋಸ್ವಾಮಿ ಮಹಾಶಯನಿಗೂ ಅವಳಿಗೂ ಏನು ಸಂಬಂಧ?

ಆ ಸ್ಥಳದಲ್ಲಿ, ಆ ರೀತಿಯಾಗಿ ಬಹಳ ಹೊತ್ತು ನಿಂತುಕೊಂಡಿರುವುದು ಮರ್ಯಾದಸ್ಥರಿಗೆ ತಕ್ಕ ಕೆಲಸವಲ್ಲವೆಂದು ತಿಳಿದು ಅರಿಂದಮನು

ಅಲ್ಲಿಂದ ಹೊರಟುಬಂದನು. ಏತಕ್ಕೆಂದರೆ ಆ ಭಾಗವು ಯದುನಾಥಗೋ ಸ್ವಾಮಿಯ ಒಳ ಮನೆಯ ಪಿಂಭಾಗ. ಅರಿಂದಮನು ಆಗ ಗೋಸ್ವಾಮಿ ಮಹಾಶಯನನ್ನು ನೋಡುವ ಉದ್ದೇಶದಿಂದ ಮುಂಭಾಗದ ಮನೆಯ ಬಳಿಗೆ ಬಂದನು. ಆ ಭಾಗದ ಎಲ್ಲ ಕಿಟಕಿಗಳೂ ಬಾಗಿಲೂ ಭದ್ರವಾಗಿ ಮುಚ್ಚಿದ್ದುವು. ಅಲ್ಲಿಗೆ ಬಂದ ಕೂಡಲೇ ಒಳಗೆ ಯಾರೋ ಅಸ್ಫುಟ ಸ್ವರದಿಂದ ಮಾತನಾಡುತ್ತಿರುವುದು ಕೇಳಿಸಿತು; ಆಗ ಆತನು ಮುಚ್ಚಿದ್ದ ಒಂದು ಕಿಟಕಿಯ ಒಳಿಗೆ ಒಂದು ಕಿವಿಗೊಟ್ಟು ಆಲೈಸಿ ಕೇಳುತ್ತಾ ನಿಂತು ಕೊಂಡನು. ಒಂದೆರಡುಮಾತು ಕೇಳಿದವನೇ—ಒಳಗಡೆ ಭಯಂಕರವಾದ ಮತ್ತೊಂದು ಪಿತೂರಿಯಾಗುತ್ತಿದೆ—ಎಂದು ಊಹಿಸಿದನು. ಆಗ ಆತನ ಮನಸ್ಸಿನ ಸಂದೇಹವೆಲ್ಲವೂ ದೂರವಾಯಿತು. ಕಿಟಕಿಯ ಕಿಂಡಿಯಿಂದ ನೋಡಿದನು. ಆ ಕೊಠಡಿಯಲ್ಲಿ ಇಬ್ಬರು ಕುಳಿತಿರುವರು. ಅವರಲ್ಲಿ ಒಬ್ಬನನ್ನು ಗುರ್ತಿಸಿದನು. ಯದುನಾಥ ಗೋಸ್ವಾಮಿ; ಇನ್ನೊಬ್ಬನು ಇನ್ನೊಂದು ಕಡೆಗೆ ತಿರುಗಿಕೊಂಡು ಕುಳಿತಿದ್ದನು. ಆತನನ್ನು ಗುರ್ತಿಸಲಾಗಲಿಲ್ಲ.

ಸುಮಾರು ಒಂದು ಗಂಟೆ ಕಳೆಯಿತು; ಇನ್ನೂ ಯದುನಾಥ ಗೋಸ್ವಾಮಿಯೊಡನೆ ಆ ಅಪರಿಚಿತ ವ್ಯಕ್ತಿಯು ಅದೇ ರೀತಿಯಾದ, ರಹಸ್ಯಮಯವಾದ ಪರಾಮರ್ಶಗಳು ನಡೆಯುತ್ತಲೇ ಇದ್ದುವು. ಅರಿಂದಮನು ಹೊರಗಡೆ ನಿಂತುಕೊಂಡು ಏಕಾಗ್ರತೆಯಿಂದ ಕೇಳುತ್ತಲೇ ಇದ್ದನು; ಅವರವರ ಆ ಸಂಭಾಷಣೆಯು ಅವನ ಮನಸ್ಸನ್ನು ಕ್ರಮಶಃ ಹೆಚ್ಚು ಹೆಚ್ಚಾಗಿ ಆಕರ್ಷಿಸುತ್ತಿರುತ್ತು. ಒಳಗಡೆ ನಡೆಯುತ್ತಿದ್ದ ರಹಸ್ಯ ಮಯವಾದ ಮಂತ್ರಾಲೋಚನೆಯು ಮುಗಿಯುತ್ತ ಬಂದಾಗ ಅರಿಂದಮನು ಬಂದಾವರ್ತಿ ಹೊರಗಡೆ ನೋಡಿದನು. ಸಂಧ್ಯಾ ಕಾಲವು ಕಳೆದು ಒಹಳ ಹೊತ್ತಾಗಿ ಹೋಗಿದೆ; ಮತ್ತೂ ಶುಕ್ಲಾಷ್ಟಮಿಯ ಅರ್ಧಚಂದ್ರನು ಗಗನ ಮಧ್ಯವನ್ನು ಬಿಟ್ಟು ಪಶ್ಚಿಮಕಡೆ ಬಹುದೂರ ನಡೆದು ಹೋಗಿದ್ದಾನೆ. ಆತನಿಗೆ ಸಮೀಪದಲ್ಲಿಯೂ ದೂರದಲ್ಲಿಯೂ ಚಂದ್ರ ಕಿರಣಗಳಿಂದ ಉಜ್ವಲತರವಾಗಿ ಕಾಣುತ್ತಿದ್ದ ಚಂಚಲವಾದ

ಬಳಿಯ ನೋಡಗಳು ನಿರ್ಮಲವಾದ ಆಕಾಶದಲ್ಲಿ ತೇಲಿಕೊಂಡು ಹೋಗುತ್ತಿವೆ.

ಅರಿಂದಮನು ಆ ಕಿಟಕಿಯ ಕಿಂಡಿಯಲ್ಲಿ ನೋಡಿದನು. ಆಗ ಗೋಸ್ವಾಮಿಯು ದೀಪದ ಹತ್ತಿರ ತಲೆ ತಗ್ಗಿಸಿಕೊಂಡು ಒಂದು ಕಾಗದ ಬರೆಯುತ್ತಿದ್ದಾನೆ ; ಆ ಅಪರಿಚಿತ ಸ್ತ್ರೀಯು ಅತನಿಗೆ ಇನಿ ರಾಗಿ ನಿಂತುಕೊಂಡಿದ್ದಾಳೆ ; ದೀಪದ ಜ್ಯೋತಿಯಿಂದ ಅವನ ಮುಂದಿನ ಒಂದು ಭಾಗವು ಕಾಣಿಸುತ್ತಿದೆ. ನೋಡುವುದಕ್ಕೆ ಮನುಷ್ಯನು ತುಂಬಿ ಕುರೂಪಿ. ಮೈಕಟ್ಟು ಬಲವಾದದ್ದು ಮತ್ತೂ ನೀಳವಾದದ್ದು. ಅರಿಂದಮನು ಅವನನ್ನು ಗುರ್ತಿಸಲಾರದೇ ಹೋದನು ; ಹಿಂದೆ ಯಾವಾಗಲೋ ಎಲ್ಲಿಯೋ ನೋಡಿದ್ದೇನೆಂಬುದು ಕೂಡ ಅವನಿಗೆ ತಿಳಿಯದೆ ಹೋಯಿತು. ಕಾಗದ ಬರೆಯುವ ಉದ್ದಿಶ್ಯವೇನಿರಬಹುದೆಂದು ಅರಿಂದಮನು ಊಹಿಸಿದನು ; ಇದಕ್ಕೆ ಮೊದಲು, ಅವರು ಅಲೋಚಿಸು ತ್ತಿದ್ದಾಗ, ಈ ಸಂಬಂಧವಾದ ಮಾತು ಒಂದಿತ್ತು.

ಕಾಗದವನ್ನು ಬರೆದು ಪೂರೈಸಿಕೊಟ್ಟಬಳಿಕ ಅಪರಿಚಿತನು ಅದನ್ನು ತನ್ನ ಪಕ್ಕದ ಜೇಬಿನಲ್ಲಿಟ್ಟುಕೊಂಡನು. ಅರಿಂದಮನು ಅದನ್ನೂ ನೋಡಿದನು. ನೋಡಿದವನೇ, ಈ ಮನುಷ್ಯನು ಈಗಲೇ ಹೊರಡುವನಾಗಿದ್ದಾನೆಂದು ತಿಳಿದುಕೊಂಡನು ; ಅದರಿಂದ ಆ ಸ್ಥಳ ವನ್ನು ಬಿಟ್ಟು ಸ್ವಲ್ಪ ದೂರದಲ್ಲಿರುವ ಒಂದು ಅಲದ ಮರದ ಬುಡದಲ್ಲಿ ನಿಂತನು. ಆಗಲೇ ಆ ಮನುಷ್ಯನು ಹೊರಕ್ಕೆ ಬಂದನು ; ಸ್ವಲ್ಪ ದೂರವಾಗಿ ಬಂದು ನಿಂತುಕೊಂಡು ಬಂದಾವರ್ತಿ ಮನೆಯನ್ನು ಚೆನ್ನಾಗಿ ದೃಷ್ಟಿಸಿ ನೋಡಿದನು ; ಇದಾದ ನಂತರ, ತಾನು ಹೋಗಬೇಕಾದ ಸ್ಥಳವನ್ನು ಕುರಿತು ಹೊರಟನು. ಅರಿಂದಮನೂ ಅವನ ಹಿಂದೆ ಹೊರಟನು ; ಅವನಿಗಿಂತಲೂ ವೇಗವಾಗಿ ನಡೆಯಲು ಉಪಕ್ರಮಿಸಿದನು ; ಬರಬರುತ್ತ ಅವನ ಹತ್ತಿರಕ್ಕೇ ಬಂದನು. ಆ ಅಪರಿ ಚಿತನು ಒಂದೆರಡು ಸಲ ಅತನನ್ನು ದೃಷ್ಟಿಸಿ ನೋಡಿದನು, ಯಾವ ಮಾತನ್ನೂ ಆಡಲಿಲ್ಲ ; ಅರಿಂದಮನೂ ಮಾತನಾಡಲಿಲ್ಲ.

ಹದಿನಾಲ್ಕನೆಯ ಪರಿಚ್ಛೇದ

ಹಿಂಬಾಲಿಸಿದಾಗ

ಅರಿಂದಮನು ಯದುನಾಥ ಗೋಸ್ವಾಮಿಯ ಮನೆಯಿಂದ ಹೊರಟ ಆ ಅಪರಿಚಿತ ವ್ಯಕ್ತಿಯ ಹಿಂದೆಯೇ ಬಹು ದೂರ ಹೋದನೋಲೆ ತಾನು ಯಾಚಕನಂತೆ ತೋರ್ಪಡಿಸಿಕೊಳ್ಳುತ್ತಾ ಆ ಅಪರಿಚಿತನೊಂದಿಗೆ ಹೀಗೆ ಪ್ರಾರ್ಥನಾಪೂರ್ವಕವಾಗಿ ಹೇಳಿದನು:—"ತಮ್ಮನ್ನು ನೋಡಿದರೆ, ತಮ್ಮನ್ನು ಹಿಂದೆ ಎಂದೂ ನೋಡಿದ ಪರಿಚಯವಿಲ್ಲ; ಆದರೂ ಕೂಡ ತಾವು ಹೇಗೆ ಕಾಣುವಿರೆಂದರೆ, ಇದಿರಾಗಿ ಹೇಳಿದರೆ ಸೊಕ್ಕೆಂತ್ರ ಪ್ರಾರ್ಥಿಸಿದ ಹಾಗಾಗಬಹುದು. ತಾವು ಬಹು—ಬಹು—"

ಆ ಅಪರಿಚಿತನು ಈ ಪ್ರಾರ್ಥಿಸಿದ ಅಷ್ಟಾಗಿ ಸಂತುಷ್ಟನಾಗದೇ ಹೋದರೂ ಬಹುಮಟ್ಟಿಗೆ ಪ್ರಸನ್ನಚಿತ್ತನಾಗಿ "ಯಾರಪ್ಪಾ ನೀನು?" ಎಂದು ಕೇಳಿದನು.

ಅರಿಂದಮನು ಕಂಠಸ್ವರವನ್ನು ಮತ್ತಷ್ಟು ಪ್ರಾರ್ಥನಾಪೂರ್ಣಗೊಂಡು "ಇದೋ, ಅದೇ ಆಲೋಚಿಸುತ್ತಿದ್ದೇನೆ, ತಮ್ಮ ಇದಿರಾಗಿ ಹೇಳಿದರೆ ಹೊಗಳಿಕೆಯಾಗುತ್ತದೆ—ತಾವು ಬಹು—ಬಹು—" ಎಂದನು.

ಅಪರಿಚಿತನು ಸ್ವಲ್ಪ ಜೋರಾಗಿ "ನಮ್ಮನ್ನೆ 'ಬಹು ಬಹು' ಎನ್ನುತ್ತಿರುವೆಯಲ್ಲಾ, ಅದೇನು ಹೇಳಬಾರದೆ—ಬಹುದೊಡ್ಡ ಮನುಷ್ಯನೆಂದೋ ಅಥವಾ ಬಹು ಉದಾರಿಯೆಂದೊ?" ಎಂದನು.

ಅರಿಂದಮ—"ರಾಮ ರಾಮ! ಆ ರೀತಿ ಎಂದಾದರೂ ಆದೀತೆ? ಬಬ್ಬಾನೊಬ್ಬ 'ಬಹು ದಗಾಕೋರ' ಮನುಷ್ಯ. ಇದಿರಾಗಿ ಹೇಳಿದರೆ ಸೊಕ್ಕೆಂತ್ರಪ್ರಾಶವಾಗುತ್ತದೆ. ಆದ್ದರಿಂದ ಹೇಳೋಣ, ಹೇಳೋಣ—ಎಂದಿದ್ದರೂ ಹೇಳಲಾಗಲಿಲ್ಲ." ಹೀಗೆಂದು ಹೇಳುತ್ತೆ ಅರಿಂದಮನು ಅವನಿಗೆ ಮತ್ತಷ್ಟು ಹತ್ತಿರ ಹೋದನು; ಹತ್ತಿರಕ್ಕೆ ಹೋಗಿ ಅವನನ್ನು—ಮುಖ್ಯವಾಗಿ ಅವನ ಮುಖವನ್ನು—ಒಂದಾವರ್ತಿ ಚೆನ್ನಾಗಿ ನೋಡಿದನು.

ಆ ಅಪರಿಚಿತನು ಹುಬ್ಬು ಗಂಟುಹಾಕಿಕೊಂಡು ಸ್ವಲ್ಪವಾಗಿ ನಕ್ಕನು. ಇವನ ಮುಖವನ್ನು ತಿದ್ದುವುದರಲ್ಲಿ ಬ್ರಹ್ಮಾತನು ತನ್ನ ಸೃಷ್ಟಿ ವೈಚಿತ್ರ್ಯವನ್ನು ತೋರ್ಪಡಿಸಲು ಪ್ರಯತ್ನಪಟ್ಟಿರಬೇಕೆಂದು ಅರಿಂದಮನಿಗೆ ತೋರಿತು; ಏಕೆಂದರೆ ಆ ಮುಖದಲ್ಲಿ ಒಂದಲ್ಲ ಒಂದು ಸಾವಿರ ನಗೆಯು ಒಂದೇ ತಡವೆ ಕಾಣಿಸಿಕೊಂಡರೂ ಆ ಮನುಷ್ಯನು ನಗುತ್ತಿರುವನೋ ಇಲ್ಲವೇ ಮಹರ್ಷಿಪತವಾದ ಅಸಹ್ಯತರ ಯಾತನೆಯಿಂದ ಮುಖವಿಕಾರ ಮಾಡುತ್ತಿರುವನೋ ಎಂಬುದನ್ನು ತಿಳಿಯುವ ಹಾಗಿರಲಿಲ್ಲ. ಆ ಮನುಷ್ಯನು ನಕ್ಕ್ಕು—ಅದೆಂತಹ ವಿಕಾರ ಮುಖವೋ ಹೇಳಿ ಮುಗಿಸುವುದಿಲ್ಲ—"ನೀನೇನು ಹುಚ್ಚನೋ?" ಎಂದನು.

ಅರಿಂದಮ—ಇದಕ್ಕೆ ಮೊದಲು ಇಂತಹ ಮಾತನ್ನು ಯಾರೂ ಆಡಿಲ್ಲ, ನಿನ್ನ ಬಾಯಲ್ಲಿಯೇ ಮೊದಲು ಕೇಳಿದ ಹಾಗಾಯಿತು. ಆ ಮಾತು ಹಾಗಿರಲಿ, ಪುನಃ, ಯಾವ ಉದ್ದೇಶದಿಂದ ಇಂದು ಈ ಸಂಧ್ಯಾಕಾಲವಾದ ಮೇಲೆ ಹೊರಗೆ ಹೊರಟೋಣವಾಯಿತೋ ಹೇಳು ನೋಡೋಣ? ನಿನ್ನೆಯ ರಾತ್ರಿಯೇನೋ ಒಬ್ಬಳನ್ನು ತೀರಿಸಿದೆ, ಇಂದು ಮತ್ತೆ ಯಾರ ಹೃದಯದೊಳಗೆ ಚೂರಿ ನೆಡಬೇಕೆಂದಿರುವೆಯಪ್ಪಾ?

ಅಪರಿಚಿತ—ನನಗೆ ನಿನ್ನ ಮಾತು ತಿಳಿಯುವುದಿಲ್ಲ.

ಅರಿಂದಮ—ಮನಸ್ಸಿನೊಳಗೇನೋ ಚೆನ್ನಾಗಿ ತಿಳಿಯುಬಲ್ಲೆ; ಇಷ್ಟು ದೊಡ್ಡ ಕೊಲೆ ನಡೆದಿದೆ, ಅದರ ಸುದ್ದಿಯೇ ತಿಳಿಯದೆನ್ನುವೆಯಲ್ಲಾ?

ಅಪರಿಚಿತ—ಅಲ್ಲ, ಅದಲ್ಲ, ನಾನು ಬಲ್ಲಿರುವವನಲ್ಲ. ನೀನೇನು ಪತ್ತೇದಾರನೋ?

ಅರಿಂದಮ—ಹಾಗಲ್ಲದಿದ್ದಿದ್ದರೆ ನಿನ್ನನ್ನೇಕೆ ಹಿಂಬಾಲಿಸಬೇಕಾಗಿದ್ದಿತು? ನೀನೇ ಆ ಹುಡುಗಿಯನ್ನು ಕೊಂದವನೆಂದು ಖಂಡಿತವಾಗಿ ಹೇಳುತ್ತೇನೆ.

ಅಪರಿಚಿತ—ನನಗೇನೂ ತಿಳಿಯದು.

ಅರಿಂದಮ—ನಿನ್ನೆಯ ರಾತ್ರಿ ಪಲಾಯಿಮುಂಡಲನ ಅಂಗಡಿಯ ಬಳಿ ಬಂದಿದ್ದವನು ನೀನೇ ಅಲ್ಲವೆ?

ಅಪರಿಚಿತ—ಅಲ್ಲ, ಪಲಾಯಿಮುಂಡಲನೆಂದು ಹೆಸರುಳ್ಳವರು ಯಾರೂ ನನಗೆ ತಿಳಿಯದು.

ಅರಿಂದಮ—ತಿಳಿಯದೇ ಏನು, ಈಗ ಮರೆದಿರಬಹುದು. ಪಲಾಯಿಮುಂಡಲನು ನುಳ್ಳು ಹೇಳುವವನಲ್ಲ; ನಿನ್ನ ವಿಚಾರವನ್ನು ನನಗೆ ಹೇಳಿದವನೇ ಅವನು.

ಅಪರಿಚಿತ—ಅವನು ನಿನಗೆ ನನ್ನ ಹೆಸರನ್ನು ಹೇಳಿದನೆ?

ಅರಿಂದಮ—ಹೆಸರು ಹೇಳದಿದ್ದರೂ ನಿನ್ನ ಮುಖವನ್ನು ನೋಡಿದ ಮಾತ್ರದಿಂದ ನೀನೇ ಆ ಮಹಾಪುರುಷನೆಂದು ತಿಳಿಯಬಲ್ಲೆ.

ಅಪರಿಚಿತ—ನುಳ್ಳು ಮಾತು; ಆದರೆ, ಈ ಕೊಲೆಗೆ ನಂಬಂಧಿಸಿದ ಕೆಲವು ವಿಚಾರಗಳನ್ನು ನಾನು ಬಲ್ಲೆ. ನೀನು ಈಗ ಆ ಮುಡುಗಿಯ ಶವದೇಹವನ್ನು ಹುಡುಕುತ್ತಿರುವೆಯಲ್ಲವೆ? ಹಾಗಿದ್ದ ಪಕ್ಷದಲ್ಲಿ ನನಗೆ ನನ್ನಿಂದ ಸ್ವಲ್ಪ ಬಹಕಾರವಾಗಬಹುದು.

ಅರಿಂದಮ—ಹಾಗಾದರೆ ನಾನು ತುಂಬ ಕೃತಜ್ಞನಾಗುದ್ದೇನೆ.

ಅಪರಿಚಿತ—ಮೃತದೇಹವನ್ನು ಹುಡುಕಿ ತೆಗೆವುದರಿಂದ ನನಗೆ ಒಳ್ಳೆಯ ಪುರಸ್ಕಾರ ದೊರೆಯಬಹುದೆಂಬ ಆಶೋತ್ತರವಿರಬಹುದಲ್ಲವೆ?

ಅರಿಂದಮ—ಇರಬಹುದೇನು, ಹಾಗಿಲ್ಲವಾದ ಪಕ್ಷದಲ್ಲಿ ಬೆಳಗಿನಿಂದ ಈವರೆಗೂ ನುತ್ತಿ ನುತ್ತಿ ಅಲೆದಾಡುವುದೇಕಪ್ಪಾ, ಹೇಳು.

ಅಪರಿಚಿತ—ಬಂದುಬೇಳೆ ಆ ಮೃತದೇಹವನ್ನು ನಾನು ತೋರಿಸಿ ಕೊಟ್ಟರೆ, ಆಗ ನನಗೆ ಏನಾದರೂ ಬಹುಮಾನ ಗಿಹುಮಾನ ಕೊಡುತ್ತೀಯೋ?

ಅರಿಂದಮ—ಮುಹತ್ತರವಾದ ಈ ಕೆಲಸವು ನಿನ್ನ ಮೂಲಕ ಸಾಧ್ಯವಾಗುವುದಾದರೆ ಬಹುಮಾನ ಕೊಡಲಾರೆನೆ? ಒಡನೆಯೆ ಕೊಡುತ್ತೇನೆ.

ಅಪರಿಚಿತ—ನಾನು ನಿನ್ನೆಯ ರಾತ್ರಿ ಎರಡು ಗಂಟೆಯ ಹೊತ್ತಿಗೆ ಈ ಕಾಲುವೆಯ ಮಾರ್ಗವಾಗಿ ಬಂದಾಗ, ಪಶ್ಚಿಮ ಕಡೆಯಲ್ಲಿರುವ ಒಂದು ಕಾಡಿನಲ್ಲಿ ಒಬ್ಬ ಹುಡುಗಿಯ ಮೃತದೇಹವನ್ನು ನೋಡಿದೆನು. ನನ್ನ ಸಂಗಡ ಬಂದರೆ ತೋರಿಸುತ್ತೇನೆ.

ಅರಿಂದಮ—ಈ ಮಾತನ್ನು ಈಗಲೂ ರಹಸ್ಯವಾಗಿಟ್ಟಿದ್ದುದೇಕೆ?

ಅಪರಿಚಿತ—ತಾವಾಗಿ ಯಾರುತಾನೇ ಪೋಲೀಸಿನವರ ತೊಂದರೆಗೆ ಸಿಕ್ಕಿಬೀಳ್ತಾರು ಹೇಳು. ಈಗ ನನ್ನ ಸಂಗಡ ಬರುವೆಯಾ?

ಅರಿಂದಮನು ಸ್ವಲ್ಪಯೊತ್ತು ಏನನ್ನೊ ಆಲೋಚನೆ ಮಾಡಿದನು. ಅನಂತರ, "ನಡೆ ಹೋಗೋಣ" ಎಂದು ಹೇಳಿದನು.

ಹದಿನೈದನೆಯ ಪರಿಚ್ಛೇದ

ಮಲ್ಲಯುದ್ಧ

ಆ ಅಪರಿಚಿತನಾದ ಮನುಷ್ಯನು ಅರಿಂದಮನನ್ನು ಸಂಗಡ ಕರೆದುಕೊಂಡು ಹೊರಟನು. ಇಬ್ಬರೂ ಮೌನವಾಗಿದ್ದರು; ಸೇರುವಿಂತಿದ್ದ ಮೂರು ನಾಲ್ಕು ಪ್ರಾಂತರಗಳನ್ನು ಶೀಘ್ರವಾಗಿ ಹೋದರು. ಕಟ್ಟಕಡೆಗೆ ಅವರೊಂದು ಸ್ಥಳಕ್ಕೆ ಬಂದರು; ಆ ಸ್ಥಳದಲ್ಲಿ ನಿಂತು ನೋಡಿದರೆ ಊರು-ಕೇರಿಗಳೊಂದೂ ಕಾಣಿಸುತ್ತಿರಲಿಲ್ಲ. ರಾತ್ರಿಯ ಹೇಳಿಯಲ್ಲಿ—ರಾತ್ರಿಯು ಮಾತು ಹಾಗಿರಲಿ, ಯಾರು ಯಾರನ್ನಾದರೂ ಕೊಲ್ಲಲು ಮನಸ್ಸು ಮಾಡಿದರಾದರೆ, ಪ್ರಶಸ್ತವಾದ ಹಗಲು ಹೊತ್ತಿನಲ್ಲಿಯೂ ಅವರು ನಿರ್ಘಷ್ಣವಾಗಿ ಆ ಕೆಲಸವನ್ನು ಮಾಡುವುದಕ್ಕೆ ಅನುಕೂಲವಾದ ಸ್ಥಳವದು.

ಆ ಅಪರಿಚಿತ ವ್ಯಕ್ತಿಯು ಅಲ್ಲಿಗೆ ಬಂದು ಮೃತಶರೀರವನ್ನು ಹುಡುಕುವವನಹಾಗೆ ಹತ್ತಿರದಲ್ಲಿನ ಒಂದು ಪೊದೆಯನ್ನು ಈಗೂ ಹಾಗೂ ನೋಡಿ, "ಚೆನ್ನಾಯಿತು, ತುಂಬ ಆಶ್ಚರ್ಯವಾಯಿತಲ್ಲ!" ಎಂದನು.

ಅರಿಂದಮನು ಆ ಮಾತಿಗೆ ಏನೊಂದು ಉತ್ತರವನ್ನೂ ಕೊಡಲಿಲ್ಲ.

ಅಪರಿಚಿತನು ''ಚೆನ್ನಾಯಿತು, ತುಂಬಾ ಆಶ್ಚರ್ಯವಾಗಿದೆಯಲ್ಲ!'' ಎಂದು ಅರಿಂದಮನಿಗೆ ಕೇಳಿಸುವ ಹಾಗೆ ಇನ್ನೊಂದು ಸಲ ಹೇಳಿದನು.

ಅರಿಂದಮನು ಆಗಲೂ ಸುಮ್ಮನಿದ್ದನು.

ಅಪರಿಚಿತ—ಏನಯ್ಯಾ, ಮೃತದೇಹವು ಕಾಣಬರುವುದಿಲ್ಲವಲ್ಲ?

ಅರಿಂದಮ—ಬಲ್ಲ ಹೋಯಿತು?

ಅಪರಿಚಿತ—ಹೇಗೆ ಹೇಳಲಿ.

ಅರಿಂದಮ—ನಿನ್ನ ಮನಸ್ಸಿನಲ್ಲಿ ಏನಿದೆಯೋ ಬಿಡದೆ ಹೇಳು, ನೋಡೋಣ.

ಅಪರಿಚಿತ—ನೀನು ಏನೆಂದು ತಿಳಿದೆ?

ಅರಿಂದಮ—ನೀನೊಬ್ಬ ಭಯಂಕರ ದಸ್ಯುವೆಂದು ನಾನು ತಿಳಿದಿದ್ದೇನೆ. ಇದಕ್ಕೆ ಹೆಚ್ಚಾಗಿ ಏನೆಂದು ತಿಳಿಯಲಿ? ನೀನು ಏನೆಂದು ಭಾವಿಸಿ ನನ್ನನ್ನು ಇಲ್ಲಿಗೆ ಕರೆದುಕೊಂಡು ಬಂದೆಯೋ ಬಾಯಿಬಿಟ್ಟು ಹೇಳು ನೋಡೋಣ.

ಅಪರಿಚಿತ—ಇದೊ ಪ್ರಕಾಶಪಡಿಸುತ್ತೇನೆ.

ಹೀಗೆಂದು ಹೇಳಿ ಅವನು ಉದ್ದವಾದೊಂದು ಚೂರಿಯನ್ನು ಹೊರಕ್ಕೆ ತೆಗೆದು ಅರಿಂದಮನ ಕಡೆಗೆ ನುಗ್ಗಿದನು. ಅರಿಂದಮನು ಭಯಪಟ್ಟವನಂತೆ ನಟಿಸುತ್ತಾ ಎರಡು ಕೈಗಳನ್ನೂ ಮೇಲಕ್ಕೆತ್ತಿ ''ಏನ ಮಾಡುವೆ–ಏನ ಮಾಡುವೆ–ನನ್ನನ್ನು ಕೊಲ್ಲಬೇಡ, ಬೇಡ–ನಿನಗೆ ದಮ್ಮಯ್ಯ–!'' ಎಂದು ಬೊಬ್ಬೆಯಿಟ್ಟನು.

ಅಪರಿಚಿತ—ನೀನು ನನ್ನ ಮಾತುಗಳಿಗೆಲ್ಲಾ ಸರಿಯಾದ ಉತ್ತರ ಕೊಡುವುದಾದರೆ–ನಾನು ನಿನ್ನನ್ನು ಏನೂ ಮಾಡುವುದಿಲ್ಲ.

ಅರಿಂದಮ—ಹೇಳು, ಏನಹೇಳಬೇಕು?

ಅಪರಿಚಿತ—ನೀನು ಯಾರು, ನಿನ್ನ ಹೆಸರೇನು, ನೀನು ಇರವುದೆಲ್ಲಿ, ನಿನ್ನ ಕೆಲಸವೇನು, ಯಾತಕ್ಕೋಸ್ಕರವಾಗಿ ನನ್ನ ಹಿಂದೆ ಬಂದೆ? ಈ ಎಲ್ಲ ಪಾತ್ರಗಳಿಗೂ ನೀನು ಉತ್ತರ ಕೊಡಬೇಕು.

ಅರಿಂದಮ—ನಾನು ಮತ್ತೆ ಯಾರು? ಕಾಣುವುದಿಲ್ಲವೆ, ನಾನೂ ಒಬ್ಬ ಮನುಷ್ಯ; ಹೆಸರು ಅಷ್ಟು ಚೆನ್ನಾಗಿಲ್ಲ, ಕೃತಾಂತಬಾಬು ಎಂದು. ನಾನು ಇರುವುದು ಕೊಲೆಪಾತಕರ ಸಂಗಡ; ನನ್ನ ಕೆಲಸವಾದರೋ ನಿನ್ನಂತಹ ಬದಮಾಷರನ್ನು ಹುಡುಕುತ್ತಾ ಅಲೆದಾಡುವುದು. ನಿನ್ನ ಹಿಂದೆ ಬಂದುದೇಕೆ ಎಂದಲ್ಲವೆ—ನಿನ್ನ ಹಿಂದೆ ಬಂದುದು ನಿನ್ನನ್ನು ಪಿಡುಪಾಕುವುದಕ್ಕಾಗಿ.

ಅಪರಿಚಿತ—ಏಕೆ, ನಾನು ಕೊಲೆಪಾತಕಿಯೇನು?

ಅರಿಂದಮ—ಆ ವಿಷಯದಲ್ಲಿ ಇನ್ನೂ ಸಂದೇಹವಿದೆಯೆ? ಹಾಗಲ್ಲವಾಗಿದ್ದರೆ ಇಷ್ಟು ದೊಡ್ಡ ಚೂರಿಯನ್ನು ಹಿಡಿದುಕೊಂಡು ಹಗಲೂ ರಾತ್ರಿ ಓಡಾಡುತಿದ್ದೆಯಾ?

ಅಪರಿಚಿತನು ಆ ಚೂರಿಯನ್ನೆತ್ತಿ ಅರಿಂದಮನನ್ನು ಹೊಡೆಯುವುದಕ್ಕೆಂದು ಪುನಃ ಮುಂದರಿದನು. ಅರಿಂದಮನು ಪುನಃ ಮೊದಲಿನ ಹಾಗೆಯೇ ಒಷ್ಟೋ ಭಯಪಟ್ಟವನಹಾಗೆ ನಟಿಸಿದನು; ಅನೇಕವಾಗಿ ವಿನಯೋಕ್ತಿಗಳನ್ನಾಡಿ ಆ ಚಾರಿಯೂ ತಪ್ಪಿಸಿಕೊಂಡನು. ಅಪರಿಚಿತನು, "ಈಗ ಹೇಳು, ನೀನು ಯಾರು, ನೀನು ಇರವುದೆಲ್ಲಿ?" ಎಂದು ಕೇಳಿದನು.

ಅರಿಂದಮ—"ಹೇಳುತ್ತೇನೆ-ಹೇಳುತ್ತೇನೆ, ಅದೋ ದೂರದಲ್ಲಿ ಒಂದು ತೆಂಗಿನಮರ ಕಾಣಿಸುತ್ತದೆ. ಅದರಿಂದಾಚೆ, ಇನ್ನೂ ದೂರದಲ್ಲಿ, ಒಂದು ಬಾಗೀಮರವಿದೆ. ಅದು ಈ ಬೆಳದಿಂಗಳಲ್ಲಿ ಚೆನ್ನಾಗಿ ಕಾಣಿಸುತ್ತಿದೆ" ಎಂದು ಹೇಳುತ್ತಾ ಅವನ ಪಕ್ಕದಲ್ಲಿ ನಿಂತು ಅರಿಂದಮನು ಬೆರಳು ತೋರಿಸತೊಡಗಿದನು. ನಿಜವಾಗಿಯೂ ಅತ್ತಕಡೆ ಬಾಗೀಮರವಾಗಲೀ ತೆಂಗಿನಮರವಾಗಲೀ ಇರಲಿಲ್ಲ.

ಅರಿಂದಮನು ಬೆರಳು ತೋರಿಸಿದ ಕಡೆ ದೃಷ್ಟಿಸಿ ನೋಡುತ್ತಾ ಅಪರಿಚಿತನು, ''ಏಲ್ಲೂ, ನಿನ್ನ ಬಗಸೀಮರ ಏಲ್ಲದೆಯೋ?'' ಎಂದು ಕೇಳಿದನು.

ಅರಿಂದಮನು ಪಕ್ಕದಲ್ಲಿಯೇ ನಿಂತುಕೊಂಡಿದ್ದನಾದ್ದರಿಂದ ಆಗ ಅರಿಂದಮನಿಗೆ ಸ್ವಲ್ಪ ಅನುಕೂಲ ಸಿಕ್ಕಿತು. ಅತನು ಅಪರಿಚಿತನ ಕೈಯೊಳಗಿದ್ದ ಚೂರಿಯನ್ನು ಹೊದಲು ಕಸಿದುಕೊಂಡು, ಕೂಡಲೆ ಅವನ ಕಾಲಿನ ಮೇಲೆ ಕಾಲಿಟ್ಟು ಅದುಮಿ ಹಿಡಿದುಕೊಂಡು ಒಂದು ಸಲ ತಳ್ಳಿದನು. ಹಾಗೆ ತಳ್ಳಿದ್ದನ್ನು ಅಪರಿಚಿತನು ತಾಳಿಕೊಳ್ಳಲಾರದೆ ಧೂಳ್ಪಸೆ ನೆಲಕ್ಕೆ ಬಿದ್ದನು. ಅನಂತರ ಅರಿಂದಮನು ಅವನ ಎದೆಯ ಮೇಲೆ ಅದುಮಿಕೊಂಡು ಕುಳಿತನು. ಅಪರಿಚಿತನು ಬಿಡಿಸಿಕೊಳ್ಳುವುದಕ್ಕೆ ತುಂಬ ಸಾಹಸ ಮಾಡಿದನು. ಅರಿಂದಮನು ಅವನ ಕುತ್ತಿಗೆಯನ್ನು ಎಡಗಡೆ ಕೈಯಿಂದ ಹಿಡಿದು ಒತ್ತಿದ್ದರಿಂದ ಅವನು ಗೊರಗೊರ ಸೌಂಡು ಶಬ್ದಮಾಡಲಾರಂಭಿಸಿದನು. ಅಪರಿಚಿತನು ನಿಶ್ರಾಣವಾಗುತ್ತಾ ಬಂದುದನ್ನು ಕಂಡು ಅರಿಂದಮನು ಅವನ ಕುತ್ತಿಗೆಯ ಹಿಡಿತವನ್ನು ಬಿಟ್ಟು ''ಏನೋ, ದೊಡ್ಡ ಮಹಾರಾಜರಿಗೇ ಆರಂಭಿಸಿದೆ? ಈಗ ನಾನು ಏನುಮಾಡಲಿ ಹೇಳು–ನಿನ್ನನ್ನು ಬಿಟ್ಟುಬಿಡಲೋ, ಅಥವಾ ನಿನ್ನ ಪ್ರಾಣವನ್ನು ಈ ಸ್ಥಳದ ಗಾಳಿಯೊಂದಿಗೆ ಬೆರಸಿಬಿಡಲೋ?'' ಎಂದು ಕೇಳಿದನು.

ಅಪರಿಚಿತನು ಯಾವುದೊಂದು ಉತ್ತರವನ್ನೂ ಕೊಡಲಿಲ್ಲ.

ಅರಿಂದಮ—''ಇಲ್ಲಸೆ ನಿನ್ನಂಥ ಈ ಬಡಕಲ 'ಸೈಲ್ಯಾನ'ನನ್ನು ಈಗಲೇ ತೀರಿಸಿಬಿಡಬಹುದಾಗಿದ್ದಿತು, ಆದರೆ ಒಂದೇಸಲಕ್ಕೆ ಕೊಂದು ಬಿಟ್ಟರೆ ನಿನ್ನ ಬಡಕಾದಲ್ಲಿ ಕೈಗಳು ಚೆನ್ನಾಗಿ ಕೆಲಸ ಮಾಡಿದಂತಾಗುವುದಿಲ್ಲ'' ಎಂದು ಹೇಳಿ, ಅವನನ್ನು ಬಿಟ್ಟುಬಿಟ್ಟು ''ಈಗ ನಾನು ನಿನ್ನನ್ನು ಬಿಟ್ಟುದರಿಂದ ನೀನು ನನ್ನ ಕೈಯಿಂದ ತಪ್ಪಿಸಿಕೊಂಡಂತೆ ಆಯಿತೆಂದು ತಿಳಿಯಬೇಡ; ಅವಶ್ಯಕ ತೋರಿದ ಕೂಡಲೇ ನಿನ್ನನ್ನು ಪುನಃ ಹಿಡಿಯಬಲ್ಲೆನು. ಅವಶ್ಯಕವಾದ ಒಂದು ಕಾರಣದ ದೆಸೆಯಿಂದ ನಿನ್ನನ್ನು

ಸ್ವಲ್ಪ ರೇಗಿಸಿದೆ. ಮತ್ತಾವಾಗಲಾದರೂ ಆವಶ್ಯಕ ಕಂಡುಬಂದರೆ, ಆಗ ಬಂದು ನಿನ್ನನ್ನು ನೋಡುತ್ತೇನೆ. ಈಗ, ಇನ್ನೇನೂ ಹೇಳದೆ, ನರಿಯಾದ ಭಾಗ್ಯದಲ್ಲಿ ಸ್ವಸ್ಥಾನವನ್ನು ಕುರಿತು ಪ್ರಸ್ಥಾನವಾಯ್ತು; ಬಿಲ್ಲಾದರೆ ನಿನ್ನ ಜೊರಿಯನ್ನು ನಿನ್ನ ಎದೆಯಲ್ಲಿಯೇ ನೆಡುವುದಕ್ಕೆ ನಾನು ಹಿಂದೆಗೆಯಲಿಲ್ಲ'' ಎಂದು ಹೇಳಿದನು.

ಅಪರಿಚಿತನು ತಲೆ ತಗ್ಗಿಸಿಕೊಂಡು, ಒಂದು ಮಾತನ್ನೂ ಆಡದೆ ನಿರೀಹನಾದ ಸತ್ಪುರುಷನಹಾಗೆ, ಆ ಸ್ಥಳವನ್ನು ಬಿಟ್ಟು ನಿದಾನವಾಗಿ ನಡೆದು ಹೋದನು.

ಹದಿನಾರನೆಯ ಪರಿಚ್ಛೇದ

ವೇಷಾಂತರದಲ್ಲಿ

ಮಾರನೆಯ ದಿನ ಪಥ್ಯಾನ್ನದ ಬೇಲೆ ಅರಿಂದಮನು ಸ್ವಪ್ನನ ಸೇಷದಿಂದ ಗೋಸ್ವಾಮಿಯನ್ನು ನೋಡುವುದಕ್ಕೆ ಬಂದನು.

ವೇಷಾಂತರವನ್ನು ಅವಲಂಬಿಸುವುದರಲ್ಲಿ ಅರಿಂದಮನಿಗೆ ವಿಶೇಷವಾಗಿ ನಿಪುಣತೆಯಿರ್ಪುತು. ಅತನು ಯಾವುದಾದರೂ ವೇಷಾಂತರವನ್ನು ಅವಲಂಬಿಸಿ ಹೊರಗೆ ಹೊರಟನೆಂದರೆ ಬಂತಹ ಪರಿಚಿತನೇ ಆದರೂ ಅತನನ್ನು ಗುರ್ತಿಸಲಾರನು; ಅನೇಕ ಬೇಳೆಗಳಲ್ಲಿ ಪ್ರೋಲೀಸಾ ತಾಗೆಯು ಅಧ್ಯಕ್ಷನಾದ ಯೋಗೇಂದ್ರಬಾಬುವೂ ಮೂಗುಗೊಳ್ಳು ತ್ತಿದ್ದನು. ಅರಿಂದಮನಿಗೆ ವಯಸ್ಸು ಮತ್ತೂರ ಮತ್ತೂರ ಐವತ್ತಕ್ಕೆ ಬಂದಿತ್ತು. ಬಗೆಬಗೆಯ ವೇಷಾಂತರಗಳನ್ನು ತಾಳುವುದಕ್ಕೆ ಅನುಕೂಲವಾಗಬೇಕೆಂದು ತಿಳಿದು ಅತನು ಪ್ರತಿದಿನವೂ ಬೆಳಿಗ್ಗೆ ಎದ್ದು ಕೂಡಲೆ ತನ್ನ ಕಯರ್ಾರ ತನ್ನ ಗಡ್ಡ ಮೀಸೆಗಳನ್ನು ಸಂಪೂರ್ಣವಾಗಿ ಬೋಳಿಸಿ ಕೊಳ್ಳುವನು. ಯದುನಾಥ ಗೋಸ್ವಾಮಿಯನ್ನು ಅರಿಂದಮನು ಸುಲಭವಾಗಿಯೇ ಕಂಡನು. ಆಗ ಯದುನಾಥ ಗೋಸ್ವಾಮಿಯು ಊಟವನ್ನು ಮುಗಿಯಿಸಿಕೊಂಡು ಹೊರ ಭಾಗದ ಕೊಠಡಿಯಲ್ಲಿ

ಕುಳಿತು ಬಲೆಯಿಡಿಕೆಯನ್ನು ಅಗಿಯುತ್ತಾ ಧೂಮಪಾನದಲ್ಲಿ ನಿರತನಾಗಿದ್ದನು. ಒರಗಿಕೊಂಡು ಮಲಗಿದ್ದವನು, ಅಪರಿಚಿತನಾದ ವೃದ್ಧನು ಬಂದುದನ್ನು ಕಂಡು, ಎದ್ದು ಕುಳಿತುಕೊಂಡನು.

ವೇಷಾಂತರವನ್ನವಲಂಬಿಸಿದ್ದ ಅರಿಂದಮನು,—ಮಹಾಶಯ, ಇಲ್ಲಿ ಯದುನಾಥ ಗೋಸ್ವಾಮಿ ಎಲ್ಲರುವರೋ ದಯವಾಡಿ ತಿಳುಹು ಏರಾ ?

ಯದುನಾಥ—ಅದು ನನ್ನ ಹೆಸರು, ತಮಗೆ ಏನು ಬೇಕು ? ನೀವು ಎಲ್ಲಿಂದ ಬಂದಿರಿ ?

ಅರಿಂದಮ—ಬಹು ದೂರದಿಂದ ಬಂದೆ, ಒಬ್ಬಾನೊಬ್ಬ ನಿಮ್ಮ ಶಿಷ್ಯನ ಮನೆಯಿಂದ. ಆಹ! ಬಹು ಸೆಕೆ, ಎಂತಹ ಬಿಸಿಲು! ಉಸಾ ! ಬಹು ಒಳ್ಳೆಯ ಸಮಾಚಾರ, ಆತನು ತಿಮಪ್ರತಿಷ್ಠೆ ಮಾಡುತ್ತಾನೆ, ದೊಡ್ಡಮನುಷ್ಯ, ಏಕಾಏಕಿ ಕಲ್ಪತರುವೇ ಆಗಿದ್ದಾನೆ, ಮುಖ್ಯವಾಗಿ ತಾವು ಆತನ ಗುರು, ತಮ್ಮ ಪುಣ್ಯವೇ ಪುಣ್ಯ! ಅಬ್ಬ ಏನು ಸೆಕೆ—ಪ್ರಾಣವೇ ಹೋಗುತ್ತದೆ.

ಯದುನಾಥನು—ಕೇವಲ ಆಕೃಷ್ಟನಾಗಿ, ''ನನ್ನ ಶಿಷ್ಯರೆಲ್ಲರೂ ದೊಡ್ಡಮನುಷ್ಯರೇ. ಆತನು ಯಾರು ?'' ಎಂದು ಕೇಳಿದನು.

ಅರಿಂದಮನು ಕೆನ್ನೆಯ ಬೆಮರು ಒರಸಿಕೊಳ್ಳುತ್ತಾ, ಅಯ್ಯಾ—''ಬಹು ಸೆಕೆ! ಉಸಾ—ಕೊಂಚ ನೀರು; ಬಾಯಾರಿಕೆ, ಹೊಟ್ಟೆಯಿಂದ ಗಂಟಲವರೆಗೂ ಒಣಗಿ ಹೋಗಿದೆ'' ಎಂದನು.

ಕೊಠಡಿಗೆ ಎರಡು ಬಾಗಿಲು, ಒಂದು ಬೀದಿಯ ಕಡೆಗೆ, ಇನ್ನೊಂದು ಮನೆಯೊಳಕ್ಕೆ. ಯದುನಾಥ ಗೋಸ್ವಾಮಿಯು ನೀರು ತರುವುದಕ್ಕೆಂದು ಒಳಬಾಗಿಲಿಂದ ಮನೆಯೊಳಕ್ಕೆ ಹೋದನು. ಅತ್ತಕಡೆಗೆ ಒಂದು ಕಿಟಕಿಯೂ ಇದ್ದಿತು; ಆ ಕಿಟಕಿಯ ಪಕ್ಕದಲ್ಲಿ ಆ ಸರ್ವಾಂಗ ಸುಂದರಿಯು ಏಷಣ್ಣ ವದನಳಾಗಿ ನಿಂತಿರುವುದನ್ನು

ಅರಿಂದಮನು ಕಂಡನು. ಹಿಂದಿನ ದಿನ ಅವಳನ್ನೇ ಮನೆಯ ಹಿಂಭಾಗದ ಕಿಟಕಿಯಲ್ಲಿ ಅರೆಘಳಿಯವರೆಗೆ ಅರಿಂದಮನು ನೋಡಿದ್ದನು. ಅರಿಂದಮನು ತನ್ನ ಕಡೆ ನೋಡುತ್ತಿರುವುದನ್ನು ಕಂಡು ಆ ಭುವನಮೋಹಿನೀ ಮೂರ್ತಿಯು ಅಲ್ಲಿ ನಿಂತುಕೊಳ್ಳಲಿಲ್ಲ.

ಸ್ವಲ್ಪ ಹೊತ್ತಿನ ಮೇಲೆ ಯದುನಾಥ ಗೋಸ್ವಾಮಿಯು ನೀರು ತಂದು ಅರಿಂದಮನ ಕೈಗೆ ಕೊಟ್ಟನು. ಅರಿಂದಮನು ಒಂದೇ ಉಸುರಿನಲ್ಲಿ ಅಷ್ಟನ್ನೂ ಕುಡಿದುಬಿಟ್ಟನು.

ಯದುನಾಥ ಗೋಸ್ವಾಮಿಯು ಮೊದಲಿನಂತೆಯೇ ಕುತೂಹಲದಿಂದ, "ನೀವು ಯಾರ ಬಳಿಯಿಂದ ಬರುತ್ತಲಿದ್ದೀರಿ?" ಎಂದು ಪುನಃ ಪ್ರಶ್ನೆ ಮಾಡಿದನು.

ಅರಿಂದಮನು—(ನಿಟ್ಟುಸಿರು ಬಿಟ್ಟು) "ಹೇಳುತ್ತೇನಯ್ಯಾ ಹೇಳುತ್ತೇನೆ, ಆತುರಪಡಬೇಡಿ. ಊಸ್ ಬಹಳ ಸಂಕಟವಾಗುತ್ತದೆ. ಅಯ್ಯೋ! ಮೈಯ್ಯೆಲ್ಲಾ ಏನೇನೋ ಆಗುತ್ತಿದೆ. ತಲೆ ಸುತ್ತುತ್ತದೆ; ಕಣ್ಣು ಕತ್ತಲು ಕವಿದಿರುವುದಲ್ಲಾ ಕಾರಣವೇನು? ಇದೇನು ಶೀತೋಷ್ಣಗಳ ಲಕ್ಷಣವೋ? ಜ್ವರನಿಗೆ ಜ್ವರನಿಗೆ—ಇಲ್ಲವೆ? ಇದೇನಾಯಿತು? ಪ್ರಾಣಹೋಗುವಹಾಗೆ ಸಂಕಟವಾಗುತ್ತಿದೆ, ಅಯ್ಯೋ ಗೋಸ್ವಾಮಿ ಮಹಾಶಯ, ಬದುಕುವ ಹಾಗೆ ತೋರುವುದಿಲ್ಲ. ನೀರು, ನೀರು—ಇನ್ನಷ್ಟು ನೀರು ಬೇಕು; ಏಪರೀತ ದಾಹ—ಅಯ್ಯೋ ಸತ್ತೆನಲ್ಲ!" ಎಂದು ಹೇಳುತ್ತ ಹೇಳುತ್ತ ಅರಿಂದಮನು ಅಲ್ಲಿಯೇ ಮಲಗಿಬಿಟ್ಟನು; ನೆಲದ ಮೇಲೆಬದ್ದು ಒದೆದಾಡಿದನು; ಹಾಗೆಯೇ ಒಂದುಸಲ ಇತ್ತ ಕಡೆ, ಇನ್ನೊಂದುಸಲ ಅತ್ತಕಡೆ ಹೊರಳಾಡಿದನು; ಏಳುತ್ತಲೂ ಬೀಳುತ್ತಲೂ ಸಂಕಟಪಟ್ಟನು; ಕಡೆಗೆ ಅಜ್ಞಾನ—ಸತ್ಯಹಾಗೆ ಬಿದ್ದುಕೊಂಡನು. ಇದೆಲ್ಲವನ್ನೂ ಕಂಡು ಯದುನಾಥನಿಗೆ ಭಯವಾಯಿತು. ಭಯದಿಂದ ಮುಖವು ಬಾಡಿತು, ಹಾಗೆಯೇ ಏನುಮಾಡಬೇಕೆಂದು ಆಲೋಚಿಸಿ ಯಾವುದನ್ನೂ ನಿಶ್ಚಯಮಾಡಲಾರದವನಾದನು. ಚೀತ್ಕಾರ

ಮಾಡುತ್ತ ಹೆಂಡತಿಯನ್ನು ಕರೆದನು; ಹೆಂಡತಿ ಬಂದನಂತರ ಅತನಿಗೆ ಗಾಳಿ ಹಾಕೆಂದು ಹೇಳಿ ತಾನು ವೈದ್ಯನ ಮನೆಗೆ ಓಡಿದನು. ವೈದ್ಯನ ಮನೆ ಸಮೀಪವಿದ್ದಿಲ್ಲ.

ಹಶಾತ್ತಾಗಿ ಇದೇನು ವಿಪತ್ತು!

ಹದಿನೇಳನೆಯ ಪರಿಚ್ಛೇದ

ಮುಕ್ತಾಫಲ

ಅರಿಂದಮನು ಅದೇ ಅನುಕೂಲ ಸಮಯವೆಂದು ಭಾವಿಸಿದನು. ಯಾವ ಉದ್ದೇಶದಿಂದ ಅವನು ಸತ್ಯವನ ಹಾಗೆ ನಟಿಸುತ್ತಾ ನಿಲುವ ಮೊಲೆ ಮನ್ನಿಕೊಂಡನೋ ಆ ಉದ್ದೇಶವನ್ನು ಆಗ ಸುಲಭವಾಗಿ ಕೈಗೂಡಿಸಿಕೊಳ್ಳಬಹುದೆಂದು ಅತನಿಗೆ ತೋರಿತು. ಆಗ ಅತನು ಕುಗ್ಗಿದ ಸ್ವರದಿಂದ ಪುನಃ ನೀರು ಕೇಳಿದನು. ಬ್ರಾಹ್ಮಣಿಯು ನೀರು ತರುವುದಕ್ಕೆಂದು ಎದ್ದಾಗ "ನೀವು ಕುಳಿತುಕೊಳ್ಳಿ, ಈಗಿನಂತೆಯೇ ಗಾಳಿ ಬೀಸಿ. ನನ್ನ ಶರೀರವೆಲ್ಲವೂ ಬಹು ಭಾರವಾಗಿರುವ ಹಾಗಿದೆ. ಅಮ್ಮಾ! ನೀವು ನನಗೆ ಯಾವ ಜನ್ಮದ ತಾಯಿಯೋ, ಈಗ ನನ್ನನ್ನು ಬದುಕಿಸಿದಿರಿ" ಎಂದು ಅರಿಂದಮನು ಹೇಳಿದನು.

ಹೆಂಗಸರ ಮನಸ್ಸನ್ನು ಸ್ವಭಾವವಾಗಿ ಒಳ್ಳೆಯ ಮಾತುಗಳಿಂದ ಕರಗುತ್ತದೆ. ಆಗ ಬ್ರಾಹ್ಮಣಿಯು ಅಲ್ಲಿಯೇ ಕುಳಿತುಕೊಂಡು ಮತ್ತಷ್ಟು ಬಲವಾಗಿ ಗಾಳಿ ಬೀಸುತ್ತಾ ಕುಳಿತಳು. ಹೀಗೆ ಪುನಃ ಸ್ವಲ್ಪಹೊತ್ತು ಕಳೆಯಿತು. ಅರಿಂದಮನು ಪುನಃ ನೀರು ಕೇಳಿದನು. ಆಗ ಬ್ರಾಹ್ಮಣಿಯು ಜೋರಾಗಿ ಒಬ್ಬರನ್ನು ಕರೆದು, ಅವರ ಕೈಯಲ್ಲಿ ಬೀಸಣಿಗೆ ಕೊಟ್ಟು, ಗಾಳಿ ಹಾಕುವಂತೆ ಹೇಳಿ ತಾನು ನೀರು ತರುವುದಕ್ಕೆ ಹೋದಳು.

ಈಗ ಬೀಸಣಿಗೆ ಹಿಡಿದು ಕುಳಿತವಳೇ ಆ ಅಪರೂಪ ಲಾವಣ್ಯ ರಾಶಿಯೆಂದು ಅರಿಂದಮನು ಸೋಜಿಗಪಟ್ಟನು. ಇವಳು ಕಿಟಕಿ

ಯಲ್ಲಿ ನಿಂತಿದ್ದುದನ್ನು ಅವನು ಎರಡು ಸಾರಿ ನೋಡಿದ್ದನು. ಆಗ ಅವನು ಒಹು ಮೃದುಸ್ವರದಿಂದ, ಗೋಸ್ವಾಮಿ ಮಹಾಶಯನು ನಿನಗೆ ಏನಾಗಬೇಕವ್ವಾ?'' ಎಂದು ಪ್ರಶ್ನೆಮಾಡಿದನು.

ಅವಳು ಯಾವ ಉತ್ತರವನ್ನೂ ಹೇಳಲಿಲ್ಲ; ಸೊಡಲನಂತೆ ಗಾಳಿ ಬೀಸುತ್ತಲೇ ಇದ್ದಳು.

ಅರಿಂದಮನು ಸೊಡಲನ ಹಾಗೆಯೇ ಮೃದುಸ್ವರದಿಂದ ತನ್ನ ಪ್ರಶ್ನೆಗೆ ಉತ್ತರವಾಗಿ ''ನಿನಗೇನೂ ಆಗಬೇಕಾಗಿಲ್ಲವೆಂದು ತೋರುತ್ತದೆ—ತೋರುವುದೇನು, ನಿಜವಾಗಿಯೂ ಸಂಬಂಧಿಯಿಲ್ಲವೆಂದು ತೋರುತ್ತದೆ. ನನಗೆ ನಿನ್ನ ವಿಚಾರವು ಸ್ವಲ್ಪಸ್ವಲ್ಪ ಗೊತ್ತಿದೆ'' ಎಂದು ತಾನಾಗಿಯೇ ಹೇಳಿದನು.

ಕೇಳಿ ಬೀಸಣಿಗೆ ಹಿಡಿದಿದ್ದ ಸುಂದರಿಗೆ ಭಯವಾಯಿತು. ಅವಳು ಬೀಸಣಿಗೆಯನ್ನು ಬಿಸುಟು, ಎದ್ದುಹೋಗಲು ಪ್ರಯತ್ನಿಸಿದಳು.

ಅರಿಂದಮನು—ಭಯಪಡಿಸಬಹುದು—ನಾನು ನಿನಗೆ ಶತ್ರುವಲ್ಲ, ನನ್ನಲ್ಲಿ ಯಾವುದೊಂದು ವಿಚಾರವನ್ನೂ ಹುಡಿಮಾಡಬೇಡ. ನಿನ್ನಂಥಲೆ ಈಗ ಮತ್ತೊಂದು ಭಯಂಕರವಾದ ಪಿತೂರಿ ನಡೆಯುತ್ತಿದೆ. ಇಷ್ಟರಲ್ಲಿಯೇ ನೀನು ಇನ್ನೊಂದು ಆಪತ್ತಿಗೆ ಗುರಿಯಾಗಲಿರುವೆ; ಅದಕ್ಕೆ ಸಿಕ್ಕಿದ ಮೇಲೆ ನೀನು ಬದುಕಬಯಸುವೆಂಬ ಭರವಸೆ ಕೊಂಚವಾದರೂ ಇಲ್ಲ.

ಬೀಸಣಿಗೆ ಹಿಡಿದವಳು ಏನಮಾಡಬೇಕೆಂಬುದನ್ನು ಗೊತ್ತುಮಾಡಲಾರದೆ ಪುನಃ ಕುಳಿತುಕೊಂಡಳು.

ಅರಿಂದಮ—ನಿನಗೆ ಗೋರಾಚಾಂದ ಎಂಬವನು ಯಾವನಾದರೂ ಗೊತ್ತಿದೆಯೇ? ನನಗೆ ಯಾವುದನ್ನೂ ಹುಡಿಮಾಡಬೇಡ.

ಗೋರಾಚಾಂದನ ಹೆಸರು ಕೇಳಿದ ಕೂಡಲೇ ಆ ಯುವತಿಯ ಮುಖವು ವಿವರ್ಣವಾಯಿತು; ಪುನಃ ಅವಳು ಎದ್ದು ಹೋಗಲು ಪ್ರಯತ್ನಪಟ್ಟಳು. ಅರಿಂದಮನು, ''ಕುಳಿತುಕೋ ತಾಯಿ, ನನ್ನಿಂದ

ನಿನಗೆ ಉಪಕಾರವೇ ಹೊರತು, ಅಪಕಾರವಾಗುವುದಿಲ್ಲ. ಇದು ಖಂಡಿತ ನೆಂದು ತಿಳಿ. ನನ್ನಲ್ಲಿ ಯಾವುದನ್ನೂ ಮರೆಮಾಚಬೇಡ—ಮರೆಮಾಚುವು ದಾದರೆ ನೀನು ಬಳ್ಳಿಯ ಕೆಲಸಮಾಡಿದ ಹಾಗಾಗುವುದಿಲ್ಲ; ನನ್ನನ್ನು ನಂಬು. ಗೋರಾಚಾಂದನನ್ನು ನೀನು ಬಲ್ಲೆಯಷ್ಟೆ?'' ಎಂದು ಕೇಳಿದನು.

ಯುವತಿ—ಬಲ್ಲೆ.

ಅರಿಂದಮ—ಕೇಶವಚಂದ್ರನೆಂಬ ಯಾವನಾದರೂ ಬಡವಾನ್ ದಾರನನ್ನೂ ಬಲ್ಲೆಯಾ? ಎಂದು ಪುನಃ ಕೇಳಿದನು.

ಯುವತಿಯ ಕಾಂತಿಹೀನವಾದ ಮುಖವು ಮತ್ತೂ ಕಳೆ ಗುಂದಿತು. ಅವಳು ಕಂಪಿತ ಕಂಠದಿಂದ ''ಅವನನ್ನೂ ಬಲ್ಲೆ'' ಎಂದು ಹೇಳಿದಳು.

ಅರಿಂದಮ—''ನೀನು ಇಷ್ಟರಲ್ಲಯೇ ಪುನಃ ಅವರ ಕೈಸೇರುವೆ. ನಿಮ್ಮ ಈ ಗೋಸ್ವಾಮಿ ಮಹಾಶಯನೂ ಈ ಪಿತೂರಿಗೆ ಸೇರಿದ್ದಾನೆ; ಗೋರಾಚಾಂದನೆಂಬವನು ನಿನ್ನ ಸಂಜೆಯಾದಮೇಲೆ ಬಲ್ಲಗೆ ಬಂದು ಗೋಸ್ವಾಮಿ ಮಹಾಶಯನೊಂದಿಗೆ ರಹಸ್ಯವಾಗಿ ಆಲೋಚನೆ ಮಾಡಿ ಕೊಂಡು ಹೋಗಿರುತ್ತಾನೆ; ಈ ದಿವಸ ರಾತ್ರಿಯೇ ನೀನು ಪುನಃ ಅವರ ಕೈಗೆ ಬೀಳಬೇಕಾಗಿರುತ್ತದೆ. ಈ ಕಾಗದವನ್ನು ಓದಿನೋಡಿದರೆ ನಿನಗೆ ಬಲ್ಲವೂ ವಿದಿತವಾಗುವುದು'' ಎಂದು ಹೇಳಿ, ಕಾಗದವನ್ನು ಯುವತಿಯ ಕೈಗೆ ಕೊಟ್ಟನು. ಅದರಲ್ಲಿ ಹೀಗೆ ಬರೆದಿತ್ತು:—

''ಮಹಾಶಯ,

ತಮಗೆ ನಾನು ಅಪರಿಚಿತನಾಗಿದ್ದರೂ ತಮ್ಮ ವಿಚಾರವಾಗಿ ಗೋರಾಚಾಂದನು ಹೇಳಿದುದನ್ನೆಲ್ಲಾ ಕೇಳಿದ್ದರಿಂದ ತಾವು ಒಬ್ಬ ಮಹಾಪುರುಷರೆಂದೇ ಊಹಿಸುತ್ತೇನೆ. ರೇವತಿಯ ಚಿಕ್ಕಪ್ಪನಾದ ಗೋಪಾಲಚಂದ್ರವಸುವು ರೇವತಿಯನ್ನು ನಿಮಗೆ ಕೊಟ್ಟು ಮದುವೆ ಮಾಡಬೇಕೆಂದು ಸಂಕಲ್ಪಮಾಡಿರುವುದಾಗಿ ಕೇಳುತ್ತೇನೆ. ರೇವತಿಗೇನೋ ಈ ಮದುವೆಯಲ್ಲಿ ಮನಸ್ಸಿಲ್ಲವಂತೆ, ಆದ್ದರಿಂದಲೇ ಈ ಶುಭ

ಮಹೋತ್ಸವವು ನಿರ್ವಿಘ್ನವಾಗಿಯೂ ರಹಸ್ಯವಾಗಿಯೂ ನಡೆಯಬೇಕೆಂದು ಆಲೋಚಿಸಿ ರೇವತಿಯನ್ನು ತಮ್ಮ ತೋಟದ ಮನೆಗೆ ಕಳುಹಿಸಿಕೊಟ್ಟಿದ್ದರಂತೆ. ತಾವು ಇಲ್ಲದ ಸಮಯದಲ್ಲಿ ರೇವತಿಯು ಅಲ್ಲಿಂದ ಓಡಿಬಂದಿರುವಳು. ಹೆಣ್ಣುಮಕ್ಕಳಿಗೆ ವಯಸ್ಸಾಗುವವರೆಗೆ ಮದುವೆಮಾಡದಿರುವುದೇ ಈ ಎಲ್ಲ ತೊಂದರೆಗೂ ಮುಖ್ಯವಾದ ಕಾರಣ. ಆದಕಾರಣವೇ ನಮ್ಮವರ ಶಾಸ್ತ್ರದಲ್ಲಿ ಹೆಣ್ಣುಮಕ್ಕಳಿಗೆ ಎಷ್ಟು ಚಿಕ್ಕ ವಯಸ್ಸಿನಲ್ಲಿ ಮದುವೆ ಮಾಡಿದರೆ ಅಷ್ಟು ಪುಣ್ಯವೆಂದು ಬರೆದಿದೆ. ಮುಸ್ಸು ಹೆಚ್ಚಿದ ಹಾಗೆಲ್ಲಾ ಹೆಣ್ಣುಮಕ್ಕಳು ತಾವು ತಾವೇ ಗಂಡನನ್ನು ಆರಿಸಿಕೊಳ್ಳುವುದನ್ನು ಕಲಿಯುತ್ತಾರೆ. ಪಾತ್ರಾಪಾತ್ರಗಳ ವಿಚಾರವನ್ನು ತಿಳಿಯಲಾರರು. ತಮ್ಮ ವಿಷಯದಲ್ಲಿ ರೇವತಿಯು ನಮಗೆ ಬಹುವಾಗಿ ಸುಳ್ಳುಮಾತುಗಳನ್ನು ಹೇಳಿದ್ದಳು. ನಾನು ಅವೆಲ್ಲವನ್ನೂ ನಂಬಲಿಲ್ಲ. ಹೇಗಾದರೂ ಆಗಲಿ, ಈ ವಿವಾಹವನ್ನು ಮಾಡಿಯೇ ಮಾಡಬೇಕೆಂಬ ವಿಷಯದಲ್ಲಿ ನನಗೂ ಇಚ್ಛೆಯುಂಟು. ಅಲ್ಲದೆ ನಿಮ್ಮ ಸಂಸತ್ಸಮೃದ್ಧಿಗಳ ವಿಚಾರವಾಗಿ ಗೋರಾಚಾಂದನು ಹೇಳುವುದನ್ನು ಕೇಳಿದರೆ ಇದೆಲ್ಲವೂ ರೇವತಿಯ ಸೌಭಾಗ್ಯವೆಂದೇ ಹೇಳಬೇಕಾಗುತ್ತದೆ. ಈಗ ರೇವತಿ ನನ್ನ ಬಳಿಯಲ್ಲಿದ್ದಾಳೆ; ಗೋರಾಚಾಂದನು ಇನ್ನೂರ ಐವತ್ತು ರೂಪಾಯಿಗಳನ್ನು ಕೊಟ್ಟು ರೇವತಿಯನ್ನು ನನ್ನಿಂದ ಕರೆದುಕೊಂಡು ಹೋಗಬೇಕೆಂದು ಅಪೇಕ್ಷಿಸಿದನು; ಆದರೆ ಮದುವೆ ಮುಂತಾದ ಶುಭಕಾರ್ಯಗಳಲ್ಲಿ ಗುರುದಕ್ಷಿಣೆಯೇ ಮೊದಲಾದ ಕಾರಣಗಳಿಂದ ನನಗೆ ಮೂರು ನಾಲ್ಕು ನೂರು ರೂಪಾಯಿಗಳ ಆದಾಯವುಂಟು; ಅದೂ ಅಲ್ಲದೆ ನಾನು ರೇವತಿಯನ್ನು ಹುಡುಕಿ ಹಿಡಿದು ತಂದಿದ್ದೇನೆ. ಅದಕ್ಕೋಸ್ಕರವಾಗಿ ನಿಮ್ಮಂತಹ ಜಮಿನ್‌ದಾರರಲ್ಲಿ ಇನ್ನೂ ಸ್ವಲ್ಪ ಹೆಚ್ಚಾಗಿಯೇ ದೊರೆಯಬೇಕೆಂದು ಆಶಿಸುತ್ತೇನೆ. ಇದೇನೂ ಅನ್ಯಾಯವಲ್ಲವಲ್ಲ? ಈ ಕಾಗದವನ್ನು ಕಂಡಕೂಡಲೆ ತಾವು ಐದುನೂರು ರೂಪಾಯಿಗಳನ್ನು ಗೋರಾಚಾಂದನ ಕೈಲಿ ಕೊಟ್ಟು ಕಳುಹಿಸಿಕೊಡಿ. ನಾನು ಒಡನೆಯೇ ಅವನೊಡನೆ ರೇವತಿಯನ್ನು ಕಳುಹಿಸಿಕೊಡುತ್ತೇನೆ.

ಇಂತು,

ಶ್ರೀ ಯದುನಾಥಶರ್ಮ."

ಜೀವನಪಾಲನ ತೋಟದಿಂದ, ಮೋಹಿನಿಯ ಸಹಾಯ ಹೊಂದಿ, ದುರಾತ್ಮನಾದ ಕೇಶವಚಂದ್ರನ ದೆಸೆಯಿಂದ ಪಾರಾಗಿ, ಆ ದಿನ ರಾತ್ರಿ ಆ ಬಿರುಗಾಳಿ ಮಳೆಗಳಿಂದ ಕಷ್ಟಪಡುತ್ತಾ, ಗೋಸ್ವಾಮಿಪುರದ ಮಾರ್ಗವನ್ನು ತಿಳಿಯುವುದಕ್ಕೋಸ್ಕರ ಪಲಾಯಿಮಂಡಲನ ಅಂಗಡಿಯ ಬಳಿಗೆ ಬಂದಿದ್ದಳು ಈ ರೇವತಿಯೇ ಎಂಬುದನ್ನು ಪಾತಕ ಮಹಾಶಯರಿಗೆ ಬಿಡಿಸಿ ಹೇಳಬೇಕಾದುದಿಲ್ಲವಷ್ಟೆ; ಮತ್ತೂ ರಕ್ತಕಲೆಗಳುಳ್ಳ ಇಷ್ಟು ಬಟ್ಟೆಯನ್ನು ನೋಡಿಯೇ ಮಾರನೆಯ ದಿನ ಆ ಊರಿನಲ್ಲೆಲ್ಲಾ ಹಾಹಾಕಾರವೆದ್ದದ್ದು. ಅದೇ ದಿನ ರಾತ್ರಿ ರೇವತಿಯು ಹೊರಟು ಬಂದನೆಂಬಲ್ಲಿ ಸ್ವಲ್ಪ ಹೊತ್ತಿನೊಳಗಾಗಿ ಪಲಾಯಿಮುಂಡಲನ ಅಂಗಡಿಗೆ ಹೋಗಿ ಯಾವನು ಮುಟ್ಟುಗೆಯ ವಿಚಾರವಾಗಿ ಪ್ರಶ್ನೆ ಮಾಡಿದನೋ ಮತ್ತೆ ಮಾರನೆಯ ದಿನ ರಾತ್ರಿ ಅರಿಂದಮನನ್ನು ಏಜನವಾದ ಪ್ರಾಂತರಕ್ಕೆ ಕರೆದುಕೊಂಡು ಹೋಗಿ ಕೊಲ್ಲಬೇಕೆಂದು ಯಾವನು ಪ್ರಯತ್ನಿಸಿದ್ದನೋ ಅವನೇ ಆ ಕೇಶವಚಂದ್ರನ ವಿಶ್ವಾಸಪಾತ್ರನಾದ ಸೇವಕ—ಅವನು ಗೋರಾಚಾಂದನಲ್ಲದೆ ಮತ್ತೆ ಯಾವನೂ ಅಲ್ಲ.

ಹದಿನೆಂಟನೆಯ ಪರಿಚ್ಛೇದ

ರೇವತಿಯ ಸಂದೇಹ

ಕಾಗದವನ್ನು ಓದಿದ ಕೂಡಲೇ ರೇವತಿಗೆ ತಲೆತಿರುಗುತ್ತಿರುವಂತೆ ತೋರಿತು. ಸರ್ವಾಂಗಗಳೂ ಸ್ವಾಧೀನ ತಪ್ಪಿದುವು. ಶರೀರದೊಳಗಿನ ರಕ್ತವೆಲ್ಲವೂ ಹೃತ್ಪಿಂಡದೊಳಕ್ಕೆ ಪ್ರವೇಶಿಸಿ ಅದರಿಂದ ಹೃದಯವು ಒಹು ಭಾರವಾಗಿದೆಯೋ ಎನ್ನುವಂತೆ ತೋರಿತು. ''ನಾನು ಅದನ್ನು ಯಾವ ರೀತಿಯಿಂದಲೂ ನಂಬಲಾರೆ'' ಎಂಬ ಮಾತು ಅವಳಿಗೆ ತಿಳಿಯದ ಹಾಗೆಯೇ ಅವಳ ಬಾಯಿಂದ ಹೊರಟಿತು.

ಅರಿಂದಮ—ಯಮುನಾಥ ಗೋಸ್ವಾಮಿಯ ಕೈಬರಹದೊಡನೆ ಹೋಲಿಸಿ ನೋಡುವುದರಿಂದ ನಂಬುವಂತೆ, ಅದೀಯೆ.

ರೇವತಿ—ನಾನು ಅವರ ಕೈಬರಹವನ್ನು ಬಲ್ಲೆ.

ಅರಿಂದಮ—ಇದು ಅವರ ಕೈಬರಹವಲ್ಲವೇನು?

ರೇವತಿ—ಅವರದೇ ಕೈ ಅಕ್ಷರ; ಈ ರುಜುವು ಕೂಡ ಅವರದೇ. ಗೋಸ್ವಾಮಿ ಮಹಾಶಯನು ನಮಗೆ ಗುರುವಾದವನು. ನಮಯ ಸಂದರ್ಭಗಳಲ್ಲಿ ನಮ್ಮ ಮನೆಗೆ ಕಾಗದ ಪತ್ರಗಳನ್ನೂ ಬರೆಯುತ್ತಾನೆ. ಆದ್ದರಿಂದ ನಾನು ಆತನ ಕೈ ಅಕ್ಷರವನ್ನೂ ರುಜುವನ್ನೂ ಅನೇಕ ಬಾರಿ ನೋಡಿದ್ದೇನೆ. ನೋಡಿದ ಕೂಡಲೇ ತಿಳಿಯುಬಲ್ಲೆ. ತಮಗೆ ಈ ಕಾಗದ ಬಲ್ಲ ಸಿಕ್ಕಿತು?

ಅರಿಂದಮ—ನೀನು ನನ್ನನ್ನು ಸಂಬುಬೆಯಾಗಿರೆ, ಯಾವ ವಿಷಯವನ್ನೂ ಮುಚ್ಚಿಡಬಾರದೆಂದು; ನೀನು ಯಾರು? ನಿಮ್ಮ ಸ್ಥಳವು ಯಾವುದು, ತಾಯಿತಂದೆಗಳ ಹೆಸರೇನು, ಕೇಶವಬಾಬು ಯಾರು, ಗೋರಾಚಾಂದನು ಯಾರು, ನಿನ್ನ ಈ ದುರವಸ್ಥೆಗೆ ಏನು ಕಾರಣ, ಇವುಗಳ ವಿಚಾರವಾಗಿ ನಿನಗೆ ತಿಳಿದಿರುವ ಮಟ್ಟಿಗೆ, ನಿಷ್ಕಪಟವಾಗಿ ಹೇಳು; ನನ್ನ ದೆಸೆಯಿಂದ ನಿನಗೆ ಯಾವ ಬಗೆಯಾದ ಕೆಡಕೂ ಆಗುವುದಿಲ್ಲವೆಂದು ತಿಳಿ.

ರೇವತಿ—ತಮಗೆ ಈ ಕಾಗದವು ಬಲ್ಲ ಸಿಕ್ಕಿತು?

ಅರಿಂದಮ—ನಿನ್ನೆಯ ರಾತ್ರಿ, ಗೋಸ್ವಾಮಿ ಮಹಾಶಯ ನೊಂದಿಗೆ ವಿಷಯ ಕತೆಗಳನ್ನಾಡಿ ಕಾಗದವನ್ನು ತೆಗೆದುಕೊಂಡು ಗೋರಾಚಾಂದನು ಹೊರಗೆ ಹೊರಟುದನ್ನು ಕಂಡು ಆಗ ನಾನು ಈ ಕಾಗದವನ್ನು ಕಿತ್ತುಕೊಳ್ಳಬೇಕೆಂದು ಅವನನ್ನೇ ಹಿಂಬಾಲಿಸಿದೆ. ದಾರಿಯಲ್ಲಿ ಅವನ ಸಂಗಡ ಒಂದೆರಡು ವಿಷಾತುಕತೆಗಳಾದ ಮೇಲೆ ನಿನ್ನ ಪ್ರಸ್ತಾವವನ್ನೆತ್ತಿದೆ. ನಿನ್ನ ಮೃತದೇಹವನ್ನು ತೋರಿಸುವೆನೆಂದು ಹೇಳಿ ಅವನು ನನ್ನನ್ನು ಒಂದು ನಿರ್ಜನವಾದ ಅರಣ್ಯಕ್ಕೆ ಕರೆದುಕೊಂಡು ಹೋಗಿ ಕೊಂದು ಹಾಕೋಣವೆಂದು ಆಲೋಚಿಸಿ ನನ್ನನ್ನು ತನ್ನ ಸಂಗಡ ಬರಬೇಕೆಂದು ಹೇಳಿದನು. ನಾನು ಅವನ ಮನೋಭಿಪ್ರಾಯವನ್ನು ತಿಳಿದೂ ಕೂಡ ಅವನ ಸಂಗಡಲೇ ಹೋದೆ. ಅಲ್ಲಿ, ಆ ಏಜನಸ್ಥಾನದಲ್ಲಿ,

ನಾನು ಏಕಾಂಗಿಯಾಗಿ ಸಿಕ್ಕಿದುದನ್ನು ಕಂಡು ಅವನು ನನ್ನನ್ನು ಚೂರಿಯಿಂದ ಹೊಡೆಯೆಬಂದನು. ನಾನು ಅವನನ್ನು ನೆಲಕ್ಕುರುಳಿಸಿ ಅವನ ಎದೆಯಮೇಲೆ ಹತ್ತಿ ಕುಳಿತುಕೊಂಡೆನು. ಆಗ ಅವನಿಗೆ ತಿಳಿಯದ ಹಾಗೆ ಈ ಕಾಗದವನ್ನು ಸಂಗ್ರಹಿಸಿಕೊಂಡು ಅವನನ್ನು ಬಿಟ್ಟುಬಂದೆ.

ರೇವತಿ—(ಸಂತೋಷಿಸುತ್ತೆ) ನಿಮ್ಮ ಅಭಿಪ್ರಾಯವೇನೋ ಗೊತ್ತಾಗಲಿಲ್ಲ. ಹೇಗಾದರೂ ಆಗಲಿ, ನೀವು ಈ ಎಲ್ಲ ವ್ಯಾಪಾರದಲ್ಲಿಯೂ ಸೇರಿಯೇ ಇದ್ದೀರಲ್ಲವೆ?

ಅರಿಂದಮ—ನಾನು ಒಬ್ಬ ಪೋಲೀಸ್ ನೌಕರ. ನಿನ್ನ ಏಕತ್ತಿನ ವಿಚಾರವನ್ನು ನಾನು ಊಹೆಯಿಂದ ಕೊಂಚ ಮಟ್ಟಿಗೆ ತಿಳಿದಿದ್ದೇನೆ. ಸನ್ನಿಹಿತವಾಗಿರುವ ಈ ವಿಪತ್ತಿನಿಂದ ನಿನ್ನನ್ನು ಉಳಿಸುವುದು ಸಾಧ್ಯವಾಗುವುದಾದರೆ ನಾನು ಯಾವ ಉದ್ದೇಶದಿಂದ ಈ ಕೆಲಸಕ್ಕೆ ಕೈ ಹಾಕಿದೆನೋ ಅದು ಬಹುಮಟ್ಟಿಗೆ ಸಫಲವಾದ ಹಾಗೆಯೇ ಸರಿ ಎಂದು ತಿಳಿದಿದ್ದೇನೆ.

ಆ ಸಮಯದಲ್ಲಿ ರೇವತಿಯ ಮನೋಭಾವವು ಹೇಗಿದ್ದಿತೆಂಬುದನ್ನು ಸರಿಯಾಗಿ ವರ್ಣಿಸಿ ಹೇಳುವುದು ಸಾಧ್ಯವಿಲ್ಲ. ಭಯ ಮತ್ತೂ ವಿಸ್ಮಯ, ಆಸೆ ಮತ್ತೂ ನಿರಾಶೆ, ಮತ್ತೂ ಘೋರತರವಾದ ಸಂದೇಹ—ಇವೆಲ್ಲವೂ ಒಂದಾಗಿ ಸೇರಿ ಅವಳ ದುರ್ಬಲ ಹೃದಯವನ್ನು ಕಚೆಯುತ್ತಿದ್ದುವು. ರೇವತಿಯು ಅಸ್ಫುರವಾಗಿ, "ನೀವು ಪೋಲೀಸಿನವರಾದರೆ, ಗೋರಾಚಾಂದನನ್ನು ಹಿಡಿದು ಪುನಃ ಬಿಟ್ಟುಬಿಟ್ಟಿದೇಕೆ" ಎಂದು ಕೇಳಿದಳು.

ಅರಿಂದಮ—ಬಿಟ್ಟು ಬಂದುದೇನೋ ನಿಜ, ಯಾವ ಸಮಯದಲ್ಲಿ ಬೇಕಾದರೂ ಪುನಃ ಹಿಡಿಯುತ್ತೇನೆ; ಅವನ ಮುಖವನ್ನು ಗುರ್ತಿಸಿ ತಿಳಿದನಂತರ ಅವನು ಸಿಕ್ಕಿಬಿದ್ದ ಹಾಗೆಯೇ. ಬೇಗ ಬೇಗ ಒಬ್ಬೊಬ್ಬ ಮನುಷ್ಯನನ್ನಾಗಿ ಹಿಡಿದು ಹಾಕುವುದು ನನಗೆ ಅಭ್ಯಾಸವಿಲ್ಲ. ಹಾಗೆ ಮಾಡುವುದರಿಂದ ಬೇಗನೆ ತಪ್ಪು ಮಾಡಿದವನು ಸಿಕ್ಕುವುದೂ ನಿಜ. ಬೇಗನೆ ವಿಚಾರಣೆಯಾಗಿ ಅವನಿಗೆ ಯಾವ್ವದಾದರೊಂದು ಶಿಕ್ಷೆಯಾಗುವುದೂ ನಿಜ; ಆ ರೀತಿಯಾಗಿ ಆಗುವ ಶಿಕ್ಷೆಗಳಲ್ಲಿ ಅನೇಕವಾಗಿ

ಅಲ್ಪಾಪರಾಧಕ್ಕೆ ಹೆಚ್ಚು ಶಿಕ್ಷೆಯಾಗುತ್ತದೆ; ಮಹಾಪರಾಧ ಮಾಡಿದವರು ಸಾಧಾರಣವಾಗಿ ದಂಡಿತರಾಗುತ್ತಾರೆ. ಯಾವನನ್ನು ಒಂದಿಯನ್ನಾಗಿ ಮಾಡಿ ವಿಚಾರಾಲಯಕ್ಕೆ ಕಳುಹುತ್ತೇನೆಯೋ ಅವನ ವಿಷಯವಾಗಿ ತಿಳಿಯಬೇಕಾದುದನ್ನೆಲ್ಲಾ ತಿಳಿಯುವತನಕ ನಾನು ಅವನನ್ನು ಬಿಡಿದು ಹಾಕುವುದಿಲ್ಲ. ಅವನು ತನ್ನ ಪಾಪಚರಿತ್ರೆಯನ್ನೂ ತನ್ನ ಸ್ವಭಾವ ಚರಿತ್ರೆಯನ್ನೂ ತಾನು ಹೇಗೆ ತಿಳಿದಿದ್ದಾನೆಯೋ ಹಾಗೆಯೇ ನಾನೂ ಅವೆಲ್ಲವನ್ನೂ ಅವನ ಹಾಗೆಯೇ ಸಂಪೂರ್ಣವಾಗಿ ತಿಳಿಯಬೇಕು. ಅವನನ್ನು ಬಿಟ್ಟುಬಂದ ಕಾರಣದಿಂದ ನೀನು ನನ್ನ ಬಹಿರಾಚಾರವಾಗಿ ಸಂದೇಹಪಡುತ್ತಿರುವೆ ಎಂದು ತೋರುತ್ತದೆ. ಈಗಲೂ ಹೇಳುತ್ತೇನೆ, ಇದರಿಂದ ನಿನಗೆ ಒಳ್ಳೆಯದಾಗುವುದಿಲ್ಲ. ನನ್ನನ್ನು ಸಂಬುವುದಾದರೆ—ಯಾವುದೊಂದು ಮಾತನ್ನೂ ನನಗೆ ಮುರಿ ಮಾಡಬೇಡ. ನೀನು ಯಾರು, ನಿಮ್ಮ ಸ್ಥಳ ಯಾವುದು, ನಿಮ್ಮ ತಂದೆಯ ಹೆಸರೇನು, ನಿನ್ನ ಈ ದುರವಸ್ಥೆಗೆ ಕಾರಣವಾದರೂ ಏನು, ಇವೆಲ್ಲವುಗಳ ಬಹಿರಾಚಾರವಾಗಿ ನಿನಗೆ ತಿಳಿದಿರುವುದೆಲ್ಲವನ್ನೂ ನನಗೆ ನಿಷ್ಕಪಟಭಾವದಿಂದ ಹೇಳು; ನಾನು ಸಾರಿ ಸಾರಿ ಹೇಳುತ್ತೇನೆ. ನನ್ನ ದೆಸೆಯಿಂದ ನಿನಗೆ ಕೆಡಕಾಗುವುದಿಲ್ಲ.

ಹತ್ತೊಂಭತ್ತನೆಯ ಪರಿಚ್ಛೇದ

ರೇವತಿಯ ಹೇಳಿಕೆ

ರೇವತಿ ಹೇಳತೊಡಗಿದಳು. ನನ್ನ ಸ್ಥಳವು ಪೇಣೀವಾಧವಪುರ. ನನ್ನ ತಂದೆಯ ಹೆಸರು ಚಾನಕೀನಾಥವಸು. ಆತನು ಮೃತಿ ಹೊಂದಿ ಸುಮಾರು ಐದನು ವರ್ಷಗಳಾಗಿರಬಹುದು. ತಂದೆಯು ಮೃತನಾದ ನಂತರ, ಸುಮಾರು ಒಂದು ವರ್ಷದ ಹಿಂದೆ, ತಾಯಿ ಸತ್ತುಹೋದಳು. ನನಗೆ ಒಬ್ಬಳು ತಂಗಿ ಇದಾಳೆ, ಅವಳ ಹೆಸರು ರೋಹಿಣೀ. ನಾವಿಬ್ಬರು ಸಹೋದರಿಯರೂ ಚಿಕ್ಕಪ್ಪನ ಹತ್ತಿರ

ದಲ್ಲಿದ್ದೆವು. ಚಿಕ್ಕಪ್ಪನ ಹೆಸರು ಗೋಪಾಲಚಂದ್ರ ವಸು. ಚಿಕ್ಕಪ್ಪನ ಸ್ಥಿತಿಗತಿಗಳು ಅಷ್ಟೇನೂ ಚೆನ್ನಾಗಿರಲಿಲ್ಲ. ಅವನು ಒಂದು ಸಲ ನಮ್ಮ ತಂದೆಯ ಮೇಲೆ ವ್ಯಾಜ್ಯವನ್ನು ಹೂಡಿ ತನ್ನ ಆಸ್ತಿಯನ್ನೆಲ್ಲಾ ಹಾಳು ಮಾಡಿಕೊಂಡನೆಂದು ಕೇಳಿದ್ದೇನೆ. ಆನಂತರ ನಮ್ಮ ತಂದೆಯು ಅವನನ್ನು ಕರೆಯಿಸಿ ತನ್ನ ಜಮೀನ್ದಾರಿಯಲ್ಲಿ ಅವನಿಗೆ ಕಾಲು ಭಾಗವನ್ನು ಕೊಟ್ಟನು. ಅಲ್ಲಿಂದೀಚೆಗೆ, ನಮ್ಮ ತಂದೆಗೂ ಚಿಕ್ಕಪ್ಪನಿಗೂ ಬಿದ್ದು ಮನಸ್ತಾಪವಾಲಿಸ್ಯವು ತೊಡೆದುಹೋಯಿತು. ತಂದೆಯು ಮೃತನಾದ ಮೊದಲು ಈ ಐದು ವರ್ಷಗಳವರೆಗೂ ನಮ್ಮ ಚಿಕ್ಕಪ್ಪನೇ ತಂದೆಯ ಜಮೀನ್ದಾರಿಯ ಎಲ್ಲ ಕಾರುಬಾರುಗಳನ್ನೂ ನೋಡಿಕೊಳ್ಳುತ್ತಾ ಬಂದನು. ನಮ್ಮ ಚಿಕ್ಕಪ್ಪನಿಗೆ ಮಕ್ಕಳು ಮರಿಗಳೇನೂ ಇಲ್ಲ. ನಮ್ಮ ಚಿಕ್ಕಪ್ಪನೂ ಮತ್ತೂ ಚಿಕ್ಕಮ್ಮನೂ ನಮ್ಮನ್ನು ತಾಯಿತಂದೆಗಳಿಗಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದರು. ನನಗೋಸ್ಕರವಾಗಿ ನಮ್ಮ ಚಿಕ್ಕಪ್ಪನು ಈಗ ಎಷ್ಟೊಂದು ಅನಾಹುತ ನಡಿಸುವನೋ ತಿಳಿಯದು. ನೀವು ನನ್ನನ್ನು ಹೇಗಾದರೂ ಮಾಡಿ ನಮ್ಮ ಚಿಕ್ಕಪ್ಪನ ಬಳಿಗೆ ಕಳುಹಿಸಿದರೆ ನನಗೆ ತುಂಬ ಉಪಕಾರ ಮಾಡಿದ ಹಾಗಾಗುತ್ತದೆ.

ಅರಿಂದಮ—ಆ ಮಾತು ಆಮೇಲಾಗಲಿ. ಈಗ ನಿನ್ನ ದೂರ ಪಸ್ಥಿಯು ಕಾರಣವೇನೋ ಹೇಳು. ನಾನು ಅದಕ್ಕೇನಾದರೂ ಪ್ರತೀಕಾರ ಮಾಡಬಹುದೋ ಏನೋ ನೋಡೋಣ.

ರೇವತಿ—ಈಚೀಚಿಗೆ ಕೇಶವಚಂದ್ರನೆಂಬವನು ನಮ್ಮ ಚಿಕ್ಕಪ್ಪನನ್ನು ನಿತ್ಯವೂ ನೋಡುವುದಕ್ಕೆ ಬರುತ್ತಿದ್ದನು. ಇದಕ್ಕೆ ಮೊದಲು ಅತನನ್ನು ಎಂದೂ ನೋಡಿದ್ದಿಲ್ಲ. ಮನುಷ್ಯನು ಬಹು ವಿಷ್ಟಭಾಷಿ, ಚಿಕ್ಕಪ್ಪನಿಗೂ ಅತನಿಗೂ ತುಂಬ ಸ್ನೇಹವಿರುವಂತಾಯಿತು. ಎಂದಾದರೊಂದು ದಿನ ಅವನು ಬರುವುದು ತಡವಾದರೆ ನಮ್ಮ ಚಿಕ್ಕಪ್ಪನು ಆವನಿಗೆ ಹೇಳಿ ಕಳುಹಿಸುತ್ತಿದ್ದನು. ಆವನು ಬಂದನೆಂದರೆ ಒಂದೊಂದು ಸಲ ಅವನೊಡನೆ ಮಾತುಕತೆಗಳಾಡುತ್ತಿದ್ದನು. ಒಂದೊಂದು ಸಲ ಪಗಡೆಯಾಡುವನು. ಕೆಲವು ಸಮಯದಲ್ಲಿ ಗಾಳಿಸವಾರಿ ಹೋಗು

ವನು. ಕೇಶವಚಂದ್ರನು ಎಂದಾದರೂ ಬರದೆ ಇದ್ದರೆ ಆ ದಿನವು ಚಿಕ್ಕಪ್ಪನು ತುಂಬಾ ಬೇಸರದಿಂದಿರುತ್ತಿದ್ದನು. ಕೇಶವಚಂದ್ರನೂ ಸಹ, ನಮ್ಮ ಚಿಕ್ಕಪ್ಪನ ಹಾಗೆಯೇ, ನಮ್ಮನ್ನು ವಿಶ್ವಾಸದಿಂದ ಕಾಣುತ್ತಿದ್ದನು; ಆದರೆ ಅವನು ಮನುಷ್ಯನಲ್ಲ, ಪಿಶಾಚ. ಅವನ ಮನೆಯ ಭಾಗವು ಬೇರೆಯೆ ತರಹೆಯದು. ಇಂದಿಗೆ ಏಳು ದಿನಗಳಾದುವು, ಯಾವುದೋ ಔಷಧದ ಸಹಾಯದಿಂದ ನನಗೆ ಚ್ಲಾನವಿಲ್ಲದ ಹಾಗೆ ಮಾಡಿ, ಕದ್ದುಕೊಂಡು ಬಂದಿರುವನು. ನನಗೆ ಪ್ರಜ್ಞೆ ಬಂದಾಗ, ಏನೂ ತಿಳಿಯುವಾಗಲಿಲ್ಲ. ತಲೆಯಲ್ಲಿ ತುಂಬ ಬಾಧೆಯಾಗುತ್ತಲಿದ್ದಿತು. ನನ್ನ ಶರೀರವೆಲ್ಲವೂ ಸ್ವಾಧೀನ ತಪ್ಪಿದಹಾಗಿದ್ದಿತು; ಹೆಚ್ಚು ಹೇಳುವುದೇನು, ಕಣ್ಣು ತೆರೆದು ಚೆನ್ನಾಗಿ ನೋಡುವುದೂ ಕಷ್ಟವೆಂದು ತೋರುತ್ತಿದ್ದಿತು. ನನಗೆ ಎಚ್ಚರವಾದಾಗ, ನಾನು ದೋಣಿಯಲ್ಲಿದ್ದೆನು. ದೋಣಿಯು ಗಂಗಾನದಿಯ ಒಂದು ತೀರಕ್ಕೆ ಸೇರಿ ನಿಂತಿದ್ದಿತು. ಆ ಕಡೆ ಭಯಂಕರವಾದ ಅರಣ್ಯ; ಅಂತಹ ಅರಣ್ಯವನ್ನು ನಾನು ಎಂದೂ ನೋಡಿದ್ದೇ ಇಲ್ಲ. ದೋಣಿಯ ಮೇಲೆ ಕೇಶವಚಂದ್ರ ಮತ್ತೂ ನಾಲ್ಕಾರು ಜನ ಆಳುಗರು. ಅವರು ಹೊಗೆಸೊಪ್ಪು ಅಗಿಯುತ್ತಿದ್ದರು ಮತ್ತೂ ಏನೇನೋ ಮಾತನಾಡಿಕೊಳ್ಳುತ್ತಿದ್ದರು. ಆಗ ನನಗೆಲ್ಲವೂ ಕನಸಿನಂತೆ ಕಾಣುತ್ತಿದ್ದಿತು. ಯಾವುದನ್ನೂ ಸರಿಯಾಗಿ ತಿಳಿಯುವಾಗಲಿಲ್ಲ. ತಲೆ ಮತ್ತಷ್ಟು ಭಾರವಾಗುತ್ತ ಬಂದಿತು. ತೀರದಲ್ಲಿ ಒಬ್ಬ ಮನುಷ್ಯ ನಿಂತುಕೊಂಡಿದ್ದನು. ಅವನೇ ಆ ಗೋರಾಚಾಂದ, ಅವನನ್ನೂ ನಾನು ಮೊದಲೆ ಎಂದೂ ಕಂಡಿದ್ದಿಲ್ಲ. ಅವನು ''ಇವಳನ್ನು ಕರೆದುಕೊಂಡು ಹೋಗಲೇನು? ಇವಳಿಗೆ ಪ್ರಜ್ಞೆ ಬಂದಿರುವಂತೆ ಕಾಣುತ್ತದೆ'' ಎಂದು ಹೇಳಿದನು. ಅವನ ಕಠೋರಸ್ವರವು ಸ್ವಾಧೀನ ತಪ್ಪಿದ್ದ ನನ್ನ ಕಿವಿಗೆ ಮತ್ತಷ್ಟು ಕರ್ಕಶವಾಗಿ ತೋರಿತು; ನನಗೆ ತುಂಬ ಭಯವಾಯಿತು. ಮುಖ್ಯವಾಗಿ, ದಸ್ಯುಸದೃಶವಾಗಿರುವ ಅವನ ವಿಕಾರವಾದ ಆಕಾರವನ್ನು ಕಂಡು ಭಯದಿಂದ ಪ್ರಾಣವೇ ಹಾರಿ ಹೋಗುವ ಹಾಗಾಯಿತು. ನಾನು ಚೀತ್ಕಾರ ಮಾಡುತ್ತ ಅಳುವುದಕ್ಕೆ

ಹೊವಲಿಟ್ಟೆನು.—ಆದರೆ ಸಾಧ್ಯವಾಗಲಿಲ್ಲ; ಬಹುವಾಗಿ ಆಶಕ್ತಳಾಗಿ ಬಿದ್ದಿದ್ದೆನು. ಅಳುವುದಕ್ಕೆ ಪ್ರಯತ್ನಪಟ್ಟಾಗ ಬದಿಯಲ್ಲಿ ನೋವಾಯಿತು; ಅಳುವುದಕ್ಕೆ ಆಗಲಿಲ್ಲ. ಆಗ ಕೇಶವಚಂದ್ರನು ಅವಸರವಸರವಾಗಿ ಬಂದು ನನ್ನ ಮೂಗಿನ ಹತ್ತಿರ ಒಂದು ಕರವಸ್ತ್ರವನ್ನು ಒತ್ತಿಹಿಡಿದನು. ತಲೆಯಮೇಲೆ ಸಿಡಿಲುಬಿದ್ದ ಹಾಗಾಯಿತು; ಪುನಃ ನನಗೆ ಪ್ರಜ್ಞೆ ತಪ್ಪಿತು. ಆಮೇಲೆ ನನಗೆ ಬಹ್ವರಪಾದಾಗ ಆ ಗಂಗೆ ಇಲ್ಲ, ಆ ವನವಲ್ಲ, ದೋಣಿಯಿಲ್ಲ, ದೋಣಿ ನಡಿಸುವವರು ಯಾರೂ ಇಲ್ಲ. ನಾನು ದಟ್ಟವಾದ ಅರಣ್ಯವಮಧ್ಯದಲ್ಲಿ ದುರ್ಗಂಧಪೂರ್ಣವಾದ ಒಂದು ಕೊಠಡಿಯೊಳಗೆ ಒಬ್ಬಳೇ ಬಿದ್ದಿದ್ದೆನು. ಕೊಠಡಿಯ ಬಾಗಿಲಿಗೆ ಹೊರಗಡೆ ಬೀಗ ಹಾಕಿತ್ತು. ಹೊರಗೆ ಹೋಗುವುದಕ್ಕೆ ಮಾತ್ರವಲ್ಲ ಪಾರ್ಶ್ವವೂ ತಿರಲಿಲ್ಲ. ಅನಂತರ ಕೇಶವಚಂದ್ರನು ಪ್ರತಿನಿತ್ಯವೂ ಒಂದೊಂದುಸಲ ಒಂದು ನನ್ನನ್ನು ನೋಟಿಕೊಂಡು ಹೋಗಲು ಉಪಕ್ರಮಿಸಿದನು. ನನ್ನನ್ನು ಮದುವೆಮಾಡಿಕೊಳ್ಳುವುದಕ್ಕಾಗಿಯೇ ತಾನು ಈ ಕೆಲಸ ಮಾಡಿರುವುದಾಗಿ ಒಂದುದಿನ ತಾನಾಗಿ ಹೇಳಿದನು; ನಾನು ಆ ಪಾಪಿಷ್ಠನ ಮಾತಿಗೆ ಸಮ್ಮತಳಾಗಲಿಲ್ಲ. ಅದಕ್ಕಾಗಿ ಆ ಪಿಶಾಚನು ನನ್ನನ್ನು ಬಹ್ವಿಧ ಭಯಗೊಳಿಸಿದನು. ಒಂದೊಂದು ಸಲ ಚೂರಿಯನ್ನೆತ್ತಿಕೊಂಡು ಕೊಲ್ಲುವುದಕ್ಕೆ ಬಂದನು. ನಾನು ಯಾವುದಕ್ಕೂ ಗಮನ ಕೊಡಲಿಲ್ಲ—ಏತರಿಂದಲೂ ಸಮ್ಮತಳಾಗಲಿಲ್ಲ. ಅಂತಹ ಪಾಪಿಷ್ಠನಿಗೆ ಹೆಂಡತಿಯಾಗಿ ಜೀವಮಾನವಪರವೆಗೂ ಮರಣ ಸಂಕಟಪಡುವುದಕ್ಕಿಂತ, ಅವನ ಮರಿತಾದ ಚೂರಿಗೆ ಸಿಕ್ಕಿ; ಅರೆಗಳಿಗೆಯೊಳಗಾಗಿ ಸಾಯುವುದೇ ಶ್ರೇಯಸ್ಕರವೆಂದು ತೋರಿತು. ನನ್ನನ್ನು ನೋಟಿಕೊಳ್ಳುವ ಕೆಲಸವು ಗೋರಾಚಾಂದನಿಗೆ ನೇರಿದ್ದಾಗಿತ್ತು. ಅವನು ಆ ನರಪಿಶಾಚನ ಆಪ್ತ ಸೇವಕ. ಕಡೆಗೆ ಒಬ್ಬ ಹೆಂಗಸು ನನ್ನನ್ನು ನೋಡಿದಳು. ಅವಳು ಕೇಶವಚಂದ್ರನ ಹೆಂಡತಿಯೆಂದು ಕೇಳಿದೆ; ನಾನು ಬಿಲ್ಲಿಗೆ ಬರುವುದಕ್ಕೆ ದಾರಿ ತೋರಿಸಿದವಳು ಅವಳೇ. ಏಕಾಕ್ಷರವಾದೊಂದು ವಸಪ್ರದೇಶವನ್ನು ದಾರಾಗಿ ನಾನು ಈ ಗಾತ್ರಾಂಕ್ಕೆ ಬಂದೆ. ಆಗ ಭಯಂಕರವಾದ ಬರುಗಾಳಿಯೊಡನೆ ಸೇರಿದ ಮಳೆ ಸುರಿಯುತ್ತಲೇ ಇದ್ದಿತು. ಈ ಪ್ರಾಂತದಲ್ಲಿನ ಗೋಪಾಯಿಪುರದ

ನಮ್ಮ ಗುರುವಾದ ಈ ಗೋಸ್ವಾಮಿಯವರ ಆಶ್ರಯಹೊಂದೋಣ ನೆಂದು ಭಾವಿಸಿ ಈ ಸ್ಥಳದ ಒಂದು ಚಿಲ್ಲರೆ ಅಂಗಡಿಗೆ ಬಂದು ಗೋಸಾಯಿ ಪುರದ ದಾರಿಕೇಳಿ ತಿಳಿದುಕೊಂಡೆನು. ಆ ಸ್ಥಳದಲ್ಲಿ ಇನ್ನೂ ಕೆಲವರು ಸೇರಿ ಇಸ್ಪೀಟಾಡುತ್ತಲಿದ್ದರು; ಅವರು ಬಂದು ಕಾಲುವೆಯ ಮಾರ್ಗ ವಾಗಿ ಹೋಗಬೇಕೆಂದು ನನಗೆ ಹೇಳಿದರು. ನಾನು ಪುನಃ ಹೊರಟಿನು. ನಾನು ಕಾಲುವೆಯ ಮಾರ್ಗವಾಗಿ ಹೋಗುತ್ತಿರುವಾಗ ಹಿಂದು ಗಡೆ ಯಾರೋ ನನ್ನೆದುಬರುವ ಸದ್ದು ಕೇಳಿಸಿತು. ಹೊಡಲು ಮನಪ್ರದೇಶ ವನ್ನು ಬಿಟ್ಟು ಶಾಂತರಕ್ಕೆ ಬಂದಾಗ್ಗೆ ದಾರಿಯಲ್ಲಿ ಗೋರಾಚಾಂದನು ನನ್ನನ್ನು ಹುಡುಕುತ್ತಾ ಬರುತ್ತಿರುವುದನ್ನು ನೋಡಿದೆ. ಆಗ ನಾನು ಬಂದು ಮರದ ಮರೆಯಲ್ಲಿ ಬಚ್ಚಿಟ್ಟುಕೊಂಡೆನು, ಅವನು ನನ್ನನ್ನು ನೋಡಲಿಲ್ಲ, ಅವನು ಮತ್ತೊಂದುಕಡೆ ಹೊರಟುಹೋದನು. ನಾನು ಶಾಂತರದ ಮಧ್ಯಭಾಗದಲ್ಲಿ ಹೊರಟು, ಆ ಬರುಗಾಳಿ ಮಳೆಗಳಲ್ಲಿ ತೊಳಲುತ್ತಾ ಈ ಗ್ರಾಮಕ್ಕೆ ಬಂದು ಬಿದ್ದೆ; ಕಾಲುವೆಯ ಹತ್ತಿರ ಬಂದಾಗ ಕೇಳಿಸಿದ ಹೆಜ್ಜೆಯ ಸದ್ದು ಗೋರಾಚಾಂದನದೇ ಇರಬಹು ದೆಂದು ತೋರಿ ತುಂಬ ಭಯವಾಯಿತು. ಆಗ ನಾನು ಶ್ರಾಣಭಯ ದಿಂದ ಓಡಿದೆನು; ಆ ಸಮಯದಲ್ಲಿ ನನ್ನ ಸೆರಗನ್ನು ಎಳದು ಹಾಗಾಯಿತು; ಪುನಃ ಗೋರಾಚಾಂದನಿಗೆ ಸಿಕ್ಕಿಬಿದ್ದೆನೆಂದು ಭಾವಿಸಿ, ಭಯಪಟ್ಟು ಆತ್ಮಬಿಟ್ಟೆನು, ನೆಲಕ್ಕೆ ಬುರುಳಿ ಬಿದ್ದೆನು. ಆ ಸಮಯದಲ್ಲಿ ಯಾರೋ ಬಂದು ನನ್ನನ್ನು ಪಿಡಿದೆತ್ತಿದರು. ಮುಂಚಿನ ಬೆಳಕಿನಲ್ಲಿ ಆತನನ್ನು ಗುರ್ತಿ ಸಿದೆ. ಆತನೇ ಯಮುನಾಥಗೋಸ್ವಾಮಿ. ಸ್ವಲ್ಪ ಧೈರ್ಯವಾಯಿತು. ನೋಡಿದೆ ಯಾರೂ ನನ್ನ ಸೆರಗನ್ನು ಪಿಡಿದುಕೊಂಡಿರಲಿಲ್ಲ. ಮುಳ್ಳಿನ ಗಿಡವೊಂದಕ್ಕೆ ಸೆರಗು ತಗಲಿಕೊಂಡಿತ್ತು; ನಾನು ಕೇಳಿದ್ದ ಪರಮಭಾಗ ವತ ಗೋಸ್ವಾಮಿ ಮಹಾಶಯನನೇ. ಬಿದ್ದು ಹೋದ್ದರಿಂದ ನನ್ನ ಕೆನ್ನೆ ಯಲ್ಲಿ ಒಂದುಕಡೆ ಗಾಯವಾಗಿತ್ತು; ಆ ಗಾಯದಲ್ಲಿ ರಕ್ತವು ಸರಿಯು ತಿದ್ದಿತು. ಗೋಸ್ವಾಮಿ ಮಹಾಶಯನಿಗೆ ಎಲ್ಲ ವಿಚಾರವನ್ನೂ ವಿವರ ವಾಗಿ ಹೇಳಿದೆನು. ಎರಡು ಮೂರು ದಿನಗಳ ಮಟ್ಟಿಗೆ ನನ್ನನ್ನು ರಹಸ್ಯವಾಗಿಟ್ಟಿರಬೇಕೆಂದು ಆತನನ್ನು ಬೇಡಿಕೊಂಡೆನು; ಆತನು ಒಪ್ಪಿ

ಹಾಗೆಯೇ ಹಾಸುಗೆ ಹಿಡಿದು ಮಲಗಿದನು. ಎಂತಹ ಡಾಕ್ಟರೂ, ಎಂತಹ ಪಂಡಿತರೂ ಅದು ಇಂತಹ ರೋಗವೆಂದು ಗೊತ್ತುಮಾಡ ಲಾರದೇ ಹೋದರು. ತಂದೆ ಸುಮಾರು ಆರುತಿಂಗಳವರೆಗೆ ನರಳು ತ್ತಿದ್ದು ಒರಂಬರುತ್ತ ಮತ್ತೂ ದುರ್ಬಲನಾದನು. ಅದು ಯಾವ ರೋಗವೋ ಯಾರೂ ನಿಶ್ಚಯ ಮಾಡಲಿಲ್ಲ ಆದ್ದರಿಂದ ಔಷಧೋಪ ಚಾರಗಳೂ ಅಷ್ಟಾಗಿ ನಡೆಯಲಿಲ್ಲ. ತಂದೆಯು ಅಕಾಲದಲ್ಲಿ ನಮ್ಮೆಲ್ಲ ರನ್ನೂ ಬಿಟ್ಟು ಹೋದನು.

ಅರಿಂದಮ—ನಿಮ್ಮ ಚಿಕ್ಕಪ್ಪನು ನಿನ್ನ ಮದುವೆಯ ವಿಚಾರವಾಗಿ ಇಷ್ಟು ಮಿನ ಉದಾಸೀನನಾಗಿ ಇದ್ದುದೇಕೆ?

ರೇವತಿ—ಅತನು ಜಮೀನಾದಾರಿಯ ಕೆಲಸಕಾರ್ಯಗಳಲ್ಲಿ ನಿರತ ನಾಗಿಬಿಟ್ಟಿದ್ದನು. ಬಹುಬಾಟ್ಟಿಗೆ ಅವನಿಗೆ ಊಟ ಉಪಚಾರಗಳಿಗೂ ಅವಕಾಶ ಸಿಗುತ್ತಿರಲಿಲ್ಲ.

ಅರಿಂದಮ—ಅವನು ಕೇಶವಚಂದ್ರನ ಬತೆಯಲ್ಲಿ ಸರ್ವದಾ ಮಾತನಾಡುತ್ತಿದ್ದ, ಸಗಣಿಯೊಡುತ್ತಿದ್ದ, ಇಸ್ತ್ರೀಟಾಡುತಲಿದ್ದ, ಗಾಳಿ ಸಹಾರಿಗಾಗಿ ಹೊರಗೆ ಹೊರಡುತ್ತಿದ್ದ ಎಂದು ಈಗತಾನೇ ಹೇಳಿದೆಯಲ್ಲ, ನೀನು ಹೇಳುವಂತೆ ನಿನ್ನ ವಿಚಾರದಲ್ಲಿ ಅತನಿಗೆ ಅಷ್ಟರ ಪ್ರೀತಿ ವಿಶ್ವಾಸ ಗಳಿರುತ್ತಿದ್ದ ಪಕ್ಷದಲ್ಲಿ ಅತನು ನಿನ್ನ ಮದುವೆಯ ವಿಯಾವುದೊಂದು ಸ್ವಯತ್ನವನ್ನೂ ಮಾಡದೆ ಹಗಚೆ, ಇಸ್ತ್ರೀಟು, ಹರಟೆ, ಗಾಳಿಸವಾರಿ ಮೊದಲಾದುವೆಲ್ಲ ಹಾಗಿರಲಿ, ಹೇಗೆತಾನೆ ಸ್ನಾನ ಭೋಜನಗಳನ್ನು ಮಾಡುತ್ತಿದ್ದನೋ ತಿಳಿಯದು. ನಿಮ್ಮ ಚಿಕ್ಕಪ್ಪ, ನಿನಗೆ ಮದುವೆ ಮಾಡಿ ನಿನ್ನನ್ನು ಕಂಡವರ ಮನೆಗೆ ಕಳುಹಿಸಿಕೊಟ್ಟು ಹೇಗೆತಾನೆ ಸಾಧ್ಯವಾದೀತೆಂದು ಎಂದು ಶಂಕಿತನಾಗಿರುವಹುಟ್ಟಿಗೆ ನಿನ್ನಲ್ಲಿ ಪ್ರೀತಿ ಯುಳ್ಳವನಾಗಿರುವನು ಎಂದು ಭಾವಿಸುತ್ತೀನೆ.

ರೇವತಿಯು ಅವನ ಮಾತಿನ ಅಭಿಪ್ರಾಯವನ್ನು ತಿಳಿಯಲಾರದೇ ಹೋದಳು. ಆಗ ಅರಿಂದಮನು ರೇವತಿಯು ಏನೇನು ಮಾಡಬೇಕೋ ಅದೆಲ್ಲವನ್ನೂ ಹೇಳಿಕೊಟ್ಟನು. ನಾಲ್ಕೂಕಡೆ ಮುತ್ತಿ ಒರುತ್ತಿರುವ

ಈ ಏಪತ್ತಿನಿಂದ ಅವಳನ್ನು ಯಾವ ಕೌಶಲದಿಂದ ಒದುಕಿಸಬೇಕೆಂದಿರುವನೋ ಅದನ್ನೂ ಹೇಳಿದನು. ಮತ್ತೂ ಈ ಸಂಬಂಧವಾಗಿ ಬಹುಕಾಲ ಆಲೋಚನೆ ಮಾಡಿ ನಿಶ್ಚಿತವಾದ ವಿಚಾರದಿಂದ ರೇವತಿಯು ಬಹು ಮಟ್ಟಿಗೆ ಶಾಂತಿಲಾಭಗೊಂಡಳು; ರೇವತಿಯ ಕಣ್ಣಿನ ಒಂದು ಪರೆಯು ಸರಿದು ಹೋದಂತಾಯಿತು.

ಇಪ್ಪತ್ತನೆಯ ಪರಿಚ್ಛೇದ

ಸಾಫಲ್ಯ

ವೈದ್ಯನು ಬಾಯನಾಲಕೆಯಿಂದ ಮೃತಪ್ರಾಯನಾಗಿರುವುದನ್ನು ನೋಡಿ ನೀರು ತರುವುದಕ್ಕೆಂದು ಹೋದ ಆ ಬ್ರಾಹ್ಮಣಿಯು ಒದು ಘಳಿಗೂ ಹಿಂದಿರುಗಿ ಬರಲಿಲ್ಲ—ಕಾರಣವೇನು? ಬ್ರಾಹ್ಮಣಿಯು ನೀರನ್ನೆತ್ತಿಕೊಂಡುಬಂದಾಗ, ರೇವತಿಯೂ ಅರಿಂದಮನೂ ಪರಸ್ಪರ ಮಾತನಾಡುತ್ತಿರುವುದನ್ನು ಕೇಳಿ, ಆ ಕೊಠಡಿಯೊಳಕ್ಕೆ ಪುನಃ ಪ್ರವೇಶಿಸಲಿಲ್ಲ. ನೀರಿನ ಪಾತ್ರೆಯನ್ನು ಕೈಯಲ್ಲಿ ಹಿಡುಕೊಂಡು ಹೊರಗಡೆಯೇ ನಿಂತುಕೊಂಡು ಅವರುಗಳ ಮಾತು ಕಥೆಗಳನ್ನು ಒಂದೇ ಮನಸ್ಸಿನಿಂದ ಕೇಳತೊಡಗಿದಳು. ಅವಳು ಕೇಳುತ್ತಿದ್ದ ಹಾಗೆಯೇ ನೀರುತುಂಬಿದ್ದ ಪಾತ್ರೆಯು ಅವಳ ಕೈಯಲ್ಲಿ ಥರಥರನೆ ನಡುಗಲು ಉಪಕ್ರಮಿಸಿತು. ಯಜಮಾನನು ಮನೆಯಲ್ಲಿಲ್ಲ, ತಾನು ಒಬ್ಬಳಂಟಿಗಳು, ಏನುಮಾಡಲಾದೀತು; ಎಷ್ಟು ಆಲೋಚಿಸಿದರೂ ಏನೂ ತೋರದೆ ಹೋಯಿತು. ಪೆಂಗಸರ ಮನಸ್ಸು ಬಹು ಕುತೂಹಲಪ್ರಿಯವಾದದ್ದು. ಕುತೂಹಲಗೊಂಡ ಮನಸ್ಸು ಹೇಳಿತು, "ಸೊದಲು ಕೇಳಿದ್ದಾಗಲಿ, ಆಮೇಲೆ ಏನುಮಾಡಬೇಕೋ ಅದನ್ನು ಮಾಡೋಣ; ಅಷ್ಟರೊಳಗಾಗಿ ಅವರು ಒಂದು ಬಿಟ್ಟರೆ ಅವರೇ ಜೇಕಾವ್ಸನ್ನು ಮಾಡುತ್ತಾರೆ. ಈಗ ಅದೇನು ಮಾತೋ-ಕೇಳಬಾರದೆ" ಎಂದು. ಬ್ರಾಹ್ಮಣಿಯು ಸ್ಥಿರಮನಸ್ಸಿನಿಂದ ಕೇಳುತ್ತಿದ್ದಳು. ಕೆಲವು ಮಾತು ಕೇಳಿಸಿದುವು. ಕೆಲವು ಕೇಳಲಿಲ್ಲ;

ಕೇಳಿಸಿದ್ದರಲ್ಲಿ ಕೂಡ ಆಕೆಗೆ ಕೆಲವು ಅರ್ಥವಾಯಿತು, ಕೆಲವು ತಿಳಿಯಲೇ ಇಲ್ಲ.

ಅನಂತರ ಅವರು ಬಹು ಮೆಲ್ಲಗೆ ಪಾತಸನಾಡುತ್ತಾ ಇದ್ದು ಮಾಡಿ ಕೊಂಡ ಪರಾಮರ್ಶೆಗಳು ನಮಗೇ ಕೇಳಿಸದಿರುವಾಗ ಆ ಬ್ರಾಹ್ಮಣಿಯ ಕಿವಿಗೆ ಹೇಗೆ ಕೇಳಿಸಬೇಕು? ಸುಮ್ಮನೆ ಕಿಟಕಿಯ ಸಂದಿನಲ್ಲಿ ಬ್ರಾಹ್ಮಣಿಯ ಕಣ್ಣುಗಳು ಅತ್ಯಾತುರದಿಂದ, ಆ ಸಮಯದಲ್ಲಿ, ರೇವತಿಯ ಮುಖ ಭಾವವ ಕ್ಷಣೇಕ್ಷಣೇ ಬದಲಾಗುತ್ತಿರುವುದನ್ನು ನೋಡುತ್ತಿದ್ದುವು. ಆ ಸಮಯದಲ್ಲಿ ಅವಳ ಮನಸ್ಸು ಈ ಎಲ್ಲ ವಿಷಯು ಗಳಿಂದ ಆಕರ್ಷಿತವಾಗಿ ಹೋಗಿತ್ತು. ಆಗ ಅವಳ ಕೈಯೊಳಗಿನ ಜಲ ಪಾತ್ರೆಯು ವಿಷಯವೇ ಅವಳಿಗೆ ಮರೆತು ಹೋಯಿತು. ಅದು ನಡುಗುತ್ತ ನಡುಗುತ್ತ ಅವಳ ಕೈಯಿಂದ ಜಾರಿ ನೆಲದಮೇಲೆ ಬಿದ್ದು ಸದ್ದು ಮಾಡಿತು. ಆಗ ಅರಿವಮನು ಹೊರಡಬೇಕೆಂದು ಬಿದ್ದನು; ಹೊರಡು ವಾಗ "ನಾನು ಇನ್ನು ನೀರು ಕುಡಿಯುವುದಿಲ್ಲ" ಎಂದು ಹೇಳಿ ಹೋದನು.

ಸ್ವಲ್ಪ ಹೊತ್ತಿನೊಳಗಾಗಿಯೇ ಯಮುನಾತಟಗೋಸ್ವಾಮಿಯು ವೈದ್ಯನನ್ನು ಸಂಗಡ ಕರೆದುಕೊಂಡು ಅಲ್ಲಿಗೆ ಬಂದನು. ಅತನಿಗೆ ಬ್ರಾಹ್ಮಣಿಯು ಸತ್ಯವಾದುದೆಷ್ಟೋ ಅಸತ್ಯವಾದುದೆಷ್ಟೋ ಅನೇಕ ವಾಗಿ ಹೇಳಿದಳು. ಕೇಳಿ ಗೋಸ್ವಾಮಿ ಮಹಾಶಯನ ಬಾಯಲ್ಲಿ ಮಾತೇ ಹೊರಡಲಿಲ್ಲ. ವೈದ್ಯನು ಸಪ್ಪೆಮೋರೆ ಹಾಕಿಕೊಂಡು ಹಿಂದಿರುಗಿದನು. ಅನಂತರ ಗೋಸ್ವಾಮಿ ಮಹಾಶಯನೂ ಅವನ ಹೆಂಡತಿಯೂ ರೇವತಿ ಯನ್ನು ಬಹುವಾಗಿ ಒತ್ತಾಯಮಾಡುತ್ತಾ, ಅವನು ಯಾರು? ಏಕೆ ಬಂದಿದ್ದ? ಅವನಿರುವುದೆಲ್ಲಿ? ಏನು ಹೇಳಿಹೋದ? ಎಂದು ಮುಂತಾಗಿ ಕೇಳಲಾರಂಭಿಸಿದರು.

ರೇವತಿಯು ಒಂದು ಮಾತಿಗೂ ಉತ್ತರ ಕೊಡಲಿಲ್ಲ.

* * * * *

ಅದೇ ದಿನ ಅಪರಾಹ್ಣದಲ್ಲಿ ಇನ್ನೊಂದು ವಿಚಿತ್ರ ನಡೆಯಿತು. ರೇವತಿಯು ಮಾತಾಮಹ (?) ವೋಲೇಸಿನವರನ್ನು ಸಂಗಡ, ರೇವತಿಯನ್ನು ಕರೆದುಕೊಂಡು ಹೋಗುವುದಕ್ಕಾಗಿ ಯದುನಾಥಗೋಸ್ವಾಮಿಯು ಮನೆಗೆ ಬಂದನು. ರೇವತಿ ಅಲ್ಲಿರುವಳೋ ಇಲ್ಲವೋ ಎಂದು ಯದುನಾಥಗೋಸ್ವಾಮಿಯನ್ನು ಕೇಳಲಾಗಿ ಆತನು 'ಒಪ್ಪಿಕೊಳ್ಳಲೆ ಅಥವಾ ಇಲ್ಲವೆಂದು ಹೇಳಲೆ' ಎಂದು ಆಲೋಚಿಸುವುದರೊಳಗಾಗಿ ರೇವತಿಯು ಹೊರಕ್ಕೆ ಓಡಿಬಂದಳು. ಅವಳು ವೃದ್ಧನಾದ ತನ್ನ ಮಾತಾಮಹನನ್ನು ಗುರ್ತಿಸಿದಳು. ಕೂಡಲೇ ಆ ವೃದ್ಧನ ಕಡೆಯವರು ಪಾಲ್ಕಿಯನ್ನು ಒಳಹಾಕಿ ರೇವತಿಯನ್ನು ಆದರಲ್ಲಿ ಕೂಡಿಸಿಕೊಂಡು ಹೋದರು. ಆ ಸಮಯದಲ್ಲಿ ಅರಿಂದಮನೂ ಯೋಗೇಂದ್ರನಾಥನೂ ಆ ಸ್ಥಳಕ್ಕೆ ಬಂದಿದ್ದರು.

ಅರಿಂದಮನು ಗೋಸ್ವಾಮಿಯನ್ನು ಕುರಿತು, "ಏನು ಗೋಸ್ವಾಮಿ ಮಹಾಶಯರೇ, ಐದುನೂರು ರೂಪಾಯಿ ಒಟ್ಟಿಗೆ ನಷ್ಟವಾಯಿತಲ್ಲ, ಏನಾದರೂ ಆಗಲಿ ರಕ್ತದ ಕಲೆಯು ಒಬ್ಬೆಯ ಸಂಗಡ ಅಡವಿಯಲ್ಲಿ ಏನಾನು ಹುಡುಗಿಯನ್ನು ಇಟ್ಟುಬಂದಿರಿ; ತಮಗೆ ಅದು ಜೀಕಾಗಿ ಬಂದಾಗ ಅದನ್ನು ತಾಣಕ್ಕೆ ಹೋಗಿ ತೆಗೆದುಕೊಳ್ಳಬಹುದು; ಅನ್ಯಾಯವಾಗಿ ಮನೆಯಲ್ಲಿದ್ದ ಚೂರಿಯನ್ನೇಕೆ ಹಾಳುಮಾಡಿಕೊಂಡ್ರಿ?" ಎಂದು ಹಾಸ್ಯಮಾಡಿದನು.

ಗೋಸ್ವಾಮಿ ಮಹಾಶಯನು ಸುಮ್ಮನೇ ನಿಂತಿದ್ದನು.

ಅರಿಂದಮ—ನೀವೇನೋ ಒಬ್ಬ ಒಳ್ಳೆಯ ಮನುಷ್ಯರು, ಬಂದು ಒಳ್ಳೆಯ ಆಟವನ್ನೇ ಆಡಿದಿರಿ.

ತಾಕುರ ಮಹಾಶಯನು ಅದಕ್ಕೂ ಏನೊಂದು ಉತ್ತರವನ್ನೂ ಯೇಳಲಿಲ್ಲ.

ಎಲ್ಲರೂ ಹೊರಟು ಹೋದರು.

ತಾಕುರ ಮಹಾಶಯನು "ಏನು ಏನಾಗಿ ಹೋಯಿತು!" ಎಂದು ಆಲೋಚಿಸುತ್ತಾ ಯಾವುದನ್ನೂ ನಿಶ್ಚಯಮಾಡಲಾರದೇ ಹೋದನು.

ಶ್ರೀ

ಮಾಯಾವಿ

ಎರಡನೆಯ ಭಾಗ

ಒಂದನೆಯ ಪರಿಚ್ಛೇದ

ಕುಲಸಮೆ

ಅರಿಂದಮನು ಸಿಶ್ಚಿಂತನಾಗಿರಲಿಲ್ಲ. ಯಾವನು ಆ ಬಾಲಕಿಯು ಶವವನ್ನು ಪೆಟ್ಟಿಗೆಯಲ್ಲಿ ಕಾಣಿಗೆ ಕಳುಹಿಸಿ ತನ್ನದೊಂದು ಮಹಾ ಸಾಮರ್ಥ್ಯದ ಪರಿಚಯವನ್ನು ಮಾಡಿಕೊಟ್ಟನೋ ಆ ಕೊಲೆಪಾತಕಿಯನ್ನು ಯಾವ ರೀತಿಯಿಂದಲಾದರೂ ಹಿಡಿದುಹಾಕುವವರೆಗೆ ಅರಿಂದಮನು ಹೇಗೂ ಸ್ಥಿರನಾಗಿರಲಾರದೇ ಹೋದನು. ಅಲ್ಲದೆ ನಡೆಯುತ್ತಿರುವ ಘಟನೆಗಳೆಲ್ಲಾ ಒಂದಲ್ಲದಿದ್ದರೆ ಒಂದು ಬಗೆಯಲ್ಲಿ ಪರಸ್ಪರ ಸಂಬಂಧವುಳ್ಳವೇ ಇರುತ್ತಿದೆ; ಅರಿಂದಮನು ಅದನ್ನೂ ತಿಳಿದುಕೊಂಡಿದ್ದನು. ಅವೆಲ್ಲವೂ ಒಂದೇ ಸರಪಣಿಯಿಂದ ಕಟ್ಟಿದಹಾಗಿರುತ್ತಿವೆ; ಹೀಗಿದ್ದರೂ ಅತನು ಅವುಗಳೆಲ್ಲದರ ಮಧ್ಯೆ ಸಿಕ್ಕಿ ಪೇಚಾಡುತ್ತಿರುವನು. ಕೆಲವು ಕಾಲದವರೆಗೆ ಅತನಿಗೆ ಯಾವುದೊಂದು ಉಪಾಯವೂ ತೋರದೆಹೋಯಿತು. ಸಂದೇಹದ ಛಾಯೆಯು ಎಲ್ಲೆಲ್ಲಿ ಕಾಣುವುದೋ ಅಲ್ಲಿಗೆಲ್ಲಾ ಹೋಗುವನು. ಸಾಧ್ಯವಾದಮಟ್ಟಿಗೆ ಬಲ್ಲ ವರ್ತಮಾನಗಳನ್ನೂ ಸಂಗ್ರಹಿಸುವನು; ಆದರೆ ಈವರೆಗೆ ಕಾರ್ಯತಃ ಏನನ್ನೂ ಮಾಡಲಾರದವನಾದನು. ಅರಿಂದಮನಂತಹ ಹೆಸರುಗೊಂಡ ಪೋಲೀಸು ಪತ್ತೇದಾರನ ಪಕ್ಷದಲ್ಲಿ ಅದು ನಿಶ್ಚಯವಾಗಿಯೂ ಒಂದು ದೊಡ್ಡ ಕಳಂಕದ ಮಾತೇ ಸರಿ.

ಒಂದು ದಿನ ಅಪರಾಹ್ನ; ಅತನು ದೂರದಲ್ಲಿರುವ ಲೋಕನಾಥಪುರ ಗ್ರಾಮದ ಮಧ್ಯೆ ಹಾದು ತನ್ನ ಊರಿಗೆ ಹಿಂದಿರುಗಿ ಬರು

ತ್ತಿದ್ದಾನೆ. ಬೆಳಿಗ್ಗೆ ಮನೆಯಿಂದ ಹೊರಟವನು; ಇಷ್ಟು ಹೊತ್ತಾ ಗಿದ್ದರೂ ಆತನಿಗೆ ಇನ್ನೂ ಸ್ನಾನ ಭೋಜನಗಳಿಲ್ಲ. ಲೋಕನಾಥಪುರ ದಿಂದ ಊರಿಗೆ ಸ್ವಲ್ಪ ಹೆಚ್ಚು ಕಡಿಮೆ ಒಂದು ಹರದಾರಿಯಾಗಬಹುದು, ಹೊತ್ತು ಮುಳುಗುತ್ತ ಬಂದಿದೆ. ಆಗ ಪಶ್ಚಿಮಾಕಾಶದಲ್ಲಿ ಕೆಲವು ಕರಿಯ ಮೋಡಗಳೂ ಬೆಳಿಯ ಮೋಘದ ತುಣುಕುಗಳೂ ಉದ್ದು ಅಸ್ತ ನಾಗುತ್ತಿರುವ ಸೂರ್ಯನ ಹೊಂಬಣ್ಣದ ಕಿರಣಮಾಲೆಯಿಂದ ಕಳೆ ಯೇರಿ ಬಹು ಸುಂದರವಾಗಿ ಕಾಣಿಸುತ್ತಿವೆ; ಅವುಗಳ ಕೋಮಲವಾದ ಮತ್ತು ಉಜ್ವಲವಾದ ಛಾಯೆಯನ್ನು ಅಲೆಗಳ ದೆಸೆಯಿಂದ ಅಲುಗಾಡು ತ್ತಿರುವ ತನ್ನ ಪಕ್ಷದಲ್ಲಿ ಧರಿಸಿಕೊಂಡು ಹಲಸು ಮಾವು ಸೇರಿಳೆ ತೆಂಗು ಮುಂತಾದ ಫಲವೃಕ್ಷಗಳಿಂದ ಪರಿಷ್ಕೃತವಾಗಿರುವ, ಆ ಲೋಕನಾಥ ಪುರದ ಏಮಲಾ ಸರೋವರವು ಮತ್ತೂ ಸುಂದರವಾಗಿ ಕಾಣಿಸು ತ್ತಿದೆ. [ಈ ಪುಷ್ಕರಿಣಿಯ ತೀರದಲ್ಲಿ ಏಮಲೆ ಎಂಬ ವೃದ್ಧೆಯು ಒಂದು ಗುಡಿಸಲು ಹಾಕಿಕೊಂಡು ಅಮರಣಾಂತವಾಗಿ ವಾಸಮಾಡುತ್ತಿದ್ದು ಳಾಗಿ ಇದಕ್ಕೆ ಏಮಲಾ ಪುಷ್ಕರಿಣಿ ಎಂದು ಹೆಸರಾಯಿತೆಂದು ಪದಂತಿ ಯುಂಟು. ನಾವು ಯಾವ ಕಾಲದ ಕಥೆಯನ್ನು ಹೇಳುತ್ತಿರುವೆವೋ ಆಗ ಆ ಏಮಲೆಯೂ ಇರಲಿಲ್ಲ, ಅವಳ ಆ ಪರ್ಣಕುಟೀರದ ಚಿಹ್ನೆಯೂ ಇರಲಿಲ್ಲ. ಈಗ ಆ ಪುಷ್ಕರಿಣಿಯು ನೆಲೆಯೇ ಇಲ್ಲ.] ಅವೆಲ್ಲಕ್ಕಿಂತಲೂ ಆ ಸರೋವರದ ಸೃಷ್ಟಿಮಕಡೆಯ ಸೋಪಾನಾವಳಿಯು ಆಗ ಬಂದು ಅಪೂರ್ವವಾದ ಕಾಂತಿಯಿಂದ ಕಾಣಿಸುತ್ತಿದ್ದಿತು. ಅಲ್ಲಿ ಸೌಂದರ್ಯ ಭೂಷಣೆಯರಾದ ಸ್ನಿಗ್ಧಜ್ಯೋತಿರ್ಮಯರೂಪಿಣಿಯರಾದ ಅನೇಕ ಮಂದಿ ಯುವತಿಯರು ಸ್ನಾನಮಾಡುತ್ತಿದ್ದರು. ಕೆಲವರು ಕುತ್ತಿಗೆಯ ವರೆಗೂ ನೀರಿನಲ್ಲಿ ಮುಳುಗಿದ್ದರು. ಮೇಲಾಗದಲ್ಲಿ ಸುಂದರವಾದ ಮುಖವು ಜಗತಾನೆ ಏಕಸಿತವಾದ ಕಮಲದಂತೆ ತೋರುತ್ತಿದೆ. ಆ ಮುಖಕ್ಕೆ ನೇರವಾಗಿ ಆಕಾಶದಿಂದ ಬಹು ಸುಂದರವಾದ ಸೂರ್ಯನ ಹೊಂಬಣ್ಣದ ಕಿರಣವು ಬಿದ್ದಿದೆ. ಕೆಲವರು ಮುಳುಗಿದ್ದಾರೆ. ಕಪ್ಪಾ ಗಿರುವ ಜಲರಾಶಿಯಲ್ಲಿ ಗುಚ್ಛ ಗುಚ್ಛವಾಗಿರುವ ಕೃಷ್ಣಕೇಶವಾಮವು ತೇಲುತ್ತ ಬಂದೊಂದು ಅಲೆಯಲ್ಲಿಯೂ ತೂಗಾಡುತ್ತಿದೆ—ಅಲ್ಲಿಯೂ

ಒಂದು ಅತಿಸುಂದರವಾದ ಹೊಂಬಣ್ಣದ ಕಿರಣ. ಒಂದು ಕಡೆ ಕೆಲವರು ಈಜಾಡುತ್ತಲೂ, ಮತ್ತೆ ಕೆಲವರು ಅಲೆಗಳಿಗೆ ಮೈಯೊಡ್ಡಿರುತ್ತಲೂ, ಇನ್ನು ಕೆಲವರು ನೀರನ್ನು ಎರಚುತ್ತಲೂ ಆಟವಾಡುತ್ತಿದ್ದರು. ಆ ಸ್ಥಳದಲ್ಲಿ ಬಹು ಸುಂದರವಾದ ಅದೇ ಹೊಂಬಣ್ಣದ ಕಿರಣಮಾಲೆಯು ಪಸರಿಸಿ ಖಂಡಖಂಡವಾಗಿ ಚಾಂಚಲ್ಯ ವಹಿಸಿದೆ, ಅವರೂ ಬಹು ಮನೋಹರ.

ಎಲ್ಲರೂ ಅವರವರ ಕೆಲಸಗಳನ್ನು ಮುಗಿಯಿಸಿಕೊಂಡು ಬಿಚ್ಚಿಬ್ಬರಾಗಿ ಹೊರಡುತ್ತಲಿದ್ದಾರೆ. ಆ ವೇಳೆಗೆ ಸರಿಯಾಗಿ ಅರಿಂದಮನು ಆ ಪುಷ್ಕರಣಿಯ ದಕ್ಷಿಣ ಪಾರ್ಶ್ವದ ಮಾರ್ಗವಾಗಿ ತನ್ನ ಊರಿಗೆ ಹಿಂದಿರುಗಿ ಹೋಗುತ್ತಿದ್ದಾನೆ. ಎಲ್ಲರೂ ಹೊರಟುಹೋದರು. ಒಬ್ಬಳು ಮಾತ್ರ ಹೋಗಲಿಲ್ಲ; ಅವಳು ಕುಳಿತೇ ಇದ್ದಾಳೆ. ಇದನ್ನು ಅರಿಂದಮನು ನೋಡಿದನು. ಅವಳು ತನ್ನ ಸೌಂದರ್ಯದಿಂದ ಆ ಸಣ್ಣ ಪ್ರದೇಶವನ್ನು ಬೆಳಗುತ್ತ ಅಲ್ಲಿ ಕುಳಿತೇ ಇದ್ದಳು. ಅವಳ ಆ ಅಪರೂಪ ರೂಪ ವರ್ಣನೆ ಮಾಡುವುದು ಸಾಧ್ಯವಿಲ್ಲ. ಆ ಹದಿನಾರು ವರ್ಷದ ಸುಂದರಿ ಬೊಬ್ಬಿಲೇ ವಿಧಾತನ ರಚನಾಕೌಶಲ್ಯದ ಪರಮೋತ್ಕೃಷ್ಟ ನಿದರ್ಶನವೆಂದು ತೋರುತ್ತಿದೆ. ಇಷ್ಟು ಸಣ್ಣ ವಯಸ್ಸಿನಲ್ಲಿಯೇ ಸರ್ವಾವಯವಗಳೂ ಪೂರ್ಣತೆ ವಹಿಸಿರುವುದು ಬಹು ಅಪರೂಪ. ಆಹಾ! ಆ ಸ್ನೇಹಸ್ಪುಷ್ಟವಾದ ಮುಖಪದ್ಮ, ಅದರಲ್ಲಿ ವಿಶಾಲಾಯತವಾಗಿ ಅರಳಿದ ತಾವರೆಯ ಹಾಗಿರುವ ಕಣ್ಣುಗಳು, ಆಕರ್ಣವಿಶ್ರಾಂತವಾದ ಕಣ್ಣುಗಳಿಗೆ ತಕ್ಕ ಹಾಗೆ ಚಿತ್ರದಲ್ಲಿ ಬರೆದು ತಿದ್ದಿದಂತಿರುವ ಹುಬ್ಬುಗಳು, ಮುಂಗುರುಳುಗಳ ದೆಸೆಯಿಂದ ಅರ್ಧಚಂದ್ರ ಆಕೃತಿಯಾಗಿರುವ ಆ ಸುಂದರ ಲಲಾಟ, ಹಾಗೆಯೇ ಸುಂದರವಾಗಿಯೂ ಸುಘಟಿತವಾಗಿಯೂ ಇರುವ ನಸುಸೀಳಾದ ಮೂಗು, ನಿರ್ಮಲವಾಗಿ ಕೆಂಪಗೆ ವಿರಾಜಿಸುತ್ತಿರುವ ತುಟಿ, ಲಲಿತವಾಗಿಯೂ, ನಿರ್ಮಲವಾಗಿಯೂ, ರಕ್ತವರ್ಣವುಳ್ಳದಾಗಿಯೂ ಇರುವ ಆ ಕಪೋಲಯುಗ್ಮಗಳ ಕಮನೀಯತೆಯನ್ನು ಕಣ್ಣಾರೆ ನೋಡಿ ತಿಳಿಯಬೇಕಲ್ಲದೆ ಬರೆದು ತಿಳುಹಿಸುವುದು

ಸಾಧ್ಯವಿಲ್ಲ. ಆ ಚಿಬುಕವನ್ನು ನೋಡಿ, ನಾವು ಇಂತಹ ಚಿಬುಕವನ್ನೆಂದೂ ಕಂಡಿಲ್ಲ, ಇಂದು ಕಂಡೆವು ಎಂದು ಹೇಳದಿರುವರು ಯಾರು? ಅದು ಪುಷ್ಪಪರಾಗದಿಂದ ಚೆನ್ನಾಗಿ ಅವೃತವಾಗಿರುವ ನವನೀತವೇ ಆಗಿರಬೇಕು! ಸರ್ಪದಹಾಗೆ ನೀಳವಾಗಿಯೂ, ಹಾಗೆಯೇ ಗುಂಗುರು ಗುಂಗುರಾಗಿಯೂ ಇದ್ದು ಒಟ್ಟಾಗಿ ಸೇರಿ ತೊಯಿದಿರುವ ಆ ಕೃಷ್ಣ ಕೇಶದಾಮವು ಗುಚ್ಛಗುಚ್ಛವಾಗಿ ಬೆನ್ನಮೇಲೆಯೂ, ಕೊಂಚ ಮಾತ್ರ ಉಬ್ಬಿರುವ ವಕ್ಷಪ್ರದೇಶದ ಮೇಲೆಯೂ ತೂಗಾಡುತ್ತಿದೆ. ಚಂದ್ರ ಕಿರಣದಂತೆ ಬೆಳಗುತಿರುವ ಜ್ಯೋತಿಸ್ವರೂಪದ ಇದಿರಿಗೆ ಗೋಧೂಳಿ ಸಮಯದ ಉಜ್ವಲತಮವಾದ ಕಾಂಚನವರ್ಣದ ರಶ್ಮಿಗಳು ಕೂಡ ಕಾಂತಿಹೀನವಾಗಿವೆ. ಪಾತಕರೇ! ನೀವು ಭಾದ್ರಪದ ಮಾಸದಲ್ಲಿ ತುಂಬಿ ಹರಿಯುವ ಹೊಳೆಯನ್ನು ನೋಡಿದ್ದೀರಾ? ನೋಡಿರುವ ಪಕ್ಷದಲ್ಲಿ ಅವಳ ಆ ಸುಘಟಿತ ಶರೀರದಲ್ಲಿ ಅಸಾಧಾರಣವಾದ ಆ ಸೌಂದರ್ಯರಾಶಿಯು ಅದೇ ರೀತಿಯಲ್ಲಿ ತುಂಬಿ ತುಳುಕುತ್ತಿರುವುದು. ಆದರೆ ಮೇರೆಮೀರಿಲ್ಲ. ಸರ್ವಾವಯವಗಳೂ ಎಷ್ಟೆಷ್ಟರಮಟ್ಟಿಗೆ ಇರಬೇಕೋ ಅಷ್ಟಷ್ಟೇ ಇದ್ದು ಪರಿಪುಷ್ಟವಾಗಿವೆ; ಆ ಸರ್ವಾವಯವದಲ್ಲಿಯೂ ಅಪರೂಪವಾದ ರೂಪ ರಾಶಿ ಉಕ್ಕಿ ಬರುತ್ತಿದೆ. ಆ ವಿಜನವಾದ ಸ್ಥಳದಲ್ಲಿ, ಗಿಡಮರಗಳ ಮಧ್ಯೆ, ಸಂಧ್ಯಾಸಮಯದ ಹೇಮ ಕಿರಣಗಳ ಮಧ್ಯೆ, ತಂಪಾಗಿ ಸೇಸುತ್ತಿರುವ ಆ ಮುಂದಮಾರುತನ ಮಧ್ಯೆ, ದಿಗ್ದಿಗಂತಗಳವರೆಗೂ ವ್ಯಾಪಿಸಿರುವ ಕುಸುಮಗಂಧದ ಮಧ್ಯೆ ಇದ್ದುಕೊಂಡು, ಪಾಪಿಯಿಂದ ಆವೃತವಾದ ಆ ಸೋಪಾನದ ಮೇಲೆ ಕುಳಿತಿರುವ ಆ ವನದೇವಿಯೇ ಮೂರ್ತಿಯು ಚಿತ್ರದ ಪುತ್ಥಳಿಯಂತೆ ನೀರವಭಾವದಿಂದಿರುವಳು.

ಆ ಸುಂದರಿಯು, ಅಲ್ಲಿ ತನ್ನ ವಿನಾ ಮತ್ತಾರೂ ಇಲ್ಲದಿರುವುದನ್ನು ಕಂಡು, ಅತುರದಿಂದೆದ್ದು ನೀರಿಗಿಳಿದಳು. ಹಾಗೆಯೇ ಆಳವಾಗಿರುವಲ್ಲಿ ಮುಳುಗಿದಳು. ಬಹಳ ಹೊತ್ತಾಯಿತು, ಅವರೂ ಏಳಲಿಲ್ಲ. ಅರಿಂದ ಮನು ದೂರದಲ್ಲಿದ್ದುಕೊಂಡೇ ಇದೆಲ್ಲವನ್ನೂ ನೋಡಿ ಏಸ್ಮಿತನಾದನು. ವಿಚಾರವೇನೆಂಬುದು ಗೊತ್ತಾಗಲಿಲ್ಲ. ಆತನು ಸರೋವರದ ದಕ್ಷಿಣ

ಪಾರ್ಶ್ವದಲ್ಲಿನ ಒಂದು ಆಲದಮರದ ಬುಡದಲ್ಲಿ ನಿಂತುಕೊಂಡಿದ್ದನು; ಮನಸ್ಸಿನಲ್ಲಿ ಅದೊಂದು ಬಗೆಯ ಸಂದೇಹವುಂಟಾದ್ದರಿಂದ ಅಲ್ಲಿಯೇ ಕಾದು ನಿಂತಿದ್ದನು. ಬಹಳ ಹೊತ್ತು ಕಾದುಕೊಂಡಿದ್ದರೂ ಆ ಲೋಕ ಲಲಾಮಭೂತಳಾದ ಸುಂದರಿಯು ಮುಳುಗಿಯೇ ಇದ್ದಳು. ಇಷ್ಟು ಹೊತ್ತು ನೀರಿನಲ್ಲಿ ಮುಳುಗಿರುವುದೆಂದರೆ ಸಾಮಾನ್ಯ ಮನುಷ್ಯರಿಗೆ ಸಾಧ್ಯವಿಲ್ಲ.—ಎಂದು ಅರಿಂದಮನು ಭೀತನಾದನು. ಹಾಗೆಯೇ ಅವಳು ಮುಳುಗಿಕೊಂಡ ಸ್ಥಳಕ್ಕೆ ಸ್ವಲ್ಪ ದೂರದಲ್ಲಿ ಎರಡು ಕೈಗಳು ಒಂದುಸಲ ತೇಲಿದುವು, ಮತ್ತೆ ಮುಳುಗಿದುವು; ಕೊಂಚ ದೂರ ಹೋಗಿ ಪುನಃ ತೇಲಿದುವು.

ನೋಡುತ್ತಿದ್ದ ಅರಿಂದಮನು ಎಲ್ಲವನ್ನೂ ತಿಳಿದನು. ಅತನು ಒಡನೆಯೇ ನೀರಿಗೆ ಇಳಿದು, ಕೈಗಳು ಪುನಃ ತೇಲಿದಾಗ ಅವನ್ನು ಹಿಡಿದುಕೊಂಡು ಆ ಯುವತಿಯನ್ನು ಸೋಪಾನಕ್ಕೆ ಎಳೆದು ತಂದನು. ಆ ಯುವತಿಗೆ ಪ್ರಜ್ಞೆ ಹೋಗಿರಲಿಲ್ಲವಾದರೂ ಅವಳು ತುಂಬ ಅಶಕ್ತಳಾಗಿದ್ದಳು; ಅವಳಿಗೆ ಕುಳಿತುಕೊಳ್ಳುವುದೂ ಸಾಧ್ಯವಿಲ್ಲದೆ ಸೋಪಾನದಮೇಲೆ ಬಿದ್ದುಬಿಟ್ಟಳು. ಆ ವೇಳೆಗೆ ಅವಳು ಅಷ್ಟಾಗಿ ನೀರು ಕುಡಿದಿದ್ದಳೆಂದು ಹೇಳುವುದು ಸಾಧ್ಯವಿಲ್ಲ. ಆದರೆ, ಅವಳ ಸ್ಥಿತಿಯು ಸರಾಗವಾಗಿ ಉಸಿರಾಡುವುದಕ್ಕೂ ಆಗದಹಾಗಿತ್ತು; ಒಂದು ಉಸಿರನ್ನು ಎರಡು ಮೂರು ಸಲವಾಗಿ ಸೆಳೆದುಕೊಳ್ಳುತ್ತಿದ್ದಳು.

ನೋಡುತ್ತಿದ್ದ ಹಾಗೆಯೇ, ಅಲ್ಲಿಗೆ, ಆ ಗ್ರಾಮವಾಸಿಗಳಾದ ಅನೇಕ ಜನರು ಬಂದು ಸೇರಿದರು. ಜಲಮಗ್ನಳಾಗಿದ್ದ ಆ ಸುಂದರಿಯು ಆ ಗ್ರಾಮದಲ್ಲಿ ಭಾರಿ ಸಾಹುಕಾರನಾಗಿರುವ ತಮಿಷಾಜುದ್ದೀನನ ಮಗಳೆಂದೂ ಅವಳ ಹೆಸರು ಕುಲಸಮೆಯೆಂದೂ ಆ ಜನಗಳಿಂದ ತಿಳಿದು ಅರಿಂದಮನು ಕೇಳಿ ತಿಳಿದನು. ಅಲ್ಲಿಗೆ ಬಂದಿದ್ದವರೆಲ್ಲರೂ ತಮಿಷಾಜುದ್ದೀನನ ಪ್ರಜೆಗಳೇ ಎಂಬುದೂ ತಿಳಿಯಿತು. ಅವರ ಸಹಾಯವು ದೊರೆತುದರಿಂದ ಅರಿಂದಮನು ಅನುಕೂಲವಾಯಿತೆಂದು ಭಾವಿಸಿಕೊಂಡನಲ್ಲದೆ ಕುಲಸಮಳನ್ನು ಅಡಿಗಡಿಗೆ ತಿರುಗಿಸುತ್ತಲೂ, ಅವಳನ್ನು ನಿಲ್ಲಿಸುವುದು

ಕೂಡಿಸುವುದು ಹೀಗೆಲ್ಲಾ ಮಾಡಿ ಅವಳ ಹೊಟ್ಟೆಗೆ ಸೇರಿದ್ದ ನೀರನ್ನೆಲ್ಲಾ ಕಾರಿಸಿದನು. ಇದರಿಂದ ಕುಲಸಮೆಯು ಬಹುಮಟ್ಟಿಗೆ ಸ್ವಸ್ಥಳಾದಳು. ಒಂದುಸಲ ಅರಿಂದಮನ ಮುಖವನ್ನು ನೋಡಿ,—ತಾವು ನನಗೋಸ್ಕರ ಇಷ್ಟೆಲ್ಲಾ ಮಾಡಿದಿರೇಕೆ? ಇದರಿಂದ ಏನೂ ಗುಣ ಕಾಣಿಸುವುದಿಲ್ಲ. ನನಗೆ ಮರಣವೇ ಹಿತಕರವಾಗಿದ್ದಿತು—ಎಂದು ಕುಲಸಮೆಯು ಮೆಲ್ಲಗೆ ಹೇಳಿ ನಿಟ್ಟುಸಿರಿಟ್ಟಳು.

ಆ ಮಾತಿಗೆ ಅರಿಂದಮನಿಂದ ಯಾವ ಉತ್ತರವೂ ಬರಲಿಲ್ಲ. ಕುಲಸಮೆಯ ಶರೀರದ ನಿತ್ರಾಣವು ಕೊಂಚಮಟ್ಟಿಗೆ ಕಡಿಮೆಯಾದಾಗ ಒಂದುಕಡೆ ಅರಿಂದಮನೂ, ಮತ್ತೊಂದುಕಡೆ ಇನ್ನೊಬ್ಬ ಮನುಷ್ಯನೂ ಕುಲಸಮೆಯ ಕೈಹಿಡಿದು ಅವಳ ಮನೆಗೆ ಕರೆದುಕೊಂಡು ಹೊರಟರು. ಕುಲಸಮೆಯು ಅವರೊಡನೆ ನಿದಾನವಾಗಿ ಹೆಜ್ಜೆಹಾಕುತ್ತಾ ನಡೆದಳು. ಬಹಳ ದೂರವಿಲ್ಲ, ಅಲ್ಲಿಯೇ ಆ ಸರೋವರದ ಪೂರ್ವಕಡೆ ಅರಮನೆಯು ಹಾಗಿರುವ ತಮಿರಾಜುದ್ವೀನನ ವಿಸ್ತಾರವಾದ ಉಪ್ಪರಿಗೆ ಮನೆ!

ಎರಡನೆಯ ಪರಿಚ್ಛೇದ

ಹೊಸ ಗಂಡಾಂತರ

ಕೊಂಚ ಹೊತ್ತಿನೊಳಗಾಗಿ ಕುಲಸಮಳನ್ನು ಸಂಗಡ ಕರೆದು ಕೊಂಡು ಅರಿಂದಮನೂ ನಾಲ್ಕುಮಂದಿ ಗಾರ್ಡುಸ್ವಾರರೂ ತಮಿರಾಜುದ್ವೀನನ ಮನೆಗೆ ಬಂದರು. ಆ ವರ್ತಮಾನವು ಅಂತಃಪುರಕ್ಕೆ ತಲಪುವುದಕ್ಕೆ ಸಾವಕಾಶವಾಗಲಿಲ್ಲ. ಇಬ್ಬರು ಮೂವ್ವರು ಸೇವಕರು ಬಂದು ಕುಲಸಮಳನ್ನು ಕರೆದುಕೊಂಡು ಹೋದರು. ಆ ವೇಳೆಗೆ ಕುಲಸಮಳ ತಂದೆಯಾದ ತಮಿರಾಜುದ್ವೀನನು ಆ ಸ್ಥಳಕ್ಕೆ ಬಂದನು. ಹಿಂದೆಯೇ ಅವನ ಹೆಂಡತಿ ಬಂದಳು. ತಮಿರಾಜುದ್ವೀನನ ವಯಸ್ಸು ಸುಮಾರು ಐವತ್ತು ವರ್ಷಗಳಿರಬಹುದು; ಆದರೆ, ಅವನ ದೇಹವು ಜೀರ್ಣ–ಜೀರ್ಣವಾಗಿದೆ; ಎಂಭತ್ತು ವರ್ಷದ ಮುದುಕನಹಾಗೆ ಅವನ ಶರೀರದ ಮೇಲು

ಭಾಗವು ಮುಂದುಗಡೆಗೆ ತುಂಬ ಬಾಗಿಕೊಂಡಿದೆ. ನಡೆದು ಬರುವಾಗ ಆತನ ಕಾಲುಗಳು ಮದ್ಯಪಾಯಿಯ ಕಾಲುಗಳಂತೆ ಅಸ್ಥಿರಗಳಾಗಿದ್ದುವು.

ತಮಿರಾಜುದ್ದೀನನು ಅರಿಂದಮನನ್ನು ಪ್ರಾಸನದೃಷ್ಟಿಯಿಂದ ನೋಡಿ, "ಮಹಾಶಯ, ತಾವು ನನ್ನ ಮಗಳನ್ನು ಕಾಪಾಡಿದಿರಿ; ತಾವು ನೋಡದೇ ಇದ್ದಿದ್ದ ಪಕ್ಷದಲ್ಲಿ ಅವಳು ಬಂದು ನನ್ನನ್ನು.." ಎಂದು ಕಂಪಿತ ಕಂಠದಿಂದ ಹೇಳುತ್ತಿದ್ದನಾಗೆಯೇ ಕಂಠರೋಧವಾಯಿತು; ಮುಂದೆ ಮಾತನಾಡಲಾಗಲಿಲ್ಲ; ಪುನಃ ಮಾತನಾಡಲು ಪ್ರಯತ್ನಿಸಿದನು, ಆ ಪ್ರಯತ್ನವೂ ವ್ಯರ್ಥವಾಯಿತು. ಅವನ ಮುಖವೂ ಕಣ್ಣುಗಳೂ ಕೆಂಪಾದುವು, ಶರೀರವಾದ್ಯಂತವೂ ನಡುಗಲಾರಂಭವಾಯಿತು. ನೆಲಕ್ಕೆ ಬೀಳಲಿದ್ದ ಆತನನ್ನು ಅರಿಂದಮನು ಹಿಡಿದುಕೊಂಡನು. ಎರಡು ಕೈಗಳಿಂದಲೂ ಆತನನ್ನೆತ್ತಿಕೊಂಡು ಬಂದು, ಹೊರಭಾಗದಲ್ಲಿ, ಬಂದು ಪ್ರಶಸ್ತವಾದ ಕೊಠಡಿಯೊಳಗೆ ಮಲಗಿಸಿದನು.

ಉಳಿದವರೆಲ್ಲರೂ ಭಯಭ್ರಾಂತರಾಗಿ ಅಲ್ಲಿಗೆ ಬಂದರು. ಅರಿಂದಮನು ನೋಡಿದನು, ಇಷ್ಟರೊಳಗಾಗಿ ತಮಿರಾಜುದ್ದೀನನು ಮೃತನಾಗಿ ಹೋಗಿದ್ದಾನೆ!

ತಮಿರಾಜುದ್ದೀನನ ಪೆಂಜತಿಯು ಹೆಸರು ಮುತಿಜೀಬು ಎಂದು; ಅವಳಿಗೆ ಇನ್ನೂ ಒಂದು ಸಣ್ಣಪ್ರಾಯವು. ಇಪ್ಪತ್ತೈದು ವರ್ಷಗಳಿಗೆ ಮಿಂಚಿಲ್ಲ, ಆದರೆ ಅದಕ್ಕೂ ಚಿಕ್ಕವಳಂತೆಯೇ ಕಾಣಿಸುವಳು. ಮುತಿಜೀಬಿಯು ಅಕಂಪಿತಳಾಗಿ ಅಳತೊಡಗಿದಳು. ತಲೆ ಕೆದರಿಕೊಂಡು ಕೈ ಕಾಲುಗಳನ್ನು ಅಪ್ಪಳಿಸುತ್ತಾ, ಎದೆ ಕುಟ್ಟಿಕೊಳ್ಳುತ್ತಾ, ಚೀತ್ಕಾರ ಮಾಡಿಕೊಂಡು, ಘಟ್ಟಿಯಾಗಿ, ಅಳತೊಡಗಿದಳು.

ಅರಿಂದಮನು ಸೇವಕನೊಬ್ಬನನ್ನು ಕರೆದು "ಇಲ್ಲಿ ಔಷಧಿ ಕೊಡುವವರು ಯಾರು?" ಎಂದು ಕೇಳಿದನು.

ಸೇವಕನ ಹೆಸರು ಅಹಮದ. ಅಹಮದನು "ಫೂಲಸಾಹೇಬ" ಎಂದನು.

ಅರಿಂದಮ—ಆತನನ್ನು ಈಗಲೇ ಕರೆದುಕೊಂಡು ಬಾ.

ಆಹಮ್ಮದನು ಓಡುತ್ತಾ ಹೋದನು. ಅರಿಂದಮನು ತಪಾಜು ದ್ದೀನನ ಶರೀರವನ್ನು ಜೆನ್ನಾಗಿ ಪರೀಕ್ಷೆಮಾಡುತ್ತಾ ಕುಳಿತನು. ಹಾಗೆಯೇ,—ತಪಾಜುದ್ದೀನನು ಒಡುಕಿರಬಹುದು, ಇದು ಒಂದು ಬಗೆಯ ಮೂರ್ಛೆರೋಗವಾಗಿರಬೇಕು—ಎಂದು ಮನಸ್ಸಿನಲ್ಲಿಯೇ ಭಾವಿಸಿದನು. ಅಲ್ಲಿಂದ ಮತಿಬೀಬಿಗೆ ಸಮಾಧಾನ ಹೇಳಲು ಯತ್ನಿಸಿದನು. ಮತಿಬೀಬಿಯು ಮತ್ತೂ ಅಳುವುದಕ್ಕೆ ಆರಂಭಿಸಿದಳು.

ಈ ವೇಳೆಗೆ ಆಲ್ಲಿಗೆ ಕುಲಸಮೆಯು ಓಡೋಡಿ ಬಂದಳು. ತಂದೆಯು ಮೃತದೇಹವು ಬಿದ್ದಲ್ಲಿಗೆ ಹೋಗಿ-ಹೋಗುತ್ತಾ, ''ಅಪ್ಪಾ—ಅಪ್ಪಾ—ಅಪ್ಪಾ! ನಿನಗೆ ಏನಾಯಿತಪ್ಪಾ? ಇದೊ ನಾನು ಬಂದಿದ್ದೇನೆ, ಮಾತ ನಾಡಪ್ಪಾ'' ಎಂದು ಹೇಳಿದಳು. ಹತ್ತಿರಹೋಗಿ ತಂದೆಯ ಪಕ್ಕದಲ್ಲಿ ಮುಖವನ್ನಿರಿಸಿ ಅಳುತ್ತಾ ಕುಳಿತು ಬಿಟ್ಟಳು.

ಅರಿಂದಮ—ನಿಮ್ಮ ತಂದೆ ಬದುಕಿರುವಂತೆ ಕಾಣುವುದಿಲ್ಲ. ವೈದ್ಯ ನನ್ನು ಕರೆಯುವುದಕ್ಕೆ ಸೇವಕನು ಹೋಗಿದ್ದಾನೆ.

ಇದನ್ನು ಕೇಳಿ ಕುಲಸಮೆಯು ನಡುಗಿದಳು, ಹಾಗೆಯೇ ಎದ್ದು ನಿಂತಳು; ಅವಳ ಕಣ್ಣುಗಳೆರಡೂ ಮುತ್ತಿಷ್ಟು ಪರಿವರ್ತಿತವಾದುವು; ಅವಳು ಕರ್ತವ್ಯಪ್ರಜ್ಞಾವಂತ ತಲೆಯನ್ನೆತ್ತಿ, ಕುತ್ತಿಗೆಯನ್ನೊರೆಸಿಕೊಂಡು, ''ಯಾವ ವೈದ್ಯ?'' ಎಂದಳು.

ಅರಿಂದಮ—ನಿಮ್ಮ ಮನೆಯ ವೈದ್ಯ-ಫೂಲಸಾಹೇಬ.

ಇದನ್ನು ಕೇಳಿ ಇಂತಹ ಸಮಯದಲ್ಲಿಯೂ ಕುಲಸಮೆಯ ಮುಖದಲ್ಲಿ ನಗೆಮೂಡಿತು. ಇದಿರಾಗಿ ಅವಳ ತಂದೆಯ ಮೃತದೇಹವು ಬಿದ್ದಿದೆ, ವ್ಯಸನಾಕ್ರಾಂತಳಾದ ತಾಯಿ ಪಕ್ಕದಲ್ಲಿಯೇ ಅಳುತ್ತಿದ್ದಾಳೆ. ಇಂತಹ ಭಯಾನಕ ಸಮಯದಲ್ಲಿ ಆ ಕುಲಸಮೆಯ ಮುಖದಲ್ಲಿ ಮೂಡಿದ ನಗೆಯು, ಒಂದೊಂದು ಬಗೆಯಾಗಿ, ತುಂಬ ಭಯಂಕರವಾಗಿ ತೋರಿತು. ಅನಂತರ ಅವಳು ಅಸ್ಪುಟಸ್ವರದಿಂದ ''ಫೂಲಸಾಹೇಬನೇ?

ಆಗಬಹುದು'' ಎಂದಂದುಕೊಂಡಳು. ಆಗ ಪುನಃ ತಂದೆಯ ವಕ್ಷದಲ್ಲಿ ತಲೆಯಿಟ್ಟುಕೊಂಡು ಅಳುತಳುತ, ''ಅಪ್ಪಾ! ಎಲ್ಲಿಹೋದೆ? ಇನ್ನು ನನಗೆ ಯಾರೂ ದಿಕ್ಕಿಲ್ಲವಲ್ಲಾ! ಅಪ್ಪಾ, ಅಪ್ಪಾ, ನನಗೇನು ಗತಿ!'' ಎಂದು ಪ್ರಲಾಪಿಸಿದಳು. ಅವಳ ಮುಖವರ್ಣವು ವಿವರ್ಣವಾಯಿತು; ತಲೆ ಸುತ್ತುತಿರುವಂತೆ ತೋರಿತು, ಕೈಕಾಲುಗಳು ಸ್ವಾಧೀನ ತಪ್ಪಿದುವು; ಹೇಳಿದಳು,—''ಫೂಲಸಾಹೇಬ ನಮ್ಮ-ಶತ್ರು-ನಮ್ಮ ತಂದೆಯ ಶತ್ರು-ನನ್ನ..ಶತ್ರು-ಈ ಕುಟುಂಬದ ಶತ್ರು; ಪಿಶಾಚ-ಪಿಶಾಚ-ಎಂತಹ ಸರ್ವನಾಶ!'' ಮುಂದೆ ಮಾತು ಹೊರಡಲಿಲ್ಲ. ಕಾತರತೆಯಿಂದ ಕಂಪಿದ ಅವಳ ದೇಹಲತೆಯು ಅಲ್ಲಿಯೇ ಬಿದ್ದು ನೆಲದಲ್ಲಿ ಹೊರಳಿತು; ಕುಲಸವೆಯು ಮೂರ್ಛಿತೆಯಾದಳು.

ಅರಿಂದಮನು ಅತ್ಯವಸರದಿಂದ ಎದ್ದು ಬಂದು ಕುಲಸವೆಯನ್ನು ಹಿಡಿದುಕೊಂಡನು; ಅನಂತರ,-ಈ ಸಂದರ್ಭದಲ್ಲಿ ನೀವು ವ್ಯಸನದಿಂದ ಅಳುತ್ತ ಕುಳಿತರೆ ಸಾಗುವುದಿಲ್ಲ. ಕುಲಸವಳು ಮೂರ್ಛಿತಳಾಗಿದ್ದಾಳೆ; ಈಗ ಎಲ್ಲ ಉಪಚಾರಗಳಿಗೂ ನೀವೇ ಲಕ್ಷ್ಯಕೊಡಬೇಕಾಗಿದೆ-ಎಂದು ಮತಿಜೀಪುಗೆ ಹೇಳಿದನು.

ಮತಿಜೀಪುಯು ಬಂದು ಕುಲಸವಳ ಪಾರ್ಶ್ವದಲ್ಲಿ ಕುಳಿತಳು. ಕಣ್ಣಿಗೂ ಮುಖಕ್ಕೂ ನೀರು ಚಿಮುಕಿಸಿದ್ದರಿಂದ ಕುಲಸವೆಗೆ ಚಾಗ್ರತೆಯಾಗಿ ಪ್ರಜ್ಞೆ ಬಂದಿತು.

ಮೂರನೆಯ ಪರಿಚ್ಛೇದ

ಫೂಲಸಾಹೇಬ

ಅಷ್ಟರೊಳಗಾಗಿ ಡಾಕ್ಟರ್ ಫೂಲ್‌ಸಾಹೇಬನು ಅಲ್ಲಿಗೆ ಬಂದನು. ಮೊತ್ತಮೊದಲು, ಭೃದ್ಧನಾದ ತವಿಾಬುದ್ದೀನನ್ನು ನೋಡುವುದಕ್ಕೆ ಹೋದನು; ನೋಡಿ, ''ಇಲ್ಲ, ಬದುಕಿಲ್ಲ; ಹಠಾತ್ತಾಗಿ ಹೀಗಾಗುವುದಕ್ಕೆ ಕಾರಣವೇನೋ ತಿಳಿಯಲಿಲ್ಲವಲ್ಲ!'' ಎಂದನು.

ಮತಿಬೀಬಿ—ಈ ಅನರ್ಥಕ್ಕೆಲ್ಲ ಕುಲಸಮಯೇ ಕಾರಣ; ಇಂದು ಅವಳು ನೀರಲ್ಲಿ ಮುಳುಗಿ ಸಾಯುವ ಪ್ರಯತ್ನ ಮಾಡದೇ ಇದ್ದಿದ್ದಪಕ್ಷ ದಲ್ಲಿ ಇಂತಹ ಸರ್ವನಾಶವಾಗುತ್ತಿದ್ದಿತೇನು !—ಎಂದು ಹೇಳಿದಳು. ಅಶ್ರುಧಾರೆಯು ಅವಳ ಎರಡು ಕೆನ್ನೆಗಳನ್ನೂ ತೋಯಿಸಿ ಹರಿಯು ತಿದ್ದಿತು; ಆದರೂ ಆ ಮುಖದಲ್ಲಿ ಒಂದು ಸಲ ನಗೆಯ ರೇಖೆ ಮೂಡಿ ಹಾಗೆಯೇ ಲೀನವಾಗಿ ಹೋಯಿತು.

ಅರಿಂದಮನು ಡಾಕ್ಟರ ಫೂಲಸಾಹೇಬನಿಗೆ ಅನುಪೂರ್ವಿಕವಾಗಿ ಎಲ್ಲವನ್ನೂ ಹೇಳಿದನು. ಫೂಲಸಾಹೇಬನು ಮನಗೊಟ್ಟು ಎಲ್ಲವನ್ನೂ ಕೇಳಿದನು. ಆ ಸಮಯದಲ್ಲಿ ಗಡ್ಡವಿಸಾಸೆಗಳೊಂದೂ ಇಲ್ಲದ ಅವನ ಓಷ್ಠಾಧರದಲ್ಲಿ ಒಂದು ಕಡೆ, ಪರಿಹಾಸವ್ಯಂಜಕವಾದ ಅದೊಂದು ಬಗೆಯ ನಗೆಯು ಸುಳಿದಾಡುತ್ತಿದ್ದಿತು; ಇದನ್ನು ಯಾರೂ ಕಾಣಲಿಲ್ಲ. ಅರಿಂದಮನು ಮಾತು ಮುಗಿಸಿದಮೇಲೆ, ಫೂಲಸಾಹೇಬನು ವಿನೀತಭಾವದಿಂದ "ಮಹಾಶಯರ ನಾಮಧೇಯವೇನೋ ತಿಳಿಯಬಹುದೇ ?" ಎಂದು ಪ್ರಶ್ನೆಮಾಡಿದನು.

ಅರಿಂದಮ—ಅರಿಂದಮಮಸು.

ಫೂಲಸಾಹೇಬ—ಸರಿ !

ಫೂಲಸಾಹೇಬನ ಮುಖಭಾವವು ಹಠಾತ್ತಾಗಿ ಮಾರ್ಪಟ್ಟಿತು; ಅವನು ಅದನ್ನು ಹಾಗೆಯೇ ಕ್ಷಣುಪಡಿಸಿಕೊಂಡು ಮತ್ತಷ್ಟು ವಿನೀತ ಭಾವದಿಂದ; "ಮಹಾಶಯರು ಇರುವುದೆಲ್ಲಿ? ಎಂಬುದನ್ನು,—ಯಾವ ಆಕ್ಷೇಪಣೆಯೂ ಇಲ್ಲದಿದ್ದರೆ"—....?—ಎಂದನು.

ಅರಿಂದಮನು—ರಘುನಾಥಪುರ; ಇಲ್ಲಿಂದ ಸುಮಾರು ಮೂರು ಹರಿ ದಾರಿಯಾಗಬಹುದು; ಯಾವುದೋ ಕೆಲಸಕ್ಕಾಗಿ ಇತ್ತಕಡೆ ಬಂದಿದ್ದೆ; ನಾನು ಇನ್ನು ಹೊರಡಬಹುದಷ್ಟೆ ?

ಫೂಲಸಾಹೇಬನು ಆ ಮಾತಿಗೆ ಯಾವುದೊಂದು ಉತ್ತರವನ್ನೂ ಕೊಡದೆ ಕುಲಸಮಳ ಕೈಹಿಡಿದು ನೋಡಿ,—ನೀನು ಇನ್ನು ಇಲ್ಲಿರಬೇಡ,

ನಾನು ಕೇಳಿದ್ದರಲ್ಲಿ ನಿನ್ನ ಶರೀರಸ್ಥಿತಿ ಸರಿಯಾಗಿರುವುದೆಂದು ತೋರುವುದಿಲ್ಲ. ಸಡೆ, ನಿಮ್ಮ ತಾಯನ್ನೂ ಸಂಗಡ ಕರೆದುಕೊಂಡು ನಿನ್ನ ಕೊಠಡಿಗೆ ಹೊರಡು,—ಎಂದನು. ಅನಂತರ ಅರಿಂದಮನನ್ನು ನೋಡಿ, ತಾವು ದಯೆಮಾಡಿ ಇನ್ನು ಕೊಂಚಕಾಲ ಇಲ್ಲಿಯೇ ಇರೋಣಾಗಲಿ'' ಎಂದು ಹೇಳಿದನು.

ಕುಲಸಹಿಯು ಎದ್ದು ನಿಂತಳು. ಯಾವ ಮಾತನ್ನೂ ಆಡಲಿಲ್ಲ; ಆದರೆ, ಅವಳು ತಿರಸ್ಕಾರ ಸೂಚಕ ದೃಷ್ಟಿಯಿಂದ, ಒಂದುಸಲ ಡಾಕ್ಟರನನ್ನು ನೋಡಿದಳು. ಆ ದೃಷ್ಟಿಯು ಅಭಿಪ್ರಾಯವನ್ನು ಡಾಕ್ಟರನು ಮಾತ್ರ ತಿಳಿದುಕೊಂಡನು. ಅದರಿಂದ ಫೂಲಸಾಹೇಬನ ಮುಖಭಾವವು ಮಾರ್ಪಾಡಾದೀ ಹೋದರೂ ಅರೆಗಳಿಗೆಯಮಟ್ಟಿಗೆ ಆ ಮುಖದಲ್ಲಿ, ಹುಬ್ಬು ಏಕ್ಕಾಗಿದ್ದು ನಂತರ ಸ್ವಾಭಾವಿಕಕ್ಕೆ ಬಂದಿತು. ಒಡನೆಯೇ ಅವನ ಆ ದೃಷ್ಟಿಯಿಂದ, ಒಂದು ಸಲ, ಬೆಂಕಿಯ ಕೆಂಡವೇ ಹೊರಬಿದ್ದು ಹಾಗೆ ತೋರಿ, ಅವ್ಯಕ್ತವಾದ ಆ ಭಾವಾಂತರದಲ್ಲಿ ಸೇರಿಹೋಯಿತು. ಹೇಳಿದನು—ಹೊರಡು-ಕುಲಸಹಿ, ಹಟಮಾರಿಯಾಗಬೇಡ. ನಿಮ್ಮ ತಾಯನ್ನೂ ಸಂಗಡ ಕರೆದುಕೊಂಡು ನಿನ್ನ ಕೊಟಡಿಗೆ ಹೊರಡು ಎಂದು. ಮುತಿಪೇಜ ಎದ್ದು ಹೋದಳು. ಕುಲಸಹಿಯೂ ಎದ್ದಳು. ಹೊರಡುವಾಗ ಅವಳು ಬಾಗಿಲಬಳಿ ನಿಂತು ಅರಿಂದಮನನ್ನು ಉದ್ದೇಶಿಸಿ, —''ಮಹಾಶಯ, ಆ ಸಮಯದಲ್ಲಿ ನನ್ನನ್ನು ಸಾಯಿಸಿಬಿಟ್ಟಿದ್ದರೆ ಹಕ್ಕಿದಲ್ಲಿ, ಒಳ್ಳೆಯ ಕೆಲಸವಾಗುತ್ತಿತ್ತು. ನೀವು ಸರಿಯೆನಿಸಿದ ಕೆಲಸ ಮಾಡಿದಂತೆ ಆಗಲಿಲ್ಲವೆಂದು ಈಗಲೂ ಹೇಳುತ್ತೇನೆ'' ಎಂದು ಹೇಳಿ ತ್ವರಿತ ಗತಿಯಿಂದ ಹೊರಟುಹೋದಳು.

ಆಗ ಡಾಕ್ಟರ್ ಫೂಲಸಾಹೇಬನು ಆ ಆತಂಕ ಪರಿಹಾರವಾಗುವುದಕ್ಕಾಗಿ ದೀರ್ಘವಾದ ನಿಟ್ಟುಸಿರಿಟ್ಟು,—ಯಾರಾದರೂ ಸತ್ತರೆ ಸಾಕು, ಹೆಂಗಸರಿಗೆ ಅಳುವುದಕ್ಕೆ ಮಹಾ ಸುಯೋಗ ಸಿಕ್ಕಿದಂತಾಗುತ್ತದೆ. ಮನೆ ಕಿತ್ತುಹೋಗುವ ಹಾಗೆ ಅತ್ತುಬಿಡುತ್ತಾರೆ; ಅವರಿಂದ ಮಕ್ಕಳಿಗೆ ಹೊಂದಬೇಕಾದರೆ ಏನೇನು ಮಾಡಬೇಕೋ ಆ ಪ್ರಯತ್ನವೆಲ್ಲವನ್ನೂ

ಮೊದಲು ಮಾಡುತ್ತೇನೆ,—ಎಂದು ಹೇಳಿ, ಸೇವಕರ ಹೆಸರು ಪಿಡಿದು ಕೂಗಿದನು. ಮೂರು ನಾಲ್ಕು ಮಂದಿ ಸೇವಕರು ಊರ್ಧ್ವಶ್ವಾಸ ದಿಂದ ಓಡಿಬಂದರು. ಅವರೆಲ್ಲರೂ ಭಯಭರಿತರು, ತ್ರಸ್ತರು, ಡಾಕ್ಟರ ಬಾಬುವನ್ನು ಕಂಡರೆ ಬಹು ಶಂಕಿತರು. ಇದೆಲ್ಲವನ್ನೂ ಅರಿಂದಮನು ನೋಡಿದನು. ಅವರು ಅವನನ್ನು ಕಂಡರೆ ಎಷ್ಟರ ಮಟ್ಟಿಗೆ ಭಯ ಪಡುತ್ತಿದ್ದರೋ ಆಷ್ಟರಮಟ್ಟಿಗೇ ಅವನನ್ನು ದ್ವೇಷಿಸುತ್ತಲೂ ಇದ್ದ ರೆಂಬುದು ಅವರ ಮುಖಭಾವದಿಂದ ವ್ಯಕ್ತವಾಗುತ್ತಿದ್ದಿತು.

ಫೂಲಸಾಹೇಬನು ಭೃತ್ಯರನ್ನು ಕುರಿತು ಯಾರ್ಯಾರು ಏನೇನು ಮಾಡಬೇಕೆಂಬುದನ್ನು ಹೇಳಿದನು; ಅವರು ಅವರವರ ಕೆಲಸಗಳಿಗೆ ಹೊರಟುಹೋದರು. ಸುಮ್ಮನೇ ಕುಳಿತಿದ್ದ ಅರಿಂದಮನು ತಾನು ಹೊರಡುವುದಕ್ಕಾಗಿ ಎದ್ದಾವತರ್ತ ಮೇಲಕ್ಕೆ ಎದ್ದನು; ಎರಡು ಸಲವೂ ಫೂಲಸಾಹೇಬನು ಕುಳಿತುಕೊಳ್ಳಬೇಕೆಂದು ಅವನನ್ನು ಬಲಾತ್ಕರಿ ಸಿದನು.

ಆ ಮೃತದೇಹದ ಸಂಸ್ಕಾರವಾಗಿ ಮಾಡಬೇಕಾದ ಏರ್ಪಾಡುಗಳೆಲ್ಲ ಫೂಲಸಾಹೇಬನಿಗೆ ಇನ್ನೂ ಅರ್ಧಗಂಟೆಯಾಯಿತು. ಆನಂತರ ಅವನು ಅರಿಂದಮನನ್ನು ಕುರಿತು,—ಅರಿಂದಮಬಾಬೂ, ತಾವು ಏನೂ ಕೊಂಚ ಕಾಲ ನಿಲ್ಲುವುದಾದರೆ ತುಂಬ ಅನುಕೂಲ. ನಾನು ಬಂದು ಸಲ ಮತಿಯೀಯನ್ನೂ ಕುಲಸಮುಳನ್ನೂ ನೋಡಿಕೊಂಡು ಬರುತ್ತೇನೆ; ಇಬ್ಬರೂ ಚತೆಯಾಗಿ ಹೋಗೋಣ; ಏನುಹೇಳುತ್ತೀರಿ? ಎಂದನು.

ಅರಿಂದನು—ಕ್ಷಮಿಸಿರಿ, ನಾನು ಹೋಗಬೇಕಾದ ಅವಶ್ಯಕ ಕೆಲಸವಿದೆ; ಬಹಳ ಹೊತ್ತು ನಿಲ್ಲಲಾರೆ; ಇದೊ ಹೊರಟೆ.

ಫೂಲಸಾಹೇಬ—ಇಲ್ಲ ಇಲ್ಲ, ತಾವು ಕುಳಿತುಕೊಳ್ಳಿ, ನಾನು ಈಗಲೇ ಬಂದೆ; ತಮ್ಮ ಸಂಗಡ ಬಂದೆರಡು ಮಾತನಾಡುವುದಿದೆ. ಮುಖ್ಯವಾಗಿ ಮತಿಯೀಯೂ ಕುಲಸಮಿಯೂ ಈಗ ಏನೇನು ಮಾಡ ಬೇಕೋ ಹೇಳಿಬರುತ್ತೇನೆ—ಈಗಲೇ ಬಂದೆ.

ಫೂಲಸಾಹೇಬನು ಎದ್ದು ಹೋದನು.

ನಾಲ್ಕನೆಯ ಪರಿಚ್ಛೇದ

ಸಾವಧಾನ

ಡಾಕ್ಟರು ಹೊರಟುಹೋದ ಉತ್ತರಕ್ಷಣದಲ್ಲಿಯೇ ಕುಲಸವುಳು ಆ ಕೊಟ್ಟಡಿಗೆ ಓಡಿಬಂದಳು. ಆ ಕೊಟ್ಟಡಿಯಲ್ಲಿ ಇನ್ನೂ ಅವಳ ತಂದೆಯ ಮೃತದೇಹವು ಇದ್ದೇ ಇದ್ದಿತು. ಕುಲಸವುಳು ಮೃತನಾದ ತನ್ನ ತಂದೆಯನ್ನು ಪುನಃ ನೋಡುವುದಕ್ಕೋಸ್ಕರ ಬಂದಿರಬಹುದೆಂದು ಅರಿಂದವುನು ಭಾವಿಸಿದನು; ಆದರೆ ಅವಳು ತಂದೆಯ ಶವದಕಡೆ ಒಂದು ನಲವಾದರೂ ತಿರುಗಿನೋಡಲಿಲ್ಲ; ಅರಿಂದವುನು ಯಾವಲ್ಲಿ ಕುಳಿತಿದ್ದನೋ ಅಲ್ಲಿಗೇ ಮುಂದರಿದು ಹೋಗಿ, ಒಂದು ಕುರ್ಚಿಯನ್ನೆಳದುಕೊಂಡು ಕುಳಿತು,—ಅರಿಂದವುಜಾಬೂ, ಎಚ್ಚರದಿಂದಿರಿ! ಈ ಡಾಕ್ಟರನು ಸಾವುವಾನ್ಯನೆಂದು ತಿಳಿಯಬೇಡಿ; ನಾನು ಈತನ ಭಾವ ಭಂಗಿಯನ್ನು ನೋಡಿದ್ದರಲ್ಲಿ ಅವನು ನಿವ್ಮನ್ನು ವೋಸವುಾಡುವ ಪ್ರಯತ್ನದಲ್ಲಿರುವಂತೆ ಕಂಡುಬರುತ್ತದೆ,—ಎಂದು ಹೇಳಿ ಎಚ್ಚರಿಸಿದಳು.

ಅರಿಂದವುನಿಗೆ ಅವಳ ವಾತಿನ ಅಭಿವ್ರಾಯವು ತಿಳಿಯಲಿಲ್ಲ. ದುಃಖ ವೇಗದಿಂದ ಕುಲಸವುಿಗೆ ಬುದ್ಧಿ ಕೆಟ್ಟಿರಬೇಕೆಂದು ಊಹಿಸಿಕೊಂಡನು; ಅರಿಂದವುನು ವಾತನಾಡದಿರುವುದನ್ನು ಕಂಡು ಕುಲಸವುಳು ಅವನ ವುನೋಭಾವವನ್ನು ಒಂದು ರೀತಿಯಿಂದ ಊಹಿಸಿದಳು. ಆ ಸವುಯದಲ್ಲಿ, ಯಾತನಾವುಯವಾದ ಒಂದು ನಗೆಯು, ಅವಳ ಆ ವ್ಲಾನ ವುಖದಲ್ಲಿ, ಕಾಣಿಸಿಕೊಂಡಿತು. ಆಗ ಕುಲಸವುಯು—ನನ್ನನ್ನು ಹುಚ್ಚಿ ಎಂದು ತಿಳಿಯಬೇಡಿ, ನಾನು ಎಲ್ಲವನ್ನೂ ನೋಡುತ್ತಿದ್ದೇನೆ. ಎಲ್ಲವನ್ನೂ ಸರಿಯಾಗಿ ತಿಳಿಯುತ್ತಲೂ ಇದ್ದೇನೆ. ನೀವು ಯಾವುದನ್ನು ತಿಳಿಯಲಾರಿರೋ ಅದನ್ನೂ ನಾನು ತಿಳಿದುಕೊಂಡಿದ್ದೇನೆ,—ಎಂದು ಹೇಳಿ ವ್ಮೃತನಾದ ತಂದೆಯ, ಅಲುಗಾಡದಿರುವ, ಕಠಿಣ ವಕ್ಷದ ವೇಲೆ ಕೈಯಿಟ್ಟು,—ನವ್ಮ ತಂದೆಯನ್ನು ಈ ಅವಸ್ಥೆಗೆ ತಂದವನು ಯಾರು? ಯಾರು? ಅದೇ ಪಿಶಾಚ—ಡಾಕ್ಟರ್—ಡಾಕ್ಟರ್ ಫೂಲಸಾಹೇಬನು ನವ್ಮ ತಂದೆಯ ಕೊಲೆವಾಡಿದ್ದಾನೆ. ಎರಡು ವರ್ಷಗಳಿಗೆ ವೊದಲು ನನಗೆ

ಫೂಲಸಾಹೇಬನ ಪರಿಚಯವೇ ಇಲ್ಲದಿದ್ದಾಗ, ನಮ್ಮ ತಂದೆ ಹೇಗೆ ಕಾಣಿಸಿಕೊಳ್ಳುತ್ತಿದ್ದನೋ, ಆ ಪುಷ್ಟವಾದ ಶರೀರವು, ಎರಡು ವರ್ಷಗಳ ಮಧ್ಯೆ ಮುಪ್ಪಿಗೆ ಸಂದ ಮುದುಕನ ಶರೀರಕ್ಕಿಂತಲೂ ಜೀರ್ಣ ಶೀರ್ಣ ವಾಯಿತು. ಈ ಎರಡು ವರ್ಷಗಳೊಳಗಾಗಿ ಫೂಲಸಾಹೇಬನು ನಂದನದಂತಹ ಈ ಸಂಸಾರವನ್ನು ಸ್ಮಶಾನವನ್ನಾಗಿ ಮಾಡಿದನು. ಈಗಲೂ ಹೇಳುತ್ತೇನೆ, ಅರಿಂದಮಬಾಬೂ, ನೀವು ನನ್ನನ್ನು ಹುಚ್ಚ ನೆಂದು ಭಾವಿಸಬೇಡಿ. ನಾನು ನಮ್ಮ ತಂದೆಯ ಮೃತದೇಹವನ್ನು ಮುಟ್ಟಿ ಪ್ರಮಾಣವಾಡಿ ಹೇಳುತ್ತೇನೆ; ನಾನು ಫೂಲಸಾಹೇಬನ ವಿಚಾರವಾಗಿ ತಿಳಿಯಬಹುದಾದುದನ್ನೆಲ್ಲ ಪೂರ್ಣವಾಗಿ ತಿಳಿದಿದ್ದೇನೆ. ಅವನ ಭಾವಭಂಗಿಯನ್ನು ನೋಡಿದರೆ, ಇಂದು ಅವನು ನಿಮ್ಮನ್ನು ಏಪತ್ತಿಗೆ ಸಿಕ್ಕಿಸಬೇಕೆಂದು ಸಂಕಲ್ಪವಾಡಿರುವಂತೆ ವ್ಯಕ್ತವಾಗುತ್ತದೆ. ನಾನು ಮುಖವನ್ನು ನೋಡಿದ ಮಾತ್ರದಿಂದಲೇ ಅವನ ಮನೋಭಾವ ವನ್ನು ತಿಳಿದುಕೊಳ್ಳಬಲ್ಲೆನು. ಆದ್ದರಿಂದಲೇ ನಿಮ್ಮನ್ನು ಎಚ್ಚರ ಗೊಳಿಸಿದ್ದೇನೆ; ಸಾವಧಾನ! ಬಹು ಜಾಗರೂಕರಾಗಿರಬೇಕು. ಫೂಲ ಸಾಹೇಬನು ಸಾಮಾನ್ಯನಲ್ಲ. ಬಹು ಭಯಂಕರ ಪಿಶಾಚ!—ಎಂದಳು.

ಕುಲಸಮೆಯು ಆ ಆಗ್ರಹಾತಿಶಯದಿಂದಲೂ, ಸರಳತಾಪೂರ್ಣ ವಾಗಿರುವ, ಅವಳ ನಿಷ್ಕಪಟವಾದ ಮಾತುಗಳಿಂದಲೂ ಅರಿಂದಮನ ಮನಸ್ಸಿಗೆ ಒಂದು ಬಗೆಯಾಗಿ ಸಂದೇಹ ತೋರಿತು. ಎಲ್ಲ ವಿಚಾರ ಗಳನ್ನೂ ವಿವರವಾಗಿ ಹೇಳದಿದ್ದರೆ, ನನಗೊಂದೂ ಗೊತ್ತಾಗುವ ಹಾಗಿಲ್ಲ—ಎಂದು ಅರಿಂದಮನು ಹೇಳಿದನು.

ಇಲ್ಲ-ಇಲ್ಲ; ಈಗ ಬೇಡ; ಆ ಪಿಶಾಚನು ಇಷ್ಟರಲ್ಲಿಯೇ ಬಂದು ಬಿಡುವನು—ಈಗ ಅಷ್ಟರ ಅವಕಾಶವಿಲ್ಲ—ಎಂದು ಹೇಳಿ ಕುಲಸಮೆಯು ಭಯದಿಂದ ಒಂದುಸಲ ಹಾಗೂ ಹೀಗೂ ನೋಡಿದಳು.

ಅರಿಂದಮ—ಒಂದುವೇಳೆ ಅವನು ಬಂದರೆ ತಾನೇ ಏನು ಭಯ?

ಕುಲಸಮೆ—ಅದರ ಫಲವನ್ನು ನಾನು ಅನುಭವಿಸಬೇಕಾಗುವ ದು.

ಅರಿಂದಮ—ನಾನು ಇಲ್ಲಿರುವವರೆಗೂ ಹಾಗಾಗಲಾರದೆಂದು ನಂಬಬಹುದು.

ಕುಲ.—ಅಲ್ಲಿಯವರೆಗೆ ಆಗದಿದ್ದರೂ ಅನಂತರ ಆಗಬಹುದು. ಇಂತಹ ಪಾಪಿಷ್ಠನು ಬಲ್ಲಿಯೂ ಇರಲಿಕ್ಕಿಲ್ಲ. ಮಾತು ಕಪಟಿಗಳಲ್ಲಿ ಬಹು ಮೃದು, ನಡವಳಿಯಲ್ಲಿ ನಿರ್ದಯತೆಯು ಅಪಾರವು! ಹೀಗಿರುವಾಗ ಅವನ ಮನೋಭಾವವನ್ನು ಅಂಶಮಾತ್ರವಾದರೂ ತಿಳಿಯುವುದಕ್ಕೆ ಯಾರಿಗೆ ಸಾಧ್ಯ? ಅವನ ಬಾಯಲ್ಲಿ ಬಂದೂ ಕಠಿಣವಾದ ಮಾತನ್ನು ಕೇಳಿದ್ದಿಲ್ಲ; ಅವನಿಗೆ ಕೋಪವನ್ನಾಡಿಕೊಳ್ಳುವುದೇ ತಿಳಿಯದಹಾಗಿದೆ; ಇಂದು ನಿಮ್ಮ ಸಂಗಡ ಅವನು ಬಹು ಸುಗುಣಶೀಲತಾಮಣಿಯಂತೆ ಹೇಗೆ ಮಾತನಾಡುತ್ತಿರುವನೋ ಅದೇರೀತಿಯಾಗಿ, ಇಪ್ಪತ್ತುನಾಲ್ಕು ಗಂಟೆಗಳ ಕಾಲವೂ, ಅವನನ್ನು ಕಾಣಬಹುದು. ಮತ್ತೂ ಇಂದು ನೀವು ಯಾವಳನ್ನು ನೋಡಿದಿರೋ, ಯಾವಳ ವಯಸ್ಸನ್ನು ನನ್ನ ವಯಸ್ಸಿಗಿಂತ ತುಂಬ ಹೆಚ್ಚಾಗಿಲ್ಲವೋ, ಅವಳು ನಮ್ಮ ಚಿಕ್ಕಮ್ಮ. ಅವಳು ಸಾಧಾರಣಳಲ್ಲ. ನಮ್ಮ ತಂದೆಯ ಮರಣದ ದೆಸೆಯಿಂದ ಅವಳು ಪ್ರಕಾಶಪಡಿಸಿದ ವ್ಯಸನವು ಸಂಪೂರ್ಣವಾಗಿಯೂ ಅಭಿನಯವೇ ಸರಿ. ಇದರಿಂದ ಅವಳು, ಒಳಗೊಳಗೇ, ಬಹಳ್ಬೀಮಟ್ಟಿಗೆ ಸಂತೋಷಗೊಂಡಿರುವಳು. ಆಯ್ಯೋ, ಬಲ್ಲ ರೀತಿಗಳಿಂದಲೂ ಬಹ್ವರ ಮಟ್ಟಿಗೆ ಸರ್ವನಾಶವಾಗಬಹುದೋ ಇಂದು ನನಗೆ ಅಷ್ಟೂ ಆಯುತು. ನನ್ನವರು ತನ್ನವರೆಂದು ಹೇಳಿಕೊಳ್ಳುವುದಕ್ಕೆ ಇಂದು ಯಾರೂ ಇಲ್ಲವಾಯುತು. ತಂದೆಯಿಲ್ಲ, ತಾಯಿ ಇಲ್ಲ, ಅಣ್ಣತಮ್ಮಂದಿರಿಲ್ಲ; ಯಾರ ಆಶ್ರಯದಲ್ಲಿ ಇರಬೇಕೆಂಬುದೇ ತಿಳಿಯದು. ನನ್ನಗತಿಯೇನೋ ದೇವರೇ ಬಲ್ಲ!

ಕುಲಸಮಳ ಕಣ್ಣುಗಳಲ್ಲಿ ನೀರು ತುಂಬುತ್ತ ಬಂದಿತು. ಅವಳು ಎರಡು ಕೈಗಳಿಂದಲೂ ಮುಖವನ್ನು ಮುಚ್ಚಿಕೊಂಡು ಅಳುವುದಕ್ಕೆ ಪ್ರಾರಂಭಿಸಿದಳು. ಸಂಜೆಯ ಮೊಗ್ಗು ಸಂತೈಸುವ ಅವಳ ಜೆರಲುಗಳ ಪಾರ್ಶ್ವದಲ್ಲೆಲ್ಲಾ ಅಪರಿಚಯವಾಗಿ ಅಶ್ರು ಪ್ರವಾಹವು ಹೊರಟು, ಅವಳ

ಎರಡು ಕೈಗಳನ್ನೂ ತೊಳಿಸಿತು. ಅರಿಂದಮನು ಧೈರ್ಯಹೇಳಿ, ಆಗ್ಗೆ, ಅವಳನ್ನು ಸಮಾಧಾನಗೊಳಿಸಿದನು. ಕುಲಸಮು ಳು ಹೇಳ ತೊಡಗಿದಳು:—ಫೂಲಸಾಹೇಬನು ನಮ್ಮ ಮನೆಯನ್ನು ಬಿಟ್ಟಿದ ಎರಡು ತಿಂಗಳ ನಂತರ ನನ್ನ ತಾಯಿ ಪರಲೋಕಗತಳಾದಳು. ಅದಾದ ಹತ್ತು ತಿಂಗಳ ನಂತರ ನನಗಿಂತಲೂ ಎರಡುವರ್ಷ ಚಿಕ್ಕವ ನಾಗಿದ್ದ ಸಹೋದರನೊಬ್ಬನು ಮೃತನಾದನು. ಅದಾದನಂತರ ಐನ್ನಾರು ತಿಂಗಳು ಕಳೆಯಿತೋ ಇಲ್ಲವೋ ಮನ್ನುವುದರೊಳಗಾಗಿ ನಮ್ಮ ತಂದೆಯು ಆರೋಗ್ಯಭಾಗ್ಯವು ಕೆಟ್ಟಿತು. ಅತನು ಹಠಾತ್ತಾಗಿ ಹಾಸುಗೆ ಹಿಡಿದನು. ಇವುಗಳೆಲ್ಲಾ ಆ ಪಿಶಾಚಸಿಗೆ ಏನೋ ಉದ್ದೇಶ್ಯವು ಇದ್ದೇಯಿರಬೇಕು; ಆ ಪಾಪಿಷ್ಠನು ನನ್ನನ್ನು ಏನನ್ನು ಬಹು ದಿನಗಳವರೆಗೆ ಉಳಿಯಿಸಿಕೊಳ್ಳುವಂತೆ ತೋರುವುದಿಲ್ಲ.

ಅರಿಂದಮ—ಏಕೆ, ಈ ಪಾತು ಹೇಳುವುದೇಕೆ?

ಕುಲಸಮು—ನಾನು ಅವನನ್ನು ಮದುವೆಯಾಗದೇ ಹೋದರೆ, ಅವನು ನನ್ನನ್ನು ಜಾಗ್ರತೆಯಾಗಿಯೇ ತೀರಿಸಿಬಿಡುವನು. ಅಂತಹ ನರಾಧಮನನ್ನು ಮದುವೆಯಾಗಿ, ಸಾಯುವವರೆಗೂ ಮರಣ ಸಂಕಟ ವನ್ನು ಅನುಭವಿಸುವುದಕ್ಕಿಂತ ಅರೆಗಳಿಗೆಯು ಕಾಲದ ಮರಣಯಾತ ನೆಯು ಸಾವಿರಪಾಲಿಗೆ ಮೇಲು; ಅದಕ್ಕೊಕ್ಕೀಸ್ಕರವಾಗಿಯೇ ಆ ಪಿಶಾಚ—ಇರಲಿ, ಈ ಪಾತು ಇಷ್ಟಕ್ಕೇ ಸಾಕು, ನಾನು ವ್ಯಸನಕರ ವಾದ ನನ್ನ ಚರಿತ್ರೆಯನ್ನು ಹೇಳುವುದಕ್ಕೆ ಇಲ್ಲಿ ಬಂದವಳಲ್ಲ; ನಿಮ್ಮನ್ನು ಎಚ್ಚರಿಸುವುದಕ್ಕಾಗಿ ಬಂದಿದ್ದೇನೆ. ಈಗಲೂ ನಿಮಗೆ ಹೇಳುತ್ತೇನೆ, ಫೂಲಸಾಹೇಬನ ವಿಚಾರದಲ್ಲಿ ಜಾಗರೂಕರಾಗಿರಿ; ಹತ್ತಿರದಲ್ಲಿಯೇ ಹಾವನ್ನು ಕಂಡಾಗ ಜನರು ಹೇಗೆ ಜಾಗರೂಕತೆಯಿಂದಿರುವುದು ಅವಶ್ಯಕವೋ, ನೀವೂ ಹಾಗೆಯೇ ಜಾಗರೂಕರಾಗಿರಿ. ಅವನು ಇಲ್ಲಿಗೆ ಬಂದು ನಿಮ್ಮನ್ನು ನೋಡಲು ನೋಡಿದಾಗ ಅವನ ಮುಖದ ಭಾವಭಂಗಿ ಯನ್ನು ನೋಡಿದುದರಲ್ಲಿ, ನಿಮಗೆ ಫೂಲಸಾಹೇಬನ ವಿಚಾರವು ತಿಳಿಯು ದಿದ್ದರೂ ಅವನಿಗೆ ನಿಮ್ಮ ವಿಚಾರವೆಲ್ಲವೂ ಚೆನ್ನಾಗಿ ತಿಳಿದಿರುವುದೆಂದು

ಗೊತ್ತಾಯಿತು; ನುಮ್ಮನೆ ತಿಳಿದಿರುವುದು ಮಾತ್ರವೇ ಅಲ್ಲ; ಅವನು ನಿಮ್ಮನ್ನು ಬಹಳವಾಗಿ ದ್ವೇಷಿಸುವನೆಂದೂ ಗೊತ್ತಾಯಿತು. ನಿಮ್ಮ ಹೆಸರನ್ನು ಕೇಳಿದ ಮಾತ್ರದಿಂದ ಅವನ ಕಣ್ಣುಗಳು ಕೆಂಡಗಳನ್ನು ಕಾರುವಂತೆ ತೋರಿದುದನ್ನೂ ಚೆನ್ನಾಗಿ ನೋಟಿದೆ. ಫೂಲಸಾಹೇಬನು ನಿಮ್ಮ ಸಂಗಡ ನಮ್ರಭಾವದಿಂದ ಮಾತುಕಥೆಗಳಾಡುತ್ತಿದ್ದರೂ ಅವನ ಆ ಏನಯದ, ಆ ಸಖಿಯಾದ, ಆ ನಗೆಮೊಗದ ಮಾತುಗಳಿಗಿಂತಲೂ ಕೃಷ್ಣಸರ್ಪದ ಗರ್ಜನೆಯೇ ಹಿತಕಾರಿಯೆಂದು ನಿಂಬಿತವಾಗಿ ತಿಳಿಯಿರಿ; ಇನ್ನು ನಾನು ಹೊರಟೆ. ಹೀಗೆಂದು ಹೇಳಿ ಕುಲಸಮೆ ಎದ್ದಳು.

ಕುಳಿತುಕೋ, ನನ್ನದೂ ಒಂದು ಮಾತಿದೆ—ಎಂದು ಹೇಳಿ ಅರಿಂದಮನು ಒಂದು ಕಾಗದದ ಚೂರಿನಲ್ಲಿ ತನ್ನ ಹೆಸರು ವಿಳಾಸಗಳನ್ನು ಬರೆದು ಕುಲಸಮೆಯ ಕೈಗೆ ಕೊಟ್ಟು,—ಅವಶ್ಯಕ ಕಂಡು ಬಂದರೆ ಆ ವಿಳಾಸಕ್ಕೆ ವರ್ತಮಾನ ಕೊಡುವುದಕ್ಕೆ ಆಲಸ್ಯವಾಗ ಬೇಡ,—ಎಂದೂ ಹೇಳಿದನು.

ಕುಲಸಮೆಯು ತಲೆಯಾಡಿಸಿ ಒಪ್ಪಿಕೊಂಡಳು. ಅನಂತರ ಬೇಗ ಬೇಗನೆ ಆಲ್ಲಿಂದ ಹೊರಟುಹೋದಳು.

ಐದನೆಯ ಪರಿಚ್ಛೇದ

ದಾರಿಯಲ್ಲಿ

ಅಷ್ಟುಹೊತ್ತಿಗೆ ಅರಿಂದಮನ ಮನಸ್ಸಿನಲ್ಲಿ ಕುಲಸಮೆಯು ಮಾತು ಕತೆಗಳ ವಿಚಾರವಾಗಿ ತರ್ಕವಿತರ್ಕಗಳಾಗುತ್ತಿದ್ದುವು. ಮೊದಲು,—ಕುಲಸಮೆ ಹೇಳಿದುದರಲ್ಲಿ ಎಲ್ಲವೂ ನಿಶ್ಚಯವೆಂದು ಹೇಳಲಾಗದಿದ್ದರೂ ಸಂಪೂರ್ಣವಾಗಿ ಸುಳ್ಳೆಂದು ತೋರುವುದಿಲ್ಲ. ಕುಲಸಮೆಯು ಹೇಳಿದ ಪ್ರಕಾರವಾಗಿ ಫೂಲಸಾಹೇಬನು ಅಷ್ಟು ಭಯಂಕರ ವ್ಯಕ್ತಿಯೆ? ಅಷ್ಟರ ಮಟ್ಟಿಗೂ ಏಶಾಚ ಸ್ವಭಾವವುಳ್ಳವನೆ?—ಎಂದು ಭಾವಿಸಿದನು. ಪುನಃ,—ಯಾಕೆ, ಫೂಲಸಾಹೇಬನ ಪರಿಚಯವೇ ನನಗಿಲ್ಲ; ಮನುಷ್ಯ ನೇಸೋ ಒಳ್ಳೆಯವನೆಂದು ತೋರುತ್ತದೆ; ಒಂದು ವೇಳೆ ಕುಲಸಮೆಗೆ,

ಸ್ವಲ್ಪ ಮಟ್ಟಿಗೆ, ಬುದ್ಧಿ ನೆಟ್ಟಗಿಲ್ಲದಿದ್ದರೂ ಇರಬಹುದು; ಅವಳು ನನ್ನ ಸಂಗಡ ಮಾತನಾಡಿದುದನ್ನು ನೋಡಿದರೆ, ಅವಳನ್ನು ಹುಚ್ಚಿ ಎಂದು ಹೇಳುವುದುತಾನೆ ಹೇಗೆ? ಏನಾದರೂ ಆಗಲಿ, ಈ ನಡವಳಿಯನ್ನೆಲ್ಲ ಚೆನ್ನಾಗಿಯೇ ನೋಡಬೇಕು; ಇದರಲ್ಲಿ ಅನೇಕ ರಹಸ್ಯಗಳು ಅಡಗಿ ಕೊಂಡಿರುವಂತೆ ಕಾಣುತ್ತದೆ; ಪ್ರಯತ್ನಮಾಡಿ ನೋಡಿದರೆ, ಸಕಾಲದಲ್ಲಿ ಎಲ್ಲವೂ ಬಯಲಿಗೆ ಬಂದೇ ಬರುತ್ತವೆ. ನೋಡೋಣ, ಡಾಕ್ಟರ ಮಹಾಶಯನು ಬಂದು ಏನ ಹೇಳುವನೋ!—ಎಂದು ಮುಂತಾಗಿ ಭಾವಿಸುತ್ತಿದ್ದನು.

ಅರಿಂದಮನು ಹೀಗೆ ಆಲೋಚನೆಮಾಡುತ್ತ ಕುಳಿತಿರುವ ಹೊತ್ತಿಗೆ ಸರಿಯಾಗಿ ಫೂಲಸಾಹೇಬನು, ಸಿಶ್ಯಬ್ದವಾಗಿ, ಅಲ್ಲಿಗೆ ಬಂದನು. ಆಗ ಅವನು ಬಹುಮಟ್ಟಿಗೆ ಚಿಂತೆಯಿಂದ ಕೂಡಿರುವನಂತೆ ಕಂಡಿತು. ಅರಿಂದಮನು ಯಾವ ಮಾತನ್ನೂ ಆಡಲಿಲ್ಲ. ಫೂಲಸಾಹೇಬನು ತನ್ನ ತಪ್ಪನ್ನು ಒಪ್ಪಿಕೊಂಡು,—ಅರಿಂದಮಬಾಬೂ, ಏನೂ ತಿಳಿದುಕೊಳ್ಳಬೇಡಿ, ಬಹಳಹೊತ್ತಿನಿಂದ ತಮ್ಮೊಬ್ಬರನ್ನೇ ಕೂಡಿಸಿದ್ದೇನೆ.. ಎಂದು ಹೇಳಿದನು.

ಅರಿಂದಮ—ಅದಕ್ಕಾಗಿ ನೀವೇನೂ ವ್ಯಥೆಪಡಬೇಕಾಗಿಲ್ಲ; ಮುಖ್ಯವಾಗಿ ಮನೆಯ ಹೆಂಗಸರು ಕೊಂಚಮಟ್ಟಿಗೆ ಸಮಾಧಾನಕ್ಕೆ ಬಂದರಷ್ಟೆ?

ಫೂಲಸಾಹೇಬ—ಹೌದು, ಅವರಿಗೆ ಬಂದು ವಿಧವಾಗಿ ಸಮಾಧಾನ ಹೇಳಿ, ಬಹುಮಟ್ಟಿಗೆ ಶಾಂತರನ್ನಾಗಿ ಮಾಡಿಬಂದೆ; ಮತಿಜೀಯು ನನಗೆ ದೂರಸಂಪರ್ಕೀಯಳಾದೊಬ್ಬ ಆತ್ಮೀಯಳು; ಇಂತಹ ಗುಣವತಿಯಾದ ಹೆಂಗಸು ಪ್ರಾಯಶಃ ಇನ್ನೆಲ್ಲಿಯೂ ಇರಲಾರಳು. ಅವಳಲ್ಲಿ ನನಗೆ ತುಂಬ ವಿಶ್ವಾಸ. ಎಲ್ಲಿ, ಕುಲಸಮು? ಅಲ್ಲಿ ಎಲ್ಲಿಯೂ ಕಾಣಲಿಲ್ಲ. ಅವಳು ಪುನಃ ಅತ್ತು ರಗಳೆ ಮಾಡುವುದಕ್ಕೆ ಇಲ್ಲಿಗೆ ಬಂದಿದ್ದಾನೆಯೆ?

ಅರಿಂದಮನು ಮಂದಹಾಸದಿಂದ,—ಹಾಗೇನೂ ಇಲ್ಲ, ಅವಳು ಅತ್ತು ರಗಳೆಮಾಡುವುದಕ್ಕಾಗಿ ಇಲ್ಲಿಗೆ ಪುನಃ ಬರಲಿಲ್ಲ—ಎಂದು ನಿಜವನ್ನೇ ಹೇಳಿದನು.

ಫೂಲಸಾಹೇಬ—ಇನ್ನು ದಯೆಮಾಡಿ, ಒಟ್ಟಿಗೆ ಹೊರಟು ಬಿಡೋಣ.

ಅರಿಂದಮನು ಎದ್ದನು. ಇಬ್ಬರೂ ಅಲ್ಲಿಂದ ಹೊರಟು ನೇರವಾದ ಒಂದು ರಸ್ತೆಯನ್ನು ಹಿಡಿದರು.

* * * * * *

ಅದೂ ಇದೂ ಮಾತುಗಳಾಡುತ್ತ ಸ್ವಲ್ಪದೂರ ಬಂದಮೇಲೆ, ಫೂಲಸಾಹೇಬನು—ತಮ್ಮ ಪ್ರಯಾಣ ಎಲ್ಲಿಯವರೆಗೆ? ಈಗ ತಾವು ರಘುನಾಥಪುರಕ್ಕೇ ಹಿಂದಿರುಗುವಿರೇನು?—ಎಂದು ಅರಿಂದಮನನ್ನು ಕೇಳಿದನು.

ಅರಿಂದಮ—ಇಲ್ಲ, ಈಗ ನಮ್ಮ ಸ್ನೇಹವಾದ ಕಾಮದೇವಪುರಕ್ಕೇ ಹೋಗುತ್ತೇನೆ.

ಫೂಲಸಾಹೇಬ—ಇನ್ನು ಕೆಲವು ದಿನಗಳತನಕ ಇಲ್ಲಿಯೇ ಇರುವ ಹಾಗೆಯೋ?

ಅರಿಂದಮ—ಹೌದು, ಒಂದು ಕೆಲಸವಿದೆ; ಇಲ್ಲಿಯೇ ಕೆಲವುದಿನ ನಿಲ್ಲಬೇಕಾಗುವುದೆಂದು ತೋರುತ್ತದೆ.

ಫೂಲಸಾಹೇಬ—ಕಾಮದೇವಪುರದಲ್ಲಿ ನಮ್ಮವರೊಬ್ಬಿಬ್ಬರು ರೋಗಿಗಳಿರುವುದರಿಂದ ನಾನೂ ಆಗಾಗ್ಗೆ ಅಲ್ಲಿಗೆ ಬರುತ್ತಲೇ ಇರುತ್ತೇನೆ. ಈ ಸಲ ಅಲ್ಲಿಗೆ ಬಂದಾಗ ತಮ್ಮನ್ನು ನೋಡಿಬರುವ ಪ್ರಯತ್ನ ಮಾಡುತ್ತೇನೆ.

ಅರಿಂದಮ—ತುಂಬ ಸಂತೋಷ.

ಅನಂತರ ಸ್ವಲ್ಪದೂರ ನಡೆದು ಫೂಲಸಾಹೇಬನು ಒಂದು ಹೊಗೆಯ ಸುತ್ತನ್ನು ತೆಗೆದು ಅದಕ್ಕೆ ಬೆಂಕಿ ಹೊತ್ತಿಸಿದನು. ಹಾಗೆಯೇ ಅರಿಂದಮನನ್ನ ನೋಡಿ,—ಮಹಾಶಯರಿಗೆ ಹೊಗೆಯಸುತ್ತು ಸೇದುವ ಅಭ್ಯಾಸವಿದೆಯೆ?—ಎಂದು ಕೇಳಿದನು.

ಅರಿಂದಮನು—ಆಗಾಗ ಸೇದುವ ವಾಡಿಕೆಯೇನೋ ಉಂಟು, ಆದರೆ, ಆದಿಲ್ಲದೆ ತೀರದು ಎನ್ನುವಷ್ಟು ಅಭ್ಯಾಸವಿಲ್ಲ—ಎಂದು ನಗುತ್ತಾ ಹೇಳಿದನು.

ಫೂಲಸಾಹೇಬ—ನನ್ನ ಇದೊಂದು ಸುತ್ತು ಸೇದಿರಿ? ಇದರ ರೀತಿಯೇ ಬೇರೆ—ಎಂಬುದು ಗೊತ್ತಾಗುವುದು.

ಹೀಗೆಂದು ಹೇಳಿ ಫೂಲಸಾಹೇಬನು ಜೇಬಿನಿಂದ ಇನ್ನೊಂದು ಸುತ್ತನ್ನು ತೆಗೆದು ಅರಿಂದಮನ ಕೈಗೆ ಕೊಟ್ಟನು.

ಅರಿಂದಮನು ಸುತ್ತನ್ನು ತೆಗೆದುಕೊಂಡು,—ಈಗ್ಗೆ ಇರಲಿ, ಇನ್ನೊಂದು ಸಮಯದಲ್ಲಿ ಉಪಯೋಗಿಸುತ್ತೇನೆ, ಈಗ ಶರೀರ ಸ್ಥಿತಿಯು ಅಷ್ಟು ಚೆನ್ನಾಗಿಲ್ಲ—ಎಂದು ಹೇಳಿದನು.

ಫೂಲಸಾಹೇಬ—ಒಳ್ಳೆಯದು, ತಮಗೆ ಬೇಕಾದಾಗ ಅದನ್ನು ಉಪಯೋಗಿಸಿ ನೋಡಿರಿ; ಇಂತಹ ಉತ್ಕೃಷ್ಟತರವಾದ ಸುತ್ತನ್ನು ತಾವು ಎಂದೂ ಉಪಯೋಗಿಸಿದ್ದಿಲ್ಲವೆಂದು ಆಗ ತಮಗೇ ವೇದ್ಯವಾಗುವುದು. ನನ್ನ ಸ್ವಂತ ಉಪಯೋಗಕ್ಕೊಸ್ಕರ ಈ ಸುತ್ತನ್ನು ನನ್ನ ಕೈಯ್ಯಾರ ತಯಾರಿಸಿದ್ದೇನೆ. ಇದರ ವಾಸನೆ ಇತರ ಸುತ್ತುಗಳ ವಾಸನೆಯ ಹಾಗಲ್ಲ. ಇತರ ಸುತ್ತುಗಳಲ್ಲಿ ಇಲ್ಲದೇ ಇರುವ ಅನೇಕ ಗುಣಗಳು ಇದರಲ್ಲಿ ಉಂಟು ; ಮುಖ್ಯವಾಗಿ ಬಾಯಿಯ ದುರ್ಗಂಧವೂ, ಹಲ್ಲಿಗೆ ಸಂಬಂಧಿಸಿದ ಯಾವುದೇ ರೋಗವಾದರೂ ಇದರಿಂದ ಸಂಪೂರ್ಣವಾಗಿ ನಿವಾರಿಸಲ್ಪಡುವುದು. ತಾವು ಇದೊಂದನ್ನು ಉಪಯೋಗಿಸುವುದರಿಂದ ಎಲ್ಲವೂ ನಿಮ್ಮ ಅನುಭವಕ್ಕೇ ಬರುತ್ತದೆ.

* * * * * *

ಅನಂತರ ಅವರು ಅದೂ ಇದೂ ಮಾತನಾಡುವುದರಲ್ಲಿ ಮತ್ತೂ ಸ್ವಲ್ಪ ದಾರಿ ಸಾಗಿತು. ಅವರಿಬ್ಬರೂ ಮಾತನಾಡುತ್ತಾ ಕಾಮುದೇವ ಪುರದ ರಸ್ತೆಯ ಬಳಿಗೆ ಬಂದಾಗ,—ಡಾಕ್ಟರ ಬಾಬೂ, ನನಗಿನ್ನು ಅಪ್ಪಣೆಯೆ ?—ಎಂದು ಅರಿಂದಮನು ಕೇಳಿದನು.

ಫೂಲಸಾಹೇಬನು ಕುತ್ತಿಗೆಯನ್ನು ಆಡಿಸುತ್ತಾ, ಕೇವಲ ಸೌಜನ್ಯಭಾವವನ್ನು ತೋರ್ಪಡಿಸಿ, ಓಹೊ! ತಾವು ಈ ಮಾರ್ಗವಾಗಿಯೇ ಹೋಗಬೇಕು. ತಮ್ಮ ಪರಿಚಯವಾದ್ದರಿಂದ ತುಂಬ ಸಂತೋಷವಾಯಿತು. ತಾವು ದಯೆಮಾಡಿ, ಸಾಯಂಕಾಲವಾಗುತ್ತ ಬಂತು; ತಾವಿನ್ನೂ ಬಹುದೂರ ಹೋಗಬೇಕು—ಎಂದು ಹೇಳಿದನು.

ಫೂಲಸಾಹೇಬನು ತನ್ನ ಮನೆಯಕಡೆ ಹೊರಟನು. ಅರಿಂದಮನು ಆಲೋಚನಾಪರನಾಗಿ ಕಾಮದೇವಪುರದ ಹಾದಿ ಹಿಡಿದು ಜೇಗ ಜೇಗ ನಡೆಯುತ್ತಾ ಹೊರಟನು.

ಆರನೆಯ ಪರಿಚ್ಛೇದ

ಕುಲಸಮೆಯ ವಿಚಾರವಾಗಿ

ಫೂಲಸಾಹೇಬನು ಸಾಯಂಕಾಲವಾಗುತ್ತ ಬಂತೆಂದು ಹೇಳಿದಾಗ ಸಂಧ್ಯೆಯು ಕಳೆದೇ ಹೋಗಿದ್ದಿತು. ಈ ಸಮಯದಲ್ಲಿ ಕಾಮದೇವಪುರದ ದಾರಿ ಜನಶೂನ್ಯವಾಗಿತ್ತು. ಬಂಡೊಂದು ಸಲ ಬಣ್ಣಿಬ್ಬರು ಹೋಗಿ ಬರುತ್ತಿರುವರು. ರಸ್ತೆಯ ಎರಡು ಪಕ್ಕಗಳಲ್ಲಿ ಚಿಕ್ಕವೂ ದೊಡ್ಡವೂ ಗಿಡಗಳು, ಪೊದೆಗಳು, ದೊಡ್ಡ ದೊಡ್ಡ ಮರಗಳು; ಕೆಲವು ಕಡೆ ದೊಡ್ಡ ದೊಡ್ಡ ಬಿದಿರುಮೆಳೆಗಳು ರಸ್ತೆಯ ಮೇಲ್ಭಾಗಕ್ಕೆ ಬಾಗಿ ಸಿಂತು ಅಲ್ಲಿಯೆ ರಸ್ತೆಯನ್ನು ಸಂಪೂರ್ಣವಾಗಿ ಕತ್ತಲು ಮಾಡುತ್ತಿರುವುವು. ಬಿದಿರಿಗೆ ಬಿದಿರು ಉಜ್ಜುವುದರಲ್ಲಿ ಬಂದೊಂದು ಸಲ ಭಯಂಕರವಾದ ಶಬ್ದವಾಗುವುದು. ಆ ಅಂಧಕಾರದಲ್ಲಿ ನರಿಗಳು ಅತ್ತಕಡೆಯಿಂದ ಅತ್ತಕಡೆಗೂ ಅತ್ತಕಡೆಯಿಂದ ಇತ್ತಕಡೆಗೂ ರಸ್ತೆಯ ಮೇಲೆ ಓಡಾಡುವುವು; ಬಂಡೊಂದು ದೂರವಾದ ಪಸಮಧ್ಯಕ್ಕೆ ಹೋಗಿ ಅರಚುತ್ತಾ ತಾವು ಅಲ್ಲಿರುವೆನೆಂಬ ನಿಜಾಂಶವನ್ನು ದಿಗ್ದಿಗಂತಗಳವರೆಗೂ ಪರಡುತ್ತಿರುವುವು. ಇದರಿಂದ ತಮ್ಮ ನಿದ್ರೆಗೆ ಭಂಗವಾಗುವುದನ್ನು ಕಂಡು,

ಸಮೀಪದ ಗ್ರಾಮಗಳಲ್ಲಿ ದಣಿದಿರುವ ನಾಯಿಗಳು ಸುಮ್ಮನಿರ ಬೇಕೆಂದು ನರಿಗಳಿಗೆ ಅಪ್ಪಣೆ ಮಾಡುವವೋ ಏನ್ನುವಹಾಗೆ ಕರ್ಕಶ ಕಂಠದಿಂದ ಗದರಿಸುತ್ತಾ ತಮ್ಮ ಯಾಜಮಾನ್ಯವನ್ನು ಬಾರಿ ಬಾರಿಗೂ ವ್ಯಕ್ತಪಡಿಸುತ್ತಿರುವುವು. ತಲೆಯ ಮೇಲ್ಭಾಗದಲ್ಲಿ ದಟ್ಟವಾದ ಬಿದಿರು ಪೊದೆ, ಅರಳಿ ಆಲ ಮುಂತಾದ ದೊಡ್ಡ ದೊಡ್ಡ ಮರಗಳ ದಟ್ಟವಾದ ಕೊಂಬೆಗಳು ಅವುಗಳ ಮೇಲ್ಭಾಗದಲ್ಲಿರುವ ಕಪ್ಪು ಮೋಡಗಳಿಂದ ತುಂಬಿರುವ ನೀರವವಾದ ಆಕಾಶ-ಸಂಧ್ಯೆಯೊಡನೆ ಸ್ವಾಗತ ಸಂಭಾಷಣೆ ಮಾಡುವ ಮೊದಲೇ ಅರಿಂದಮನು ಕಾಮುದೀಪಪುರದ ಮಾರ್ಗದಿಂದ ಹೋಗಿಬರುವುದಕ್ಕೆ ಅಪ್ಪಣೆಗೊಂಡು ಉತ್ಸಾಹಿಯಾಗಿರುವನು. ಆ ಅಂಧಕಾರಮಯವಾದ ದಾರಿಯಲ್ಲಿ ಪ್ರಯಾಣಮಾಡುತ್ತಿರುವಾಗಲೂ ಅರಿಂದಮನು ಕುಲಸಮೆ ಮತ್ತೂ ಫೂಲಸಾಹೇಬರ ವಿಚಾರವಾಗಿಯೇ ಆಲೋಚಿಸುತ್ತಲಿದ್ದನು. ಕುಲಸಮೆಯು ತನಗೆ ಫೂಲಸಾಹೇಬನ ವಿಚಾರವಾಗಿ ಏನೇನೋ ಹೇಳಿದಳು; ಆದರೆ ಫೂಲಸಾಹೇಬನು ಅಂತಹ ಭಯಂಕರ ಮನುಷ್ಯನೆಂದು ಯೇಗೂ ಕಾಣಲಿಲ್ಲ; ಫೂಲ ಸಾಹೇಬನು ಮೊದಲಿಂದ ಕಡೆಯತನಕ ಕೇವಲ ಸುಸಂಸ್ಕೃತಮಂತನ ಹಾಗೆಯೇ ವ್ಯವಹರಿಸಿದ್ದಾನೆ. ಕುಲಸಮೆಯು ಮಾತು ಕೇಳಿದಾಗ, ದಾರಿಯಲ್ಲಿ ಒಂಟಿಗನಾದ ತನ್ನ ಮೇಲೆ ಫೂಲಸಾಹೇಬನು ಕೂರಿ ಅಥವಾ ಬಸ್ತೂಲನ್ನು ಹಿಡಿದಾಗಲೇ ಅಥವಾ ಮತ್ತೆ ಯಾವ ವಿಧ ದಿಂದಲಾಗಲೇ ತನಗೆ ಏನಪತ್ಕಂಟಮಾಡಬಹುದೆಂದು ಅರಿಂದಮನು ಭಾವಿಸಿದ್ದನು. ಆದರೆ ಆ ಬಗೆಯ ಯಾವ ಪ್ರಯತ್ನವೂ ಅರಿಂದಮನ ದೃಷ್ಟಿಗೆ ಬೀಳಲಿಲ್ಲ; ಆದುದರಿಂದ, ಕುಲಸಮೆಗೆ ಬೇರಾವು ಕಾರಣಾಂತರದಿಂದ ಕೆಟ್ಟುಬುದ್ಧಿಯೋಗಿರಬೇಕು; ಕಾರಣಾಂತರದಿಂದ ಫೂಲಸಾಹೇಬನ ಮೇಲೆ ಮುಖಾರೋಷವುಂಟಾಗಿರಬೇಕು-ಎಂದು ಮನಸ್ಸಿನಲ್ಲಿಯೇ ಊಹಿಸಿದನು. ಏನಾದರಾಗಲಿ, ಫೂಲಸಾಹೇಬನ ವಿಚಾರವಾಗಿ ಈಗ ಆಲೋಚಿಸುವುದಕ್ಕೆ ಅವಕಾಶವಿಲ್ಲ. ಮುಕ್ಯವಲ್ಲಿ ಮಾಡಬೇಕಾದ ಕೆಲಸಗಳು ಅನೇಕವಾಗಿರುವುದರಿಂದ ಅವುಗಳನ್ನು ಮೊದಲು ನುಗಿಸಿಯಿಸಬೇಕಾಗಿದೆ ಎಂದೂ ಅಂದುಕೊಂಡನು.

ಯಥಾಸಮಯದಲ್ಲಿ ಕಾಮದೇವಪುರಕ್ಕೆ ಬಂದು, ಮನೆಗೆ ಹೋಗುವುದಕ್ಕೆ ಮೊದಲೇ ಅರಿಂದಮನು ಯೋಗೇಂದ್ರನಾಥನನ್ನು ನೋಡಬೇಕೆಂದು ತಾಣಕ್ಕೆ ಬಂದನು. ಆ ಸಮಯದಲ್ಲಿ ಯೋಗೇಂದ್ರನಾಥನು ಆಲ್ಲಿ ಕುಳಿತು ಅತ್ಯವಶ್ಯಕವಾದ ಒಂದೆರಡು ಕಾಗದಗಳನ್ನು ಬರೆಯಲು ಮನಗೊಟ್ಟಿದ್ದನು, ಅರಿಂದಮನನ್ನು ನೋಡಿ, ಲೇಖನಿಯನ್ನು ಸದ್ಯಕ್ಕೆ ಹಾಗೆಯೇ ಕೆಳಗಿಟ್ಟು ಆತುರದಿಂದ ಎದ್ದು, ಅರಿಂದಮನನ್ನು ಕುಳಿತುಕೊಳ್ಳಬೇಕೆಂದು ಹೇಳಿ ಆತನ ಪತ್ತಿರದಲ್ಲಿಯೇ ಇದ್ದ ಇನ್ನೊಂದು ಕುರ್ಚಿಯಮೇಲೆ ತಾನು ಕುಳಿತುಕೊಂಡನು; ಹಾಗೆಯೇ,—ಅರಿಂದಮಬಾಬೂ! ಪಕಾತಾತ್ತಾ, ಒಂದುಬೇನೋ ತಿಳಿಯಲಿಲ್ಲ. ಆ ಮುಷಂಗಯ ಶಮದೇಹನ ಹೊಕದ್ಪನಿಯು ಏಚಾರ ಏನಾದರೂ ಸಾಧ್ಯವಾಯಿತೊ?—ಎಂದು ಪ್ರಶ್ನೆ ಮಾಡಿದನು.

ಅರಿಂದಮ—ಇಲ್ಲ, ಈವರೆಗೆ ಏನೂ ಮಾಡುವುದಕ್ಕಾಗಲಿಲ್ಲ.

ಯೋಗೇಂದ್ರ—ಕೇವಲಕ್ಕೆ ಸಂಬಂಧಿಸಿದ ಏಚಾರಗಳಲ್ಲಿ ಕೇವಲ ಸಂಬಂಧವು ಯಾರು ಏನ್ನು ಮಾಡಿದೇನಾದರೂ ಬಹಿರಂಗವಾಗಿಬಿಟ್ಟಿತೋ?

ಅರಿಂದಮ—ಇಲ್ಲ, ಆಗಿದ್ದಪಕ್ಷದಲ್ಲಿ ಇಲ್ಲಿಗೆ ಪರ್ತಮಾನ ಬಂದೇ ಬರುತ್ತಿತ್ತು. ಆ ಮಾತು ಹಾಗಿರಲಿ, ಈಗ ನಾನು ಏನೊಂದು ಏಚಾರವನ್ನು ಕೇಳಿ ತಿಳಿಯಬೇಕೆಂದು ಬಂದೆ; ಪೂಲಸಾಯೇಏನೆಂಬವನನ್ನು ನೀವು ಬಲ್ಲಿರಾ?

ಯೋಗೇಂದ್ರ—ಪೂಲಸಾಯೇಏನೆ? ಇಲ್ಲಿಯವರೆಲ್ಲರೂ ಆತನನ್ನು ಬಲ್ಲರು.

ಅರಿಂದಮ—ಬಲ್ಲರೂ ಆವನನ್ನೇಕೆ ಬಲ್ಲರೋ ಆ ಕಾರಣ ನಿಮಗೆ ತಿಳಿದಿದೆಯೆ?

ಯೋಗೇಂದ್ರ—ಆ ಮನುಷ್ಯನು ಮೈದ್ಯಪದ್ಯೆಯಲ್ಲಿ ತುಂಬಾ ಗಟ್ಟಿಗ. ಇಲ್ಲಿ ಅನೇಕರ ಮನೆಗಳಲ್ಲಿ ಪೂಲಸಾಯೇಏನು ಚಿಕಿತ್ಸೆಮಾಡಿದ್ದಾನೆ. ಇದೇನು ಅರಿಂದಮಬಾಬೂ, ತಾವು ಆವನ ಮಾತನ್ನು ಒಮ್ಮನಸ್ಸಾಗಿ ತೆರವಾಗಿ ಕೇಳುತಿದ್ದೀರಲ್ಲ, ಕಾರಣವೇನು?

ಅರಿಂದಮ—ಮೊದಲು ನನ್ನ ಪ್ರಶ್ನೆಗೆ ಉತ್ತರ ಹೇಳೋಣಾಗಲಿ, ಅನಂತರ ನಿಮ್ಮ ಮಾತಿಗೆ ಜವಾಬು ಹೇಳುತ್ತೀನೆ. ನೀವು ತಪಾಜುದ್ದೀನ ನನ್ನು ಬಲ್ಲಿರಾ?

ಯೋಗೇಂದ್ರ—ತಿಳಿಯದೇ ಏನು, ಆತನೊಬ್ಬ ದೊಡ್ಡ ಜಮಾನು ದಾರ.

ಅರಿಂದಮ—ಆತನು ಅತುಲೈಶ್ವರ್ಯಶಾಲಿಯಂತೆ, ಹೌದೆ?

ಯೋಗೇಂದ್ರ—ಹೌದು; ಆತನ ವಿಚಾರವು ನನಗೆ ಕೊಂಚ ಕೊಂಚ ತಿಳಿದಿದೆ.

ಅರಿಂದಮ—ಏಳಿ ನೋಡೋಣ.

ಯೋಗೇಂದ್ರ—ಎರಡು ವರ್ಷಗಳಿಂದೀಚೆಗೆ, ಆತನ ಶರೀರಸ್ಥಿತಿ ಕೆಟ್ಟುದರಿಂದ ಆತನು ಈಗ ಹಾಸಿಗೆ ಹಿಡಿದಿರುವನು. ಇಷ್ಟರೊಳಗಾಗಿ ಆತನ ಹೆಂಡತಿ ಸತ್ತುಹೋದಳು; ಆದಾದಮೇಲೆ ಆತನು ಪುನಃ ಮದುವೆಯಾಗಲು ಇಷ್ಟಪಟ್ಟನು; ಆದರೆ ಆತನ ಮಗಳು ಮತ್ತೆ ಮದುವೆ ಮಾಡಿಕೊಳ್ಳದೇ ಇರುವ ಹಾಗೆ ಪ್ರಯತ್ನವಾಡುತ್ತಿದ್ದಾಳೆ. ತಪಾಜುದ್ದೀನನಿಗೆ ತನ್ನ ಮಗಳಲ್ಲಿ ಅತಿಶಯವಾದ ಪ್ರೀತಿ. ತಾನು ಮದುವೆಯಾದ ವಿಚಾರವು ಅವಳಿಗೆ ಬಲ್ಲಿದಾನರೂ ತಿಳಿದೀತೆಂದು ಭಾವಿಸಿ ರಹಸ್ಯವಾಗಿ ಮದುವೆಯಾದನು; ಅಲ್ಲದೆ ಆತನು ಯಾವಳನ್ನು ವಿವಾಹಮಾಡಿಕೊಂಡನೋ ಆಕೆಯು ಈ ಡಾಕ್ಟರ್ ಫೂಲಸಾಹೇಬನಿಗೆ ಸಂಬಂಧಿಯಾದವರ ಮಗಳು. ಆ ಕಾರಣದಿಂದ ಈ ಮದುವೆಯ ಕಾರ್ಯಕ್ಕೆ ಫೂಲಸಾಹೇಬನೇ ಮುಂದಾಳಾಗಿ ಪ್ರಯತ್ನ ಮಾಡಿದನು. ಮದುವೆಯಾಗುವುದಕ್ಕೆ ಮೊದಲು ಒಳಗೊಳಗೇ ವೃತ್ತ ನಾದ ತಪಾಜುದ್ದೀನನು ಬಂದು ಕುಲಕಚೇರಿಯಲ್ಲಿ ಹಾಜರಾಗಿ ಯಿಸಿನ್ನನು. ಆತನು ತನಗಾಗಿ ಸ್ವಲ್ಪವನ್ನು ಉಳಿಯಿಸಿಕೊಂಡು ಉಳಿದ ಚರಸ್ಥಿರ ಜಿಂಗೆಯನ್ನೆಲ್ಲಾ ತನ್ನ ಮಗಳ ಹೆಸರಿಗೆ ದಾನಪತ್ರ ವನ್ನು ಬರೆಯಿಟ್ಟಿರುವನು; ಇದಾದ ಕೊಂಚ ದಿನಗಳಲ್ಲಿಯೇ ಇವೆಲ್ಲ ವನ್ನೂ ಅವನ ಎರಡನೆಯ ಹೆಂಡತಿ ತಿಳಿದುಕೊಂಡಳು. ಅನಂತರ

ತಾನು ಆತ್ಮಹತ್ಯೆಮಾಡಿಕೊಳ್ಳುವುದಾಗಿ ಅಡಿಗಡಿಗೂ ಗಂಡನನ್ನು ಹೆದರಿಸುತ್ತಿದ್ದಳು; ಕಾರಣವೇನೆಂದರೆ,—ಮದುವೆಗೆ ಮೊದಲೇ ದಾನ ಪತ್ರವಾಗಿಹೋಗಿರುವುದರಿಂದ ಗಂಡನು ಸತ್ತನಂತರ ತನಗೆ ಒಂದು ಕವಡೆಯೂ ಸಿಕ್ಕುವ ಹಾಗಿಲ್ಲವೆಂದು. ಆದಕಾರಣ ಅವಳು ಒಂದೊಂದು ರಾತ್ರೆ ಹಗ್ಗ ಹಿಡಿದುಕೊಂಡು ಅಲೆದಾಡುತ್ತಿದ್ದಳು. ಒಂದೊಂದು ವೇಳೆ ಅವಳ ಪೆಟ್ಟಿಗೆಯಲ್ಲಿ ಆಫೀಮು ಸಹ ಇಟ್ಟಿರುತ್ತಿದ್ದಳು. ಇದರಿಂದ ತಹಸೀಲ್ದಾರನು ಪೂರಾ ಇಕ್ಕಟ್ಟಿಗೆ ಸಿಕ್ಕಿದನು. ನಾನು ಕೇಳಿದ್ದರಲ್ಲಿ ಇವೆಲ್ಲವೂ ಆದಮೇಲೆ ತಹಸೀಲ್ದಾರನು ತನ್ನ ಮಗಳನ್ನು ಸಹವಾಸ ಪಡಿಸಿ, ಎಷ್ಟೋ ಬಗೆಯಾಗಿ ಬುದ್ಧಿಹೇಳಿ ಒಂದುಲಕ್ಷ ರೂಪಾಯಿ ಗಳನ್ನು ಅವಳಿಂದ ಬೇಡಿ ತೆಗೆದುಕೊಂಡು ಆ ಹಣವನ್ನು ತನ್ನ ಹೆಂಡತಿಗೆ ಸೇರತಕ್ಕುದೆಂದು ಮರಣಪತ್ರವನ್ನು ಬರೆದಿಟ್ಟನು.

ಏಳನೆಯ ಪರಿಚ್ಛೇದ

ಪೂಲಸಾಹೇಬನ ವಿಚಾರವಾಗಿ

ಅರಿಂದಮ—ತಹಸೀಲ್ದಾರನು ಸತ್ತ್ಯಾದನಷ್ಟೆ!

ಯೋಗೇಂದ್ರ,ಸಾಷನು ಏಸ್ಮಯದಿಂದ—"ಏನ ಹೇಳಿದಿರಿ?"

ಅರಿಂದಮ—ಇಂದು ಸಂಜೆಗೆ ಮೊದಲು ಅವನು ನನ್ನ ಕೈ ಮೇಲೆಯೇ ಪ್ರಾಣತ್ಯಾಗನು.

ಯೋಗೇಂದ್ರ—ಅಸೋಲಾಸೋಲೆ!

ಅರಿಂದಮ—ಅಸೋಲೇನು—ಈಗ ಅವನ ಮಗಳೇ ಸಮಸ್ತವಾದ ಸಂಪತ್ತಿಗೂ ಅಧಿಕಾರಿಣಿಯಾದಳು.

ಯೋಗೇಂದ್ರ—ಅದು ಆಗಬೇಕಾದ್ದೇ ಹಾಗೆ.

ಅರಿಂದಮ—ಆ ಆಸ್ತಿಯು ಒಟ್ಟು ಎಷ್ಟಾಗಬಹುದು?

ಯೋಗೇಂದ್ರ—ಸುಮಾರು ಇಪ್ಪತ್ತು ಲಕ್ಷ ರೂಪಾಯಿಗಳಾಗಬಹುದು.

ಅರಿಂದಮ—ಇಪ್ಪತ್ತು ಲಕ್ಷ! ಇಪ್ಪತ್ತು ಲಕ್ಷವೆ? ಒಳ್ಳೆಯದು; ಇಪ್ಪತ್ತು ಲಕ್ಷವೇ ಆಗಲಿ—ಫೂಲಸಾಹೇಬನಿಗೆ ಇನ್ನೂ ಮದುವೆಯಿಲ್ಲವೇನು?

ಯೋಗೇಂದ್ರ—ಮದುವೆಯಾಗಿರಬೇಕು, ಈಗ ಅವನ ಹೆಂಡತಿ ಸತ್ತುಹೋಗಿದ್ದರೂ ಇರಬಹುದು. ಈ ಪ್ರಶ್ನೆಗೆ ಈಗ ಕಾರಣವೇನು?

ಅರಿಂದಮ—ಕೇಳುವುದರಲ್ಲಿ ತಪ್ಪೇನು? ಹಠಾತ್ತಾಗಿ ಈ ಮಾತು ಚ್ಯಾಪಕಕ್ಕೆ ಬಂದಿತು; ಅದನ್ನೇ ಕುರಿತು ನಿಮ್ಮನ್ನು ಕೇಳಿದೆ.

ಯೋಗೇಂದ್ರ—ನನಗೆ ಇವೆಲ್ಲವನ್ನೂ ಮರೆಮಾಚುವುದು ನಿಮಗೆ ನ್ಯಾಯವೆ?

ಅರಿಂದಮ—ತಪ್ಪಾಯಿತ್ತೀನನ ಮಗಳನ್ನು ಈಗ ಫೂಲಸಾಹೇಬನು ಮದುವೆಯಾಗುವ ಪ್ರಯತ್ನದಲ್ಲಿದ್ದಾನೆ.

ಯೋಗೇಂದ್ರ—ಸರಿ, ಫೂಲಸಾಹೇಬನು ಬಹು ಚತುರ! ಅವನನ್ನು ನೋಡಿದರೇ ಅದು ಚೆನ್ನಾಗಿ ಗೊತ್ತಾಗುವುದು. ಆದರೆ ತಪ್ಪಾಯಿದ್ದೀನನ ಮಗಳ ತಲೆ ಸ್ವಲ್ಪ ಸೆಟ್ಟಾಗಿಲ್ಲವೆಂದು ಕೇಳಿದ್ದೇನೆ.

ಅರಿಂದಮ—ಅದಿರಲಿ, ಫೂಲಸಾಹೇಬನು ನೋಡುವುದಕ್ಕೆ ಹೇಗಿರುವನೋ ಹೇಳಿ ಕೇಳೋಣ. ಅವನನ್ನು ನೋಡಿದವರೂ ಕೂಡ ಅವನನ್ನು ನೋಡಿದ ಕೂಡಲೇ ಅವನೇ ಇವನೆಂದು ಗುರ್ತಿಸುವಹಾಗೆ ಹೇಳಬೇಕು. ಆಗಾಗ್ಗೆ, ಪಲಾಯನಪಂಡಿತ ಕೊಲೆಪಾತಕಿಗಳನ್ನು ಹಿಡಿಯುವುದಕ್ಕೋಸ್ಕರ ರೂಪವರ್ಣನೆ ಬರೆದು ನಾಲ್ಕು ಕಡೆಗೂ ಇಸ್ತಿಹಾರು ಕಳುಹಿಸುವರಲ್ಲಾ ಈ ವರ್ಣನೆಯು ಕೂಡ 'ಫೋಟೋ' ಹಾಗೆಯೇ ಇರಬೇಕು.

ಯೋಗೇಂದ್ರ—ಹೇಳುತ್ತೇನೆ; ಆದರೆ ತಪ್ಪು ಈ ಎಲ್ಲ ಮಾತುಗಳ ಅರ್ಥವ್ಯಾಯವೇನೆಂಬುವುದೇ ನನಗೆ ತಿಳಿಯುವ ಹಾಗಿಲ್ಲ.

ಅರಿಂದಮ—ಇನ್ನು ಮುಂದೆ ತಿಳಿಯುವಿರಿ. ಈಗ ಒಂದು ಸಲ ಫೂಲಸಾಹೇಬನ ರೂಪವರ್ಣನೆ ಮಾಡಿ, ನೋಡೋಣ.

ಯೋಗೇಂದ್ರ—ಮನುಷ್ಯನು ದಪ್ಪ.

ಅರಿಂದಮ—ದಪ್ಪ ಎಂದರೆ ಹೇಗೆ ಹೇಳಿರಿ, ಸಾಧಾರಣವಾಗಿ ಜನರು ದುಂಡು ದುಂಡಾಗಿರುವರಲ್ಲಾ ಆ ರೀತಿಯೇ, ಅಥವಾ ಗರಟೀ ಸಾಧಕಗೀಧಕಗಳನ್ನು ಮಾಡುವುದರಿಂದ ಮೈಪುಷ್ಟಿಯಾಗಿರುವುದಲ್ಲಾ ಹಾಗೆಯೊ ?

ಯೋಗೇಂದ್ರ—ಒಟ್ಟಿನಲ್ಲಿ ಒಂದು ಬಗೆಯಾಗಿ ದುಂಡು ದುಂಡಾಗಿರುವನೆಂದು ತಿಳಿಯಬಾರದೆ? ಎತ್ತರದಲ್ಲಿ ಸುಮಾರು ಐದೂವರೆ ಅಡಿಗಳಿಗೆ ಹೆಚ್ಚಿಲ್ಲ; ಗೌರವರ್ಣ, ವಯಸ್ಸು ನಾಲ್ವತ್ತರ ಹತ್ತಿರ ಹತ್ತಿರ, ಮುಖವು ಸ್ವಲ್ಪ ದುಂಡಾಗಿದೆ, ಕೆನ್ನೆಯ ಒಂದು ಮಗ್ಗುಲಲ್ಲಿ ಒಂದು ದೊಡ್ಡ ಕಲೆ ಇದೆ; ಮೂಗು ಸ್ವಲ್ಪ ಉದ್ದ-ನಸುಸೀಳವಾಗಿದೆ, ದಟ್ಟವಾದ ಗಡ್ಡ, ಹಸನ್ಮುಖ, ತಲೆಗೂದಲು ಕುರುಚು ಕುರುಚು; ಆತನು ನಡೆಯುವಾಗ ತಲೆಯನ್ನು ಒಂದು ಪಕ್ಕಕ್ಕೆ ಬಾಗಿಸಿಕೊಂಡು ನಡೆಯುತ್ತಾನೆ; ಸರ್ವದಾ ಸವಿಮಾತನಾಡುವನು, ದೃಷ್ಟಿ ಬಹು ತೀಕ್ಷ್ಣವಾದದ್ದು, ಕಣ್ಣುಗಳು ಸಣ್ಣವಾಗಿ ಎತ್ತರದಲ್ಲಿರುವವು.

ಅರಿಂದಮ—ಸ್ವಲ್ಪ ಹೊತ್ತಿಗೆ ಮೊದಲು ಫೂಲಸಾಹೇಬನೂ ನಾನೂ ತುಂಬಾ ಹೊತ್ತು ಮಾತನಾಡುತ್ತಿದ್ದೆವು. ಮನುಷ್ಯನು ಬಹು ಮಿಷ್ಟ ಭಾಷಿ.

ಯೋಗೇಂದ್ರ—ಫೂಲಸಾಹೇಬನನ್ನು ತಾವು ನೋಟರುವಾಗ ಇನ್ನೂ ಅವನ ರೂಪವರ್ಣನೆ ಕೇಳಬೇಕೆಂಬ ಆವಶ್ಯಕತೆಯೇನು, ಅರಿಂದಮಬಾಬು ?

ಅರಿಂದಮ—ಏನೂ ಇಲ್ಲ.

ಯೋಗೇಂದ್ರ—ಆವಶ್ಯಕವಿಲ್ಲದಿದ್ದರೆ ಉಸಿರಾಡುವುದಕ್ಕೂ ಮುಂದೆಗೆ ಯುವವರು ತಾವು, ಏನೂ ಇಲ್ಲವೆಂದು ಹೇಳುತ್ತಿದ್ದೀರಿ! ನಾನೇನು ತಮ್ಮಸ್ಯ ಕಾರಣವನೆ?

ಅರಿಂದಮ—ಏನೂ ಇಲ್ಲ, ಆದರೆ ಇಷ್ಟು ಮಾತ್ರ ತಿಳಿದಿರಿ; ಈಗ ಕೊಲೆಯು ನೊಕದ್ದಮೆಯು ಕೆಲಸವಿಲ್ಲದಿದ್ದಪಕ್ಷದಲ್ಲಿ ನಾನು ಬಂದು ಬಾಲು, ಡಾಕ್ಟರ್ ಫೂಲಸಾಹೇಬನ ಸಂಪೂರ್ಣ ಚರಿತ್ರೆಯನ್ನು ಚೆನ್ನಾಗಿ ತಿಳಿದುಕೊಳ್ಳುವ ಪ್ರಯತ್ನ ಮಾಡುತ್ತಲಿದ್ದೆ.

ಯೋಗೇಂದ್ರ—ಫೂಲಸಾಹೇಬನ ಮೇಲೆ ಹಠಾತ್ತಾಗಿ ತಮ್ಮ ಕೃಪಾದೃಷ್ಟಿ ಬಿದ್ದಿತೇಕೆ?

ಅರಿಂದಮ—ಅವನು ಈಗ ತವಿಾಜುದ್ದೀನನ ಮಗಳನ್ನು ಮದುವೆ ಮಾಡಿಕೊಂಡು ಆತನ ಐಶ್ವರ್ಯವನ್ನೆಲ್ಲಾ ಆಕ್ರಮಿಸುವ ಪ್ರಯತ್ನ ಮಾಡುತ್ತಿದ್ದಾನೆ.

ಯೋಗೇಂದ್ರ—ಫೂಲಸಾಹೇಬನು ಬಹು ಚತುರನಾದ್ದರಿಂದ ಅವನ ವಿಷಯದಲ್ಲಿ ಆ ಕೆಲಸವೇನೂ ಆಶ್ಚರ್ಯಕರವಾದದ್ದಲ್ಲ. ಆದರೆ ತವಿಾಜುದ್ದೀನನ ಮಗಳಿಗೆ ಸ್ವಲ್ಪ ಬುದ್ಧಿ ನೆಟ್ಟಗಿಲ್ಲವೆಂದು ಹೇಳಿದೆನಲ್ಲಾ?

ಅರಿಂದಮ—ನಿಮಗೂ ನನಗೂ ಎಷ್ಟರಮಟ್ಟಿಗೆ ಬುದ್ಧಿ ನೆಟ್ಟಗಿಲ್ಲವೋ ಅವಳಿಗೂ ಅಷ್ಟೇ; ಇದಕ್ಕಿಂತಲೂ ಹೆಚ್ಚೆಂದು ನನಗೆ ತೋರುವುದಿಲ್ಲ. ನಾನು ಅವಳನ್ನು ನೋಡಿದ್ದೇನೆ; ಅವಳ ಹೆಸರು 'ಕುಲಸಮೆ' ಎಂದು. ಯೋಗೇಂದ್ರ ಬಾಬೂ, ಕುಲಸಮೆಯು ಹಣೆಯು ಬರೆಹವು ಈ ಮೂರು ತೆರಗಳಲ್ಲಿ ಒಂದು ಬಗೆಯಾಗಿ ಪರಿಣಮಿಸಿ ಜೀಗನೆ ಬಹಿರಂಗ ಪಡುವುದನ್ನು ನೀವೇ ಕಾಣುವಿರಿ. ಆದರೆ, ಕುಲಸಮಳು ಫೂಲಸಾಹೇಬನ ಪತ್ನಿಯಾಗುವಳು; ಹಾಗಾಗದಿರುವುದಾದರೆ ಕುಲಸಮಳು ಸಾಯುವಳು; ಅದೂ ಕೂಡ ಸಂಶಯಿಸದಿದ್ದರೆ....

ಯೋಗೇಂದ್ರ—(ಮಾತು ಪೂರೈಸಗೊಡದೆ) ಹಾಗಾದರೆ ಏನಾಗುವಳು?

ಅರಿಂದಮ—ಹಾಗಾದಪಕ್ಷದಲ್ಲಿ ಖಂಡಿತವಾಗಿ ತಿಳಿಯಿರಿ, ಅರಿಂದಮನಿಗೆ ಈ ಸಂದರ್ಭದಲ್ಲಿ ಸ್ವಲ್ಪ ಶಿರೋವೇದನೆಯಾಗಿಯೇ ಆಗುವುದು; ಅವನು ಕುಲಸಮಳನ್ನು ಈ ಏಪತ್ತಿನಿಂದ, ಬಂದಲ್ಲ ಬಂದು ವಿನ, ಕಾಪಾಡಿಯೇ ಕಾಪಾಡುವನು.

ಎಂಟನೆಯ ಪರಿಚ್ಛೇದ

ಅರಿಂದಮನ ವಿಪತ್ತು

ಅರಿಂದಮನು ಯೋಗೇಂದ್ರನಾಥನಲ್ಲಿಂದ ಹೊರಟು ತನ್ನ ಮನೆಗೆ ಬಂದನು. ಜೇದಿಯು ಬಾಗಿಲು ಮುಚ್ಚಿ ಒಳಗಡೆ ಚಿಲಕಹಾಕಿತ್ತು. ಒಳಗಡೆಯಿಂದ ಗಂಭೀರವಾಗಿ ಕೇಳಬಂದ ಮಹಾಶಬ್ದಸಹಿತವಾದ ನಾಸಿಕಾಧ್ವನಿ (ಗೊರಕೆಗಳು)ಯು ಅರಿಂದಮನ ಸೇವಕನು ನಿದ್ರೆಮಾಡುತ್ತಿರುವನೆಂಬುದನ್ನು ಸೂಚಿಸಿತು. ಅರಿಂದಮನು ಬಹು ಪ್ರಯಾಸದಿಂದ ಸೇವಕನನ್ನು ಎಚ್ಚರಗೊಳಿಸಿದನು. ಅಂತರಂಗದಲ್ಲಿಯೇ ಬೇಸರಗೊಂಡ ಸೇವಕನು ಎದ್ದು ಅವಸರವಸರವಾಗಿ ಬಂದು ಬಾಗಿಲನ್ನು ತೆರೆದನು. ಅರಿಂದಮನು ಮಹಡಿಯ ಮೇಲಿರುವ ತನ್ನ ಶಯನ ಮಂದಿರಕ್ಕೆ ಹೋದನಲ್ಲದೆ, ಊಟಮಾಡುವುದಕ್ಕಾಗಿ ಮೊದಲು ಸಿದ್ಧನಾದನು. ದಿನವೆಲ್ಲಾ ಉಪವಾಸ ಮಾಡಿದುದರಿಂದ ಹೊಟ್ಟೆಯೊಳಗಣ ಅಗ್ನಿದೇವನು ತುಂಬಾ ಉಪದ್ರವ ಮಾಡತೊಡಗಿರುವನು; ಬುದ್ಧಿವಂತನಾದ ಆ ಅಡಿಗೆಯ ಭಟ್ಟನು ಇದಕ್ಕೆ ಮೊದಲೇ ಆಹಾರ್ಯ ಪದಾರ್ಥಗಳಿಲ್ಲವನ್ನೂ ಆ ಕೊಠಡಿಯಲ್ಲಿ ಅಣಿಮಾಡಿಟ್ಟು ನಿರ್ಭಯನಾಗಿ ತನ್ನ ನಿದ್ರೆಗೆ ಅನುಕೂಲ ಮಾಡಿಕೊಂಡಿದ್ದನು. ಅರಿಂದಮನು ಕೂಡ ಅದರಿಂದ ಆಗ ತುಂಬ ಅನುಕೂಲವಾಯಿತೆಂದು ಭಾವಿಸಿದನು; ಅದಷ್ಟು ಬೇಗ ಊಟವನ್ನು ಮುಗಿಯಿಸಿ ಮಲಗಿದನು. ನಿದ್ದೆ ಬರಲಿಲ್ಲ; ಕುಲಸನೆ ಮತ್ತು ಫೂಲಸಾಹೇಬರ ವಿಚಾರಗಳನ್ನು ಕುರಿತು ಆಲೋಚನೆ ಮಾಡುತ್ತಾ ತುಂಬಾ ಉದ್ವಿಗ್ನನಾಗಿಬಿಟ್ಟನು. ಆಗ ಅತನು ಫೂಲಸಾಹೇಬನು ಕೊಟ್ಟ ಹೊಗೆಯ ಸುತ್ತಿಗೆ ಬೆಂಕಿಹೊತ್ತಿಸಿ ಸೇದ ಉಪಕ್ರಮಿಸಿದನು. ಹಾಗೆಯೇ ಆಲೋಚಿಸತೊಡಗಿದನು. ನಿದ್ದೆಯು ಸುಳಿವೇ ಇಲ್ಲವಾಯಿತು. ಹಾಗೆಯೇ ಭಾವಿಸತೊಡಗಿದನು,—ನಾನು ಊಟ, ನಿದ್ದೆ, ವಿರಾಮಗಳನ್ನೆಲ್ಲಾ ಮರೆತು ರಾತ್ರೀ ಹಗಲು ಯಾರನ್ನು ಹುಡುಕಿಕೊಂಡು ಅಲೆಯುತ್ತಿದ್ದೇನೆಯೋ ಅವನು ಇನ್ನಾರೂ ಅಲ್ಲ—ಇದೇ ಫೂಲಸಾಹೇಬನೆಂದು ತೋರುತ್ತದೆ. ಅವನೇ ಆ ಕೊಲೆಪಾತಕಿ

ಎಂದೂ ತೋರುತ್ತದೆ. ಇಷ್ಟೊಂದು ಸಂಶಯ ಸಂದೇಹಗಳಿದ್ದರೂ ಆ ಹತ್ಯಾಕಾರಿಯು ಈ ಫೂಲಸಾಹೇಬನಲ್ಲದೆ ಮತ್ತಾರೂ ಅಲ್ಲವೆಂದು ನನ್ನ ಮನಸ್ಸು ಹೇಳುತ್ತಿದೆ—ಎಂದು.

ಹೀಗೆ ಆಲೋಚಿಸುತ್ತಿರುವಾಗ್ಗೆ ಹಠಾತ್ತಾಗಿ ಅವನ ಕಣ್ಣುಗಳು ಸೆಳೆಯ ತೊಡಗಿದುವು; ಸ್ವಲ್ಪ ತೂಕಡಿಕೆ ಬಂದ ಹಾಗಾಯಿತು, ತಲೆಯು ಒಂದು ಸಲ ಹಿಂದಕ್ಕೆ ತೂಗಿತು; ಆ ಕೂಡಲೇ ಒಂದು ಸಲ ಆಕಳಿಸಿದನು.

ಅರಿಂದಮನು—ಈಗ ಕೊಂಚ ನಿದ್ದೆ ಬರುವ ಹಾಗಿದೆ, ಆಕಾರದಲ್ಲಿ ಅನೇಕ ಭಾಗಗಳು ಒಂದಕ್ಕೊಂದು ತಾಳೆಯಾಗಿದೆ; ಎತ್ತರ ಐದೂವರೆ ಅಡಿ, ಪ್ರಶಸ್ತವಾದ ಎದೆ, ಭುಜಗಳು ಸ್ವಭಾವಕ್ಕೂ ವಿರೋಧವಾಗಿರುವಷ್ಟು ಪ್ರಶಸ್ತವಾಗಿವೆ, ನಡುವು ಕೊಂಚ ತೆಳು, ವಯಸ್ಸನ್ನು ನಾಲ್ವತ್ತಕ್ಕೆ ಏರಿದಂತೆ ತೋರುವುದಿಲ್ಲ—ಎಂದು ತನ್ನಲ್ಲಿಯೇ ಭಾವಿಸಿಕೊಳ್ಳುತ್ತಿದ್ದನು.

ಇದಾದನಂತರ ಅರಿಂದಮನು ಇನ್ನೊಂದು ಸಲ ಆಕಳಿಸಿದನು. ಇದು ಮೊದಲನೆಯದಕ್ಕಿಂತಲೂ ಸ್ವಲ್ಪ ದೊಡ್ಡದೇ ಸರಿ. ಅರಿಂದಮನು ಮತ್ತೆ ಮೊದಲಿನಂತೆ ಮಾತನಾಡಿಕೊಳ್ಳುವುದಕ್ಕೆ ಆರಂಭಿಸಿದನು—ನೋಡುವುದಕ್ಕೆ ಗಾಂಭೀರ್ಯ, ಅಷ್ಟು ಉಜ್ವಲವಾಗಿಲ್ಲದಿದ್ದರೂ—ಆಗ ಇನ್ನೊಂದು ಆಕಳಿಕೆ ಬಂತು,—ಪರಿಷ್ಕಾರವಾಗಿಯೇನೋ ಇದೆ, ಅದರಲ್ಲಿ ಮುಖಕ್ಕಿಂತಲೂ ಕೈಗಳ ಬಣ್ಣವು ಸ್ವಲ್ಪ ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತದೆ—ಈ ಬಾರಿ ಭಾರಿಯಾದೊಂದು ಆಕಳಿಕೆಯೇ ಬಂದಿತು.

ಇದೇನು! ಇಂದು ಇಷ್ಟು ನಿದ್ದೆ ಬರುವುದಕ್ಕೇನು ಕಾರಣ? ಇದಕ್ಕೂ ಹೆಚ್ಚಾಗಿ, ಎಷ್ಟೋ ದಿನ ರಾತ್ರಿಯೆಲ್ಲಾ ನಿದ್ದೆಗೆಟ್ಟಿದ್ದೇನೆ, ಎಂದೂ ಹೀಗಾದದ್ದಿಲ್ಲ—ಎಂದಂದುಕೊಂಡು ಅರಿಂದಮನು ಎದ್ದು ಕೊಠಡಿಯೊಳಗೇ ಸಂಚರಿಸಲು ಮೊದಲುಮಾಡಿದನು. ಆದರೂ ಮೊದಲಿನಹಾಗೆ ತನ್ನಲ್ಲಿ ತಾನೇ ಮಾತನಾಡಿಕೊಳ್ಳುತ್ತಲೇ ಇದ್ದನು.

—ಕೂದಲು ಕೊಂಚ ಒರಟು, ಅಚ್ಚಕಪ್ಪು—ಪುನಃ ಒಂದು ಆಕಳಿಕೆ ಬಂತು, ಅದಾದನಂತರ ಇನ್ನೊಂದು; ಇನ್ನೂ ಒಂದು,—ಕೂದಲು ಉದ್ದದಲ್ಲಿಯೂ ಕೂಡ ಚಿಪ್ಪೇ—ಇನ್ನೂ ಒಂದು ಆಕಳಿಕೆ ಬಂತು,—ನಿಜವಾಗಿಯೂ ಈ ಫೂಲಸಾಹೇಬನೇ ಆ ಹುಡುಗಿಯನ್ನು ಕೊಂದು, ಹೆಣವನ್ನು ಪಟ್ಟಿಗೆಯಲ್ಲಿರಿಸಿ, ಕಳುಹಿಸಿಕೊಟ್ಟಿರುವನು.

ಅರಿಂದಮನು ಇನ್ನು ನಿಂತಿರಲಾಗಲಿಲ್ಲ; ಕುಳಿತುಕೊಂಡನು; ಕೈಮೇಲೆ ತಲೆಯಿರಿಸಿಕೊಂಡು ತೂಕಡಿಸುತ್ತ ಕುಳಿತನು. ಒಂದರ ಮೇಲೊಂದು—ಅದರ ಮೇಲೆ ಇನ್ನೊಂದು—ಇನ್ನೂ ಒಂದು—ಹೀಗೆ ಒಂದೊಂದಾಗಿ ಆಕಳಿಕೆ ಬರುವುದಕ್ಕೆ ಪ್ರಾರಂಭವಾಯಿತು.

ಆಲೋಚನಾಪರನಾದ ಅರಿಂದಮನು ತೂಕಡಿಸುತ್ತಿರುವಾಗಲೂ ಕೂಡ—ಫೂಲಸಾಹೇಬನಿಗೂ ಗಡ್ಡಮೀಸೆಗಳಿಲ್ಲ—ಆಕಳಿಕೆ ಬಂತು—ಮನುಷ್ಯನು ಎಷ್ಟರಮಟ್ಟಿಗೆ ಮೃದುಭಾಷಿಯಾಗಿರುವಂತೆ—ಪುನಃ ಆಕಳಿಕೆ ಬಂತು,—ತೋರುವುದೋ—ಪುನಃ ಆಕಳಿಕೆ,—ಆದರಿಂದ—ಪುನಃ ಒಂದು ಆಕಳಿಕೆ,—ಏನು—ಆಕಳಿಕೆ,—ತೋ—ಆಕಳಿಕೆ,—ರು—ಇನ್ನೂ ಒಂದು, ಕಡೆಗೆ ಅರಿಂದಮನು ಪೂರ್ತನಾಡಲಾರದೇ ಹೋದನು. ಅತನು ಅರ್ಧಮಟ್ಟಿಗೆ ಸೇರಿದ ಆ ಸುತ್ತನ್ನು ದೂರಹಾಕಿದನು. ಎರಡು ಕೈಗಳನ್ನೂ ತಲೆಯಮೇಲೆ ರುಜುಭಾವದಿರಿಸಿಕೊಂಡು, ಎರಡು ಕೈಗಳ ಬೆರಳುಗಳನ್ನೂ ಒಂದಕ್ಕೊಂದು ಸೇರಿಸಿ ಪಿಡಿದುಕೊಂಡು, ತಲೆಯನ್ನೆತ್ತಿ ಸುಮ್ಮನೆ ಸೀನುವುದಕ್ಕೆ ಪ್ರಾರಂಭಿಸಿದನು. ಸೀನು ಒಂದರ ಮೇಲೆ ಒಂದು—ಒಂದರ ಸಂಗಡ ಇನ್ನೊಂದು; ಅದರ ಸಂಗಡಲೇ ಇನ್ನೂ ಒಂದು; ಹೀಗೆ ಮೇಲೆ ಮೇಲೆ ಸೀನುವುದಕ್ಕೆ ಆರಂಭಿಸಿದನು. ಬಾಯಿ ಮುಚ್ಚುವುದಕ್ಕೆ ಅವನಿಗೆ ಸ್ವಲ್ಪವಾದರೂ ಅವಕಾಶವಿಲ್ಲ. ಕಣ್ಣು ಮುಚ್ಚುತ್ತ ಬಂದಿತು; ಬಲಾತ್ಕಾರದಿಂದ ಒಂದು ಸಲ ಕಣ್ಣು ತೆರೆದು ನೋಡಿದರೂ, ಯಾವುದೂ ಕಾಣಿಸುತ್ತಿಲ್ಲ. ಕೊಠಡಿಯಲ್ಲಿ ದೀಪ ಉರಿಯುತ್ತಿದ್ದರೂ ನಾಲ್ಕು ಕಡೆ ಕತ್ತಲೆ ಕವಿದಹಾಗೆ ತೋರುತ್ತಿರುವುದು; ಅರಿಂದಮನು ಕುರುಡನ ಹಾಗೆ ಕೈಯನ್ನು ಸವರಿಕೊಂಡು ಹಾಸಿಗೆ

ಹುಡುಕಲೆತ್ನಿಸಿದನು. ಅವನ ಮುಸ್ತಿಷ್ಕದೊಳಗೆ ಒಂದು ಬಗೆಯಾಗಿ ತೀವ್ರವಾದ ಯಾತನೆಯುಂಟಾಯಿತು; ಆತನ ಶರೀರವೆಲ್ಲವನ್ನೂ ನಿತ್ರಾಣವು ಆವರಿಸಿತು; ಮತ್ತೆ ಯಾರಾದರೂ ಆಗಿದ್ದ ಪಕ್ಷದಲ್ಲಿ ಈ ನೋಟಕ್ಕೆ ತಮ್ಮ ಭಾವಲೀಲೆಯನ್ನೇ ಮುಂಗಾಣಿಸಿಕೊಳ್ಳುತ್ತಿದ್ದರು. ಅರಿಂದಮನು,—ನಾನು ಏನೋ ತಿಂದಿರಬೇಕು; ಇಲ್ಲವಾದರೆ ಹೀಗಾಗಲು ಕಾರಣವೇನು ? ಓಹೋ ! ಸರಿಹೋಯಿತು ! ಈ ಸುತ್ತಿನಲ್ಲಿ ಯಾವುದೋ ವಿಷವಿದೆ. ಏನು ಸರ್ವನಾಶ ! ನಿಜವಾಗಿಯೂ ಫೂಲ ಸಾಹೇಬನು ಮನುಷ್ಯರನ್ನು ಕೊಲ್ಲುವ ಪಿಶಾಚ. ಇದರಲ್ಲಿ ಸಂಶಯವೇ ಇಲ್ಲ. ಈಗ ಸರಿಯಾಗಿ ತಿಳಿಯಿತು. ಬಾಲಕೆಯನ್ನು ಕೊಂದವನು ಫೂಲಸಾಹೇಬನೊಬ್ಬನೇ. ಆ ಪಿಶಾಚನು ಒಂದು ದಿನ ಅರಿಂದಮನನ್ನೂ ಕೊಲ್ಲುತ್ತೇನೆ—ಎಂದು ಕಾಗದದಲ್ಲಿ ಬರೆದೇ ಇದ್ದನು. ಅವನು ತನ್ನ ಪ್ರತಿಜ್ಞೆಯನ್ನು ತೀಕ್ಷ್ಣವಾಗಿಯೇ ಮುಂಗಾಣಿಸಿಕೊಂಡನು—ಎಂದು ಮುಂತಾಗಿ ಮೆಲ್ಲಗೆ ಹೇಳಿಕೊಂಡನು.

ಒಂಭತ್ತನೆಯ ಪರಿಚ್ಛೇದ

ಮೃತ್ಯುಮುಖದಲ್ಲಿ ಅರಿಂದಮ

ಕೊಠಡಿಯು ಒಂದು ಮೂಲೆಯಲ್ಲಿ ಒಂದು ಮೇಜು ಇದ್ದಿತು. ಅರಿಂದಮನು ತನ್ನೆರಡು ಕೈಗಳಿಂದಲೂ ಆ ಮೇಜಿನ ಒಂದು ಮೂಲೆಯನ್ನು ಭದ್ರವಾಗಿ ಹಿಡಿದುಕೊಂಡು ಎದ್ದು ನಿಂತನು. ಎರಡು ಮೂರು ಸಲ ಬಿದ್ದುಹೋಗುವಹಾಗೆ ಆಯಿತು. ಅಂತಹ ಅವಸ್ಥೆಯಲ್ಲಿ ಅಲ್ಲಿಯೇ ನಿಂತುಕೊಂಡಿದ್ದರೂ, ಮೇಜಿನಮೇಲೆ ಪ್ರಕಾಶಮಾನವಾದ ದೀಪ ಉರಿಯುತ್ತಿದ್ದರೂ ಅವನ ಕಣ್ಣುಗಳಿಗೆ ಕತ್ತಲೆ ಕವಿದ ಹಾಗೆಯೇ ಇದ್ದಿತು. ಹೇಗೂ ಆತನು ತನ್ನ ಸ್ವಾಭಾವಿಕ ಸ್ಥಿತಿಗೆ ಬರಲಾಗಲಿಲ್ಲ. ಆಕಳಿಕೆಯನ್ನು ತಡೆದು ನಿಲ್ಲಿಸುವ ಪ್ರಯತ್ನವಾಡಿದನು—ಸಾಧ್ಯವಾಗಲಿಲ್ಲ. ಒಂದರ ಮೇಲೆ ಒಂದು, ಅದರ ಮೇಲೆ ಇನ್ನೊಂದು, ಅದರ

ಮೇಲೆ ಇನ್ನೂ ಒಂದು, ಈ ರೀತಿಯಾಗಿ ಆಕಳಿಕೆ ಬರುತ್ತಿದ್ದಿತು. ಆತನು ಮರ್ಮಾಂತಿಕವಾದ ಯಾತನೆಯಿಂದ ಹುಚ್ಚನ ಹಾಗಾಗಿಬಿಟ್ಟನು. ಹೇಳಿದನು—ಈಗ ಇಲ್ಲ, ಈಗಲೇ ಅಲ್ಲ, ಈಗ ಏತರಿಂದಲೂ ಸಾಯಲಾರೆ. ಸಾಯುವುದಕ್ಕೆ ಮೊದಲು, ಹೇಗಾದರೂ ಮಾಡಿ ಒಂದು ಕೆಲಸವನ್ನು ಮುಗಿಯಿಸಬೇಕು.—ಎಂದು ಹೇಳುತ್ತ ಹೇಳುತ್ತ ತೂಗಾಡಿಕೊಂಡು ಎದ್ದನು; ಕತ್ತಲೆ ಮನೆಯಲ್ಲಿರುವಪ್ರಸಹಾಗೆ ಆತನು ಕೈಸಪರ್ಶೆಯಿಂದಲೇ ಮೇಜಿನಲ್ಲಿದ್ದ ಒಂದು ಕಾಗದವನ್ನು ತೆಗೆದು ಕೊಂಡನು. ಬಹುಕಷ್ಟದಿಂದ ಮಸಿ ಕುಡಿಕೆ ಮತ್ತೂ ಲೇಖನಿಗಳನ್ನು ಹುಡುಕಿ ತೆಗೆದು ಬರೆಯಲು ಕುಳಿತನು. ಏನು ಬರೆಯುತ್ತಿದ್ದನೋ ಕಾಣಿಸುತ್ತಿರಲಿಲ್ಲ; ಅಭ್ಯಾಸವಿದ್ದಹೋರೆ ಲೇಖನಿಯನ್ನು ಓಡಿಸುತ್ತಲಿದ್ದನು. ಆತನು ಬರೆದುದರಲ್ಲಿ ಕೆಲವು ಅಕ್ಷರಗಳು ಬಲು ದೊಡ್ಡವಾಗಿಯೂ ಕೆಲವು ಬಹಳ ಚಿಕ್ಕುವಾಗಿಯೂ, ಕೆಲವು ಅಕ್ಷರಗಳು ಒಂದಕ್ಕೊಂದು ಸಂಬಂಧವೇ ಇಲ್ಲದಹಾಗೂ ಇದ್ದುವು. ಸಾಲುಗಳು ತುಂಬ ವಕ್ರವಕ್ರ; ಅದು ಆತನ ಕೈಬರಹವೆಂದು ಹೇಳುವುದಕ್ಕೇ ಆಗುವಂತಿಲ್ಲ. ಆತನು ಬಹುಪ್ರಯಾಸದಿಂದ ಹೀಗೆ ಬರೆದನು:—

"ಯೋಗೇಂದ್ರಜಾಜಿ,

ಫೂಲಸಾಹೇಬನು ಬಹು ದುಷ್ಟ. ಸಾಧ್ಯವಾದಷ್ಟು ಜಾಗ್ರತೆ ಅವನನ್ನು ಹಿಡಿದುಹಾಕಿ. ಆ ಕೊಲೆಯಲ್ಲಿ ಅವನೇ ಆ ಬಾಲಿಕೆಯನ್ನು ಕೊಂದವನು. ಅವನು ಒಂದು ಹೊಗೆಸುತ್ತಿಗೆ ವಿಷ ಬೆರಸಿ ನನಗೆ ಕೊಟ್ಟಿದ್ದಾನೆ; ನಾನು ಅದರಲ್ಲಿ ಅರ್ಧದಮಟ್ಟಿಗೆ ಸೇದಿದೆ—ಪ್ರಾಯಶಃ ಬದುಕಲಾರೆ. ಫೂಲಸಾಹೇಬನನ್ನು ಬೇಗ ಹಿಡಿದುಹಾಕದಿದ್ದರೆ ಒಂದು ದಿನ ನಿನ್ನನ್ನೂ—"

ಮುಂದೆ ಬರೆಯಲು ಸಾಗಲಿಲ್ಲ. ಆವನ ಶರೀರವಾದ್ಯಂತವೂ ಶಕ್ತಿಹೀನವಾಗುತ್ತ ಬಂದಿತು; ಪೂರ್ತಿಯಾಗಿ ಬರೆದು ಮುಗಿಸದ ಆ ಕಾಗದಕ್ಕೇ ಅವನು ತನ್ನ ಕೈಬರಹವನ್ನೂ ಹಾಕಿ ಮುಗಿಯಿಸಿದನು. ಹಾಗೆಯೇ ಒಂದು ಲಕೋಟೆಯನ್ನೂ ಹುಡುಕಿ ಕಾಗದವನ್ನು ಅದ

ರಲ್ಲಿ ಹಾಕಿ ಮುಚ್ಚಿದನು. ಇನ್ನು ಬಂದು ಅಕ್ಷರ ಬರೆವುದಕ್ಕೂ ಅವನಿಗೆ ಶಕ್ತಿಯಿರಲಿಲ್ಲ. ಇನ್ನೂ ಮೇಲ್ವಿಳಾಸ ಬರೆಯುವುದು ಉಳಿದಿದೆ; ಬರುಬರುತ್ತೆ ಅವನಿಗೆ ಪ್ರಜ್ಞೆ ತಪ್ಪುತ್ತೆ ಬಂದಿತು; ಆಗ ಆತನಿಗೆ ಅಲುಗುವುದಕ್ಕೂ ಶಕ್ತಿಯಿಲ್ಲ. ಕೈಕಾಲುಗಳು ಬೆರತುಕೊಂಡುಹೋದ ಹಾಗಾಯಿತು; ಆಗ ಅವನಿಗೆ ದಿಕ್ಕು ತೋರದೆ ಕೈಗೆ ಲೇಖನಿಯನ್ನು ಚುಚ್ಚಿಕೊಂಡನು; ಅದರ ದೆಸೆಯಿಂದ ಕೈಗೆ ನೋವು ಉಂಟಾಗಿ ಆಗ್ಗೆಮಟ್ಟಿಗೆ ಆ ದೌರ್ಬಲ್ಯವು ಸ್ವಲ್ಪ ಹಿಂದಾಯಿತು; ಲೇಖನಿಯು ಮುಳ್ಳು ಕೈಗೆ ಚುಚ್ಚಿಕೊಂಡೇ ಇದ್ದಿತು. ಅವನು ಇನ್ನೊಂದು ಲೇಖನಿಯನ್ನೆತ್ತಿಕೊಂಡು ಮೇಲ್ವಿಳಾಸವನ್ನು ಬರೆದನು. ಅವನು ಬರೆದುದನ್ನು ಇತರರು ಸುಲಭವಾಗಿ ಓದುವುದಕ್ಕಾಗುವಂತೆ ಇದ್ದಿತೆಂದು ತೋರಲಿಲ್ಲ.

ಆ ಕಾಗದವನ್ನು ಆಗಲೇ ಸೇವಕನ ಮೂಲಕ ಯೋಗೇಂದ್ರನಾಥನಿಗೆ ಕೊಟ್ಟು ಕಳುಹಬೇಕೆಂದು ಅರಿಂದಮನು ಸೇವಕನನ್ನು ಕೂಗ ಲಾರಂಭಿಸಿದನು. ತನಗೆ ಗಂಟಲು ಸಪ ಕಟ್ಟಿಕೊಂಡಿದ್ದ ಸಂಗತಿ ಆತನಿಗೆ ತಿಳಿದದ್ದು ಆಗಲೇ. ಸೇವಕನು ಹತ್ತಿರದಲ್ಲಿಯೇ ನಿಂತಿದ್ದರೂ ಕೇಳ ತಾರದ ಮಟ್ಟಿಗೆ ಕಂಠ ಸ್ವರವು ಕುಗ್ಗಿರುವಾಗ್ಗೆ, ಆ ಕೂಗನ್ನು ಕೇಳಿ ಎರಡನೆಯಂತಸ್ತಿನಲ್ಲಿ ನಿಲ್ಲಿಸಿವಾಡುತ್ತಿರುವ ಸೇವಕನು ಎದ್ದು ಬರುವನೆಂದು ತೋರಲಿಲ್ಲ. ತನ್ನ ಕಂಠ ಸ್ವರವು ತನಗೇ ಕೇಳದೇ ಹೋದ್ದರಿಂದ ಅರಿಂದಮನು ಸೇವಕನನ್ನು ಕೂಗುವುದಕ್ಕೊಸ್ಕರ ತಾನೇ ಹೋಗಬೇಕೆಂದು ಆ ಕೊಠಡಿಯಿಂದ ಹೊರಡುವ ಪ್ರಯತ್ನವಾಡಿದನು. ಇದಕ್ಕೆ ಮೊದಲು, ಊಟ ಮುಗಿಸಿಕೊಂಡು, ತಾನೇ ಬಾಗಿಲನ್ನು ಮುಚ್ಚಿ ಅಗಳಿಹಾಕಿದ್ದನಾದರೂ ಈಗ ಆತನಿಗೆ ಆ ಮುಚ್ಚಿದ ಬಾಗಿಲುಕೂಡ ಎಲ್ಲಿರುವುದೆಂಬುದು ಗೊತ್ತಾಗಲಿಲ್ಲ. ಅವನ ದೃಷ್ಟಿ ಶಕ್ತಿಯು ಸಂಪೂರ್ಣವಾಗಿ ನಷ್ಟವಾಗಿತ್ತು. ಒಂದು ಕಡೆ ಒಂದು ಕಿಟಕಿ ತೆರೆದಿತ್ತು. ಆತನು ಅದೇ ಬಾಗಿಲೆಂದು ಭಾವಿಸಿ ಅದರೊಳಗಿಂದ ಹೊರಕ್ಕೆ ಹೋಗಲು ಯತ್ನಿಸಿದನು; ಕೆನ್ನೆಗೆ ಪೂರಾ ಪೆಟ್ಟಾಯಿತು; ಆತನು ಆ

ಕಾಗದವನ್ನು ಆ ಕಿಟಕಿಯೊಳಗಿಂದ ಹೊರಗೆ ಬಿಸಾಡಿದನು. ಕಾಗದವು ಹೊರಗಡೆ ಕೈಸಾಲೆಯಲ್ಲಿ ಹೋಗಿ ಬಿತ್ತು. ಅರಿಂದಮನು ನಿಂತಲ್ಲಿಯೇ ಬಿದ್ದುಬಿಟ್ಟನು; ಸತ್ತವನ ಹಾಗೆ ಬಿದ್ದೇ ಇದ್ದನು.

ಈ ಸಮಯದಲ್ಲಿ ಯೋಗೇಂದ್ರನಾಥನು ಹಾಲಿನ ನೊರೆಯ ಹಾಗಿರುವ ಶುಭ್ರವಾದ ಹಾಸಿಗೆಯಲ್ಲಿ ಮಲಗಿ ಎಷ್ಟೋ ಸುಖ ಸ್ವಪ್ನಗಳನ್ನು ನೋಡುತ್ತಿದ್ದಿರಬಹುದು. ಹಾಗಿರುವಾಗ, ಇಂದು ಅವನ ಆಪ್ತ ಮಿತ್ರನಾದ ಅರಿಂದಮನು ಶತ್ರುವಿನ ಮೋಸಕ್ಕೆ ಬಲಿಯಾಗಿ, ಸಹಾಯ ಹೀನನಾಗಿ ಮೃತ್ಯುಮುಖದಲ್ಲಿರುವನೆಂಬುದು ಅವನಿಗೆ ಹೇಗೆ ತಾನೇ ತಿಳಿಯಬೇಕು?

ಹತ್ತನೆಯ ಪರಿಚ್ಛೇದ

ಚಿಕಿತ್ಸಕನೋ ಅಥವಾ ಸ್ವತ್ಯಕ್ಷ ಮೃತ್ಯುದೇವತೆಯೊ?

ಮಾರನೆಯ ದಿನ ಬೆಳಿಗ್ಗೆ ಅಡಿಗೆಯ ಭಟ್ಟನು ಅಡಿಗೆಗೆ ಆವಶ್ಯಕವಾದ ಪದಾರ್ಥಗಳನ್ನು ಪೇಟೆಯಿಂದ ತರುವುದಕ್ಕೋಸ್ಕರ ಹಣ ತೆಗೆದು ಕೊಳ್ಳಬೇಕೆಂದು ಬಂದಿನಂತೆ ಅರಿಂದಮನಲ್ಲಿಗೆ ಬಂದು ನೋಡಿದನು. ಇನ್ನೂ ಅರಿಂದಮನು ಎದ್ದಿಲ್ಲ; ಅತನು ಮಲಗುವ ಮನೆಯ ಬಾಗಿಲು ಮುಚ್ಚಿಯೇ ಇದೆ. "ಸ್ವಾಮಿ–ಸ್ವಾಮಿ!" ಎಂದು ಹೊರಗಿನಿಂದಲೇ ನಾಲ್ಕಾರು ಸಲ ಕೂಗಿದನು. ಯಾವ ಉತ್ತರವೂ ಇಲ್ಲ. ಬಾಗಿಲು ತಟ್ಟಿದನು, ಆದಕ್ಕೂ ಉತ್ತರವಿಲ್ಲ. ಆಗ ಕಿಟಕಿಯಿಂದ ನೋಡಿದನು. ಅರಿಂದಮನು ನೆಲದಮೇಲೆ ಬಿದ್ದಿರುವುದು ಕಾಣಿಸಿತು. ಅತನ ಹಣೆಯಲ್ಲಿ ಒಂದು ಕಡೆ ಗಾಯವಾಗಿ ರಕ್ತ ಬಂದಿದೆ; ಇದನ್ನು ನೋಡಿ ಅಡಿಗೆಭಟ್ಟನಿಗೆ ತುಂಬಾ ಭಯವಾಯಿತು. ಏನು ಮಾಡುವುದೋ, ತೋರಲಿಲ್ಲ. ಅವನು ಹಾಗೆ-ಹೀಗೆ ಆಲೋಚಿಸುತ್ತಿರುವಷ್ಟರಲ್ಲಿಯೇ ಅರಿಂದಮನು ಬರೆದಿದ್ದ ಕಾಗದವು ಅವನ ದೃಷ್ಟಿಗೆ ಬಿದ್ದಿತು; ಅವನಿಗೆ ಕೊಂಚಮಟ್ಟಿಗೆ ಓದುಬರೆಹ ತಿಳಿದಿದ್ದಕಾರಣ

ಒಂದಾದಮೇಲೆ ಇನ್ನೊಂದು ಅಕ್ಷರದಂತೆ ಸೇರಿಸಿ ಬಹು ಕಷ್ಟಪಟ್ಟು ಒಂದು ವಾಕ್ಯ, ಆದಾದಮೇಲೆ ಇನ್ನೊಂದು ವಾಕ್ಯ, ಹೀಗೆಯೇ ವಾಕ್ಯಕ್ಕೆ ವಾಕ್ಯ ಜೋಡಿಸುತ್ತಾ ಹೇಲುಮಳಿಗಾಸದ ಕೊಂಡ ಭಾಗವನ್ನು ಓದಿದನು; ಮುಕ್ಕ ಭಾಗವನ್ನು ಓದಲಾರದೇ ಹೋದರೂ ಊಹಿಸಿ ತಿಳಿದುಕೊಂಡನು.

ಕಾಗದವನ್ನು ತೆಗೆದುಕೊಂಡು, ಕೆಳಗೆ ಬಂದು, ಗಾಢ ನಿದ್ರೆಯಲ್ಲಿದ್ದ ಸೇವಕನನ್ನು ಬಡ್ಡಿರಗೊಳಿಸಿದನು. ಮೊದಲು ಅವನನ್ನು ತಿರಸ್ಕರಿಸಿದನು; ಅನಂತರ ತನಗೆ ತಿಳಿದಿದ್ದುದನ್ನು ಅವನಿಗೆ ಹೇಳಿ ಆ ಕಾಗದದೊಂದಿಗೆ ತಾನೇ ಯೋಗೇಂದ್ರನಾಥನನ್ನು ನೋಡಲು ತಾಣಕ್ಕೆ ಹೋದನು.

* * * * *

ಆ ಸಮಯದಲ್ಲಿ ಯೋಗೇಂದ್ರನಾಥನು ತಾಣದಲ್ಲಿರಲಿಲ್ಲ. ದರೋಗನೂ ಇಬ್ಬರು ಬಸವಾದಾರರೂ ಕುಳಿತುಕೊಂಡಿದ್ದರು. ಅಡಿಗೆಯ ಭಟ್ಟನು ಅಲ್ಲಿಗೆ ಹೋಗಿ ಆ ಕಾಗದವನ್ನು ದರೋಗನ ಪರಕ್ಕೆ ಕೊಟ್ಟು ನಡೆದಿರುವುದನ್ನು ಸಂಕ್ಷೇಪವಾಗಿ ಹೇಳಿದನು. ಕೂಡಲೇ ದರೋಗನು ಬಿಟ್ಟ ಬಸವಾದಾರನ ಕೈಯಲ್ಲಿ ಆ ಕಾಗದವನ್ನು ಕೊಟ್ಟು ಯೋಗೇಂದ್ರನಾಥನ ಮನೆಗೆ ಕಳುಹಿಸಿ ತಾನು ಅರಿಂದಮನನ್ನು ನೋಡಲು ಹೊರಟನು. ಬುತ್ತಿಕ್ಕೊಟ್ಟ ಬಸವಾದಾರನು ತಾಣದ ರಕ್ಷಣೆಯ ಭಾರವನ್ನು ವಹಿಸಿಕೊಂಡು ಅಲ್ಲಿಯೇ ಕುಳಿತಿದ್ದನು.

ಅಡಿಗೆಯ ಭಟ್ಟನು ದರೋಗನನ್ನು ಅರಿಂದಮನ ತಮ್ಮನ ಗೃಹದ ಬಳಿಗೆ ಕರೆದುಕೊಂಡು ಬಂದನು. ದರೋಗನು, ಅರಿಂದಮನು ಆ ಕೊಠಡಿಯ ನೆಲದ ಮೇಲೆ ಕೆಳಪೊಗನಾಗಿ ಬಿದ್ದಿರುವುದನ್ನು ತೆರೆದಿದ್ದ ಕಿಟಕಿಯಿಂದ ನೋಡಿದನು; ಅವನಿಗೆ ಬಹಳ ಗಾಬರಿಯಾಯಿತು. ಒಡನೆಯೇ ಅವರು ಮುಚ್ಚಿದ್ದ ಬಾಗಿಲನ್ನು ಒಡೆದು ತೆರೆದರು. ದರೋಗನು, ಹೊಟ್ಟಪೊದಲು ಅಡಿಗೆ ಭಟ್ಟ ಮತ್ತು ಸೇವಕ ಇವರ ಸಹಾಯದಿಂದ ಅರಿಂದಮನನ್ನು ಪತ್ತಿರದಲ್ಲಿನ ಹಾಸಿಗೆಯಲ್ಲಿ ಮಲಗಿ

ಸಿದನು; ಮೂಗಿನ ಬಳಿ ಕೈಯಿಟ್ಟು ನೋಡಿದನು, ಉಸಿರಾಡುತ್ತಿರಲಿಲ್ಲ; ಆದರೆ ಶರೀರವು ಶೈತ್ಯವಾಗಿರಲಿಲ್ಲ; ಸಾಧಾರಣ ಸ್ಥಿತಿಗಿಂತ ಸ್ವಲ್ಪ ಹೆಚ್ಚು ಬಿಸಿಯಾಗಿಯೇ ಇದ್ದಿತು. ಆದ್ದರಿಂದ ಇನ್ನೂ ಅರಿಂದಮನು ಮೃತನಾಗಿಲ್ಲವೆಂದೇ ಅವನು ಊಹಿಸಿದನು. ಹಾಗೆಯೇ ಒಡನೆ ಒಬ್ಬ ಡಾಕ್ಟರನನ್ನು ಕರೆದುಕೊಂಡು ಬರುವಂತೆ ದರೋಗನು ಆಡಿಗೆ ಯವನಿಗೆ ಹೇಳಿದನು.

ಆಡಿಗೆಯವನು ಓಡುತ್ತಾ ಹೋದನು. ಸ್ವಲ್ಪ ಹೊತ್ತಿನೊಳಗಾಗಿಯೇ ಅವನು ಒಬ್ಬ ವೈದ್ಯನನ್ನು ಸಂಗಡ ಕರೆದು ತಂದನು. ಚಿಕಿತ್ಸಕನು ಮುತ್ತಿ ಯಾರೂ ಅಲ್ಲ, ಅದೇ ಡಾಕ್ಟರ್ ಫೂಲಸಾಹೇಬ. ದರೋಗನು ಅವನನ್ನು ಕಂಡು ಬಹು ಸಂತೋಷಪಟ್ಟು,—ಸದ್ಯ! ತಾವು ದಯಮಾಡಿಸಿದ್ದು ತುಂಬಾ ಅನುಕೂಲವಾಯಿತು. ತಮ್ಮನ್ನು ನೋಡಿದ್ದರಿಂದ ಬಹಳ ಧೈರ್ಯವಾಯಿತು—ಎಂದನು.

ಫೂಲಸಾಹೇಬ—ಸರಿ, ನಾನು ಬಲ್ಲ ಒಬ್ಬ ರೋಗಿಯನ್ನು ನೋಡುವುದಕ್ಕೆ ಬಂದೆ. ದಾರಿಯಲ್ಲಿಯೇ ನಿಮ್ಮ ಕಡೆಯವನು ಬಂದು ಹೀಗೆಯೇ ಕರೆದುಕೊಂಡು ಬಂದನು. ಈಗ ಏನಾಗಿದೆ? ಹೇಳಿ ನೋಡೋಣ.

ದರೋಗನು ಅರಿಂದಮನನ್ನು ತೋರಿಸಿದನು. ಫೂಲಸಾಹೇಬನು ಅರಿಂದಮನನ್ನು ಪರೀಕ್ಷಿಸಿ ನೋಡತೊಡಗಿದನು; ಬಹಳ ಹೊತ್ತಿನ ನಂತರ ಬಂದು ನಿಟ್ಟುಸಿರಿಟ್ಟು,—ಇನ್ನು ಪ್ರಯತ್ನಿಸುವುದೇನು, ಮನುಷ್ಯನು ಸತ್ತುಹೋಗಿದ್ದಾನೆ—ಎಂದು ಹೇಳಿದನು.

ಸತ್ತುಹೋಗಿರುವನೆಂಬ ಮಾತನ್ನು ಕೇಳಿ ದರೋಗನು ಚಮಕಿತನಾದನು.—ಸತ್ತುಹೋದನೆ! ಎಂತಹ ಏಷತ್ತು! ಯಾವ ರೋಗದಿಂದ ಈತನು ಹಠಾತ್ತಾಗಿ ಮೃತನಾದನು?—ಎಂದು ಪ್ರಶ್ನೆ ಮಾಡಿದನು.

ಫೂಲಸಾಹೇಬ—ಹೃದ್ರೋಗದಿಂದ ಹೀಗಾಗಿರಬೇಕು. ಚೆನ್ನಾಗಿ ಪರೀಕ್ಷಿಸಿ ನೋಡದೆ, ಹೀಗೆಯೇ ಸರಿ ಎಂದು ಖಂಡಿತವಾಗಿ ಹೇಳಲಾಗುವುದಿಲ್ಲ.

ದರೋಗ—ಇಷ್ಟು ಬಲಿಷ್ಠನಾದ ಈತನು ಹೃದ್ರೋಗದಿಂದ ಹಠಾತ್ತಾಗಿ ಸತ್ತುಹೋದನೆಂಬುದನ್ನು ನಂಬುವುದು ಹೇಗೆ?

ಫೂಲಸಾಹೇಬ—(ಹುಬ್ಬು ಗಂಟಿಟ್ಟು) ನಾನು ಸುಳ್ಳು ಹೇಳುತ್ತೇನೆಯೆ?

ದರೋಗ—ಅತ್ಮಹತ್ಯೆ ಮಾಡಿಕೊಂಡಿಲ್ಲವಷ್ಟೆ?

ಫೂಲಸಾಹೇಬ—ಹಾಗಿದ್ದರೂ ಇರಬಹುದು; ಅದರ ಹಾಗೆ ಹೇಳುವುದಕ್ಕೆ ಯಾವ ಪ್ರಮಾಣವೂ ದೊರೆಯುವುದಿಲ್ಲ.

ದರೋಗ—ತಾವು ಪರೀಕ್ಷಿಸಿದ್ದರಲ್ಲಿ, ಈತನು ಮೃತನಾಗಿರುವ ವಿಷಯವಾಗಿ ಯಾವ ಸಂದೇಹವೂ ಇಲ್ಲವಷ್ಟೆ?

ಫೂಲಸಾಹೇಬ—ಇಲ್ಲ.

ಹನ್ನೊಂದನೆಯ ಪರಿಚ್ಛೇದ

ಮಿತ್ರನ ಕರ್ತವ್ಯ

ಇಷ್ಟು ಹೊತ್ತಿಗೆ ಸರಿಯಾಗಿ ಯೋಗೇಂದ್ರನಾಥನು ಅಲ್ಲಿಗೆ ಬಂದನು. ಅಲ್ಲಿಯ ಸ್ಥಿತಿಗತಿಗಳನ್ನು ಕಂಡು ಅವನ ದೇಹವೆಲ್ಲವೂ ಕಂಪಿಸಿತು. ಅವನಿಗೆ ಅಬಂದಮನ ಕಾಗದ ಸಿಕ್ಕಿರಲಿಲ್ಲ, ಬನಮಾದಾರನು ಕಾಗದವನ್ನು ತೆಗೆದುಕೊಂಡು ಅವನ ಮನೆಗೆ ಹೋಗಿ ನೋಡುವುದರೊಳಗಾಗಿಯೇ ಅವನು ಮನೆಯನ್ನು ಬಿಟ್ಟು ಹೊರಟಿದ್ದನು. ತಾಣೆಗೆ ಹೋಗಿ ಅಲ್ಲಿ ಬನಮಾದಾರನಿಂದ ಈ ವರ್ತಮಾನವನ್ನು ಕೇಳಿದವನಾಗಿ ಇಲ್ಲಿಗೆ ಬಂದಿರುವನು. ಇದರ ಕಾರಣವನ್ನು ಕುರಿತು ದರೋಗನನ್ನು ಕೇಳಲಾಗಿ, ಅವನು ತನಗೆ ತಿಳಿದಿದ್ದುದನ್ನೆಲ್ಲಾ ಯೋಗೇಂದ್ರನಾಥನಿಗೆ ಹೇಳಿದನು. ಅಬಂದಮನ ಆ ಕಾಗದದ ವಿಚಾರವು ಚ್ಯಾಪಕಕ್ಕೆ ಬರಲಿಲ್ಲ.

ಯೋಗೇಂದ್ರನಾಥನು ಕೇವಲ ಚಿಂತಾಪರವಶನಾಗಿ ಫೂಲಸಾಹೇಬನನ್ನು ಕುರಿತು—ತಾವು ಅರಿಂದಮ ಬಾಬುಗಳನ್ನು ಹೇಗಾದರೂ ಮಾಡಿ ಬದುಕಿಸಲಾರಿರಾ?—ಎಂದು ಕೇಳಿದನು.

ಈ ಸ್ಥಿತಿಯಲ್ಲಿ ನಾನೇನೂ ಮಾಡಲಾರೆ—ಎಂದು ಫೂಲಸಾಹೇಬನು ಹೇಳಿದನು.

ಯೋಗೇಂದ್ರನಾಥ—ಹಾಗಾದರೆ ಈತನು ಬದುಕಿಲ್ಲ?

ಫೂಲಸಾಹೇಬ—ಬಲ್ಲ, ಹಾಗೆ ಅನ್ನಿಸ್ತದೆ. ಹಕ್ಕನಲ್ಲಿ ನಾನು ಸಿಕ್ಕಿಸಿಷ್ಟ ನಾಗಿ ಕೂಳಿತಿರುತ್ತಿರಲಿಲ್ಲ. ನಿನ್ನ ಮಾತಿನಲ್ಲಿ, ಈಗ ನಿನ್ನಮಾತುಪ್ರಕಾರ ಹೊಸಾಯಿಸಿಲ್ಲ.

ಯೋಗೇಂದ್ರನಾಥನು ದೀರ್ಘಾಲೋಚನೆಯಿಂದ ಸಿಟ್ಟು ಸಿರಿಯುಟ್ಟು,—ಯಾಕಾಗದರೆ ಹುಂಬನೆ ಗತಿ! ನಾಕ್ಕೆರ ಬಾಬುಗಳು, ಹತಾತ್ತಾಗಿ ಸೀಗೆ ಮುರಣ ಹೊಂದಲು ಕಾರಣವೇನು? ಅರಿಂದಮ ಬಾಬುಗಳು ಜೀವ್ಮದಶೆಯಲ್ಲಿ ಮಾತು ಕೊಂಡಿರಬೇಕೆಂದು ತೋರುತ್ತದೆ—ಎಂದನು.

ಫೂಲಸಾಹೇಬ—ಅಹುಕಾರವಾಗಿ ನಾನೇನೂ ಬಂಧಿತ ಹೇಳಲಾರೆ; ಹ್ಮನಮಂದ ನೋಡಿದೆಯಿಂದಲೇ ಮುರಣ ಹೊಂದಿರಬಹುದೆಂದು ತೋರುತ್ತದೆ.

ಸೀಗೆ ಹೇಳಿ ಫೂಲಸಾಹೇಬನು ಯೋಗೇಂದ್ರನಾಥನ ಉಪ್ಪಕೆ ನಡೆದು ಅಲ್ಲಿಂದ ಬಿದ್ದನು. ಮೊಗುವಾಗ ಅವನ್ನೊಂದು ಕಡೆಗೆ ತಿರುಗಿ ಕೊಂಡು ಬಂದುಸಲ ನಕ್ಕನು; ಅದರೆ, ಪಿಂಸಾತೀಕ್ಷ್ಣವಾದ, ಬಹುಕಾಲ ದಿಂದ ಅವನಿಗೆ ರೂಢಿಯಾಗಿರುವ ಆ ಸುಂದರಹಾಸವನ್ನು ಯಾರೂ ನೋಡಲಿಲ್ಲ.

ಫೂಲಸಾಹೇಬನು ಹೊರಟುಹೋದ ಮೇಲೆ ಸ್ವಲ್ಪ ಹೊತ್ತಿನವರೆಗಾಗಿ ಯೋಗೇಂದ್ರನಾಥನು ಬಂದೂಕಾಲ್ಕಯನ್ನು ತರಿಸಿ ಆ ಅಸಹ್ಯ ಯಲ್ಲಿರುವ ಅರಿಂದಮನನ್ನು ತನ್ನ ಮನೆಗೆ ಕರೆದುಕೊಂಡು ಹೋದನು.

ಅಲ್ಲಿ ಅರಿಂದಮನನ್ನು ಪ್ರಶಸ್ತವೂ ಪರಿಷ್ಕಾರವೂ ಆದೊಂದು ಕೊಠಡಿಯಲ್ಲಿ ಪುಲಗಿಸಿದನು. ಮನೆಗೆ ಬಂದಮೇಲೆ, ಅರಿಂದಮನ ಕಾಗದವನ್ನು ಸಿಕ್ಕಿದ್ದರಿಂದ ಯೋಗೇಂದ್ರನಾಥನು ಬಲ್ಲವನ್ನೂ ತಿಳಿದುಕೊಂಡನು. ಕೂಡಲೇ ಪ್ರಸಿದ್ಧರಾದ ಚಿಕಿತ್ಸಕರಿಗೆ ಹೇಳಿ ಕಳುಹಿಸಿದನು. ಅನಂತರ ತಾನೇ ಸ್ವಂತವಾಗಿ ಅರಿಂದಮನ ಮನೆಗೆ ಹೋಗಿ ಅರ್ಧ ಗಂಟೆಗೆ ಸೇರಿದ್ದ ಮಹಪೂರ್ಣವಾದ ಆ ಹೊಗೆಯ ಬತ್ತಿಯನ್ನು ತೆಗೆದುಕೊಂಡು ಬಂದನು. ಕಲಕತ್ತೆಯಿಂದ ಮೂರು ನಾಲ್ಕು ಮಂದಿ ಪ್ರಸಿದ್ಧರಾದ ವೈದ್ಯರನ್ನು ಬರಹಾಯಿಕೊಂಡಿದ್ದನು. ಅಂದಿನ ರಾತ್ರಿ, ಕಡೆಯ ಪೂರ್ಣಿಮೆದಲ್ಲಿ, ಮೂರು ಮಂದಿ ಪ್ರಖ್ಯಾತ ವೈದ್ಯರುಗಳು ಯೋಗೇಂದ್ರನಾಥನ ಮನೆಯಿಂದ ಕಲಕತ್ತಾಪಟ್ಟಣಕ್ಕೆ ಪ್ರಯಾಣಮಾಡಿದರು.

ಹನ್ನೆರಡನೆಯ ಪರಿಚ್ಛೇದ

ಕುಲಸಮಳ ಉದ್ಯೋಗ

ಬೆಳಗಾದ ಮೇಲೆ ಯೋಗೇಂದ್ರನಾಥನ ಮನೆಯ ಮುಂದೆ ಒಂದು ಗಾಲ್ಕಿ ಬಂದು ನಿಂತಿತ್ತು. ಅದರೊಳಗಿಂದ, ಮುಂಜಾಗ್ರತೆ ವಾಕ್ಕೆ ಕೊಂಡ ಯುವತಿಯೊಬ್ಬಳು ಕೆಳಗೆ ಬಂದು ಮನೆಯೊಳಕ್ಕೆ ಪ್ರವೇಶ ಮಾಡಿದಳು. ಆಗ ಯೋಗೇಂದ್ರನಾಥನು ಮನೆಯಲ್ಲಿಯೇ ಇದ್ದನು. ಮನೆಯ ಆಳಾಗಳವನ್ನು ಆವಳು ಯೋಗೇಂದ್ರನಾಥನನ್ನು ಕೇಳಿದಳು. ರಮಣಿಯು ಯೋಗೇಂದ್ರನಾಥನನ್ನು ಕಂಡು ಸ್ವಲ್ಪಧೈರ್ಯದಿಂದ "ಆವರಿಗೆ ಹೇಗಿದೆ" ಎಂದು ಕೇಳಿದಳು.

ಯೋಗೇಂದ್ರನಾಥನು ಸಿದ್ಧತನಾಗಿ,—"ಯಾರಿಗೆ ಹೇಗಿದೆ? ನೀವು ಯಾರ ವಿಚಾರವಾಗಿ ಪ್ರಶ್ನೆಮಾಡುತ್ತಿದ್ದೀರಿ?—ಎಂದು ಕೇಳಿದನು.

ರಮಣಿ—ಅರಿಂದಮ ಬಾಬುಗಳ ವಿಚಾರವಾಗಿ. ಅವರು ಬದುಕಿಲ್ಲವೇನು?

ಯೋಗೇಂದ್ರ—ಡಾಕ್ಟರ ಫೂಲಸಾಹೇಬನು ಹಾಗೆ ಹೇಳಿ ಹೋದನು.

ರಮಣಿ—(ಕ್ರೋಧದಿಂದ) ಯಾರು, ಡಾಕ್ಟರ್ ಫೂಲಸಾಹೇಬನೆ? ಅನೇ ಏಶಾಷನೆ? ಹಾಗಾದರೆ ಅರಿಂದಮ ಬಾಬುವನ್ನು ಕೊಂದು ಹಾಕಿದವನು ಅವನೇ.

ಯೋಗೇಂದ್ರ—ಸರಿ! ನೀವು ಯಾರು?

ರಮಣಿ—ನಾನು ಕುಲಸಮೆ—ತಪೋಬಾಬ್ದೀನನ ಮಗಳು.

ಹೀಗೆಂದು ಹೇಳಿ ಕುಲಸಮೆಯು ಪೋಲ್ಟ್ಮಾಸುಕನ್ನು ತೆಗೆದು ಹಾಕಿ, ಹೇಳಿದಳು:—ನಾನು ಪೊದಲೇ ಬಲ್ಲವನ್ನು ತಿಳಿದುಕೊಂಡು, ಅರಿಂದಮ ಬಾಬುಗಳಿಗೆ ಎಚ್ಚರಿಕೆ ಕೊಟ್ಟಿದ್ದೆನು! ಅಯ್ಯೋ! ಆತನು ನನ್ನನ್ನು ಹುಡುಕ್ಕಿ ಬಂದು ಫಾಸಿ ನನ್ನ ಪತಾತು ನಂಬದೆ ಹೋಗಿರಬೇಕು.

ಯೋಗೇಂದ್ರನಾಥ—ಅರಿಂದಮ ಬಾಬುಗಳನ್ನು ಡಾಕ್ಟರ್ ಫೂಲಸಾಹೇಬನು ಕೊಂದು ಹಾಕಿದನೆಂಬುದು ನಿಮಗೆ ಹೇಗೆ ತಿಳಿಯಿತು?

ಕುಲಸಮೆ—ನಾನು ಫೂಲಸಾಹೇಬನ ಮುಖ ನೋಡಿದ ಪಾತ್ರದಿಂದ, ಅವನ ಮುನೋಭಾವವನ್ನು ಚೆನ್ನಾಗಿ ತಿಳಿಯಬಲ್ಲೆ; ತಾವೂ ನನ್ನ ಪತಾತನ್ನು ನಂಬುವುದಿಲ್ಲವೇನು?

ಯೋಗೇಂದ್ರ—ಯಾತಕ್ಕೆ ನಂಬಕೂಡದು? ನೀವು ಏನಹೇಳುವುದಕ್ಕೆ ಬಂದಿದ್ದೀರೋ ಹೇಳಿರಿ.

ಕುಲಸಮೆ—ಅರಿಂದಮ ಬಾಬುಗಳು ಫೂಲಸಾಹೇಬನ, ಆ ಏಷ ಬೆರತ ಹೊಗೆಯ ಸುತ್ತನ್ನು ಸೇದಿದರೋ?

ಯೋಗೇಂದ್ರ—ಹೂಂ.

ಕುಲಸಮೆ—(ಆಶ್ಚರ್ಯವಾಗಿ) ಎಂತಹ ಸರ್ವನಾಶವಾಯಿತು! ಅವರು ಬಲ್ಲೆ? ನನ್ನನ್ನು ಅವರ ಸಮಾಪಕ್ಕೆ ಕರೆದುಕೊಂಡು ನಡೆಯಿರಿ, ಅವರಿಗೆ ಈಗ ಹೇಗಿದೆ?

ಯೋಗೇಂದ್ರ—ನೀವು ಅಲ್ಲಿಗೆ ಹೋಗಿ ಮಾಡುವುದೇನು ?

ಕುಲಸಮೆ—ನಾನು ಅವರನ್ನು ಬದುಕಿಸುತ್ತೇನೆ. ಅವರು ಮೃತ್ಯು ಮುಖದಲ್ಲಿದ್ದ ನನ್ನನ್ನು ಕಾಪಾಡಿದರು; ಈ ಸಂದರ್ಭದಲ್ಲಿ ನಾನು ಅವರಿಗಾಗಿ ನನ್ನ ಎಲ್ಲ ಪ್ರಯತ್ನವನ್ನೂ ಮಾಡುತ್ತೇನೆ.

ಯೋಗೇಂದ್ರ—ನೀವು ಈಗ ಅತನನ್ನು ಯಾವರೀತಿಯಿಂದ ಬದುಕಿಸಲಾಪೆರಿ ?

ಕುಲಸಮೆ—ಅವರು ಇನ್ನೂ ಮೃತರಾಗಿಲ್ಲ—ಆ ವಿಷದಿಂದ ಸತ್ತ್ವರಹಾಗಿರುತ್ತಾರೆ. ಈಗ ಅವರನ್ನು ನೋಡಿದರೆ ಎಂತಹ ಪಂಡಿತೋತ್ತಮರೇ ಆಗಲಿ, ಅವರು ಬದುಕಿರುವರೆಂದು ಹೇಳಲಾರರು. ನಾನು ಈ ವಿಷದ ಸಂಬಂಧವಾದ ವಿಷಯುಗಳನ್ನು ಪೂರ್ಣವಾಹೇಬಸಿಂದಲೇ ಕೇಳಿದ್ದೇನೆ. ಇದನ್ನು ನಿವಾರಿಸುವ ಔಷಧದ ಹೆಸರನ್ನು ಕೂಡ ಅವ ನಿಂದಲೇ ತಿಳಿದಿದ್ದೇನೆ. ಒಂದು ದಿನ ನಮ್ಮ ಬಲತಾಯಿಗೆ ಈ ವಿಚಾರ ವನ್ನು ಕುರಿತು ಹೇಳುತ್ತಿದ್ದನು, ನಾನು ರಹಸ್ಯವಾಗಿದ್ದುಕೊಂಡು ಎಲ್ಲವನ್ನೂ ಕೇಳಿ ತಿಳಿದುಕೊಂಡಿದ್ದೇನೆ.

ಯೋಗೇಂದ್ರ—ಅತನು ಸಾಯಲಿಲ್ಲ; ಬಹುಪ್ರಯಾಸದಿಂದ ಬದುಕಿ ಕೊಂಡನು.

ಇದನ್ನು ಕೇಳಿ ಕುಲಸಮೆಯ ತಲೆಯಮೇಲೆ ಸುಖಮಯವಾದ ಸಿಡಿಲು ಬಿದ್ದಹಾಗಾಯಿತು. ನಿರತಿಶಯವಾದೊಂದು ಆನಂದದಿಂದುಂ ಟಾದ ವಿದ್ಯುತ್ಪ್ರವಾಹವು ಅವಳ ಶರೀರದಲ್ಲೆಲ್ಲಾ ಪ್ರವಹಿಸಿ, ಅವಳ ತಲೆಯೊಳಗೆ ಸಂಚಾಲನಗೊಳ್ಳುತ್ತಿರುವಂತೆ ತೋರಿತು. ಆ ಹೊತ್ತಿಗೆ ಸರಿಯಾಗಿ ಅರಿಂದಮನು ಅವಳಿದಿರಾಗಿ ಬಂದು ನಿಂತನು. ಅರಿಂದಮನ ಮುಖವು ಮ್ಲಾನವಾಗಿದೆ; ಕಾಂತಿಹೀನವಾಗಿದೆ; ದೇಹವು ಕೃಶವಾಗಿದೆ; ಕಣ್ಣುಗಳೆರಡೂ ಗುಣಿಗಿಳಿದಿವೆ. ನೋಡಿದರೆ ಅರಿಂದಮನೇ ಅಲ್ಲವೆನ್ನುವ ಹಾಗಿದೆ; ಕಾಂತಿಯುಕ್ತವಾಗಿಯೂ ಬಲಪೂರ್ಣವಾಗಿಯೂ ಇದ್ದ ಅಂತಹ ಶರೀರಕ್ಕೆ ಯಾರೋ ಮಸಿ ಬಳಿದು ಬಿಟ್ಟಿದ್ದಾರೆ. ಅರಿಂದಮನು,—ಏನು ಕುಲಸಮೆ ! ನನ್ನನ್ನು ನೋಡು

ವ್ಯದಕ್ಕಾಗಿ ಬಂದೆಯಾ? ನಾನು ಸಾಯಲಿಲ್ಲ; ಚೆನ್ನಾಗಿಯೇ ಇದ್ದೇನೆ. ಇಷ್ಟು ಶ್ರಮಪಟ್ಟುಕೊಂಡು ನೀನೇಕೆ ಇಷ್ಟುದೂರ ಬಂದೆ?—ಎಂದು ಮಂದಹಾಸದೊಡನೆ ಕೇಳಿದನು.

ಕುಲಸಚಿ—ತಾವು ಒಂದು ದಿನ ನನಗೋಸ್ಕರ ನಿಮ್ಮ ಪ್ರಾಣವನ್ನು ಏಪತ್ತಿಗೆ ಈಡುಮಾಡಿದ್ದಿರಿ; ನಾನು ತಮಗೆ ಇಂತಹ ತೊಂದರೆ ಸಂಭವಿಸಿರುವುದೆಂಬುದನ್ನು ಕೇಳಿದ್ದರಿಂದ ಒಂದು ಸಲ, ನೋಡಿಕೊಂಡಾದರೂ ಹೋಗೋಣವೆಂದು ಬಂದೆ, ಇದೇನು ಮಹಾಪ್ರಮಾದ?

ಅರಿಂದಮ—ಕುಲಸಚಿ, ನಾನು ನಿನ್ನಿಂದ ಕೆಲವು ಸಂದಿಗ್ಧಗಳನ್ನು ಕೇಳಿ ತಿಳಿದುಕೊಳ್ಳಬೇಕಾಗಿದೆ.

ಕುಲಸಚಿ—ಹೇಳಿರಿ, ನಾನು ತಮ್ಮಲ್ಲಿ ಒಂದು ಅಕ್ಷರವನ್ನೂ ಮರೆಮಾಚುವುದಿಲ್ಲ. ನಾನು ತಾಯಿತಂದೆಗಳಿಲ್ಲದ ತಬ್ಬಲಿ, ನಿಮ್ಮ ಮರೆಹೊಕ್ಕಿದ್ದೇನೆ; ತಮ್ಮಿಂದ ನನಗೆ ಅನೇಕವಾಗಿ ಉಪಕಾರವಾದೀತೆಂದು ನಂಬಿದ್ದೇನೆ. ತಾವು ನನ್ನನ್ನು ಈ ಏಪತ್ತಿನಿಂದ ಉದ್ಧಾರ ಮಾಡದಿದ್ದರೆ, ನನಗೆ ಬೇರೆ ಮಾರ್ಗವೇ ಇಲ್ಲ. ನಾನು ಈಗ ಭಯಂಕರವಾದ ಮತ್ತೊಂದು ಕಷ್ಟಕ್ಕೆ ಸಿಕ್ಕಿದ್ದೇನೆ; ಇನ್ನು ಬರಲು ಮೂರು ದಿವಸಗಳಿಳಗಾಗಿ, ನಾನು ಫೂಲಸಾಹೇಬನನ್ನು ಮದುವೆಯಾಗಲು ಸಮ್ಮತಿಸದಿದ್ದರೆ ಪಕ್ಷದಲ್ಲಿ, ಅವರು ನನ್ನನ್ನು ಕೊಂದುಬಿಡುತ್ತಾರೆ. ಅವರು ಈ ರೀತಿಯಾಗಿ ಒಂದು ಆಲೋಚನೆ ಮಾಡುತ್ತಿದ್ದ ಸಮಯದಲ್ಲಿ ನಾನು ರಹಸ್ಯವಾಗಿದ್ದುಕೊಂಡು ಅವರ ಮಾತುಕತೆಗಳನ್ನು ಒಹುದೂರ ಕೇಳಿದೆ.

ಅರಿಂದಮ—ಅವರುಗಳು ಬಂದರೆ ಯಾರು ಯಾರು? ನೀನು ಮತ್ತೆ ಯಾರ ಸುದ್ದಿ ಹೇಳುತ್ತಿರುವೆ?

ಕುಲಸಚಿ—ಇನ್ನೊಬ್ಬಳು, ನನ್ನ ಆರಾಕ್ಷಸಿಯಾದ [redacted]ತಾಯಿ.

ಅರಿಂದಮ—ಅವಳು ಕೂಡ ಈ ದುರಾಲೋಚನೆಗೆ ಒಳಗಾಗಿರುವಳೇನು?

ಕುಲಸಮೆ—ಇಷ್ಟರ ಮೋಸ–ಕೃತ್ರಿಮಗಳೆಲ್ಲವೂ ಅವಳವೇ, ಫೂಲ ಸಾಹೇಬನು ನಿಮಿತ್ತಮಾತ್ರನು. ನನ್ನ ಬಲತಾಯಿಯನ್ನು ಕೇವಲ ಸಾಮಾನ್ಯಳೆಂದು ಭಾವಿಸಬೇಡಿ. ಅವಳು ಮಾಡಲಾರದಂತಹ ಭಯಂಕರ ಕೃತ್ಯವು ಪ್ರಪಂಚದಲ್ಲಿಯೇ ಇಲ್ಲ. ನಮ್ಮ ಬಲತಾಯಿ ಫೂಲಸಾಹೇಬನ ಅಕ್ಕನ ಮಗಳಂತೆ. ಫೂಲಸಾಹೇಬನು ಕಪಟೋಪಾಯಗಳಿಂದ, ನಮ್ಮ ತಂದೆಗೆ ತನ್ನ ಆ ಅಕ್ಕನ ಮಗಳನ್ನು ಮದುವೆ ಮಾಡಿಕೊಟ್ಟನು; ಆದರೆ ಫೂಲಸಾಹೇಬನಿಗೂ ನಮ್ಮ ಬಲತಾಯಿಗೂ ಇರುತ್ತಿರುವ ವಿಶ್ವಾಸವನ್ನು ನೋಡಿದರೆ, ಮನಸ್ಸಿಗೆ ತುಂಬಾ ಅಸಹ್ಯವಾಗುತ್ತದೆ. ಅವಳು ಕುಲೀನರ ಮನೆಯ ಹೆಣ್ಣುಮಗಳೆಂದು ತೋರುವುದಿಲ್ಲ.

ಅರಿಂದಮ—ನೀನು ರಹಸ್ಯವಾಗಿದ್ದುಕೊಂಡು ನಿನ್ನೆಯ ದಿನ ಕೇಳಿದುದೇನು? ನನ್ನ ಏಕಾರವಾದ ಪ್ರಸಾಧನೆಯೇನಾದರೂ ಬಂದಿದ್ದಿತೊ?

ಕುಲಸಮೆ—ಮೊದಲು ನಿಮ್ಮ ಪ್ರಸಾಧನೆಯೇ ನಡೆಯಿತು. ಫೂಲಸಾಹೇಬನು ತಮಗೆ ಏಷ ಜೆರೆತ ಸಂತ್ತನ್ನು ಕೊಟ್ಟು ಉಪಾಯವಾಗಿ ನಿಮ್ಮನ್ನು ಮೃತ್ಯುಮುಖಕ್ಕೆ ಒಳಪಡಿಸಿದನು; ಅದರಿಂದ ಅವನು ನಮ್ಮ ಬಲತಾಯಿಯೊಡನೆ ನಗುತ ನಗುತ ಪಾತನಾಡುತ್ತಿದ್ದನು. ಅದಾದಮೇಲೆ ನನ್ನನ್ನು ಹೇಗೆ ಮುಳುಗಿಸಬಹುದು, ಯಾವ ರೀತಿಯಿಂದ ನನ್ನ ಐಶ್ವರ್ಯವೆಲ್ಲವನ್ನೂ ವಂಚಿಸಿ ತೆಗೆದುಕೊಳ್ಳಬಹುದು, ಈ ಎಲ್ಲ ವಿಚಾರಗಳನ್ನೂ ಕುರಿತು ರಹಸ್ಯವಾದ ಪರಾಮರ್ಶೆಗಳಾಗತೊಡಗಿದುವು. ಕಟ್ಟಕಡೆಯಲ್ಲಿ, ಅವರ ಕಾರ್ಯಸಿದ್ಧಿಯಾಗುವುದಕ್ಕೆ ನನ್ನನ್ನು ಕೊಲೆ ಮಾಡಬೇಕಾಗಿ ಬಂದಲ್ಲಿ ಅದನ್ನು ಕೂಡ ಮಾಡಿಯೇ ಮುಗಿಸಬೇಕೆಂದು ನಿಷ್ಕರ್ಷೆ ಆಯಿತು. ವಿಧಾತನು ಫೂಲಸಾಹೇಬರೂಪಿಯಾದ ಏಕಾಕಿಯನ್ನು ಮನುಷ್ಯ ವರ್ಗದಲ್ಲಿ ಏತಕ್ಕೆ ಸೇರಿಸಿದನೋ ತಿಳಿಯದು. ಇದೇ ಫೂಲಸಾಹೇಬನು ಕರುಣಾಮಯನಾದ ನಮ್ಮ ತಂದೆಯನ್ನು ಕೊಲೆ ಮಾಡಿದನು; ಸ್ನೇಹಮಯಿಯಾದ ತಾಯಿಯನ್ನು ಕೊಲೆ ಮಾಡಿದನು;

ನನಗಿದ್ದ ಒಬ್ಬನೇ ಅಣ್ಣನನ್ನೂ ಕೊಲೆ ಮಾಡಿದನು; ಯಾರಿಗೂ ತಿಳಿಯದಹಾಗೆ, ಯಾರೂ ಊಹಿಸಲಾಗದ ಹಾಗೆ, ಇಷ್ಟು ಮಂದಿಯನ್ನೂ ಕೊಲೆ ಮಾಡಿಬಿಟ್ಟನು; ಒಟ್ಟಿನಲ್ಲಿ ಮೂರು ಜೀವಗಳು ಈ ಕೊಲೆಪಾತಕನ ಏಷದ ದೆಸೆಯಿಂದ ಈ ಜಗತ್ತನ್ನು ಬಿಟ್ಟು ಎಲ್ಲಿಗೋ ಹೊರಟು ಹೋದುವು. ಈ ಪಿಶಾಚನು ಯಾವ ಏಷದ ದೆಸೆಯಿಂದ ಅವರುಗಳನ್ನು ಕೊಂದುಹಾಕಿದನೋ ಆದರಿಂದ ಮನುಷ್ಯನು ಒಂದೇ ದಿನದಲ್ಲಿ ಸಾಯುವುದಿಲ್ಲ—ಕೊಂಚಕೊಂಚವಾಗಿ ಕ್ಷಯಿಸಿ ಸಾಯುವನು; ಕೇವಲ ನನ್ನ ಪ್ರಯತ್ನದಿಂದಲೇ ನಮ್ಮ ತಂದೆ ಇದುವರೆಗೂ ಜೀವದಿಂದಿದ್ದನು. ನಮ್ಮ ಬಲತಾಯಿ, ನಮ್ಮ ತಂದೆ ಕುಡಿಯುವ ನೀರಿನ ಸಂಗಡ ಪ್ರತಿದಿನವೂ ಏಷವನ್ನು ಬೆರಸಿತುತ್ತಿದ್ದಳು. ನನಗೆ ಅವಕಾಶ ದೊರೆತಾಗಲೆಲ್ಲ ಆ ನೀರನ್ನು ಚೆಲ್ಲಿಬಿಟ್ಟು, ಕುಡಿಯುವುದಕ್ಕೆ ಬೇರೆ ನೀರು ಕೊಡುತ್ತಿದ್ದೆನು. ಎಲ್ಲ ದಿವಸಗಳಲ್ಲಿಯೂ ಅವಕಾಶ ದೊರೆಯುತ್ತಿರಲಿಲ್ಲ; ನಮ್ಮ ತಂದೆ ಹಾಸಿಗೆ ಹಿಡಿದು ಮಲಗಿದನಾದರೂ ಈವರೆಗೂ ಬದುಕಿದ್ದುದು ನನ್ನ ಪ್ರಯತ್ನದಿಂದಲೇ; ಇಲ್ಲವಾಗಿದ್ದಪಕ್ಷ ಒಂದು ತಿಂಗಳೊಳಗಾಗಿಯೇ ಆತನು ಇಹಲೋಕವನ್ನು ಬಿಟ್ಟು ಹೋಗಬೇಕಾಗಿರುತ್ತಿದ್ದಿತು. ಏಷವನ್ನು ಕುಡಿದೂ ಕೂಡ ತಂದೆ ಇಷ್ಟು ದಿನಗಳವರೆಗೆ ಬದುಕಿದ್ದುದನ್ನು ಕಂಡು ಫೂಲಸಾಹೇಬನೂ ನಮ್ಮ ಬಲತಾಯಿಯೂ ಬಹುವಾಗಿ ಆಲೋಚನಾಪರರಾದರು. ಇಬ್ಬರಿಗೂ ಆಲೋಚನೆ ಮಾಡುವುದೇ ಕೆಲಸವಾಯಿತು; ಮಧ್ಯೇ ಮಧ್ಯೇ ಏಷದ ಪರಿಮಾಣವನ್ನು ಹೆಚ್ಚಿಸಿ ಕೊಡುತ್ತಿದ್ದರು. ಒಂದು ದಿನ ತಂದೆಯೊಡನೆ ಈ ಪ್ರಸ್ತಾಪವನ್ನು ಮಾಡಿದೆ. ಆತನು ಹೇಗೆ ಸರಳ ಸ್ವಭಾವದವನೋ ಹಾಗೆಯೇ ಇತರರೂ ಸರಳ ಸ್ವಭಾವದವರೆಂದು ಭಾವಿಸಿರುತ್ತಿದ್ದನು. ಪರಮ ಪಾತಕಿಯಾದ ಫೂಲಸಾಹೇಬನಲ್ಲಿಯೂ ನನ್ನ ಆ ರಾಕ್ಷಸಿಯಾದ ಬಲತಾಯಿಯ ಮೇಲೆಯೂ ಆತನಿಗೆ ಅಪಾರವಾದ ವಿಶ್ವಾಸವಿದ್ದಿತು. ಆತನು ನನ್ನ ಮಾತನ್ನು ನಂಬಲಿಲ್ಲ; ಕೇಳಿದವನೇ ಸಕ್ಕ ಪರಿಹಾಸಮಾಡಿಬಿಟ್ಟನು. ಅಕಟಾ! ನಾನು ಎಂತಹ ಹತಭಾಗಿನಿ, ಇಷ್ಟು ಮಾಡಿಯೂ ತಂದೆಯನ್ನು ಉಳಿಸಿಕೊಳ್ಳಲಾರದೇ ಹೋದೆ!

ಕುಲಸಮೆಯ ನಿಸ್ತಾರವಾದ ಎರಡು ಕಣ್ಣುಗಳಲ್ಲಿಯೂ ಕಣ್ಣೀರು ತುಂಬುತ್ತ ಬಂದಿತು. ಸೆರಗಿನಿಂದ ಮುಖವನ್ನು ಮುಚ್ಚಿ ಕೊಂಡು ಕುಲಸಮೆಯು ಅಕುಲ ಹೃದಯದಿಂದ ಅಳುವುದಕ್ಕೆ ಜೋರು ಕ್ರಮುಸಿದಳು.

ಹದಿಮೂರನೆಯ ಪರಿಚ್ಛೇದ

ಕುಲಸಮೆಯ ದುಃಖ ಮತ್ತೂ ಕ್ರೋಧ

ಅರಿಂದಮನು ಅವಳನ್ನು ಸಮಾಧಾನಪಡಿಸುತ್ತಾ "ಕುಲಸಮೆ, ನಡೆದುಹೋದುದನ್ನು ಕುರಿತು ಹಂಬಲಿಸುವುದರಿಂದ ಏನೂ ಫಲವಿಲ್ಲ. ಈಗ ಆಗಿರುವುದಕ್ಕೆ ಸರಿಯಾದ ಪ್ರತೀಕಾರವಾಗುವಂತೆ ಮಾಡಬೇಕಲ್ಲವೆ? ನಿನ್ನ ತಂದೆ, ತಾಯಿ ಮತ್ತೂ ಅಣ್ಣಂ ಇವರುಗಳನ್ನು ಕೊಂದುಹಾಕಿದ ಆ ಪಾತಕಿಯು ಯಾವುದರಿಂದ ನಿಷ್ಠುರನಾಗಿ ಹೊಂದಲಾರನೋ ಅಂತಹುದನ್ನು ಮಾಡುವುದೊಂದೇ ಈಗ ನಿನ್ನ ಕರ್ತವ್ಯವಲ್ಲವೆ? ಅವನಿಗೆ ಸರಿಯಾದ ಪ್ರತೀಕಾರವನ್ನು ಮಾಡುವುದಿಲ್ಲವೇ?" ಎಂದು ಕೇಳಿದನು.

ಕುಲಸಮೆಯು ಕಣ್ಣೊರಸಿಕೊಂಡು, ಮುಖವನ್ನೆತ್ತಿ ಅರಿಂದಮನ ಮುಖವನ್ನು ಅರೆಗಳಿಗೆಯವರೆಗೆ ಕ್ರೋಧ-ನಿಸ್ಸಾರಿತ-ನೇತ್ರಗಳಿಂದ ನೋಡುತ್ತಿದ್ದಳು. ಅನಂತರ ಹೇಳಿದಳು—ಸರಿಯಾದ ಪ್ರತೀಕಾರ ಮಾಡುವುದು ಹಾಗಿರಲಿ—ಆ ಪಾಪಿಯ ಶರೀರದಲ್ಲಿ ಒಂದು ಘಾಯ ಮಾಡುವುದಕ್ಕಾದರೂ ಸರಿ, ನನ್ನ ಸರ್ವಸ್ವವನ್ನೂ ಬೆಚ್ಚ ಮಾಡುತ್ತೇನೆ. ಫೂಲಸಾಹೇಬನು ನಂದನದಂತೆ ಇದ್ದ ನಮ್ಮ ಸಂಸಾರವನ್ನು ಸ್ಮಶಾನ ಮಾಡಿಬಿಟ್ಟನು; ಈಗ ನನ್ನನ್ನು ಕೊಲ್ಲುವುದು ಸಾಧ್ಯವಾದರೆ ಆ ಪಿಶಾಚಿಗೆ ನಿಷ್ಕಂಟಕವಾದೀತು. ನಮ್ಮ ಮನೆಯಲ್ಲಿ ಇನ್ನೂ ಒಬ್ಬಾತನಿದ್ದನು. ಆತನ ಹೆಸರು ನಿರಾಜುದ್ದೀನನೆಂದು. ಈಗ್ಗೆ ಒಂದು ತಿಂಗಳಾಯಿತು; ಇದೇ ಪಿಶಾಚನು ನಮ್ಮ ಬಲತಾಯಿಯ ಸಂಗಡ ಆಲೋಚನೆ ಮಾಡಿ ಆತನನ್ನು ಎಲ್ಲಿಯೋ ಮರೆಮಾಡಿದ್ದಾನೆ. ಇದುವರೆಗೆ ಆತನ ವರ್ತ

ಮಾನವೇ ಇಲ್ಲ. ತಂದೆಗೆ ಆತನಲ್ಲಿ ತುಂಬಾ ವಿಶ್ವಾಸವಿದ್ದಿತು. ಆತನಿಗೆ ಫೂಲಸಾಹೇಬನ ಯೋಗ್ಯತೆ ತಿಳಿಯಲು ಸಾಧ್ಯವಾಗಲೇ ಇಲ್ಲ; ಫೂಲಸಾಹೇಬನ ತಂತ್ರದಿಂದ ಆ ಕೆಲಸವಾಯಿತೆಂದು ಆತನು ಒಂದು ಸಲವಾದರೂ ಸಂಶಯಪಡಲಿಲ್ಲ. ತಾನೇ ಹಾನಿಗೆ ಪಿಡಿದನು; ಏನವಾನಿಯಾನು? ಆತನನ್ನು ಮುಂಡುಕಿಸಜೇಕೆಂದು ಫೂಲಸಾಹೇಬನಿಗೇ ಹೇಳಿದನು. ಕಾರ್ಯಕ್ರಮ ಏನೂ ಆಗಲಿಲ್ಲ. ಆದರೆ, ಫೂಲಸಾಹೇಬನು ಆತನನ್ನು ನಿರ್ಬಂಧದಲ್ಲಿಟ್ಟಿರುವನೆಂದುಮಾತ್ರ ಹೇಳಬಲ್ಲೆ; ಇನ್ನೂ ಆತನನ್ನು ಕೊಂದುಹಾಕಿಲ್ಲ. ಪ್ರಸಿದ್ಧ ಡಕಾಯತನಾದ ಕಾಸೂರಾಯನ ಬಳಿ ಆತನನ್ನು ಬಂದಿಯಾಗಿ ಬಿಡಿಸಿದ್ದರೂ ಬಿಡಿಸಿರಬಹುದು—ಎಂದಳು.

ಅರಿಂದಮ—ಆತನು ನಿನಗೆ ಏನಾಗಬೇಕು?

ಕುಲಸಮೆ—ಸಿರಾಜುದ್ದೀನನ ತಂದೆ ಮಸೀರುದ್ದೀನನು ನಮ್ಮ ತಂದೆಯ ಜಮೀನಾನುದಾರಿಯಲ್ಲಿ ಮುಖ್ಯ ನಾಯಬನಾಗಿದ್ದನು; ಮಸೀರುದ್ದೀನನು ಮಾತ್ರವೇ ಏಕೆ? ಮಸೀರುದ್ದೀನನ ತಂದೆ, ತಾತ ಮುಂತಾದ ಪೂರ್ವೀಕರೆಲ್ಲರೂ ನಮ್ಮ ಜಮೀನಾದಾರಿಯಲ್ಲಿ ನಾಯಬರಾಗಿದ್ದುಕೊಂಡು ಬಹಳ ಹಣವನ್ನು ಸಂಪಾದಿಸಿದವರು. ಮಸೀರುದ್ದೀನನು ನಮ್ಮ ತಾತಂದಿರ ಕಾಲದಿಂದ ಕೆಲಸಮಾಡಿಕೊಂಡು ಬಂದವನು. ಆತನ ಕುಟುಂಬದಲ್ಲಿ ಏಕಮಾತ್ರ ಪುತ್ರನಾದ ಸಿರಾಜುದ್ದೀನನ ಏನಾಯಾರೂ ಇರಲಿಲ್ಲ. ಮಸೀರುದ್ದೀನನು ಮೃತನಾಗಿ ಈಗ್ಗೆ ಹದಿನೈದು ವರ್ಷವಾಯಿತು; ಆಗ ಆತನ ಮಗನ ವಯಸ್ಸು ಹತ್ತು ವರ್ಷ. ಸಾಯುವಾಗ ಮಸೀರುದ್ದೀನನು ಸಿರಾಜುದ್ದೀನನನ್ನು ನಮ್ಮ ತಂದೆಗೆ ಒಪ್ಪಿಸಿ ಹೋದನು; ಸಿರಾಜುದ್ದೀನನು ಬಹು ಸಣ್ಣವನೂ, ಏನಯವಂತನೂ, ಬುದ್ಧಿಯುಳ್ಳವನೂ ಆಗಿದ್ದುದರಿಂದ ಸ್ವಲ್ಪ ದಿನಗಳೊಳಗಾಗಿಯೇ ಆತನು ನಮ್ಮ ತಂದೆಯ ವಿಶ್ವಾಸಕ್ಕೆ ಸಂಪೂರ್ಣ ಭಾಜನನಾದನು. ತಂದೆಯು ತನ್ನ ಮಗನು ಹೇಗೋ ಹಾಗೆ ಆತನನ್ನೂ ಪ್ರೀತಿಸುತ್ತಿದ್ದನು. ನಮ್ಮ ತಂದೆ ಸಿರಾಜುದ್ದೀನನ ರಕ್ಷಣಾವೇಕ್ಷಣೆಗಾಗಿಯಾಗಲೀ ವಿದ್ಯಾಭ್ಯಾಸದ ವೆಚ್ಚಕ್ಕಾಗಲೀ ಆತನ ಪಿತರಾರ್ಜಿತವಾದ ಆಸ್ತಿಯಲ್ಲಿ ಒಂದು

ಕವಚಜೆಯನ್ನೂ ತೆಗೆದುಕೊಂಡದ್ದಿಲ್ಲ; ಸ್ವಂತ ವೆಚ್ಚದಿಂದಲೇ ಎಲ್ಲವನ್ನೂ ನಡಿಸಿಕೊಡುತ್ತಿದ್ದನು. ನಿರಾಜುದ್ವೀನನು ಈವರೆಗೆ ಕಲಿಕತ್ತೆಯಲ್ಲಿರುವ ಪ್ರಸಿದ್ಧನಾದ ಚಿತ್ರಗಾರನ ಹತ್ತಿರ ಚಿತ್ರ ವಿದ್ಯೆಯನ್ನೂ ಕಲಿಯುತ್ತಿದ್ದನು; ಅದಕ್ಕಾಗಿ ಕೊಡಬೇಕಾದ ಶೇತನ, ಮನೆಯ ಬಾಡಿಗೆ ಮುಂತಾದುವುಕ್ಕೋಸ್ಕರ ತಿಂಗಳಿಗೆ ಸುಮಾರು ಐವತ್ತು ರೂಪಾಯಿಗಳಾಗುತ್ತಿದ್ದುವು. ಇದನ್ನು ಕೂಡ ಅತನಿಗೆ ಕೊಡುತ್ತಿದ್ದರು. ನಿರಾಜುದ್ವೀನನು ಈವರೆಗೂ ಕಲಿಕತ್ತೆಯಲ್ಲಿರುತ್ತಿದ್ದನಷ್ಟೆ; ಮಧ್ಯೆ ಮಧ್ಯೆ ಇಲ್ಲಿಗೂ ಬರುತ್ತಿದ್ದನು; ಮೂರುನಾಲ್ಕು ದಿನಗಳ ಮಟ್ಟಿಗೆ ಇಲ್ಲಿದ್ದು ಹೋಗುತ್ತಿದ್ದನು. ಫೂಲಸಾಹೇಬನ ವೆಸಿಯಿಂದ ಸಮ್ಮ ನಂಸಾರವು ಕ್ರಮ ಕ್ರಮವಾಗಿ ಧ್ವಂಸವಾಗುತ್ತಿರುವುದನ್ನು ಅತನು ತಿಳಿದಿದ್ದನು; ಆ ವಿಚಾರವಾಗಿ ಸಮ್ಮ ತಂದೆಗೆ ಬಹಳ್ಬೀ ಸಲ ಬುದ್ಧಿವಾದ ಕೊಡುತ್ತಿದ್ದನು. ಮಾಯಾವಿಯಾದ ಫೂಲಸಾಹೇಬನ ಮೋಹಮಂತ್ರದಿಂದ ಮೈಮರೆತ ಸಮ್ಮ ತಂದೆಯು ಫೂಲಸಾಹೇಬನ ಮೇಲೆ ಕೊಂಚವಾದರೂ ಕಾಠಿಣ್ಯವನ್ನು ತೋರದಹಾಗೆ ಮೃದುವಾಗಿಹೋಗಿದ್ದನು; ಹಾಗಿದ್ದರೂ ನಿರಾಜುದ್ವೀನನು ಇಲ್ಲಿಗೆ ಬಂದಾಗಲೆಲ್ಲ ಫೂಲಸಾಹೇಬನ ವಿಚಾರವಾಗಿ ತಂದೆಗೆ ಅನೇಕ ಸಂಗತಿಗಳನ್ನು ಹೇಳುತ್ತಿದ್ದನು.

ಅರಿಂದಮ—ಇದೊಂದು ಕಾರಣದಿಂದಲೇ ಫೂಲಸಾಹೇಬನು ಅತನನ್ನು ಬಂಧಿಯನ್ನಾಗಿ ಮಾಡಿದನೋ, ಅಥವಾ ಇನ್ನೂ ಏನಾದರೂ ಉದ್ದೇಶವಿದ್ದಿತೋ?

ಇನ್ನೂ ಒಂದು ಉದ್ದೇಶವುಂಟು. ಹಾಗೆಂತ ಅದೇ ಮುಖ್ಯ ವಾದುದೆಂದು ತೋರುತ್ತದೆ—ಎಂದು ಹೇಳಿ ಕುಲಸಮೆಯು ಕೊಂಚ ಹೊತ್ತಿಗೆ ಲಜ್ಜಿತಳಾಗಿ ತಲೆ ತಗ್ಗಿಸಿದಳು.

ಅರಿಂದಮ—ಅದಾವುದು?

ಕುಲಸಮೆ ಉತ್ತರ ಹೇಳಲಿಲ್ಲ. ಹಾಗೆಯೇ ತಲೆ ತಗ್ಗಿಸಿಕೊಂಡು ಸುಮ್ಮನೆ ನಿಂತುಕೊಂಡಿದ್ದಳು. ಅರಿಂದಮನು—ನಾಚಿಕೆ ಪಟ್ಟು ನನ್ನಲ್ಲಿ ಯಾವ ವಿಚಾರವನ್ನೂ ಮುಚ್ಚಿಡಬೇಡ—ಎಂದು ಹೇಳಿದನು.

ಕುಲಸಮೆಯು ತಲೆ ತಗ್ಗಿಸಿದವಳಾಗಿಯೇ—ಅತನಿಗೆ ನನ್ನನ್ನು ಕೊಟ್ಟು ಮದುವೆಯಾಗುವುದಾಗಿ ಮಾತು ನಡೆದಿತ್ತು—ಎಂದಳು.

ಅರಿಂದಮ—ನಾನೂ ಹಾಗೆಯೇ ಊಹಿಸಿದೆ. ಚಕಾಯಿತನಾದ ಕಾಳೂರಾಯನಲ್ಲಿ ಈಗ ಅವನು ಬಂದಿಯಾಗಿದ್ದಾನೆ—ಎಂದು ನಿನಗೆ ಯಾರು ಹೇಳಿದರು ?

ಕುಲಸಮೆ—ಒಂದು ದಿನ ನನ್ನ ಬಲತಾಯಿ ಫೂಲಸಾಹೇಬಸಿಗೆ ಈ ರೀತಿಯಾಗಿ ಸಲಹೆ ಕೊಡುತ್ತಿದ್ದಳು. ನಾನು ಮರೆಯಾಗಿದ್ದು ಕೊಂಡು ಕೇಳಿದೆ.

ಅರಿಂದಮ—ಕಾಳೂರಾಯನು ಮಹಾ ಪರಾಕ್ರಮಶಾಲಿಯಾದ ದಸ್ಯು. ಅವನಿಂದ ಸಿರಾಜುದ್ದೀನನ್ನು ಬಿಡಿಸಿ ತರುವುದೆಂದರೆ ಸಾಮಾನ್ಯವಾದ ಕೆಲಸವಲ್ಲ; ಆದರೂ ನಾನು ಅತನನ್ನು ಬಿಡಿಸಿ ತರಲು ಸಾಧ್ಯವಾದಮಟ್ಟಿಗೂ ಪ್ರಯತ್ನ ಮಾಡುತ್ತೇನೆ. ಈವರೆಗೆ ಯಾವ ಪತ್ತೇದಾರನೂ ಕಾಳೂರಾಯನನ್ನು ಸೆರೆಹಿಡಿಯಲಾಗಲಿಲ್ಲ. ಅವನನ್ನು ಹಿಡಿದುಹಾಕುವುದು ಹಾಗಿರಲಿ, ಅವನು ಯಾವ ಸ್ಥಳದಲ್ಲಿ ಇದ್ದುಕೊಂಡು ಚಕಾಯಿತಿ ಮಾಡುವನೆಂಬುದನ್ನು ಸಹ ಯಾರೂ ಕಂಡುಹಿಡಿಯಲಾಗಲಿಲ್ಲ. ಅನೇಕರು ಅವನನ್ನು ಹಿಡಿಯುವದಕ್ಕೆಂದು ಹೋಗಿ ಅವನಿಗೇ ಬಲಿಯಾಗಿ ಹೋಗಿದ್ದಾರೆ. ನಾನೂ ಸಹ ಅವನನ್ನು ಹಿಡಿದುಹಾಕುವುದಕ್ಕಾಗಿ ಅನೇಕಾವರ್ತಿ ಅನೇಕವಾಗಿ ಪ್ರಯತ್ನಮಾಡಿ ನೋಡಿದೆ; ಆದರೆ ಕಾರ್ಯತಃ ಏನೂ ಮಾಡಲಾಗಲಿಲ್ಲ.

ಇದನ್ನು ಕೇಳಿ ಕುಲಸಮೆಯು ಮುಖವು ಕಾಂತಿಹೀನವಾಯಿತು. ಅವಳು ಕಾಳೂರಾಯನ ಅಖಂಡ ಪ್ರತಾಪವನ್ನು ಅರಿಂದಮನಿಂದಲೇ ಕೇಳಿದಳು. ಅದರಿಂದ ಅವನ ದೆಸೆಯಿಂದ ಸಿರಾಜುದ್ದೀನನು ಎಂದಾದರೂ ಬಿಡುಗಡೆ ಹೊಂದಬಹುದು ಎಂಬ ಆಸೆಗೆ ಅವಳ ಹೃದಯದಲ್ಲಿ ಸ್ಥಳವಿಲ್ಲವಾಯಿತು; ಸಿರಾಸೆಯಿಂದುಂಟಾದ ಅಪರಿಹಾರ್ಯವಾದ ಮಹಾವ್ಯಥೆಯಿಂದ ಅವಳ ಹೃದಯವು ಬಹುವಾಗಿ ಆವರಿಸಲ್ಪಟ್ಟಿತು.

ಕುಲಸಮಳಿಗೆ ಸಿರಾಜನಲ್ಲಿ ಎಷ್ಟರ ಪ್ರೀತಿಯಿದ್ದಿತೆಂಬುದನ್ನು ಅವಳೇ ಅರಿತಿರಲಿಲ್ಲ; ಆ ಪ್ರೀತಿ ಎಂಬುದು ಉದ್ದಾಮವಾದುದು, ಪರಿಪೂರ್ಣವಾದುದು, ಗಾಢವಾದುದು—ಆದರೆ, ಅದು ಬಹುಜಂಜಲವೂ ಅಸ್ಥಿರವೂ ಆದ ಯೌವನದ ದೆಸೆಯಿಂದ ಹುಟ್ಟಿ, ಮತ್ತಷ್ಟು ಅಸ್ಥಿರವಾದ, ಇನ್ನಷ್ಟು ಚಂಚಲ ಸ್ವಭಾವವುಳ್ಳ ಆವೇಗಮಯವಾದ ಕೇವಲ ಮದಿರೋಚ್ಛ್ವಾಸವಲ್ಲ; ಅವಳ ಆ ಪ್ರೀತಿಯು ಅವಳ ಜೀವಿತ ಕಾಲದಲ್ಲೆಲ್ಲಾ ಸ್ವಲ್ಪ ಸ್ವಲ್ಪವಾಗಿ, ಆಟಪಾಟಗಳಲ್ಲಿಯೂ, ಹಾಸ್ಯ ಪರಿಹಾಸಗಳಲ್ಲಿಯೂ, ಮತ್ತು ಕತೆಗಳಲ್ಲಿಯೂ ಉಂಟಾದ ಒಂದು ಬಗೆಯ ಪ್ರಬಲವಾದ ಆತ್ಮೀಯತೆಯ ಮೂಲಕ ದಿನೇ ದಿನೇ ಅವಳ ಹೃದಯವನ್ನು ಕೊಂಚ ಕೊಂಚವಾಗಿಯೇ ತುಂಬಿ ಪೂರ್ಣ ಮಾಡಿದ್ದಿತು. ಈವರೆಗೂ ಕುಲಸಮಳಿಗೆ ಅದರ ಬಂದು ವಿಸರ್ಗಗಳೊಂದೂ ಗೊತ್ತಾಗಿರಲಿಲ್ಲ. ಅವಳಿಗೆ ಅನುರಿಂದ ಆಶ್ಚೈನೂ ಕೊರತೆಯಿಲ್ಲ. ಕುಲಸಮಳ ಅಪಾರ್ಥವಾದ, ಅಗಾಧವಾದ, ಬಹು ಸರಳವಾದ ಮನೋವೃತ್ತಿಯು, ದೃಢಸಂಕಲ್ಪ ದಿಂದ ಪ್ರೇಮದ ಪೋಷಿಸೀಮೂರ್ತಿಯಂತೆ ಆಗಿ ಯಾವನ ಪಮಪ್ರಾಂತದಲ್ಲಿ ಆಶ್ರಯಹೊಂದಬೇಕೆಂದು ಆಸೇಕ್ಷೆಪಟ್ಟಿದ್ದಿತೋ—ಆ ಸಿರಾಜುದ್ದೀನನು ಈ ವಿಚಾರವನ್ನೆಲ್ಲಾ ತಿಳಿದಿದ್ದುದೂ ಅಲ್ಲದೆ ತನ್ನ ಹೃದಯದ ಎಲ್ಲ ಬಾಗಿಲುಗಳನ್ನೂ ತೆರೆದು, ಅವಳಿಗೋಸ್ಕರವಾಗಿ ತನ್ನ ಹೃದಯವನ್ನೇ ಸರ್ವದಾ ತೆಗೆದಿಟ್ಟಿದ್ದನು. ಇಷ್ಟೇ ಕುಲಸಮಳಿಗೆ ಯಥೇಷ್ಟವಾಗಿ ತೋರಿತು.

ಕುಲಸಮಳು ಭಯದಿಂದ—ಹಾಗಾದರೆ, ಆತನ ಪತ್ತುಗತೆಗೆ ಯಾವ ಉಪಾಯವೂ ಇಲ್ಲವೆ?—ಎಂದು ಅರಿಂದಮನನ್ನು ಕೇಳಿದಳು.

ಅರಿಂದಮ—ಈಗಿರುವ ರೀತಿಯಲ್ಲಿ ಯಾವ ಮಾರ್ಗವೂ ಕಂಡು ಬರುವುದಿಲ್ಲ. ಆತನನ್ನು ಪಡಿಸುವುದಕ್ಕೋಸ್ಕರವಾಗಿ ನಾನು ಕೂತಲೇ ಪ್ರಯತ್ನ ಮಾಡುತ್ತೇನೆ. ಫೂಲಸಾಹೇಬನು ಸಿಪ್ಪೆ ಬಲತಾಯಿಯೊಂದಿಗೆ ಮತ್ತಾವ ವಿಷಯದಲ್ಲಾದರೂ ಆಲೋಚನೆ ಮಾಡಿದುದನ್ನು ಕೇಳಿಬಲ್ಲೆಯಾ? ಕಾಮದೇವಪುರದ ತಾಣೆಗೆ ಒಬ್ಬ ಹುಡುಗಿಯ ಶವ

ವಿದ್ದ ಮೂರನೆ ಹೆಕಾರಿಯೊಂದು ಕಳುಹಿಸಿಕೊಟ್ಟ ವಿಚಾರವಾಗಿ ಅವರಿಬ್ಬರೂ ಯಾವಾಗಲಾದರೂ ಮಾತನಾಡಿದ್ದುಂಟೆ?

ಕುಲಸಚಿ—ಮೂರು ನಾಲ್ಕು ದಿನಗಳಾಗಿರಬಹುದು. ಒಂದು ದಿನ ಫೂಲಸಾಹೇಬನು ನಮ್ಮ ಬಲತಾಯಿಗೆ ಇಂತಹುದೇ ಒಂದು ವಿಷಯವಾಗಿ ಏನೇನೋ ಹೇಳುತ್ತಿದ್ದನು; ನನಗೆ ಅದು ಅಷ್ಟು ಚೆನ್ನಾಗಿ ಗೊತ್ತಾಗಲಿಲ್ಲ. ಆ ಮಾತುಗಳಾಡುತ್ತಿರುವಾಗ ಅವರಿಬ್ಬರೂ ತುಂಬಾ ನಗುತ್ತಿದ್ದರು.

ಅರಿಂದಮ—ಆ ಸಂದರ್ಭದಲ್ಲಿ ಅವರು ಯಾರ ಹೆಸರನ್ನಾಗಲೀ ಹೇಳಿದರೊ?

ಕುಲಸಚಿ—ಮೂರು ನಾಲ್ಕು ಜನರ ಹೆಸರು ಹೇಳಿದರು. ಆ ಹೆಸರುಗಳನ್ನು ಅವಕ್ಕೆ ಮೊದಲು ನಾನು ಯಾರ ಬಾಯಲ್ಲಿಯೂ ಕೇಳಿರಲಿಲ್ಲ.

ಅರಿಂದಮ—ಹೆಸರುಗಳು ಜ್ಞಾಪಕವಿದೆಯೆ?

ಕುಲಸಚಿ—ಇದೆ, ಗೋಕರಾಚಂದ, ಗೋಪಾಲಚಂದ್ರ.

ಇನ್ನೂ ಯಾರು? ಮೂರು ನಾಲ್ಕು ಮಂದಿಯ ಹೆಸರು ಕೇಳಿದೆ ನೆಂದು ಹೇಳಿದೆಯಲ್ಲ?

ಇನ್ನೆರಡು ಹೆಂಗಸರ ಹೆಸರುಗಳು; ಒಂಗಾಳೀ ಹೆಂಗಸರ ಹೆಸರು ನನಗೆ ಚೆನ್ನಾಗಿ ಜ್ಞಾಪಕವಿರುವುದಿಲ್ಲ. ಅದೂ ಅಲ್ಲದೆ ಆ ಎರಡು ಹೆಸರುಗಳೂ ಏನೋ ಹೊಸ ಮಾದರಿಯವಾಗಿದ್ದುವು.

ರೇವತಿಯೆ? ರೋಹಿಣಿಯೆ?

ಹಾ, ಕಾವ್ಯ ಸರಿಯಾಗಿ ಹೇಳಿದಿರಿ! ಈ ಎರಡು ಹೆಸರುಗಳನ್ನೂ ಆಗ ಅವರಿಂದ ಕೇಳಿದ್ದೆನು, ಈಗ ಚೆನ್ನಾಗಿ ನೆನಪಾಯಿತು.

ಈಗ, ಅರಿಂದಮನನ್ನು ಬಹುವಾಗಿ ಭ್ರಮೆಗೊಳಿಸಿದ್ದ, ಸಂಪೂರ್ಣವಾಗಿಯೂ ರಹಸ್ಯಮಯವಾದ ತೊಡಕಿನ ಸಮಸ್ಯೆಯು ದುರ್ಭೇದ್ಯವಾದ ಫರದೆಯೊಂದು ಹಠಾತ್ತಾಗಿ ಅವನ ದೃಕ್ಪಥದಿಂದ ಸರಿದು

ಹೋದಹಾಗಾಯಿತು. ಅರಿಂದಮನು ಸ್ತಂಭಿತನಾದನು. ಆತನು ಕುಲಸಮೆಯನ್ನು ಕುರಿತು,–ಈಗ ನೀನು ಮನೆಗೆ ಹೋಗಬೇಡ, ಇಲ್ಲಿಯೇ ಇರು; ಸಾಯಂಕಾಲಕ್ಕೆ ಮುಂಚಿತವಾಗಿಯೇ ನಾನು ನಿನ್ನನ್ನು ನಿಮ್ಮ ಮನೆಯಲ್ಲಿ ಬಿಟ್ಟು ಬರುತ್ತೇನೆ—ಎಂದು ಹೇಳಿದನು.

ಏತಕ್ಕೆ?

ಅನಂತರ ಅದನ್ನು ತಿಳಿಯುವೆ.

ಯೋಗೇಂದ್ರನಾಥನು ಕುಲಸಮೆಯನ್ನು ಅಂತಃಪುರದಲ್ಲಿ ಹೆಂಗಸರ ಬಳಿ ಬಿಟ್ಟುಬಂದನು; ಅನಂತರ ಅರಿಂದಮನನ್ನೂ ಕರೆದುಕೊಂಡು ತಾಣೆಯ ಕಡೆ ಹೊರಟನು.

ಹದಿನಾಲ್ಕನೆಯ ಪರಿಚ್ಛೇದ

ರಹಸ್ಯಾಲೋಚನೆ

ತಾಣೆಯೊಳಗೆ ಬಂದು ನಿರ್ಜನವಾದ ಕೊಠಡಿಯಲ್ಲಿ ಕುಳಿತುಕೊಂಡು ಯೋಗೇಂದ್ರನಾಥನೂ ಅರಿಂದಮನೂ ರಹಸ್ಯಾಲೋಚನೆ ಮಾಡತೊಡಗಿದರು. ಸುಮಾರು ಅರ್ಧ ಗಂಟೆಯ ನಂತರ ಇಬ್ಬರೂ ಹೊರಕ್ಕೆ ಬಂದರು. ಯೋಗೇಂದ್ರನಾಥನು ಒಬ್ಬ ದರೋಗನನ್ನು ಕರೆದು, ಆ ಬಟ್ಟೆಬರೆಗಳನ್ನು ತೆಗೆದುಹಾಕಿ ವೇಷಾಂತರವನ್ನು ಅವಲಂಬಿಸುವಂತೆ ಅಪ್ಪಣೆ ಮಾಡಿದನು. ಯಾರೇ ಆಗಲಿ ನೋಡಿದ ಕೂಡಲೇ ಗುರ್ತಿಸಲಾಗದ ಹಾಗೆ ತಾನೂ ಕೂಡ ವೇಷವನ್ನು ಮರೆಸಿಕೊಂಡನು. ಅರಿಂದಮನು ಅದೇ ವೇಷದಲ್ಲಿಯೇ ಇದ್ದನು. ಒಡನೆಯೇ ಆ ಮುವ್ವರೂ ಬಂದು ಗಾಡಿಯಲ್ಲಿ ಕುಳಿತು ಬಹು ಜಾಗ್ರತೆಯಾಗಿ ಫೂಲಸಾಹೇಬನ ಮನೆಯ ಕಡೆ ಹೊರಟರು. ಹೋಗುವಾಗ ಯೋಗೇಂದ್ರನಾಥನು ಪೋಲೀಸಿನವನನ್ನು ಕರೆದು, ಅವನ್ನು ಸ್ವಲ್ಪ ಹೊತ್ತಿಗೆ ಫೂಲಸಾಹೇಬನ ಮನೆಯ ಹತ್ತಿರ, ಒಂದು ರಹಸ್ಯ ಸ್ಥಳದಲ್ಲಿ, ಹತ್ತು ಮಂದಿ ಪೋಲೀಸಿನವರು ಬಂದಿರತಕ್ಕುದೆಂದು ಹೇಳಿ ಹೋದನು.

ಯಥಾ ಸಮಯದಲ್ಲಿ ಎಲ್ಲರೂ ಬಂದು ಫೂಲಸಾಹೇಬನ ಮನೆ ಸೇರಿದರು. ಫೂಲಸಾಹೇಬನ ಮನೆಯೇನೂ ಸಾಮಾನ್ಯವಾದ್ದಲ್ಲ; ಎರಡಂತಸ್ತಿನ ಉಪ್ಪರಿಗೆ. ಅಂದವಾಗಿಯೂ ರಮ್ಯವಾಗಿಯೂ ಸುಸಜ್ಜಿತವಾಗಿಯೂ ಇದೆ. ಮುಂಭಾಗದಲ್ಲಿ ಒಂದು ಸಣ್ಣ ಹೂದೋಟ. ತೋಟದಲ್ಲಿ ಜಾತಿಗೆ ಒಂದೆರಡರಂತೆ ಅನೇಕ ವಿಧವಾದ ಪುಷ್ಪವೃಕ್ಷಗಳು. ಆ ತೋಟದ ಹಾದಿಯಲ್ಲಿ ಒಬ್ಬ ಮಾಲಿ ಕುಳಿತಿದ್ದನು. ಅವನನ್ನು ಕುರಿತು ಯೋಗೇಂದ್ರನಾಥನು—ಡಾಕ್ಟರ್ ಬಾಬುಗಳು ಇದ್ದಾರೇನು? ಎಂದು ಕೇಳಿದನು.

ಉಪ್ಪರಿಗೆಯಲ್ಲಿದ್ದಾರೆ. ಸ್ವಲ್ಪ ಹೊತ್ತಿಗೆಲ್ಲಾ ಕೆಳಕ್ಕೆ ಬರುತ್ತಾರೆ—ಎಂದು ಮಾಲಿ ಹೇಳಿದನು.

ಹೊರಭಾಗದಲ್ಲಿ ಸುಸಜ್ಜಿತವಾಗಿದ್ದ ಒಂದು ಬೈತಕಖಾನೆಯಲ್ಲಿ ಮೂರು ಮಂದಿಯೂ ಹೋಗಿ ಕುಳಿತುಕೊಂಡರು. ಆಗ ಅಲ್ಲಿ ಮತ್ತೆ ಯಾರೂ ಇರಲಿಲ್ಲ. ಅರಿಂದಮನು ಸುಮ್ಮನೆ ಒಂದೇ ಕಡೆ ಬಹಳ ಹೊತ್ತು ಕುಳಿತಿರತಕ್ಕವನಲ್ಲ. ಅವನು ಸದ್ದುಮಾಡದೆ ಉಪ್ಪರಿಗೆಗೆ ಹೋದನು. ಅಲ್ಲಿ ಹೋಗಿ ನೋಡಿದನು. ಬಾಗಿಲು ಮುಚ್ಚಿದ್ದು ಒಂದು ಕೊಠಡಿಯಲ್ಲಿ ಎರಡು ವ್ಯಕ್ತಿಗಳು ಮಾತನಾಡುತ್ತಿದ್ದುದು ಕೇಳಿಸಿತು. ಆ ಇಬ್ಬರನ್ನೂ ಅವನು ಆಗ ನೋಡುವುದಕ್ಕಾಗದಿದ್ದರೂ ಕಂಠಸ್ವರದಿಂದ ಅವರಿಬ್ಬರನ್ನೂ ಚೆನ್ನಾಗಿ ಗುರ್ತಿಸಿದನು; ಒಬ್ಬನು ಫೂಲಸಾಹೇಬ, ಇನ್ನೊಬ್ಬನು ಅಂದಿನ ಗೋರಾಚಾಂದ. ಅವರು ಮಾತನಾಡುತ್ತಿದ್ದ ಕೊಠಡಿಯ ಬಾಗಿಲನ್ನು ಬೆರಳಿನಿಂದ ಮೆಲ್ಲಗೆ ತಳ್ಳಿ ನೋಡಿದನು; ಅದನ್ನು ಮುಚ್ಚಿ ಒಳಗೆ ಅಗಳಿ ಹಾಕಿದ್ದಿತು. ಅರಿಂದಮನು ಬಾಗಿಲ ಮೇಲೆ ಕಿವಿಯಿಟ್ಟು ಅವರ ಮಾತು ಕತೆಗಳನ್ನು ಆಲೈಸಿ ಕೇಳುತ್ತಿದ್ದನು.

ಫೂಲಸಾಹೇಬ—ಏನೆಂದು ಭಾವಿಸಿದೆ, ಅತ್ತ ಕಡೆಯ ಕೆಲಸಗಳೆಲ್ಲವನ್ನೂ ಮುಗಿಯಿಸಿಕೊಂಡು ಬರಲಾಗಲಿಲ್ಲವೆ?

ಗೋರಾಚಾಂದ—ಈಗ ಅದನ್ನು ಪೂರ್ತಿಮಾಡುವ ಕೆಲಸವು ಸಾಮಾನ್ಯವೇನೂ ಅಲ್ಲ.

ಫೂಲ.—ನೀನು ಸಹಾಯಕನಾಗಿದ್ದಿ, ಜುಮುಲೆ ಸಹಕರಿಸುತ್ತಿದ್ದಾಳೆ; ಹೀಗಿದ್ದೂ ಆ ಕೆಲಸವನ್ನು ಪೂರ್ತಿಮಾಡುವುದು ಕಷ್ಟವೆಂದು ಹೇಳಿದರೆ ಇನ್ನು ಸುಲಭವಾಗುವುದು ಯಾವುದು?

ಗೋರಾ.—ಜುಮುಲೆಯು ಸಹಾಯವಿಲ್ಲದೆ ಇದ್ದಿದ್ದರೆ ನೀವು ಇಷ್ಟು ಬೇಗ ಇಷ್ಟೊಂದು ಕೆಲಸಗಳನ್ನು ಮಾಡುವುದು ಎಂದಿಗೂ ಸಾಧ್ಯವಿಲ್ಲವೆಂದು ತೋರುತ್ತದೆ.

ಫೂಲ.—ಜುಮುಲೆಯೇ ನನ್ನ ಬಲಗೈ. ಆ ಕಾರಣದಿಂದಲೇ ತಂತ್ರ ಮಾಡಿ ನಾನು ಮೊದಲೇ ತಮಾಜುದ್ದೀನನ ಹೆಂಡತಿಯನ್ನು ಕೊಂದು ಅವಳ ಸ್ಥಾನದಲ್ಲಿ ಜುಮುಲೆಯನ್ನು ಪತಿವ್ರತೆಯನ್ನಾಗಿ ಮಾಡಿ ಕೂರಿಸಿದ್ದೇನೆ. ಅನಂತರ ಜನುಲೆಯು ಫರನಸೆಯು ಮೋಲೆಯೇ ತಮಾಜುದ್ದೀನನ ಗೃಹಕೃತ್ಯದಲ್ಲಿ ನನಗೆ ಸರ್ವಾಧಿಕಾರವುಂಟಾದದ್ದು. ಇಷ್ಟಾದರೂ ಜುಮುಲೆಯನ್ನು ನಂಬಿಕೊಂಡಿರುವುದಕ್ಕೆ ನನ್ನ ಅಂತರಂಗವು ಒಪ್ಪುವುದಿಲ್ಲ. ಅವಳು ನನಗೆ ಒಬ್ಬ ಉಪಪತ್ನಿಯೇ ಏನಾ ಮತ್ತೇನೂ ಇಲ್ಲ. ಅದೂ ಅಲ್ಲದೆ ಅವಳ ತೀಕ್ಷ್ಣಬುದ್ಧಿಯೂ, ಅವಳ ಸಾಮರ್ಥ್ಯವೂ, ಅವಳ ಪರಾಕ್ರಮವೂ ಅನೇಕವೇಳೆ ನನ್ನನ್ನು ಬೆರಗುಗೊಳಿಸಿವೆ; ಇದ್ದರಿಂದ ಅವಳು ನನಗೆಂದಾದರೂ ಮೋಸಮಾಡಿಯಾಳೆಂದು ಭಯವಾಗುತ್ತದೆ.

ಗೋರಾ.—ಒಬ್ಬ ಹೆಂಗಸು ನಿಮ್ಮನ್ನು ವಂಚಿಸುವುದೇ? ಅದಕ್ಕಾಗಿ ತಾವು ಇಷ್ಟು ಭಯಪಡುವುದೇ? ಕೇಳಿ ನಗೆ ಬರುತ್ತದೆ.

ಫೂಲ.—ಜುಮುಲೆಯು ಸಾಮಾನ್ಯ ಹೆಂಗಸೆಂದು ತಿಳಿಯಬೇಡ. ಜುಮುಲೆಗೆ ಇರುವ ಶಕ್ತಿ, ಜುಮುಲೆಗೆ ಇರುವ ಮನೋದಾರ್ಢ್ಯ ಇವು ಅನೇಕ ಮಂದಿ ಗಂಡಸರಿಗೂ ಇಲ್ಲ. ಅವಳು ಮಾಡಲಾರದ ಕೆಲಸ ಒಂದೂ ಇಲ್ಲ. ಜುಮುಲೆಯು ಸಹಾಯವಿರದಿದ್ದರೆ ತಮಾಜುದ್ದೀನನ

ಮನೆಯಲ್ಲಿ ಇಷ್ಟು ಸುಲಭವಾಗಿ ಮೂರು ಮಂದಿಯನ್ನು ಮೃತ್ಯುವಿಗೆ ತುತ್ತಾಗುವಂತೆ ಮಾಡುವ ಧರಪನೆಯೇ ನನಗೆ ಇರುತಿರಲಿಲ್ಲ. ಆ ಮೂರು ಕೊಲೆಗಳೂ ಎಷ್ಟು ನಿರಾತಂಕವಾಗಿ ನಡೆದುವೋ ನೀನೇ ಆಲೋಚಿಸಿ ನೋಡು; ಯಾರೊಬ್ಬರಿಗೂ ತಿಳಿಯಲಿಲ್ಲ—ಇತರರಿಗೆ ಸಂದೇಹಿಸುವುದಕ್ಕೂ ಆಸ್ಪದವಿಲ್ಲ. ಹೀಗೆ ಯಾರಿಗೂ ತಿಳಿಯದ ಹಾಗೆ ಕೊಲೆ ಮಾಡುವುದಕ್ಕಾಗಿ ನೂರೆಂಟು ಬಗೆಯ ವಿಷಗಳು ನನ್ನಲ್ಲಿವೆ; ತಪಾಜುದ್ದೀನನ ಮನೆಯಲ್ಲಿ ಯಾವ ವಿಷವನ್ನು ಉಪಯೋಗಿಸಿದೆನೋ ಅದನ್ನು ದಿನಕ್ಕೆ ಒಂದು ತೊಟ್ಟಿನಂತೆ ಕುಡಿಯುವ ನೀರಿಗೆ ಬೆರೆಯಿಸಿ ಕೊಟ್ಟರೆ ಸಾಕು—ಮನುಷ್ಯನು ಆರು ತಿಂಗಳೊಳಗಾಗಿ ಸಾಯುತ್ತಾನೆ. ಅವನು ಬಹು ಬಲಶಾಲಿಯಾಗಿ ಇದ್ದರೆ ಒಂಟು ತಿಂಗಳವರೆಗೂ ತಡೆಯುವುದು. ಹೆಂಗಸರಿಗೆ ನಾಲ್ಕು ತಿಂಗಳಿಗಿಂತ ಹೆಚ್ಚಾಗಿ ಕೊಡಬೇಕಾಗುವುದಿಲ್ಲ. ಆದರೆ ಕೆಲಸವು ಬೇಗ ಕೈಗೂಡಬೇಕಾದರೆ ವಿಷ ವೊಂದಕ್ಕೆ ಎರಡು ತೊಟ್ಟು ಅಥವಾ ಮೂರು ತೊಟ್ಟು ಬೇಕಾದರೂ ಹಾಕಿ ಕೊಡಬಹುದು. ಅದಕ್ಕಿಂತ ಹೆಚ್ಚಾಗಿ ಪ್ರಯೋಗವಾಡುವುದು ಸಾಧ್ಯವಿಲ್ಲ. ಪ್ರಯೋಗಿಸಿದರೆ ನೀರು ಸ್ವಲ್ಪ ಕಹಿಯಾಗುವುದು. ಹೊಗೆ ಬತ್ತಿಯಲ್ಲಿ ಬೆರೆಯಿಸಿ ಕೊಟ್ಟು ಅರಿಂದಮನನ್ನು ಕೊಂದೆನಲ್ಲ!—ಆ ವಿಷ ನಿಂದ ಹತ್ತು ಗಂಟೆಗಳೊಳಗಾಗಿ, ಅವನು ಎಷ್ಟೇ ಬಲವಂತನಾಗಿದ್ದರೂ ಸರಿ,—ಖಂಡಿತವಾಗಿಯೂ ಸಾಯುವನು.

ಗೋರಾಚಾರಿ—ಅರಿಂದಮನನ್ನು ಕೊಂದುಹಾಕಿದ್ದರಿಂದ ನಿನ್ನ ನಮ್ಮ ಕೆಲಸಗಳೆಲ್ಲಕ್ಕೂ ನಿರಾತಂಕವಾದ ಹಾಗೆಯೇ. ಈಗ ನಿನ್ನ ಯಾರಿಗೆ ಭಯಪಡಬೇಕು?

ಫೂಲ.—ಅರಿಂದಮನು ಸಾಮಾನ್ಯನಲ್ಲ. ಅಂದಲ್ಲದಿದ್ದರೂ, ನಿನ್ನ ನಾಲ್ಕು ದಿನಗಳಲ್ಲಿ ಸಾಧ್ಯವಾಗದೆ ಇದ್ದಿದ್ದರೂ, ಒಂದಾನೊಂದು ಕಾಲದಲ್ಲಿ ಅವನು ನನ್ನನ್ನು ಹಿಡಿದುಹಾಕಬಲ್ಲವನಾಗಿದ್ದನು. ಆ ಮನುಷ್ಯನಿಗೆ ಬುದ್ಧಿ ಬಲು ಚುರುಕು; ಹೀಗೆಂದು ಹೇಳಿ ಅವನಿಗೆ ನಾನು ಅರಗಿಸಿಕೆಯೂ ಭಯಪಟ್ಟವನಲ್ಲ. ಅಂತಹ ಹತ್ತು ಮಂದಿ ಅರಿಂದಮರು

ಸೇರಿ ಬಂದರೂ ಫೂಲಸಾಹೇಬನು ಅದನ್ನು ಕಂಡು ಭಯಪಡುತ್ತಿರ ಲಿಲ್ಲ. ಅದೃಷ್ಟ ಬಲದಿಂದ, ಭಯವೆಂದರೇನು ಎಂಬುದನ್ನೇ ಫೂಲ ಸಾಹೇಬನು ಅರಿಯನು.

ಗೋರಾ.—ಅರಿಂದಮನು ಕೇವಲ ಬುದ್ಧಿವಂತನು ಮಾತ್ರವೇ ಅಲ್ಲ; ಬಹಳ ಬಲವಂತನೂ ಹೌದು! ಆ ದಿನ ಅವನನ್ನು ಕೊಲ್ಲ ಬೇಕೆಂದುಕೊಂಡು ಆ ವನಭೂಮಿಗೆ ಕರೆದುಕೊಂಡು ಹೋದಾಗ ಅವರ ಆನುಭವವು ಚೆನ್ನಾಗಿ ಬಂದಿತು. ಎಂಥವನೇ ಆಗಲಿ ನನ್ನನ್ನು ಅಷ್ಟು ಬೇಗನೆ "ಚಿತ" * ಮಾಡುವನೆಂದು ನಾನು ತಿಳಿದಿರಲಿಲ್ಲ. ಅದೆಲ್ಲಿ ಯಾವನೂ ಹೋಗಲಿ, ಆ ಸಮಯದಲ್ಲಿ ಯದುನಾಥಗೋಸ್ವಾಮಿಯ ಕಾಗದವನ್ನು ಅರಿಂದಮನೇ ನನ್ನಿಂದ ತೆಗೆದುಕೊಂಡಿರಬೇಕೆಂದು ತೋರುತ್ತದೆ; ಆ ಕಾಗದದಲ್ಲಿ ಅನೇಕ ಏಚಾರಗಳು ಸ್ಪಷ್ಟವಾಗಿ ಬರೆ ದಿತ್ತು. ಅದರಿಂದಲೇ ಅವನು ರೇವತಿಯು ಮಾತಾಮಹಿಸಿ (ತಾಯಿಯ ಚಂದೆ) ಗೆ ವರ್ತಮಾನಕೊಟ್ಟು ರೇವತಿಯನ್ನು ಯದುನಾಥನ ಮನೆ ಯಿಂದ ಹೊರಡಿಸಿಕೊಂಡು ಹೋದನು.

ಫೂಲಸಾಹೇಬ—ನೀನು ತಪ್ಪು ತಿಳಿದಿರುವೆ. ರೇವತಿ ಅಜ್ಜನ ಮನೆಗೆ ಹೋದಳೆಂಬ ಮಾತು ಕೇವಲ ನಟನೆ. ರೇವತಿಯನ್ನು ಹುಡುಕು ವುದಕ್ಕಾಗದಿರುವುದಾದರೆ ಸಿಬಸ್ಥಿತಿ ಗೊತ್ತಾಗುವಹಾಗಿಲ್ಲ. ಅರಿಂದಮ ನನ್ನೇ ಈ ಪ್ರಪಂಚದಿಂದ ಹೊರಮಾಡಿದ್ದಾನೆಯೇಲೆ ಈಗ ಇನ್ನೇತರ ಭಯ? ಇನ್ನು ಎಲ್ಲ ಕೆಲಸಗಳನ್ನೂ ನಿರಾತಂಕವಾಗಿ ಬೇಗ ಬೇಗ ಮುಗಿಯಿಸಬಹುದು.

ಗೋರಾಚಾಂದ—ರೇವತಿಯನ್ನು ಹುಡುಕಿ ಪತ್ತೆ ಮಾಡದಿದ್ದರೆ, ಗೋಪಾಲಚಂದ್ರುಸಿಂದ ಬಂದು ಕಾಸೂ ಸಿಗುವಹಾಗಿಲ್ಲ.

ಫೂಲಸಾಹೇಬ—ಅದು ಗೊತ್ತು, ಆ ವಿಷಯದಲ್ಲಿ ನಾನು ಪ್ರಯ ತ್ನವನ್ನೇ ಮಾಡುತ್ತಿಲ್ಲವೆಂದು ತಿಳಿದಿರುವೆಯಾ! ನಾನು ಎಲ್ಲ ಏಚಾರ

* "ಚಿತ್" ಎಂದರೆ" ಕುಸ್ತಿ ಅಥವಾ ಮಲ್ಲಯುದ್ಧದಲ್ಲಿ ಇದಿರಾಳಿಯ ಪಿಡಿತಕ್ಕೆ ಸಿಕ್ಕಿ ಬಿಡಿಸಿಕೊಳ್ಳಲಾರದೆ ಮೇಲು ಮುಖವಾಗಿ ಬೀಳುವುದು.

ಗಳನ್ನೂ ಶೋಧನಮಾಡುತ್ತಿದ್ದೇನೆ. ಇದುವರೆಗೆ ಅರಿಂದಮನು ಕೇಶವಚಂದ್ರನನ್ನು ಹುಡುಕಿಕೊಂಡು ಅಲೆಯುತ್ತಿದ್ದುದನ್ನೂ ಬಲ್ಲೆ; ಆದರೆ, ಆ ಕೇಶವಚಂದ್ರನು ಇತ್ತ್ರಕಡೆ ಫೂಲಸಾಹೇಬನ ಆಕಾರದಲ್ಲಿ ಅವನ ಇದಿರಾಗಿಯೇ ಸಂಚರಿಸುತ್ತಿದ್ದನೆಂಬುದು ಆ ಮಂಕು ಸಾಂಬ್ರಾಣಿ ತಿಳಿಯುವಾರದೇ ಹೋದನು.

ಇದೆಲ್ಲವನ್ನೂ ಕೇಳಿ ಅರಿಂದಮನು ವಿಸ್ಮಿತನಾದ್ದೇನೋ ಉಂಟು;—ಆದರೆ ಬಹು ಕೊಂಚ ಮಟ್ಟಿಗೆ. ಏತಕ್ಕೆಂದರೆ, ಹೀಗೆಯೇ ಇರಬೇಕೆಂದು, ಇದಕ್ಕೆ ಮೊದಲೇ, ಅರಿಂದಮನು ಊಹಿಸಿಯೇ ಇದ್ದನು. ಈ ಮಾತನ್ನು ಕೇಳಿದಮೇಲೆ ಅರಿಂದಮನು ಬಾಗಿಲಿಗೆ ಕಿವಿಗೊಟ್ಟು, ಗಟ್ಟಿಯಾಗಿ ಉಸಿರನ್ನೂ ಆಡಿಸದೆ, ಏಕಾಗ್ರಮನಸ್ಕನಾಗಿ ಅವರ ಮಾತು ಕತೆಗಳನ್ನು ಕೇಳತೊಡಗಿದನು.

ಗೋರಾಚಾಂದ—ಈಗ ಕುಲಸವಮಳು ನಿಮ್ಮನ್ನು ಮದುವೆ ಯಾಗಲು ಒಪ್ಪದೇಹೋದರೆ, ನೀವು ತುಂಬ ಇಕ್ಕಟ್ಟಿಗೆ ಸಿಕ್ಕಿದ ಹಾಗಾಗುತ್ತದೆ.

ಫೂಲಸಾಹೇಬ—ಒಪ್ಪದೇ ಹೋದರೆ, ಅವರ ತಂದೆ, ತಾಯಿ, ಅಣ್ಣ ಮುಂತಾದವರು ಎಲ್ಲಿಗೆ ಹೋದರೋ ಅಲ್ಲಿಗೆ ಕುಲಸವಮೆಯನ್ನೂ ಕಳುಹಿಸುತ್ತೇನೆ.

ಗೋರಾ.—ಕುಲಸವಮೆಯನ್ನು ಕೊಲ್ಲುವುದರಿಂದ ಒಂದು ತೊಂದರೆಗೆ ಸಿಕ್ಕಿಬೀಳುವ ಸಂಭವವುಂಟು.

ಫೂಲ.—ಏನೂ ಇಲ್ಲ. ಅಂತಹುದೇನೂ ಇಲ್ಲ. ಯಾರಿಗಾದರೂ ತಿಳಿಯುವ ಹಾಗೆ ಕೆಲಸ ಮಾಡುತ್ತೇನೇನು? ಹಾ—ಹಾ—ಹಾ! (ಎಂದು ನಗುತ್ತಾ) ಹಾಗಾದಮೇಲೆ ನೀನೂ ಕೂಡ ನನ್ನ ಸ್ವಭಾವವನ್ನು ಚೆನ್ನಾಗಿ ತಿಳಿದುಕೊಂಡಿಲ್ಲವೆಂದು ತೋರುತ್ತದೆ. ಹಗಲನ್ನು ರಾತ್ರಿ ಯನ್ನಾಗಿ ಮಾಡಬಲ್ಲೆ, ರಾತ್ರಿಯನ್ನೇ ಹಗಲು ಮಾಡಬಲ್ಲೆ; ಇಂತಹ ಸಾಮರ್ಥ್ಯವು ಫೂಲಸಾಹೇಬನಲ್ಲಿ ಬೇಕಾದಷ್ಟು ಉಂಟು.

ಗೋರಾ.—ನಾನು ಅದನ್ನು ಚೆನ್ನಾಗಿ ಬಲ್ಲೆ. ಸಿರಾಜುದ್ದೀನನನ್ನು ಎಷ್ಟು ದಿನ ಅಲ್ಲಿ ಇಟ್ಟಿರಬೇಕು?

ಫೂಲ.—ಎಷ್ಟು ದಿನ ಅವಶ್ಯಕವೋ ಅಷ್ಟು ದಿನ.

ಗೋರಾಚಾಂದ—ಕುಲಸಮೆಯನ್ನು ಮೊದಲು ಮುದುವೆಯಾಗಿ, ಆನಂತರ ಅವನನ್ನು ಬಿಟ್ಟುಬಿಡುವೆನೇನು?

ಫೂಲ.—ಆದು ಇನ್ನೂ ನಿಶ್ಚಯವಿಲ್ಲ; ಬಂದುಮೇಳೆ ಸಿರಾಜನೂ ಸಾಯಬಹುದು. ಅವನನ್ನು ಈವರೆಗೇ ಕೊಂದುಹಾಕದಿರುವುದಕ್ಕೆ ಬಂದು ಕಾರಣವಿದೆ. ಕೇವಲ ಕುಲಸಮಳಿಗಾಗಿ ನಾನು ಅವನನ್ನು ಅಲ್ಲಿ ನಿರ್ಬಂಧಿಸಿಟ್ಟಿಲ್ಲ. ಇದರಲ್ಲಿ ನನ್ನದು ಇನ್ನೂ ಬಂದು ಗೂಢವಾದ ಅಭಿಪ್ರಾಯವುಂಟು.

ಗೋರಾ.—ಆ ಅಭಿಪ್ರಾಯವೆಂಥಾದ್ದೊ?

ಫೂಲ.—ಕ್ರಮೇಣ ತಿಳಿಯುವೆ—ಈಗ ಬೇಡ.

ಹೀಗೆಂದು ಹೇಳಿ ಫೂಲಸಾಹೇಬನು ಮೇಲಕ್ಕೆದ್ದನು; ಎದ್ದವನೇ —ನೀನು ಕುಳಿತುಕೋ, ನಾನು ಕೆಳಗೆ ಹೋಗಿ ಬೇಗನೆ ಬರುತ್ತೇನೆ. ಎಂದನು.

ಹದಿನೈದನೆಯ ಪರಿಚ್ಛೇದ

ಫೂಲಸಾಹೇಬನು ಬಂದಿಯಾದನು

ಆಗ ಅರಿಂದಮನು ಅವಸರವಸರದಿಂದ ಕೆಳಗಿನ ಬೈಠಖಾನೆಗೆ ಬಂದನು. ಅಲ್ಲಿ ಛದ್ಮವೇಷಿಗಳಾದ ಯೋಗೇಂದ್ರನಾಥನೂ ದರೋಗನೂ ಕುಳಿತಿದ್ದರು. "ಏನಾಯಿತು?" ಎಂದು ಇಬ್ಬರೂ ಅರಿಂದಮನನ್ನು ಕೇಳಿದರು.

"ಡಾಕ್ಟರು ಬರುತ್ತಿದ್ದಾನೆ" ಎಂದು ಹೇಳಿ ಅರಿಂದಮನು ಅಲ್ಲಿಯೇ ಇದ್ದ ಒಂದು 'ಬೇಂಚಿನ' ಮೇಲೆ, ಕಾಲುನೀಡಿ ಮಲಗಿದನು.

ಹಾಗೆಯೇ, ಆ ಸಮಯದಲ್ಲಿ ಅವರು ಹೇಗೆ ನಡೆದುಕೊಳ್ಳಬೇಕೆಂಬು ದನ್ನೂ ಸೂಚಿಸಿದನು. ಅದಾದನಂತರ ಹೊರಗಡೆ ಹೆಜ್ಜೆಯ ಸದ್ದಾದು ದನ್ನು ಕೇಳಿ ಒಂದು ಕಡೆಗೆ ಮುಖವನ್ನು ತಿರಿಗಿಸಿಕೊಂಡು ಕಣ್ಣು ಮುಚ್ಚಿದನು.

ಅಷ್ಟರಲ್ಲಿಯೇ ಡಾಕ್ಟರ್ ಫೂಲಸಾಹೇಬನು ಬೈಠಖಾನೆಯ ಬಾಗಿಲಿಗೆ ಬಂದನು.

ಥರ್ಡ್‌ಪೇಷಿಯಾದ ದರೋಗನು ಡಾಕ್ಟರನ್ನು ಕುರಿತು,—ನಾವು ಬಹು ದೂರದಿಂದ ಬಂದಿದ್ದೇವೆ; (ಅರಿಂದಮನನ್ನು ತೋರಿಸಿ) ಇವನಿಗೆ ಮೂರ್ಛೆರೋಗವಿದೆ; ದಿನವೊಂದಕ್ಕೆ ಎರಡುಸಲ, ಮೂರುಸಲ ಮೂರ್ಛೆ ಹೋಗುತ್ತಾನೆ; ಇದುವರೆಗೂ ಸರಿಯಾಗಿದ್ದವನು—ಇಲ್ಲಿಗೆ ಬಂದನಂತರ ರೋಗಪೀಡಿತನಾಗಿದ್ದಾನೆ; ಒಳ್ಳೆಯದೇ ಆಯಿತು, ರೋಗದ ಸ್ವಭಾವವನ್ನು ಕುರಿತು ನಾವು ಏನರಿಸಿ ಹೇಳುವುದೇ ತಪ್ಪಿತು. ತಾವೇ ರೋಗಿಯನ್ನು ನೋಡಿ ನಿಶ್ಚಯ ಮಾಡಬಹುದಷ್ಟೆ? ಎಂದು ಹೇಳಿದನು.

ಫೂಲಸಾಹೇಬನು ಯಾವ ಮಾತನ್ನೂ ಆಡದೆ ಅರಿಂದಮನ ಕಡೆಗೆ ಮುಂದರಿದನು. ಸವಿಾಪಗತನಾದನು, ನೋಡಿದನು—ಗುರ್ತಿಸಿದನು; ಆಲೋಚಿಸುವುದಕ್ಕೂ ಆಗದಮಟ್ಟಿಗೆ ಚಮತ್ಕೃತನಾಗಿ ಎರಡು ಹೆಜ್ಜೆ ಹಿಂದಕ್ಕೆ ಸರಿದು ನಿಂತನು. ಮುಖ ಭಾವವೂ, ಕಣ್ಣಿನ ಭಾವವೂ ವಿಾಪರ್ಟ್ಯುವು. ಅವನು ಕ್ಷಣಕಾಲದವರೆಗೆ ಸ್ತಂಭಿತನಾದನು. ಒಡನೆಯೇ ಅತ್ಯವಸರಗೊಂಡು ಕಿಸೆಯೊಳಗಿಂದ ಹರಿತವಾಗಿರುವ ಉದ್ದವಾದ ಚೂರಿಯನ್ನು ತೆಗೆದು, ಅರಿಂದಮನ ಎದೆಯಲ್ಲಿ ನಡ ಬೇಕೆಂದು ಮೇಲಕ್ಕೆ ಎತ್ತಿದನು. ಕಿಟಕಿಯಿಂದ ಬಂದ ಸೂರ್ಯ ರಶ್ಮಿಯು ಸೋಂಕಿ ಚೂರಿಯು ಥಳಥಳಿಸಿತು. ಹಿಂಭಾಗದಲ್ಲಿದ್ದ ಯೋಗೇಂದ್ರನಾಥನು ಎರಡು ಕೈಗಳಿಂದಲೂ ಫೂಲಸಾಹೇಬನ ಆ ಕೈಯನ್ನು ಬಲವಾಗಿ ಹಿಡಿದುಕೊಂಡುಬಿಟ್ಟನು. ಅರಿಂದಮನು ಎದ್ದು ಅವನ ಇನ್ನೊಂದು ಕೈಯನ್ನು ತನ್ನೆರಡು ಕೈಗಳಿಂದಲೂ ಅದುಮಿ

ಹಿಡಿದುಕೊಂಡನು. ದರೋಗನು ಸಾಧ್ಯವಾದಮಟ್ಟಿಗೂ ಅವರಿಬ್ಬರಿಗೆ ಸಹಾಯಮಾಡುತ್ತ ಬಂದನು; ಆ ಕೊಠಡಿಯೊಳಗೆ ಆ ನಾಲ್ಕು ಮಂದಿಯು ಹಿಗ್ಗಾಮುಗ್ಗಾ ತುಳಿದಾಟಕ್ಕೆ ಆರಂಭವಾಯಿತು. ಪೂಲಸಾಹೇಬನು ಸಾಮಾನ್ಯನಲ್ಲ,—ಪೂರಾ ಬಲವಂತ; ಅರಿಂದಮ, ಯೋಗೇಂದ್ರನಾಥ ಮತ್ತೂ ದರೋಗ ಈ ಮೂವರು ಸೇರಿದರೂ ಅವನನ್ನು ಬೇಗನೆ ಬಂದಿಯನ್ನಾಗಿ ಮಾಡಲಾಗಲಿಲ್ಲ. ಆ ಕೊಠಡಿಯಲ್ಲಿ ಪರಿಪೂರ್ಣವಾದ ಬಡಿದಾಟಕ್ಕೇ ಆರಂಭವಾಯಿತು. ಸುಮಾರು ಅರ್ಧ ಘಂಟೆಯ ನಂತರ, ಆ ಮೂರು ಮಂದಿ ಪೋಲೀಸಿನವರು, ಪ್ರಬಲ ಪ್ರಯತ್ನದಿಂದಲೂ, ಅತ್ಯುತ್ಸಾಹದಿಂದಲೂ, ಬಹು ಪರಿಶ್ರಮದಿಂದಲೂ ಪೂಲಸಾಹೇಬನ ಕೈಗೆ ಮೂರು ಜೊತೆ ಕೈಕೋಳಗಳನ್ನು ಧಡ್ರವಾಗಿ ತೊಡಿಸಿದರು.

ಪೂಲಸಾಹೇಬನು ಬಂದಿಯಾದನು

ಅನಂತರ ಗೋರಾಚಾಂದನನ್ನು ಹುಡುಕಿದರು. ಅವನು ದೊರೆಯಲ್ಲ. ಅವನು ಹೊರಗಡೆಯಾಗುತ್ತಿದ್ದ ಗದ್ದಲವನ್ನು ಕೇಳಿ, ಇದಕ್ಕೆ ಸೊಪ್ಪಲೇ, ಹಿಂಭಾಗದ ಬಂದು ಕಿಟಿಕಿಯನ್ನು ಮುರಿದು, ತನ್ನ ಪಲಾಯನದ ಪಥವನ್ನು ಪರಿಷ್ಕಾರಮಾಡಿಕೊಂಡು ಹೋಗಿದ್ದನು.

ಅರಿಂದಮನು ಮುಗುಳು ನಗೆಯಿಂದ "ಏನಯ್ಯಾ ಪಾಕ್ಟರ ಬಾಬೂ, ಅರಿಂದಮನು ಸತ್ತಿಲ್ಲವೆಂಬುದು ಈಗ ತಿಳಿಯಿತೆ?—ಮೊದಲಿನ ಹಾಗೆಯೇ ಬದುಕಿದ್ದಾನೆಂಬುದು ಗೊತ್ತಾಯಿತೆ?" ಎಂದು ಪರಿಹಾಸ ಮಾಡಿ ಕೇಳಿದನು.

ಅರಿಂದಮನ ಮಾತನ್ನು ಕೇಳಿ ಪೂಲಸಾಹೇಬನ ಮುಖದಲ್ಲಿ ಬಹುದಿನದಿಂದ ರೂಢಿಗೆ ಬಂದ, ಕುಟಿಲ ಭಾವದಿಂದ ಕೂಡಿದ, ಅಪೂರ್ವ ರಹಸ್ಯಮಯವಾದ, ಹಾಗೆಯೇ ಅಮಂಗಳ ಸೂಚಕವಾದ ಮಂದಹಾಸವು ಕಾಣಿಸಿತು. ಅವನು ಆ ನಗೆಯೊಡನೆ ದರ್ಪ ಸಹಿತನಾಗಿ,—ಪೂಲಸಾಹೇಬನು ಬದುಕಿರುವವರೆಗೆ ಅರಿಂದಮನು

ಸಾಯದಿದ್ದರೂ ಸಾಯುವುದಕ್ಕೆ ಏಳಂಬವಾಗದು.—ಅವರೆಗೆ, ತಾನು ನಿರಾಪದನೆಂದು ಅರಿಂದಮನು ಭಾವಿಸುವುದಾದರೆ ಅದು ಕೇವಲ ಭ್ರಮೆ—ಎಂದು ಮೆಲ್ಲಗೆ ಹೇಳಿದನು. ಅನಂತರ ತಲೆಯನ್ನೆತ್ತಿಕೊಂಡು, —ಕೇಳಯ್ಯಾ ಅರಿಂದಮಾ! ಎಂದಾದರೂ ಸರಿ, ಎಂತಹ ಕೌಶಲದಿಂದಾದರೂ ಸರಿ, ನಿಮ್ಮಗಳ ಕೈಯಿಂದ ತಪ್ಪಿಸಿಕೊಂಡುಹೋದೆನಾದರೆ, ಇದೇ ಫೂಲಸಾಹೇಬನು ಮತ್ತಷ್ಟು ಕಠೋರತರಭಾವದಿಂದ, ಇನ್ನೂ ಆಶ್ಚರ್ಯಕರವಾದ ಕೌಶಲದೊಡನೆ ನಿನ್ನನ್ನು ಮೃತ್ಯುಮುಖಕ್ಕೆ ತುತ್ತು ಮಾಡುವನೆಂಬುದು ನಿನಗೆ ಅನುಭವದಿಂದ ಗೊತ್ತಾಗಿರಲಿ—ಎಂದು ಹೇಳಿ ಕಬ್ಬಿಣದ ಕೈಕೋಳಗಳಿಂದ ಬಂಧಿಸಿದ ಕೈಗಳೆರಡನ್ನೂ ಕೋಪದಿಂದ ಮೇಲಕ್ಕೆತ್ತಿದನು. ಕೈಕೋಳಗಳಿಗೆ ಪರಸ್ಪರ ಪೆಟ್ಟುಬಿದ್ದಾಗಲೆ ಒಡನೊಡನೆ ಝನ್ ಝನ್ ಶಬ್ದವಾಯಿತು.

ಎಲ್ಲರೂ ಸೇರಿ ಫೂಲಸಾಹೇಬನನ್ನು ಠಾಣೆಯ ಕಡೆಗೆ ಕರೆದುಕೊಂಡು ಹೊರಟರು. ಈ ಮೊದಲೇ ಯೋಗೇಂದ್ರನಾಥನು ಬರಹೇಳಿದ್ದ ಪತ್ತೆ ಮುಂದಿ ಪೋಲೀಸಿನವರು ಇವರಿಗೆ ಇದಿರಾಗಿ ಬಂದರು.

ಅರಿಂದಮನು ಒಬ್ಬ ಪೋಲೀಸಿನವನನ್ನೂ ಆ ದರೋಗನನ್ನೂ ಜತೆಯಲ್ಲಿ ಕರೆದುಕೊಂಡು ಕುಲಸಮಳ ಮನೆಯ ಕಡೆ ಹೊರಟನು. ಮಿಕ್ಕವರೆಲ್ಲರೂ ಫೂಲಸಾಹೇಬನನ್ನು ಕರೆದುಕೊಂಡು ಠಾಣೆಗೆ ನಡೆದರು.

ಹದಿನಾರನೆಯ ಪರಿಚ್ಛೇದ

ಜುಮಲೆಯು ಬಂದಿಯಾದಳು

ಫೂಲಸಾಹೇಬನು ಬಂದಿಯಾದನು, ಅವನು ಕೊಲೆಪಾತಕಿ, ಅವನು ದಸ್ಯು, ಅವನು ಮೋಸಗಾರ ಮತ್ತೂ ಅವನು ಭಯಂಕರ ಪಿಶಾಚ; ಅವನನ್ನು ಖಂಡಿತವಾಗಿಯೂ ಗಲ್ಲಿಗೆ ಹಾಕಿಯೇ ಹಾಕುವರು—ಎಂಬ ಈ ಸುದ್ದಿಯು ಸ್ವಲ್ಪ ಕಾಲದೊಳಗಾಗಿ ನಾಲ್ಕು

ಕಡೆಯೂ ಹಬ್ಬಿ ಹರಡಿತು. ಜುಮಲೆ ಉರಫ್ ಮತಿಜೇಬಿಯು ಮನೆಯಲ್ಲಿಯೇ ಕುಳಿತು ಈ ಸುದ್ದಿಯನ್ನು ಕೇಳಿದಳು. ಮೊದಲು ನಂಬಲಿಲ್ಲ; ಕೇಳಿ ನಕ್ಕುಬಿಟ್ಟಳೇ ಹೊರತು ಆ ಮಾತನ್ನು ಮನಸ್ಸಿಗೆ ತೆಗೆದುಕೊಳ್ಳಲೇ ಇಲ್ಲ. ಆನಂತರ ಅನೇಕರ ಬಾಯಲ್ಲಿ ಇದೊಂದೇ ವರ್ತಮಾನವನ್ನು ಕೇಳಿದನಂತರ ನಂಬಲೇಬೇಕಾಗಿ ಬಂದಿತು. ಆಗ ಅವಳು ತನ್ನ ಶಯನ ಮಂದಿರಕ್ಕೆ ಹೋಗಿ, ಬಾಗಿಲನ್ನು ಮುಚ್ಚಿ, ಒಳಗಡೆ ಅಗಳಿ ಹಾಕಿಕೊಂಡು, ಬರುಗಾಳಿಗೆ ಸಿಕ್ಕಿದ ಮಾಧವೀ ಲತೆಯಂತೆ ನಿಸ್ತೇಜವಾದ ತನ್ನ ಶರೀರವನ್ನು ಪ್ರಶಸ್ತವಾದ ಹಾಸುಗೆಯಮೇಲೆ ಹರಹಿದಳು. ಬಗೆ ಬಗೆಯಾದ ಕೆಟ್ಟ ಭಾವನೆಗಳಿಂದ ಅವಳ ಹೃದಯವು ಉಪದ್ರವಗೊಂಡುದೂ ಅಲ್ಲದೆ ಅತಿವ್ಯಾಚಾರಕ್ಕೂ ಈಡಾಯಿತು.

ಈ ವೇಳೆಗೆ ಸರಿಯಾಗಿ, ಆ ಮುಚ್ಚಿದ್ದ ಬಾಗಿಲಮೇಲೆ ಹೊರಗಿನಿಂದ ಯಾರೋ ಕೈತಟ್ಟಿ, ''ಗುಂ ಗುಂ'' ಶಬ್ದವಾಗತೊಡಗಿತು. ಜುಮಲೆಯು ಗಾಬರಿಯಿಂದ ಎದ್ದು ಕುಳಿತಳು. (ನಾವು ಜುಮಲೆಯನ್ನು ಇನ್ನು ಮುಂದೆ ಮತಿಜೇಬಿ ಎಂದು ಹೇಳದೆ ಇಲ್ಲಿಂದಾಚೆಗೆ ಜುಮಲೆ ಎಂದೇ ಹೇಳುವೆವು.) ಜುಮಲೆಯು ದೃಢ ಸ್ವರದಿಂದ ''ಯಾರದು?'' ಎಂದು ಕೇಳಿದಳು.

ಹೊರಗಡೆಯಿಂದ, ''ನಾನು, ಅಮಿನಾ'' ಎಂದು ಹೆಂಗಸಿನ ಕಂಠದಿಂದ ಉತ್ತರ ಬಂದಿತು.

ಅಮಿನಾ ಎಂಬುವಳು ತಮಿರಾಜುದ್ದೀನನ ಸಂಸಾರಕ್ಕೆ ಸೇರಿದ ಯುವತಿಯಾದ ದಾಸಿ. ಆದರೆ ಅವಳು ದಾಸಿಯಹಾಗೆ ಇರುತ್ತಿರಲಿಲ್ಲ. ಅವಳು ತನ್ನ ಬುದ್ಧಿ-ಕುಶಲತೆಯಿಂದ ತನ್ನ ಯಜಮಾನನ ಮಗಳಿಗೆ ಸಂಗಾತಿಯಾಗಿದ್ದಳು.

ಜುಮಲೆ—ಯಾತಕ್ಕೆ? ಏನು ಬೇಕೆ?

ಅಮಿನಾ—ಬಾಗಿಲು ತೆರೆಯಿರಿ, ಹೇಳುತ್ತೇನೆ. ಅನೇಕ ವಿಷಯುಗಳಿವೆ.

ಜುಮುಲೆ ಎದ್ದು ಬಾಗಿಲನ್ನು ತೆರೆದಳು ; ನೋಡಿದಳು. ಹಜಾರವನ್ನು ದಾಟಿ, ಬಾಗಿಲ ಬಳಿಯಲ್ಲಿಯೇ ಅರಿಂದಮ, ಒಬ್ಬ ದರೋಗ, ಒಬ್ಬ ಪೋಲೀಸಿನವ–ಇಷ್ಟು ಮಂದಿ ಭಯಂಕರಾಕಾರದಿಂದ ನಿಂತಿದ್ದಾರೆ. ಆಮಿನಾ ನಗುತ್ತಾ ಓಡಿಹೋಗಲು ಪ್ರಯತ್ನಿಸಿದಳು. ಇದೆಲ್ಲವನ್ನೂ ಕಂಡುದೇ ತಡ, ಜುಮುಲೆಯ ಮೈ ನಡುಗಿತು. ಘೋರಸಾಹೇಬನು ಸಿಕ್ಕಿಬಿದ್ದುದರಿಂದ ಎಲ್ಲ ವಿಷಯಗಳೂ ಬಹಿರಂಗಗೊಂಡಿರುವುದೆಂದು ಅವಳು ತಿಳಿದಳು. ಸಾಲದುದಕ್ಕೆ ಆಮಿನಳು ಯುಕ್ತಿಯಿಂದ ಅವಳನ್ನು ಪೋಲೀಸರಿಗೆ ಹಿಡಿದುಕೊಟ್ಟಿರುವಳು! ಇದನ್ನೂ ಅವಳು ಊಹಿಸಿದಳು. ದಾರುಣವಾದ ಕ್ರೋಧದಿಂದ ಅವಳ ಮುಖವೂ ಕಣ್ಣುಗಳೂ ಕೆಂಪೇರಿದುವು ; ಕಣ್ಣುಗಳು ಬೆಂಕಿಯ ಕೆಂಡದ ಹಾಗೆ ಜ್ವಲಿಸತೊಡಗಿದುವು. ಜುಮುಲೆಯು ಯಾವ ಮಾತನ್ನೂ ಆಡಲಾರದೇ ಹೋದಳು ; ಆ ಕ್ಷಣವೇ,—ಈ ಅಂಶವನ್ನು ಓದುವುದಕ್ಕೆ ಪಾತಕರಿಗೆ ಎಷ್ಟು ಸಮಯ ಬೇಕಾಗುವುದೋ ಅದರ ಶತಾಂಶದಲ್ಲಿ ಒಂದಂಶವೂ ಇಲ್ಲವೆನ್ನುವಷ್ಟರೊಳಗಾಗಿ–ಜುಮುಲೆಯು ಬೇಗನೆ ಹೋಗಿ ಆಮಿನಳ ಕೇಶರಾಶಿಯನ್ನು ಎಡದ ಕೈಯಿಂದ ಹಿಡಿದೆಳೆದಳು. ಸಂಗಡಲೇ ಇನ್ನೊಂದು ಕೈಯಿಂದ ನಡುಮನೆಯಲ್ಲಿ ಮುಚ್ಚಿರಿಸಿಕೊಂಡಿದ್ದ, ಹಡವಾಗಿ ಸಾಣೆಹಿಡಿದು ಹೊಸದಾಗಿದ್ದ ಉದ್ದವಾದೊಂದು ಬಾಕನ್ನು ಹೊರಕ್ಕೆ ತೆಗೆದು, ಅವಳ ಎದೆಯಲ್ಲಿ ಸಂಪೂರ್ಣವಾಗಿ ನಟ್ಟುಬಿಟ್ಟಳು. ಅದು ಹೃದಯವನ್ನು ಭೇದಿಸಿಕೊಂಡು ಬೆನ್ನಿನಲ್ಲಿ ಕಾಣಿಸಿಕೊಂಡಿತು. ಜುಮುಲೆಯು ಆಲಸ್ಯಮಾಡದೆ ಬಾಕನ್ನು ಸೆಳೆದುಕೊಂಡಳು. "ಅಪ್ಪಾ, ಅಪ್ಪಾ, ಹೋದೆನಲ್ಲೇ!" ಎಂದು ಹೇಳುತ್ತ, ಆಮಿನಾ ಅಲ್ಲಿಯೇ ಬಿದ್ದುಬಿಟ್ಟಳು. ರಕ್ತದಲ್ಲಿ ತೊಯ್ದಿದ ಅವಳ ಶರೀರವು ರಕ್ತದ ಕೋಡಿಯಲ್ಲಿ ಹೊರಳಾಡುತ್ತಿದ್ದಿತು. ಹಾಗೆಯೇ ರಕ್ತವು ಪ್ರಬಲ ವೇಗದಿಂದ ಪರಿದುಬಂದು ಆ ಕೊಠಡಿಯ ಅನೇಕ ಭಾಗಗಳನ್ನು ತೊಯಿಸಿತು. ಆ ಸಮಯದಲ್ಲಿ ಆ ಪಿಶಾಚಳ ಇದಿರಿಗೆ ಹೋಗುವುದು ಎಷ್ಟು ಭಯಂಕರವೆಂಬುದನ್ನು ಪಾತಕರು ಸುಲಭವಾಗಿ ಊಹಿಸಬಲ್ಲರು. ದರೋಗನೂ ಪಹರೆಯವನೂ ಭಯಪಟ್ಟು ಎರಡು ಹೆಜ್ಜೆ ಹಿಂದಕ್ಕೆ ಸರಿದರು. ಅರಿಂದಮನು ಈ ಸಮಯ

ದಲ್ಲಿ ಭಯಪಟ್ಟರೆ ನಡೆಯುವುದಿಲ್ಲ, ಅದರಿಂದ ಕೆಡಕಾಗುವ ಸಂಭವ ಬಂದರೂ ಬಂದೀತು,—ಎಂದು ಊಹಿಸಿ, ಜುಮಲೆಯು ಅಮಿನಳ ಹೃದಯದಿಂದ ಬಾಕಸನ್ನು ಎಳೆದು ಹಿಡಿದುಕೊಂಡಕೂಡಲೆ, ಅರಿಂದಮನು ಓಡಿಹೋಗಿ ಬಾಕಿಸೊಂದಿಗೆ ಅವಳ ಕೈಗಳನ್ನು ಭದ್ರವಾಗಿ ಹಿಡಿದು ಕೊಂಡನು. ದರೋಗನೂ ಪಹರೆಯವನೂ ಆಗ ಆತುರಗೊಂಡು ಜುಮಲೆಯ ಕೇಶರಾಶಿಯನ್ನು ಹಿಡಿದು ಎಳೆಯತೊಡಗಿದರು. ಆದರೆ ಜುಮಲೆಯು ಆಗ ಕೆಲಸಮಾಡಲಾಗದ ಬಲಗೈಯಿಂದ ಆ ಬಾಕಸನ್ನು ಎಡದ ಕೈಗೆ ತೆಗೆದುಕೊಂಡು ತಿರುಗುತ್ತಾ ಅರಿಂದಮನಿಗೆ ಗಾಯ ಪಡಿಸುವ ಪ್ರಯತ್ನ ಮಾಡಿದಳು. ಅದು ಅರಿಂದಮನಿಗೆ ತಗಲದೆ ಗುರಿತಪ್ಪಿ ಪಕ್ಕದಲ್ಲಿ ನಿಂತಿದ್ದ ಪಹರೆಯವನ ನಡುಬಿಗೆ ತಗಲಿ ನಾಟಿ ಕೊಂಡಿತು. ಎರಡು ಕೈಗಳಿಂದಲೂ ಗಾಯವನ್ನು ಅದುಮಿ ಹಿಡಿದು ಕೊಂಡು ಅಮಿನಳಂತೆ ಅವನೂ ರಕ್ತದಿಂದ ತೊಯ್ದ ದೇಹದಿಂದ ನೆಲದಮೇಲೆ ಬಿದ್ದು ಒದ್ದಾಡತೊಡಗಿದನು. ಆಗ ದರೋಗನು ಎರಡು ಕೈಗಳಿಂದಲೂ ಜುಮಲೆಯ ಕೈಯನ್ನು ಬಾಕಿನ ಸಮೇತವಾಗಿ ಹಿಡಿದು ಕೊಂಡನು. ಅರಿಂದಮನು ಬಲಾತ್ಕಾರವಾಗಿ ಅವಳ ಕೈಯಿಂದ ಬಾಕನ್ನು ಕಸರಿಕೊಂಡನು. ಹೀಗೆ ಆಡುವುದರಲ್ಲಿ ಅವನ ಕೈಗೂ ಒಂದೆರಡು ಕಡೆ ಗಾಯವಾಗಿ ರಕ್ತ ಸೋರತೊಡಗಿತು; ಅರಿಂದಮನು ಗಾಯದಕಡೆ ಗಮನಕೊಡದೆ, ಜುಮಲೆಯ ಕೈಗೆ ಒಂದು ಜತೆ ಕೈಕೋಳ ಗಳನ್ನು ತೊಡಿಸಿಬಿಟ್ಟನು.

ಜುಮಲೆಯು ಬಂದಿಯಾದಳು

ಇದಕ್ಕೆ ಮೊದಲು ಅರಿಂದಮನು ಜುಮಲೆಯನ್ನು ಹಿಡಿಯುವುದು ಎಷ್ಟು ಸುಲಭವೆಂದು ಎಣಿಸಿದ್ದನೋ ಕಾರ್ಯತಃ ಅದು ಹಾಗೆ ನಡೆಯಲಿಲ್ಲ. ಆಗ, ಜುಮಲೆಯಂತೆ ಪ್ರಖರಳೂ, ಪ್ರಬಲಳೂ, ದುರ್ದಮಸ್ತ್ರೀಯಳೂ ನಿಷ್ಣಾತಳೂ ಆದ ಮತ್ತೊಬ್ಬ ಹೆಂಗಸನ್ನು ತಾನು ನೋಡಿದ್ದಿಲ್ಲವೆಂದು ಅರಿಂದಮನು ತಿಳಿದನು. ಇಬ್ಬರನ್ನು ಗಾಯಪಡಿಸಿದನಂತರ ಅವಳು ಬಂದಿಯಾದಳು. ಜುಮಲೆಯು ಅರಿಂದಮನನ್ನು ಕುರಿತು

ದೃಢ ಸ್ವರದಿಂದ,—ಅರಿಂದಮ, ನಿನ್ನ ಹಣೆಯ ಬರಹ ಚೆನ್ನಾಗಿದ್ದಿತು. ಆದರಿಂದಲೇ ಇಂದು ನೀನು ನನ್ನ ಕೈಯಿಂದ ಬದುಕಿಕೊಂಡೆ; ಇನ್ನು ಕೊಂಚ ಅವಕಾಶ ಸಿಕ್ಕಿದ್ದರೆ, ಇಷ್ಟು ಬೇಗ ನಸ್ಯಿಂದ ಆಯುಧವನ್ನು ಕಸರಿಕೊಳ್ಳನೆ ಇದ್ದಿದ್ದರೆ, ನಿನ್ನ ರಕ್ತದಿಂದ ನಾನು ಸ್ನಾನವಾಡುವ ದನ್ನು ನೋಡಬಹುದಾಗಿದ್ದಿತು!—ಎಂದು ಹೇಳಿದಳು.

ಫೂಲಸಾಹೇಬನ ಉಪಪತ್ನಿಯು ಏಷಯದಲ್ಲಿ ಇದೇನೂ ಆಶ್ಚರ್ಯಕರವಾದ ಸಂಗತಿಯಲ್ಲ—ಎಂದು ಅರಿಂದಮನು ಹೇಳಿದನು.

ಜುಮುಲೆ—ನಾನು ಫೂಲಸಾಹೇಬನ ಉಪಪತ್ನಿಯೆ? ಈ ಸುಳ್ಳು ಮಾತನ್ನು ನಿನಗೆ ಹೇಳಿದವರು ಯಾರು?

ಅರಿಂದಮ—ಜುಮುಲೆ, ನಾನು ಫೂಲಸಾಹೇಬನಿಂದಲೇ ಎಲ್ಲವನ್ನೂ ಕೇಳಿದೆ. ನೀನು ಏಷಿಯನ್ನು ಕೊಟ್ಟು ಕುಲಸಮೆಯ ತಾಯಿ, ತಂದೆ, ಅಣ್ಣ ಎಲ್ಲರನ್ನೂ ಕೊಂದಿರುವೆ. ಈ ಏಚಾರವನ್ನೂ ಅವನಿಂದಲೇ ಕೇಳಿದೆನು.

ಜುಮುಲೆ—ಸುಳ್ಳು ಮಾತು! ಇದನ್ನೂ ಫೂಲಸಾಹೇಬನು ಒಪ್ಪಿಕೊಂಡನೆ?

ಅರಿಂದಮ—ಹೂಂ.

ಜುಮುಲೆ—ಹಾಗಾದರೆ ನಾನೂ ಒಪ್ಪಿಕೊಳ್ಳುತ್ತೇನೆ. (ಕ್ಷಣಕಾಲ ಸುಮ್ಮನಿದ್ದು) ಈಗ ನಸ್ಯನ್ನು ಎಲ್ಲಿಗೆ ಕರೆದುಕೊಂಡು ಹೋಗುವೆ?

ಅರಿಂದಮ—ನಿನ್ನ ದುಷ್ಕಾರ್ಯಗಳಿಗೆಲ್ಲ ಸರಿಯಾದ ಪ್ರಾಯಶ್ಚಿತ್ತವು ಎಲ್ಲಿಯಾಗುವುದೋ ಅಲ್ಲಿಗೆ.

ಜುಮುಲೆ—ನಡೆ ಬರುತ್ತೇನೆ. ಆದರೆ ತಿಳಿಗೇಡಿಯಾದ ಅರಿಂದಮನೇ! ಇದುವಾತ್ರ ಚ್ಯಾಪಕವಿರಲಿ. ಸರ್ಪಕ್ಕಿಂತಲೂ ಭಯಂಕರಳಾದ ಜುಮುಲೆಯನ್ನು ಕೆಣಕಿದುದರಿಂದ ನೀನು ಒಳ್ಳೆಯ ಕೆಲಸ ಮಾಡಿದ ಹಾಗಾಗಲಿಲ್ಲ. ನೀನು ಉದ್ದೇಶಪೂರ್ವಕವಾಗಿ ಸರ್ಪದ ಪ್ಪೈ ಚುಚ್ಚುತ್ತಿದ್ದೀಯೆ. ಇದಕ್ಕೆ ಸರಿಯಾದ ಪ್ರತಿಫಲವನ್ನು ಒಂದಲ್ಲ ಒಂದು ದಿನ ನೀನು ಅನುಭವಿಸಲೇ ಬೇಕಾಗುವುದು.

ಅರಿಂದಮ—(ವ್ಯಂಗ್ಯ ಸ್ವರದಿಂದ) ಅದಕ್ಕಾಗಿ ನೀನು ಆಲೋಚಿಸ ಬೇಕಾದ್ದಿಲ್ಲ. ನನ್ನ ವಿಚಾರವನ್ನು ಕುರಿತು ಆಲೋಚಿಸಿಕೊಳ್ಳುವುದಕ್ಕೆ ನನಗೆ ಬೇಕಾದಷ್ಟು ಕಾಲವಿದೆ. ಅರಿಂದಮನು ನಿನ್ನಂತಹ ಹತ್ತುಮಂದಿ ಜುಮಲೆಯರನ್ನಾದರೂ ಹುಲ್ಲಿಗಿಂತ ಹಗುರವಾಗಿ ಕಾಣುವನು.

ಜುಮಲೆಯು ಪರಿಹಾಸಮಾಡುವಳಂತೆ ಒಂದು ಸಲ ಗಟ್ಟಿಯಾಗಿ ನಕ್ಕಳು. ಆನಗೆಯು ಸಂಗಡಲೇ—ಹೋಗೋ ಹೋಗೋ ಅರಿಂದಮ, ಇನ್ನೂ ತಲೆಯೆತ್ತಿಕೊಂಡು ಮಾತನಾಡಬೇಡ, ಛೀ! ಛೀ! ಒಬ್ಬ ಹೆಂಗಸನ್ನು ಹಿಡಿವುದಕ್ಕೆ, ಒಂಟಿಯಾಗಿ ಬರಲು ನಿನಗೆ ಧೈರ್ಯವಿಲ್ಲ ವಾಯಿತು! ಗುಂಪುಕಟ್ಟಿಕೊಂಡು ಬಂದಿರುವ ನಿನ್ನ ಯೋಗ್ಯತೆಗೆ ಧಿಕ್ಕಾರವಿರಲಿ! ನಿನ್ನಂತಹ ಹೇಡಿಯ ಶರೀರದಲ್ಲಿ ಅಸ್ತ್ರಾಘಾತ ಮಾಡ ದಿದ್ದುದರಿಂದ ಅನುಕೂಲವೇ ಆಯಿತೆಂದು ಭಾವಿಸುತ್ತೇನೆ; ಹಾಗೆ ಮಾಡಿದ್ದಪಕ್ಷದಲ್ಲಿ, ನನ್ನ ಕೈಗೆ ಕಳಂಕವುಂಟಾಗುತ್ತಿದ್ದಿತು—ಎಂದು ಹೇಳಿದಳು.

ಜುಮಲೆಯನ್ನು ಕರೆದುಕೊಂಡು ಅರಿಂದಮನೂ ದರೋಗನೂ ತಾನೆಗೆ ಹೊರಟರು. ಈ ಸುದ್ದಿಯನ್ನು ಕೇಳಿ ಗ್ರಾಮದಲ್ಲಿ ಇನ್ನೊಂದು ಗುಸುಗುಂಪಲು ಹುಟ್ಟಿ ಹರಡುತ್ತಿದ್ದಿತು.

ಸ್ವಲ್ಪ ಹೊತ್ತಿನೊಳಗಾಗಿ ಆಮಿನಾ ಮೃತಳಾದಳು. ಪೆಟ್ಟು ಅಷ್ಟು ಅಪಾಯಕರವಾಗಿ ಬೀಳದಿದ್ದ ಕಾರಣ ಆ ಪಹರೆಯವನ ಪ್ರಾಣವು ಈ ಸಲಕ್ಕೆ ಉಳಿದುಕೊಂಡಿತು.

ಫೂಲಸಾಹೇಬ ಮತ್ತೂ ಜುಮಲೆ—ಇಬ್ಬರನ್ನೂ ಸ್ಥಳದ ಬಂದೀ ಖಾನೆಯ ಒಂದು ಕೊಠಡಿಯಲ್ಲಿ ನಿರ್ಬಂಧದಲ್ಲಿರಿಸಿದರು; ಇದರ ಮೇಲೆ, ಅವರಿಬ್ಬರನ್ನೂ ಜಾಗರೂಕತೆಯಿಂದ ನೋಡಿಕೊಳ್ಳುವುದ ಕ್ಕೋಸ್ಕರ ಪ್ರಹರಿಯೊಬ್ಬನು ಇಪ್ಪತ್ತುನಾಲ್ಕು ಗಂಟೆಗಳ ಕಾಲವೂ ಅಲ್ಲಿ ಪಹರೆಕೊಡುತ್ತಿದ್ದನು.

ಶ್ರೀ

ಮಾಯಾವಿ

೧ನೆಯ ಭಾಗ

ಒಂದನೆಯ ಪರಿಚ್ಛೇದ

ಮೃತ್ಯು ಚುಂಬನ

ಫೂಲಸಾಹೇಬನೂ ಜುಮಲೆಯೂ ದಸ್ಯಗಿರಿಯಾದ ದಿವಸ ರಾತ್ರಿ, ಎರಡು ಪ್ರಹರಗಳನಂತರ, ಆಕಾಶದಲ್ಲಿ ಮೇಘವು ಮುಚ್ಚಿಕೊಂಡು ತುಂಬ ಭಯಪಡಿಸುತಲಿದ್ದಿತು. ಆ ದಿಗಂತವ್ಯಾಪಿಯಾದ ಮೇಘದ ದೆಸೆಯಿಂದ, ನಿಶ್ವಾಸ ಬಿಡುವುದೂ ಶ್ರಮಸಾಧ್ಯವಾಗಿ ತೋರುವ ಮಟ್ಟಿಗೆ ಗಾಳಿಯು ನಿಶ್ಚಲವಾಗಿದ್ದಿತು. ಆ ಅಂಧಕಾರಮಯವಾದ ಕಪ್ಪು ಪೊಡವಿಂದ, ಅಂಧಕಾರದ ಹಿಂದೆ ಅಂಧಕಾರವು ಇಳಿದು ಬಂದು ಪೃಥ್ವಿಯಲ್ಲಿ ಒಂದು ಕೊನೆಯಿಂದ ಇನ್ನೊಂದು ಕೊನೆಯವರೆಗೂ ವ್ಯಾಪಿಸಿ, ಭೂತಲದಿಂದ ಆಕಾಶತಲ ಪರ್ಯಂತ ಏಕಾಕಾರವಾಗಿದ್ದಿತು. ನಿಶ್ಶಬ್ದವಾದ ಆ ಅಂಧಕಾರದ ಮುಸ್ಸೆ, ವಿಶಾಲವಾಗಿಯೂ ಉತ್ತುಂಗವಾಗಿಯೂ ಇರುವ, ಶಾಖೋಪಶಾಖೆಗಳಿಂದಲೂ ಎಲೆಗಳಿಂದಲೂ ನಿಬಿಡವಾದ ವೃಕ್ಷಗಳು ಏಕಟಾಕಾರವಾದ ದೈತ್ಯರ ಹಾಗೆ ನಿಂತಿದ್ದುವು. ಈ ಜಗತ್ತೂ ಅಂಧಕಾರಪೂರ್ಣ, ಸವಿಾಪದಲ್ಲಿ ಅಂಧಕಾರ; ದೂರದಲ್ಲಿ ಮತ್ತೂ ಅಂಧಕಾರ. ಬಹುದೂರದಲ್ಲಿ ಅದಕ್ಕೂ ಮುಂಚಿದ ಅಂಧಕಾರ. ಅಲ್ಲಿಗೆ ದೃಷ್ಟಿಯು ಪ್ರವೇಶ ಮಾಡಲಾಗುವುದಿಲ್ಲ. ಭಯಂಕರಿತವಾದ ಆ ಅಂಧಕಾರದಿಂದ ಕೂಡಿದ, ಆ ಭಯಂಕರ ರಾತ್ರಿಯಲ್ಲಿ, ಎರಡು ಘಾನಗಳನಂತರ, ಸೆರೆಮನೆಯೊಳಗೆ, ಕೈಕಾಲುಗಳನ್ನು ಕಟ್ಟಿ ಸಿರ್ಬಂಧಿತನಾಗಿದ್ದ ಫೂಲಸಾಹೇಬನು ಒಂದು ಕಡೆ ಬಿದ್ದುಕೊಂಡು ಅವಮಾನಸೂಚಕವಾಗಿ ಗೊರಕೆ ಹಾಕುತ್ತಾ ಸೆರೆಮನೆಯವರಿಗೆ ತನ್ನ ಗಭೀರವಾದ ನಿದ್ದೆಯ ಪರಿಚಯವನ್ನಾಡಿಕೊಡುತ್ತಿದ್ದನು. ಸ್ವಲ್ಪ

ದೂರದಲ್ಲಿ ಚುಮಲೆಯು ಉಚ್ಚರವಾಗಿ ಕುಳಿತಿದ್ದಳು. ಹೊರಭಾಗದಲ್ಲಿ ಒಂದು ದೀಪ ಉರಿಯುತ್ತಿದ್ದಿತು. ಆ ದೀಪದ ಬೆಳಕು ಸೆರೆಮನೆಯ ಕಪ್ಪಣದ ಬಾಗಿಲ ಕಂಡಿಯಿಂದ ಅಂಧಕಾರಪೂರ್ಣವಾದ ಸೆರೆಮನೆಯೊಳಕ್ಕೆ ಪ್ರವೇಶವಾಡಿತ್ತು. ಅದರ ಕೊಂಚ ಭಾಗವು ಚುಮಲೆಯ ಮುಖಮಂಡಲದಮೇಲೆ ಬಿದ್ದು ಆ ಮುಖವನ್ನು ಉಜ್ವಲತರವಾಗಿ ಪ್ರಕಾಶಪಡಿಸುತಲಿದ್ದಿತು; ಆ ಮುಖವು ಪ್ರಸನ್ನವಲ್ಲ, ವಿಷಣ್ಣವೂ ಅಲ್ಲ; ಅದರಲ್ಲಿ ಚಿಂತೆಯ ಯಾವ ಚಿಹ್ನೆಯೂ ಇರಲಿಲ್ಲ. ಅದಕ್ಕೆ ಬದಲಾಗಿ ಅದು ಮತ್ತಷ್ಟು ಪ್ರಫುಲ್ಲವಾಗಿದ್ದಿತು. ಬಾಗಿಲ ಮುಂದೆ ಆಯುಧ ಸಹಿತನಾದ ಪ್ರಹರಿಯು ಏರಾಮುಏಲ್ಲದೆ ಪಹರೆಕೊಡುತ್ತಿದ್ದನು. ಹಾಗೆಯೇ ಆ ಪ್ರಫುಲ್ಲವಾದ ಮುಖಮಂಡಲವನ್ನು, ಒಂದೊಂದು ವೇಳೆ, ಸತೃಷ್ಣನಯನನಾಗಿ ನೋಡುತ್ತಲೂ ಇದ್ದನು.

ಚಂದ್ರ ಶೂನ್ಯ, ತಾರಕಾ ಶೂನ್ಯ, ದಿಗ್ವಂತ ಶೂನ್ಯ, ಶಬ್ದ ಶೂನ್ಯವಾದ ಆ ರಜನಿಯು ಮೇಘಮಯವಾದ, ಅಂಧಕಾರಮಯವಾದ, ಏಳ್ಗೆಷಿಕಾಮಯವಾದ ಆ ಆಪಾರಭಯಸಮಯದಲ್ಲಿಯೂ ಆ ಸುಂದರವಾದ ಮುಖವು ಎಷ್ಟೋ ಮನೋಹರ! ಪಾಠಕ, ನಿಮಗೂ ನಮಗೂ ಅದು ಸರಿಯಾಗಿ ತಿಳಿಯುವ ಹಾಗಿಲ್ಲ. ಆ ಸೌಂದರ್ಯವು ಆ ಪ್ರಹರಿಗೆ ಚೆನ್ನಾಗಿ ಹೃದಯಂಗಮವಾಗಿದ್ದಿತು. ಪ್ರಹರಿಯು ಮುಖ ಭಾವವನ್ನೂ ದೃಷ್ಟಿಯ ಲಕ್ಷಣವನ್ನೂ ಕಂಡು, ಪ್ರಹರೀ ಪತಂಗವು ತನ್ನ ರೂಪಾಗ್ನಿಯಲ್ಲಿ ಧುಮಕಲು ತುಂಬ ಕುತೂಹಲಗೊಂಡಿರುವುದೆಂದು ಚುಮಲೆಯು ತಿಳಿಯದಿರಲಿಲ್ಲ. ಇದನ್ನು ತಿಳಿದುಕೊಂಡು, ಪ್ರಹರಿಯು ಮತ್ತೊಂದು ಸಲ ಸುತ್ತಿಕೊಂಡು ಬರುತ್ತಾ ಅವಳ ಮುಖವನ್ನು ನೋಡಿದಾಗ ಚುಮಲೆಯು, ಚಂಚಲವೂ ಉಜ್ವಲವೂ ಆದ ತನ್ನ ಕಣ್ಣುಗಳಿಂದ ಮಿಂಚಿನಂತೆ ಥಳಥಳಿಸುವ ಕಟಾಕ್ಷವನ್ನು ಪ್ರಹರಿಯ ಮೇಲೆ ಬೀರಿದಳು. ಪ್ರಹರಿಯು ಬಹುಮಟ್ಟಿಗೆ ಮರುಳಾದನು. ಚೇತನ ಸಹಿತನಾಗಿದ್ದರೂ ಅವನಿಗೆ ಚೈತನ್ಯವಿರಲಿಲ್ಲ. ಒಂದು ಬಗೆಯ ವೈದ್ಯುತಿಕ ಶಕ್ತಿಯು ಅವನ ಶರೀರದಲ್ಲೆಲ್ಲಾ ಹರಿದಾಡತೊಡಗಿತು.

ಅವನಿಗೆ ತಲೆ ಸುತ್ತುವ ಹಾಗಾಯಿತು. ಕಾಲುಗಳು ನಡುಗಿದುವು, ಹೃದಯದಲ್ಲಿ ದಡಬಡನೆ ಬಡಿದುಕೊಳ್ಳುವುದಕ್ಕೆ ಆರಂಭವಾಯಿತು; ಕಣ್ಣಿಗೆ ಕತ್ತಲೆ ಕವಿಯಿತು; ಕಿವಿಗಳಲ್ಲಿ "ಭೊಂ ಭೊಂ" ಎನ್ನುವಂತೆ ತೋರಿತು; ಅವನ ಮೈ ರೋಮಾಂಚಿತವಾಯಿತು. ಒಡನೆಯೇ ಅವನು ಇನ್ನೊಂದು ಕಡೆಗೆ ತಿರುಗಿಕೊಂಡು—ಆ ಸ್ಥಳದಿಂದ ಸರಿದು—ದೂರಕ್ಕೆ ಹೋಗಿ, ನಿರ್ಭಯವಾದೊಂದು ನಿಶ್ವಾಸವನ್ನು ಬಿಟ್ಟು ಬದುಕಿಕೊಂಡನು. ಹೃದಯದೊಳಗಣ ಕೋಲಾಹಲವು ಏತರಿಂದಲೂ ನಿಲ್ಲಲಿಲ್ಲ. ಪ್ರಹರಿಯು ಅವಳ್ಳ ಅವನಿಗೇ ತಿಳಿಯಲಿಲ್ಲವಾದರೂ ಜುಮಲೆಯು ಅದನ್ನು ಸಂಪೂರ್ಣವಾಗಿಯೂ ತಿಳಿದಳು. ಜುಮಲೆಯು ಸಾಧನ ಸಿಕ್ಕಿತು ಎಂದಂದುಕೊಂಡಳು.

ಪ್ರಹರಿಯು ಮತ್ತೊಂದು ಸಲ ಸುತ್ತುತ್ತಾ, ನಡುಗುವ ಹೆಜ್ಜೆ ಗಳನಿಟ್ಟುಕೊಂಡು, ಹಿಂದಿರುಗಿ ಬಂದಾಗ ಜುಮಲೆಯು ಅವನನ್ನು ನೋಡಿ,—'ದ್ವಾರ ರಕ್ಷಕ ಮಹಾಶಯ! ನಮಗೋಸ್ಕರವಾಗಿ ನಿನಗೆ ಎಷ್ಟು ತೊಂದರೆ?'—ಎಂದಳು.

ಪ್ರಹರಿ—(ಮೃದು ಸ್ವರದಿಂದ) ಅಯ್ಯೋ! ಇಲ್ಲ, ಇಲ್ಲ. ನನ್ನ ಕೆಲಸವೇ ಇದು.

ಜುಮಲೆ—(ಮೊದಲಿನಂತೆಯೇ ಮಧುರ ಕಂಠದಿಂದ) ಅದು ಹೇಗೇ ಆಗಲಿ, ರಕ್ಷಕ ಮಹಾಶಯ! ಇದು ಮನುಷ್ಯಮಾತ್ರನಾದವನಿಗೆ ತಕ್ಕ ಕೆಲಸವಲ್ಲ. ಇಂತಹ ರಾತ್ರಿಯಲ್ಲಿ, ಸುಖಶಯ್ಯೆಯಲ್ಲಿ ಮಲಗುವುದನ್ನು ಬಿಟ್ಟು, ಹೆಗಲಮೇಲೆ ಬಂದೂಕು ಹೊತ್ತು, ಈ ಕಡೆಯಿಂದ ಆ ಕಡೆಗೂ, ಆ ಕಡೆಯಿಂದ ಈ ಕಡೆಗೂ ಸದಾ ಸುತ್ತುತ್ತಿರಲಾದೀತೆ!

ಈ ಮಾತನ್ನು ಕೇಳಿ ಪ್ರಭುಭಕ್ತನಾದ ಪ್ರಹರಿಯು ಒಂದುಸಲ ನಿಟ್ಟುಸಿರಿಟ್ಟು,—ಯಾರ ಉಪ್ಪು ತಿನ್ನುವೆವೋ ಅವರ ಕೆಲಸಕ್ಕಾಗಿ ಪ್ರಾಣವಾದರೂ ಕೊಡಲೇಬೇಕು—ಎಂದು ಹೇಳಿದನು.

ಆಸಂತರ ಜುಮಲೆಯು ಆ ಮಾತು ಈ ಮಾತುಗಳಂತೆ ಅನೇಕ ಮಾತುಕತೆಗಳನಾಡಿದಳು. ಆಮೇಲೆ ಸುಖ ದುಃಖದ ಮಾತು ಕತೆಗಳಾ

ದುವು; ವಿರಹವೇದನೆಯು ಮಾತುಗಳಾದುವು; ಜುಮಲೆಯು ಪ್ರಹರಿಯ ದುಃಖದಲ್ಲಿ ಅತ್ಯಂತ ಪರಿತಾಪವನ್ನು ಸೂಚಿಸಿದಳು. ಪರಿತಾಪಸೂಚಕಗಳಾದ ಅವಳ ಆ ಮಾತುಗಳು ಪ್ರಹರಿಯ ಕಿವಿಯಲ್ಲಿ ವೀಣಾಗಾನದಂತೆ ಸುಖಮಯವಾಗಿ ಆಘಾತಮಾಡಿದುವು. ಜುಮಲೆ ಹೇಳಿದಳು—ಒಳ್ಳೆಯದು, ರಕ್ಷಕ ಮಹಾಶಯ, ನೀನು ಈಗ ಮೂರು ವರ್ಷಗಳಿಂದ ಊರಿಗೆ ಹೋಗಲಿಲ್ಲವಲ್ಲವೆ? ನಿನ್ನ ಹೆಂಡತಿ ತಾನೇ ನಿನ್ನನ್ನು ಹೇಗೆ ಬಿಟ್ಟಿರುವಳು! ನಾನಾಗಿದ್ದಿದ್ದರೆ, ನಿನ್ನಿಂದ ಅನ್ನ ಬಟ್ಟೆಗಳು ಸಿಕ್ಕಿದರೂ ಸರಿ, ಸಿಕ್ಕದಿದ್ದರೂ ಸರಿ, ನಿನ್ನನ್ನು ಬೇರೆ ಅರೆಗಳಿಗೆಯೂ ಬಿಟ್ಟಿರುತ್ತಿರಲಿಲ್ಲ—ಎಂದು.

ಪ್ರಹರಿ—(ನಗುತ್ತೆ) ನಿಮ್ಮ ಜನರು ದೊಡ್ಡಮನುಷ್ಯರು; ಎಲ್ಲವನ್ನೂ ಮಾಡುತ್ತೀರಿ. ನಮ್ಮವರು ಬಡವರು; ನಮ್ಮವರಿಗೆ ಮೊತ್ತ ಮೊದಲು ಹೊಟ್ಟೆಯ ಆಲೋಚನೆ.

ಜುಮಲೆ—ನಿನಗೆ ಮಕ್ಕಳೆಷ್ಟು ಮಂದಿ?

ಪ್ರಹರಿ—ಎರಡು ಗಂಡು, ಈಗ ಆರುತಿಂಗಳಿನದೊಂದು ಹೆಣ್ಣು ಕೂಸು.

ಜುಮಲೆ—ನೀನು ಮೂರು ವರ್ಷಗಳಿಂದ ನಿಮ್ಮ ಊರಿಗೇ ಹೋಗಲಿಲ್ಲವೆಂದು ಹೇಳಿದೆ? ಆರು ತಿಂಗಳಿನ ಹೆಣ್ಣು ಕೂಸು ಹೇಗೆ?

ಪ್ರಹರಿಯು ತಲೆಯನ್ನಾಡಿಸುತ್ತೆ,—ಇದೆಂತಹ ಮಾತು? ನಾನು ಪ್ರತಿ ತಿಂಗಳಲ್ಲಿಯೂ ಊರಿಗೆ ಕಾಗದ ಬರೆಯುತ್ತೇನೆ. ಅಲ್ಲಿಂದ ಪುನಃ ಉತ್ತರ ಬರುತ್ತದೆ. ಹೀಗಿದ್ದ ಕಾಲದಲ್ಲಯೇ ಅಲ್ಲವೆ, ನನ್ನ ದೊಡ್ಡಮಗ 'ಭಿಖುರಾಂ' ಹುಟ್ಟಿದ್ದು!—ಎಂದು ಗಂಭೀರವಾಗಿ ಹೇಳಿದನು.

ಜುಮಲೆ—ಅಯ್ಯೋ ನತದೃಷ್ಟನೆ! ಇದು ಕಾಗದ ಪತ್ರದ ಅಡಳಿತ ವೇನೋ?

ಪ್ರಹರಿ—ನಮ್ಮ ಜನರು ಎಲ್ಲ ಅಡಳಿತವನ್ನೂ ಕಾಗದದ ಮುಖಾಂತ್ರವೇ ಮಾಡಬಲ್ಲರು.

ಈ ಮಾತನ್ನು ಕೇಳಿ ಜುಮಲೆಯು ಒಂದುಸಲ ಗಟ್ಟಿಯಾಗಿ ನಕ್ಕು ನೀನು 'ಫಿರೂರ'ನ ತಾಯನ್ನು ತುಂಬ ಪ್ರೀತಿಸುವೆಯಾ? ಎಂದಳು.

ಪ್ರಹರಿ—ಹೋ—ಹೋ! ಬಹಳಮಟ್ಟಿಗೆ ಪ್ರೀತಿಸುತ್ತೇನೆ.

ಜುಮಲೆ—'ಫಿರೂರ'ನ ತಾಯಿ ನನಗಿಂತಲೂ ಸುಂದರಳೇ?

ಪ್ರಹರಿ—ಅಯ್ಯೋ—ರಾಮ ರಾಮ! ನಿನ್ನಷ್ಟು ಸುಂದರಳಾಗಿದ್ದಿದ್ದರೆ, ನನಗೆ ಸಾವಿರ ರೂಪಾಯಿ ಸಂಬಳ ಸಿಕ್ಕುವುದಾಗಿದ್ದರೂ ಅವಳನ್ನು ಅರಗಳಿಗೆ ಕೂಡ ಬಿಟ್ಟಿರುತ್ತಿರಲಿಲ್ಲ.

ಜುಮಲೆ—ಈಗ ಏನೋ ಹೀಗೆ ಹೇಳುತ್ತೀ. ಆಮೇಲೆ ಒಂದು ಸಲವಾದರೂ ತಿರುಗಿನೋಡಲಾರೆ—ಎಂದು ತೋರುತ್ತದೆ. ಒಂದು ವೇಳೆ—ಒಂದು ವೇಳೆಯೇನು? ಖಂಡಿತವಾಗಿಯೂ ಊರಿನಲ್ಲಿ ನನ್ನೊಬ್ಬಳನ್ನೇ ಬಿಟ್ಟು, ಇಲ್ಲಿಗೆ ಬಂದು ಈ ಇಲಾಖೆಯ ಈ ಉಡಿಗೆ ತೊಡಿಗೆಗಳೊಡನೆ,—'ಬೆಲ್ಟು' ಬಿಲ್ಲೆಗಳೊಡನೆ ಮತ್ತೂ ಫರ್ಜಿ ಸಹಿತವಾದ ಈ ಬಂದೂಕಿನೊಡನೆ ಪ್ರಣಯಾಕಾಂಕ್ಷಿಯಾಗುವೆ! ಪ್ರಹರೀ ಮಹಾಶಯ! ನೀನೇನೋ ಸರಕಾರದವರಿಗಾಗಿ ಇಲ್ಲಿ ಪಹರೆ ಕೊಡುತ್ತಿರುವೆ, ಅಲ್ಲಿ 'ಫಿರೂರ'ನ ತಾಯಿಗೆ ಯಾರು ಕಾವಲಾಗಿದ್ದಾರೆ? ಅಲ್ಲೇನಾದರೂ ಲೂಟೀ ಗೀಟೀ ಆದರೆ—?

ಪ್ರಹರಿ—(ಜುಮಲೆಯನ್ನು ನಿರ್ದೇಶಿಸಿ) ಇಂತಹ ರತ್ನಕ್ಕಾದರೆ ಆ ಭಯವಿಗಾಗಿನ ಚೂರಿಗೆ ಯಾರಾದರೂ ಕೈ ಹಾಕುವರೇ?

ಜುಮಲೆ—ನಾನು ಅಷ್ಟು ಸುಂದರಳೆ? ರತ್ನವೆ?

ಪ್ರಹರಿ—ರತ್ನವೇ. ಇದರಲ್ಲಿ ಸಂದೇಹವೆ?

ಜುಮಲೆ—ನೋಡು, ದುರ್ಬಲಸಿಂಗ್—

ಪ್ರಹರಿ—ನನ್ನ ಹೆಸರು ದುರ್ಬಲಸಿಂಗನಲ್ಲ.

ಜುಮಲೆ—ಹಾಗಾದರೆ ಮರಣಾಪನ್ನಸಿಂಗನೆಂದೋ?

ಪ್ರಹರಿ—ಅಲ್ಲ ಅಲ್ಲ. ನನ್ನ ಹೆಸರು ಲಂಕೇಶ್ವರಸಿಂಗ.

ಜುಮಲೆ—ಛಲೆ-ಛಲೆ ಎಂತಹ ಮುದ್ದಾದ ಹೆಸರು! ಏನೋ ಹೇಳುತ್ತಲಿದ್ದೆ; ಲಂಕೇಶ್ವರಸಿಂಗ್—ಹೇಳಲು ನಾಚುಗೆಯಾಗುತ್ತಿದೆ. ನಿನ್ನನ್ನು ನೋಡಿದ ಮೊದಲು ನನ್ನ ಮನಸ್ಸು ಹೇಗೋ ಆಗಿದೆ,—ಹೇಳುವುದಕ್ಕೇ ಬರುವುದಿಲ್ಲ. ಆನೆಯ ಹಾಗಿರುವ ನಿನ್ನ ಕಣ್ಣುಗಳು, ಉರುಳುಗಡ್ಡೆಯ ಹಾಗಿರುವ ಮೂಗು, ಸಮರ್ಮಾರ್ಜನಿಯಂತಹ ಏಸಿ, ಆಲದ ಬಳಲುನಂತಹ ಗಡ್ಡ—ಇವು ನನ್ನ ಬುದ್ಧಿಯನ್ನೇ ಸೆಳೆದು ಬಿಟ್ಟಿವೆ. ನಿನ್ನೊಡನೆ ಮನಕ್ಕಾದರೂ ಹೋಗಿ ಇಬ್ಬರೂ ಸ್ನೇಜ್ಞೆಯಾಗಿರಬೇಕೆಂದು ಆಸೆಯಾಗುತ್ತದೆ. ಸೃಷ್ಟಿಸಿದ ಬ್ರಹ್ಮನು ನನ್ನನ್ನು ನಿನ್ನ ವಶಮಾಡದೇ (ಘಾಲಸಾಹೇಬನನ್ನು ತೋರಿಸಿ) ಈ ಕೊಲೆಪಾತಕನ ವಶಮಾಡಿದ್ದಾನೆ; ಈಗಲೂ ನೀನು ನಿನ್ನ ಪಾದದಲ್ಲಿ ನನಗೆ ಆಶ್ರಯ ಕೊಡುವುದಾದರೆ, ಈ ಜನ್ಮವು ಸಾರ್ಥಕವಾಗುವುದು—ಎಂದಳು.

ಹೀಗೆ ಹೇಳಿ, ಜುಮಲೆಯು ಅವನ ಮೇಲೆ ಮತ್ತೊಂದು ಬಾರಿ ಕಟಾಕ್ಷವನ್ನು ಬೀರಿದಳು. ಆದರೂ ಲಂಕೇಶ್ವರನು ಸ್ಥಿರಭಾವದಿಂದ ಸಿಂತೇ ಇದ್ದನು. ನಿಶ್ಚಯವಾಗಿ ಲಂಕೇಶ್ವರನೇ ಧನ್ಯ! ಆಗ ಅವನು ತಲೆ ತಿರುಗಿ ಬೀಳದಿದ್ದುದೇ ಯಥೇಷ್ಟ!! ಅವನು ಸುತ್ತಿಕೊಂಡು ಬೀಳದಿದ್ದರೂ ಅವನ ತಲೆ ಸುತ್ತುತ್ತಲಿದ್ದಿತು; ಅವನ ಪ್ರಾಣವು ಹೃದಯದ ಮಧ್ಯದಲ್ಲಿಯೇ ಮೂರ್ಛೆಗೊಂಡಿತು. ಅವನು ಮಾತನಾಡ ಲಾರದೆ ಕೇವಲ ಜುಮಲೆಯ ಮಾತುಗಳನ್ನು ಕೇಳುತ್ತಿದ್ದನು. ಅಷ್ಟರಿಂದಲೇ ಅವನ ಕೈಗೆ ಸ್ವರ್ಗ ಸಿಕ್ಕಿದ ಹಾಗಾಯಿತು; ಅವಳನ್ನು ಹೊಂದ ಬೇಕೆಂಬ ಆಸೆಯು ತುಂಬ ಪ್ರಬಲವಾಗಿ ಹದ್ದುಮೀರುವ ಹಾಗಾಯಿತು. ಹೇಳಿದನು—ಇಂತಹ ಮಾತುಗಳನ್ನಾಡಬೇಡ. ನೀನು ನಿನ್ನ ಪಾದದಲ್ಲಿ ನನಗೆ ಜಡೆಗೊಡು, ನಾನು ನಿನ್ನನ್ನು ಶಿರಸಾಧರಿಸುವೆನು. ನನ್ನ ಅದೃಷ್ಟವು ಚೆನ್ನಾಗಿದ್ದುದರಿಂದಲೇ ನೀನು ನನ್ನನ್ನು ಹೀಗೆ ಹೊಗಳಿದ್ದು—ಹೀಗೆಂದು ಹೇಳಿ ಪ್ರಹರಿಯು ಚರಿತಾರ್ಥನಾದನು.

ಜುಮಲೆ—ನೀನು ಈಗ ನನ್ನಲ್ಲಿ ವಿಶ್ವಾಸವಿರಿಸಿದ ಪಕ್ಷದಲ್ಲಿ, ನಾನು ನಿನ್ನನ್ನು ಹೊಗಳುವುದಕ್ಕೆ ಎಷ್ಟರಮಟ್ಟಿಗೆ ಸಮ್ಮತಳಾಗಿರುವೆ ನೆಂಬುದನ್ನು ಸ್ವಲ್ಪದರಲ್ಲಿಯೇ ತಿಳಿಯುವೆ.

ಪ್ರಹರಿ—ನೀನು ಮೋಸ ಮಾಡಿದರೋ !

ಜುಮಲೆ—ಇಲ್ಲ ಲಂಕೇಶ್ವರಸಿಂಗ್ ! ನಿನ್ನಾಣೆಗೂ-ನಾನು ಎಂದೂ ಮೋಸ ಮಾಡುವವಳಲ್ಲ, ನಿಜವಾಗಿಯೂ ಹೇಳುತ್ತೇನೆ. ನಿನ್ನನ್ನು ನೋಡಿದ ಮೊದಲು ನನ್ನ ಮನಸ್ಸು ನಿನ್ನಲ್ಲಿ ಸೇರಿ ಬಿಟ್ಟಿತು. ಲಂಕೇಶ್ವರಸಿಂಗ್ ! ನೀನು ಹೇಗಾದರೂ ಮಾಡಿ ಈ ಕೈಕೋಳದ ಬೇಗದ ಕೈ ಸಂಗ್ರಹಿಸಿಟ್ಟುಕೊಳ್ಳುವುದಾದರೆ ನಾನು ಇಲ್ಲಿರಬಹುದಾದ ಈ ಆರೇಳು ರಾತ್ರಿಗಳಲ್ಲಿ, ನನ್ನ ಸ್ವಾಮಿಯು ಹೀಗೆ ಸಿದ್ಧಿಸುತ್ತಿರುವಾಗ, ದಿನ ಒಂದಕ್ಕೆ ಒಂದೆರಡು ಘಳಿಗೆಯಾದರೂ ನಿನ್ನ ಸಂಗಡ ಸಂತೋಷ ದಿಂದಿರಬಹುದು.

ಇದನ್ನು ಕೇಳಿ ಪ್ರಹರಿಯು ಅತ್ಯಂತ ಉತ್ಸಾಹಿತನಾಗಿ, ''ನನ್ನಲ್ಲಿ ಒಂದು ಹಳೆಯ ಬೇಗದ ಕೈ ಇದೆ. ಅದು ಎಲ್ಲ ಕೋಳಗಳಿಗೂ ಸರಿಯಾ ಗುವುದು'' ಎಂದನು.

ಸೆರೆಮನೆಯ ಬಾಗಲಿಗೆ ಬೇಗಕ್ಕೆ ಬದಲಾಗಿ ಬಂದು ಕೋಳವನ್ನು ತಗಲಿಸಿದ್ದರು. ಲಂಕೇಶ್ವರನು ನಡುಮನೆಯಲ್ಲಿದ್ದ ಬೇಗದಕೈ ತೆಗೆದು, ಕೋಳವನ್ನು ಕಳಚಿ, ಜುಮಲೆಯನ್ನು ಹೊರಕ್ಕೆ ಬಿಟ್ಟು, ಪುನಃ ಬಾಗಲಿಗೆ ಕೋಳವನ್ನು ತಗಲಿಸಿದನು.

ಹೊರಗೆ ಬಂದವಳೇ ಜುಮಲೆಯು ಲಂಕೇಶ್ವರನನ್ನು ಎರಡು ಕೈಗಳಿಂದಲೂ ಬಾಚಿ ತಬ್ಬಿಕೊಂಡು, ಗಡ್ಡ ಮೀಸೆಗಳಿಂದ ಮುಚ್ಚಿ ಹೋಗಿದ್ದ ಅವನ ಮುಖವನ್ನು ಬಾರಿಬಾರಿಗೂ ಮುತ್ತಿಟ್ಟಳು; ಉತ್ತರ ಕ್ಷಣದಲ್ಲಿಯೇ ಪ್ರಹರಿಗೆ ಪ್ರಜ್ಞೆ ತಪ್ಪಿತು; ನೆಲಕ್ಕೆ ಉರುಳಿದನು. ಆ ವೇಳೆಗೆ ಅವನಿಗೆ ಪ್ರಾಣಭರಲಿಲ್ಲ.

ಜುಮಲೆಯ ಚುಂಬನದಿಂದ ಲಂಕೇಶ್ವರನು ಸತ್ತುದನ್ನು ನೋಡಿ ಘಾತಕರು ಆಶ್ಚರ್ಯಪಡಲಾಗದು. ಅವಳು ಸರ್ಪಿಣೀ. ಅವಳ ಗಾಳಿ ಸೋಕಿದರೂ ರಕ್ತವು ವಿಷಮಯವಾಗುವುದು.

ಎರಡನೆಯ ಪರಿಚ್ಛೇದ

ದಾನವ ಮತ್ತು ದಾನವಿ

ಒಳಗೆ ನಿದ್ರೆ ಮಾಡುವವನಂತೆ ನಟಿಸುತ್ತ ಬಿದ್ದಿದ್ದ ಫೂಲಸಾಹೇಬನು ಎಲ್ಲವನ್ನೂ ನೋಡುತ್ತಿದ್ದನು; ಎಲ್ಲ ಮಾತುಗಳನ್ನೂ ಕೇಳುತ್ತಿದ್ದನು. ಪ್ರಹರಿಯು ಬಿದ್ದುದನ್ನು ಕಂಡು ಫೂಲಸಾಹೇಬನು ಕಸಟ ನಿದ್ರೆಯನ್ನು ಬಿಟ್ಟು ಮೇಲಕ್ಕೆದ್ದು, "ಕೆಲಸವಾಯಿತೆ?" ಎಂದು ಕೇಳಿದನು.

ಜುಮಲೆಯು ಪ್ರಹರಿಯ ಕೈಯೊಳಗಿದ್ದ ಆ ಕೋಳದ ಬೀಗದಕೈ ತೆಗೆದುಕೊಂಡು ಬಾಗಿಲನ್ನು ತೆರೆದು ಫೂಲಸಾಹೇಬನನ್ನು ಹೊರಕ್ಕೆ ಕರೆದುಕೊಂಡು ಬಂದು, ಬಂಧನ ಮುಕ್ತನನ್ನಾಗಿ ಮಾಡಿ, "ಇಷ್ಟು ಹೊತ್ತಿನ ಮೇಲೆ ಕೆಲಸವಾಯಿತು" ಎಂದಳು.

ಫೂಲಸಾಹೇಬನು ಜುಮಲೆಯು ಕಂಠವನ್ನಾಲಿಂಗಿಸಿಕೊಂಡು, ಪ್ರೀತಿವ್ಯಂಜಕ ಸ್ವರದಿಂದ, "ಇಷ್ಟರ ಸಾಮರ್ಥ್ಯವಿಲ್ಲದೇ ಇದ್ದಿದ್ದರೆ ನಿನ್ನಲ್ಲಿ ನಾನು ಅನುಗತನಾಗುತ್ತಿದ್ದೆನೇಕೆ?" ಎಂದನು.

ಜುಮಲೆಯು (ನಗುತ್ತ) ಪ್ರಾಯಃ ಲಂಕೇಶ್ವರನ ಪ್ರಾಣಗಳೆಲ್ಲವೂ ಮೊದಲೇ ನನ್ನನ್ನು ಸೇರಿದ್ದುವು. ಇಂತಹ ಬುದ್ಧಿಹೀನನನ್ನೂ ಮೈ ಮರೆಸದೆ ಇರುವೆನಾದರೆ, ನನಗೆ ಸಾಧ್ಯವಾಗುವುದು ಯಾವುದು? ಅನಂತರ ಅವನ ಎರಡು ಕೈಗಳನ್ನೂ ಬಿಗಿದು ಹಿಡಿದು ಮುತ್ತಿಟ್ಟಾಗ, ಅವನ ಶರೀರದಲ್ಲಿದ್ದ ಪ್ರಾಣವಾಯುವಿನ ಅವಶಿಷ್ಟ ಭಾಗವನ್ನೂ ಆಕರ್ಷಣ ಮಾಡಿದೆ. ಪ್ರಾಣವಾಯುವೆಲ್ಲವೂ ಕೈಸೇರಿದನಂತರ ಇವನನ್ನು ಹೇಸು ಕುಕ್ಕುವ ಹಾಗೆ, ಸುಲಭವಾಗಿ, ಉಗುರಿನಿಂದ ಕೊಂದು ಹಾಕಿದೆನು. ಇದು ಆಶ್ಚರ್ಯವೆ? ಆ ಬಿಷದ ಮುಳ್ಳು ಅವನ ಬೆನ್ನಿನಲ್ಲಿ ಚೆನ್ನಾಗಿ ಚುಚ್ಚಿಕೊಂಡಿದೆ.

ಫೂಲ.—ನೋವಾಗಲಿಲ್ಲವೆ?

ಜುಮಲೆ—ನೊಂದರೆತಾನೆ ಭಯವೇನು? ನೋವಿನಿಂದ ಕೂಗಿಕೊಂಡಾನೆಂದು ಶಂಕಿಸಿ, ಚುಂಬನದ ನೆವದಿಂದ ಬಾಯಿ ಮುಚ್ಚಿದ್ದೆನು.

ಅಲ್ಲದೆ ಎರಡು ಕೈಗಳಿಂದಲೂ ಬಾಚಿ ತಬ್ಬಿಕೊಂಡಾಗ ಆ ಆನಂದದಿಂದ ಅನಸಿಗೆ ಚ್ಲಾನವೇ ಲೋಪವಾಯಿತು. ಇದೊಂದು ಮುಳ್ಳು ಚುಚ್ಚಿದ್ದು ಹಾಗಿರಲಿ, ಆಗ ಅವನ ಬೆನ್ನಿಗೆ ಸಾಮರಾರು ಅಸ್ತ್ರಗಳು ಚುಚ್ಚಿಕೊಂಡಿದ್ದರೂ ಅವನಿಗೆ ತಿಳಿಯುತ್ತಿರಲಿಲ್ಲವೆಂದು ತೋರುತ್ತದೆ.

ಫೂಲ.—ನಡೆ, ಇನ್ನೂ ಅನೇಕ ಕೆಲಸಗಳುಳಿದಿವೆ.

ಫೂಲಸಾಹೇಬನು ಜುಮಲೆಯ ಕೈಹಿಡಿದು ಮುಂದಾಗಿ ಹೊರಟನು; ಸ್ವಲ್ಪದೂರ ಹೋಗಿ, ಇದ್ದಕ್ಕಿದ್ದ ಹಾಗೆಯೇ ಹಿಂದಿರುಗಿ ನಿಂತು, "ಜುಮಲೆ, ತಾಳು! ಆತುರದಲ್ಲಿ ಒಂದು ಕೆಲಸವನ್ನೇ ಮರೆತಿದ್ದೆ; ಈಗಲೇ ಬರುತ್ತೇನೆ" ಎಂದು ಹೇಳಿ ಜುಮಲೆಯನ್ನು ಅಲ್ಲಿಯೇ ನಿಲ್ಲಿಸಿ, ತಾನು ಪಾತ್ರ ಪುನಃ ಆ ಸೆರೆಮನೆಯ ಬಳಿಗೆ ಬಂದನು; ಮೃತನಾಗಿದ್ದ ಪ್ರಹರಿಯ ಬಂದೂಕಿನ ಸಣ್ಣೀಸನ್ನು ತೆಗೆದು ಕೊಂಡನು. ಅನಂತರ ಸೆರೆಮನೆಯೊಳಕ್ಕೆ ಹೋಗಿ, ಅಲ್ಲಿ ಗೋಡೆಯ ಮೇಲೆ, ಸಣ್ಣೀಸಿನಿಂದ ದೊಡ್ಡದೊಡ್ಡ ಅಕ್ಷರಗಳಲ್ಲಿ—**"ಅರಿಂದಮ! ಎಚ್ಚರಿಕೆ; ಒಂದು ವಾರದೊಳಗಾಗಿ ನಿನ್ನನ್ನು ಕೊಲ್ಲುತ್ತೇನೆ. ನನ್ನ ಹೆಸರು ನಿನ್ನ ಚಿರಶತ್ರು ಫೂಲಸಾಹೇಬ!!"** ಎಂದು ಬರೆದನು.

ಬರೆದವನೇ ಫೂಲಸಾಹೇಬನು ಹಿಂದಿರುಗಿ ಬಂದು ಆ ಸಣ್ಣೀಸನ್ನು ಜುಮಲೆಯ ಕೈಗೆ ಕೊಟ್ಟು ತಾನು ತೀಕ್ಷ್ಣ ಮುಖದ ಕಠಾರಿಯೊಂದನ್ನು ಹಿಡಿದುಕೊಂಡನು. ಆಗ, ಅವರಿಬ್ಬರೂ ಆ ದುರ್ಭೇದ್ಯವಾದ ಅಂಧಕಾರದಲ್ಲಿ ಪೂರ್ವದಿಕ್ಕಿನ ಗೋಡೆಯ ಕಡೆಗೆ ನಡೆದರು.

ಘನಾಂಧತಮೋಮಯಿಯಾದ ನಿಶಾರಾಕ್ಷಸಿಯು, ನರಪ್ರೇತನಾದ ಫೂಲಸಾಹೇಬನಿಗೂ, ರಾಕ್ಷಸಿಯಾದ ಜುಮಲೆಗೂ ಸಹಕಾರಿಯಾಗಿ ಆ ವೇಳೆಗೆ ಮತ್ತಷ್ಟು ಭಯಂಕರರೂಪವನ್ನು ಧಾರಣ ಮಾಡಿದ್ದಳು.

ಅದೇ ರಾತ್ರಿ. ಮೋಘಚ್ಛಾಯೆಯಿಂದ ಕೂಡಿದ, ಕಗ್ಗತ್ತಲೆಯಿಂದ ಭಯಂಕರಳಾಗಿರುವ ಆ ನಿಶೆಯು ಪ್ರಳಯಂಕರಿಯ ರೂಪವನ್ನು ಧರಿಸಿ

ಪ್ರಪಂಚವೆಲ್ಲವನ್ನೂ ಭಯಭರಿತವಾಗಿ ಮಾಡಿರುವಳು. ಬಿರುಗಾಳಿಯಿಂದ ಕೂಡಿದ ಬಿರುಸಾದ ಮಳೆಗೆ ಆಗಲೇ ಆರಂಭವಾಗಿದೆ. ಈ ಮಳೆಗಾಳಿಗಳಿಗೆ ಸಿಕ್ಕಿದ ದೊಡ್ಡ ದೊಡ್ಡ ಮರಗಳು ತಾಯನ್ನು ಕಳೆದುಕೊಂಡ ರಾಕ್ಷಸ ಶಿಶುಗಳ ಹಾಗೆ, ಹೃದಯ ಶೋಕವು ದಿಗ್ದಿಗಂತಗಳವರೆಗೂ ವ್ಯಾಪಿಸಲೆಂದು ಏಕಟ ಸ್ವರದೊಡನೆ ತೂಗಾಡುತ್ತಿವೆ. ಆ ಬಿರುಗಾಳಿಯೊಂದಿಗೆ ಬೆರೆತು ಅಕಾತರವಾಗಿ ವರ್ಷಿಸುತ್ತಿರುವ ಮಳೆಯು, ದಟ್ಟವಾಗಿಯೂ ಛಿದ್ರಶೂನ್ಯವಾಗಿಯೂ ಇರುವ ಕೃಷ್ಣ ಮೇಘಾವೃತವಾದ ಪೃಥ್ವಿಯನ್ನು ಪಿಶಾಚಿಗಳ ರಂಗಸ್ಥಳವನ್ನಾಗಿ ಮಾರ್ಪಡಿಸಿದೆ.

ಮೂರನೆಯ ಪರಿಚ್ಛೇದ

ಪ್ರಾಕಾರೋಲ್ಲಂಘನ

ಆ ಸಮಯದಲ್ಲಿ, ಒಂದೀಶಾನೆಯೊಳಗೆ, ಪೂರ್ವದಿಕ್ಕಿನ ಉತ್ತರವಾದ ಪ್ರಾಕಾರಕ್ಕೆ ಸ್ವಲ್ಪ ದೂರದಲ್ಲಿ, ಒಂದು ಆಲದ ಮರದ ಕೆಳಗೆ, ಫೂಲಸಾಹೇಬನೂ ಜುಮುಲೆಯೂ ಸಿಂತುಕೊಂಡಿದ್ದರು. ಯಾರ ಬಾಯಲ್ಲಿಯೂ ಮಾತಿಲ್ಲ. ಇಬ್ಬರೂ ಚಿಂತಾಮಗ್ನರಾಗಿದ್ದರು. ಹೇಗಾದರೂ ಮಾಡಿ, ತಮಗೆ ಪ್ರತಿಬಂಧಕವಾಗಿರುವ ಆ ಗೋಡೆಯನ್ನು ದಾಟಿದನಂತರ ತಾನೇ ಅವರು ನಿರಾಪದರು! ನಾಲ್ಕು ಕಡೆಯೂ ಗೋಡೆಯಮೇಲೆ ಶಸ್ತ್ರಧಾರಿಗಳಾದ ಪ್ರಹರಿಗಳು ತಲೆ ತಗ್ಗಿಸಿಕೊಂಡು ಬೇಗಬೇಗನೆ ತಿರುಗುತ್ತಾ ಪಹರೆ ಕೊಡುತ್ತಿದ್ದಾರೆ. ಮೇಲೆ ಮಳೆಯು ಧಾರೆಯಾಗಿ ಸುರಿಯುತ್ತಿದೆ. ಭಯಂಕರವಾದ ಬಿರುಗಾಳಿಯು ಅವರನ್ನು ಕೆಳಕ್ಕೆ ಕೆಡಹುವಷ್ಟು ಬಿರುಸಾಗಿ ಬೀಸುತ್ತಿದೆ. ಆದರೂ ಪ್ರಭು ಭಕ್ತರಾದ ಪ್ರಹರಿಗಳು ಕರ್ತವ್ಯ ಪರಾಙ್ಮುಖರಾಗದೆ ಅಡಿಗಡಿಗೆ ಗಗನ ಭೇದಿಯಾದ ಕಂಠದಿಂದ 'ಜುಡೀದಾರಾಹೋ' ಎಂದು ಮುಂತಾಗಿ ಹೇಳಿ ತಂತಮ್ಮ ಹಾಜರಿಯನ್ನು ಸ್ಥಿರಪಡಿಸಿಕೊಳ್ಳುತ್ತಿದ್ದಾರೆ.

ಅದೇ ಸಮಯದಲ್ಲಿ ಖೈದಿಗಳೆಲ್ಲರೂ ತಮತಮಗೆ ನೇಮಕವಾಗಿದ್ದ ಕೊಠಡಿಗಳಲ್ಲಿ ನಿರ್ಬಂಧಿಸಲ್ಪಟ್ಟಿದ್ದರು. ಅವರು, ಹಗಲೆಲ್ಲಾ ಮೈ ಮುರಿಯ ಕೆಲಸಮಾಡಿದ್ದರಾದುದರಿಂದ, ಆ ಸಮಯದಲ್ಲಿ ಅವರುಗಳು ಎಚ್ಚರವಾಗಿರುವ ಸಂಭವ ತೋರಲಿಲ್ಲ. ಆದರೂ ಪ್ರಹರಿಗಳು ಇಂದು ಇಷ್ಟು ಜಾಗರೂಕರಾಗಿರಲು ಕಾರಣವೇನಿದ್ದೀತು? ಕೇವಲ ಆ ಧೂರ್ತ ಶಿರೋಮಣಿಯಾದ ಫೂಲಸಾಹೇಬನಿಗೋಸ್ಕರವಾಗಿ ಆ ಬಿರುಗಾಳಿ ಮಳೆಗಳಿಗೆಲ್ಲಾ ತಲೆಯೊಡ್ಡಿಕೊಂಡು, ಇಂತಹ ದುರ್ಯೋಗದಲ್ಲಿ ಕೂಡ ಕರ್ತವ್ಯಭ್ರಷ್ಟರಾಗುವುದು ಅನುಚಿತವೆಂದು ಭಾವಿಸಿ, ಪ್ರಾಕಾರದ ಗೋಡೆಯಮೇಲೆ ಬಹು ಜಾಗರೂಕರಾಗಿ ಬೇಗ ಬೇಗ ಸುತ್ತುತ್ತಾ ಪಹರೆ ಕೊಡುತ್ತಿದ್ದಾರೆ.

ಆ ವೇಳೆಗೆ ಸರಿಯಾಗಿ ಬಂದೀಖಾನೆಯ ಗಡಿಯಾರದಲ್ಲಿ ಒಂದು ಗಂಟೆ ಹೊಡೆಯಿತು. ಪೂರ್ವದಿಕ್ಕಿನ ಗೋಡೆಯ ಮೇಲೆ ಪಹರೆ ಕೊಡುತ್ತಿದ್ದವನು ಅಭ್ರಭೇದೀ ಕಂಠದಿಂದ "ಜುಡೀದಾರ್‌ಹೋ" ಎಂದು ಕೂಗಿ ಇತರ ದಿಕ್ಕುಗಳಲ್ಲಿದ್ದ ಪಹರೆಯವರನ್ನು ಎಚ್ಚರಿಸಿದನು. ಕೂಡಲೇ ಎನ್ನೊಂದು ದಿಕ್ಕಿನ ಪ್ರಹರಿಯು ತನ್ನ ತೀವ್ರತರ ಕಂಠದಿಂದ ಮೊದಲಿನವನಂತೆಯೇ ಕೂಗಿದನು. ಇದು ಮೊದಲನೆಯವನ ಕೂಗಿನ ಪ್ರತಿಧ್ವನಿಯೋ ಎನ್ನುವ ಹಾಗಿದ್ದಿತು. ಆಗ ಒಂದು ಕಡೆಯಿಂದ ಮತ್ತೊಂದು ಕಡೆಯವರೆಗೆ ಎಂದರೆ ಬಹು ದೂರದವರೆಗೂ ಅಚ್ಚ ಕಪ್ಪಾಗಿದ್ದ ನಿಶಾಗಗನವು ಆ ಧ್ವನಿಯ ದೆಸೆಯಿಂದ ಪರಿಪೂರ್ಣವಾಯಿತು.

ಅದನ್ನು ಕೇಳಿ ಫೂಲಸಾಹೇಬನಿಗೆ ನಗೆ ಬಂತು; ಅವನು ಒಂದು ಸಲ ನಕ್ಕು—ಜುಮಲೆ, ನಾವು ಸರಿಯಾದ ಸಮಯಕ್ಕೇ ಬಂದೆವು. ಗೋರಾಚಾಂದನು ತನ್ನ ಕರ್ತವ್ಯವನ್ನು ಮರೆಯದಿರುವುದಾದರೆ ಈ ಸಮಯದಲ್ಲಿ ನಾವು ಬಹು ಬೇಗನೆ ಬಡುಗಡೆ ಹೊಂದುತ್ತೇವೆ; ನಾಳೆಯ ಮೊದಲು ಅರಿಂದಮನು ಪರಾರಿಗಳಾದ ಖೈದಿಗಳನ್ನು ಹುಡುಕುತ್ತಾ ಅಲೆದಾಡುವನು!—ಎಂದು ಹೇಳಿದನು. ಕತೆಯು ಒಂದೆರಡು

ಮಾತುಗಳು, ಮಂತ್ರೌಷಧಗಳ ಕಟ್ಟಿಗೆ ಸಿಕ್ಕಿ ಹತವೀರ್ಯನಾಗಿರುವ ಭಯಂಕರ ಸರ್ಪದ ಘರ್ಜನೆಯಂತೆ ಫೂಲಸಾಹೇಬನ ಬಾಯಿಂದ ಬಂದವೇ ಹೊರತು, ಸಾಧಾರಣ ಮನುಷ್ಯನ ಮುಖದಿಂದ ಬಂದ ಮಾತು ಗಳಂತೆ ತೋರಲಿಲ್ಲ. ಆ ಸಮಯದಲ್ಲಿ, ಆ ಅಂಧಕಾರ ಮಧ್ಯದಲ್ಲಿ, ಯಾವುದಾದರೊಂದು ರೀತಿಯಿಂದ, ಫೂಲಸಾಹೇಬನ ಮುಖವನ್ನು ಯಾರಾದರೂ ನೋಡಿದ್ದ ಪಕ್ಷದಲ್ಲಿ,—ಸಾತಕ! ಆಗಲೂ ಆ ದಾನವ ಪ್ರಕೃತಿಯವನ ಬಾಯಲ್ಲಿ ಅಮಂಗಳಕರವಾದ ಅದೇ ಭೀಷಣತೆ ಮತ್ತೂ ಮಾರ್ದವಗಳ ಸಂಮಿಶ್ರಣವಾಗಿ, ಅಪೂರ್ವ ರಹಸ್ಯಮಯ ವಾದ, ಸಂಪೂರ್ಣವಾಗಿಯೂ ಅಶುಭಸೂಚಕವಾದ, ಬಹು ಭಯಂಕರ ವಾದ ನಗೆಯು ತೋರುತಲಿದ್ದಿತು.

ನಿಶ್ಯಬ್ದವಾಗಿ ಹೆಜ್ಜೆಗಳನ್ನಿಡುತ್ತಾ, ಗಟ್ಟಿಯಾಗಿ ಉಸಿರಾಡಸದೆ, ಜುಮಲೆಯನ್ನೂ ಸಂಗಡ ಕರೆದುಕೊಂಡು, ಮೆಲ್ಲ ಮೆಲ್ಲಗೆ ಗೋಡೆಯ ಹತ್ತಿರ ಬಂದು ನಿಂತನು. ಮಸೀಮಯವಾದ ಆ ಕಗ್ಗತ್ತಲಿನಲ್ಲಿ ಪ್ರಹರಿಯು ಅವರನ್ನು ನೋಡಲಿಲ್ಲ. ಅವನು ಅವರ ತಲೆಗೆ ಮೇಲ್ಬಾಗ ವಾಗಿ ಬಂದು ಕಡೆಯಿಂದ ಮತ್ತೊಂದು ಕಡೆಗೆ ಹೊರಟುಹೋದನು. ಪ್ರಹರಿಯು ಸ್ವಲ್ಪ ದೂರ ಹೋದಮೇಲೆ ಫೂಲಸಾಹೇಬನು ಒಂದು ಚೂರು ಇಟ್ಟಿಗೆಯನ್ನು ತೆಗೆದುಕೊಂಡು ಗೋಡೆಯ ಮೇಲೆ ಮೆತ್ತ ಮೆತ್ತಗೆ ಹೊಡೆದು ಹಾಗೆಯೇ ಗೋಡೆಯಮೇಲೆ ಕಿವಿಯನ್ನಿಟ್ಟು ಕೇಳಿದನು. ಆಗ ಹೊರಗಡೆಯಿಂದ ಅದೇರೀತಿಯಾದ ಮೃದುಸ್ವರವು ಕೇಳಿಸಿತು. ಕೇಳಿದೊಡನೆ ಫೂಲಸಾಹೇಬನ ಹೃದಯದಲ್ಲಿ ಸಂತೋಷವು ತುಂಬಿತು; ಮುಖವು ಪ್ರಸನ್ನವಾಗಿಯೂ ಪ್ರಫುಲ್ಲವಾಗಿಯೂ ಆಯಿತು. ಫೂಲಸಾಹೇಬನು ಮೊದಲಿನಂತೆಯೇ ಪುನಃ ಶಬ್ದಮಾಡಿ, ಜುಮಲೆ ಯನ್ನು ಕುರಿತು,—ಗೋರಾಚಾಂದನು ಮರೆತಿಲ್ಲ, ಬಂದಿದ್ದಾನೆ. ಇನ್ನು ಭಯಪಲ್ಲ. ಹೇಗಾದರೂ ಮಾಡಿ ಒಂದು ಸಲ ಗೋಡೆಯಮೇಲೆ ಹತ್ತಿದರೆ ಸಾಕು; ಅರಿಂದಮನು ಯೋಗೇಂದ್ರನಾಥನೊಂದಿಗೆ, ಫೂಲ ಸಾಹೇಬನನ್ನು ಕೆಣಕಿದ್ದು ಸರಿಯಾದ ಕೆಲಸವಾಗಲಿಲ್ಲ—ಎಂದು ಹೇಳಿ

ಅನವಧಾನವಹಿಸುವನು. ಮೇಲಾಗಿ, ಹೇಗಾದರೂ ಮಾಡಿ ಫೂಲ ಸಾಹೇಬನು ತನ್ನ ಪ್ರತಿಜ್ಞೆಯನ್ನು ಅಕ್ಷರಶಃ ಪೂರ್ತಿ ಮಾಡಿಕೊಳ್ಳುವ ನೆಂದು ಅವರಿಬ್ಬರೂ ತಿಳಿಯುವರು. ಇನ್ನೂ ಅವರಿಗೆ ಫೂಲಸಾಹೇಬನ ವಿಷಯವು ಚೆನ್ನಾಗಿ ತಿಳಿಯದು. ಅದರಿಂದಲೇ ಅವರ ಮೂರ್ಖತೆಯು ಹತಾತ್ಕಾಗಿ, ನೋಕಿಯಾರಿ, ಹೀಗೆ ಪರಿಣಾಮಗೊಂಡಿತು.—ಎಂದು ಹೇಳಿದನು.

ಈ ಸಮಯದಲ್ಲಿ ಗೋರಾಚಾಂದಸಿಂದ ಏನು ಉಪಕಾರ ವಾಯೀತೋ ಗೊತ್ತಾಗಲಿಲ್ಲ—ಎಂದು ಜುಮುಲೆಯು ಮೃದು ಸ್ವರದಿಂದ ಹೇಳಿದಳು.

ಫೂಲಸಾಹೇಬನೂ ಸಹ, ಹಾಗೆಯೇ ಮೃದು ಸ್ವರದಿಂದ—ಒಂದು ವೇಳೆ ನಾನು ಯಾವಾಗಲಾದರೂ ಈ ನೆರೆಮನೆಯಲ್ಲಿ ನಿರ್ಬಂಧಿಸ ಲ್ಪಟ್ಟಿದ್ದೇ ಆದರೆ, ಆವನು ಪ್ರತಿ ರಾತ್ರಿಯೂ, ರಾತ್ರಿ ಒಂದು ಗಂಟೆಯ ನಂತರ, ಈ ಬಿಕ್ಕಿನ ಗೋಡೆಯಮೇಲೆ ಒಂದು ಹಗ್ಗವನ್ನು ಇಳೀ ಬಿಟ್ಟಿರ ಬೇಕೆಂದು ಈ ಮೊದಲೇ ಏರ್ಪಡಿಸಿದ್ದೆನು—ಎಂದನು.

ಈ ಮಾತು ಮುಗಿಯುವಷ್ಟರಲ್ಲಿಯೇ, ಹಡಗಿಗೆ ಕಟ್ಟುವಂತಹ ದಪ್ಪನಾದ ಹಗ್ಗವೊಂದು ಮೇಲ್ಗಡೆಯಿಂದ ಒಂದು ಆವರ ಹತ್ತಿರ ಧುಪ್ ಎಂದು ಬಿದ್ದಿತು. ಫೂಲಸಾಹೇಬನು ಆ ಹಗ್ಗವನ್ನು ಹಿಡಿದು ಒಂದು ಸಲ ಬಲವಾಗಿ ಎಳೆದು ನೋಡಿದನು; ಹಗ್ಗದ ತುತ್ತೊಂದು ಕೊನೆಯು ಗೋಡೆಯಿಂದಾಚೆ ಇದ್ದಿತು; ಹೊರಗಡೆಯಿಂದಲೂ ಒಂದು ಸಲ ಹಗ್ಗವು ಎಳೆಯಲ್ಪಟ್ಟಿತು. ಅನಂತರ ಫೂಲಸಾಹೇಬನು ಹಗ್ಗದ ತುದಿಯನ್ನು ಹತ್ತಿರದಲ್ಲಿಯೇ ಇದ್ದ ಒಂದು ಮರದ ಬುಡಕ್ಕೆ ಬಿಗಿದನು; ಇದಾದಮೇಲೆ, ತನ್ನ ನಡುಕಟ್ಟನ್ನು ಹಿಡಿದುಕೊಳ್ಳುವಂತೆ ಜುಮುಲೆಗೆ ಹೇಳಿ, ಜುಮುಲೆಯನ್ನೂ ಹೊತ್ತುಕೊಂಡು, ಹಗ್ಗವನ್ನು ಹಿಡಿದು ನಿಧಾನವಾಗಿ ಹತ್ತಲಾರಂಭಿಸಿದನು. ಜುಮುಲೆಯು ಪ್ರಾಣ ಭಯದಿಂದ ಫೂಲಸಾಹೇಬನ ಕಟಿಪ್ರದೇಶವನ್ನು ಎರಡೂ ಕೈಗಳಿಂದಲೂ ಬಲವಾಗಿ ತಬ್ಬಿ ಹಿಡಿದುಕೊಂಡಿದ್ದಾಳೆ!

ಫೂಲಸಾಹೇಬನು ಜುಮಲೆಯನ್ನು ಹೊತ್ತುಕೊಂಡು ಮೊದಮೊದಲು ನಿಧಾನವಾಗಿ, ಅನಂತರ ವೇಗವಾಗಿ, ತದನಂತರ ಇನ್ನೂ ವೇಗ ಮತ್ತೂ ವೇಗ, ಅದಕ್ಕಿಂತಲೂ ವೇಗವಾಗಿ ಗೋಡೆಯ ಮೇಲಕ್ಕೆ ಏರುತ್ತಿದ್ದನು. ಬಹಳ ಎತ್ತರವಾದ ಆ ಗೋಡೆಯ ಮೇಲ್ಭಾಗದ ಅಂಚನ್ನು ಸೇರಿದಾಗ ನೋಡಿದನು. ಮೇಲ್ಗಡೆ ಪಹರೆ ಕೊಡುತ್ತಿದ್ದ ಸ್ಪಹರಿಯು ಮತೊಂದು ಕಡೆಯಿಂದ ಜೇಗ ಜೇಗನೆ ಏರಿದಿರುಗಿ ಬರುತ್ತಲಿದ್ದಾನೆ!

ಆಗ ಫೂಲಸಾಹೇಬನಿಗೆ ತಲೆ ತಿರುಗಿದ ಹಾಗಾಯಿತು; ಭಯವಾಯಿತು. ತನ್ನ ಪ್ರಯತ್ನಗಳೆಲ್ಲವೂ ಅಲ್ಲಿಯೇ ವ್ಯರ್ಥವಾಗುವಂತೆ ತೋರಿತು. ದಡದ ಹತ್ತಿರಕ್ಕೆ ಬಂದಾಗ ಹಡಗು ಮುಳುಗಿದಹಾಗೆ–ಅದಕ್ಕಿಂತಲೂ ಪರಿತಾಪಕರವಾದ ಪರಿಚಾರವು ಯಾವುದುಂಟು? ಹಾಸ್ಯಮಯವಾಗಿದ್ದ ಫೂಲಸಾಹೇಬನ ಮುಖವು ಹಾಸ್ಯಶೂನ್ಯವಾಗಿ ಬಾಡಿದುದು ಇಂದೇ ನೋಡಲು. ಆಗ ಅವನು ಬಂದು ಕೈಮೇಲೆ ತನ್ನ ಮತ್ತೂ ಜುಮಲೆಯ ಭಾರವನ್ನು ನಿಲಿಸಿ ಮತೊಂದು ಕೈಯಿಂದ ನಡುಬೆನಲ್ಲಿ ಸಿಕ್ಕಿಸಿಕೊಂಡಿದ್ದ ಸಣೀನನ್ನು ಧಡ್ಯವಾಗಿ ಪಿಡಿದುಕೊಂಡನು. ಎರಡೂ ದೇಹಗಳ ಭಾರವನ್ನು ಒಂದು ಕೈಯಿಂದ ನಿಲಿಸಿ ಒಂದು ಕ್ಷಣಕಾಲವಿರುವುದಾದರೂ ಬಹು ಪ್ರಯಾಸವಾಗುವುದೆಂದು ನಾವು ಊಹಿಸುತ್ತೇವೆ; ಆದರೆ ಫೂಲಸಾಹೇಬನಂತಹ ಶಕ್ತಿ–ಸಾಹಸ ಪರನಾದವನಿಗೆ ಇದೊಂದು ಕಠಿಣ ಕೆಲಸವೆಂದು ತೋರಲಾರದು. ಪ್ರಹರೀ ಮಹಾಶಯನು ಹಗ್ಗವನ್ನು ನೋಡಬಹುದೆಂಬ ಭಯವು ಫೂಲಸಾಹೇಬನಿಗೂ ಇದ್ದಿತು. ಒಂದು ವೇಳೆ ಕತ್ತಲೆಯಲ್ಲಿ ಕಾಣಿಸದೆ ಹೋದರೂ, ನಡೆದು ಹೋಗುವಾಗ ಕಾಲಿಗೆ ತೊಡರಿದರೆ ಏನಾಗಬೇಕು! ಹಾಗಾದಲ್ಲೆ? ಹಾಗಾದಲ್ಲಿ ಒಡನೆಯೇ ತೀಕ್ಷ್ಣಾಗ್ರವಾದ ಈ ಸಣೀನನ್ನು ಪ್ರಹರಿಯ ವಕ್ಷದಲ್ಲಿ ಪೂರ್ಣವಾಗಿ ನಟ್ಟುಬಿಡುವೆನು. ಅನಂತರ ಹಣೆಯಲ್ಲಿ ಬರೆದಂತೆ ಆಗುವುದು. ಕೈಲಾಗದವನ ಹಾಗೆ, ಪ್ರಯತ್ನಪಡದೆ, ಸುಲಭವಾಗಿ ಬಂದಿಯಾಗುವುದು ಕೇವಲ ಹೇಡಿತನ. ಹೀಗೆಲ್ಲಾ ಆಲೋಚಿಸುತ್ತಾ ಫೂಲಸಾಹೇಬನು ಆ ಮೊನೆಯಾದ

ಸನೀನನ್ನು ಹಿಡಿದುಕೊಂಡು ಪ್ರಹರಿಯನ್ನು—ಪ್ರಹರಿಯನ್ನು ಮಾತ್ರವೇ ಅಲ್ಲ—ಒಂದು ವಿಸತ್ಸಮೂಹವನ್ನೇ, ಭಯಂಕರವಾದೊಂದು ದುರ್ಘಟನೆಯನ್ನೇ, ಇಬರು ನೋಡುತ್ತಿದ್ದನು.

ತನ್ನ ಅಜಾಗರೂಕತೆಯಿಂದಲೋ, ಅಥವಾ ಫೂಲಸಾಹೇಬನ ಸೌಭಾಗ್ಯ ವಶದಿಂಪಲೋ, ಪ್ರಹರಿಯು ಹಗ್ಗವನ್ನು ದಾಟಿಕೊಂಡು ಹೊರಟೇ ಹೋದನು.

ಪಥವು ಪರಿಷ್ಕಾರವಾಯಿತು. ಫೂಲಸಾಹೇಬನು ಆ ಸನೀನನ್ನು ಹಲ್ಲಿನಲ್ಲಿ ಕಚ್ಚಿ ಪಿಡಿದುಕೊಂಡು, ಪುನಃ ಗೋಡೆಯನ್ನೇರಲಾರಂಭಿಸಿದನು. ಬಹಳ ದೂರ ಹತ್ತಬೇಕಾಗಿರಲಿಲ್ಲ; ಸುಮಾರು ಐದು ಮೊಳಗಳ ದೂರ ಹತ್ತಿದರೆ ಗೋಡೆಯ ಮೇಲಕ್ಕೆ ಹೋಗಬಹುದಾಗಿದ್ದಿತು. ಎರಡು ಮೂರು ಸಲ ಕೈಗಳನ್ನು ಆಡಿಸುವುದರೊಳಗಾಗಿ ಅವನು ಗೋಡೆಯನ್ನೇರಿ ಹಾಗೆಯೇ ಸುತ್ತೊಂದು ಕಡೆಯಿಂದ ಇಳಿಯುತ್ತಲೂ ಇದ್ದನು. ಜುಜುಲೆಯು ಸೊದಲಿನಂತೆಯೇ ಫೂಲಸಾಹೇಬನ ನಡು ಕಟ್ಟನ್ನು ಪಿಡಿದುಕೊಂಡು ನೇತಾಡುತ್ತಲೇ ಇದ್ದಾಳೆ!

ಫೂಲಸಾಹೇಬನು ಬಹಳ ದೂರದವರೆಗೂ ಇಳಿದು ಎರಡು ಮೂರು ಮೊಳಗಳ ದೂರ ಉಳಿದಿದ್ದಾಗ ದುಮ್ಮಿಕ್ಕಿದನು. ಅವನು ಧುಮುಕಿದ ಕಡೆಯಲ್ಲಿ ಇಟ್ಟಿಗೆಯ ರಾಶಿ ಇದ್ದಿತು; ಅದರ ಮೇಲೆ ಅನೇಕ ಗಡಿಗಳು ಬೆಳೆದುಕೊಂಡಿದ್ದುವು. ಫೂಲಸಾಹೇಬನು ಧುಮುಕಿದ್ದರಿಂದ ಇಟ್ಟಿಗೆಗಳು ಒಂದಕ್ಕೊಂದು ತಗಲಿ ಕಸ ಕಡ್ಡಿಗಳ ಮೇಲೆ ಬಿದ್ದು ಸ್ವಲ್ಪ ಶಬ್ದವಾಯಿತು. ಶಬ್ದವು ಬಹಳವಾಗಿ ಆಗದಿದ್ದರೂ ಶಬ್ದವೇನೋ ಪ್ರಹರಿಯು ಕಿವಿಗೂ ಕೇಳಿಸಿತು. ಅವನು ಹಿಂದಿರುಗಿ ನಿಂತುಕೊಂಡನು. ಯಾವಲ್ಲಿ ಶಬ್ದವಾಯಿತೆಂಬುದನ್ನು ನಿರ್ದೇಶಮಾಡಲರಿಯದೇ ಪ್ರಹರಿಯು ಅಲ್ಲಿಯೇ ಕುಳಿತು ಕುತೂಹಲಪೂರ್ಣ ದೃಷ್ಟಿಯಿಂದ ನಿಮ್ನ ಭಾಗವನ್ನು ನೋಡುತ್ತಿದ್ದನು. ಆ ಅಂಧಕಾರದಲ್ಲಿ ಅವನ ದೃಷ್ಟಿಯು ಅಷ್ಟು ದೂರ ಪ್ರವೇಶ ಮಾಡಲಿಲ್ಲ. ಆದರೂ ಪ್ರಹರಿಯು ಅಲ್ಲಿಯೇ ಬಗ್ಗಿ ಕುಳಿತು ತನ್ನ ದೃಷ್ಟಿಶಕ್ತಿಯ ಮೇಲೆ ಸಾಧ್ಯವಾದಷ್ಟು ಬಲಪ್ರಯೋಗ ಮಾಡು

ತ್ತಿದ್ದನು. ಅಂಧಕಾರವು, ತಳಭಾಗದಲ್ಲಿ ನಿಬಿಡವಾಗಿದ್ದಂತೆ, ಆವರಣ ರಹಿತವಾದ ಮೇಲ್ಭಾಗದಲ್ಲಿರಲಿಲ್ಲ. ಆದುದರಿಂದ, ಫೂಲಸಾಹೇಬನು ಅಲ್ಲಯೇ ಅದೃಶ್ಯನಾಗಿದ್ದುಕೊಂಡು ಪ್ರಹರಿಯ ಭಾವಭಂಗಿಗಳನ್ನು ಚೆನ್ನಾಗಿ ನೋಡುತ್ತಾ ಅವನ ಅಭಿಪ್ರಾಯವನ್ನು ಊಹಿಸಿದನು.

ನಾಲ್ಕನೆಯ ಪರಿಚ್ಛೇದ

ಪ್ರಹರಿಯ ಕೊಲೆ

ಫೂಲಸಾಹೇಬನು, ಪುನಃ ಗೋಡೆಯನ್ನು ಹತ್ತಿ, ಪ್ರಹರಿ ಇದ್ದಲ್ಲಿಗೆ ಹೋದನು. ಅವನ ಕೈಯಲ್ಲಿ ಹರಿತವಾದ ಬಾಕು ಇದ್ದಿತು. ಅವನು ನಿಶ್ಶಬ್ದವಾಗಿ ಪ್ರಹರಿಯ ಪಾರ್ಶ್ವದಲ್ಲಿ ನಿಂತುಕೊಂಡು ಬಂದೇ ತಡವೆಗೆ ಅವನ ಕುತ್ತಿಗೆಯನ್ನು ಅದಿಮಿ ಹಿಡಿದನು. ಪ್ರಹರಿಗೆ ಕೂಗಿಕೊಳ್ಳುವುದಕ್ಕೂ ಆಗಲಿಲ್ಲ; ಅಷ್ಟರೊಳಗಾಗಿ ಅವನಿಗೆ ಉಸಿರು ಕಟ್ಟಿತು. ಪ್ರಹರಿಯನ್ನು ಆ ಅವಸ್ಥೆಯಲ್ಲಿಟ್ಟು, ಫೂಲಸಾಹೇಬನು ಮತ್ತೊಂದು ಕೈಯೊಳಗಿದ್ದ ಛರ್ಜಿಯನ್ನು ಆಮೂಲಾಗ್ರವಾಗಿ ಪ್ರಹರಿಯ ವಕ್ಷಸ್ಥಲದಲ್ಲಿ ನಟ್ಟನು. ಪ್ರಹರಿಯು ಯಾತನೆಯಿಂದ ಒದೆದಾಡಿದನು. ಪ್ರಹರಿಯು ಕೈಕಾಲು ಬಡಿವುದರಿಂದ ಗೋಡೆಯ ಮೇಲೆ 'ದುಂ–ದುಂ' ಎಂದು ಶಬ್ದವಾಗುತ್ತಿರುವುದನ್ನು ನೋಡಿ, ಫೂಲಸಾಹೇಬನು ಎಡಗೈಯಲ್ಲಿ ಅವನ ಕುತ್ತಿಗೆಯನ್ನು ಹಿಡಿದು ಅವನನ್ನು ನೇತಾಡುತ್ತಿರುವಂತೆ ಎತ್ತಿ ಹಿಡಿದು, ಮತ್ತೊಂದು ಕೈಯಿಂದ ಅವನ ಎದೆಯ ಮೇಲೆ ಛರ್ಜಿಯಿಂದ ಬಾರಿಬಾರಿಗೂ ಬಲವಾಗಿ ಹೊಡೆಯತೊಡಗಿದನು. ಪ್ರಹರಿಯ ಹೃದಯದಿಂದ ಹೊರಟ ರಕ್ತಧಾರೆಯು ಮಳೆಯ ನೀರಿನೊಂದಿಗೆ ಮಿಶ್ರವಾಗಿ ಗೋಡೆಯನ್ನು ನೆನೆಯಿಸಿತು.

ಆ ಸಮಯದಲ್ಲಿ, ಫೂಲಸಾಹೇಬನ ಆ ಭ್ರೂಕುಟಿ ಕುಟಿಲ ಮುಖದಲ್ಲಿ, ಅಮಂಗಳವೂ ಭೀಷಣವೂ ಮತ್ತೂ ಮಾರ್ದವವೂ ಬೆರತ ತೀವ್ರತರವಾದ ಆ ನಗೆ ತಲೆದೋರಿತು. ಫೂಲಸಾಹೇಬನು ಮಾನವ ರೂಪಿನ ಪಿಶಾಚ! ಆ ಪಿಶಾಚಕ್ಕೆ ಎಲ್ಲವೂ ಸಾಧ್ಯ.

ಸ್ವಲ್ಪ ಹೊತ್ತಿನೊಳಗಾಗಿಯೇ ಪ್ರಹರಿಯು ಸತ್ತನು. ಫೂಲ ಸಾಹೇಬನು ಅವನನ್ನು ಆ ಗೋಡೆಯ ಮೇಲೆ ಮಲಗಿಸಿದನು. ಅವನ ವಕ್ಷದಲ್ಲಿ ನಾಟಿದ್ದ ಬಾಕನ್ನು ಎಳೆದು, ಅದನ್ನು ಅವನ ರಕ್ತದಲ್ಲಿಯೇ ತೊಯಿದಿದ್ದ ಬಟ್ಟೆಯಲ್ಲಿ ಒರಸಿ ತೆಗೆದುಕೊಂಡನು. ಪ್ರಹರಿಯ ನಡುವಿನಲ್ಲಿ ಉದ್ದವಾದ ಒಂದು ಚೂರಿಯಿದ್ದಿತು. ಅದನ್ನೂ ತೆಗೆದುಕೊಂಡನು. ಅನಂತರ, ಬೇಗ ಬೇಗನೆ, ಮೊದಲಿನಂತೆಯೇ ಹಗ್ಗದ ಮೂಲಕ, ಶಂಕೆ ಇಲ್ಲದೆ ಇಳಿದುಬಂದನು.

ಅವನು ಇಳಿದುಬರುತ್ತಲೇ ಗೋರಾಚಾಂದನು ಅವನ ಇದಿರಿಗೆ ಒಂದು ಬಟ್ಟೆಯ ಗಂಟನ್ನಿಟ್ಟನು. ಫೂಲಸಾಹೇಬನು ಉಡಿಗೆಗಳನ್ನೆಲ್ಲಾ ಚೆನ್ನಾಗಿ ಬದಲಾಯಿಸಿಕೊಂಡು, ಗೋರಾಚಾಂದನನ್ನು ನೋಡಿ –ನೀನು ಇಲ್ಲಿಯೇ ಇರು; ಇಲ್ಲಿ ಏನಾಯಿತೆಂಬುದನ್ನು ತಿಳಿದು ನಾಳೆ ವರ್ತಮಾನಕೊಡು. ನಾನು ಜುಮುಲೆಯನ್ನು ಕರೆದುಕೊಂಡು ಈಗಲೇ ಪಲಾಶೀಯರ ಕೋಟೆಯ ಮನೆಗೆ ಹೋಗುತ್ತೇನೆ. ಆ ಸ್ಥಳದಲ್ಲಿ ಬಂದು ನೋಡು; ಕಾಣಬಹುದು—ಎಂದನು.

ಗೋರಾಚಾಂದ—ಈ ಪ್ರವಾಹದ ಶಿಳತದಲ್ಲಿ!—ಗಂಗೆಯು ಎರಡು ದಡಗಳನ್ನೂ ಕಟ್ಟಿ ಹರಿಯುತ್ತಿದೆ. ದಾಟಿ ಹೋಗುವುದು ಹೇಗೆ? ತಾವು ದಾಟಿದರೂ ದಾಟಬಹುದು; ಆದರೆ ಜುಮುಲೆಯನ್ನು ಸಂಗಡ ಕರೆದುಕೊಂಡು ಹೋಗುವುದು ಸಾಧ್ಯವೆ?

ಫೂಲಸಾಹೇಬನು—(ಚೇಸರಗೊಂಡು) ಅದನ್ನು ಕುರಿತು ನೀನು ಯೋಚಿಸಬೇಕಾದುದಿಲ್ಲ. ನನ್ನ ಕೆಲಸಗಳು ನನಗೆ ಗೊತ್ತುಂಟು. ನಿನಗೆ ಹೇಳಿದುದನ್ನು ಮಾತ್ರ ನೀನು ನಡೆಯಿಸು. ಈಗ ಹೆಚ್ಚು ಹೇಳಲು ಅವಕಾಶವಿಲ್ಲ.

"ಅಪ್ಪಣೆ" ಎಂದು ಗೋರಾಚಾಂದನು ಅಲ್ಲಿಂದ ಹೊರಟು ಹೋದನು.

ಐದನೆಯ ಪರಿಚ್ಛೇದ

ಗಂಗಾವಕ್ಷದಲ್ಲಿ

ಇದಿರಾಗಿ ಗಂಗಾನದಿ; ಮಳೆಗಾಲದಲ್ಲಿ ಅಗಾಧವಾದ ಜಲರಾಶಿಯು ಎರಡು ದಡಗಳಲ್ಲಿಯೂ ಪೂರ್ಣರೂಪಿನಿಂದ ಹರಿಯುತ್ತಲಿದೆ. ಫೂಲ ಸಾಹೇಬನು ಜುಮಲೆಯನ್ನು ಕರೆದುಕೊಂಡು ಗಂಗಾತೀರಕ್ಕೆ ಬಂದು ನಿಂತನು. ಬೆಟ್ಟುಗಾಳಿ–ಮಳೆಗಳ ದೆಸೆಯಿಂದ ಪ್ರವಾಹ ವೇಗವು ದ್ವಿಗುಣಿತವಾಗಿ, ತರಂಗಮಾಲೆಯಿಂದೊಡಗೂಡಿ, ಕಟ್ಟು ಹರಿದ ಹುಚ್ಚನಹಾಗೆ ತಾನೇತಾನಾಗಿ ಪ್ರವಹಿಸುತ್ತಲಿದೆ. ಅಲೆಗಳು ಸಬಲವಾಗಿಯೂ ವೇಗಸಹಿತವಾಗಿಯೂ ಬಂದು ತೀರಕ್ಕೆ ಅಪ್ಪಳಿಸಿ ಹೊಡಿಯುತ್ತಿವೆ. ಅಚ್ಚ ಕಪ್ಪಾದ ಮೇಘಗಳ ಛಾಯೆಯಿಂದಲೂ ನಿಬಿಡವಾದ ಅಂಧಕಾರದ ಛಾಯೆಯಿಂದಲೂ, ನಿರ್ಮಲವೂ ಪರಿಶುಭ್ರವೂ ಆದ ಗಂಗಾವಕ್ಷವು ಮಸೀಮಯವಾಗಿ ಕಾಣಿಸುತ್ತಿದೆ. ಹಾಗೆ ಮಸೀಮಯವಾಗಿ ಕತ್ತಲೆಯೇ ಪ್ರತ್ಯಕ್ಷವಾದಂತೆ ಇರುವ ಗಂಗಾವಕ್ಷದಲ್ಲಿ ನಾನಿರಾರು ಉತ್ಪಾತಗಳು ನರ್ತನ ಮಾಡುತ್ತಲಿವೆ. ಆ ಸ್ಥಳದಲ್ಲಿ ಏರಾಮವಿಲ್ಲದಹಾಗೆ ಪ್ರವಾಹದ ಗರ್ಜನೆ; ಅದರೊಂದಿಗೆ ಊನ್ಮತ್ತ ವಾಯುವಿನ ಗರ್ಜನೆ; ಅದರೊಡನೆ ನಿಡುವಿಲ್ಲದಂತೆ ಮಳೆಗರೆಯುವ ಮೇಘದ ಗರ್ಜನೆ. ಈ ಮೂರು ಬಗೆಯ ಗರ್ಜನೆಗಳೂ ಬೆರೆತು ಅನಂತವಾದ ಶೂನ್ಯತೆಯನ್ನು ಪೂರ್ಣಮಾಡಿವೆ.

ಫೂಲಸಾಹೇಬ ಮತ್ತು ಜುಮಲೆ–ಇವರಿಬ್ಬರೂ ತುಂಬಿ ಹರಿಯುತ್ತಿದ್ದ ಪ್ರವಾಹದಲ್ಲಿ ಧುಮುಕಿದರು. ಈಜುವುದರಲ್ಲಿ ಇಬ್ಬರೂ ಸಮರ್ಥರು; ಅಲೆಗಳನ್ನು ತಳ್ಳುತ್ತಾ, ಸುಳಿಗಳನ್ನು ಒಡೆಯುತ್ತಾ, ಪ್ರವಾಹಕ್ಕೆ ಅಡ್ಡವಾಗಿ ಈಜುತ್ತಾ ಇದಿರ ದಡದ ಕಡೆಗೆ ಹಾದು ಹೋಗುತ್ತಲಿದ್ದರು. ಪ್ರವಾಹದ ವೇಗವು ಅವರನ್ನು ಅವರ ದಾರಿಯಿಂದ ತಪ್ಪಿಸಿ ಬಹುಮಟ್ಟಿಗೆ ತನ್ನ ದಾರಿಗೇ ಸೆಳೆದುಕೊಂಡು ಹೋಗುತ್ತಿದ್ದಿತು. ಸುಮಾರು ಪ್ರವಾಹಮಧ್ಯಕ್ಕೆ ಬರುವ ವೇಳೆಗೆ ಜುಮಲೆಯು ಅಶಕ್ತಳಾಗುತ್ತ ಬಂದಳು; ಅವಳಿಂದ ಮುಂದೆ ಈಜುವುದಾಗಲಿಲ್ಲ. ಅಲೆಯು

ಮೇಲೆ ಅಲೆ ಬಂದು ಅವಳ ಮುಖದಮೇಲೆ ಬಿದ್ದು ಅವಳನ್ನು ಬಹು ಮಟ್ಟಿಗೆ ಕಾತರಗೊಳಿಸಿದುವು. ಅವಳು ಪ್ರವಾಹಮುಖಕ್ಕೆ ಸಿಕ್ಕಿದುದರಿಂದ ಫೂಲಸಾಹೇಬನ ಸಾಮಾನ್ಯವನ್ನು ಬಿಟ್ಟು ಬಹುದೂರ ಹೋಗಿ ಬಿಟ್ಟಳು. ಫೂಲಸಾಹೇಬನು, ಚಿಮ್ಮುತ್ತ ಹೋಗಿ, ಅವಳನ್ನು ಹಿಡಿದು ಕೊಂಡು,—ನೀನು ನನ್ನ ನಡುಕಟ್ಟನ್ನು ಹಿಡಿದುಕೊಂಡು ಬಾ—ಎಂದನು. ಜುಮುಲೆ ಎರಡು ಕೈಗಳಿಂದಲೂ ಫೂಲಸಾಹೇಬನ ನಡುಕಟ್ಟನ್ನು ಹಿಡಿದುಕೊಂಡಳು. ಕ್ರಮ ಕ್ರಮವಾಗಿ ಫೂಲಸಾಹೇಬನ ಕೈಕಾಲುಗಳಲ್ಲಿಯೂ ತ್ರಾಣವು ಕುಗ್ಗಿಬರುತ್ತಿದ್ದಿತು; ಸದ್ಯಃ ಜುಮುಲೆಯನ್ನು ಸಾಗಿಸಿಕೊಂಡು ಈಜುವುದು ಕಷ್ಟಕರವೆಂದು ಅವನಿಗೇ ತೋರಿತು. ಈಜುವುದರಲ್ಲಿ ಮೊದಲಿನಹಾಗೆ ಬಲಪ್ರಯೋಗ ಮಾಡಲಾರದೆ, ಪ್ರವಾಹಮುಖದಲ್ಲಿ ತೇಲುತ್ತಾ ಹೊರಟನು; ಹಾಗೆ ಹೋಗುತ್ತಿದ್ದು ಹಾಗೆಯೇ, ಬಹು ಪ್ರಯಾಸದಿಂದ, ಕೊಂಚ ಕೊಂಚವಾಗಿ ತೀರದ ಕಡೆಗೆ ಹೋಗುವ ಪ್ರಯತ್ನ ಮಾಡಿದನು. ಕ್ರಮೇಣ ಫೂಲಸಾಹೇಬನೂ ಬಹಳವಾಗಿ ಬಳಲಿ ಬುಸಬುಸನೆ ಏದುತ್ತಿದ್ದನು. ಅಲೆಗಳ ಹೊಡೆತದಿಂದ ಕಣ್ಣು ಮೂಗುಗಳಿಗೆಲ್ಲ ನೀರು ತುಂಬಿತು. ಈ ವೇಳೆಗೆ ಬಹುದೂರ ಬಂದಿದ್ದನು. ತೀರವು ಇನ್ನು ಬಹಳ ದೂರವಿಲ್ಲ—ಹೇಗಾದರೂ ಮಾಡಿ ಇನ್ನು ಸ್ವಲ್ಪದೂರ ಹೋದರೆ ಸಾಕು; ಆದರೆ, ಆ ಅಂಚಿಸಲ್ಲಿ ನದಿಯ ಮಧ್ಯ ಭಾಗಕ್ಕಿಂತಲೂ ಹೆಚ್ಚಿನ ಸೆಳೆತ; ಅಲ್ಲಿ ಫೂಲಸಾಹೇಬನ ಪ್ರಯತ್ನಗಳೆಲ್ಲವೂ ಸಂಪೂರ್ಣವಾಗಿ ವ್ಯರ್ಥವಾದುವು. ಅಲ್ಲಿಯ ಸೆಳೆತವು ಅವರನ್ನು ಪ್ರಬಲ ವೇಗದಿಂದ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸೆಳೆದುಕೊಂಡು ಹೊರಟಿತು. ಎಷ್ಟೇ ಪ್ರಯತ್ನ ಮಾಡಿದರೂ ಫೂಲಸಾಹೇಬನು ಒಂದು ಮೊಳದಷ್ಟು ದೂರವಾದರೂ ಮುಂದರಿಯಲಾರದೇ ಹೋದನು; ಬಾರಿಬಾರಿಗೂ ಬಲ ಪ್ರಯೋಗ ಮಾಡಿದ್ದುದರಿಂದ ಎರಡು ಕೈಗಳೂ ಬಟ್ಟಿಗೆ ಸೋತು ಕೆಲಸಮಾಡಲಾರದಂತಾಗಿದ್ದುವು. ಫೂಲಸಾಹೇಬನು ತೇಲುತಲಿದ್ದನು. ಬಹಳ ದೂರ ತೇಲುತ್ತ ಹೋದಮೇಲೆ ಹಠಾತ್ತಾಗಿ ಅವನಿಗೆ ಒಂದು ಆಶ್ರಯ ಸಿಕ್ಕಿತು. ದಡದ ಮೇಲಿದ್ದ ವಿಶಾಲವಾದೊಂದು ವಟವೃಕ್ಷವು ನದಿಯ ಕಡೆಗೆ

ಬಹಳವಾಗಿ ಬಾಗಿತ್ತು; ದೊಡ್ಡ ದೊಡ್ಡವಾದ ಅದರ ಶಾಖೆಗಳಿಂದ ಅನೇಕವಾಗಿ ಬಳಲುಗಳು ನದಿಯ ನೀರಿನವರೆಗೂ ಇಳಿಬಿದ್ದಿದ್ದುವು. ಆ ಬಳಲುಗಳನ್ನು ಹಿಡಿದುಕೊಂಡು ಫೂಲಸಾಹೇಬನು ಸಹಾಯವನ್ನು ಇದಿರು ನೋಡುತ್ತಿದ್ದನು. ಜುಮುಲೆಯು ಮೊದಲಿನ ಹಾಗೆಯೇ ಅವನ ನಡುಕಟ್ಟನ್ನು ಆಶ್ರಯಿಸಿಕೊಂಡಿದ್ದಳು. ಪ್ರಬಲವಾದ ಪ್ರವಾಹವು, ಅವರನ್ನು ಆ ಅವಲಂಬನದಿಂದ ತಪ್ಪಿಸುವುದಕ್ಕಾಗಿ, ಬಾರಿ ಬಾರಿಗೂ ಬಲವಾಗಿ ತಳ್ಳುತ್ತಾ ಅವರನ್ನು ದೂರಕ್ಕೆ ಎಸೆದುಬಿಡುವ ಪ್ರಯತ್ನ ಮಾಡುತ್ತಿದ್ದಿತು. ಆ ಬಳಲನ್ನು ದೃಢಮುಷ್ಟಿಯಿಂದ ಹಿಡಿದು ಕೊಂಡು ಫೂಲಸಾಹೇಬನು ಒಂದು ಬಗೆಯಾಗಿ ದಡುವಾರಿಸಿಕೊಳ್ಳುತ್ತಿದ್ದನು. ಆ ಸಮಯದಲ್ಲಿ ಒಂದುಸಲ ಕೈ ಬಿಟ್ಟಿದ್ದರೆ, ಫೂಲಸಾಹೇಬನು ಬಳಲಿದ್ದುದರಿಂದ,—ಆಲೆಗಳಿಂದೊಡಗೂಡಿ ಸೊರೆಸೊರೆಯಾದ ಆ ಜಲರಾಶಿಯು ಅವರಿಬ್ಬರನ್ನೂ ಬಲ್ಲಿಗೆ ಸೆಳೆದುಕೊಂಡು ಹೋಗುತ್ತಲಿದ್ದಿತೋ—ಯಾರು ಬಲ್ಲರು? ಒಂದು ವೇಳೆ ಜುಮುಲೆಯನ್ನು ಕಳೆದುಕೊಳ್ಳಬೇಕಾಗುವುದೋ ಅಥವಾ ಅದರಿಂದ ಅವನ ಜೀವವೇ ಹೋಗುವುದೋ ಏನೊ? ಬಳಲಿಕೆಯಿಂದ ಕೈಗಳು ಮುರಿದುಬೀಳುವಂತಿದ್ದುವು; ಆದರೂ ಫೂಲಸಾಹೇಬನು ಪ್ರಾಣ ಭಯದಿಂದ ಆ ಮುರದ ಬಳಲನ್ನು ಬಿಡದೇ ಇದ್ದನು. ಇಷ್ಟೂ ಅಲ್ಲದೆ ಪಕ್ಕದಲ್ಲಿಯೇ ಮುಂದೆ ಒಂದು ಸುಳಿ—ಅಲ್ಲಿ ನೀರು ಗರ್ಜಿಸುವುದು; ಚಕ್ರಾಕಾರವಾಗಿ ಸುತ್ತಿ ಒಂದಾಗಿ ಬೆರೆಯುವುದು; ಒಂದಾಗಿ ಬೆರೆತು ಒಂದು ಕಡೆಯಿಂದ ಇನ್ನೊಂದು ಕಡೆಗೆ ನಾಲ್ಕಾರಷ್ಟು ವೇಗವಾಗಿ ಹರಿಯುವುದು. ಒಂದು ಸಲ ಕೈ ಬಿಟ್ಟ ಮಾತ್ರದಿಂದ ತಾವು ಆ ಸುಳಿಯಲ್ಲಿ ಬೀಳಬೇಕಾಗುವುದೆಂದೂ, ಆ ಸುಳಿಗೆ ಸಿಕ್ಕಿದನಂತರ ತಮ್ಮ ಜೀವನದ ಆಸೆಯೇ ಇರುವುದಿಲ್ಲವೆಂದೂ ಫೂಲಸಾಹೇಬನು ನಿಶ್ಚೈಸಿದನು.

ಆ ಸಮಯದಲ್ಲಿ, ಸಮೀಪವಾದ ತೀರಪ್ರದೇಶದಲ್ಲಿನ ದಟ್ಟವಾದ ಅಂಧಕಾರದೊಳಗಿಂದ, ಪ್ರಕೃತಿಯು ತುಮುಲ ಕಿಪ್ಲವದ ತೀವ್ರತರ ಕೋಲಾಹಲವನ್ನು ಭೇದಿಸಿಕೊಂಡು ಹೊಗಸಿನ ಕಂಠದಿಂದ 'ಕಿಲಕಿಲ' ನೆಂದು ತೀವ್ರತರವಾದ ಹಾಸ್ಯಧ್ವನಿಯೊಂದು, ಇದಿರಾಗಿದ್ದ ಜಲರಾಶಿ

ಯನ್ನು ನಡುಗಿಸಿ, ಗಂಗೆಯ ಒಂದು ತೀರದಿಂದ ಮತ್ತೊಂದು ತೀರಕ್ಕೆ ಹಾರಿ, ಬಿರುಗಾಳಿಯ ವೇಗದಿಂದ ಓಡಿ, ದೂರವಾದ ದಿಗಂತವನ್ನು ಸೇರಿ ಲೀನವಾಯಿತು. ಆ ಅಟ್ಟಹಾಸದ ತೀವ್ರತೆಯಿಂದ ಚರಾಚರವೆಲ್ಲವೂ ಕ್ಷಣಕಾಲ ಸ್ತಂಭಿಸಿದವೆಂದು ಹೇಳಬಹುದು.

ಏಸ್ತಾರವಾಗಿಯೂ ಏಜನವಾಗಿಯೂ ಇದ್ದ ಆ ಸ್ಥಳದಲ್ಲಿ, ನಕ್ಷತ್ರ ವಿಲ್ಲದ, ಚಂದ್ರಸಿಲ್ಲದ, ಮೇಘಮಯವಾದ, ಅಂಧಕಾರಮಯವಾದ ಗಭೀರ ರಾತ್ರಿಯ ಭೀಷಣತೆಯು ಮಧ್ಯೆ, ಹಾವುಗಳಿಗಾವಾಸಸ್ಥಳವಾಗಿ, ಉದ್ದುದ್ದವಾಗಿ ಬೆಳೆದಿರುವ ತೃಣ ಸಮೂಹದಿಂದ ಕೋಭಿಸುತ್ತಾ ಮಳೆಯಿಂದ ನೆನೆದಿರುವ ತೀರದೇಶದಲ್ಲಿ ನಿಂತುಕೊಂಡಿರುವ ಈ ಉನ್ಮಾದಿನಿಯಾರು? ಉದಾತ್ತವಾಗಿಯೂ ಪ್ರಬಲವಾಗಿಯೂ ಇರುವ ತನ್ನ ನಗೆಯ ವೇಗವನ್ನು ಹೇಗಾದರೂ ಹೃದಯ ಮಧ್ಯದಲ್ಲಿ ಅಡಗಿಸಿಕೊಳ್ಳಲಾರಳೇನು?

ಒಂದು ಗಳಿಗೆಯನಂತರ ಮೊದಲನಂತೆಯೇ ಅಟ್ಟಹಾಸದಿಂದೊಡಗೂಡಿ, ಸ್ತ್ರೀ ಕಂಠದಿಂದ–ಪ್ರಾಣನಾಥ! ಹೇಗಿರುವೆ? ಈಗ ಈ ದಾಸಿಯ ಜ್ಞಾಪಕ ಬಂದಿತೆ?–ಎಂದು ಯಾರೋ ಕೂಗಿದರು.

ಕಂಠ ಸ್ವರವನ್ನು ಕೇಳಿ ಫೂಲಸಾಹೇಬಸಿಗೆ ಭಯವಾಯಿತು; ಬಾಡಿದ್ದ ಮುಖವು ಮತ್ತಷ್ಟು ಬಾಡಿತು; ಶರೀರದಲ್ಲಿ ಉಳಿದಿದ್ದ ಅಲ್ಪ ಸ್ವಲ್ಪ ಬಲವೂ ಮಾಯವಾಯಿತು; ಕಂಠಸ್ವರವು ಅವನಿಗೆ ಚಿರಪರಿಚಿತವಾದ ಮೋಹಿನಿಯ ಕಂಠಸ್ವರ. ಮೋಹಿನಿಯು ಯಾವಲ್ಲಿ ನಿಂತು ಪ್ರಶ್ನೆ ಮಾಡಿದಳೋ ಫೂಲಸಾಹೇಬನು ಹುಬ್ಬು ಗಂಟುಹಾಕಿಕೊಂಡು ತೀಕ್ಷ್ಣ ದೃಷ್ಟಿಯಿಂದ ಆ ಕಡೆ ನೋಡಿದನು. ತೀರದಲ್ಲಿ, ಆ ಆಲದಮರದ ಬುಡದಲ್ಲಿ, ಆ ಗಾಢಾಂಧಕಾರದ ಮಧ್ಯದಲ್ಲಿ, ಒಂದು ನಾರೀಮೂರ್ತಿಯು ಹರಿತವಾಗಿಯೂ ಉದ್ದವಾಗಿಯೂ ಇದ್ದ ಒಂದು ಚೂರಿಯನ್ನು ಹಿಡಿದು ನಿಂತಿರುವುದು ಕಾಣಿಸಿತು. ಆ ಕತ್ತಲೆಯಲ್ಲಿ ಅವಳನ್ನು ಗುರ್ತಿಸಲಾಗಲಿಲ್ಲ. ಆದರೆ ಅವಳು ಆ ರಾಕ್ಷಸಿಯಾದ ಮೋಹಿನಿಯಲ್ಲದೆ ಮತ್ತೆ ಯಾರೂ ಅಲ್ಲ ಎಂಬ ವಿಷಯದಲ್ಲಿ ಫೂಲಸಾಹೇಬಸಿಗೆ ಎಳ್ಳಷ್ಟಾ

ದರೂ ಸಂಶಯ ಉಳಿಯಲಿಲ್ಲ. ದಟ್ಟವಾದ ಆ ಕಗ್ಗತ್ತಲೆಯಲ್ಲಿ ಅವಳ ಕೈಯಲ್ಲಿದ್ದ ಚೂರಿಗಿಂತಲೂ, ಉಜ್ವಲವಾದ ಅವಳ ದೊಪ್ಪ ದೊಡ್ಡ ಕಣ್ಣುಗಳು ಹೆಚ್ಚಾಗಿ ಥಳಥಳಿಸುತ್ತಲಿದ್ದುವು; ಅವುಗಳಲ್ಲಿ, ಅಂತರ್ದಾಹದಿಂದ ಭಯಂಕರವಾಗಿ ಉರಿಯುತ್ತಿರುವ ಒಂದು ಬಗೆಯ ಕಾಡುಗಿಚ್ಚು ರೋಷಭರದಿಂದ, ಪ್ರತಿಕ್ಷಣದಲ್ಲಿಯೂ ಅತಿಶಯವಾಗಿ ಹೆಚ್ಚಿ ಬರುತಲಿದ್ದಿತು.

ನೋಡಿ ಫೂಲಸಾಹೇಬನಿಗೆ ಭಯವಾಯಿತು. ಭಯಗೊಂಡ ಹೃದಯದಿಂದಲೂ, ಕಂಪಿತಕಂತದಿಂದಲೂ ಫೂಲಸಾಹೇಬನು—ನೋಹಿನಿ! ಈ ಹೊತ್ತಿನಲ್ಲಿ ಈ ನಟ್ಟಳಕ್ಕೆ ಎಲ್ಲಿಂದ ಬಂದೆಯೆ?—ಎಂದನು.

ನೋಹಿನಿ—ಬಹುದೂರದಿಂದ. ಏಕೆ ಬಂದುದೆಂದು ಕೇಳುವೆಯೋ? ಹೇಳುತ್ತೇನೆ, ನೀನು ನಿನ್ನ ಪ್ರಿಯತಮಳೊಡನೆ ಜಲಕೇಳಿಯಲ್ಲಿ ಎಷ್ಟರ ಮಟ್ಟಿಗೆ ಆಸಕ್ತನಾಗಿರುವೆಯೋ ನೋಡೋಣವೆಂದು ಬಂದೆನು—ಎಂದು ಹೇಳಿ ಪೊದಲಿನಂತೆಯೇ, ಹುಚ್ಚಿಯ ಹಾಗೆ, ಗಟ್ಟಿಯಾಗಿ ನಕ್ಕಳು. ತಿರಸ್ಕಾರ ಸೂಚಕವಾದ, ಗಗನಭೇದಿಯಾದ ಆ ಹಾಸ್ಯ ಧ್ವನಿಯು ಗಂಭೀರವಾದ ಮೋಘ ಧ್ವನಿಯನ್ನು ಮುಂಚಿ, ಬಿರುಗಾಳಿಯ ಗರ್ಜನೆಯನ್ನು ಭೇದಿಸಿ, ವಿರಾಮವಿಲ್ಲದ ಜಲಕಲ್ಲೋಲವನ್ನು ಅಡಗಿಸಿ, ಬಹುದೂರಕ್ಕೆ ಕೇಳಿಸಿತು; ಬಹುದೂರದವರೆಗೆ ಭಯವನ್ನುಂಟು ಮಾಡಿತು; ಗಭೀರವಾದುದಾದರೂ ದುರ್ಬಲವಾಗಿದ್ದ ಫೂಲಸಾಹೇಬನ ಹೃದಯದಲ್ಲಿ ಪ್ರಬಲ ವೇಗದಿಂದ ಸಹಿಸಲಾರದ ಒಂದು ಆಘಾತ ಮಾಡಿತು. ಆಗ ನೋಹಿನಿಯು ಗಂಭೀರ ಭಾವದಿಂದ,—ಏನೋದ, ಈಗ ಏನಾಯಿತು? ಮಹಾಮಹಿಮಾಸ್ಪದಳಾದ ಗಂಗೆಯ ಸುಶೀತಲವಾದ ಪುಣ್ಯಪ್ರವಾಹ ಮಧ್ಯದಲ್ಲಿ ನಿಂತು, ಈಗ ಒಂದುಸಲ ಸಮಸ್ತ ಜೀವನದ ಪಾಪಕಾರ್ಯಗಳನ್ನೆಲ್ಲ ಸ್ಮರಿಸಿಕೊಳ್ಳುವೆಯಾ? ಅತಿದುರ್ಬಲವಾದ, ಬಹು ಕ್ಷೀಣವಾದ ನಾರೀಹೃದಯವೊಂದನ್ನು ಸಾವಿರಾರು ವಂಚನೆಗಳಿಂದ ಮರುಳುಗೊಳಿಸಿದ್ದೂ ಅಲ್ಲದೆ, ತೊಳೆಯಬಾರದ ಕಳಂಕದ ಮಧ್ಯದಲ್ಲಿ ಬಿಟ್ಟು ಬಂದುದು ನೆನಪಾಯಿತೆ? ಏನೋದ, ಮುಗ್ಧಳೂ,

ಸಹಜವಾಗಿ ಏನೂ ತಿಳಿಯದವಳೂ, ಕರ್ತವ್ಯವನ್ನು ಬಿಟ್ಟವಳೂ, ಚಾಲ್ಲಾನ ಹೀನಳೂ, ಮೂಢಳೂ ಆದೊಬ್ಬ ಅಬಲೆಯನ್ನು ಸಂಸಾರದಲ್ಲಿನ ಸಹಸ್ರ ಸ್ನೇಹ ಬಾಹುಗಳ ದೃಢಬಂಧನದಿಂದ ತಪ್ಪಿಸಿದೆ; ಅಪಾರವಾದ ಪವಿತ್ರತೆಯಿಂದ ತೊಳಗಿಸಿದೆ; ಅಗಾಧವಾದ, ಅಸೀಮವಾದ, ಅನಂತವಾದ, ಅಭ್ರಾಂತವಾದ ಪ್ರೀತಿಯೆಂಬ ಸ್ವರ್ಗೀಯ ಸೌಂದರ್ಯದಿಂದ ಪೂರ್ಣವಾಗಿ, ಚಿತ್ರವಿಚಿತ್ರವಾಗಿ, ಸ್ನಿಗ್ಧಚ್ಛಾಯಾಮಯವಾಗಿರುವ 'ತೆರೆ' ಎಂಬ ಸೂಕ್ಷ್ಮಾವರಣವನ್ನು ತೆಗೆದುಹಾಕಿಸಿದೆ. ನಾರೀ ಜೀವನದಲ್ಲಿ ಪ್ರಿಯತಮ ರತ್ನವಾಗಿಯೂ, ಸಮಸ್ತ ಸೌಂದರ್ಯದ ಸಾರಭೂತವಾಗಿಯೂ, ಪವಿತ್ರತೆಗೆಲ್ಲ ಕೇಂದ್ರಸ್ಥಾನವಾಗಿಯೂ, ಐಶ್ವರ್ಯಗಳಿಗೆಲ್ಲ ಆಶ್ರಯವಾಗಿಯೂ, ಕಾಂತಿಗಳೆಲ್ಲಕ್ಕೂ ಉಜ್ವಲತೆಯಾಗಿಯೂ ಇದ್ದ ಆ ಪಾತಿವ್ರತ್ಯದಿಂದ ಅವಳನ್ನು ದೂರಮಾಡಿದೆ. ಅಂತಹವನ್ನು, ಹೀನತೆಯೆಂಬ ಕಾಡಮರಳಿನಿಂದ ತುಂಬಿದ, ದಿಗ್ದಿಗಂತ ಶೂನ್ಯವಾದ, ಕರ್ಕಶತೆಯಿಂದ ನೀರಸವಾದ, ಏಕಾಕಿ ಹೀನತೆಯೆಂಬ ಮರುಭೂಮಿಯ ಮಧ್ಯೆ, ಮಮತಾ ಹೀನತೆಯ ಮಧ್ಯೆ, ಪ್ರೇಮ ಶೂನ್ಯತೆಯ ಮಧ್ಯೆ, ಬಿಟ್ಟುಬಂದುದು ಈಗ ನೆನಪಿಗೆ ಬಂದಿತೇನು? ಅವೆಲ್ಲವೂ ಇಂದು ಸ್ಮರಣೆಗೆ ಬಂದುವೋ? ಇವುಗಳೂ ಅಲ್ಲದೆ, ದುರಾಸೆಯಿಂದ ನೀನು ಒಬ್ಬ ಮುಸಲಮಾನರ ಹುಡುಗಿಯನ್ನು ಮದುವೆಯಾಗಿ ಜಾತಿ ಭ್ರಷ್ಟನೂ ಧರ್ಮ ಭ್ರಷ್ಟನೂ ಆದೆ; ಕಡೆಗೆ ಆ ಹೆಂಡತಿಯೂ ತಂದೆಯೂ ಆಸ್ತಿಯನ್ನೆಲ್ಲಾ ಕೈವಶಪಡಿಸಿಕೊಳ್ಳುವುದಕ್ಕಾಗಿ ನಿನ್ನ ಕೈಯ್ಯಾರ ಸ್ತ್ರೀ ಹತ್ಯೆಯನ್ನು ಮಾಡಿದೆ; ನಿನಗಿದ್ದ ಒಬ್ಬ ಮಗಳನ್ನು ಮರುಕಗೊಳ್ಳದೆ ಗಂಗಾಪಕ್ಷದಲ್ಲಿ ಸಮರ್ಪಿಸಿದೆ; ಇಂತಹ ನಿನ್ನನ್ನು ನೋಡುವುದೂ ಪಾಪಕರ. ಏನೋದ, ಈ ಎಲ್ಲ ಪಾಪಗಳ ಫಲವನ್ನು, ಈಗಲೂ, ಹೊಂದದೇ ಇರಬಹುದೆಂದು ಭಾವಿಸಿರುವೆಯಾ? ಎಂದಿಗೂ ಸಾಧ್ಯವಿಲ್ಲ. ಈಗಲೂ ಹಗಲೂ ರಾತ್ರಿಗಳಾಗುತ್ತಿವೆ—ಚಂದ್ರ ಸೂರ್ಯರ ಉದಯಾಸ್ತಗಳಾಗುತ್ತಿವೆ; ಗಾಳಿ ಬೀಸುತ್ತದೆ; ಈಗಲೂ ವಿಶ್ವೇಶ್ವರನ ಪವಿತ್ರತಮವಾದ ಸಿಹಾಸನದ ಬಳಿ ಪಾಪಪುಣ್ಯಗಳ ವಿಚಾರಣೆ ನಡೆದೇ ನಡೆಯುತ್ತಿದೆ—ಎಂದು ಹೇಳಿದಳು.

ಬಹಳ ಮಾತಿನಿಂದೇನು—ಪ್ರಥಮ ಪರಿಚ್ಛೇದದಲ್ಲಿನ ಮೋಹಿನಿಯು ಆ ವಿನೋದನೂ ಫೂಲಸಾಹೇಬನೂ ಒಂದೇ ವ್ಯಕ್ತಿ. ಯೌವನ ಕಾಲದಲ್ಲಿ ಫೂಲಸಾಹೇಬನಿಗೆ ವಿನೋದನೆಂಬ ಹೆಸರಿತ್ತು. ಆ ಸಮಯದಲ್ಲಿ ವಿಧವೆಯಾಗಿದ್ದ ಮೋಹಿನಿಯು ಮರುಳಾಗಿ ಅವನನ್ನು ಪ್ರಾಣಕ್ಕೆ ಸಮಾನನೆಂದು ಭಾವಿಸಿದ್ದಳು. ಆಗ ಮೋಹಿನಿಯ ಹೃದಯ ಕ್ಷೇತ್ರದಲ್ಲಿ ಬಿದ್ದ ಪಾಪಪುಣ್ಯವೆಂಬ ಬೀಜದ ದೆಸೆಯಿಂದ ವ್ಯಕ್ತವಾಗಿ ಸದ್ಯಃ ವಿಷಮಯ ಫಲವು ಫಲಿಸಿದೆ. ಆ ಎಲ್ಲ ಘಟನೆಗಳನ್ನೂ ಪುನಃ ಬರೆಯುವುದು ನಿಷ್ಪ್ರಯೋಜನ. ನಮ್ಮ ಈ ಚರಿತ್ರೆಯ ಆದಿ ಭಾಗದಲ್ಲಿಯೇ ಮೋಹಿನಿಯ ಮುಖದಿಂದ ಆ ಕಥೆಯ ಅನೇಕ ಭಾಗಗಳನ್ನು ತಿಳಿದಿರುವಿರಿ. ಈಗ ಮೋಹಿನಿಯು ಫೂಲಸಾಹೇಬನಿಂದ, ನಾಯಿನರಿಗಳಹಾಗೆ ಬಿಡಲ್ಪಟ್ಟವಳು, ಸತ್ಸಮಾಜಗಳವರಿಂದ ತ್ಯಜಿಸಲ್ಪಟ್ಟವಳು, ಸಹಿಸಲಸಾಧ್ಯವಾದ ಕ್ರೋಧ, ಈರ್ಷೆ, ದ್ವೇಷಗಳಿಂದ ನೊಂದು ಹತಾಶಳಾಗಿ ಉನ್ಮಾದಿನಿಯಾಗಿರುವಳು. ಸದ್ಯಃ ಅವಳು ಯಾವುದಾದರೊಂದು ಮಾರ್ಗದಲ್ಲಿ ಫೂಲಸಾಹೇಬನಿಗೆ ಈ ಜಗತ್ತಿನಿಂದ ವಿರಾಮ ದೊರಕಿಸಿ, ಅವನ ಹೆಸರನ್ನು ಬದುಕಿರುವವರ ಪಟ್ಟಿಯಿಂದ ಅಳಿಯಿಸಿಬಿಡುವಂತೆ ಮಾಡಿದನಂತರ ಅವಳು ತೃಪ್ತಳೂ ಸಂತುಷ್ಟಳೂ ಆಗುವಳು. ಅವಳ ಹೃದಯದೊಳಗೆ ನಿರ್ಬಂಧಿಸಲ್ಪಟ್ಟ ದ್ವೇಷವೆಂಬುದು, ಮಣಿಯನ್ನು ಕಳೆದುಕೊಂಡ ಫಣಿಯಂತೆ, ತನ್ನನ್ನು ತಾನೇ ಕಚ್ಚಿಕೊಂಡು, ತನ್ನ ವಿಷದಿಂದ ತಾನೇ ಸಂಕಟಪಡುತ್ತಾ ರಾತ್ರಿ ಹಗಲೂ ಗರ್ಜಿಸುತ್ತಾ ತನ್ನಿಷ್ಟಕ್ಕೆ ತಾನೇ ತೆಕ್ಕೆ ಕಟ್ಟಿಕೊಳ್ಳುವುದು; ಅದು ಫೂಲಸಾಹೇಬನನ್ನು ಕಚ್ಚುವವರೆಗೆ ಹೇಗೂ ಶಾಂತವಾಗಲಾರದು.

ಆರನೆಯ ಪರಿಚ್ಛೇದ

ಸರ್ಪಯುಗಳ

ಫೂಲಸಾಹೇಬನು ಸೋಫಿಸಿಯ ಮಾತು ಕೇಳಿ ಸ್ವಲ್ಪ ಹೊತ್ತು ಮೌನದಿಂದ ಇದ್ದು, ಅನಂತರ—ಆ ವಿಚಾರಗಳು ಈಗ ಏಕೆ ಸೋಫಿಸಿ? ಈಗ ಆ ನನ್ನ ಅಪರಾಧಗಳೆಲ್ಲವನ್ನೂ ಮನ್ನಿಸಿ ನನ್ನನ್ನು ರಕ್ಷಿಸು; ನಿನ್ನ ನೆರಗನ್ನು ಬತ್ತ್ರಕಡೆ ಬಸೆ, ಅದರಿಂದ ನಾವು ಬದುಕಿ ಕೊಳ್ಳುತ್ತೇವೆ. ಮತ್ತೆ ಯಾವ ರೀತಿಯಿಂದಲೂ ನಾನು ಇಲ್ಲಿಂದ ಪಾರಾಗುವ ಹಾಗೆ ಇಲ್ಲ; ಈ ಸ್ಥಳದಲ್ಲಿ ನೀರು ಸೆಳೆಯುತ್ತಿದೆ. ಒಂದು ಸಲ ಕೈಬಿಟ್ಟರೂ ಸಾಕು, ಇದಿರಾಗಿರುವ ಸುಳಿಗೆ ಸಿಕ್ಕಿ ಪ್ರಾಣ ಕಳೆದುಕೊಳ್ಳಬೇಕಾಗುವುದು. ಸೋಫಿಸಿ! ಕಾಪಾಡು ಕಾಪಾಡು. ಈಗ ನಾನು ತುಂಬ ಕಷ್ಟದಲ್ಲಿದ್ದೇನೆ; ಈ ಸ್ಥಿತಿಯಲ್ಲಿ ಇನ್ನೊಂದು ಗಳಿಗೆಯೂ ಇರಲಾರೆ—ಎಂದನು.

ಏನಮಾಡಿದರೆ ಈಗಿರುವ ರೀತಿಯಲ್ಲಿ ಇನ್ನೊಂದು ಗಳಿಗೆಯಾದರೂ ಇರಲಾರೆಯೋ ಅದನ್ನು ಈಗಲೇ ಮಾಡುತ್ತೇನೆ—ಎಂದು ಹೇಳಿ, ಸೋಫಿಸಿಯು ಅದೇ ತೊಡಪುರದ ಇನ್ನೊಂದು ಬೆಳಲನ್ನು ಹಿಡಿದು ಕೊಂಡು ಮುಂದಕ್ಕೆ ಬಾಗಿ, ಯಾವ ಬೆಳಲನ್ನು ಹಿಡಿದು ಫೂಲ ಸಾಹೇಬನು ಈವರೆಗೂ ಅತಿಕಷ್ಟದಿಂದ ಜೀವರಕ್ಷಣೆ ಮಾಡಿಕೊಂಡಿದ್ದನೋ ಅದರಮೇಲೆ ತನ್ನ ಚೂರಿಯಿಂದ ಹೊಡೆಯಲಾರಂಭಿಸಿದಳು.

ಫೂಲಸಾಹೇಬನು ಕಾತರಸ್ವರದಿಂದ,—ಇದೇನು ಸರ್ವನಾಶ! ಸೋಫಿನಿ, ನನ್ನನ್ನು ಮುಳುಗಿಸಿ ಕೊಲ್ಲಬೇಡ. ರಕ್ಷಿಸು, ಕಾಪಾಡು ಸೋಫಿಸಿ, ನನ್ನನ್ನು ಕ್ಷಮಿಸು, ಕಾಪಾಡು.—ಎಂದು ಬೇಡಿಕೊಂಡನು.

ಸೋಫಿಸಿ—(ನಗುತ್ತೆ) "ನಿನ್ನ ಅಪರಾಧಕ್ಕೆ ಕ್ಷಮೆಯೆನ್ನುವುದಿಲ್ಲ; ಇದ್ದಿದ್ದರೆ ಮಾಡುತ್ತಿದ್ದೆ. ಈಗ, ಒಂದು ಬಾಣದಿಂದ ಬರಶೈಡ್ಡು ಹಕ್ಕಿಗಳನ್ನು ಹೊಡೆಯುವ ಸುಯೋಗವನ್ನು ಕೊಂಜಕ್ಕೆ ಏರಗಟ್ಟುಕೊಡಲಾದೀತೆ—ಏನೋದ? ನಿಮ್ಮಿಬ್ಬರನ್ನೂ ನೀರಲ್ಲಿ ಮುಳುಗಿಸುವುದು

ಹಾಗಿರಲಿ. ನಿಮ್ಮನ್ನು ತುಂಡು ತುಂಡಾಗಿ ಕತ್ತರಿಸಿಹಾಕುವುದಕ್ಕೆ ಅನುಕೂಲವಿದ್ದಿದ್ದ ಪಕ್ಷದಲ್ಲಿ ಮತ್ತೆಷ್ಟು ಸುಖವಾಗುತ್ತಿದ್ದೆನೋ?—ಎಂದು ಹೇಳುತ್ತಾ ಪುನಃ ಬೆಳಲನ್ನು ಕತ್ತರಿಸತೊಡಗಿದಳು.

ಫೂಲಸಾಹೇಬನು ಸಹಿಸಾಧ್ಯವಾದ ಯಾತನೆಯಿಂದ ಜೋರಾಗಿ ಹೊಂದಲು ಮಾರ್ಗವಿಲ್ಲದವನಾಗಿ ಚೀರಿಕೊಂಡನು. ತಲೆ ಸುತ್ತಿತು; ಪೆಟ್ಟುತಿಂದ ಸಿಂಹದಂತೆ ಗರ್ಜಿಸುತ್ತಾ,—ಸೋಪಿಸಿ, ಪಿಶಾಚಿ, ರಾಕ್ಷಸಿ, ಈಗಲೂ ನೆನಪಿಡು—ಹೇಗಾದರೂ ಬದುಕಿದೆನಾದರೆ, ಇದಕ್ಕೆ ಸರಿಯಾದ ಪ್ರಾಯಶ್ಚಿತ್ತವನ್ನೇ ಮಾಡುತ್ತೇನೆ. ಫೂಲಸಾಹೇಬನಿಂದ ಎಂದಿಗೂ ತಪ್ಪಿಸಿಕೊಳ್ಳಲಾರೆ—ಎಂದು ಹೇಳಿದನು.

ಉನ್ಮಾದಿನಿಯಾದ ಸೋಪಿಸಿಯು, ಮೊದಲಿನ ಹಾಗೆಯೇ ಕೈಗೊಂಡ ಕಾರ್ಯದಲ್ಲಿ ತತ್ಪರಳಾಗಿರುತ್ತಾ, ಸದ್ಯಃ ನೀನು ಬದುಕಿಕೊಳ್ಳುವ ಪ್ರಯತ್ನಮಾಡು; ಆನಂತರ ನನ್ನ ಉಚಾರವನ್ನು ಕುರಿತು ಆಲೋಚಿಸುವುದಕ್ಕೆ ಅವಕಾಶ ಹೊಂದುವೆ. ಪಿಶಾಚಿ, ನೀನು ಎಷ್ಟೋ ದಿನ, ನಗೆಮೊಗದಿಂದ, ಎಷ್ಟೋ ಮುಂದಿ ನಿರಪರಾಧಿಗಳ ಪ್ರಾಣ ತೆಗೆದಿರುವೆ. ನಿನ್ನ ಏಷದಿಂದ, ನಿನ್ನ ಚೂರಿಯ ಮೊನೆಯಿಂದ, ಎಷ್ಟು ಜನರ ಪ್ರಾಣಗಳು ಈ ಪೃಥ್ವಿಯಿಂದ ಮಾಯವಾಗಲಿಲ್ಲ? ಅವರ ಯಾತನಾಮಯವಾದ ಮರಣವನ್ನು ನಗೆಮೊಗದಿಂದ ನೀನೇ ನೋಡಿರುವೆ. ಆದರೆ ಇಂದು ಅಂತಹ ವೀರಪುರುಷನಾದ ನೀನು ಕೂಡ, ಮೃತ್ಯು ಭಯದಿಂದ ಹೀಗೆ ವ್ಯಾಕುಲಿತನಾಗಬಹುದೆ? ಇಂದೋ ಅಥವಾ ನಾಳೆಯೋ ಬಂದೇ ಬರುವ ಮೃತ್ಯುವಿಗಾಗಿ ಇಷ್ಟು ಭಯವೆ? ಚಿಃ! ಚಿಃ! ನಿನ್ನನ್ನು ಇಷ್ಟು ಜೀಗ ಕೊಲ್ಲುವುದರಿಂದ ಇನ್ನೂ ಒಂದು ಪ್ರಯೋಜನವುಂಟು. ಬಹು ಸಂಕಟಕರವಾದ ವಿಚಾರ,—ನಿನ್ನ ಮೋಸಣ ಮುಖವನ್ನು ನಾನು ಹೇಗೂ ಬಿಡಲಾರದವಳಾಗಿದ್ದೇನೆ. ಹಾಗೆ ಬಿಡುವುದು ಸಾಧ್ಯವಿದ್ದಿದ್ದ ಪಕ್ಷದಲ್ಲಿ, ಇಷ್ಟು ನಿರ್ದಯಳಾಗಿ ನಿನ್ನನ್ನು ಕೊಲ್ಲುವುದಕ್ಕೆ ಬರುತ್ತಿರಲಿಲ್ಲ. ನಿನ್ನನ್ನು ಕೊಂದಲ್ಲದೆ ನನಗೆ ಸಾಯುವುದಕ್ಕೆ ಮಾರ್ಗವೇ ಇಲ್ಲ; ಈ ಪ್ರಪಂಚದಲ್ಲಂತೂ ನಿನ್ನನ್ನು ಹೊಂದಲಾಗಲಿಲ್ಲ;

ಈಗ ನಿನ್ನನ್ನು ಕೊಂದು, ಅನಂತರ ನಾನೇ ಪ್ರಾಣ ತೆಗೆದುಕೊಂಡು, ಪರಲೋಕದಲ್ಲಿ—ಅದು ನರಕವೇ ಆದರೂ ಚಿಂತೆಯಿಲ್ಲ; ಅಥವಾ ಮತ್ತೆ ಯಾವ ಸ್ಥಳವೇ ಆದರೂ ಸರಿ,—ಅಲ್ಲಿಯಾದರೂ ನಿನ್ನ ಸಂಗಡ ಸೇರಿರುವುದು ಸಾಧ್ಯವೋ ಅಲ್ಲವೋ ನೋಡುತ್ತೇನೆ. ಮೊತ್ತಮೊದಲು ನೀನು ನನಗೆ ಯಾವ ರೀತಿ ಕಾಣಿಸಿಕೊಂಡೆಯೋ ಅದೇ ರೀತಿಯಾಗಿ ನಿನ್ನನ್ನು ಹೊಂದಬಹುದೋ ಇಲ್ಲವೋ ನೋಡಿಬಿಡುತ್ತೇನೆ.—ಎಂದಳು.

ಫೂಲಸಾಹೇಬ—ಮೋಹಿನಿ, ನಿನ್ನ ವಿಚಾರದಲ್ಲಿ ನಾನು ತುಂಬಾ ಅನ್ಯಾಯವಾಡಿದೆನೆಂದು ಈಗ ಚೆನ್ನಾಗಿ ತೋರುತ್ತಿದೆ. ನನ್ನನ್ನು ಉಳಿಸು. ಈ ಬಾರಿ, ನಾನು ನಿನ್ನವನೇ ಆಗುತ್ತೇನೆ. ಮೊದಲಿನಂತೆಯೇ ನಿನ್ನನ್ನು ಪ್ರೀತಿಸುತ್ತೇನೆ.

ಮೋಹಿನಿ—(ನಗುತ್ತಾ) ಏನೋದ, ಪುನಃ ಮರುಳು ಮಾಡುವ ಪ್ರಯತ್ನ ಮಾಡಬೇಡ. ಒಂದು ಬಾರಿ ಮರುಳಾಗಿ ಈ ದುರ್ದೆಸೆಯನ್ನು ನಾನೇ ತಂದುಕೊಂಡೆನು. ನಿನ್ನಂತಹ ಭಯಂಕರನಾದೊಬ್ಬನ ಮಾತು ಕೇಳಿ ಮೋಹಿನಿಯು ಪುನಃ ಬೆರಗಾಗುವಳೆಂದು ಎಣಿಸಿದೆಯಾ? ಈಗ ಇವಳು ಅಂದಿನ ಮೋಹಿನಿಯಲ್ಲ. ಇವಳು ಈಗ ನಿನ್ನ ಪ್ರಣಯಾಕಾಂಕ್ಷಿಯಾಗಿಲ್ಲ; ನಿನ್ನ ಆದರವನ್ನು ಒಲ್ಲಳು, ಪ್ರೀತಿಮಯವಾದ ನಿನ್ನ ಮಧುರಾಲಾಪವು ಬೇಕಾಗಿಲ್ಲ. ಇವಳಿಗೆ ಬೇಕಾದುದು—ನಿನ್ನ ರಕ್ತ, ನಿನ್ನ ಮೃತ್ಯು, ನಿನ್ನ ಪಾಪಿಷ್ಠ ದೇಹವನ್ನು ಕಾಲಿನಿಂದ ತುಳಿಯುವುದು—ಇವೇ. ಏನೋದ! ಈ ಮೋಹಿನಿಗೆ ಈಗ ಇಂತಹ ಅಸಂಭವ ಪರಿವರ್ತನವು ಸಂಘಟಿಸಿರುವುದೊಂದೇ ಬಹು ದುಃಖಕರವಾದ ವಿಚಾರ.

ಈ ಮಾತನ್ನು ಕೇಳಿ ಫೂಲಸಾಹೇಬನು ಹತಾಶನಾಗಿ, ಮರ್ಮ ಭೇದೀಸ್ವರದಿಂದ,—ಮೋಹಿನಿ! ಪಿಶಾಚಿ, ರಾಕ್ಷಸಿ ಏತರಿಂದಲೂ ನಿನಗೆ ದಯೆಬರಲಿಲ್ಲವಲ್ಲ!—ಎಂದನು.

ಮೋಹಿನಿ—ಈ ರಾಕ್ಷಸಿಯಲ್ಲಿ, ಈ ಪಿಶಾಚಳಲ್ಲಿ, ದಯಾಭಿಕ್ಷೆ ಬೇಡಬಹುದೇ, ಏನೋದ! ಇದೇ ನಿನ್ನ ದೊಡ್ಡ ತಪ್ಪಲ್ಲವೆ?—ಎಂದು ಪರಿಹಾಸ ಮಾಡಿದಳು.

ಇದೆಲ್ಲವನ್ನೂ ಜುಮಲೆ ನೋಡಿದಳು; ಬಿಳಲು ತುಂಡಾಗಿ ಕಡಿದು ಬೀಳುವುದಕ್ಕೆ ಹೆಚ್ಚು ಹೊತ್ತು ಬೇಕಾಗಿಲ್ಲ; ಸ್ವಲ್ಪ ಹೊತ್ತಿನೊಳಗಾಗಿಯೇ ಸಮಾಪದಲ್ಲಿನ ಸುಳಿಯು ತಿಮಿರಮಯ ಗರ್ಭದಲ್ಲಿ ತಾಪಬ್ಬರೂ ಅಂತ್ಯಕಾಲದ ಆಶ್ರಯವನ್ನು ಹೊಂದಲೇ ಬೇಕಾಗಿರುತ್ತಿದೆ! ಈವರೆಗೂ ಅವಳು ಮನಸ್ಸಿನೊಳಗಣ ವ್ಯಾಕುಲತೆಯಿಂದ ಮಾತನಾಡದೆ ಬಹು ಕಷ್ಟದಿಂದಿದ್ದಳು. ಇನ್ನು ಹಾಗಿರಲಾರದೇ ಹೋದಳು. ಅವಳು ಬಹು ವಿನೀತ ಭಾವದೊಡನೆ, ಸ್ನೇಹಯುಕ್ತವಾದ ಮಧುರ ಸಂಬೋಧನೆಯಿಂದ ಮೋಹಿನಿಯನ್ನು ಕುರಿತು,—ಅಕ್ಕಯಮ್ಮಾ, ಈ ವಿಪತ್ಕಾಲದಲ್ಲಿ ನಮ್ಮಲ್ಲಿ ನೀನು ದಯೆದೋರದಿರುವುದಾದರೆ, ಮತ್ತೆ ಯಾವ ಉಪಾಯವೂ ಇಲ್ಲ–ಎಂದಳು.

ಮೋಹಿನಿಯು, ನಾತು ಪೂರೈಸಗೊಡದೆ,—ಬಾಯಿಮುಚ್ಚೆ ಪಿಶಾಚಿ, ನಾಯುವ ಕಾಲದಲ್ಲಿ ದೇವರ ಹೆಸರು ಹೇಳೆ, ಬಹು ಪಾಪಕೃತ್ಯಗಳನ್ನು ಮಾಡಿರುವೆ—ಎಂದು ಗದ್ದರಿಸಿದಳು.

ಜುಮಲೆಯು ಅಪಮಾನಿತಳಾದ್ದರಿಂದ ಕೂಡಲೇ ಯಾವ ಉತ್ತರವನ್ನೂ ಕೊಡಲಾರದವಳಾದಳು. ಈ ಅಪಮಾನವು ಅವಳ ಹೃದಯವನ್ನು ಶೂಲದಂತೆ ಭೇದಿಸಿತು; ಮತ್ತೂ ಹೃದಯ ಮಧ್ಯದಲ್ಲಿ ಉಗ್ರತರವಾದ ವಿಷವನ್ನು ಚಲ್ಲಿತು. ಅಚ್ಚ ಕಪ್ಪಾದ ಅವಳ ಕಣ್ಣುಗಳಿಂದ ಬೆಂಕಿಯು ಜ್ವಾಲೆಯು ಹೊರಹೊಮ್ಮುತ್ತಿರುವಂತೆ ತೋರಿತು. ಜುಮಲೆಯು ಹುಬ್ಬು ಗಂಟುಹಾಕಿಕೊಂಡು,—ಯಾವ ರೀತಿಯಿಂದಾದರೂ ನಿನ್ನ ಸಮಾಪಕ್ಕೆ ಬಂದೆನಾದರೆ ಇಂದು ನಿನಗೆ ಈ ಪಿಶಾಚಿಯ ಪರಿಚಯ ಚೆನ್ನಾಗಿ ಮಾಡಿಕೊಡಬಹುದಾಗಿತ್ತು; ನೋಡುತ್ತಿದ್ದ ಹಾಗೆಯೇ, ಅರೆಗಳಿಗೆಯೊಳಗಾಗಿ, ರಕ್ತಾಕ್ತವಾದ ನಿನ್ನ ಶರೀರವು ಯಾವ ರೀತಿಯಿಂದಲಾದರೂ, ನನ್ನ ಕಾಲಿನ ಬಳಿ ಬಿದ್ದಿರಬಹುದಾಗಿದ್ದಿತು. ಆಗಲಿ ಜುಮಲೆಯು ಮೃತ್ಯು ಮುಖದಲ್ಲಿದ್ದರೂ, ನಿನಗೆ ಯಾವುದಾದರೊಂದು ಅಪಕಾರಮಾಡಬಲ್ಲಳೋ ಇಲ್ಲವೋ ನೋಡುವ!—ಎಂದು ಗರ್ಜಿಸಿದಳು.

ಜುಮಲೆಯು, ಪೀಗೆ ಗದ್ದಿಸಿ, ಆ ಮೃತ ಪ್ರಹರಿಯಿಂದ ಬತ್ತಿ ಕೊಂಡು ನಡುವಿನಲ್ಲಿಟ್ಟುಕೊಂಡಿದ್ದ ಬಾಕನ್ನು ತೆಗೆದುಕೊಂಡು ಮೋಪಿಸಿಗೆ ಗುರಿಯಿಟ್ಟು ಎಸೆದಳು. ಮೋಹಿನಿಯು ಬಳಲನ್ನು ಬಡದ ಕೈಯಿಂದ ಪಿಡಿದುಕೊಂಡು ತನ್ನ ದೇಹದ ಭಾರವನ್ನೆಲ್ಲಾ ಅದರ ಮೇಲಿಟ್ಟು ಮುಂದಕ್ಕೆ ಬಾಗಿದ್ದಳು; ಜುಮಲೆಯು ಎಸೆದ ಬಾಕು ಆ ಬಡಗೈಯ್ಯ ಮಧ್ಯ ಭಾಗದಲ್ಲಿ ಪೂರ್ಣವಾಗಿ ನಾಟಿತು; ಆ ಕೂಡಲೇ ರಕ್ತವು ಪ್ರಬಲವೇಗದಿಂದ ಹರಿಯಿತು. ಉನ್ಮಾದಿನಿಯಾದ ಮೋಹಿ ನಿಯು ಅದನ್ನು ಲಕ್ಷ್ಯಮಾಡದೆ, ಬಳಲನ್ನು ಕಟದುಹಾಕುವುದಕ್ಕೇ ಹೆಚ್ಚು ಗಮನಕೊಟ್ಟಿದ್ದಳು. ಅಂತಹ ಹೆಟ್ಟು ಬಿದ್ದಿದ್ದರೂ, ಬಂದು ಗಳಿಗೆಯವರೆಗೆ ಅವಳ ಮುಖದಲ್ಲಿ ಯಾತನಾ ಸೂಚಕವಾದ ಚಿಹ್ನೆಗಳು ಕಾಣಲಿಲ್ಲ. ಮೊದಲಿನ ಹಾಗೆ ಸಿರುದ್ವಿಗ್ನಳಾಗಿ, ಪ್ರತಿಹಿಂಸಾಪರಾ ಯಣಳಾಗಿ, ಸ್ಥಿರಳಾಗಿ ಮತ್ತೂ ಸ್ಥಿರಸಂಕಲ್ಪವುಳ್ಳವಳಾಗಿ ತಾನು ಮಾಡಬೇಕಾದ ಕೆಲಸದಲ್ಲಿ ನಿರತಳಾಗಿದ್ದಳು.

ಮೋಪಿಸಿಯಿಂದ ಕರುಣೆಯು ತಿಲಾಂಶವಾದರೂ ದೊರೆಯುವುದಿಲ್ಲ ವೆಂದು ಫೂಲಸಾಹೇಬನು ತಿಳಿದುಕೊಂಡನು; ಆಗ, ಅವನು ತನ್ನಲ್ಲಿದ್ದ ಬಂದೂಕದ ನಳಿಗೆಯನ್ನು ಗುರಿಮಾಡಿ ಮೋಪಿಸಿಗೆ ಬಲವಾಗಿ ಎಸೆದನು; ಅಂಧಕಾರದಲ್ಲಿ ಗುರಿಯು ಸರಿಯಾಗಲಿಲ್ಲ; ಅದು ಆ ಪಟವ್ಯಕ್ಷ ಮೂಲದಲ್ಲಿ ಅರ್ಧ ಭಾಗದ ಮಟ್ಟಿಗೆ ನಟ್ಟುಕೊಳ್ಳುವಷ್ಟು ಬಲವಾಗಿ, ಹೊಗೆಗುದ್ದಿತು.

ಮೋಪಿಸಿಯು 'ಹಾ ಹಾ' ಎಂದು ನಕ್ಕಳು. ಫೂಲಸಾಹೇಬನು ಆಕೃತ ಕಾರ್ಯನಾದುದರಿಂದ ತಲೆ ತಗ್ಗಿಸಿದನು. ಆಗ ಮೋಪಿಸಿಯು ತನ್ನ ಚೂರಿಯನ್ನು ಮತ್ತಷ್ಟು ವೇಗವಾಗಿ ವ್ಯಾಪಹರಿಸಿದಳು. ಸ್ವಲ್ಪದ ರಲ್ಲಿಯೇ ಆ ಬಳಲು ಎರಡಾಗಿ ತುಂಡಿಸಿತು. ಅದರ ಸಂಗಡಲೇ ಫೂಲ ಸಾಹೇಬನೂ ಜುಮಲೆಯೂ ಪ್ರಬಲ ಪ್ರವಾಹಮುಖದಲ್ಲಿ ತೇಲುತ್ತಾ ಹೋಗಿ ನದಿಪಾಪದಲ್ಲಿದ್ದ ಸುಳಿಗೆ ಸಿಕ್ಕಿದರು. ಅಲ್ಲಿ ಬಂದೆರಡು ಬಾರಿ

ಸುತ್ತಿ ಅವರು ಆ ಅನಂತ ಜಲರಾಶಿಯ ಮಧ್ಯೆ ಎಲ್ಲಿ ಹೋದರೋ ಪುನಃ ನೋಡಲಾಗಲಿಲ್ಲ.

ಅನಂತರ ಆ ಸ್ಥಳದಲ್ಲಿ ನೀರು ಮೊದಲಿನ ಹಾಗೆಯೇ ಸುತ್ತುತ್ತಿತ್ತು, ಹಾಗೆಯೇ ಉಕ್ಕುತ್ತಲಿತ್ತು; ಅದೇ ರೀತಿಯಲ್ಲಿ ಗರ್ಜಿಸುತ್ತಲೂ ಇತ್ತು; ಜಲವು ಮೊದಲಿನಂತೆಯೇ ಅಶಾಂತ, ವೇಗವಾನ್; ಸುಳಿಯು ಸಶಬ್ದ! ಆಗ ನೋಹಿನಿಯು ಅಟ್ಟಹಾಸವು ಆ ನಿಶಾಗಗನವನ್ನು ಮತ್ತೊಂದುಬಾರಿ ಕಂಪಿಸುವಂತೆ ಮಾಡುತ್ತಾ ಬಹು ದೂರದವರೆಗೆ ಹರಿಯಿತು. ಗಂಗಾನದಿಯ ಮತ್ತೊಂದು ತೀರದಲ್ಲಿ, ದೂರವಾಗಿದ್ದ ಅಡವಿಯೊಳಗೆ, ಅದರ ಪ್ರತಿಧ್ವನಿಯೊಂದು ಎದ್ದು ಘೋರಾಗಾಕೆಯ ಗರ್ಜನೆಯೊಡನೆಯೂ, ಘೋರಾಮಲ್ಲದ ಜಲಕಲ್ಲೋಲದೊಡನೆಯೂ ಮಿಳಿತವಾಯಿತು.

ಏಳನೆಯ ಪರಿಚ್ಛೇದ

ಉಳಿದ ರಾತ್ರಿಯಲ್ಲಿ

ಆ ಘಟನಾಪೂರ್ಣವಾದ ರಾತ್ರಿಯ ಏಚಾರಗಳನ್ನೇ ಏವರಿಸುವೆವು.

ರಾತ್ರಿ ಎರಡು ಗಂಟೆಯಾದಾಗ ಪ್ರಹರಿಗಳೆಲ್ಲರೂ ಬದಲಾಯಿಸ ತೊಡಗಿದರು. ಆಗ, ಆ ಪೂರ್ವದಿಕ್ಕಿನ ಪ್ರಾಕಾರದ, ಆ ಮೃತನಾದ ಪ್ರಹರಿಗೆ ಬದಲಾಗಿ ಒಬ್ಬನು ಬಂದನು. ಯಾವನಿಗೆ ಬದಲಾಗಿ ತಾನು ಅಲ್ಲಿಗೆ ಬಂದನೋ ಅವನನ್ನು ಅಲ್ಲಿ ಕಾಣದಿದ್ದುದರಿಂದ ಹೊಸಬನು ಏಸ್ಮಿತನಾದನು. ಅನಂತರ ಗೋಡೆಯ ಮೇಲೆ ಸ್ವಲ್ಪದೂರ ಮುಂದಾಗಿ ಹೋಗಿ ನೋಡಿದನು. ಅಲ್ಲಿ ಅವನ ಇದಿರಲ್ಲಿಯೇ ತಾನು ಯಾವನನ್ನು ಕಾಣದೆ ಏಸ್ಮಿತನಾಗಿದ್ದನೋ ಅವನ ರಕ್ತಾಕ್ತವಾದ ದೇಹವು ಬಿದ್ದಿರುವುದನ್ನು ಕಂಡು ಅಸ್ಥಿರನಾದನು, ಸ್ತಂಭಿತನಾದನು ಮತ್ತೂ ಭೀತನಾದನು. ವಿಶ್ವಾಸಿಯೂ, ಸ್ವಾಮಿಭಕ್ತನೂ, ಕರ್ಮಠನೂ ಆದ

ಪ್ರಹರಿಯ ಶತಚ್ಛಿದ್ರವಾದ ವಕ್ಷವೂ ಅರ್ಧ ನಿಮೀಲಿತ ನೇತ್ರವೂ ಉಳ್ಳ ಪ್ರಾಣಹೀನ ದೇಹವನ್ನು ನೋಡಿದನು. ಇವನನ್ನು ಇಷ್ಟು ನಿಷ್ಕರುಣೆಯಿಂದ ಯಾರು ಕೊಂದರೋ ಊಹಿಸಲಾಗಲಿಲ್ಲ.

ಆಗಲೂ ಮಳೆ ಬೀಳದಿರಲಿಲ್ಲ; ಆದರೆ ವೇಗವು ಮೊದಲಿಗಿಂತಲೂ ಬಹಳ ಮಟ್ಟಿಗೆ ಕಡಿಮೆಯಾಗಿದ್ದಿತು; ಬಿರುಗಾಳಿಯ ಬಿರುಸೂ ಕಡಿಮೆಯಾಗಿದ್ದಿತು. ಫೂಲಸಾಹೇಬನೂ ಬುಮಲೆಯೂ ಏನಾದರು? ಸತ್ತರೋ ಅಥವಾ ಬದುಕಿಕೊಂಡರೋ ತಿಳಿಯದು. ಅವರಿಬ್ಬರನ್ನೂ ಮತ್ತೂ ನಿರೀಹರಾಗಿಯೂ ನಿರಪರಾಧಿಗಳಾಗಿಯೂ ಇದ್ದ ಆ ನಿಹತ ಪ್ರಹರಿಗಳಿಬ್ಬರನ್ನೂ ಗ್ರಾಸಮಾಡಿದ ಕ್ಷುಧಾತುರಳಾದ ಭಯಂಕರ ನಿಶಾರಾಕ್ಷಸಿಯು ಆಗ ಸ್ವಲ್ಪ ಮಟ್ಟಿಗೆ ಶಾಂತಳೂ ಸುಸ್ಥಿರಳೂ ಆದಂತೆ ತೋರಿದಳು. ಮೇಘಾಂಧಕಾರಮಯವಾದ ಆಕಾಶವು ಇನ್ನೂ ಪರಿಷ್ಕಾರವಿಲ್ಲ–ಜೇಗನೆ ಆಗುವ ಸಂಭವವೂ ಇಲ್ಲ. ಈಗಲೂ ಮೇಘವು ನಕ್ಷತ್ರಗಳನ್ನು ಮುಚ್ಚಿ, ಚಂದ್ರನಿಗೆ ಮರೆಯಾಗಿ ಕೋಮಲವಾದ ನೀಲವರ್ಣವನ್ನು ಹರಡಿರುವಂತೆ ನಿಬಿಡವಾಗಿಯೇ ಇದ್ದಿತು. ಆಕಾಶದಲ್ಲಿ ಅಂಕಿತವಾದಂತೆ ತೋರುತ್ತಿ ಬಹುದೂರ ವ್ಯಾಪಿಯಾದ ನದಿಯ ತೀರದಲ್ಲಿರುವ ವನಸೃಕ್ಷ್ಮಸಮೂಹವು ಝೇಂಕಾರಸಹಿತವಾಗಿ ಹಿಂದಕ್ಕೂ ಮುಂದಕ್ಕೂ ಹಾಗೆಯೇ ತೂಗಾಡುತ್ತಿದ್ದುದರಿಂದ ಅಂಧಕಾರ ಸಮುದ್ರವು ಉಕ್ಕಿ ಅಲೆಗಳಿಂದ ಒಡಗೂಡಿರುವಂತೆ ತೋರುತ್ತಲಿದ್ದಿತು.

ರಕ್ತದಿಂದ ತೊಯ್ದಿದ ಆ ಮೃತದೇಹವನ್ನು ನೋಡಿ, ಯಾವುದೋ ದಾರುಣವಾದ ದುರ್ಘಟನೆಯು ಘಟಿಸಿರುವುದೆಂದು ತಿಳಿದುಕೊಳ್ಳಲು ಪ್ರಹರಿಗೆ ಬಾಕೀವುಳಿಯಲಿಲ್ಲ. ಮೊದಲು ಫೂಲಸಾಹೇಬನ ಮೇಲೆಯೇ ಸಂದೇಹಿಸಿದನು; ಆ ದುಸ್ಸಾಹಸಿಕ ಕಾರ್ಯವು ಅವನಿಂದಲೇ ನಡೆದಿರಬೇಕೆಂದು ತೋರಿತು. ಫೂಲಸಾಹೇಬನು ಬಂದಿಯಾಗಿರುವುದರಿಂದ ಇಂತಹ ದುರ್ಘಟನೆಯೊಂದು ಅನಿಶ್ಯಕವಾಗಿಯೂ ಸಂಭವಿಸಬಹುದೆಂಬ ಭಯವು, ಕಾರ್ಯಾಧ್ಯಕ್ಷನಿಂದ ಪ್ರಹರಿಯ ಪರ್ಯಂತವಾಗಿ, ಎಲ್ಲರಲ್ಲಿಯೂ ಬೇರೂರಿತ್ತು.

ಆಗ ಪ್ರಹರಿಯು ಹಿಂದಿರುಗಿ ಹೋಗಿ ಮತ್ತೊಬ್ಬನ ಮೂಲಕ ವಾಗಿ, ಈ ವರ್ತಮಾನವನ್ನು ಪೋಲಣ ಅಧಿಕಾರಿಗೆ ಹೇಳಿಕಳುಹಿ ಸಿದನು. ನಿಶ್ಚಿಂತವಾಗಿದ್ದ ಬಂದೀಖಾನೆಯಲ್ಲಿ ಒಡನೆಯೇ ಬಂದು ಬಿಗಿಯು ವ್ಯಾಕುಲತೆಯು ತುಂಬಿ, ಭಯವು ಮೂರ್ತಿಮತ್ತಾಗಿರುವಂತೆ ತೋರಿತು. ಎಲ್ಲಕ್ಕೂ ಮೊದಲು ಫೂಲಸಾಹೇಬನನ್ನು ಹುಡುಕಿದರು. ಅಲ್ಲಿ ಫೂಲಸಾಹೇಬನಿಲ್ಲ; ಆ ಜಾಮೀಲೆಯೂ ಇಲ್ಲ; ಕೊಠಡಿಯು ಶೂನ್ಯ ವಾಗಿದೆ!

ಜಾಗಿಲಿಗೆ ಬದಿರಾಗಿ, ನೆಲದಮೇಲೆ ಲಂಕೇಶ್ವರನ ಕಳೇಬರವು ಬಿದ್ದಿದ್ದಿತು; ನೀರವ ಮತ್ತೂ ನಿಸ್ಪಂದ! ಫೂಲಸಾಹೇಬನನ್ನು ಹುಡುಕುವುದಕ್ಕೋಸ್ಕರ ಕೂಡಲೇ ಜನರು ಹೊರಟರು. ಪ್ರತಿ ಯೊಂದು ಪೋಲೀಸು ತಾಣಕ್ಕೂ ವರ್ತಮಾನವು ಕೊಡಲ್ಪಟ್ಟಿತು. ಕೇಳಿ ಎಲ್ಲ ಪೋಲೀಸರ ತಲೆಗಳೂ ಬಹಳ ಮಟ್ಟಿಗೆ ಅಸ್ಥಿರವಾದುವು. ಯೋಗೇಂದ್ರನಾಥನ ತಲೆಯು ಅತ್ಯಂತ ಚಂಚಲಗೊಂಡಿತು.

ಗ್ರಾಮವಾಸಿಗಳಿಗೆ ಒಂದು ದಿನದೊಳಗಾಗಿ ಫೂಲಸಾಹೇಬನ ಪೂರ್ಣ ಪರಿಚಯವಾಯಿತು; ಅವನು ಪಲಾಯನಮಾಡಿದ ಕಥೆಯನ್ನು ಮಾರನೆಯ ಬೆಳಿಗ್ಗೆಯೇ ಎಲ್ಲರೂ ಕೇಳಿ ವಿಸ್ಮಯಪಟ್ಟರು; ಹಾಗೆಯೇ ಭಯಪಟ್ಟರು; ಮತ್ತೂ ಜಾಗೃತರಾದರು. ಇಷ್ಟರಮೇಲೆ ಫೂಲ ಸಾಹೇಬನು ಹತಾತ್ತಾಗಿ ಯಾರ ಸರ್ವನಾಶವನ್ನಾದರೂ ಮಾಡಿಯಾ ನೆಂಬ ಭಯದಿಂದ ಪ್ರತಿಯೊಬ್ಬರೂ ಉತ್ಕಂಠಿತರಾದರು.

ಗ್ರಾಮವಾಸಿಗಳು ಫೂಲಸಾಹೇಬನು ಪುನಃ ಸೆರೆ ಸಿಕ್ಕಲೆಂದು ಏಕಾಗ್ರಮನದಿಂದ, ತ್ರಿಕರಣ ಶುದ್ಧರಾಗಿ, ತಂತಮ್ಮ ಇಷ್ಟದೇವತೆ ಗಳನ್ನು ಪ್ರಾರ್ಥಿಸುತಲಿದ್ದರು. ಕೆಲವರು ಫೂಲಸಾಹೇಬನನ್ನು ಒಟ್ಟಿಗೆ ಗಲ್ಲಿನ ಮರಕ್ಕೆಂದು ಮನಸಾ ಅಣಿಮಾಡಿದರು. ಬಂದೀಖಾನೆಯ ಅಷ್ಟು ಎತ್ತರವಾದ ಗೋಡೆಯನ್ನು ಹತ್ತುವುದಕ್ಕೆ ಹೋದಾಗಲೂ ಅವನು ಬಿದ್ದು ಸಾಯಲಿಲ್ಲ! ಅವನ ಮೂಳೆಗಳು ಮುರಿದು ಪುಡಿಪುಡಿಯಾಗಿ ಹೋಗಲಿಲ್ಲ! ಈ ವಿಚಾರವಾಗಿ ನಾಲ್ಕಾರು ಜನರು ಒಳಗೊಳಗೇ ತರ್ಕ

ವಿತರ್ಕವಮಾಡುತ್ತ್ತೆ ಒಮ್ಮಂದೊಮ್ಮೆಗೆ ದೀರ್ಘವಾಗಿ ನಿಟ್ಟುಸಿರು ಬಿಟ್ಟು, ಅದರಿಂದ ಆ ಪ್ರಭಾತಕಾಲದ ಶೀತಲವಾಯುವನ್ನು ಉಷ್ಣ ಮಾಡುತ್ತ್ತಲಿದ್ದರು. ಪ್ರಹರಿಯು ಚೂರಿಯು ಫೂಲಸಾಹೇಬನ ಎದೆಯಲ್ಲಿ ನಾಟದೆ, ಫೂಲಸಾಹೇಬನ ಚೂರಿಯು ಪ್ರಹರಿಯ ವಕ್ಷದಲ್ಲಿ ನಾಟಿಕೊಂಡುದರಿಂದ ಆ ಮಹಾಂಧಕಾರದಲ್ಲಿ ಏಧಾತನಿಗೆ ಮಹಾಫ್ರಮೆಯುಂಟಾಗಿರಬೇಕೆಂದು ನಿಶ್ಚಯಿಸಿ, ಲಘು ಪಾಪಕ್ಕೆ ಗುರು ಶಿಕ್ಷೆಯ ನ್ಯಾಯದಂತೆ ಏಧಾತನ ಮುಖಕ್ಕೆ 'ಪೆಂಕಿ' ಎಂದು ಕೆಲವರೂ, ಬಹು ದಿನಗಳ ಉಪಯೋಗದಿಂದ ಅರ್ಧಕ್ಕೆ ಹೆಚ್ಚಾಗಿಯೇ ಸವೆದುರುವ 'ತುಂಡು ಪೊರಕೆ'ಯೆಂದು ಕೆಲವರೂ ತೀರ್ಮಾನಿಸಿದರಲ್ಲದೆ, ಅನ್ನುತ್ತಿದವರು ತಮ ತಮಗೆ ಮನಸೊಪ್ಪಿದ ರೀತಿಯಲ್ಲಿ ಕರೆದನಂತರ ಸ್ವಲ್ಪಮಟ್ಟಿಗೆ ಸಮಾಧಾನಗೊಂಡರು.

ಎಂಟನೆಯ ಪರಿಚ್ಛೇದ

ಬೆಳಗಿನ ಝಾವದಲ್ಲಿ

ಶಿರುಣೋದಯ ಸಮಯದಲ್ಲಿ ಯೋಗೇಂದ್ರನಾಥನು ಅರಿಂದಮನನ್ನು ಕರೆದುಕೊಂಡು ಸೆರೆಮನೆಗೆ ಬಂದನು. ಫೂಲಸಾಹೇಬನು ಒಂದು ರಾತ್ರಿಯೊಳಗಾಗಿ ಮಾಡಿದ ಕೆಲಸಗಳಿಂದ ಇಬ್ಬರೂ ಸ್ತಂಭಿತರಾದರು. ಯಾವ ರೀತಿಯಲ್ಲಿ, ಎಂತಹ ಉಪಾಯದಿಂದ, ದಾಸನ ದಾಸವಿಯರು ಕಾವಲುಗಾರರಿಬ್ಬರನ್ನು ಕೊಂದು, ಗೋಡೆಯನ್ನು ದಾಟಿದರೆಂಬುದನ್ನು ಎಷ್ಟು ಊಹಿಸಿದರೂ ಸರಿಯಾಗಿ ತೋರಲಿಲ್ಲ. ಹೊರಗಿನ ಮನುಷ್ಯನ ಸಹಾಯವಿಲ್ಲದೆ ಇಂತಹ ಕಾರ್ಯವೆಂದಿಗೂ ಆಗತಕ್ಕುದಲ್ಲವೆಂದು ಅರಿಂದಮನು ಆಲೋಚಿಸಿದನು. ಅರಿಂದಮನು ಫೂಲಸಾಹೇಬನ ಅಮಾನುಷಿಕವಾದ ಸಾಹಸದಿಂದ, ಅಮಾನುಷಿಕವಾದ ಬುದ್ಧಿಶಕ್ತಿಯ ದೆಸೆಯಿಂದ, ಅಮಾನುಷಿಕ ಪರಾಕ್ರಮದ ದೆಸೆಯಿಂದ, ಅಮಾನುಷಿಕ ಕೌಶಲದ ದೆಸೆಯಿಂದ ಮತ್ತೂ ಆ ಪ್ರಾಕಾರದ ಮೇಲಿದ್ದ ಪ್ರಹರಿಯನ್ನು ಕೂಲೆಮಾಡಿರುವ ಅಮಾನುಷಿಕವಾದ ರೀತಿಯ ದೆಸೆ

ಯಿಂದ ಅವನನ್ನು ತಾನೆಂದಿಗೂ ಮನುಷ್ಯರ ಗಣನೆಯಲ್ಲಿ ಸೇರಿಸಲಾಗುವುದಿಲ್ಲವೆಂದೂ, ದಾನವರಲ್ಲಿ ಫೂಲಸಾಹೇಬನೊಬ್ಬ ಪ್ರಮುಖ ದಾನವನಾಗಿರಬೇಕೆಂದು ಭಾವಿಸಿದನು. ಅವನಿಗಾಗಿ ಮನಸ್ಸಿನಲ್ಲಿಯೇ ಅಸಂಖ್ಯಾಕವಾದ ಧಸ್ಕಾವಾದಗಳನ್ನು ಮಾಡಿದನು.

ಆ ಸೆರೆಮನೆಯೊಳಕ್ಕೆ ಪ್ರವೇಶ ಮಾಡಿದಕೂಡಲೇ, ಫೂಲಸಾಹೇಬನು ದೊಡ್ಡದೊಡ್ಡ ಅಕ್ಷರಗಳಿಂದ ಗೋಡೆಯ ಮೇಲೆ ಬರೆದಿದ್ದ ಆ ಮೂರು ಶಬ್ದಗಳನ್ನು ನೊಡಲು ಅರಿಂದಮನೇ ನೋಡಿದನು. ಅರಿಂದಮನು ಕಿರುನಗೆಯೊಂದಿಗೆ, "ಯೋಗೇಂದ್ರಬಾಬು, ನಾನು ಪುನಃ ಜಾಗ್ರತೆಯಾಗಿಯೇ ಫೂಲಸಾಹೇಬನನ್ನು ಪಿಡಿಯಬಲ್ಲೆ; ಅವನು ಎಲ್ಲಿಯೂ ಓಡಿಹೋಗಲ್ಲ. ಇಷ್ಟರಲ್ಲಿಯೇ ಈ ಗ್ರಾಮಕ್ಕೆ ಪುನಃ ಬರುತ್ತಾನೆ" ಎಂದು ಹೇಳಿದನು.

ಯೋಗೇಂದ್ರ—ಅದು ತಮಗೆ ಹೇಗೆ ತಿಳಿಯಿತು?

ಅರಿಂದಮ—ಅವನು ನನ್ನನ್ನು ಕೊಲ್ಲುವುದಾಗಿ ಪ್ರತಿಜ್ಞೆಮಾಡಿದ್ದಾನೆ. ಗೋಡೆಯ ಮೇಲೆ ನನು ಬರೆದಿದೆಯೋ ಒಂದು ಸಲ ಓದಿನೋಡಿರಿ.

ಯೋಗೇಂದ್ರ—ಹಾಗೆಯೆ! ಎಂತಹ ಭಯಂಕರ ಮನುಷ್ಯ! ಇಂಥವನನ್ನು ನಾನೆಲ್ಲಿಯೂ ನೋಡಿಲ್ಲ.

ಅರಿಂದಮ—ಕಳ್ಳರನ್ನೂ, ದರೋಡೆಯವರನ್ನೂ, ಕೊಲೆಪಾತಕರನ್ನೂ ಮಗಲೂ ರಾತ್ರಿ ಹುಡುಕುತ್ತಲಿರುವ ನನಗೆ ಈ ವಿಷಯದಲ್ಲಿ ಸ್ವಲ್ಪ ತಿಳಿವಳಿಕೆಯುಂಟು. ಇದನ್ನು ನೀವೂ ಸ್ವಲ್ಪಮಟ್ಟಿಗೆ ತಿಳಿದಿರುವೆಂದು ತೋರುತ್ತದೆ. ನಾನು ಆ ಜನರ ಬಲ, ಬುದ್ಧಿಗಳ ವಿಷಯವನ್ನು, ಬಹಳಮಾಡಿ, ಅವರುಗಳನ್ನು ನೋಡಿದ ಕೂಡಲೇ ಊಹಿಸಿ ತಿಳಿಯಬಲ್ಲೆ; ಈಗ ಆ ಫೂಲಸಾಹೇಬನನ್ನು ನೋಡಿದ್ದರಲ್ಲಿ ನನಗೆ ಸರಿಯಾದ ಪ್ರತಿದ್ವಂದ್ವಿಯು ಅವನೊಬ್ಬನೇ ಎಂದು ತಿಳಿಯುತ್ತೇನೆ.

ಯೋಗೇಂದ್ರ—ಫೂಲಸಾಹೇಬನ ದೇಹಶಕ್ತಿಯ ವಿಚಾರದಲ್ಲಿ ನಿಮ್ಮ ಅಭಿಪ್ರಾಯವೇನು?

ಅರಿಂದಮ—ನನ್ನ ಅಭಿಪ್ರಾಯವು ತಿಳಿಯಬೇಕಾದರೆ ನನ್ನನ್ನು ದ್ವಿಗುಣಿಸಿ ನೋಡಬೇಕು.

ಯೋಗೇಂದ್ರ—ಅರಿಂದಮಬಾಬು! ನಾನು ಬೇರೆ ಈ ಮಾತು ನಂಬಲಾರೆ.

ಅರಿಂದಮ—ನಾನು ಶಕ್ತಿವಂತನಾಗಿರುವುದನ್ನು ಬಲ್ಲ ಈ ಪ್ರಾಂತ್ಯ ದವರು, ನನ್ನ ಹೆಸರು ಹೇಳಿದಕೂಡಲೇ ಎರಡನೆಯ ಭೀಮಸೇನನೆಂದು ಹೇಳಿಬಿಡುವರೆಂದು ಕೇಳಿದ್ದೇನೆ; ಇಂಥವರಿಗೆ ಫೂಲಸಾಹೇಬನ ಪರಿ ಚಯವು ಚೆನ್ನಾಗಿ ಆಗಿದ್ದ ಪಕ್ಷದಲ್ಲಿ ಅವನೇ ನಿಜವಾದ ಭೀಮಸೇನ ನೆಂದು ಹೇಳುವುದಕ್ಕೆ ಕೊಂಚವೂ ಹಿಂಜರಿಯಲಾರರು; ಶಾರೀರಕ ಶಕ್ತಿಯಲ್ಲಿ ಫೂಲಸಾಹೇಬನು ನನಗಿಂತ ಎರಡರಷ್ಟು ಬಲವಂತ.

ಯೋಗೇಂದ್ರ—ಆದರೆ ಮನಶ್ಶಕ್ತಿಯಲ್ಲಿಯೋ?

ಅರಿಂದಮ—ಅದರಲ್ಲಿ ಅವನು ನನಗೆ ಸಮಾನನು. ಅವನಲ್ಲಿ ತೋರಿಬರುವ ಬುದ್ಧಿಮತ್ತತೆ, ಕಾರ್ಯತತ್ಪರತೆ, ಕಠಿಣತೆ ಮುಂತಾದು ವುಗಳಿಗಾಗಿ ಅವನನ್ನು ಹೊಗಳಲೇಬೇಕು. ಅವು ಹಾಗಿರಲಿ; ಯಾವುದೂ ಸುಲಭವಾಗಿ ಸಾಧ್ಯವಾಗುವ ಹಾಗಿಲ್ಲವೆಂದು ತೋರು ತ್ತದೆ; ಹೇಗಾದರೂ ಅವನನ್ನೂ ಒಂದು ದಿನ ದಸ್ತಗಿರಿ ಮಾಡುತ್ತೇನೆ. ಅವನು ಎಂದಿಗೂ ನನ್ನ ಕೈಯಿಂದ ತಪ್ಪಿಸಿಕೊಂಡು ಪಲಾಯನ ಮಾಡಲಾರನು. ಅವನೇ ನನಗೆ ಸರಿಯಾದ ಪ್ರತಿದ್ವಂದ್ವಿ; ಅಂಥವನಿ ಗೋಸ್ಕರ ನಾನು ಪ್ರಾಣಾಂತವಾಗಿ ಪ್ರಯತ್ನಪಡುತ್ತೇನೆ.

ಯೋಗೇಂದ್ರ—ಅವನು ಅಂತಹ ಭಯಂಕರ ಮನುಷ್ಯನಾಗಿದ್ದ ಪಕ್ಷದಲ್ಲಿ, ಒಂದು ಕೆಲಸ ಮಾಡೋಣಾಗಲಿ; ಇನ್ನು, ಈ ಕೆಲಸದಲ್ಲಿ ತಾವು ಒಬ್ಬಂಟಿಗರಾಗಿ ಕೈಪಾಕಬೇಡಿ; ತಮಗೆ ಸಹಾಯಮಾಡುವು ದಕ್ಕೆ ಎಂತಹ ಮನುಷ್ಯನು ಆವಶ್ಯಕವೆಂಬುದನ್ನು ತಿಳುಹಿದರೆ, ನಾನು ಅಂಥವನನ್ನು ಒದಗಿಸಿಕೊಡಲು ಸಿದ್ಧನಾಗಿದ್ದೇನೆ.

ಅರಿಂದಮ—ಇಲ್ಲ, ಆದಾಗಲಾರದು. ನೀವು ಹೀಗೆ ಹೇಳುವು ದಾದರೆ ಇನ್ನು ಮುಂದೆ ನಾನು ಈ ಕಾರ್ಯದಲ್ಲಿ ತೊಡಗುವುದೇ ಇಲ್ಲ. ನಾನು ಒಬ್ಬಂಟಿಗನಾಗಿದ್ದುಕೊಂಡು ಈ ಕೆಲಸಕ್ಕೆ ತೊಡಗಿದೆನು; ಒಬ್ಬಂಟಿಗನಾಗಿದ್ದುಕೊಂಡೇ ಇದನ್ನು ಮುಗಿಸುವ ಪ್ರಯತ್ನವನ್ನಾದು ತ್ತೇನೆ. ಈ ವಿಚಾರದಲ್ಲಿ ನೀವು ಯಾವ ಆತಂಕವನ್ನೂ ತಂದೊಡ್ಡಬೇಡಿ.

ಯೋಗೇಂದ್ರ—ಆದರೆ ಅರಿಂದಮಬಾಬು.....

ಅರಿಂದಮ—(ಮುಂದೆ ಮಾತನಾಡಗೊಡದೆ) ಕ್ಷಮಿಸಬೇಕು; ಹಾಗೆಂ ದಿಗೂ ಆಗಲಾರದು. ಈ ಕೆಲಸದ ಭಾರವನ್ನು ನೀವು ನನಗೆ ವಹಿಸಿ ಕೊಟ್ಟಿರಲ್ಲವೆ? ಈ ಕಾರ್ಯವನ್ನು ನಾನು ಬಲ್ಲಿಯವರೆಗೆ ಬಿಟ್ಟು ಬಿಡುವುದಿಲ್ಲವೋ ಅಲ್ಲಿಯವರೆಗೂ ಇದನ್ನು ಪತ್ತೆಹಚ್ಚುವ ಭಾರವು ನನ್ನದಾಗಿಯೇ ಇರಬೇಕು.

ಯೋಗೇಂದ್ರ—ನನ್ನ ಪಾತಕನ್ನೂ ಸ್ವಲ್ಪ ಲಾಲಿಸಬೇಕು. ಅರಿಂದಮಬಾಬು! ಪೊಲೀಸಾಫೀಸಿನ ನಾವಾನ್ಯನಲ್ಲ; ಇದನ್ನು ನೀವು ಬಲ್ಲೆರಷ್ಟೆ?

ಅರಿಂದಮ—ಬಲ್ಲೆ ಖಂಡಿ ಹೇತಿನ ಪಾತ್ರಕ್ಕೆ ನಿಮ್ಮ ಪಾತ್ರಕ್ಕೆ ಹೇಗೂ ಸಮ್ಮತಿಪಟ್ಟಂತೆ ಆಗುವುದಿಲ್ಲ. ಆದರೆ ಇಷ್ಟುಪಾತ್ರ ಹೇಳುತ್ತೇನೆ. ಯಾವಾಗಲಾದರೂ ಯಾವುದಾದರೊಂದು ರೀತಿಯ ಸಾಹಾಯ್ಯವು ನನಗೆ ಬೇಕಾಗಿ ಬಂದರೆ, ಒಚನೆಯೇ ಪತ್ರವಾನ ಕೊಡುತ್ತೇನೆ. ಈ ವಿಚಾರದಲ್ಲಿ ಇನ್ನು ನಿಶ್ಚಿಂತರಾಗಿರಬಹುದು.

ಒಂಬತ್ತನೆಯ ಪರಿಚ್ಛೇದ

ಈ ಸುಂದರಿ ಯಾರು ?

ಪೂರ್ವೋಕ್ತ ಘಟನೆಯು ಒಂದು ವಾರದನಂತರ; ಒಂದು ದಿನ; ಶರತ್ಕಾಲದ ನಿರ್ಮಲಾಕಾಶದಲ್ಲಿ ಚಂದ್ರನು ಸ್ನಿಗ್ಧಕಿರಣಗಳಿಂದ ಪ್ರಕಾಶವಾನನಾಗಿದ್ದಾನೆ. ಚಂದ್ರಕಿರಣದಿಂದ ಉಜ್ವಲವಾಗಿಯೂ

ಚಂಚಲವಾಗಿಯೂ ಪಗುರವಾಗಿಯೂ ಇರುವ ಬಳಿಯ ಪೋಡದ ತುಣಕುಗಳು ಚಂದ್ರನ ಆಡಿಯಲ್ಲಿ ಒಂದರ ಹಿಂದೆ ಒಂದು, ಅದರ ಹಿಂದೆ ಮತ್ತೊಂದು, ಅದರ ಹಿಂದೆ ಇನ್ನೂ ಒಂದು—ಈ ಕ್ರಮವಾಗಿ ಒಂದು, ಒಂದೊಂದು ಸಲ ಸುಧಾಕಿರಣನನ್ನು ಅಲಿಂಗಿಸಿ ತೃಪ್ತಿಗೊಂಡು ದೂರ ದೂರವಾಗಿ ಹೊರಡುತ್ತಿವೆ. ಆಗ, ರಾತ್ರಿ ಸುಪಾರು ಬರಡನೆಯ ಝಾವ. ಇಂತಹ ವೇಳೆಯಲ್ಲಿ ಯುವಕನಾದ ಆರೋಹಿಯೊಬ್ಬನನ್ನು ಹೊತ್ತುಕೊಂಡು ದೋಣಿಯೊಂದು ಗಂಗಾವಕ್ಷದಲ್ಲಿ ಕಲಕತ್ತಾಪಟ್ಟಣ ಮುಖವಾಗಿ ಮುಂದಗತಿಯಿಂದ ಸ್ರಯಾಣ ಮಾಡುತ್ತಿದೆ. ಪರಿಷ್ಕಾರವಾದ ಬೆಳದಿಂಗಳಿಂದ ಪ್ರಕೃತಿದೇವಿಯು ಸಂಪೂರ್ಣವಾಗಿ ತೊಯ್ದು ನಿಂತಿದ್ದಾಳೆ. ಗಂಗಾನದಿಯ ಉಭಯ ಪಾರ್ಶ್ವಗಳಲ್ಲಿ ಎತ್ತ ನೋಡಿದರೂ ಬಹುದೂರದವರೆಗೆ ವ್ಯಾಪಿಸಿಕೊಂಡಿರುವ ಶ್ಯಾಮಲವರ್ಣದ ಸಸ್ಯಕ್ಷೇತ್ರಗಳು ಮುಂದಮಾರುತನಿಂದ ಆಂದೋಲನಗೊಳ್ಳುತ್ತಿವೆ. ಒಂದೊಂದು ಕಡೆ, ಬಹಳ ಎತ್ತರವಾಗಿರುವ ತಾಲ, ತಮಾಲ, ನಾರಿಕೇಳ ಮೊದಲಾದ ವೃಕ್ಷಗಳು ಅಲುಗದೆ ನಿಶ್ಚಬ್ದವಾಗಿ ನಿಂತುಕೊಂಡಿವೆ. ಒಂದೆಡೆ ದಿಗಂತದವರೆಗೆ ದಟ್ಟವಾಗಿ ವ್ಯಾಪಿಸಿದಂತಿರುವ ಶ್ಯಾಮಲ ವರ್ಣದ ವನರೇಖೆಯು ಚಂದ್ರಕಿರಣದಿಂದ ಮನೋಹರವಾಗಿದೆ, ಮುಂದಮಾರುತನಿಂದ ಅಲುಗಾಡುತ್ತಿದೆ, ಮಲ್ಲಿಕಾ ರಸದಿಂದ ಪೋಷಿಸಲ್ಪಡುತ್ತಿದೆ, ಬಲೊಳ್ಳೀತ ಬಿಚಿತವಾಗಿದೆ; ಮತ್ತೊಂದು ಕಡೆಯಲ್ಲಿ ಪಾಪನ ಕೋಟೆ; ಅದರಲ್ಲಿ ಕಾವಲುಗಾರನು ಕುಳಿತು ಸಿಳ್ಳು ಹಾಕುತ್ತಿದ್ದಾನೆ. ಇದರಿಂದಲೂ, ಎಚ್ಚರಗೊಂಡ ಹಕ್ಕಿಗಳ ಶಬ್ದ ತರಂಗ ದಿಂದಲೂ ಕೋಮಲವಾದ ಆಕಾಶದಲ್ಲಿ ಪ್ರತಿಧ್ವನಿಯಾಗುತ್ತಲಿದೆ; ಇನ್ನೊಂದು ಕಡೆ ತೃಣಸಮೃದ್ಧವಾಗಿ ಬಹು ವಿಸ್ತಾರವಾಗಿರುವ ಪ್ರಾಂತರವು ತಿಂಗಳ ಬೆಳಕಿನಿಂದ ಬಹು ಮನೋಹರವಾಗಿದೆ. ಅಲ್ಲಲ್ಲಿ, ಆ ಶರದಾಗಮಸಮಯದಲ್ಲಿ ಹಚ್ಚಗೆ ಬಹು ಕೋಮಲವಾಗಿ ಬೆಳೆದಿರುವ ಗರಿಕೆಯು ಹಾಸಿನಲ್ಲಿ ಜ್ಯೋತ್ಸ್ನೆಯು ಸಿದ್ಧಿಸುತ್ತಿರುವಳೋ ಎನ್ನುವ ಹಾಗಿದೆ. ಆ ಸ್ಥಳದಲ್ಲಿ ಸಂಪೂರ್ಣವಾದ ನಿಸ್ತಬ್ಧತೆ, ಅನಂತವಾದ ಶುಭ್ರತೆ ಮತ್ತೂ ಶೂನ್ಯತೆಗಳ ಏನಾ ಯಾವುದೂ ಇರಲಿಲ್ಲ. ದೋಣಿ

ಯಲ್ಲಿ ಕುಳಿತಿದ್ದ ಯುವಕನು ಮುಗ್ಧಚಿತ್ತನಾಗಿ ನಟ್ಟದೃಷ್ಟಿಯಿಂದ ಈ ಎಲ್ಲ ಸೋಟಗಳನ್ನೂ ಬಹು ವಿಸ್ಮಯದಿಂದ ನೋಡುತ್ತಾ ಪ್ರಯಾಣ ಮಾಡುತ್ತಿದ್ದಾನೆ. ಗಂಗಾವಕ್ಷವು ಶಾಂತವಾಗಿಯೂ ಜ್ಯೋತ್ಸ್ನಾ ಮಯವಾಗಿಯೂ ವಿರಾಜಿಸುತ್ತಿದೆ. ನೌಕೆಯು ಭಾರಹೊತ್ತುಕೊಂಡು ಮುಂದೆ ನಡೆಯುತ್ತಿದೆ; ಅದರ ಎರಡು ಕಡೆಗಳಲ್ಲಿಯೂ ಜಲವು ಕಲ ಕಲನಾದದಿಂದ ಹರಿಯುತ್ತಿದೆ. ದೋಣಿಯು ನಡೆಯಿಂದ ಉಂಟಾದ ಕಲಕಲನಾದವೂ ತೀರ ಪ್ರದೇಶದಲ್ಲಿ ಜ್ಯೋತ್ಸ್ನಾಮಂಡಿತವಾದ ವೃಕ್ಷ ಶ್ರೇಣಿಯಿಂದ ಕೇಳಿಬರುವ ಮೃದುವಾದ 'ಶನ್-ಶನ್' ಶಬ್ದವೂ ಸೇರಿ ದಿಗಂತ ವಿಶ್ರಾಂತವಾದ ವಿಜನತೆಯ ಮಧ್ಯೆ ಅಪೂರ್ವವಾದ, ಅಪಾರ್ಥಿವವಾದ, ಹಾಗೆಯೇ ಎಂದೂ ಕೇಳದಿರುವಂತಹ ಸುಮಧುರ ಸಂಗೀತ ಸ್ರೋತವೇ ಪ್ರವಹಿಸುತ್ತಿರುವಂತೆ ಕೇಳಿಬರುತ್ತಿರುವುದು. ಕಾಲ ವ್ಯತ್ಯಾಸವಿಲ್ಲದೆ ಕೇಳಿಬರುವ ಜಲ್ಲೆಯ 'ಝಸ್-ಝಸ್' ಶಬ್ದವು ಮೆಲ್ಲಗೆ ತಾಳಹಾಕುವಂತೆ ಮನೋಹರವಾಗಿ ಕೇಳಿಬರುವುದು. ಒಂದೊಂದು ಸಾರಿ ಜಲ್ಲೆಯ ಶಬ್ದವು ಲಯಚ್ಯುತವಾಗಿ ಶ್ರುತಿಕಟುವಾಗಿ ತೋರಿದಾಗ, ಮರಗಳ ಮೇಲೆ ವಿಶ್ರಾಂತಿಗೊಳ್ಳುತ್ತಿರುವ ಕಾಗೆಗಳನ್ನು ಎಚ್ಚರಗೊಳಿಸಿ ಜಾಗೃತಿಗೊಳಿಸುವಂತೆ ಭಾಸವಾಗುವುದು.

ದೋಣಿಯು ಪೂರ್ವತೀರಕ್ಕೆ ಸಮಾಪವಾಗಿ ನಡೆಯುತ್ತಿದೆ. ಗಂಗೆಗೆ ಆ ಕಡೆಯಲ್ಲಿಯೇ ತೃಣಾಚ್ಛಾದಿತವಾಗಿರುವ ವಿಸ್ತಾರವಾದ ವನಭೂಮಿ. ಅಲ್ಲಲ್ಲಿ, ದಡದಮೇಲೆ ಬೆಳೆದು ಉಡಿಗೆಗಳೆಂಬೊಪ್ಪಿದ ನಾರೀಮೂರ್ತಿ ನಿಂತಿರುವುದನ್ನು ಯುವಕನು ನೋಡಿದನು. ಅವಳ ಮೊಗದ ತುದಿಯವರೆಗೂ ಎಳೆದಿದ್ದ ಮುಖಪರದೆಯು ಅವಳ ಮುಖಮಂಡಲಕ್ಕೆ ಮರೆಯಾಗಿದೆ. ಕಾಣಿಸುತ್ತಿದ್ದ ಆ ಸುಂದರವಾದ ಮುಖಮಂಡಲದ ಕೊಂಚ ಭಾಗದಿಂದಲೇ ಅವಳು ಅಸದೃಶ ರೂಪವತಿಯೆಂದು ಜೋಯಿಸಯಾಗುವುದು. ನಿರ್ಭಯಳಾಗಿ ನಿಂತಿರುವ ಶುಕ್ಲವಸನ ಧಾರಿಣಿಯಾದ ಈ ಸುಂದರಿ ಯಾರೆಂಬುದು ಯುವಕನಿಗೆ ಊಹಿಸಿ ತಿಳಿಯಲಾಗಲಿಲ್ಲ. ಈ ರಾತ್ರಿಯಲ್ಲಿ, ಇಂತಹ ವಿಜನ ಸ್ಥಳದಲ್ಲಿ, ಜನ

ಮಾನವ ಶೂನ್ಯವಾದ ಇಂತಹ ವನಪ್ರದೇಶದಲ್ಲಿ ಏಕಾಂಗಿಯಾಗಿ ನಿಂತಿರುವ ಈ ಸುಂದರಿ ಯಾರಿರಬಹುದು? ಇವಳ ಹಿಂದೆ ದೂರವ್ಯಾಪಿಯಾದ ವನಭೂಮಿಯು ನಿದ್ರಿಸುವಂತಿದೆ. ಎಲ್ಲಿಯಿಲ್ಲದ ನೀಲಾಕಾಶದಲ್ಲಿ ತರಳವೂ ಖಂಡಖಂಡವೂ ಆದ ಬೆಳಯು ಮೋಡಗಳಿಂದ ಆವೃತನಾಗಿರುವ ಚಂದ್ರನ ಪ್ರತಿಬಿಂಬವೇ, ಹೀಗೆ, ನಿಶ್ಚಲಭಾವದಿಂದ, ಶುಕ್ಲವಸನಧಾರಿಣಿಯಾಗಿ ನಿಂತಿರುವ ಈ ಯುವತಿಯಾಗಿರಬಹುದೆ? ಎಂದು ಮುಂತಾಗಿ ಭಾವಿಸಿದನು. ಆಥವಾ ತೃಣಶಯ್ಯೆಯಲ್ಲಿ ನಿದ್ರಿಸುತಿದ್ದ ಜ್ಯೋತ್ಸ್ನೆಯು ಬಲ್ಲೆಯ ಶಬ್ದದಿಂದ ಎಚ್ಚರಗೊಂಡು ಈ ಸ್ಥಳದಲ್ಲಿ ಎದ್ದುನಿಂತಳೋ? ಯುವಕನು ಯಾವುದೊಂದನ್ನೂ ನಿರ್ಧರಿಸಲಾರದವನಾದನು; ಮನಸ್ಸಿನಲ್ಲಿ ರಗಳೆ ಹೆಚ್ಚಳವಾಯಿತು. ಯುವಕನು ಎಲೆಯಿಕ್ಕಿದೆ ಏಸ್ಮಯ—ವ್ಯಾಕುಲ—ವಿಶ್ರಾವಾದ ನೋಟದಿಂದ ಅತ್ಯಕಡೆಯೇ ನೋಡುತ್ತಿದ್ದಾನೆ. ದೋಣಿಯೂ ಅತ್ಯಕಡೆಯಲ್ಲಿಯೇ ನಿದಾನವಾಗಿ ನಡೆಯುತ್ತಿದೆ.

ದೋಣಿಯು ಯುವತಿಗೆ ಸಮೀಪವಾಗಿ ಬಂದಾಗ, ಆ ಅವಗುಂಠನವತಿಯು ವೇಗನೆ ಮೊಳಕಾಲುದ್ದ ನೀರಿಗಿಳಿದು ಬಂದಳು. ದೋಣಿಯು ಅವಳ ಮುಂಭಾಗದಲ್ಲಿ ಹತ್ತುಚಾರು ದೂರಕ್ಕೆ ಬಂದಾಗ ಆ ಮುಖಸರದೆಯ ರಮಣಿಯು ನೌಕಾರೋಹಿಯಾದ ಯುವಕನನ್ನು ಉದ್ದೇಶಿಸಿ,—ಮಹಾಶಯ, ನಾನು ತುಂಬ ಆಪತ್ತಿಗೆ ಸಿಕ್ಕಿದ್ದೇನೆ; ಈ ಸ್ಥಳದಲ್ಲಿ, ಈ ಆಪೇಳೆಯಲ್ಲಿ ಮತ್ತೆ ಯಾರ ಸಹಾಯವೂ ದೊರೆಯುವ ಭರವಸೆ ಇಲ್ಲ. ನಾನು ಹೆಂಗಸು, ಸಹಾಯಹೀನಳು; ಏನಾಗುವುದೋ ಕಾಣೆ, ಯಾವುದನ್ನೂ ಊಹಿಸಲಾರೆ. ತಾವು ಈ ಸಮಯದಲ್ಲಿ ನನ್ನಲ್ಲಿ ವಿಶೇಷ ಕೃಪೆ ತೋರದಿದ್ದರೆ ನನಗೆ ಬೇರೆ ಗತಿಯಿಲ್ಲ.—ಎಂದು ಕಾತರ ಕಂಠದಿಂದ ಮೊರೆಯಿಟ್ಟಳು.

ಈ ಮಾತುಗಳು ಯುವಕನಿಗೆ ಸ್ಪಷ್ಟವಾಗಿ ಕೇಳಿಸಿತು. ದೋಣಿಯನ್ನು ದಡಕ್ಕೆ ಸೇರಿಸುವಂತೆ ಯುವಕನು ಅಂಬಿಗನಿಗೆ ಹೇಳಿದನು. ನೌಕೆಯು ಮುಖಭಾಗವು ತಿರುಗಿ ಬಂದು ದಡಕ್ಕೆ ಆತುಕೊಂಡಿತು.

ನೌಕಾರೋಹಿಯು ಯುವತಿಯನ್ನು ಉದ್ದೇಶಿಸಿ, ಅಮ್ಮಾ! ಈಗ ನಸ್ಸಿಂದೇನಾಗಬೇಕು ? ನಸ್ಸಿಂದ ತಮಗೇನಾದರೂ ಉಪಕಾರವಾಗು ವಂತಿದ್ದರೆ ಬಹು ಸಂತೋಷದಿಂದ ಮಾಡುತ್ತೇನೆ.—ಎಂದನು.

ಆ ರಮಣಿಯು ವ್ಯಾಕುಲಿತ ಹೃದಯಳಾಗಿ, ನಾನು ಕುಲಸ್ತ್ರೀ; ಅಂತಹ ರಾತ್ರಿಯಲ್ಲಿ ಅಪರಿಚಿತ ಯುವಕನೊಡನೆ ಏಕಾಂತವಾದೆಡೆಯಲ್ಲಿ ಮಾತನಾಡುವುದೆಂದರೆ ನನ್ನ ವಿಷಯದಲ್ಲಿ ಸಂಪೂರ್ಣವಾಗಿಯೂ ಅಧರ್ಮ; ಇದಕ್ಕಿಂತ ಮರಣವೇ ಮೇಲು. ಕೇವಲ ಆತ್ಮಾದರದಿಂದ ಕುಲಸ್ತ್ರೀಯಳ ಅಮೂಲ್ಯ ಸನ್ಮಾನವನ್ನು ದೂರಮಾಡಿ, ಅಪಧೇಯ ವಾದ ಕಾರ್ಯದಲ್ಲಿ ಪ್ರವೃತ್ತಳಾಗಿರುವೆನೆಂದು ತಿಳಿಯಕೂಡದು. ಸಹಾಯವಿಲ್ಲದೆ ಸಾಯುತ್ತಲಿದೇನೆ,—ಸಾಯಬಲ್ಲೆ; ಆದರೆ ಕೇವಲ ನನ್ನ ಸ್ವಾಮಿ—ಆತನು ಕಾಹಿಲೆ—ತುಂಬ ಪೀಡಿತನಾಗಿರುವನು. ಆತ ನನ್ನು ನೋಡುವರು ಯಾರು ? ಆತನ ಗತಿ ಏನು ? ಮಹಾಶಯ! ದಯಮಾಡಿ ನನ್ನನ್ನು ನಮ್ಮ ಮನೆಗೆ ಬಿಟ್ಟುಬರುವೆರಾದರೆ, ಮಹಾ ಶಯ—ಏನು ಹೇಳಲಿ! ಅದರಿಂದ ಈ ಹೆಂಗಸಿಗೆ ಎಷ್ಟೋ ಉಪಕಾರ ವಾಗುವುದು.—ಎಂದಳು.

ಯುವಕ—ನಿಮ್ಮ ಮನೆ ಇಲ್ಲಿಗೆ ಎಷ್ಟು ದೂರ ? ಸವಿವಾಪವೆ ?

ರಮಣಿ—ಇಲ್ಲ, ಈ ವನಭೂಮಿಗೆ ಉತ್ತರಕಡೆ ಸ್ವಲ್ಪ ದೂರವಾಗಿ. ಅಲ್ಲಿ ನೋಡಿ, ಒಂದು ಮಾವಿನ ತೋಟವು ಕಾಣಿಸುವುದು; ಬರುವ ಸಮಯದಲ್ಲಿ ನೋಡಿರಬಹುದೆಂದು ತೋರುತ್ತದೆ; ಆ ತೋಟದ ಮಧ್ಯ ಭಾಗದಿಂದ ಪೂರ್ವಮುಖವಾಗಿ ಊರೊಳಕ್ಕೆ ಹೋಗುವ ದಾರಿಯಿದೆ; ಆ ದಾರಿಯಲ್ಲಿ ಸ್ವಲ್ಪದೂರ ಹೋಗಬೇಕು. ನಾನು ಒಂಟಿಗಳಾಗಿ ಹೋಗಲು ಧೈರ್ಯವಿಲ್ಲ. ಸಹಾಯಹೀನೆಯಾದ ಹೆಂಗಸಿಗೆ ದಾರಿ ಯಲ್ಲಿ ಅನೇಕ ವಿಪತ್ತುಗಳುಂಟಷ್ಟೆ?

ಆ ಹೆಂಗಸಿನ ಆ ಮಾತುಗಳನ್ನು ಕೇಳಿ, ಅವಳ ಆ ವೇಷವಿನ್ಯಾಸ ಗಳನ್ನು ನೋಡಿ, ಭಾವಭಂಗಿಗಳಿಂದ, ಅವಳು ಕುಲರಮಣಿಯೇ ಎಂದು ಯುವಕನು ನಂಬಿದನು. ಅಲ್ಲದೆ ಅವಳ ಆ ಅವಸ್ಥೆಯ ಕಾರಣವನ್ನು

ತಿಳಿವುದಕ್ಕೆ ಅವನ ಮನಸ್ಸು ತುಂಬ ತವಕಗೊಂಡಿತು. ನೀವು ಕುಲಾಂಗನೆಯರಾಗಿದ್ದು ಈ ಅವೇಳೆಯಲ್ಲಿ ಇಂತಹ ಭಯಂಕರ ಸ್ಥಾನಕ್ಕೆ ಏತಕ್ಕಾಗಿ ಬಂದಿರೋ ತಿಳಿಯಲಿಲ್ಲವಲ್ಲ?—ಎಂದು ಕೇಳಿದನು.

ಹತ್ತನೆಯ ಪರಿಚ್ಛೇದ

ಸುಂದರಿಯ ಪರಿಚಯ

ಆ ಅವಗುಂಠನವತಿಯು ಹೇಳತೊಡಗಿದಳು—ನನ್ನ ಸ್ವಾಮಿಯು ಇಂದಿಗೆ ಎರಡು ವರ್ಷಗಳಿಂದ ಕಾಯಿಲೆ. ಅನೇಕ ಮಂದಿ ಚಿಕಿತ್ಸಕರು ನೋಡಿದರು; ಆದರೆ ರೋಗವೆಂತಹದು? ಅಥವಾ ರೋಗಕ್ಕೆ ಕಾರಣವಾವುದು? ಎಂಬುದನ್ನು ಯಾರೂ ಕಂಡುಹಿಡಿಯಲಾರದೆ ಹೋದರು. ಅವರ ಔಷಧಿಗಳಿಂದಂತೂ ಏನೇನೂ ಫಲವಿಲ್ಲವಾಯಿತು. ಒಬ್ಬೊಬ್ಬ ಹಿಂದೂ ವೈದ್ಯರು ಅದೊಂದು ಬಗೆಯ ವಾಯುರೋಗವೆಂದು ಹೇಳಿ ಚಿಕಿತ್ಸೆಮಾಡಿದರು. ಅದರಿಂದಲೂ ಏನೂ ಅನುಕೂಲ ತೋರಲಿಲ್ಲ. ಅನುಕೂಲ ತೋರುವುದಕ್ಕೆ ಬದಲಾಗಿ ನನ್ನ ಸ್ವಾಮಿಯ ಕಾಯಿಲೆ ಹೆಚ್ಚುತ್ತಾ ಬಂದಿತು; ಹೊದಲು ದಿನ ಒಂದಕ್ಕೆ ಒಂದುಸಲ ಮೂರ್ಛೆ ಬರುತ್ತಿದ್ದಿತು; ಈಗ ದಿನವಹಿ, ಎರಡು ಮೂರಾವರ್ತಿ ಮೂರ್ಛೆ ಬರುವುದಕ್ಕೆ ಹೊದಲಾಯಿತು. ಹೊದಲು ಒಂದು ಗಂಟೆಯ ವರೆಗೆ ಮೂರ್ಛಿತನಾಗಿರುತ್ತಿದ್ದನು. ಮೂರ್ಛೆ ತಿಳಿದನಂತರ ಚೆನ್ನಾಗಿ ಜ್ಞಾನ ಬರುತಿತ್ತು; ಈಗ ಒಂದುಸಲ ಮೂರ್ಛೆ ಬಂದರೆ ಎರಡು ಗಂಟೆಯವರೆಗೂ ಜ್ಞಾನ ಬರುವಹಾಗಿಲ್ಲ. ಮೂರ್ಛೆ ತಿಳಿದರೂ ಅರ್ಧ ಗಂಟೆಯ ತನಕ ಆ ಮಂಪರ ಇದ್ದೇ ಇರುತ್ತದೆ; ಹುಚ್ಚನಹಾಗೆ ಏನೇನೋ ಪ್ರಾತನಾಡಿಕೊಳ್ಳುತ್ತಲೇ ಇರುತ್ತಾನೆ. ಕಲಕತ್ತೆಗೆ ತೀರ ದಕ್ಷಿಣವಾಗಿ 'ಬೇಹಾಲಾ' ಎಂಬ ಗ್ರಾಮವಿದೆ. ಅಲ್ಲಿ ಮೂರ್ಛೆ ರೋಗಕ್ಕೆ ಒಂದು ಮಹೌಷಧವಿರುತ್ತದೆ. ನಾಳೆ ಶನಿವಾರ; ಶನಿವಾರ ಬೆಳಿಗ್ಗೆ ಆ ಔಷಧಿ ತೆಗೆದುಕೊಳ್ಳಬೇಕು—ಎಂದು ಹೇಳಿ, ಈ ರಾತ್ರಿಯೇ ನನ್ನ ಸ್ವಾಮಿಯ ಸಂಗಡ ದೋಣಿಯಲ್ಲಿ ಅಲ್ಲಿಗೆ ಪ್ರಯಾಣಮಾಡು

ತ್ತಿದ್ದೆನು. ಈ ಪ್ರಾಂತರವನ್ನು ಕಳೆದುಬಂದನಂತರ ನನ್ನ ಸ್ನೇಹಿಯು ಅಧೈರ್ಯಗೊಂಡು ಮನೆಗೆ ಹಿಂದಿರುಗಬೇಕೆಂದು ಸಂಕಲ್ಪಿಸಿ, ಇಂದು ಮುಂದೆ ಪ್ರಯಾಣಮಾಡುವುದಿಲ್ಲವೆಂದು ಅನೇಕವಾಗಿ ಆತಂಕಗಳನ್ನು ಒಡ್ಡಿದನು ; ದೋಣಿಯನ್ನು ಹಿಂದಿರುಗಿಸೆಂದು ಅಂಬುಗನಿಗೂ ಹೇಳಿದನು. ಕೂಡದೆಂದು ಅಂಬಿಗನಿಗೆ ನಾನು ಸೂಚಿಸಿದೆನು. ದೋಣಿಯು ದಾರಿ ಹಿಡಿದು ಮುಂಬರಿಯಿತು. ನನ್ನ ಗೆಂಡನು ದೋಣಿಯಿಂದ ಘುಮುಕೆ ತೀರವನ್ನು ಸೇರಿದನು ; ಸೇರಿದವನೇ ಚೀತ್ಕಾರ ಮಾಡುತ್ತಾ ಊರಿನ ಕಡೆಗೆ ಊರ್ಧ್ವಶ್ವಾಸದಿಂದ ಓಡತೊಡಗಿದನು. ಆಗ ನಾನೂ ಆತನ ಸಂಗಡಲೇ ಇಳಿದುಬಿಟ್ಟೆನು. ಆ ಸ್ಥಳದಲ್ಲಿ ದಟ್ಟವಾದ ಅರಣ್ಯ ; ಅದರ ಮಧ್ಯ, ಆತನೆಲ್ಲಿಯೋ ಕಣ್ಮರೆಯಾದನು ; ಪುನಃ ಕಾಣಿಸಲಿಲ್ಲ. ಆತನು ಮನೆಗೆ ಹಿಂದಿರುಗಿ ಹೋಗಿದ್ದರೂ ಹೋಗಿರಬಹುದು. ಹೋಗಿದ್ದ ಪಕ್ಷದಲ್ಲಿ ಅಲ್ಲಿ ಆತನು ಚಾಲ್ತಿನವಿಲ್ಲದೆ ಬಿದ್ದಿರಬಹುದು ; ಮೂರ್ಛೆ ಬರುವುದಕ್ಕೆ ಮೂದಲು ಆತನ ಮನಸ್ಸು ಹೀಗೆ ಚಂಚಲವಾಗುತ್ತದೆ.

ಯುವಕನು ಆ ಅಪರಿಚಿತ ಯುವತಿಯ ಮಾತುಗಳನ್ನು ಒಂದೇ ಮನಸ್ಸಿನಿಂದ ಕೇಳಿದನು. ಆಕೆಯ ಕಾತರೋಕ್ತಿಗಳಿಂದಲೂ ಉತ್ಕಂಠಿತ ಭಾವಭಂಗಿಗಳಿಂದಲೂ ಯುವಕನು ಆಕೆಯ ಮಾತಿನಲ್ಲಿ ವಿಶ್ವಾಸಿಯಾಗದೆ ಇರಲಾರದವನಾಗಿ,—ನಡೆಯಿರಿ, ನಿಮ್ಮನ್ನು ಮನೆಗೆ ಸೇರಿಸಿ ಬರುತ್ತೇನೆ. ನನಗೂ ಪಾಶ್ಚಾತ್ಯ ವೈದ್ಯ ವಿದ್ಯೆಯಲ್ಲಿ ಸ್ವಲ್ಪ ಪರಿಶ್ರಮವುಂಟು. ಸಮ್ಮತಿಸುವುದಾದರೆ ನಿಮ್ಮ ಯಜಮಾನರ ದೇಹ ಸ್ಥಿತಿಯನ್ನು ಕುರಿತು ಸ್ವಲ್ಪ ಪ್ರಯತ್ನಮಾಡಿ ನೋಡಬಲ್ಲೆನು.—ಎಂದು ಹೇಳಿದನು.

ರಮಣಿಯು ಏಸ್ಮಿತಳಾಗಿ, "ನೀವು ಡಾಕ್ಟರರೇ ! ಒಳ್ಳೆಯದೇ ಆಯಿತು ; ಆದರೆ—ಆದರೆ—"

ರಮಣಿಯು ಮಾತು ಮುಗಿಯಿಸದೆ ಸುಮ್ಮನಾದುದನ್ನು ಕಂಡು,—ಅದೇನು ಹೇಳುತ್ತಿದ್ದಿರಲ್ಲ ? ಹೇಳಿಬಿಡಿ—ಎಂದು ಯುವಕನು ಹೇಳಿದನು.

ರಮಣಿಯು ಹೇಳಿದಳು—ಬಹು ದಿನಗಳಿಂದಲೂ ಡಾಕ್ಟರಾ, ಕವಿರಾಜ ಮುಂತಾದವರಿಂದ ಚಿಕಿತ್ಸೆ ಮಾಡಿಸಿದ್ದರಲ್ಲಿ ಗುಣಮುಖ ವಾಗುವುದು ಹಾಗಿರಲಿ, ದುರ್ಗುಣಗಳೇ ಹೆಚ್ಚುತ್ತ ಬಂದುದರಿಂದ ನನ್ನ ಸ್ವಾಮಿಯು ಈಚೀಚೆಗೆ ಡಾಕ್ಟರು, ಪಂಡಿತ ಮೊದಲಾದವರ ಹೆಸರೆತ್ತಿ ದರೆ ಕಿಡಿಕಿಡಿಯಾಗುತ್ತಾನೆ; ಅಷ್ಟೇಸು! ಅವರ ಒಬ್ಬಿಬ್ಬ ಸ್ನೇಹಿತರು ಪ್ರಖ್ಯಾತರಾದ ಡಾಕ್ಟರರು; ಈಗ ಅವರೊಡನೆ ನನ್ನ ಸ್ವಾಮಿಯು ಮಾತನ್ನೂ ಆಡುವುದಿಲ್ಲ; ಡಾಕ್ಟರು, ಪಂಡಿತ ಮುಂತಾದವರ ವಿಷಯದಲ್ಲಿ ಸದ್ಯಃ ಆತನಿಗೆ ಉಂಟಾಗಿರುವ ದ್ವೇಷಭಾವವನ್ನು ನೋಡಿದರೆ, ನಿಮಗೆ ಎಲ್ಲಿಯಾದರೂ ಅಪಮಾನಕರವಾದ ಮಾತುಗೀತು ಆಡಿಯಾನೇನೋ ಎಂದು ಆಲೋಚಿಸುತ್ತೇನೆ.

ಯುವಕ—ಆ ವಿಷಯದಲ್ಲಿ ನೀವೇನೂ ಆಲೋಚಿಸಬೇಕಾಗಿಲ್ಲ.

ರಮಣಿ—ಒಂದು ಕೆಲಸ ಮಾಡೋಣಾಗಲಿ. ನೀವು ಡಾಕ್ಟರರೆಂಬ ವಿಚಾರವನ್ನು ಆತನಿಗೆ ಹೇಳಲೇಬೇಡಿ.

ಯುವಕ—ಹೇಗೆ ಅನುಕೂಲವೋ, ಹಾಗೆ ಮಾಡುತ್ತೇನೆ.

ರಮಣಿ—ಇಲ್ಲವಪ್ಪಾ, ನಿಮಗೆ ಆತನ ವಿಷಯವು ತಿಳಿಯದು. ಆತನು ಕಡುಕೋಪದ ಸ್ವಭಾವದವನು; ನೀವು ನಾನು ಹೇಳುವಂತೆ ನಡೆಯಿರಿ.

ಯುವಕ—ಹಾಗೆಯೇ ಆಗಲಿ.

ಈ ರೀತಿ ಮಾತು ಕತೆಗಳಾದ ಮೇಲೆ ಯುವಕನು ಆ ಅಪರಿಚಿತ ಳಾದ ಸುಂದರಿಯನ್ನು ತನ್ನ ದೋಣಿಯಲ್ಲಿ ಕುಳ್ಳಿರಿಸಿಕೊಂಡನು. ಅಂಬಿಗನು ಬೇಡವೆಂದು ನಿಷೇಧಿಸಿದನು. ಹೆಣ್ಣು ದೆವ್ವಗಳು ಈ ಬಗೆ ಯಾಗಿ ಸುಂದರಾಕಾರದಿಂದ ಕಾಣಿಸಿಕೊಂಡು, ದಾರಿಗರ ದಾರಿ ತಪ್ಪಿಸು ವುದೆಂಬ ಭಯವನ್ನು ಸೂಚಿಸಿದನು; ಅಲ್ಲದೆ ಅನೇಕ ಮಂದಿ ಹೆಂಗಸರು ದರೋಡೆಬೋರರಲ್ಲಿ ಹಣ ತಿಂದು ಸಿಪಾಯಿಯರ ಹಾಗೆ ಈ ರೀತಿ ರಾತ್ರಿ ಯೆಲ್ಲಾ 'ಶಿಕಾರಿ'ಗಳನ್ನು ಹುಡುಕುತ್ತಾ ಅಲೆದು ಬಹು ಬಗೆಯಾದ ಕೌಶಲಗಳಿಂದ ಮೈ ಮರೆಸಿ ಕೈಗೆ ಸಿಕ್ಕಿದವರನ್ನು ಕರೆದುಕೊಂಡು

ಹೋಗಿ, ದರೋಡೆಯವರ ವಶವಾಡುವುದುಂಟೆಂದೂ ಹೇಳಿದನು. ದೆವ್ವ ಅಥವಾ ಪಿಶಾಚಗಳ ಭಯವು ಯುವಕನ ಹೃದಯದಲ್ಲಿ ಅರೆ ಗಳಿಗೆಯೂ ಸಿಲ್ಲಲಿಲ್ಲ. ಆತನು ಅಂಬುಗನ ಕುಸಂಸ್ಕಾರಪೂರ್ಣವಾದ ಉಕ್ತಿಯು ಯುಕ್ತಿಯುಕ್ತವಾದುದೆಂದು ತಿಳಿಯಲಾರದವನಾದನು; ಆತನು ಯುವಕ, ಸಾಹಸಿ, ಬಲಶಾಲಿ, ಬುದ್ಧಿವಂತ, ಯೌವ್ವನೋತ್ತಾಪಿ. ಆತನು ಆ ಅಪರಿಚಿತ ಯುವತಿಯನ್ನು ದೋಣಿಯಲ್ಲಿ ಕೂಡಿಸಿ, ದೋಣಿಯನ್ನು ಹಿಂದಿರುಗಿಸುವಂತೆ ಅಂಬುಗನಿಗೆ ಹೇಳಿದನು. ಅಂಬುಗನು ಇಚ್ಛೆಯಿಲ್ಲದವನಾದರೂ ಆರೋಪಿಯು ಅಪ್ಪಣೆಯಂತೆ ದೋಣಿಯನ್ನು ಹಿಂದಿರುಗಿಸಿದನು. ಆಗ ಅವನ ಮನಸ್ಸಿನಲ್ಲಿ ತುಂಬ ಭಯ; ಬಂತಹ ಅಪಾಯವಾಗುವುದೋ ಯಾರು ಬಲ್ಲರು? ಈ ದೋಣಿ ನಡೆಯದೆ ನಿಂತರೂ ಸಿಲ್ಲಬಹುದು. ದೋಣಿಯು ಮುಳುಗಲೂ ಬಹುದು. ಆಗ, ಈ ಪಿಶಾಚನು ದೋಣಿಯೊಡನೆ ನನ್ನನ್ನೂ ಮುಳುಗಿಸುವುದಿಲ್ಲವೇನು? ಇದು ಹೇಗೆ ಸಾಧ್ಯ? ಆಗ ಉಸಿರುಕಟ್ಟಿ ಪ್ರಾಣಹೋಗುವುದೇನೊ?—ಎಂದು ಮುಂತಾಗಿ ಕಾತರಿಸಿದನು. ಆ ಸಮಯದಲ್ಲಿ ಅವನ ಗೃಹಿಣಿಯ ವಿಚಾರ ಸ್ಮರಣೆಗೆ ಬಂತು, ಮಕ್ಕಳು ಮರಿಗಳ ವಿಚಾರವೂ ಜ್ಞಾಪಕಕ್ಕೆ ಬಂತು; ಹೀಗೆ, ಬಗೆ ಬಗೆಯಾಗಿ ಆಲೋಚಿಸುತ್ತಾ ಅವನ ಪ್ರಾಣವು ತುಡಿದುಕೊಳ್ಳಲಾರಂಭವಾಯಿತು. ಅವನು ಪಟ್ಟು ತಿಂದ ಪಕ್ಷಿಯು ಪಂಜರ ಮಧ್ಯೆ ಒದ್ದಾಡುವ ಹಾಗೆ ಒದ್ದಾಡುತ್ತಿದ್ದನು.

ಅನಂತರ, ಪ್ರವಾಹಮುಖದಲ್ಲಿ ದೋಣಿಯು ಓಡೋಡುತ್ತಿ, ಸ್ವಲ್ಪ ಹೊತ್ತಿನೊಳಗಾಗಿ ವನಭೂಮಿಯನ್ನು ಪಾರಾಗಿ, ಮಾನವ ತೋಪಿಗೆ ಹೋಗುವ ದಾರಿಯ ಬಳಿ ದಡಕ್ಕೆ ಸೇರಿತು. ಯುವಕನು ಆ ರಮಣಿಯ ಸಂಗಡ ಇಳಿದು ದಡವನ್ನು ಸೇರಿದನು. ಆಗ ದಕ್ಷನಾದ ಆ ಅಂಬುಗನು ನಿರ್ಭಯವಾದೊಂದು ನಿಶ್ವಾಸವನ್ನು ಬಿಟ್ಟು ಬದುಕಿ ಕೊಂಡನು. ಒಂದು ವಿಪತ್ತು ಕಳೆಯಿತೆಂದು ಅವನು ಈಶ್ವರನಿಗೆ ಮನಸಾ ಅನೇಕ ವಂದನೆಗಳನ್ನು ಸಮರ್ಪಿಸಿದನು.

ಯುವಕನು ಹೊರಡುವ ಸಮಯದಲ್ಲಿ ''ನಾನು ಹಿಂದಿರುಗಿ ಬರುವವರೆಗೂ ದೋಣಿಯು ಇಲ್ಲಿಯೇ ಇರಬೇಕು'' ಎಂದು ಹೇಳಿ ಹೋದನು.

ಯುವಕನು ಹಿಂದಿರುಗಲಾರನೆಂಬ ವಿಚಾರದಲ್ಲಿ ಅಂಬಿಗನಿಗೆ ಸಂದೇಹವಿಲ್ಲ.

ಹನ್ನೊಂದನೆಯ ಪರಿಚ್ಛೇದ

ಸುಂದರಿಯ ಕೃತಜ್ಞತೆ

ಮಾವಿನ ತೋಟದಲ್ಲಿ ಆ ಹೆಂಗಸು ಮುಂದು ಮುಂದಾಗಿ ನಡೆಯುತ್ತಿದ್ದಳು. ಯುವಕನು ಅವಳ ಹಿಂದೆ ಹಿಂದೆ ಹೋಗುತ್ತಿದ್ದನು.

ಯುವಕನ ವಯಸ್ಸು ಹದಿನೆಂಟು ವರ್ಷಕ್ಕೆ ಮೀರಿಲ್ಲ. ಸುಂದರವಾದ ಮುಖ, ಅಚ್ಚ ಕಪ್ಪಾದ ಗಚ್ಚ ಮತ್ತೂ ಒತ್ತಲ್ಲದ ಮೀಸೆ, ತಲೆಯಲ್ಲಿ ಹೆಚ್ಚಾಗಿ ಬಾಗಿಕೊಂಡಿರದೆ ಸ್ವಲ್ಪನೇ ಉದ್ದವಾಗಿರುವ ಕೂದಲು; ಪ್ರಶಸ್ತವಾದ ಲಲಾಟವೂ, ಎತ್ತರವಾದ ಮೂಗೂ—ಆ ಮುಖಮಂಡಲದ ಕಾಂತಿಯನ್ನು ಇಮ್ಮಡಿಗೊಳಿಸಿದ್ದುವು. ದೇಹವು ಅಷ್ಟು ಉದ್ದವೂ ಅಲ್ಲ, ಅಷ್ಟು ಗಾತ್ರವೂ ಅಲ್ಲ; ಆದರೆ ಬಲಯುಕ್ತವಾಗಿದೆ. ಎಲ್ಲ ಅವಯವಗಳೂ ಪ್ರಮಾಣಪೂರಿತಗಳಾಗಿ ಪೂರ್ಣತೆಗೊಂಡಿರುವುವು. ದೇಹವು ಗೌರವರ್ಣ. ಮುಖ ಮತ್ತು ಕಣ್ಣುಗಳ ಭಾವದಿಂದ ಯುವಕನು ಬುದ್ಧಿಶಾಲಿಯೆಂದು ತೋರುವುದು.

ಅವರಿಬ್ಬರೂ ಮಾವಿನ ತೋಪಿನಿಂದ ಪಾರಾಗಿ ದೊಡ್ಡದೊಂದು ಕಾಡುದಾರಿಗೆ ಬಂದರು. ವನಮಧ್ಯದಲ್ಲಿ ಸಣ್ಣದಾಗಿಯೂ ಇಕ್ಕಟ್ಟಾಗಿಯೂ ಇರುವ ದಾರಿಯು, ಸ್ವಲ್ಪ ದೂರ ಹೋಗುವುದರೊಳಗಾಗಿ ತೋಟದ ಎಲ್ಲೆಯನ್ನೇ ಅತಿಕ್ರಮಿಸಿರುವುದು. ಅಪರಿಷ್ಕಾರವಾಗಿ, ಬಹು ದೀರ್ಘವಾಗಿರುವ ಆ ಕಾಡುದಾರಿಯಲ್ಲಿ ಎಲೆಗಳ ಸಂದಿನಲ್ಲಿ ನುಸುಳಿಬಂದ ಕ್ಷೀಣವಾದ ಬೆಳದಿಂಗಳ ರೇಖೆಗಳನ್ನು ನೋಡಿದರೆ

ಜ್ಯೋತ್ಸ್ನೆಯು ಮೂರ್ಛೆಗೊಂಡು ಬಿದ್ದಿರುವಂತೆ ತೋರುತ್ತಿದೆ. ಆದರೆ ಮೂರ್ಛೆಗೊಂಡಿದ್ದ ಜ್ಯೋತ್ಸ್ನಾರೇಖೆಯು ಆ ಅತುಲ ಸೌಂದರ್ಯ ಮಯಿಯಾದ ಯುವತಿಯು ಒಂದೊಂದು ಹೆಜ್ಜೆಯಿಟ್ಟಾಗಲೂ, ಆಕೆಯ ಸುಕೋಮಲ ಚರಣ ಸ್ಪರ್ಶದಿಂದ, ಆ ಜ್ಯೋತ್ಸ್ನೆಯು ಸಜೀವಗೊಳ್ಳುತ್ತಿರುವಂತೆ ಯುವಕನಿಗೆ ಕಾಣುವುದು. ಆ ಸಮಯದಲ್ಲಿ ಗಾಳಿಯು ದೆಸೆಯಿಂದ ಹಾರಾಡುವ ಆಕೆಯ ಸೀರೆಯು ಸೆರಗು ಒಂದೊಂದು ಸಾರಿ ಯುವಕನ ಮೈಗೆ ಸೋಂಕುತ್ತಿದೆ! ಆ ಹೇಳಿಯಲ್ಲಿ ಪೂಜಿಸಬಾರದಾ ವನ ಪಥವು ಧೂಳ್ಲೀರಮಣಿಂದ ಮುಚ್ಚಿರಿತವಾಗಿದೆ; ಹಾಗೆಯೇ ಅನಂತ್ಯಾಕವಾಗಿ ಗಿಡಬಳ್ಳಿಗಳಿಂದೊಡಗೂಡಿದ ವನಭೂಮಿಯು ಕತ್ತಲೆ ಬೆಳಕುಗಳಿಂದ ಚಿತ್ರಿತವಾಗಿ ಪ್ರದರ್ಶಿಸಲ್ಪಟ್ಟ ಒಂದು ಚಿತ್ರದಂತೆ ಒಹು ಸುಂದರವಾಗಿ ಕಾಣಿಸುತ್ತಿದೆ; ಪುಷ್ಪೋಹದವಾದ ಬೆಳದಿಂಗಳು, ವನಕುಸುಮಗಳ ಸುಗಂಧ, ಪಿತಕರವಾಗಿ ಸೊಲ್ಲಗೆ ಬೀಸುವ ಮಲಯ ಮಾರುತ, ಹಾಗೆಯೇ ವನಪಕ್ಷಿಗಳ ಮಧುರ ಕಂಠದ ಸ್ವರಲಹರಿ—ಇವು ಚಿತ್ರದಲ್ಲಿ ಒರೆದಂತಿರುವ ಆ ವನಸ್ಥಲವನ್ನು ಪ್ರತಿಕ್ಷಣದಲ್ಲಿಯೂ ಸಜೀವಿತ ವನ್ನಾಗಿ ಮಾಡುತ್ತಿವೆ.

ಕಾಂತಶಿಲೆಯೊಡನೆ ಕಬ್ಬಿಣದ ತುಂಡಿಗೆ ಯಾವ ಸಂಬಂಧವಿರುವುದೋ ಹೆಂಗಸಿನ ಸೌಂದರ್ಯಕ್ಕೂ ಪುರುಷನ ಹೃದಯಕ್ಕೂ ಅದೇ ಸಂಪರ್ಕವಿರುತ್ತದೆ. ಕಾಂತಶಿಲೆ (ಸೂಚಿಕಲ್ಲು)ಗೆ ಸಮಾನವಾದ ಹೆಂಗಸಿನ ಸೌಂದರ್ಯಕ್ಕೆ ಒಂದು ಬಗೆಯಾಗಿ ಅಸಾಧಾರಣವಾದ ಆಕರ್ಷಣ ಶಕ್ತಿಯಿರುತ್ತದೆ; ಅದುನಿಂದ ಪುರುಷ ಹೃದಯವು ಒಹು ಸುಲಭವಾಗಿ, ಯಾರೊಬ್ಬರಿಗೂ ಗೋಚರವಾಗದ ಹಾಗೆ ಆಕರ್ಷಿತವಾಗುವುದು. ಆ ಆಕರ್ಷಣ ಶಕ್ತಿಯಿಂದಲೇ ಯುವಕನು ಅಷ್ಟುದೂರದವರೆಗೆ ಯಾವುದೊಂದು ಮಾತನ್ನೂ ಆಡದೆ, ಮಂತ್ರಮುಗ್ಧನಾದವನ ಹಾಗೆ, ಯಂತ್ರದಿಂದ ನಡೆಸಲ್ಪಟ್ಟವನಂತೆ ನಡೆಯುತ್ತಿರುವನು. ಯುವಕನು ವನಿನ ತೋಪಿನ ದೀರ್ಘಪಥವನ್ನು ಪಿಟ್ಟು ಕಾಡುದಾರಿಗೆ ಬಂದದ್ದೂ ಆ ಆಕರ್ಷಣದಿಂದಲೇ; ಸರ್ಪ ಸಂಕುಲವಾಗಿಯೂ, ಭಯಭರಿತ

ವಾಗಿಯೂ, ನೀರವತೆಯಾ ಪೂರ್ಣವಾಗಿಯೂ ಇರುವ ವನ ಮಧ್ಯದಲ್ಲಿ ಪ್ರವೇಶಮಾಡಲು ಹಿಂಜರಿಯದಿದ್ದುದೂ ಆ ಆಕರ್ಷಣ ಬಲದಿಂದಲೇ. ಅನಂತರ ಆ ಅರಣ್ಯದ ಮಹಾ ಗಭೀರತೆಯು ಮಧ್ಯೆ, ಆ ನಿರ್ಮಾನುಷತೆಯು ಮಧ್ಯೆ ಒಂದು ದಾರಿ ತಪ್ಪಿದಾಗ ಕನಸಿನ ಕಡೆಯಲ್ಲಿ ಎಚ್ಚರ ಗೊಳ್ಳುವ ಹಾಗೆ, ಹಠಾತ್ತಾಗಿ ಮಿಂಚಿದರೆ ಹೇಗೋ ಹಾಗೆ ಒಂದು ಬಗೆಯ ಶಂಕೆಯು ಯುವಕನ ಹೃದಯದಲ್ಲಿ ಜಾಗರಿತವಾಯಿತು. ಆವನು ಆ ಅಪರಿಚಿತಳನ್ನು ಕುರಿತು,—ನಾವು ಇನ್ನೂ ಎಷ್ಟು ದೂರ ಹೋಗ ಬೇಕು? ಈ ಗಭೀರವಾದ ವನ ಮಧ್ಯಕ್ಕೆ ನನ್ನನ್ನು ಕರೆಯುತಂದು ದೇಕೆ? ನಮ್ಮಾಪಣದಲ್ಲಿ ಯಾವುದೊಂದು ಗಾಮ್ಯವೂ ತೋರುವುದಿಲ್ಲವಲ್ಲ? ಈವರೆಗೆ ಇಷ್ಟುದೂರ ನಡೆದರೂ ಈ ವನದಿಂದ ಪಾರಾಗಲಿಲ್ಲ. ಜಾಗ್ರತೆ ಪಾರಾಗಬಹುದೆಂಬ ಭರವಸೆಯೂ ಕಂಡುಬರುವುದಿಲ್ಲ. ನಾನು ಯಾವ ದಿಕ್ಕಿನ ಕಡೆಗೆ ಹೋಗುತ್ತಿರುವೆನೋ ಅದೇ ತಿಳಿಯದಾಗಿದೆ; ನನಗೆ ಗಬ್ಭ್ರಾಮೆಯುಂಟಾಗಿದೆ. ಈಗ ನೀವು ನನ್ನನ್ನು ಎಲ್ಲಿಗೆ ಕರೆದುಕೊಂಡು ಹೋಗುತ್ತಿರುವಿರಿ? ನಾವು ಹೋಗುತ್ತಿರುವುದು ಪೂರ್ವವೋ, ಪಶ್ಚಿಮವೋ; ಉತ್ತರವೋ ಅಥವಾ ದಕ್ಷಿಣವೋ?—ಎಂದನು.

ಈಗ ನಾವು ದಕ್ಷಿಣ ಮುಖವಾಗಿ ಹೋಗುತ್ತಿದ್ದೇವೆ. ಇನ್ನು ಹೆಚ್ಚು ದೂರವಿಲ್ಲ; ದಕ್ಷಿಣದ ಕಡೆಗೆ ಇನ್ನು ಕೊಂಚ ನಡೆದರೆ ಪೂರ್ವ ಕಡೆಗೆ ಹೋಗುವ ದಾರಿಯೊಂದು ಸಿಗುತ್ತದೆ. ಆ ದಾರಿಯಲ್ಲಿ ಸ್ವಲ್ಪ ದೂರ ನಡೆಯುವುದರೊಳಗಾಗಿ ನಾವು ಈ ಕಾಡನ್ನು ಬಿಟ್ಟು ಬಂದು ತೋಟಕ್ಕೆ ಹೋಗುವೆವು; ಆ ತೋಟದಲ್ಲಿಯೇ ನಮ್ಮ ಮನೆ.—ಎಂದು ಮುಂದೆ ಹೋಗುತ್ತಿದ್ದವಳು ಮೆಲ್ಲಗೆ ಹೇಳಿದಳು.

ಯುವಕ—ಇರಬಹುದು; ಆದರೆ ನೀವು ನನ್ನನ್ನು ಬಹು ತೊಡ ಕಾದ ಕಾಡುದಾರಿಯಲ್ಲಿ ಕರೆದುಕೊಂಡು ಬಂದಿರಿ; ನಾನು ನಿಮ್ಮ ಮನೆ ಯಿಂದ ಹೊರಟು, ಈ ಪರ್ವತವನ್ನು ಗುರ್ತಿಸುತ್ತಾ, ಒಬ್ಬನೇ ದೋಣಿಯಬಳಿ ಸೇರುವುದು ಅಸಂಭವನೆಂದು ತೋರುವುದು.

ಅದಕ್ಕಾಗಿ ತಾವು ಆಲೋಚಿಸಬೇಕಾದುದಿಲ್ಲ. ಸುಗಮವಾದ ಇನ್ನೊಂದು ದಾರಿಯಿದೆ; ಆ ಮಾರ್ಗವಾಗಿ ಹೊರಟರೆ ಬಹಳ ಸುತ್ತಾಗುವುದರಿಂದ ಮನೆಯನ್ನು ಬೇಗ ಸೇರಬೇಕೆಂಬ ಅವಲಹಕೆಯಿಂದ ಈ ಕಾಡುದಾರಿಯಲ್ಲಿ ನುಸುಳಿ ಬಂದುದಾಯಿತು. ನಿಮ್ಮಂತಹ ದೊಡ್ಡಮನುಷ್ಯರನ್ನು ದುರ್ಗಮವಾದ ಈ ದಾರಿಗೆ ಕರೆದುತಂದುದು ಒಳ್ಳೆಯದಲ್ಲವೆಂಬುದು ನನಗೂ ಗೊತ್ತು; ಆದರೆ ಮಾಡುವುದೇನು? ತಾವು ನನ್ನ ಮನಸ್ಸಿನ ಉತ್ಕಂಠತೆಯನ್ನು ಸರಿಯಾಗಿ ತಿಳಿದೇ ಹೋದಿರಿ. ಹೋಗಲಿ, ಹಿಂದಿರುಗುವಾಗ್ಗೆ ನಮ್ಮ ಸೇವಕರಲ್ಲಿ ಒಬ್ಬನನ್ನು ನಿಮ್ಮ ಸಂಗಡ ಕಳುಹಿಸುತ್ತೇನೆ; ಅವನು ನಿಮ್ಮನ್ನು ಆ ಕಡೆಯಲ್ಲಿನ ಸುಗಮವಾದ ಮಾರ್ಗದಲ್ಲಿ ಕರೆದುಕೊಂಡುಹೋಗಿ ದೋಣಿಯ ಬಳಿ ಬಿಟ್ಟುಬರುತ್ತಾನೆ. ಈ ಕಾಡುದಾರಿಯಲ್ಲಿ ಕರತಂದು ನಾನು ತಮಗೆ ತುಂಬ ತೊಂದರೆಕೊಟ್ಟೆ; ಇದಕ್ಕಾಗಿ ಈ ಹತಭಾಗಿಯ ಅಪರಾಧಗಳೆಲ್ಲವನ್ನೂ ಮನ್ನಿಸಿರಿ—ಎಂದು ಅವಗುಂಠನವತಿಯು ಮೊದಲಿನಂತೆಯೇ ಮೃದುಸ್ವರದಿಂದ ಹೇಳಿದಳು.

ಅವಳ ಏನಯಪೂರ್ಣವಾದ ಮಾತು ಕೇಳಿ ಯುವಕನು ಮೈಮರೆತನು. ಸಬಲವಾದ ಅವನ ಹೃದಯ ಮಧ್ಯದಲ್ಲಿನ ದುಸ್ಸಾಹಸಿಕೆಯ ಮೇಲೆ, ಒಂದು ಬಗೆಯ ಅಶುಭಸೂಚಕವಾದ ಶಂಕೆಯು ಸೂಕ್ಷ್ಮಚ್ಛಾಯೆಯನ್ನು ತೋರುತ್ತಿದ್ದಿತು. ಆದರೆ, ಆ ಅವಗುಂಠನವತಿಯಾದ ಸುಂದರ ರಮಣಿಯ ಲಿಷ್ಟತೆಯಿಂದಲೂ, ಅದಕ್ಕೂ ಮಿಗಿಲಾಗಿ, ಆಕೆಯ ಮಧುರ ವಾಕ್ಯಗಳಿಂದಲೂ ಆ ಛಾಯೆಯೆಲ್ಲ ಮರಳಿನ ರಾಶಿಯಮೇಲೆ ಬಿದ್ದ ಮಳೆಯ ಹನಿಯ ಹಾಗೆ ಉತ್ತರ ಕ್ಷಣದಲ್ಲಿಯೇ ಮಾಯವಾಯಿತು. ಯುವಕನು—ಇಲ್ಲ, ಇದಕ್ಕಾಗಿ ನೀವು ಇಷ್ಟು ಕೇಳಿಕೊಳ್ಳಬೇಕೆ? ನನಗೇನೂ ತೊಂದರೆಯಾಗಲಿಲ್ಲ. ಸಾಮಾನ್ಯನಾದ ನನ್ನಿಂದ ನಿಮಗೆ ಈ ಅಲ್ಪವಾದ ಉಪಕಾರವಾದುದರಿಂದ ನಾನು ಬಹು ಮಟ್ಟಿಗೆ ಸುಖಿಯೇ ಆಗಿದ್ದೇನೆ. ಮನುಷ್ಯಮಾತ್ರನಾದವನಿಗೆ ಕರ್ತವ್ಯವಾಗಿರುವುದಕ್ಕಿಂತಲೂ ಹೆಚ್ಚಾಗಿ ನಾನೇನೂ ಮಾಡಿಲ್ಲ—ಎಂದು ಹೇಳಿದನು.

ರಮಣಿ—ಮಹಾಶಯ, ನನಗೆ ಇಂತಹ ಏಪತ್ಸಮಯದಲ್ಲಿ ತಾವು ಮಾಡಿದ ಸಹಾಯದಿಂದ ಎಷ್ಟರ ಮಟ್ಟಿಗೂ ಉಪಕಾರವಾಯಿತೆಂಬುದನ್ನು ಹೇಗೆ ವ್ಯಕ್ತಪಡಿಸಲಿ? ಒಂದುವೇಳೆ ನಾನು ಕೃತಘ್ನಳೇ ಆದರೂ, ನನ್ನ ಜೀವಪರ್ಯಂತವಾದರೆಗೂ ತಮ್ಮ ಸ್ಮರಣೆಯೇನೋ ತಪ್ಪುವಹಾಗಿಲ್ಲ. ತಮಗೆ ನಾನು ಎಷ್ಟರಮಟ್ಟಿಗೆ ಋಣಿಯಾಗಿರುವೆನೆಂಬುದನ್ನು ತಮಗೆ ತಿಳಿಯು ಹೇಳುವುದು ನಾಧ್ಯವಿಲ್ಲ. ಇಂದು ತಾವು ಇಷ್ಟು ದೂರ ತೊಂದರೆ ತೆಗೆದು ಕೊಳ್ಳದೆ ಇದ್ದಿದ್ದಪಕ್ಷದಲ್ಲಿ, ನನ್ನ ಅವಸ್ಥೆಯೇನಾಗುತಿದ್ದಿತೆಂಬುದನ್ನು ನೀವೇ ಆಲೋಚಿಸಿರಿ. ಯಾವನಾನರೊಬ್ಬ ಪಾಪಿಷ್ಠನ ಕೈಗೆ ಸಿಕ್ಕಿ ನನಗೆ ಎಂತಹ ಸರ್ವನಾಶವಾಗುತ್ತಿದ್ದಿತೋ? ಎಂತಹ ರಾತ್ರಿಯಲ್ಲಿ, ಈ ಭಯಂಕರ ಸ್ಥಳಗಳು ಕುಲಾಂಗನೆಯರಿಗೆ ಎಷ್ಟರಮಟ್ಟಿಗೆ ಏಪ ತ್ಕಾಲವೆಂಬುದನ್ನು ಕುರಿತು ತಮ್ಮಂತಹ ಏಡಕ್ಷಣರಿಗೆ ಹೇಳಿ ತಿಳಿಸುವುದೇನಿದೆ? ತಮ್ಮ ಹೃದಯವು ಬಹು ಉದಾರವಾದದ್ದು ಮತ್ತೂ ಪವಿತ್ರವಾದದ್ದು. ತಮ್ಮಂತೆ ಪರೋಪಕಾರಿಗಳೂ ದಯಾ ಶೀಲರೂ ಆದ ಜನರು ಈ ಪ್ರಪಂಚದಲ್ಲಿ ತೀರ ಕಡಿಮೆ. ತಾವು ನನ್ನ ವಿಷಯದಲ್ಲಿ ಈ ರೀತಿಯಾಗಿ ಪ್ರಯತ್ನಪಡದೇ ಇದ್ದಲ್ಲಿ, ನನ್ನ ಈ ಏಪತ್ಕಾಲಕ್ಕೆ ಈ ಆಪೇಕ್ಷೆಯಲ್ಲಿ ಮತ್ತಾರುತಾನೇ ಬಂದು ಪಲಿಗೊಡುತ್ತಿದ್ದರು! ತಮ್ಮ ಸಮಯಸಾಧನೆಯನ್ನು ಸಫಲಪಡಿಸಿಕೊಂಡು, ಅಪರಿಚಿತಳಾದ ಹೆಂಗಸೊಬ್ಬಳಿಗಾಗಿ, ಇಷ್ಟರ ತೊಂದರೆ ಸಹಿಸಿ ಒರುವರಾದರೂ ಯಾರಿ ದ್ದಾರೆ. ಸಹಾಯಮಾಡುವುದು ಹಾಗಿರಲಿ, ಈ ಅಪರಿಚಿತಳ ವಾತ್ತನ್ನು ಈ ಸಮಯದಲ್ಲಿ ಇತರರು ಸಂಪೂರ್ಣವಾಗಿ ನಂಬುತಿದ್ದರೆಂದು ಹೇಳು ವುದೂ ಕಷ್ಟವಾಗಿದೆ.—ಎಂದು ಹೇಳುತ್ತಿ ಆ ಹೆಂಗಸು ಮುಂದೆ ಮುಂದೆ ನಡೆಯುತ್ತಿದ್ದಳು.

ಹನ್ನೆರಡನೆಯ ಪರಿಚ್ಛೇದ

ತೋಟದ ಮನೆ

ತದನಂತರ ಸ್ವಲ್ಪ ಹೊತ್ತಿನೊಳಗಾಗಿ ಆ ಯುವಕನೂ ಆ ಅವಗುಂಠನ ವತಿಯೂ ಕಾಡುದಾರಿಯನ್ನು ಬಿಟ್ಟು ಬಂದು ತೋಟದ ಸಮೀಪಕ್ಕೆ ಬಂದರು. ತೋಟವು ವಿಸ್ತಾರವಾದ್ದು; ಸುಮಾರು ಐವತ್ತು ವಿಘಾ* ಕಡಿಮೆ ಇಲ್ಲವೆಂದು ತೋರುವುದು. ತೋಟದ ನಾಲ್ಕೂ ಕಡೆಯಲ್ಲಿ ದೊಡ್ಡ ದೊಡ್ಡ ಮರಗಳು ಹಂದ್ರುಕಿರಣದಲ್ಲಿ ಮುಂದು ದೃಷ್ಟಿಸೀಮಾ ಪರ್ಯಂತ ಮನೆಯಲ್ಲಿ ಸುದೃಶ್ಯವಾಗಿ ಚಿತ್ರಿತವಾದ ಚಿತ್ರದಂತೆ ಬಹು ಮನೋಹರವಾಗಿ ಕಾಣಿಸುತ್ತಿವೆ. ಕೆಲವು ಕಡೆಗಳಲ್ಲಿ ಎತ್ತರವಾದ ನೇರಳೆ ಮರ, ಕೆಲವೆಡೆಗಳಲ್ಲಿ ಅವಕ್ಕೂ ಎತ್ತರವಾದ, ದಟ್ಟವಾಗಿ ಬೆಳೆದಿರುವ ದೇವದಾರುವೃಕ್ಷ ಶ್ರೇಣಿ, ಅವುಗಳಿದಿರಾಗಿ ಮಾವು, ಲಿಂಬೆ, ಹಲಸು, ತಾಳೆ, ತೆಂಗು ಮುಂತಾದ ಬಗೆ ಬಗೆಯ ಫಲವೃಕ್ಷಗಳು. ಮಧ್ಯ ಭಾಗದಲ್ಲಿ ಬಹು ವಿಸ್ತಾರವಾದ ಎರಡಂತಸ್ತಿನ ಹಳೆಯ ಮನೆ; ಬಹು ದಿನಗಳಿಂದ ಸುಧಾರಣೆಯಿಲ್ಲದ ಕಾರಣ ತುಂಬ ಕಾಂತಿಹೀನವಾಗಿದೆ. ಗೋಡೆಗೆ ಹಾಕಿದ್ದ ಗಾರೆಯು ಅನೇಕ ಕಡೆಗಳಲ್ಲಿ ಕಳಚಿಬಿದ್ದಿದ್ದುದರಿಂದ ಆದ ರೊಳಗಿನ ಇಟ್ಟಿಗೆಯು ಕಟ್ಟಡವು ಕಾಣಿಸುತ್ತಿದೆ.

ರಮಣಿಯು ಯುವಕಸೊಡನೆ ಆ ಎರಡಂತಸ್ತಿನ ಮನೆಯ ಬಾಗಿಲ ಬಳಿಗೆ ಬಂದಳು. ಯುವಕನು, ಈ ಮನೆ ನಿಮ್ಮದೇ ?—ಎಂದು ಪ್ರಶ್ನೆ ಮಾಡಿದನು.

ರಮಣಿಯು ವಿಸಯಭಾವದಿಂದ ತಲೆಯನ್ನಾಡಿಸಿ ಒಪ್ಪಿಕೊಂಡು, —ರಾತ್ರಿ ಬಹಳ ಹೊತ್ತಾಗಿದೆ. ಸೇವಕರೆಲ್ಲರೂ ನಿದ್ರಿಸುತ್ತಿರುವಂತೆ ತೋರುವುದು. ಯುವಮಾನನು ಸರಿಯಾಗಿ ಉಪಚಾರಮಾಡುವುದಿಲ್ಲ ವಾದರೆ ಸೇವಕ ಸೇವಕಿಯರ ಅಲಕ್ಷ್ಯ ಭಾವವು ಈ ರೀತಿ ನೋರೆ

* ೭೨೦ ಚದರಡಿಗಳುಳ್ಳ ಜಮೀನಿಗೆ 'ಖಾತೆ' ಎಂದೂ, ೨೦ ಖಾತೆಗಳಿಗೆ ಒಂದು 'ವಿಘಾ' ಎಂದೂ ಬಂಗಾಳಾ ದೇಶದಲ್ಲಿ ಪ್ರಸಿದ್ಧಿ.

ವಿಚಾರಿಸುತ್ತದೆ;—ಹೀಗೆಂದು ಹೇಳಿ ಬಾಗಿಲನ್ನು ತಳ್ಳಿದಳು. ಆಷ್ಟಕ್ಕೇ ಬಾಗಿಲು ತೆರೆಯಿತು. ಆದರಿಂದ ಒಹುಮಟ್ಟಿಗೆ ಧೈರ್ಯ ತಂದುಕೊಂಡ ವಳಾಗಿ,—ಬದುಕಿದೆ, ಬಾಗಿಲು ತೆರೆದೇ ಇದೆ; ಇದರಿಂದ ಅವರು ಮನೆಗೆ ಹಿಂದಿರುಗಿ ಬಂದಿರಜೇಕೆಂದು ತೋರುತ್ತದೆ—ಎಂದಳು.

ಯುವಕ—ಹಾಗಾದರೆ ನೀವು ಮನೆಯೊಳಕ್ಕೆ ಹೋಗಿರಿ; ಒಂದುವೇಳೆ ಅವರು ಬಂದು ಮೂರ್ಛಿತರಾಗಿದ್ದ ಪಕ್ಷದಲ್ಲಿ ನನಗೆ ವರ್ತ ಮಾನ ಕೊಡಿ; ಆವರೆಗೆ ನಾನು ಇಲ್ಲಿಯೇ ಇರುತ್ತೇನೆ—ಎಂದನು.

"ಅದೇಕೆ, ಮಹಾಶಯ, ಹಾಗೆಂದಿಗೂ ಆಗದು" ಎಂದು ಹೇಳಿ, ಆ ರಮಣಿಯು ಚಕಿತಳಾಗಿ ಹಿಂದಿರುಗಿ ನಿಂತುಕೊಂಡಳು. ಆ ಸಮಯ ದಲ್ಲಿ ಒಂದು ಸಲ ಗಾಳಿ ಬೀಸಿದ್ದರಿಂದ ಅವಳ ಮುಖ ಛರದೆಯು ಸಂಪೂರ್ಣವಾಗಿ ತೆರೆಯಿತು. ಆಗ ಆಕೆಯು ಒಹುವಾಗಿ ಲಜ್ಜಿತಳೂ ವ್ಯಸ್ತಳೂ ಆಗಿ, ಅವಗುಂತನವನ್ನು ಸರಿಪಡಿಸಿ ಪುನಃ ಮುಖವಿಡಪೋಲೆ ಎಳೆದುಕೊಂಡಳು. ಆ ಅಲ್ಪ ಸಮಯದಲ್ಲಿ ಯುವಕನ ಸತೃಷ್ಣ ದೃಷ್ಟಿಯು ಆ ಸುಂದರಿಯ ಸುಂದರ ಮುಖಮಂಡಲದ ಸೌಂದರ್ಯ ಸುಧೆಯನ್ನು ಕ್ಷಣಕಾಲದ ಮಟ್ಟಿಗೆ ಅಸಂಪೂರ್ಣವಾಗಿ ಪಾನಮಾಡಿಬಿಟ್ಟಿತು. ಸುಂದರಿಯು ಆ ಸಮಯದ ನತಮಳಿಯು ಯುವಕನ ಮುಗ್ಧಹೃದಯ ವನ್ನು ಪೆಲ್ಲಸೆ ಕಲಕಿತು. ಕೊಂಚವಾಗಿ ಮುಲಿನತೆಯು ಛಾಯೆ ಸೋಂಕಿದ ಪವಾತ್ಮದಿಂದ ಆಕೆಯು ಏಸ್ಕಾರವಾದ ಕೃಷ್ಣಚಿಕ್ಕುಗಳಲ್ಲಿ ವ್ಯಕ್ತಗೊಂಡ ಲಜ್ಜಾಶೀಲತೆ ಮತ್ತೂ ಉತ್ಕಂಠಿತೆಗಳಿಂದುಂಟಾದ ಚಾಂಚಲ್ಯವೂ, ಸ್ವಲ್ಪಮಟ್ಟಿಗೆ ಉಬ್ಬಿದ ಹಾಗಿರುವ ಆಕೆಯ ಅಧರೋಷ್ಠ ದಲ್ಲಿ ಅಯಾಸದುಂಟಾದ ಸ್ಮಿದುಕಂಪನವೂ ಪೂರ್ಣಯೌವನ ಪರಿಪೂರ್ಣ ವಾದ ಆಮುಖ ಕಾಂತಿಯನ್ನು ಕಾಂತಿಮಯವಾಗಿರುವಂತೆ ಸಾಮಿರು ವುದನ್ನು ಯುವಕನು ಆ ಆರೆಗಳಿಗೆಯೊಳಗಾಗಿ ನೋಟದನು; ಆದರಿಂದ ಅವನ ತೃಷಿತ ನೇತ್ರಗಳ ತೃಷೆಯು ಇನ್ನೂ ವೃದ್ಧಿಯಾಯಿತು.

ಪರಸ್ತ್ರೀ ದರ್ಶನದ ಏಷಯದಲ್ಲಿ ಇಷ್ಟರ ಅಧೈರ್ಯವೂ, ಸ್ವಗ್ರತೆ ಯಿಂದೊಡಗೂಡಿದ ತೃಷ್ಣೆಯೂ ಸಚ್ಚರಿತ್ರನಾದ ಯುವಕನ ಏಷಯ

ದಲ್ಲಿ ಮಹಾಪಾಪಕರವಾದ ವಿಚಾರವೇ ಇದ್ದರೂ, ಅತನ ಮನಸ್ಸಿನಲ್ಲಿ ಕಲುಷಿತ ಭಾವವಿರಲಿಲ್ಲ. ಸ್ತ್ರೀ ಸೌಂದರ್ಯಕ್ಕಾಗಿ ವ್ಯಗ್ರತೆಗೊಂಡ ವಿಕಾರಾಕ್ಷೆಯೊಂದು, ಪಾಶ್ಯಚಿ, ಬಲ್ಲ ಪುರುಷರ ಹೃದಯದಲ್ಲಿಯೂ ಇದ್ದೇ ಇರುತ್ತದೆ; ಇದು ಅದರ ಏನಾ ಮಾತ್ರೇನೂ ಅಲ್ಲ. ಸ್ವಾಭಾವಿಕವಾದ ಈ ಕೋರಿಕೆಯೊಂದಿಗೆ ಅಲ್ಪ ಸ್ವಲ್ಪವಾಗಿ ಪಾಪ ಜೆರತರೂ ಸರಿ, ಆಗ ಇದು ಮನಸ್ಸಿನಿಂದ ನಿಗ್ರಹಿಸಲು ಅಸಾಧ್ಯವಾಗುವ ಹಾಗೆ ಪ್ರಾಬಲ್ಯವಾನವಾಗಿ ಉರಿಯತೊಡಗುವುದು. ಇದು ಹೇಗಾದರೂ ಆಗಲಿ, ಯುವಕನ ಮನಸ್ಸಿನಲ್ಲಿ ಹೀಗೆ 'ಸಕಾಲಿಕ' ನಡೆಸುತ್ತಾ ಗ್ರಂಥವನ್ನು ಬೆಳಸುವುದು ಸಮಂಜಸವಾಗಿ ತೋರುವುದಿಲ್ಲ; ಅಲ್ಲದೆ ಇದರಿಂದ ಅನೇಕ ಮುಂದು ಪಾತಕರು ಬೇಸರಗೊಂಡಾರೆಂದೂ ಭಯಪಡಬೇಕಾಗಿದೆ. ಈ ಯುವಕನು ಈ ತಪ್ಪಿತಕ್ಕಾಗಿ ದಂಡಾರ್ಹನೋ ಶಿಕ್ಷಾರ್ಹನೋ ಎಂಬುದನ್ನು ನಿರ್ಣಯಿಸುವ ಭಾರವು ಸಜ್ಜನೇಚ್ಛಕರಾದ ಪಾತಕ ಪಾಲಿಕಾ ಪರ್ಷತ್ತಿಗೆ ಸೇರಿದೆ. ಅವರುಗಳ ಪರಿಶೀಲನೆಯಿಂದ ಅವನು ಬಂಧಿಸಲ್ಪಡನೆಂದು ತೀರ್ಮಾನವಾಗುವುದೋ ಸಮ್ಮ ಈ ಯುವಕನು ಅಂಧಿಸಲ್ಪಡೆ ಬಂದು ಪಾಪವ ಒಪ್ಪಿಕೊಳ್ಳುವನು.

ಸಂಬಂಧಪಡದ ವಿಚಾರಗಳಿಂದ ಮನುಜನು ಸಹ್ಯವಾಗುತ್ತಿದೆ. ರಮಣಿಯು ಮುಂಬರಿಯನ್ನು ಸರಿಯಾಗಿ ಪಾಕಿಕೊಂಡು,—ತಾವು ಇಳಿಗೆ ದಯವಾಡಿ, ಬಹಳವಾಗಿ ದಣಿದಿದ್ದೀರಿ; ಈ ರೀತಿಯಲ್ಲಿ ತೊರಗಡೆ ಒಬ್ಬರೇ ಇಷ್ಟು ಹೊತ್ತು ಏಕಿರಲಾದೀತು?—ಎಂದಳು.

ಯುವಕನು ಸುರುಮಾತಾಡಿಸಿ ಹುಸಿಜೊಳಕ್ಕೆ ಹೋದನು; ಹಾಗೆಯೇ, ಆ ಸುಂದರಿಯನ್ನೇ ಏಂಬಾಲಿಸಿಕೊಂಡು ನಡೆದನು. ಮೊದಲು ಒಂದು ಪಚಾರಕ್ಕೆ ಬಂದರು. ಪಚಾರವು ಬಹು ದೊಡ್ಡದು; ಆದರೆ ಪರಿಷ್ಕಾರವಾಗಿಲ್ಲ. ಅದರ ಪೂರ್ವಕಡೆ ಒಂದು ನಡಮನೆ; ಅಲ್ಲಿ ಬೆಳಕಿಲ್ಲ. ಅಲ್ಲಿ ಗಭೀರವಾದ ಅಂಧಕಾರವೂ ನಿಸ್ತಬ್ಧತೆಯೂ ನಿರ್ದಾಕ್ಷಿಣ್ಯವಾಗಿ ರಾಜ್ಯಭಾರ ಮಾಡುತ್ತಿದ್ದುವು. ಅದರ ಮುಷ್ಕಿ ಇಬ್ಬರೂ ಪ್ರವೇಶಿಸಿದರು. ಆ ಗಾಢಾಂಧಕಾರದಲ್ಲಿ ರಮಣಿಯನ್ನು ಪುನಃ

ನೋಡಲಾಗಲಿಲ್ಲ; ತನ್ನನ್ನು ತಾನು ಕಾಣುವುದೇ ಕಷ್ಟವಾಗಿರುವ ಹಾಗೆ, ಆ ಸ್ಥಾನದಲ್ಲಿ ಕತ್ತಲೆ ಕವಿದಿದೆ. ಆ ಸ್ಥಳದಲ್ಲಿ ಸಂಪೂರ್ಣವಾಗಿದ್ದ ನೀರವತೆಯ ಮಧ್ಯೆ, ದುರ್ಗೋದ್ಯವಾದ ತಿಮಿರ ರಾಶಿಯ ಮಧ್ಯೆ, ಮೃದುವಾದ ಹೆಜ್ಜೆಯ ಸದ್ದೂ, ಕೈಬಳೆಗಳ ಮೃದುಮಧುರವಾದ ಕಿಂಕಿಣೀ ರವವೂ ಮುಂದಾಗಿ ಹೋಗುತ್ತಿರುವ ಅದೃಶ್ಯ ಸುಂದರಿಯ ಇರುವಿಕೆಗೆ ಸಾಕ್ಷಿಗಳಾಗಿದ್ದುವು.

* * * * *

ಆ ನಡವಳಿಯು ಈಶಾನ್ಯ ಮೂಲೆಯಲ್ಲಿ ಮುಹೂರ್ತಕ್ಕೆ ಹೋಗುವ ಹೊಟ್ಟಲು. ರಮಣಿಯು ಹೊಟ್ಟಲ ಹೊಲೆ ಹತ್ತಿ ಯುವಕನನ್ನು ಕುರಿತು,—ತಾವು ಇಲ್ಲಿ ಸ್ವಲ್ಪ ನಿಂತಿರಿ, ಬಂದು ದೀಪ ತರುತ್ತೇನೆ—ಎಂದು ಹೇಳಿದಳು. ಉತ್ತರ ಕ್ಷಣದಲ್ಲಿಯೇ ಸುಂದರಿಯ ಚಂಚಲವಾದ ಹೆಜ್ಜೆಯ ಸದ್ದು ಕ್ರಮ ಕ್ರಮವಾಗಿ ಸೋಪಾನವನ್ನೇರಿ ಮೇಲಕ್ಕೆ ಹೋಗುತ್ತಾ ಲೀನವಾಯಿತು.

ಆಗ ಯುವಕನು ನಡವಳಿಯಲ್ಲಿ ಏಕಾಂಗಿ; ಯುವಕನ ಸುತ್ತಲೂ ದಟ್ಟವಾದ ಕಗ್ಗತ್ತಲೆ.

ಹದಿಮೂರನೆಯ ಪರಿಚ್ಛೇದ

ರೋಗಿಯ ಕೊಠಡಿಯಲ್ಲಿ

ಆ ಸ್ಥಳದಲ್ಲಿ, ಆ ರೀತಿಯಾಗಿ, ಒಬ್ಬನೇ ನಿಂತಿರುವುದು ಯುವಕನಿಗೆ ಕಷ್ಟಕರವಾಗಿ ತೋರಿತು. ಅಲ್ಲದೆ ನೆಲವು ಜಾಗಾಗಿದ್ದುದರಿಂದ ಅಲ್ಲಿ ಉಂಟಾಗಿದ್ದ ದುರ್ಗಂಧವು ಯುವಕನಿಗೆ ಅಸಹ್ಯವಾಯಿತು. ಗಾಳಿಯು ಸರಾಗವಾಗಿ ಬಂದುಹೋಗುವುದಕ್ಕೆ ಅನುಕೂಲವಾದ ಮಾರ್ಗಗಳಿಲ್ಲದುದರಿಂದ ಅಸಹ್ಯವಾದ ಆ ದುರ್ಗಂಧದಿಂದ ಯುವಕನಿಗೆ ಉಸಿರಾಡುವುದೂ ಕಷ್ಟವಾಗಿ ತೋರುತ್ತಿತ್ತು. ಸಾಮಾನ್ಯವಾಗಿ ಈ ನಡವಳಿಯನ್ನು ಸದಾ ಸರ್ವದಾ ಮುಚ್ಚಿರುತ್ತಾ, ಬೆಳಕೆಯಲ್ಲಿಲ್ಲದುದೇ

ಅದರ ಆ ದುರ್ದೆಸೆಗೆ ಕಾರಣವೆಂದು ಯುವಕನು ಊಹಿಸಿದನು. ಹೆಂಗಸು ಹಿಂದಿರುಗಿ ಬರುವುದಕ್ಕೆ ಹೆಚ್ಚು ಹೊತ್ತಾಗುದರಿಂದ ಯುವಕನು ಗೋಡೆಯ ಮೇಲೆ ಎರಡು ಕೈಗಳನ್ನು ಆಡಿಸುತ್ತಾ ಮುಚ್ಚಿರುವ ಕಿಟಕಿಗಳನ್ನು ಹುಡುಕತೊಡಗಿದನು. ಹೀಗೆ ಹುಡುಕಿ, ಮುಚ್ಚಿದ್ದ ಒಂದು ಕಿಟಕಿಯನ್ನು ಕಂಡುಹಿಡಿದನಾದರೂ ಅದನ್ನು ತೆರೆಯುವುದಕ್ಕಾಗಿ ಮಾಡಿದ ಅವನ ಕೌಶಲವೆಲ್ಲವೂ ಅಂದು ಆ ಅಂಧಕಾರ ಗೃಹದಲ್ಲಿ ವ್ಯರ್ಥವಾದುದು ಮಹಾದಕರವಾದ ವಿಷಯವೇ ಸರಿ. ಕಾರ್ಯಾಂತರ, ಅದು ಹೊರಗಡೆಯಿಂದ ಮುಚ್ಚಿದುದಾಗಿರಬೇಕು ಎಂದು ತೋರಿತು. ಆಗ, ಹೀಗೆ ಇಲ್ಲಿ ಈ ರೀತಿ ಕಾದು ಸಿಂತಿರುವುದಕ್ಕಿಂತಲೂ ಹೊರಗಡೆ ಸಿಂತಿರುವುದು ಮೇಲೆಂದು ಭಾವಿಸಿ ಯುವಕನು ಬಂದೆರಡು ಹೆಜ್ಜೆ ಇಡುವಷ್ಟರಲ್ಲಿಯೇ ಸೋಪಾನದ ಮೇಲಿನ್ನಾಗದಿಂದ ಉಜ್ವಲತರವಾದ ದೀಪದ ಬೆಳಕು ಬಂದು ವಿಸ್ತಾರವಾದ ಆ ನಡಮನೆಯ ಕೊಂಚ ಭಾಗವನ್ನು ಬೆಳಕುಮಾಡಿತು.

ಯುವಕನು ತಲೆಯೆತ್ತಿ ಅತ್ತ ಕಡೆ ನೋಡಿದನು. ಆ ಹೆಂಗಸು ಅದೇ ರೀತಿಯಲ್ಲಿ ಮೂರು ಫರಣಿಯನ್ನೆಳದುಕೊಂಡು, ಕೈಯಲ್ಲಿ ಲಾಂದ್ರವನ್ನು ತೆಗೆದುಕೊಂಡು ಅನಸರವಸರವಾಗಿ ಇಳಿದುಬರುತ್ತಿದ್ದಾಳೆ. ರಮಣಿಯು ಸೋಪಾನ ಶ್ರೇಣಿಯಲ್ಲಿ ಅರ್ಧಕ್ಕೆ ಇಳಿದುಬಂದು,—ಮಹಾಶಯ, ಬೇಗನೆ ಬಸ್ಸಿ, ಇದುವರೆಗೆ ನಿಮಗಾಗಿ ಭಯಪಡುತ್ತಿದ್ದೆನೋ, ಅದೇ ಸಂಭವಿಸಿದೆ; ಅವರು ಇಲ್ಲಿ ಬಂದು ಮೂರ್ಛಿತರಾಗಿದ್ದಾರೆ. ಅಕಟಕಟಾ! ಎಷ್ಟು ಹೊತ್ತಿನಿಂದ ಅವರು ಹೀಗಿರುವರೋ ಇದುವಿಂದೇನಾಗುವುದೋ ತಿಳಿಯದಲ್ಲ?—ಎಂದು ಉತ್ಕಂಠಿತ ಭಾವದಿಂದ ಹೇಳಿದಳು.

ಭಯವಿಲ್ಲ, ಸ್ವಸ್ಥರಾಗಬೇಡಿ ಎಂದು ಹೇಳುತ್ತಿ, ಯುವಕನು ಬೇಗ ಬೇಗನೆ ಅವಳನ್ನು ಹಿಂಬಾಲಿಸಿದನು. ಸೋಪಾನಶ್ರೇಣಿಯನ್ನು ಹತ್ತಿ ಅವರು ಒಂದು ಕೈಸಾಲೆಗೆ ಬಂದರು. ಅಲ್ಲಿಂದ ಮೂರು ನಾಲ್ಕು ಕೊಠಡಿಗಳಲ್ಲಿ ಸಾರಾಗಿ ಎತ್ತರವಾಗಿಯೂ ಪ್ರಶಸ್ತವಾಗಿಯೂ ಇದ್ದ

ಕೊಠಡಿಯೊಂದಕ್ಕೆ ಬಂದರು. ರಮಣಿಯು ಲಾಂಛನವನ್ನು ಕೈಸಾಲೆಯಲ್ಲಿಯೇ ಇಟ್ಟುಬಂದಿದ್ದಳು. ಆ ಪ್ರಕಾಶಮಾನವಾದ ಬೆಳಕನ್ನು ರೋಗವು ಕೊಠಡಿಗೆ ತೆಗೆದುಕೊಂಡುಹೋಗುವ ಧೈರ್ಯವು ಅವಳಿಗಿರಲಿಲ್ಲ. ಆ ಕೊಠಡಿಯು ಒಂದು ಪಾರ್ಶ್ವದಲ್ಲಿ ಅರ್ಧ ಮಟ್ಟಿಗೆ ಮುಗಿದಿನ್ನ ಒಂದು ಮೇಣದಬತ್ತಿ ಉರಿಯುತ್ತಿತ್ತು. ಆ ಅಸ್ಪಷ್ಟವಾದ ಬೆಳಕಿನಲ್ಲಿ ಯುವಕನು ನೋಡಿದನು, ಆ ಕೊಠಡಿಯ ಒಂದು ಪಾರ್ಶ್ವದಲ್ಲಿ ಪರಿಷ್ಕಾರವಾದೊಂದು ಹಾಸುಗೆಯಲ್ಲಿ ಪ್ರೌಢ ವ್ಯಕ್ತಿ; ಅವನ ಮುಖವನ್ನು ಸಾಲ್ಬತ್ತಕ್ಕೆ ಕಟ್ಟಿಮೊಯಿಲ್ಲ, ಶರೀರವನ್ನು ಅಲುಗಿಸದೆ ನಿತ್ರಾವನಂತೆ ಬಿದ್ದಿರುವನು; ಅತನ ಮುಖವು ವಿವರ್ಣವಾಗಿದೆ. ಕಣ್ಣು ಅರ್ಧ ಮಾತ್ರ ಮುಚ್ಚಿದೆ. ಕೈಕಾಲುಗಳು ಬರೆಕೋರೆಯಾಗಿ ಬಿದ್ದಿವೆ. ಹಾಸುಗೆಯು ಅವನ್ಮೆಯು ಕೂಡ ಹಾಗೆಯೇ. ದಿಂಬುಗಳು ಕ್ರಮತಪ್ಪಿ ಇಲ್ಲೊಂದು ಅಲ್ಲೊಂದರಂತೆ ಬಿದ್ದಿವೆ; ತಲೆ ಕಡೆಯ ದಿಂಬು ನೆಲಕ್ಕೆ ಉರುಳಿಕೊಂಡಿದೆ, ಹೊದ್ದಿಕೆಯು ಹೇಗೆ ಹೇಗೋ ಸುತ್ತಿಕೊಂಡಿದೆ.

ಯುವಕನು ಬಲ್ಲಕ್ಕೂ ಬೊಮಲು, ಪ್ರಜ್ಞಾಶೂನ್ಯನಾದ ಆ ವ್ಯಕ್ತಿಯ ನಾಡಿಯನ್ನು ಹಿಡಿದು ಪರೀಕ್ಷಿಸಿದನು. ನಾಡಿಯು ಸಿರೋಗಿಯ ನಾಡಿಯಂತೆ ತೋರಿತು; ಆಗ ಅತನ ಮನಸ್ಸಿಗೆ ಹಠಾತ್ತಾಗಿ ಸ್ವಲ್ಪ ಸಂದೇಹವುಂಟಾಯಿತು; ಇದು ಈ ಮನುಷ್ಯನ ನಟನೆಯಾಗಿರಬೇಕು. ಇಲ್ಲವಾದರೆ ಈ ರೋಗವು ಈ ಪ್ರಪಂಚದಲ್ಲಿ ಹೊಸ ಬಗೆಯದಾಗಿರಬೇಕು ಎಂದಂದುಕೊಂಡನು.

ರಮಣಿಯು ಪ್ರಸ್ತಾಪಿಸಿ,—ಹೇಗೆ ತೋರುವುದು?—ಎಂದು ಕೇಳಿದಳು.

ಯುವಕ—ನಾಡಿ ನೋಡಿದ್ದರಲ್ಲಿ ರೋಗದ ಚಿಹ್ನೆಗಳೊಂದೂ ಕಂಡುಬರಲಿಲ್ಲ; ಸಾಮಾನ್ಯ ಮನುಷ್ಯನ ನಾಡಿಯ ಸ್ಥಿತಿ ಹೇಗಿರುವುದೋ ಈತನ ನಾಡಿಯೂ ಹಾಗೆಯೇ ಇದೆ.

ರಮಣಿ—ಅನೇಕ ಮಂದಿ ಡಾಕ್ಟರರೂ, ಪಂಡಿತರೂ ಹೇಗೆ ಹೇಳಿದರೋ ನೀವೂ ಹಾಗೆಯೇ ಹೇಳುತ್ತೀರಿ.

ಯುವಕ—ಈತನು ಮೂರ್ಛಿತನಾಗುವ ಮೊದಲು ತುಂಬ ಒದೆ ದಾಡುವನೋ ?

ರಮಣಿ—ಹೌದು, ಆ ಸಮಯದಲ್ಲಿ ಹಿಡಿದು ನಿಲ್ಲಿಸಲು ಯಾರಿಗೂ ಸಾಧ್ಯವಿಲ್ಲ.

ಯುವಕ—ಹಾಸುಗೆಯ ಸ್ಥಿತಿ ನೋಡುವಲ್ಲಿ ಹಾಗೆಯೇ ಕಾಣುವುದು. ಹೊರಗಡೆ ಇರುವ ಲಾಂದ್ರವನ್ನು ಸ್ವಲ್ಪ ತೆಗೆದುಕೊಂಡುಬನ್ನಿ.

ರಮಣಿ—ಯಾತಕ್ಕೆ ?

ಯುವಕ—ನಾಡಿಯ ಪರೀಕ್ಷೆಯಿಂದ ಇಂತಹ ರೋಗವೆಂದು ಗೊತ್ತುಮಾಡುವುದಕ್ಕೆ ಆಗದಿರುವಾಗ ಇತರ ವಿಧವಾದ ಪರೀಕ್ಷೆಗಳಿಂದ ನಿರ್ಣಯಿಸಬೇಕಾಗುವುದು.

ರಮಣಿ—ಇದರಿಂದ ರೋಗಪರೀಕ್ಷೆಯಾಗುವುದೇನು ?

ಯುವಕ—ಈತನು ನಟಿಸುತ್ತ ಬಿದ್ದಿರಬೇಕೆಂದು ತೋರುವುದು.

ರಮಣಿ—ಹಾಗೂ ಆಗುವುದುಂಟೇನು ?

ಯುವಕ—ಅದನ್ನು ಒಂದು ಸಲ ಪರೀಕ್ಷಿಸಿ ನೋಡುವುದರಲ್ಲಿ ದೋಷವೇನು ?

ರಮಣಿಯು ಲಾಂದ್ರವನ್ನು ತಂದ ಕೂಡಲೇ ಯುವಕನು ಅದರೊಳಗಿನ ಉರಿಯನ್ನು ಹೆಚ್ಚಿಸಿದನು. ಅನಂತರ ಮೂರ್ಛಿತನಾಗಿದ್ದ ವ್ಯಕ್ತಿಯ ಮುಖದ ಮೇಲೆ ಬೆಳಕು ಬೀಳುವಂತೆ ಲಾಂದ್ರವನ್ನು ಎತ್ತಿ ಹಿಡಿದುಕೊಳ್ಳಬೇಕೆಂದು ಹೇಳಿದನು.

ಆಮೇಲೆ ಯುವಕನು ಚಾಪ್ಪನವಿಲ್ಲದೆ ಬಿದ್ದಿದ್ದ ವ್ಯಕ್ತಿಯ ಕಣ್ಣಿನ ರಪ್ಪೆಗಳೆರಡನ್ನೂ ತೆರೆದು ಹಿಡಿದುಕೊಂಡನು. ಮೂರ್ಛಿತ ವ್ಯಕ್ತಿಯು ಕಣ್ಣುಗುಡ್ಡೆಗಳೆರಡೂ ಸ್ಥಿರವಾಗಿದ್ದುವು; ಅಂತಹ ಪ್ರಕಾಶಮಾನವಾದ ಬೆಳಕು ಬಿದ್ದರೂ ಅವು ಅಲುಗಲಿಲ್ಲ; ಚಿತ್ರದಲ್ಲಿ ಬರೆದಿಟ್ಟಹಾಗೆ ಸ್ಥಿರವಾಗಿದ್ದುವು. ಈ ಮನುಷ್ಯನು ನಟನೆ ಮಾಡುತ್ತಾ ಈ ರೀತಿ ಬಿದ್ದುಕೊಂಡಿರುವನಾದರೆ ಈ ವ್ಯಕ್ತಿಯು ಈ ವಿಚಾರದಲ್ಲಿ ದಕ್ಷನೇ

ಸರಿ ಎಂದೂ, ಅವನ ಈ ನಟನೆಯು ಪ್ರಶಂಸನೀಯವೆಂದೂ ಯುವಕನು ಮನಸಾ ಭಾವಿಸಿದನು.

ಇಷ್ಟುಪಾತ್ರದಿಂದಲೇ ಯುವಕನು ಸುಮ್ಮನಾಗಲಿಲ್ಲ. ಆತನ ಕುತೂಹಲವು ಮತ್ತೂ ವೃದ್ಧಿಯಾಯಿತು. ಕೈಯೊಳಗಿನ ಲಾಂಡ್ರವನ್ನು ರೋಗಿಯ ಕಣ್ಣಿನ ಹತ್ತಿರ ತೂಗಾಡಿಸಬೇಕೆಂದು ರಮಣಿಗೆ ಹೇಳಿದನು. ರಮಣಿಯು ಹಾಗೆಯೇ ಮಾಡಿದಳು. ಆಗ ಮೂರ್ಛಿತನಾದ ವ್ಯಕ್ತಿಯು ಕಣ್ಣುಗುಡ್ಡೆಗಳೆರಡೂ ಲಾಂಡ್ರವನ್ನು ಅನುಸರಿಸಿ ತಿರುಗುತ್ತಿದ್ದುವು— ಯುವಕನ ಸಂಶಯವು ಬಲವಾಯಿತು. ಆಗ ಯುವಕನು ಒಂದು ಕಣ್ಣಿನ ರಪ್ಪೆಯನ್ನು ಬಿಟ್ಟುಬಿಟ್ಟು, ಇನ್ನೊಂದು ಕಣ್ಣಿನ ಗುಡ್ಡೆಯನ್ನು ಬೆರಳಿಂದ ಮುಟ್ಟುವುದಕ್ಕೆ ಪ್ರಯತ್ನಮಾಡುವಾಗ್ಗೆ, ರೋಗಿಯು ಭಯಪಟ್ಟು ಕಣ್ಣನ್ನು ಮುಚ್ಚಿಕೊಂಡನು; ಇಷ್ಟೇ ಪರೀಕ್ಷೆಯು ಸಾಕು.

ರಮಣಿಯು ಮೊದಲಿನಂತೆಯೇ ಆತುರದಿಂದ, — ಏನಾದರೂ ಗೊತ್ತಾಯಿತೆ?—ಎಂದು ಕೇಳಿದಳು.

ಯುವಕನು ಮಂದಹಾಸದಿಂದ,—ಈ ರೋಗವನ್ನು ನಾನು ವಾಸಿಮಾಡಿಕೊಡುತ್ತೇನೆ; ಭಯಪಡಬೇಡ.—ಎಂದನು.

ರಮಣಿ—ಈಗ ಪ್ರಜ್ಞೆ ಬರುವುದಕ್ಕೆ ಏನು ಮಾಡಬೇಕು?

ರೋಗಿಗೆ ಚೆನ್ನಾಗಿ ಪ್ರಜ್ಞೆ ಇದೆ; ರೋಗಿಯು ತಾನಾಗಿ ತೋರ್ಪಡಿಸಿಕೊಳ್ಳದ ಪಕ್ಷದಲ್ಲಿ ಮತ್ತೇತರಿಂದಲೂ ಅವನಿಗೆ ಪ್ರಜ್ಞೆ ಬರಮಾಡುವುದು ಸಾಧ್ಯವಿಲ್ಲವೆಂದು ಯುವಕನು ತನ್ನೊಳಗೆ ತಾನೇ ತಿಳಿದುಕೊಂಡು, ಪ್ರಕಾಶವಾಗಿ,—ಈಗ ನೀವು ಈತನ ಮುಖದ ಮೇಲೆ ತಣ್ಣೀರೆರಚಬಹುದು; ಅಥವಾ ನಿದ್ದೆ ಹೋಗುತ್ತಿರುವ ನಿಮ್ಮ ಸೇವಕರಲ್ಲಿ ಯಾರನ್ನಾದರೂ ಬರಮಾಡಿಕೊಂಡು ಈತನಿಗೆ ಪ್ರಜ್ಞೆ ಬರುವವರೆಗೂ ಜೀವಣಿಗೆಯಿಂದ ಬೀಸುವಂತೆಯಾದರೂ ಮಾಡಬಹುದು— ಎಂದು ಹೇಳಿದನು.

ರಮಣಿಯು ಸಮ್ಮತಿಸೂಚಕವಾಗಿ ತಲೆಯಾಡಿಸಿ ಆ ಕೊಠಡಿಯಿಂದ ಹೊರಟುಹೋದಳು.

ಹದಿನಾಲ್ಕನೆಯ ಪರಿಚ್ಛೇದ

ಆಶ್ಚರ್ಯ ರೋಗಿ

ರಮಣಿಯು ಹೊರಟುಹೋದ ಮೇಲೆ, ರೋಗಿಯು ಯಾತನಾ ಸೂಚಕವಾದ ಬಂದೆರಡು ಶಬ್ದಗಳನ್ನು ಮಾಡಿ, ಸಿಡ್ಡಿಯಿಂದ ಎಚ್ಚರಗೊಂಡವನ ಹಾಗೆ ಏದ್ದು ಕುಳಿತನು; ಯುವಕನನ್ನು ನೋಡಿದಾಗ ರೋಗಿಯ ದೃಷ್ಟಿಯಲ್ಲಿ ಬಂದು ಬಗೆಯ ಏಸ್ಮಯದ ಭಾವವು ವ್ಯಕ್ತಪಟ್ಟಿತು;—ತಾವು ಯಾರು? ತಮ್ಮ ಹೆಸರು?—ಬಂದು ಮೆಲ್ಲಗೆ ಕೇಳಿದನು.

ಯುವಕ—ನನ್ನ ಹೆಸರು "ದೇವೇಂದ್ರವಿಜಯವರ್ಮ" ಬಂದು.

ರೋಗಿ—ಏನು, ಈ ಹೆಸರನ್ನು ನಾನು ಬಂದೂ ಕೇಳಿದ್ದಿಲ್ಲವಲ್ಲ?

ಯುವಕ—ನಾನು ಈ ಪ್ರಾಂತದವನಲ್ಲ; ನನ್ನ ಊರು ಭವಾನೀಪುರ; ಕಲಕತ್ತೆಗೆ ಸ್ವಲ್ಪ ದಕ್ಷಿಣ ಕಡೆ.

ರೋಗಿ—ಇರಬಹುದು, ತಾವು ಇಲ್ಲಿಗೆ ಬಂದದ್ದು ಹೇಗೆ? ತಮ್ಮನ್ನು ಇಲ್ಲಿಗೆ ಯಾರು ಕರೆದುಕೊಂಡು ಬಂದರು?

ಯುವಕ—ನೀವು ನಿಮ್ಮ ಹೆಂಡತಿಯನ್ನು ಆ ನದಿಯ ಹತ್ತಿರ ಒಂಟಿಯಾಗಿ ಬಿಟ್ಟು ಬಂದಿದ್ದಿರಿ. ಅವರು ಇಷ್ಟು ದೂರ ಒಬ್ಬಂಟಿಗರಾಗಿ ಹಿಂದಿರುಗಿ ಬರಲು ಧೈರ್ಯಪಡಲಿಲ್ಲ. ಆ ಸಮಯಕ್ಕೆ ಸರಿಯಾಗಿ ನಾನು ಆ ಮಾರ್ಗವಾಗಿ ದೋಣಿಯಲ್ಲಿ ಪ್ರಯಾಣ ಮಾಡುತಲಿದ್ದೆ; ನನ್ನನ್ನು ಕಂಡು ತಮ್ಮ ಹೆಂಡತಿ ಅವರನ್ನು ಈ ಸ್ಥಳಕ್ಕೆ ಸೇರಿಸಿ ಬರಬೇಕೆಂದು ಬಹಳವಾಗಿ ಕೇಳಿಕೊಂಡರು; ಅದರಿಂದ ಅವರನ್ನು ಬೆಟ್ಟು ಹೋಗಲು ಬಂದೆನು. ನೀವು ಅಸ್ವಸ್ಥರೆಂಬ ವಿಚಾರವನ್ನೂ ಆಕೆಯಿಂದ ಕೇಳಿದೆ. ನಾನೂ ಡಾಕ್ಟರ, ಆದಕಾರಣ ತಮ್ಮನ್ನು ಒಂದು ಬಾರಿ ನೋಡಿ ಹೋಗೋಣವೆಂದು ಇಲ್ಲಿಗೆ ಬಂದುದಾಯಿತು.

ರೋಗಿ—ನೀವು ಡಾಕ್ಟರೆ? ಡಾಕ್ಟರ ವಿಷಯದಲ್ಲಿ ನನಗೆ ಕೊಂಚವೂ ನಂಬುಗೆಯಿಲ್ಲವೆಂಬ ಅಂಶವನ್ನು ನನ್ನ ಹೆಂಡತಿ ನಿಮಗೆ ಹೇಳಲಿಲ್ಲವೇನು?

ಯುವಕ—ಹೌದು, ಒಂದು ಸಲ ಹೇಳಿದರು, ನಿಶ್ಚಯ.

ರೋಗಿ—ಅವಳು ಹೇಳಿದ ಮೇಲೂ ನೀವು ಇಷ್ಟು ಶ್ರಮುಪಟ್ಟು ಕೊಂತು ನನ್ನನ್ನು ನೋಡಬಂದುದೇಕೆ? ಅವಳಾದರೂ ನಿಮ್ಮನ್ನು ವ್ಯರ್ಥವಾಗಿ ಯಾತಕ್ಕೆ ಕರೆದುಕೊಂತು ಬಂದಳು?

ಯುವಕ—ಇಲ್ಲಿಗೆ ಒಂದಾಗ ತಾವು ಮೂರ್ಛೆಯಿಂದ ಸತ್ತ್ವವರಂತೆ ಬಿದ್ದುಕೊಂಡಿದ್ದಿರಿ; ಈಗ ಪ್ರಕೃತಿಸ್ಥರಾದುದನ್ನೂ ನೋಡಿದುದಾಯಿತು; ಇನ್ನು ನಾನು ಇಲ್ಲಿರಬೇಕಾದ ಅವಶ್ಯಕತೆಯಿಲ್ಲ. ಇನ್ನು ಹೊರಡುತ್ತೇನೆ.—ಎಂದು ಹೊರಡಲು ಸಿದ್ಧನಾದನು.

ರೋಗಿ—ಕುಳಿತುಕೊಳ್ಳಿರಿ, ಕೋಪಮಾಡಿಕೊಂಡಿರೋ? ನನ್ನನ್ನು ಕ್ಷಮಿಸಿ; ತಮ್ಮ ಪರಿಚಯವಿಲ್ಲದಾಗಿದುದರಿಂದ, ತಮ್ಮ ಕೈಯಿಂದಲೂ ಬಂದು ಸಲ ಔಷಧಿ ತೆಗೆದುಕೊಳ್ಳೋಣವೆಂದಿದ್ದೇನೆ. ಡಾಕ್ಟರ ಚಿಕಿತ್ಸೆಯಲ್ಲಿ ಇದೇ ಕಡೆಯದು. ನನ್ನ ಈ ರೋಗವು ಜಾಗ್ರತೆಗುಣವಾಗುವ ಹಾಗೆ ಔಷಧ ಕೊಡಬಲ್ಲಿರಾ?

ಯುವಕ—ಬಂದುಬಾರಿ ಪ್ರಯತ್ನಮಾಡಿ ನೋಡಬಲ್ಲೆ. ಆದರೆ ಪ್ರಥಮತಃ ರೋಗಿ ಮತ್ತು ಚಿಕಿತ್ಸಕರು ಒಬ್ಬರನ್ನೊಬ್ಬರು ತಿಳಿದಿರುವುದು ಅವಶ್ಯಕ. ಅನಂತರ ರೋಗದ ಚಿಕಿತ್ಸೆ. ನಿಮ್ಮ ದೇಹಸ್ಥಿತಿಯ ವಿಚಾರ ನನ್ನ ನನ್ನಲ್ಲಿ ಮರೆಮಾಚುವುದಾದರೆ, ನಾನು ನನ್ನ ಜೀವನವಾನವೆಲ್ಲ ತಮಗೆ ಚಿಕಿತ್ಸೆ ಮಾಡಿದರೂ ತಮ್ಮ ಅಸ್ವಸ್ಥತೆಯನ್ನು ಕೊಂಚವೂ ಶಮನಗೊಳಿಸುವುದಕ್ಕೆ ಸಾಧ್ಯವಾಗದು. ನನ್ನ ಮನಸ್ಸಿನಲ್ಲಿರುವುದನ್ನು ಮೊದಲು ಹೇಳಿ ಬಿಡುತ್ತೇನೆ; ನಾನು ಮೊದಲು ಬಂದು ನೋಡಿದಾಗ, ನೀವು ಮೂರ್ಛಿತರಾದವರಂತೆ ಬಿದ್ದುದೇನೋ ನಿಜ. ಆದರೆ ನೀವು ನಿಜವಾಗಿಯೂ ಮೂರ್ಛಿತರಾಗಿರಲಿಲ್ಲ—ಮೂರ್ಛಿತರಾಗಿದ್ದಂತೆ ನಟಿಸುತ್ತಾ ಬಿದ್ದುಕೊಂಡಿದ್ದಿರಿ. ಅಲ್ಲವೆ?

ರೋಗಿ—ತಾವು ಸರಿಯಾಗಿ ಹೇಳಿದಿರಿ. ನಾನು ಮೂರ್ಛಿತನಾದ ಹಾಗೆ ನಟಿಸಿದೆ, ಆಗ ನನಗೆ ಚೆನ್ನಾಗಿ ಜ್ಞಾನವಿದ್ದಿತು.

ಯುವಕ—ಹಾಗೆ ಏಕೆ ಮಾಡಿದಿರಿ?

ಯುವಕನ ಈ ಬಗೆಯ ಪ್ರಶ್ನೆಯಿಂದ ರೋಗಿಯ ಕಣ್ಣುಗಳು ಅರೆಗಳಿಗೆಯಾದರೆಗೆ ಕೆಂಪೇರಿದ್ದು ಪುನಃ ಮೊದಲಿನ ಭಾವವನ್ನು ಧಾರಣ ಮಾಡಿದುವು. ಅನಂತರ ಅವನು ಶೂನ್ಯದೃಷ್ಟಿಯಿಂದ ಒಂದು ಸಲ ಬಾಗಿಲಕಡೆ ನೋಡಿ, ಸುತ್ತಲೂ ತಿರುಗಿನೋಡಿದನು; ಪುನಃಪುನಃ ಆ ಬಾಗಿಲಕಡೆ ನೋಡುತ್ತಾ ಉದ್ವೇಗ ಕಂಪಿತ ಸ್ವರದಿಂದ ಹೇಳಿದನು:—ಕೇವಲ ನನ್ನ ಹೆಂಡತಿಗಾಗಿ—ಮತ್ತೇತಕ್ಕಾಗಿಯೂ ಅಲ್ಲ, ಡಾಕ್ಟರ್ ಮಹಾಶಯ; ನನ್ನ ಈ ಮೂರ್ಛೆಯು ಇಪ್ಪತ್ತ್ನಾಲ್ಕು ಗಂಟೆಗಳ ಹೊತ್ತೂ ಸ್ಥಾಯಿಯಾಗಿರುವಂತೆ ಮಾಡಬಲ್ಲ, ಯಾವುದಾದರೂ ಚಿಕಿತ್ಸೆ ಇದೆಯೆ? ನಾನು ಮೂರ್ಛಿತನಾಗಿದ್ದಾಗ್ಗೆ ನಿರೋಗಿಯಾಗಿರುತ್ತೇನೆ; ನಾನು ಸಂಪೂರ್ಣವಾಗಿ ಸ್ವಸ್ಥಗೊಂಡಿರುವುದೂ ಆಗಲೇ. ಆದಾದ ನಂತರ ಪುಜ್ಜೆ ಬಂದಾಗ ನನಗೆ ತುಂಬ ಯಾತನೆಗಳು. ಹೃದಯದಲ್ಲಿ ಯಾತನೆ, ತಲೆಯಲ್ಲಿ ಯಾತನೆ; ಎದೆಯೊಡೆಯುವುದೊ ಎನ್ನುವಂತಾಗುವುದು, ತಲೆ ಸಿಡಿಯುವುದೊ ಎನ್ನುವಹಾಗಿರುವುದು—ಹೀಗೆ ನನಗೆ ಬಹು ಭಯಂಕರ ಯಾತನೆಗಳು. ಈ ಯಾತನೆಯೆಲ್ಲವೂ ಸ್ವಯಂಕೃತವೆಂಬುದನ್ನು ಒಲ್ಲೆ; ಆತ್ಮವಂಚನೆಯೊಂದಲ್ಲದೆ ಮತ್ತೆ ಯಾವುದೂ ಅಲ್ಲ. ಒಂದಲ್ಲ ಒಂದು ದಿನ, ಇದರಿಂದಲೇ ನನ್ನ ಜೀವನವು ಕಡೆಗಾಣುವುದೆಂದೂ ಬಲ್ಲೆ. ನಾನಾಗಿ ನರಕಾಗ್ನಿಯನ್ನು ನನ್ನ ಹೃದಯ ಮಸ್ತಿಷ್ಕ ಉರಿಯಿಸುತ್ತಿರುವೆನೆಂದು ತಿಳಿದಿದ್ದೇನೆ; ಆದರೆ ಆ ವಿಚಾರವನ್ನು ಪ್ರಾಣ ಹೋಗುವಾಗಲೂ ಪ್ರಕಾಶಪಡಿಸಲಾರೆ,—ಅನಂತರವೂ ಮಾಡುವುದಿಲ್ಲ. ನೀವು ಈಗ ಒಂದು ಕೆಲಸಮಾಡಿ; ಈಗ ಇನ್ನೊಂದು ಕೊಠಡಿಯಲ್ಲಿ ಹೋಗಿ ಕುಳಿತುಕೊಳ್ಳಿ; ನಾನು ಈಗ ಏಕಾಂಗಿಯಾಗಿರುವುದಕ್ಕೆ ಸಾಧ್ಯವಾದರೆ ಬಹುಮಟ್ಟಿಗೆ ಸ್ವಸ್ಥನಾಗುತ್ತೇನೆ. ನಿಮ್ಮ ಸಂಗಡ ಹೇಳಿದ ಮಾತುಗಳಲ್ಲಿ ಒಂದು ಬಿಂದುವನ್ನಾದರೂ ನನ್ನ ಹೆಂಡತಿಗೆ ಹೇಳಬೇಡಿ. ಈಗ ಇಲ್ಲಿಗೆ ಬರಕೂಡದೆಂದು ಅವಳಿಗೂ ದಯವಾಡಿ ತಿಳಿಯಿಸಿ. ಮುಖ್ಯವಾಗಿ ನಾನು ಸ್ವಲ್ಪ ಹೊತ್ತು ಏಕಾಂಗಿಯಾಗಿ ಇರಬೇಕೆಂ

ದಿದ್ದೇನೆ. ಸ್ವಲ್ಪ ಸುದಾರಿಸಿಕೊಂಡು ನಂತರ ನಿಮಗೆ ಹೇಳಿ ಕಳು ಹುತ್ತೇನೆ.—ಹೀಗೆಂದು ಹೇಳಿ, ಅತನು ಹಾಸುಗೆಯಿಂದೆದ್ದು ಹೋಗಿ, ತೆರದಿದ್ದ ಕಿಟಕಿಯೊಂದರ ಹತ್ತಿರ ತಲೆಯುಮೇಲೆ ಕೈಯಿರಿಸಿಕೊಂಡು ಕುಳಿತುಕೊಂಡನು; ಹಾಗೆಯೇ ಸಿಟ್ಟುಸಿರಿಡುತ್ತಿದ್ದನು.

ಯುವಕನಿಗೆ ಅವನ ಮಾತಿನ ಅಭಿಪ್ರಾಯಗಳಿಂದೂ ತಿಳಿಯ ಲಿಲ್ಲ. ರೋಗಿಯು ಮೊದಲು ಹೇಗೋ ಕೆಟ್ಟಿರಬೇಕೆಂದು ಭಾವಿಸಿದನು. ಅನಂತರ ಆ ಅದ್ಭುತ ರೋಗಿಯು ಕೊಠಡಿಯಿಂದ ಹೊರಟು ಕೈಸಾಲೆಗೆ ಬಂದು ನಿಂತುಕೊಂಡನು. ಆ ಹೊತ್ತಿಗೆ ಸರಿಯಾಗಿ ರೋಗಿಯ ಹೆಂಡತಿ ಅತುರದಿಂದ ಬಂದು, ಅಲ್ಲಿ ಯುವಕನು ಹೊರಗಡೆ ನಿಂತಿರುವುದನ್ನು ಕಂಡು—ತಾವು ಒಬ್ಬರೇ ಇಲ್ಲಿ ನಿಂತಿರುವುದಲ್ಲಾ—ಅತನೇನಾ.....

ಯುವಕನು, ಮಾತು ಪೂರೈಸಗೊಡದೆ, ಅತನಿಗೆ ಈಗ ಪ್ರಜ್ಞೆ ಬರುತ್ತಲಿದೆ. ಅತನು ಎದ್ದು ಕಿಟಕಿಯ ಬಳಿ ಗಾಳಿಗಾದಿರಾಗಿ ಕುಳಿತು ಕೊಂಡಿರುವನು; ಈಗ ಅತನು ಏಕಾಂಗಿಯಾಗಿರಲು ಅಪೇಕ್ಷಿಸಿದನು. ನಿಮ್ಮ ಯುವಮಾನರ ಮನಸ್ಸಿನಲ್ಲಿ ಯಾವ್ಯದೋ ಬಂದು ಬಗೆಯ ಶೋಕವೂ ದುಃಖವೂ ನೇರಿ ಇಂತಹ ತೊಂದರೆಗೆ ಅವಕಾಶವಾಯಿತೆಂದು ತೋರುತ್ತದೆ. ಅದರಿಂದಲೇ ಅತನು ಅಧೀರನೂ ಆತುರಗಾರನೂ ಆಗಿರುವನು. ಸ್ವಲ್ಪ ಮಟ್ಟಿಗೆ ಮೆದುಳು ಕೆಟ್ಟಿರಬಹುದೆಂದೂ—ಮತ ರಿಂದಲೂ ಅತನು ತಾನಾಗಿಯೇ ಸುದಾರಿಸಿಕೊಳ್ಳಲಾರನೆಂದೂ ಭಾವಿಸುತ್ತೇನೆ—ಎಂದು ಹೇಳಿದನು.

ಹದಿನೈದನೆಯ ಪರಿಚ್ಛೇದ

ವಿಪತ್ತಿನ ಛಾಯೆ

ರಮಣಿಯು ಚಿಂತಿತ ಭಾವದಿಂದ ಸ್ವಲ್ಪ ಹೊತ್ತು ತಲೆತಗ್ಗಿದವಳಾಗಿದ್ದು, ಯಾಕೆ, ಅಂತಹ ನಡವಳಿಗಳೊಂದೂ ನಡೆದಿಲ್ಲವಲ್ಲ! ತಾವು ಈಗ (ಬೆರಳಿಂದ ತೋರಿಸಿ) ಈ 'ವರಾಂಡದ' ಅತ್ತಕಡೆ ಮೂಲೆಯಲ್ಲಿರುವ ಕೊಠಡಿಯಲ್ಲಿ ಹೋಗಿ ಕುಳಿತುಕೊಳ್ಳಿರಿ; ಆ ಕೊಠಡಿಯಲ್ಲಿ ದೀಪವಿರು

ವ್ಯದು ಕಾಣಿಸುತ್ತಿದೆ. ತಮಗೆ ಬಹಳ ಸಾವಕಾಶವಾಯಿತು; ಅದಕ್ಕಾಗಿ ಏನೂ ತಿಳಿದುಕೊಳ್ಳಕೂಡದು; ಬಹಳ ಏಪತ್ತಿಗೆ ಸಿಕ್ಕಿದುದರಿಂದ ತಮಗೆ ತೊಂದರೆ ಕೊಡಬೇಕಾಯಿತು—ಎಂದು ಮೆಲ್ಲಗೆ ಹೇಳಿ, ಆ ಅವಗುಂಠನ ವತಿಯು ರೋಗಿಯ ಕೊಠಡಿಗೆ ಹೋದಳು. ಅನಂತರ ಯುವಕನು ಬಂದಿರಬಹುದೆಂದು ಭಾವಿಸಿದ್ದ ಇಬ್ಬರೂ ಒಳಗಾಗಿ, ರೋಗಿಯ ಕೊಠಡಿಯಿಂದ ಭಯಂಕರವಾದ ಬಂದಿರಬಹುದಾದ ಮಾತುಗಳು ಅವರಿಗೆ ಕೇಳಿಸಿತು. ಆ ಮಾತುಗಳನ್ನು ಬಹು ಮೆಲ್ಲಗೆ ಉಚ್ಚಾರಮಾಡಿದರಾದರೂ, ಅದು ಸ್ಪಷ್ಟವಾಗಿಯೇ ಕೇಳಿಸಿತು. ಯುವಕನು ಅಲ್ಲಯೇ ನಿಂತು ಕೇಳ ತೊಡಗಿದನು.

ರಮಣಿ—ಇವನೇ ಹೌದೇನು! ನಿಮಗೆ ಚೆನ್ನಾಗಿ ಗುರುತಾಯಿತೆ?

ರೋಗಿ—ಹೌದು, ಇವನೇ.

ರಮಣಿ—ಇವನ ಹೆಸರು ವೇನೇಂದ್ರಬಿಯನೆಂತಲೆ?

ರೋಗಿ—ಹೌದು, ಇವನ ಹೆಸರು ಅದೇ.

ರಮಣಿ—ಹಾಗಾದರೆ ನಾನು ಮೋಸಹೋಗಲಿಲ್ಲ?

ರೋಗಿ—ಎಂದೂ ಆಗದಿದ್ದುದು ಎಂದಾದೀತೇ?

ಹೀಗೆಂದು ಹೇಳಿ ರೋಗಿಯು ಮೆಲ್ಲಗೆ ನಕ್ಕನು. ಆ ಶಬ್ದವನ್ನು ಸಹ ಯುವಕನು ಹೊರಗಿನಿಂದಲೇ ಸ್ಪಷ್ಟವಾಗಿ ಕೇಳಿದನು.

ರಮಣಿ—ಈಗ ನಿನು ಮಾಡಬೇಕು?

ರೋಗಿ—ನಿನಗೆ ಇಷ್ಟಬಂದ ಹಾಗೆ.

ರಮಣಿ—ನೀನು ಹೇಗೆ ಹೇಳಿದರೆ, ಹಾಗೆ ಮಾಡುತ್ತೇನೆ.

ರೋಗಿ—ಕೊಲೆಮಾಡು.

ರಮಣಿ—ಕೊಲೆಮಾಡಲೆ!

ರೋಗಿ—ಇದೇನು ಬಹು ಆಶ್ಚರ್ಯವಾಗಿದೆಯಲ್ಲ! ಯಾತಕ್ಕೆಂದರೆ ಇಂತಹ ಮಾತನ್ನು ಎಂದೂ ನಿನ್ನಿಂದ ಕೇಳಿದ್ದಿಲ್ಲವಲ್ಲ? ಇಂದು 'ಕೊಲೆ' ಎಂಬ ಮಾತು ಕೇಳಿ ಆಕಾಶದಿಂದ ನೆಲಕ್ಕುರುಳಿದಂತಾದೆಯಲ್ಲ! ಮೊದಮೊದಲು ಕೊಲೆಮಾಡುವುದರಲ್ಲಿ ನಿನಗೆ ಏಷ್ಟೋ ಅಭ್ಯಾ

ರುಚಿ ಇತ್ತು. ಯಾರು ಬಲ್ಲರು, ಯುವಕನ ರೂಪವನ್ನು ಕಂಡು ಬೆರಗಾಗಿಲ್ಲವಷ್ಟೆ? ನೋಡಿಕೊ ನನ್ನನ್ನು ಕೈಬಿಡಬೇಡ.

ರಮಣಿ—ಅಂತಹ ಭಯವೇನೂ ಇಲ್ಲ, ಪಾಗಿದ್ದ ಪಕ್ಷದಲ್ಲಿ ಅಸಂಖ್ಯವಾದ ಏಷತ್ತುಗಳ ಭಾರವನ್ನು ಹೊತ್ತುಕೊಂಡು, ಇಷ್ಟು ಕಾಲ ನಿನ್ನೊಡನೆ ಅಲೆದಾಡಿ ಸಾಯುತ್ತಿರಲಿಲ್ಲ. ನೀನು ನನ್ನ ಏಕಾರದಲ್ಲಿ ಈ ರೀತಿ ಭಾಷಿಸಿದೆಯಾ? ಈ ಮನುಷ್ಯನ ಏಷಯವಾಗಿ ಮೊನಲು ಮಾಡಿದ್ದ ಪರಾಮರ್ಶದಂತೆ ಕೆಲಸ ನಡಾಯಿಸುವುದು ಒಳ್ಳೆಯದಲ್ಲವೆ?

ರೋಗ—ಆ ಪರಾಮರ್ಶದಂತೆಯೇ ಕೆಲಸವಾಗಲಿ. ಆ ಕಾರಣದ ಮೇಸಿಂದ ಈ ಮನುಷ್ಯನು ಅತ್ಯಾವಶ್ಯಕ.

ಕೇಳಿ ಯುವಕನ ದೃಷ್ಟಿ ನಟ್ಟಿತು. ಕೇಳಿದುದರಿಂದ ಬಟಿಲವಾದೊಂದು ರಹಸ್ಯದಿಂದ ಬಟಿಲತರವಾದ ಮತ್ತೂ ರುಚೀಕ್ಷ್ಣವಾದ ರಹಸ್ಯದ ಮುಸ್ಸೆ ಯುವಕನು ಮಗ್ನನಾದನು. ಅವರ ಬಾಯಿಲ್ಲಿ ಅವನದೇ ಹೆಸರು! ಅವನ ಹೆಸರೇ ದೇವೇಂದ್ರಮಣಿಯೆ—ಅವನನ್ನೇ ಕೊಲೆ ಮಾಡಬೇಕೆಂಬ ಸಂಕಲ್ಪ. ಮೊದಲಿನ ಪರಾಮರ್ಶದಂತೆ ಕೆಲಸ ನಡೆಯುವುದಂತೆ! ಇವುಗಳೆಲ್ಲದರ ಅರ್ಥವೇನು? ಆಲೋಚಿಸಿ ತಿಳಿವು ಮಕ್ಕೆ ಯುವಕನಿಗೆ ಸಾಧ್ಯವಾಗಲಿಲ್ಲ. ಅವನ ತಲೆ ತಿರುಗುವಂತೆ ತೋರಿತು; ಅವನ ಹೃದಯದಲ್ಲಿನ ರಕ್ತ ನಾಡಿಗಳಲ್ಲಿ ರಕ್ತಪ್ರವಾಹವು ತುಂಬಿ ಹರಿಯತೊಡಗಿತು.

ಯುವಕನು ಒಹು ಪ್ರಯಾಸದಿಂದ ಧೈರ್ಯವನಾಡಿ, ಸನ್ನಿಹಿತವಾದ ಏಷತ್ತಿಗೆ ಸಿದ್ಧನಾದನು. ಯಾವಾಗ ಅವರ ಮಾತು ಕತೆಗಳು ಕೇಳಿ ಬರಲಿಲ್ಲವೋ ಆಗ ಅವನು ಅಲ್ಲಿಂದ ಸ್ವಲ್ಪ ಮುಂದಾಗಿ ಇನ್ನೊಂದು ಕಡೆಯ ಕೈಸಾಲೆಯ ಕಟಕಟೆಗೆ ಬರಗಿ ನಿಂತುಕೊಂಡನು. ಅಲ್ಲಿಯೂ ಏಳರೀತ ಕತ್ತಲೆ; ಯುವಕನು ಆ ಅಂಧಕಾರದಲ್ಲಿ ನಿಂತುಕೊಂಡು ತನ್ನ ಮುಂಡೆಯ ಬರಹವನ್ನೂ ಸನ್ನಿಹಿತವಾಗಿರುವ ಏಷತ್ತನ್ನೂ ಕುರಿತು ಆಲೋಚಿಸತೊಡಗಿದನು. ಅವನ ದೃಷ್ಟಿಗೆ ಇಂದು ನಾಲ್ಕೂ ಕಡೆಯಲ್ಲಿ ಕತ್ತಲು ದಟ್ಟವಾಗಿ ಕವಿದುಕೊಂಡಿದ್ದಿತು.

ಹದಿನಾರನೆಯ ಪರಿಚ್ಛೇದ

ಭಯ ಮತ್ತೂ ಸಂದೇಹ

ಕೊಂಚ ಹೊತ್ತಿನೊಳಗಾಗಿ ಆ ರಮಣಿಯು ಪ್ರಕಾಶವಾಸವಾದ ದೀಪವೊಂದನ್ನು ತೆಗೆದುಕೊಂಡು ದೇವೇಂದ್ರುಬಯಸಿದ್ದಲ್ಲಿಗೆ ಬಂದಳು. ಅವಳ ಆ ಮುಖಸ್ಫರದೆಯು ಉದ್ದದಲ್ಲಿ ಮೊದಲಿಗಿಂತಲೂ ಬಹಳ ಹೊಟಕಾಗಿದ್ದಿತು. ಬೆಮರಿನಿಂದ ತೊಯ್ದ ಮುಂಗುರುಳು ಹಣೆಯ ಮೇಲಾಭಾಗದ ಕೊಂಚ ಭಾಗವನ್ನು ಆವರಿಸಿಕೊಂಡಿತ್ತು. ಅವಳ ಕೃಷ್ಣ ಕೇಶರಾಶಿಯ ದೀರ್ಘವಾದ ಕೇಶಗುಚ್ಛವೊಂದು ಅವಳ ಕಿವಿಯ ಹಿಂಭಾಗದಿಂದ ಹೊರಟು, ಅವಳ ಆ ಸೂಕ್ಷ್ಮ ವಸ್ತ್ರಾಚ್ಛಾದಿತವಾಗಿ ಉತ್ತ್ವರವಾಗಿರುವ ಪಕ್ಷ್ಮದ ಮೇಲೆ ಇಳಿಬಿದ್ದು ಅಲೆದಾಡುತ್ತಿದೆ. ಅವಳ ಆ ಅಪ್ರಶಸ್ತವಾದ ಮುಖಸ್ಫರದೆಯನ್ನೂ, ಕೃಷ್ಣ ಕೇಶಗುಚ್ಛವನ್ನೂ, ಕಾಂತಿಮಯವಾದ ಅವಳ ಮುಖಮಂಡಲವನ್ನೂ ನೋಡಿದಾಗ, ವಸಂತವಾಸದಲ್ಲಿ ಮುಗ್ಧಿಸುಯ ಚಂದ್ರಸಿಗೆ ಒಂದು ಕಡೆ ಕವ್ಪು ಮೋಡವೂ ಇನ್ನೊಂದು ಕಡೆ ಬಿಳಿಯ ಮೋಡವೂ ಅನುಸರಿಸಿ ನಿಂತಿರುವಂತೆ ತೋರುವುದು. ಕೈಯೊಳಗಿನ ದೀಪದ ಬೆಳಕು ರಮಣಿಯ ಕೆಂಪು ಮಿಶ್ರವಾದ ಮುಖಮಂಡಲವನ್ನು ಮೊಕ್ಕು, ಚಂಚಲವೂ ಹಾಸ್ಯಮಯವೂ ಆದ, ಅಚ್ಚ ಕಪ್ಪಾದ, ಕರ್ಣಾಂತವಿಸ್ತಾರವಾಗಿರುವ ಕಣ್ಣುಗಳ ಪ್ರಾಬಲ್ಯದಿಂದ ಮನೋಹರವಾಗಿಯೂ, ತೀಕ್ಷ್ಣತೆಯಿಂದ ಮಧುರವಾಗಿಯೂ, ಚಾಂಚಲ್ಯದಿಂದ ಮಧುರತರವಾಗಿಯೂ ಇರುವ ಸ್ವಾಭಾವಿಕ ಸೌಂದರ್ಯದೊಂದಿಗೆ ಮೋಹಕವಾದ ರಮಣೀಯತೆಯನ್ನು ಸಂಪೂರ್ಣ ಭಾವದಿಂದ ಏಕವಸನಗೊಳಿಸುತ್ತಿದೆ!

ಭುವನ-ಚಾಂಚಲ್ಯ ವಿಧಾಯಿನಿಯಾದ ಆ ವಿಲೋಲ ಕಟಾಕ್ಷ ಶಾಲಿನಿಯು ಆಗಮನದಿಂದಲೂ, ಆಕೆಯ ಆ ಲಲಿತ ಕೋಮಲ ಭಾವ ಭಂಗಿಯಿಂದಲೂ ಮೊದಲೇ ಮುಗ್ಧನಾಗಿದ್ದ ದೇವೇಂದ್ರುಬಯಸಿನು ಮೊದಲಿಗಿಂತಲೂ ಹೆಚ್ಚಾಗಿ ಮೈಮರೆದನು; ಅವನಿಗೆ ತನ್ನ ವಿಪತ್ತಿನ ವಿಚಾರವೇ ಮರೆದುಹೋಯಿತು; ಅವನ ಮನಸ್ಸಿನಲ್ಲಿ ಹಿಂದಣ

ಆಲೋಚನೆಗಳೊಂದೂ ಉಳಿಯಲಿಲ್ಲ. ಆಗ, ಆ ದೊಡ್ಡ ಕಾಡಿನ ಮಧ್ಯೆ ಇರುವ, ಅಂಧಕಾರಮಯವಾದ, ಪಾಳು ಬೀಳುತ್ತಲಿರುವ, ಬಹು ವಿಸ್ತಾರವಾದರೂ ಜನಶೂನ್ಯವಾದ, ಮಿತ್ರ ಬಾಂಧವರಿಲ್ಲದ ಆ ಊರೇ ಅವನು ತಲ್ಲಣಗೊಳ್ಳುವುದಕ್ಕೆ ಏಕಮಾತ್ರ ಕಾರಣವೆಂದೂ, ಅಲ್ಲಿರುವ ಆ ಅಪರಿಚಿತ ರಮಣಿಯೇ ತನಗೆ ಪರಿಚಿತಳಾದವಳೆಂದೂ ಅವನು ಭಾವಿಸಿದನು. ಮತ್ತೂ ಭಾವಿಸಿಕೊಂಡನೇನಂದರೆ, ಮರೆಯಾಗಿ ನಿಂತು ಕೇಳಿದ ಅವಳ ಆ ಭಯಂಕರವಾದ ಮಾತುಗಳೆಲ್ಲವೂ ಬೇಸರಗೊಂಡಿದ್ದ ತನ್ನ ಮನಸ್ಸನ್ನು ಚಂಚಲಗೊಳಿಸುವುದಕ್ಕಾಗಿ ಅಕಾರಣವಾದ ಕಲ್ಪನೆಯೊಂದು ಅಂಧಕಾರದಲ್ಲಿ ಮರೆಯಾಗಿ ಬಂದು, ಗೋಚರವಾಗದಂತೆ ತನ್ನ ಮನಸ್ತಿಷ್ಕದಲ್ಲಿ ಪ್ರವೇಶವಾಗಿ ಅಲ್ಲಿ ಬಂದು ನೆಲೆಯನ್ನು ನಿರ್ಮಾಣ ಮಾಡಿಕೊಳ್ಳುತಿದ್ದಿತೇ ಹೊರತು ಮತ್ತೇನೂ ಅಲ್ಲವೆಂದು ಭಾವಿಸಿದನು. ಅವನಿಗೆ ತಾನು ಕೇಳಿದುದೆಲ್ಲವೂ ಸುಳ್ಳು—ನಿರರ್ಥಕ ಎಂದು ತೋರಿತಲ್ಲದೆ ಯಾವುದೂ ನಿಶ್ಚಯವೆಂದು ತೋರಲಿಲ್ಲ.

ಹೀಗೆ ದೇವೇಂದ್ರನಿಜಯನ ಮನಸ್ಸು ಅಲ್ಲೋಲ ಕಲ್ಲೋಲವಾಗುತಿದ್ದಾಗ ರಮಣಿಯು—ತಾವು ಇಲ್ಲಿಯೇ ನಿಂತಿರುವಿರಾ! ನನ್ನೊಡನೆ ದಯಮಾಡಿ ಬರಬೇಕು—ಎಂದು ಮಂದಹಾಸದೊಡನೆ ಹೇಳಿದಳು.

ದೇವೇಂದ್ರ—ಮತ್ತೇಕೆ, ಒಹಳ ಹೊತ್ತಾಗಿದೆ; ನನ್ನನ್ನು ದೋಣಿಯು ಬಳಿ ಬಿಟ್ಟುಬರುವುದಕ್ಕೆ ನಿಮ್ಮ ಸೇವಕನೊಬ್ಬನಿಗೆ ಹೇಳಿ. ಈ ದಾರಿಯನ್ನು ನಾನು ಗುರ್ತಿಸುವುದು ಸಾಧ್ಯವಿಲ್ಲ.

ಮಹಾಶಯ, ಕ್ಷಮಿಸಬೇಕು, ಸ್ವಲ್ಪ ಫಲಾಹಾರ ಮಾಡದೆ ತಾವು ಇಲ್ಲಿಂದ ಹೊರಡಲಾಗದು.—ಎಂದು ರಮಣಿಯು ವಿನೀತಭಾವದಿಂದ ಬೇಡಿದಳು.

ದೇವೇಂದ್ರ—ಆ ವಿಚಾರದಲ್ಲಿ ನೀವು ನನ್ನನ್ನು ಮನ್ನಿಸಿ.

ರಮಣಿ—ಹಾಗಾಗುವುದಾದರೆ ನನಗೆ ತುಂಬ ಅಸಮಾಧಾನವಾಗುವುದು. ಮಹಾಶಯರ ಹೆಸರನ್ನಾದರೂ ಕೇಳಬಾರದೆ; ಇಂತಹ

ಉಪಕಾರಿಗಳ ಹೆಸರು ಚಿರಕಾಲ ನಮ್ಮ ನೆನಪಿನಲ್ಲಿರುವುದಕ್ಕೆ ಯೋಗ್ಯ ವಾದುದು.

ದೇವೇಂದ್ರ—" ದೇವೇಂದ್ರವಿಜಯ "

———

ಹದಿನೇಳನೆಯ ಪರಿಚ್ಛೇದ

ಸುಂದರಿಯ ಮನೋಭಾವ

ದೇವೇಂದ್ರವಿಜಯನನ್ನು ಸಂಗಡ ಕರೆದುಕೊಂಡು ಆ ರಮಣಿಯು ಪಶ್ಚಿಮಾಭಿಮುಖವಾಗಿ ದೀರ್ಘವಾಗಿರುವ ಆ ಕೈಸಾಲೆಯ ಕೊಟ್ಟ ಕೊನೆಯವರೆಗೂ ಹೋದಳು. ಅಲ್ಲಿ ಬಂದು ಕೊಠಡಿಗೆ ಬೀಗ ಹಾಕಿತ್ತು. ಆ ಪೆಂಗಸಿನ ಹತ್ತಿರದಲ್ಲಿಯೇ ಬೀಗದ ಕೈ ಇದ್ದುದರಿಂದ ಕೂಡಲೇ ಬಾಗಿಲನ್ನು ತೆರೆದಳು. ಇಬ್ಬರೂ ಆ ಕೊಠಡಿಯೊಳಕ್ಕೆ ಹೋದರು. ಕೂಡಲೆ ಅವಳು ಬಾಗಿಲನ್ನು ಮುಚ್ಚಿ ಅಗಳಿ ಹಾಕಿದಳು. ಅಲ್ಲಿ ಮೇಲಕ್ಕೆ ಹತ್ತಿ ಹೋಗುವುದಕ್ಕೋಸ್ಕರ ಒಂದು ಮರದ ಹಂತವು ಇದ್ದಿತು; ಇಬ್ಬರೂ ಆ ಹಂತವನ್ನು ಹತ್ತಿ ಮೇಲಕ್ಕೆ ಹೋದರು. ಅಲ್ಲಿ ಪ್ರಕೃತೀ ದೇವಿಯು ಅಪೂರ್ವವಾದ ಸೌಂದರ್ಯವು ತಾನೇ ತಾನಾಗಿ ಶೋಭಿಸುತ್ತಿದೆ! ಸ್ವಚ್ಛವಾದ ತಿಂಗಳ ಬೆಳಕಿನಿಂದ ತುಂಬಿದ ವಿಸಿಲು ಮಹಡಿಯು ಬಹಳ ವಿಸ್ತಾರವಾಗಿದೆ. ಅಲ್ಲಿಗೆ ಬಂದ ಮೇಲೆ ದೇವೇಂದ್ರವಿಜಯನು—ಸನ್ನನ್ನು ಎಲ್ಲಿಗೆ ಕರೆದುಕೊಂಡು ಹೋಗುವಿರಿ? ಎಂದು ಕೇಳಿದನು.

ರಮಣಿಯು ಮುಗುಳ್ನಗೆಯೊಂದಿಗೆ ದೇವೇಂದ್ರವಿಜಯನ ಮೇಲೆ ತೀವ್ರವಾದೊಂದು ಕಟಾಕ್ಷವನ್ನು ಬೀರಿ,—ನೀವು ಇಷ್ಟು ಭಯ ಪಡುವುದೇಕೆ? ನಾನು ನಿಮ್ಮನ್ನು ತಿಂದುಬಿಡುತ್ತೇನೆಯೆ? ನಾನು ಹೆಂಗಸು, ನೀವು ಗಂಡಸರು—ನಿಮಗೆ ಅಂತಹ ಭಯವೇನೂ ಇಲ್ಲ. ದಯವಾಡಿ ಬನ್ನಿ, ಎಂದಳು.

ದೇವೇಂದ್ರವಿಜಯನು ತನ್ನ ಪ್ರಶ್ನೆಗೆ ಅಸಿರೀಕ್ಷ್ಯವಾದ ಮತ್ತೂ ಅಪೂರ್ವವಾದ ಇಂತಹ ಸದುತ್ತರ (?) ಬಂದುದರಿಂದ ಮರುಮಾತಾಡದೆ ರಮಣಿಯ ಸಂಗಡ ಮುಂದೆ ನಡೆದನು. ಆಗ ಅವನ ಬುದ್ಧಿಶಕ್ತಿಯು ಬಹು ತೀವ್ರತರವಾಗಿ ನಡೆಯತೊಡಗಿತು. ಪಸ್ತುತಃ ಯಾವುದನ್ನೂ ಸರಿಯಾಗಿ ಊಹಿಸಿ ತಿಳಿಯಲಾರದವನಾದನು. ಇವೆಲ್ಲವೂ ಭಾವನಾತೀತವಾದ ಮತ್ತೂ ಅನಾಕಾಂಕ್ಷಿತವಾದ ಸ್ವಪ್ನದ ಹಾಗೆ ಬಹು ಮನೋಹರವಾಗಿ ತೋರುತಿದ್ದಿತು. ಹಾಗೆ ತೋರುವುದೂ ಸಹಜವೇ. ನಿರ್ಜನವಾದ ಆ ನದಿಯ ತೀರದಲ್ಲಿ, ಅಸ್ಫುಟವಾದ ಬೆಳದಿಂಗಳಲ್ಲಿ, ನದೀ ಪ್ರವಾಹದ ಮಧುರ ಕಲಕಲನಾದವಾಗುತ್ತಿರುವಾಗ, ಹಠಾತ್ತಾಗಿ ಯಾರಿಗೂ ತಿಳಿಯದ ಹಾಗೆ ಯುವಕನ ಹೃದಯ ಮಧ್ಯ ಪ್ರವೇಶಿಸಿ ಇಷ್ಟರೊಳಗಾಗಿ ಅವನ ಹೃದಯದೊಳಗೆ ಮುಹತ್ತಾಗಿ ಬಳೆದ ಆ ಮೋಹವೆಂಬುದು ಇಷ್ಟು ಬೇಗನೆ ಅಲ್ಲಿಂದ ಸರಿದುಹೋಗುವಂತಹುದಲ್ಲ.

ರಮಣಿಯು ನಾಲ್ಕು ಹೆಜ್ಜೆ ಮುಂದೆ ನಡೆದು ದೇವೇಂದ್ರವಿಜಯನ ಕಡೆ ತಿರುಗಿ,—ತಾವು ಅಪರಿಚಿತರು, ರೂಪವಂತರು, ಯುವಕರು, ಮೇಲಾಗಿ ಪರಪುರುಷರು; ನಾನೋ ಹೆಂಗಸು, ನನಗೂ ಸೌಂದರ್ಯವಿದೆ, ಯೌವ್ವನವಿದೆ, ಮೇಲಾಗಿ ಪರಸ್ತ್ರೀ. ಹೀಗಿರುವಾಗ ಇಂತಹ ರಾತ್ರಿಯಲ್ಲಿ ನಾವಿಬ್ಬರೇ ಏಜನವಾದ ಈ ಏಸಲು ಮಹಡಿಯಲ್ಲಿರುವುದನ್ನು ಯಾರಾದರೂ ನೋಡಿದುದೇ ಆದರೆ ಅವರು ಏನೆಂದುಕೊಂಡಾರೋ ಹೇಳುವಿರಾ? ಎಂದು ಕೇಳಿದಳು.

ಇದೆಂತಹ ಪ್ರಶ್ನೆ! ಇದಕ್ಕೆ ಏನೆಂದು ಉತ್ತರ ಹೇಳಬೇಕು ಎಂಬುದನ್ನು ದೇವೇಂದ್ರವಿಜಯನು ನಿರ್ಧರಪಡಿಸಿಕೊಳ್ಳಲಾರದವನಾಗಿ ತನ್ನೊಳಗೆ ತಾನೇ ಅಸ್ಥಿರನಾದನು. ಯಾವಳನ್ನು ಕುಲೀನಳಾದ ಹೆಂಗಸೆಂದು ತಿಳಿದು ತಾನು ಅವಳಿಗೆ ಸಹಾಯಕನಾಗಿ ಬಂದನೋ ಅವಳು ಮುಶ್ಶಾರಿಣಿಯಾದೊಂದು ಪಿಶಾಚಿಯೆಂದೂ—ಪಿಶಾಚಿಗಿಂತಲೂ ಭಯಂಕರಳೆಂದೂ ತಿಳಿದುಕೊಂಡನು. ರಮಣಿಯು ದೇವೇಂದ್ರವಿಜಯನ ಮನೋಭಾವವನ್ನು ಬಹು ಮಟ್ಟಿಗೆ ಊಹಿಸಿ

ತಿಳಿದುಕೊಂಡಳು. ತಿಳಿದುಕೊಂಡವಳೇ ತನ್ನ ಮನೋಗತವನ್ನು ಹೊರಗೆಡಹದೆ ತಾವು, ನನ್ನ ಈ ಬಗೆಯ ನಡವಳಿಗಳಿಂದ, ನನ್ನಲ್ಲಿ ದೋಷಾರೋಪಣೆ ಮಾಡಿದರೂ ಮಾಡಬಹುದು. ಅದೇನೂ ಆಶ್ಚರ್ಯವಲ್ಲ. ಇದು ತಮ್ಮ ದೋಷವೂ ಅಲ್ಲ; ಹೆಂಗಸರ ಮನಸ್ಸು ಬಹು ದುರ್ಬಲವಾದದ್ದು. ಸಾಮಾನ್ಯವಾದ ಪಟ್ಟಿನಿಂದಲೇ ಒಡೆದು ಬಟ್ಟ ಬಯಲಾಗುವುದು;—ತನ್ನ ಕರ್ತವ್ಯದಲ್ಲಿ ಸರಿಯಾಗಿರಲು ಸಾಧ್ಯವಿಲ್ಲದ್ದು. ಏನಾದರೂ ಆಗಲಿ, ನೀವು ನನ್ನನ್ನು ಬಹು ನಿರ್ಲಜ್ಜೆಯೆಂದು ಭಾವಿಸಿದ್ದೀರೆಂಬುದರಲ್ಲಿ ಸಂದೇಹವಿಲ್ಲ. ನಾನೇನು ಮಾಡಲಿ, ನನ್ನ ಈ ಬಗೆಯ ವಾಚಾಲತೆಯ ದೆಸೆಯಿಂದ ನಾನು ಹುಟ್ಟಿದಂದಿನಿಂದಲೂ ಕೆಟ್ಟ ನಿಂದೆಗೆ ಗುರಿಯಾಗಿದ್ದೇನೆ. ಬಾಲ್ಯದಾರಾಭ್ಯ ಈವರೆಗೆ ಎಷ್ಟೋ ಪ್ರಯತ್ನಪಟ್ಟರೂ ನನ್ನ ಈ ಕೆಟ್ಟ ಸ್ವಭಾವವನ್ನು ದೂರಮಾಡಲಾಗಲಿಲ್ಲ. ಇಷ್ಟರಿಂದಲೇ ತಾವು ನನ್ನನ್ನು ದೋಷಿಯೆಂದು ತಿಳಿಯಬೇಡಿರಿ ಎಂದಳು.

ಆಗ, ಸರಳಸ್ವಭಾವದವನಾದ ದೇವೇಂದ್ರವಿಜಯನ ಮನಸ್ಸಿನ ಮೇಲಿನಿಂದ ಹತಾತ್ತಾಗಿ ಬಂದು ಮೋಘವು ಸರಿದುಹೋಯಿತು.

ಹದಿನೆಂಟನೆಯ ಪರಿಚ್ಛೇದ

ಸುಂದರಿಯ ಆತ್ಮಪ್ರಕಾಶ

ಈ ಮೇಲ್ಮಹಡಿಯ ದಕ್ಷಿಣ ಪಾರ್ಶ್ವದ ಮೂಲೆಯಲ್ಲಿ ಒಂದು ಸಣ್ಣ ಕೊಠಡಿ ಇದೆ. ರಮಣಿಯು ಯುವಕನನ್ನು ಕರೆದುಕೊಂಡು ಆ ಕೊಠಡಿಯೊಳಕ್ಕೆ ಹೋದಳು. ಕೊಠಡಿಯ ನಾಲ್ಕು ಕಡೆಯೂ ಚೆನ್ನಾಗಿ ಮುಚ್ಚಿತ್ತು. ಒಂದು ಪಕ್ಕದಲ್ಲಿ ಸುಸಜ್ಜಿತವಾದೊಂದು ಸಣ್ಣ ಹಾಸುಗೆ; ಇನ್ನೊಂದು ಕಡೆ ಒಂದು 'ಅಲಮೇರಾ'; ರಮಣಿಯು ಯುವಕನನ್ನು ಕುಳಿತುಕೊಳ್ಳಬೇಕೆಂದು ಹೇಳಿ ಆ 'ಅಲಮೇರಾ'ದಿಂದ ಸೇಬು, ಅಂಜೂರ, ಕಿತ್ತಳೆ, ದ್ರಾಕ್ಷಿ ಮೊದಲಾದ ಉತ್ತಮ ತರದ ಫಲ

ವಸ್ತುಗಳಿಂದಲೂ, ಖಾದ್ಯಪದಾರ್ಥಗಳಿಂದಲೂ ತುಂಬಿರುವ ಬೆಳ್ಳಿಯ ಪಾತ್ರೆಯೊಂದನ್ನು ತೆಗೆದು ತಂದು ದೇವೇಂದ್ರವಿಜಯನ ಮುಂದೆ ಇರಿಸಿದಳು. ಅದರೊಳಗಿರುವ ಆಹಾರ್ಯಸಾಮಗ್ರಿಗಳಿಂದ ಹೊರ ಹೊಮ್ಮುತ್ತಿರುವ ಹಿತಕರವಾದ ವಾಸನೆಯ ದೆಸೆಯಿಂದ, ಜಠರಾಂತದ ಏಕಾಂತಸ್ಥದೇಶದಲ್ಲಿ ತೃಪ್ತಿಗೊಂಡು ನಿದ್ರಿಸುತ್ತಿರುವ ಕ್ಷುಧೆಯು ಕೂಡ ಕನಸು ಕಂಡು ಎದ್ದವರ ಹಾಗೆ, ಒಂದೊಂದು ಸಲ ಭಯದಿಂದೆದ್ದು ತಲೆ ಯಾಡಿಸುತ್ತಾ ತನ್ನ ಅಸ್ತಿತ್ವದ ಏಚಾರವನ್ನು ಕುರಿತು 'ರುಜುವಾತು' ಕೊಡುವಂತಿದ್ದಿತು.

ದೇವೇಂದ್ರವಿಜಯನು ಆ ಪದಾರ್ಥಗಳಲ್ಲಿ ಯಾವುದನ್ನೂ ಮುಟ್ಟಲಿಲ್ಲ; ಸಾಧ್ಯವಾದ ಮಟ್ಟಿಗೆ, ವಿನೀತಭಾವದಿಂದ, ತನಗೂ ಬೇಕಿಲ್ಲವೆಂದು ಹೇಳಿದನು. ದೇವೇಂದ್ರವಿಜಯನು ನತದೃಷ್ಟನೋ ಅಥವಾ ಅದೃಷ್ಟಶಾಲಿಯೋ ನನಗೆ ತಿಳಿಯದು; ಆದರೆ ಆ ಸುಂದರಿಯು ಅವನು ಬೇಕಿಲ್ಲವೆಂದುದೇ ಸಾಕೆಂದು ಸುಮ್ಮನಾಗಲಿಲ್ಲ. ಆ ಕೂಡಲೇ ದಾಕ್ಷಿಯ ಗೊಂಚಲಿನಿಂದ ಸುಪಕ್ವವಾದೊಂದು ದಾಕ್ಷಿಯ ಹಣ್ಣನ್ನು ತೆಗೆದುಕೊಂಡು ದೇವೇಂದ್ರವಿಜಯನ ಬಾಯಿಗೆ ಹಾಕಿ ಗಟ್ಟಿಯಾಗಿ ಅದನು ಪಿಡಿದುಕೊಂಡಳು. ದೇವೇಂದ್ರವಿಜಯನು ಅವಳ ಕೈಯಿಂದ ತನ್ನ ಮುಖವನ್ನು ಬಿಡಿಸಿಕೊಂಡನು; ಎಷ್ಟು ಬಗೆ ಯಾಗಿ ಹೇಳಿದರೂ ಹಣ್ಣನ್ನು ತಿನ್ನಲು ಸಮ್ಮತಿಸಲಿಲ್ಲ. ಆಗ, ಆ ಹೆಂಗಸು ದೀಪವನ್ನು ಆರಿಸಿಬಿಟ್ಟಳು, ತಾಗೆಯೇ ಎರಡು ತೋಳು ಗಳಿಂದಲೂ ದೇವೇಂದ್ರವಿಜಯನ ಕುತ್ತಿಗೆಯನ್ನು ಸುತ್ತಿ ಪಿಡಿದು ಕೊಂಡು ಮೇಲುಬಿದ್ದು ಮೇಲೆ ಅವನ ಮುಖಚುಂಬನ ಮಾಡತೊಡಗಿ ದಳು. ರಮಣಿಯು ಮಾಡಿದ, ಈ ಬಗೆಯ ಅಸಂಭವವಾದ, ಅನ್ಯಾಯ ವಾದ ದುರ್ವ್ಯವಹಾರದಿಂದ ದೇವೇಂದ್ರವಿಜಯನ ಹೃದಯದಿಂದ ಮೆದು ಳಿನವರೆಗೂ ಬಂದು ಬಗೆಯು ಏದ್ಯುತ್ಪ್ರವಾಹವು ಹರಿದಾಡತೊಡಗಿತು. ರಮಣಿಯು ತೆರವುಗೊಡದೆ ಮಾಡಿದ ಚುಂಬನವರ್ಷಣದಲ್ಲಿ ದೇವೇಂದ್ರ ವಿಜಯನಿಗೆ ನಿಸ್ಸಮಯಪ್ರಕಾಶ ಮಾಡುವುದಕ್ಕೆ ಕೂಡ ಅರಗಳಿಗೆಯು

ಅವಕಾಶವೂ ದೊರಿಯಲಿಲ್ಲ. ತನಗೆ ಉಂಟಾದ ವಿಸ್ಮಯದ ದೆಸೆಯಿಂದ ದೇವೇಂದ್ರವಿಜಯನು ಸಂಜ್ಞಾಹೀನನಾದನು ; ಕಾರಣವೇನೆಂದರೆ, ಅಪರಿಚಿತಳಾದ ಹೆಂಗಸು ಹೀಗೆ ಧರ್ಮ ಬರುದ್ಧವಾದ ನಡವಳಿ ನಡೆಯಿಸುವಳೆಂದು ಊಹಿಸುವುದಕ್ಕೂ ಸಾಧ್ಯವಿಲ್ಲವೆಂಬುದೇ. ಆದರೆ ಅವನ ಆ ವಿಸ್ಮಯಂಜ್ಞಾ ಭಾವವು ಬಹಳ ಹೊತ್ತಿನವರೆಗೆ ಇರಲಿಲ್ಲ ; ಹಠಾತ್ತಾಗಿ ಬೆಸಿಲು ಬಂದಹಾಗೆ, ಸಿದ್ಧಾ ಭಂಗವಾದ ಕೂಡಲೇ ಎಚ್ಚರವಾಗುವ ಹಾಗೆ, ಅಂಧಕಾರಾವೃತವಾಗಿ ಅಚೇತನವಾಗಿದ್ದ ಅವನ ಹೃದಯದಲ್ಲಿ ಸಂಜ್ಞೆ ಎಂಬ ಜಾಗೃತಭಾವವು ಮೂಡಿತು. ಅವನು ರಮಣಿಯನ್ನು ಬಲಪ್ರಯೋಗದಿಂದ ದೂರಕ್ಕೆ ದೂಡಿ, ಎದ್ದು ನಿಂತನು. ಆಷ್ಟಾದರೂ ಆ ಹೆಂಗಸು ಅವನ ಕೈಗಳೆರಡನ್ನೂ ಭದ್ರವಾಗಿ ಪಿಡಿದುಕೊಂಡು ನನ್ನನ್ನು ಕ್ಷಮಿಸಿ—ಕ್ಷಮಿಸಿದೆನೆಂದು ಹೇಳಿ ; ಇಲ್ಲವಾದರೆ ನಾನು ಬೇರೆ ನಿಮ್ಮನ್ನು ಬಿಡುವುದಿಲ್ಲ. ಈ ಹೃದಯವು ಹೇಗೆ ದುರ್ಬಲವಾದುದೋ ಹಾಗೆಯೇ ಇದು ನಿಗ್ರಹಿಸಲು ಅಸಾಧ್ಯವಾದುದೂ ಆಗಿರುತ್ತದೆ. ಏನು ಮಾಡಿದರೂ ನಿರ್ಬಂಧಕ್ಕೆ ದಕ್ಕತಕ್ಕುದಲ್ಲ, ಎಂದು ಮೃದುಸ್ವರದಿಂದ ಹೇಳಿದಳು.

ದೇವೇಂದ್ರವಿಜಯನು ತಾನು ಪಿಶಾಚಿಯ ಕೈಗೆ ಸಿಕ್ಕಿಬಿದ್ದೆನೆಂದೂ, ಸುಲಭವಾಗಿ ಬಿಡುಗಡೆ ಹೊಂದುವ ಹಾಗಿಲ್ಲವೆಂದೂ ತಿಳಿದನು. ಆ ಸಮಯದಲ್ಲಿ ದೇವೇಂದ್ರವಿಜಯನಂತಹ ಗುಣಶಾಲಿಯಾದ ಯುವಕನು ಎಂತೆಂತಹ ಮಾತುಗಳಾಡಬಹುದೋ ಅಂತಹ ಮಾತುಗಳೇ ಅವನ ಬಾಯಿಂದ ಹೊರಟುವು. ನೀವು ದೊಡ್ಡ ಮನುಷ್ಯರ ಮನೆಯ ಹೆಂಗಸರು. ಹೀಗೆಲ್ಲಾ ಮಾಡುವುದೇ ? ನಾನು ಪರಪುರುಷ, ಆತ್ಮೀಯನೂ ಅಲ್ಲ, ಅಪರಿಚಿತ, ನನ್ನನ್ನು ಮುಟ್ಟಬಾರದು ; ನನ್ನನ್ನು ಮುಟ್ಟುವುದರಿಂದ ನಿಮ್ಮ ಸ್ತ್ರೀ ಧರ್ಮಕ್ಕೆ ಹಾನಿಯಾಗುವುದು—ಎಂದನು.

ರಮಣಿಯು ದೇವೇಂದ್ರವಿಜಯನ ಮಾತುಗಳನ್ನು ಮನಮುಟ್ಟಿ ಕೇಳಿದಳು ; ಹಾಗೆಯೇ ದೀಪವನ್ನು ಹೊತ್ತಿಸಿದಳು ; ಇಷ್ಟಾದರೂ

ಅವಳ ಭಾವ ಭಂಗಿಗಳಲ್ಲಿ ಯಾವ ಬಗೆಯ ಮಾರ್ಪೂ ಕಾಣಬರಲಿಲ್ಲ; ಅವಳು ಲಜ್ಜಿತಳೂ ಅಲ್ಲ, ಸಂಕೋಚಪಟ್ಟವಳೂ ಅಲ್ಲ, ಆಪ್ರತಿಭಳೂ ಅಲ್ಲ, ವಿಸ್ಮಿತಳೂ ಅಲ್ಲ—ಏನೂ ಅಲ್ಲ; ಅವಳು ಅರೆಗಳಿಗೆಯ ಮೇಲೆ– ದೇವೇಂದ್ರಬಾಬೂ, ನೀವೇನೋ ಒಂದೇ ತಡವೆಗೆ ಬಹಳ್ಬೀ ಮಾತು ಗಳಾಡಿಬಿಟ್ಟಿರಿ; ಅವೆಲ್ಲಕ್ಕೂ ನಾನು ಉತ್ತರ ಹೇಳಬೇಕೆಂದಿದ್ದೇನೆ. ದೇವೇಂದ್ರಬಾಬೂ, ತಾವು ಹೇಳಿದುದೇನು—ನನ್ನನ್ನು ಗೌರವಸ್ಥರ ಮನೆಯ ಹೆಂಗಸೆಂದಲ್ಲವೆ? ನಾನು ಹೇಗೆ ತಾನೇ ಗೌರವಸ್ಥರ ಮನೆಯ ಹೆಂಗಸಾದೇನು? ಯಾವನು ತನ್ನ ಕಡೆಗಾಲದಲ್ಲಿ ತಾನೇ ಸಾಯುವುದಕ್ಕೆ ಸಿದ್ಧವಾಗಿರುವ ಸ್ಥಿತಿಯಲ್ಲಿದ್ದುಕೊಂಡು, ನನ್ನಂತಹಳೊಬ್ಬ ಸುಂದರ ಯುವತಿಯನ್ನು ಮದುವೆಯಾಗಿ, ಅವಳ ಆ ನಾರೀಜೀವನದ ಸಕಲ ಸೌಖ್ಯಗಳನ್ನೂ ನಷ್ಟಗೊಳಿಸಲೆಳಸುವನೇ ಅವನೆಂತಹ ದೊಷ್ಟ ಮನುಷ್ಯ? ಮತ್ತೆಂತಹ ಗೌರವಸ್ಥ? ನನ್ನ ಈ ವಯಸ್ಸು, ಈ ರೂಪು, ಈ ಯೌವನ—ಇವೆಲ್ಲವೂ ಕಾಡಿಗೆ ಕಾಲು ಸೀಡಿರುವ ಮುದುಕನಿಗೆ ತಕ್ಕುವೇನು? ಅದು ಹಾಗಿರಲಿ, ತಾವು ಅಪಜಿತರೆಂದಲ್ಲವೆ? ಯಾವಾತನು ಒಮ್ಮೆ ನೋಡಿದ ಮಾತ್ರದಿಂದ ಹೃದಯ ಮಧ್ಯ ಪ್ರವೇಶ ಮಾಡಿ, ಅಲ್ಲಿ ಸ್ಥಿರವಾದೊಂದು ಆಸನದಲ್ಲಿ ಮುಂಡಿಸಿದನೋ ಅಂತವನೂ ಅಪರಿಚಿತನೆ? ಈ ಬಂದು ಮುಹೂರ್ತದೊಳಗಾದ ಇಂದಿನ ಈ ಪರಿಚಯವು—ಸಾಮಾನ್ಯವಾಗಿ ಒಂದು ಸಾವರ ವರ್ಷಗಳಲ್ಲಿಯೂ ಆಗ ಆರದಲ್ಲ! ಮೂರನೆಯದಾಗಿ, ನಾನು ಪರಮೇಶ್ವರನಲ್ಲಿ ಹೇಗೆ ತಾನೇ ಅಪರಾಧಿನಿಯಾದೇನು? ಪರಿಶೀಲಿಸಿದರೆ ಈಶ್ವರನೇ ನನಗೆ ಅಪರಾಧಿಯಾಗಿರುವನು. ನನಗೆ ಬಗೆಬಗೆಯಾಗಿ ಮನೋಹರವಾದ ರೂಪವನ್ನು ಕೊಟ್ಟು, ಉದ್ದಾಮವಾದ ಯೌವ್ವನವನ್ನು ಕೊಟ್ಟು, ಅದರಲ್ಲಿಯೂ ಬಹು ತೃಷ್ಣಾತುರವಾದ ಹೃದಯವನ್ನು ಕೊಟ್ಟು, ಕಡೆಗೆ ನನ್ನನ್ನು ಬಬ್ಬು ವೃದ್ಧನ ಕೈಯ್ಯಲ್ಲಿಟ್ಟು, ತಾನು ಮಾತ್ರ ನಿಶ್ಚಿಂತನಾಗಿರಲೆಳಸಿರುವ ಆ ಪರಮೇಶ್ವರನು ನನ್ನ ಏಚಾರದಲ್ಲಿ ಅಪರಾಧಿಯಲ್ಲವೇನು? ಈ ಪ್ರಪಂಚದಲ್ಲಿ ಜ್ಞಾನವಂತನಾದ ವೃದ್ಧನೊಬ್ಬನು ಧರ್ಮವನ್ನು ಬಿಟ್ಟಿರಬಹುದು! ದೇವರು ಧರ್ಮವನ್ನು ತೊರೆದಿರ

ಬಹುದು! ಹೀಗಿರುವಾಗ, ನಾನು ಸಾಮಾನ್ಯೆಯಾದ ಹೆಂಗಸು—ಅಲ್ಪರಲ್ಲಿ ಅಲ್ಪವಾದವಳು, ಹುಲ್ಲಿಗೂ ಹಗುರವಾದವಳು—ಇಂತಹ ನನಗೆ ಈ ಧರ್ಮಾಧರ್ಮಗಳಿಗೊಡವೆ ಯಾಕೆ?

ಹೀಗೆ ದುರಭಿಸಂಧಿಪೂರ್ಣವಾದ, ರಮಣಿಯ ಈ ದೀರ್ಘವಾದ ಭಾಷಣವನ್ನು ದೇವೇಂದ್ರಬಾಬುವು ಕೇಳಿ, ತಾನು ಹೆರರ ಕಷ್ಟದಲ್ಲಿ ನೆರವಾಗುವುದಕ್ಕೆಂದು ಬಂದುದಕ್ಕೆ ಅಪಾರವಾದ ಮತ್ತೂ ಬಹು ಅನ್ಯಾಯವಾದ ಭಯಂಕರ ವಿಪತ್ತು ತನಗೇ ಸಂಭವಿಸಿರುವುದೆಂದು ಭಾವಿಸಿದನು. ಹಾಗೆಯೇ ರಮಣಿಯನ್ನು ಕುರಿತು ನೀವು ಯಂತಹ ರಾದರೂ ಆಗಿರಿ, ಯಂತಹ ಸ್ವಭಾವದವರಾದರೂ ಆಗಿರಿ, ನನ್ನಲ್ಲಿ ಈ ಎಲ್ಲ ಪ್ರಸ್ತಾವ ಮಾಡದಿರುವುದೇ ಮೇಲು. ನನಗೆ ದಾರಿ ತೋರಿಸಿಕೊಡಿ. ಹೀಗೆಲ್ಲಾ ಆಗುವುದೆಂದು ತಿಳಿದಿದ್ದಪಕ್ಷದಲ್ಲಿ ನಾನು ಯಂದಿಗೂ ನಿಮ್ಮ ಸಂಗಡ ಬರುತ್ತಿರಲಿಲ್ಲ—ಯಂದು ಹೇಳಿದನು.

ಬಾರದಿದ್ದಿದ್ದರೆಯೇ ಚೆನ್ನಾಗಿರುತ್ತಿದ್ದಿತು. ನೀವು ಇಷ್ಟು ಸ್ವಲ್ಪ ಕಾಲದೊಳಗಾಗಿ ನನ್ನ ಹೃದಯದಲ್ಲಿ ಹೀಗೆ ಸರ್ವನಾಶಕರವಾದ ಪರಿವರ್ತನೆಯನ್ನುಂಟುಮಾಡುವೆನೆಂದು ಯಾರು ತಿಳಿದಿದ್ದರು? ದೇವೇಂದ್ರ ಬಾಬೂ, ಸತ್ಯವಾಗಿ ಹೇಳುತ್ತೇನೆ. ನಾನು ಸಾಯುವುದರಲ್ಲಿದ್ದೇನೆ, ನನ್ನನ್ನು ಕಾಪಾಡಿರಿ. ನಾನು ನಿಮ್ಮ ಪಾದದೆಡೆಯಲ್ಲಿ ಆಶ್ರಯ ಬೇಡುವವಳು; ನನ್ನನ್ನು ಹೀಗೆ ಕಠಿಣ ಭಾವದಿಂದ ದೂಡಿಬಿಡಬೇಡಿ. ಹಾಗಾದ ಪಕ್ಷದಲ್ಲಿ ನಾನು ಬದುಕಲಾರೆ; ನನಗುಂಟಾಗಿದ್ದ ವಿಪತ್ತಿನಿಂದ ನನ್ನನ್ನು ಕಾಪಾಡುವುದಕ್ಕಾಗಿ ಬಂದ ನೀವೇ ನನ್ನನ್ನು ಈಗ ಗಂಡಾಂತರಗಳಿಗೆ ಗುರಿಮಾಡುತ್ತಿರುವಿರಲ್ಲ? ನೀವು ಇಷ್ಟು ದಯಾಹೀನರೆಂದು ನಾನು ನಂಬಿರಲಿಲ್ಲ.

ಹತ್ತೊಂಭತ್ತನೆಯ ಪರಿಚ್ಛೇದ

ತಿರಸ್ಕೃತಳು

ದೇವೇಂದ್ರವಿಜಯನ ಹೃತ್ಪಿಂಡದಲ್ಲಿ ಬಿಸಿ ರಕ್ತವು ಬಹು ವೇಗವಾಗಿ ಓಡತೊಡಗಿತು. ಅವನು ತಿರಸ್ಕಾರ ಸೂಚಕವಾದ ನೋಟದಿಂದ ಒಂದು ಸಲ ಆ ಹೆಂಗಸಿನ ಮುಖವನ್ನು ನೋಡಿದನು. ಆಮೇಲೆ ಆ ಕೊಠಡಿಯಿಂದ ಹೊರಗೆ ಹೋಗಬೇಕೆಂದು ಬಾಗಿಲ ಕಡೆಗೆ ಮುಂದರಿದನು. ದೇವೇಂದ್ರವಿಜಯನು ಕೊಠಡಿಯಿಂದ ಹೊರಗೆ ಹೊರಡುವ ಮೊದಲೇ ರಮಣಿಯು ಬಾಗಿಲನ್ನು ಮುಚ್ಚಿ ಅದನ್ನು ಒರಗಿಕೊಂಡು ನಿಂತಿದ್ದಳು. ನಾಲದುದಕ್ಕೆ ಕಟಾಕ್ಷದ ಮೇಲೆ ಕಟಾಕ್ಷವನ್ನು ಬೀರುತ್ತಾ,—ನಿಮ್ಮಂತಹ ಅರಸಿಕರಾದವರಿಗೆ ಮರುಳಾಗಿ ಹೀಗೆ ಹಂಬಲಪಡುವ ನನ್ನ ಜನ್ಮವನ್ನು ಸುಡಬೇಕು—ಎಂದು ಮುಂದಹಾಸ ದೊಡನೆ ಹೇಳಿದಳು.

ದೇವೇಂದ್ರವಿಜಯನು—ದಾರಿ ಬಿಡಿರಿ, ದಯವಾಡಿ ನನ್ನನ್ನು ಈ ವಿಪತ್ತಿನಿಂದ ಕಾಪಾಡಿ ಎಂದು ಕರ್ಕಶ ಸ್ವರದಲ್ಲಿ ಹೇಳಿದನು.

ರಮಣಿಯು—ಅದಾಗದು, ಹೋಗುವುದಾದರೆ,ನನ್ನನ್ನುಕೊಂದು ಬಿಡಿ ಎಂದು ಹೇಳುತ್ತಾ, ತನ್ನ ನಡುವಿನಲ್ಲಿದ್ದ ದೊಡ್ಡ ಚೂರಿ ಯೊಂದನ್ನು ದೇವೇಂದ್ರವಿಜಯನ ಮುಂದೆ ಎಸೆದು—ಈ ಚೂರಿಯನ್ನು ತೆಗೆದುಕೊಳ್ಳಿರಿ. ನನ್ನನ್ನು ತುಂಡು ತುಂಡಾಗಿ ಕತ್ತರಿಸಿಬಿಡಿ. ಇಲ್ಲಿಗೆ ಯಾರೂ ಬರುವಹಾಗಿಲ್ಲ, ಯಾರಿಗೂ ಏನೂ ತಿಳಿವಹಾಗಿಲ್ಲ; ಬೇರೆ ಭಯವೂ ಇಲ್ಲ. ನನ್ನನ್ನು ಕಡಿದುಹಾಕಿದನಂತರ ನಿಮ್ಮ ಇಷ್ಟವಿದ್ದಲ್ಲಿಗೆ ಹೊರಟುಹೋಗಬಹುದು. ಆಗ ನಾನು ಅಡ್ಡಿ ಮಾಡುವುದಿಲ್ಲ. ದೇವೇಂದ್ರಬಾಬು, ತಾವು ಎಂಥವರೋ ತಿಳಿಯದು; ಆದರೆ, ಹೀಗೆ ಮೋಹಪರವಶಳಾಗಿ ಬಂದ ಹೆಂಗಸನ್ನು ತಿರಸ್ಕರಿಸಿ ಕಳುಹುವುದು ಪುರುಷರಿಗೆ ಸುಲಭಸಾಧ್ಯವಲ್ಲ, ಎಂದು ದೃಢಸ್ವರದಿಂದ ಹೇಳಿ, ಆ ಮೋಹಿನೀ ಮೂರ್ತಿಯು ಪುನಃ ದೇವೇಂದ್ರವಿಜಯನ ಕೈಹಿಡಿದು ಕೊಂಡು ಸಾಧ್ಯವಾದಮಟ್ಟಿಗೆ ಅವನ ಸಮೀಪದಲ್ಲಿ ನಿಂತುಕೊಂಡಳು.

ಇತ್ತ ಕಡೆ ಕಾತರಳಾದ ಸುಂದರಿಯ ಉದ್ದಾಮವಾದ ಹಟವೂ, ಅನುಚಿತವಾದ ಪ್ರಾರ್ಥನೆಯೂ ಹೇಗೆ ಹದ್ದುಮೀರುತ್ತಿದ್ದುವೋ ಹಾಗೆಯೇ ಅತ್ತ ಕಡೆ ದೇವೇಂದ್ರವಿಜಯನಲ್ಲಿ ಆ ಹೆಂಗಸಿನ ವಿಚಾರವಾಗಿ ಅತ್ಯಧಿಕವಾದ ದ್ವೇಷವೂ ಅದಕ್ಕೂ ಮೀರಿದ ಕೋಪವೂ ಹದ್ದುಮೀರಿ ಬಂದು ಕ್ರೋಧರೂಪವಾಗಿ ಪರಿಣಮಿಸಿದುವು. ದೇವೇಂದ್ರವಿಜಯನು ಕ್ರೋಧಜರದಿಂದ ಅವಳನ್ನು ದೂರಕ್ಕೆ ನೂಕಿ—ನೀನು ಪಿಶಾಚಿ, ದೂರ ಹೋಗು, ನನ್ನನ್ನು ಮುಟ್ಟಬೇಡ! ಎಂದು ಕರ್ಕಶ ಕಂಠದಿಂದ ಗದ್ದಿಸಿದನು.

ರಮಣಿಯು ಪುನಃ ಓಡಿಬಂದು ದೇವೇಂದ್ರವಿಜಯನ ಕೈಹಿಡಿದು ಕೊಂಡಳು. ಕೊಂಚವಾದರೂ ಭಯಗೊಳ್ಳದೆ—ಓಹೋ ದೇವೇಂದ್ರಾ! ನೀನು ಇಷ್ಟು ಕಠಿಣ ಸ್ವಭಾವದವನೆ! ಗಂಡಸರು ಇಷ್ಟು ಕಠಿಣಾತ್ಮರೆಂಬುದು ನನಗೆ ತಿಳಿದಿರಲಿಲ್ಲ—ಎಂದಳು.

ದೇವೇಂದ್ರವಿಜಯನು ಈ ಬಾರಿ ಅವಳನ್ನು ಮೊದಲಿಗಿಂತಲೂ ಬಲವಾಗಿ ನೂಕಿ,—ನಾನು ನಿನ್ನನ್ನು ಸಂಪೂರ್ಣವಾಗಿ ದ್ವೇಷಿಸುತ್ತೇನೆ—ಎಂದನು.

ಆದರೂ ಅವಳು ಪುನಃ ಓಡಿಬಂದು; ಅದೇ ಆತುರ ಭಾವದಿಂದ ದೇವೇಂದ್ರವಿಜಯನ ಕೈಹಿಡಿದುಕೊಂಡು, ಅವನ ಮೇಲೆ ಮಿಂಚಿನಂತೆ ಬಹು ತೀಕ್ಷ್ಣವಾದ ಕಟಾಕ್ಷವನ್ನು ಬೀರಿ,—ಹಾಗಾದರೂ ನಾನು ಮೊದಲಿನ ಹಾಗೆಯೇ ನಿನ್ನಲ್ಲಿ ಅನುರಕ್ತಳಾಗಿದ್ದೇನೆ—ಎಂದು ಸುಮ್ಮ ಸ್ವರದಿಂದ ಹೇಳಿದಳು.

ರಮಣಿಯ ಸೆರಗು ಸರಿದುಹೋಗಿದೆ; ಯೌವ್ವನ ಭಾರದಿಂದ ತೂಗಾಡುವ ಅವಳ ಪರಿಪುಷ್ಟವಾದ ಶರೀರವು ದೀಪದ ಬೆಳಕಿನಲ್ಲಿ ಸೌಂದರ್ಯರಾಶಿಯಂತೆ ರಮಣೀಯವಾಗಿ ಕಾಣಿಸುತ್ತಿದೆ. ಬಿಚ್ಚಿ ಹೋದ ಅವಳ ಕೇಶರಾಶಿಯು ಕೆದರಿ ಅವಳ ಕಣ್ಣು, ಮುಖ, ಎದೆ, ಬೆನ್ನು ಮುಂತಾದ ಕಡೆಗಳಲ್ಲಿ ಕೆಲವು ಭಾಗಗಳನ್ನು ಮುಚ್ಚಿಕೊಂಡೂ, ಕೆಲವು ಭಾಗಗಳನ್ನು ಅಲ್ಪ ಸ್ವಲ್ಪವಾಗಿ ತೆರದೂ ಇದೆ. ಇದು ಕ್ಷೀಣ

ವಾದ ದೀಪದ ಬೆಳಕಿನಿಂದ ಕೂಡಿದ ಆ ಸಣ್ಣ ಕೊಠಡಿಯಲ್ಲಿ ಇನ್ನೊಂದು ಬಗೆಯ ಅಪರೂಪ ಕಾಂತಿಯನ್ನು ಪಸರಿಸಿತು. ತಾಳಲಾರದಂತಹ ಉತ್ಕಂಠಿತೆಯಿಂದ ಅವಳ ಹಣೆಯಲ್ಲಿ ಬೆವರು ಹನಿಗಳು ಕಾಣಿಸಿಕೊಂಡು ವಲ್ಲದೆ ಅವಳು ಏದುತ್ತಿದ್ದುದರಿಂದ ಅವಳ ಅನಾವೃತವಾದ ವಕ್ಷಸ್ಥಳವು ಬೇಗ ಬೇಗ ಉಬ್ಬಿ ಇಳಿಯುತ್ತಿದೆ. ತಿರಸ್ಕೃತಳಾದ ಆ ರಮಣಿಯು ತಿರಸ್ಕೃತಳಾಗದೆಯೂ ಅಪ್ರತಿಭಳಾಗದೆಯೂ ಅರುವಳ್ಳ ಹಾಗೆ ದೇವೇಂದ್ರವಿಜಯನ ಮುಖದ ಮೇಲೆ ಪ್ರಕಾಶಮಾನವಾದ ಕೃಷ್ಣ ತಾರೆ ಗಳಿರುವ ವಿಸ್ತಾರವಾದ ಕಣ್ಣುಗಳ ಚಂಚಲ ದೃಷ್ಟಿಯನ್ನು ಸ್ಥಿರವಾಗಿ ನಿಲ್ಲಿಸಿ, ನಗೆಮೊಗದಿಂದ—ದೇವೇಂದ್ರವಿಜಯ, ನೀನು ನನ್ನನ್ನು ಎಷ್ಟಾದರೂ ದ್ವೇಷಿಸಲೊಲ್ಲೆಯೇಕೆ, ನಾನು ಮಾತ್ರ ನಿನ್ನನ್ನು ಪುನಃ ಪೂರ್ವಕವಾಗಿ ವಿಶ್ವಾಸಿಸುತ್ತೇನೆ; ಆದರೆ ನನ್ನ ಈ ಸ್ವಾರ್ಥಶೂನ್ಯವಾದ ವಿಶ್ವಾಸವು ನಿನ್ನ ಈ ಬಗೆಯ ಕಠೋರಭಾವದ ಪುರಸ್ಕಾರಗೊಳ್ಳುವು ದೆಂದೂ, ಈ ರೀತಿಯಾಗಿ ಉಪೇಕ್ಷಿಸಲ್ಪಡುವುದೆಂದೂ ನಾನು ನಂಬರ ಲಿಲ್ಲ—ಎಂದು ಹೇಳಿದಳು.

ದೇವೇಂದ್ರವಿಜಯನು ಕೋಪದಿಂದ ಕಂಗೆಟ್ಟವನಾಗಿ—ಎಲೆ ದುಶ್ಚಾರಿಣೀ, ನಿನ್ನನ್ನು ನೋಂಕುವುದೂ ಸಹ ಪಾಪಕರವಾದದ್ದು—ಎಂದು ಹೇಳಿ ಅವನು ಅವಳನ್ನು ತನ್ನೆರಡು ಕೈಗಳಿಂದಲೂ ಬಲವಾಗಿ ತಳ್ಳಿದನು; ಅದು ಒಂದು ಬಗೆಯಾಗಿ ಪೆಟ್ಟುಹಾಕಿದ ಹಾಗೆಯೇ ಆಯಿತು; ಅದನ್ನು ಆ ರಮಣಿಯು ಸೈರಿಸಿಕೊಳ್ಳಲಾರದವಳಾದಳು; ಕೊಠಡಿಯಲ್ಲಿ ಒಂದು ಮೂಲೆಗೆ ಹೋಗಿ ಬಿದ್ದಳು. ಬೀಳುವಾಗ ಗೋಡೆಗೆ ತಲೆ ತಗಲಿ ತುಂಬ ಪೆಟ್ಟಾಯಿತು. ಆಗ ಅವಳು ಬಾಲವನ್ನು ತುಳಿದ ಸರ್ಪದಹಾಗೆ ಬುಸಗುಟ್ಟತೊಡಗಿದಳು. ಅವಳ ವಿಸ್ತಾರವಾದ ಕಣ್ಣುಗಳು ರೋಷದಿಂದ ಕೆಂಪಾಗಿ, ಕೆಂಡದಹಾಗೆ ಕ್ರೂರವಾಗಿ ಉರಿಯ ತೊಡಗಿದುವು; ಆಗ ಅವುಗಳಿಂದ ಜ್ವಾಲೆಯು ಹೊರಹೊಮ್ಮುತಿರು ವಂತೆ ಭಾಸವಾಯಿತು. ಆ ಭಯಂಕರ ಮೂರ್ತಿಯನ್ನು ಕಂಡು ದೇವೇಂದ್ರವಿಜಯನು ಸ್ತಂಭಿತನಾದನು. ಅವನ ಬಾಯಲ್ಲಿ ಮಾತು

ಗಳೇ ಹೊರಡದಂತಾಯಿತು. ರಮಣಿಯು ಕಠೋರ ಸ್ವರದಿಂದ—ಎಲೋ ಪಾಪಿ, ನಿನ್ನ ಮೃತ್ಯುವನ್ನು ನೀನಾಗಿ ಬರವಾಡಿಕೊಂಡೆ. ಈ ಅಪಮಾನದ ಪ್ರತೀಕಾರವು ಹೀಗೆಯೇ ಆಗುವುದು—ಎಂದು ಹೇಳುತ್ತಾ ಕೆಳಗೆ ಬಿದ್ದಿದ್ದ ಹರಿತವಾದ ಆ ದೊಡ್ಡ ಚೂರಿಯನ್ನು ಕೈಗೆ ತೆಗೆದುಕೊಂಡಳು. ಹಾಗೆಯೇ ಅದನ್ನು ದೇವೇಂದ್ರವಿಜಯನ ಎದೆಯಲ್ಲಿ ಪೂರ್ಣವಾಗಿ ನೆಡಬೇಕೆಂದು ಬಹು ಜೋಗನೆ ಮೇಲಕ್ಕೆತ್ತಿದಳು. ಆ ಕೂಡಲೆ ದೇವೇಂದ್ರವಿಜಯನು ಅವಳ ಕೈಯನ್ನು ದೃಢಮುಷ್ಟಿಯಿಂದ ಬಲವಾಗಿ ಹಿಡಿದು, ಚೂರಿಯನ್ನು ಕಸರಿಕೊಂಡು, ರಮಣಿಯನ್ನು ಪುನಃ ದೂರವಾಗಿ ತಳ್ಳಿಬಿಟ್ಟನು.

ರಮಣಿಯು ಕೂಡಲೇ ಚೇತರಿಸಿಕೊಂಡು ಬಿದ್ದು ಕೊಠಡಿಯಿಂದ ಹೊರಗೆ ಬಂದಳು. ಬಂದವಳೇ—ಈಗಲೂ ನಿನಗೆ ಮೃತ್ಯುವು ತಪ್ಪಿದ್ದಲ್ಲ—ಎಂದು ಹೇಳಿ ಬಾಗಿಲನ್ನು ಎಳೆದು ಮುಚ್ಚಿ ಹೊರಗಡೆ ಚಿಲಕ ಹಾಕಿದಳು.

ದೇವೇಂದ್ರವಿಜಯನಿಗೆ ಬಾಗಿಲು ತೆರೆವುದಕ್ಕೆ ಯಾವ ಸಾಧನವೂ ಸಿಗಲಿಲ್ಲ. ಅವನು ಜನಶೂನ್ಯವಾದ ಆ ಕೊಠಡಿಯಲ್ಲಿ ಬಂದಿಯಾದನು.

ಇಪ್ಪತ್ತನೆಯ ಪರಿಚ್ಛೇದ

ಪ್ರಾಣಹಾನಿಯ ಪ್ರಯತ್ನ

ಈ ಏಪತ್ತಿನಿಂದ ಪಾರಾಗುವುದು ಕಷ್ಟವೆಂಬುದು ಈಗಾಗ ದೇವೇಂದ್ರವಿಜಯನಿಗೆ ತೋರಿತು. ಆ ಸ್ಥಳದಲ್ಲಿ, ಇಂತಹ ಸಮಯದಲ್ಲಿ, ಸ್ವಲ್ಪವಾದರೂ ಸಹಾಯ ಮಾಡಬಲ್ಲವರೊಬ್ಬರಾದರೂ ಇಲ್ಲ.

ರಮಣಿಯು ಹೊರಟುಹೋದ ಸ್ವಲ್ಪ ಹೊತ್ತಿನ ಮೇಲೆ ಕೊಠಡಿಯಲ್ಲಿ ದೇವೇಂದ್ರವಿಜಯನು ಎಂದೂ ಅನುಭವಿಸದ ತೀವ್ರವಾದ

ಒಂದು ಬಗೆಯ ದುರ್ವಾಸನೆಯುಂಟಾಯಿತು. ನಾಲ್ಕೂ ಕಡೆ ಜೆನ್ನಾಗಿ ನೋಡಿದರೂ ಅದರ ಕಾರಣವು ವ್ಯಕ್ತಪಡಲಿಲ್ಲ. ಬರುಬರುತ್ತ ವಾಸನೆಯು ಹೆಚ್ಚುತ್ತಿದ್ದಿತಲ್ಲದೆ ಆ ಕೊಠಡಿಯಲ್ಲಿ ಅರಗಳಿಗೆ ಇರುವುದು ಕೂಡ ಮನುಷ್ಯ ಮಾತ್ರನಾದವನಿಗೆ ಅಸಾಧ್ಯವೆಂಬಂತೆ ತೋರಿತು. ಕಡೆಗೆ ಕಣ್ಣಿಗೆ ಮರೆಯಾಗಿರುವ ಕಡೆಯಿಂದ ಹೊಗೆಯು ಬಂದು ಬಾಗಿಲು ಮುಚ್ಚಿರುವ ಆ ಸಣ್ಣ ಕೊಠಡಿಯಲ್ಲಿ ದಟ್ಟವಾಗಿ ತುಂಬುತ್ತಿರುವುದನ್ನು ಕಂಡನು. ಕೊಠಡಿಯೊಳಗೆ ಹೊಗೆಯು ಬಂದು ತುಂಬಿದ ಹಾಗೆಲ್ಲ ಆ ಪ್ರಾಣಹಾನಿಕರವಾದ ದುರ್ಗಂಧವೂ ತೀವ್ರತಮವಾಗುತ್ತಲಿದ್ದಿತು. ಮೊದಲು ದೇವೇಂದ್ರವಿಜಯನು— ಪಕ್ಕದಲ್ಲಿರುವ ಕೊಠಡಿಗೆ ಬೆಂಕಿ ತಗಲಿರಬೇಕು; ಇಲ್ಲವಾದರೆ ತಿರಸ್ಕಾರ ಗೊಂಡು ಹೋದ ಆ ಭಯಂಕರಳಾದ ಹೆಂಗಸು ತನಗಾದ ಅಪಮಾನಕ್ಕೆ ಪ್ರತೀಕಾರಮಾಡಲೆಣಿಸಿ ಈ ಕೊಠಡಿಗೆ ಬೆಂಕಿ ಹೊತ್ತಿಸಿ, ಅಪಮಾನ ಮಾಡಿದವನು ಮರಣ ಸಂಕಟಪಡುವುದನ್ನು ಕಣ್ಣಾರ ನೋಡುತ್ತ ಕುಳಿತಿರಬಹುದು—ಎಂದು ಭಾವಿಸಿದನು; ಆದರೆ ಉತ್ತರಕ್ಷಣದಲ್ಲಿಯೇ ಆ ಭಾವನೆಯು ಅವನ ಮನಸ್ಸಿನಿಂದ ಮಾಯವಾಗಿ ಹೋಯಿತು; ಏತಕ್ಕೆಂದರೆ ಕೊಠಡಿಗೆ ಬೆಂಕಿ ಹೊತ್ತಿಸಿದ್ದರೆ ಅದರ ಹೊಗೆಯಲ್ಲಿ ಹೀಗೆ ಶಾಖವಿಲ್ಲದಿರುತ್ತಿರಲಿಲ್ಲ; ಅಲ್ಲದೆ ಈ ಬಗೆಯಾದ ದುರ್ಗಂಧವೂ ಅದರಲ್ಲಿರುತ್ತಿರಲಿಲ್ಲ. ಪ್ರತ್ಯಕ್ಷತೆಯಲ್ಲಿ ಕೊಠಡಿಯೊಳಗಿರುವ ಗಾಢವು ವಿಷಮಯವಾದುದೆಂಬ ವಿಷಯದಲ್ಲಿ ಸಂಶಯವಿಲ್ಲ; ಇಲ್ಲವಾದರೆ ಅದು ಅವನ ಮೆದುಳಿನೊಳಕ್ಕೂ ಹೃದಯದೊಳಕ್ಕೂ ಪ್ರವೇಶಮಾಡಿದ ಮಾತ್ರದಿಂದ ಹರಿತವಾದ ಚೂರಿಯು ಚುಚ್ಚಿಕೊಂಡ ಹಾಗೆ ಬಾಧೆಯಾಗುವುದಕ್ಕೇನು ಕಾರಣ? ಇನ್ನು ನಿಶ್ಚಿಂತನಾಗಿ ಸುಮ್ಮನೆ ಕುಳಿತಿರುವುದಕ್ಕೆ ಇದು ಸಮಯವಲ್ಲವೆಂದು ದೇವೇಂದ್ರವಿಜಯನು ತಿಳಿದನು. ಅವನು ಬಿದ್ದು ಬಾಗಿಲ ಬಳಿಗೆ ಹೋಗಿ, ಮೇಲಿಂದ ಮೇಲೆ ಬಾಗಿಲನ್ನು ಒದೆಯುತ್ತಾ ಅದನ್ನು ಒಡೆದುಹಾಕುವ ಪ್ರಯತ್ನ ಮಾಡಿದನು; ಪ್ರಯತ್ನವು ವ್ಯರ್ಥವಾಯಿತು. ಅವನು ಹೊರಗೆ ಬರುವುದು ಸಾಧ್ಯವಾಗಲೇ ಇಲ್ಲ; ಆಗ ಆ ಕೊಠಡಿಯಲ್ಲಿ ದಟ್ಟವಾಗಿದ್ದ ಧೂಮರಾಶಿಯು

ಅಲ್ಪ ಸ್ವಲ್ಪ ಭಾಗವನ್ನಾದರೂ ಹೊರಗೆ ಹೋಗುವಂತೆ ಮಾಡುವುದರಿಂದ ತನಗೆ ಕೊಂಚಮಟ್ಟಿಗೆ ಉಸಿರಾಡಲು ಅವಕಾಶ ದೊರೆಯುವಂತಾಗುವುದೆಂದೂ, ಅನಂತರ ಹಣೆಯಲ್ಲಿ ಬರೆದಂತೆ ಆಗಲಿ ಎಂದೂ ಅವನು ಭಾವಿಸಿ ಮುಚ್ಚಿದ್ದ ಕಿಟಿಕಿಗಳನ್ನು ತೆರೆಯಲು ಯತ್ನಿಸಿದನು; ಆ ಪ್ರಯತ್ನದಲ್ಲಿಯೂ ಅವನು ಭಗ್ನಮನೋರಥನಾದನು. ಎಲ್ಲ ಬಾಗಿಲುಗಳನ್ನೂ ಮುಚ್ಚಿ ಹೊರಭಾಗದಿಂದ ಭದ್ರಮಾಡಿದೆ; ಏನೇನು ಮಾಡಿದರೂ ಅವನ್ನು ತೆರೆಯುವುದಕ್ಕೆ ಆಗದೇಹೋಯಿತು. ಆಗ ಅವನು ಕೇವಲ ನಿರಾಶನಾಗಿ, ದಿಕ್ಕು ತೋರದಹಾಗಾಗಿ, ಓಡುತ್ತ ಹೋಗಿ ಶರೀರದ ಸಮಸ್ತ ಶಕ್ತಿಯನ್ನೂ ಒಟ್ಟುಗೂಡಿಸಿ, ಮುಚ್ಚಿದ್ದ ಬಾಗಿಲ ಮೇಲೆ ಪುನಃಪುನಃ ಪದಾಘಾತಗಳ ಮಳೆಯನ್ನೇ ಸುರಿಯಿಸಿದನು. ಆ ಪದಾಘಾತದಿಂದ ಆ ಕೊಠಡಿಯೇ ಬೀಳುವಂತಾದರೂ ಕಠಿಣವಾದ ಆ ಬಾಗಿಲೂ ಅದನ್ನು ಜೋಡಿಸಿದ್ದ ಚೌಕಟ್ಟೂ ಕದಲದೆ ನಿಂತು ಕೊಂಡಿದ್ದುವಲ್ಲದೆ ಸಹಿಸಲಸಾಧ್ಯವಾದ ಆ ಪದಾಘಾತಗಳನ್ನು ಅನಾಯಾಸವಾಗಿ ಸೈರಿಸಿಕೊಂಡು ಸ್ಥಿರವಾಗಿಯೇ ಇದ್ದುವು.

ಇಂತಹ ಸಮಯದಲ್ಲಿ ಯಾರೋ ಹೊರಗಡೆ ನಿಂತು—ದೇವೇಂದ್ರ ಇದೆಲ್ಲವೂ ಒಬೀ ಪ್ರಯತ್ನ; ಹೆಂಗಸು ತಿರಸ್ಕೃತಳಾದದ್ದೇ ಆದರೆ ಪಿಶಾಚಿಗಿಂತಲೂ ಭಯಂಕರಳಾಗುವಳು. ನೀನು ಈ ಬಗೆಯಾಗಿ ಸಾಯಬೇಕೆಂಬುದು ನಿನ್ನ ಹಣೆಯಬರೆಹ. ಸಾಯುವುದಕ್ಕೆ ಇಷ್ಟ ಪಟ್ಟೂ ಇರುತ್ತೀ. ನೀನು ಸಾಯಿ—ಕಿಟಿಕಿಯ ಮತ್ತೂ ಬಾಗಿಲುಗಳ ಅಪರಾಧವೇನು?—ಎಂದರು.

ಅದಾದ ಸಂತರ ಕಿಲಕಿಲನೆ ಅದೊಂದು ಬಗೆಯ ಭಯಂಕರ ನಗೆ!

ಆ ನಗೆಯ ಶಬ್ದವು ಹರಿತವಾದ ಚೂರಿಯ ಹಾಗೂ, ಸಿಡಲಿನ ಜ್ವಾಲೆಯ ಹಾಗೂ ಹೊಗೆ ತುಂಬಿದ ಕೊಠಡಿಯೊಳಗೆ ಪ್ರವೇಶ ಮಾಡಿದುದಲ್ಲದೆ, ಉತ್ತರಕ್ಷಣದಲ್ಲಿಯೇ ದೂರ ದೂರಾಂತರದ

ಯಾವುದೋ ಏಜನ ಪ್ರದೇಶದಲ್ಲಿ ಕ್ಷೀಣ ಕ್ಷೀಣತರವಾಗುತ್ತ ನಡೆದು ಮುಕ್ತ ಪ್ರಕೃತಿಯೊಂದಿಗೆ ಐಕ್ಯವಾಗಿಹೋಯಿತು. ಅನಂತರ ಎಲ್ಲವೂ ನೀರವ—ನಿಶ್ಶಬ್ದ.

ಆ ನಗೆಯನ್ನು ಕೇಳಿದಮೇಲೆ ದೇವೇಂದ್ರನು ಆ ತೀವ್ರವಾದ ನಗಯೂ, ಆ ನಗೆಯಲ್ಲಿನ ತೀಕ್ಷ್ಣತರವಾದ ಹಾಸ್ಯ ಕಲ್ಲೋಲವೂ ಆ ದನ್ನು ರಮಣಿಯದು—ಅದೇ ಏಶಾಚಿಯದು—ಮತ್ತಾರದೂ ಅಲ್ಲ—ಎಂದು ತಿಳಿದುಕೊಂಡನು.

ದೇವೇಂದ್ರವಿಜಯನಿಗೆ ಆ ಸಣ್ಣ ಕೊಠಡಿಯಲ್ಲಿ ಉಸಿರುಕಟ್ಟಿದ ಹಾಗಾಗಿ ಇಲ್ಲಿಂದಲ್ಲಿಗೂ ಅಲ್ಲಿಂದಿಲ್ಲಿಗೂ ಓಡಲುಪಕ್ರಮಿಸಿದನು. ಮೊದಲೇ ಉಸಿರಾಡುವುದಕ್ಕೆಲ್ಲವಾಗಿತ್ತು, ಈಗ ಇದ್ದ ಚಿಲ್ಲ ಸ್ವಲ್ಪ ಪ್ರಜ್ಞೆಯೂ ತಪ್ಪುತ್ತ ಬಂದಿತು. ಕೊಠಡಿಯಲ್ಲಿ ವ್ಯಾಪಿಸಿದ್ದ ಏಷ ಮಯವಾದ ವಾಸನೆಯು ಬರುಬರುತ್ತ ದೇವೇಂದ್ರವಿಜಯನ ಸರ್ವಾಂಗ ಗಳ ಸ್ವಾಧೀನತೆಯನ್ನೂ ತಪ್ಪಿಸಿತು. ದುರ್ಗಂಧಮಯವಾದ ಹೊಗೆಯು ಆ ಕೊಠಡಿಯಲ್ಲ ದಟ್ಟವಾಗಿ ತುಂಬಿಕೊಂಡಿತು; ಅದರ ನಡುವೆ ಅಲ್ಲೆ ಉರಿಯುತ್ತಿದ್ದ ದೀಪದ ಬೆಳಕು ನಿಸ್ತೇಜವಾಗಿಯೂ, ಬಹು ಮಟ್ಟಿಗೆ ಸಂಕುಚಿತವಾಗಿಯೂ ಆಗಿದ್ದಿತು. ಆ ದೀಪದ ಕ್ಷೀಣವಾದ ಬೆಳಕು ಆ ಹೊಗೆಯ ಮಧ್ಯದಲ್ಲಿಯೇ ತನ್ನದೊಂದು ಎಲ್ಲೆಯನ್ನು ಕಲ್ಪಿಸಿಕೊಂಡಂತೆ ತೋರಿತು; ಬೆಳಕು ನಾಲ್ಕೂ ಕಡೆಗೆ ಪಸರಿಸುವ ಸಂಭವವೇ ಇಲ್ಲವೆಂಬಂತಾಯಿತು. ಹೊಗೆಯು ಮುಸುಕಿನ ಆ ಕೊಠ ಡಿಯು ದೇವೇಂದ್ರವಿಜಯನ ದೃಷ್ಟಿಗೆ ಕಗ್ಗತ್ತಲಾಗಿರುವಂತೆ ಕಾಣಿ ಸಿತು. ಅವನು ಸಹಿಸಬಾರದ ಯಾತನೆಯಿಂದ ಸಂಕಟಪಡುತ್ತ ಹುಚ್ಚನ ಹಾಗೆ ಓಡಾಡಲು ಮೊದಲುಪಕ್ರಮಿಸಿದನು; ಹಾಗೆಯೇ ಯಾರಿದ್ದೀರಿ, ಬೇಗ ಬನ್ನಿ, ಕಾಪಾಡಿ—ರಕ್ಷಿಸಿ ರಕ್ಷಿಸಿ!—ಸಾವ್ಯ! ಸಾವ್ಯ! ಭಯಂಕರ ವಾದ ಸಾವ್ಯ! ಎಂದು ಎದೆಯೊಡೆಯುವಂತೆ ಅರಚಿಕೊಂಡನು.

ಕ್ರಮಕ್ರಮವಾಗಿ ಅವನ ಕಾಲುಗಳಲ್ಲಿನ ಶಕ್ತಿ ಕುಗ್ಗುತ್ತ ಬಂದಿತು; ಅವನು ಮದ್ಯಪಾಯಿಯ ಹಾಗೆ, ತೂಗಾಡಿಕೊಂಡು ಬಿದ್ದನು.

ಎರಡು ಬಾರಿ ಬಿದ್ದನು, ಎರಡು ಸಲವೂ ಎದ್ದನು, ಆನಂತರ ಏಳುವುದು ಸಾಧ್ಯವಿಲ್ಲವಾಯಿತು. ವಿಷದ ಪರಮಾಣುಗಳು ಅವನ ಸರ್ವಾಂಗದಲ್ಲಿಯೂ ವ್ಯಾಪಿಸುತ್ತ ನಡೆಯಿತು; ಅದರಿಂದ ತಡೆಯಲಾರದ ಯಾತನೆಯುಂಟಾಗಿ ದೇವೇಂದ್ರವಿಜಯನು ನೆಲದ ಮೇಲೆ ಒದೆದಾಡುತ್ತಿದ್ದನು. ಹಾಗೆಯೇ ಅವನಿಗೆ ಪ್ರಜ್ಞೆಯು ಲೋಪವಾಗಲುಪಕ್ರಮವಾಯಿತು.

ಆ ಸಮಯದಲ್ಲಿ, ಯಾವನೋ ದೀರ್ಘಾಕಾರದ ಅಪರಿಚಿತ ಯುವಕನೊಬ್ಬನು ಆರ್ಭಟಿಸುತ್ತ ಆ ಕೊಠಡಿಗೆ ಓಡಿಬಂದು ದೇವೇಂದ್ರ ವಿಜಯನನ್ನು ಬಾಚಿ ಎತ್ತಿಕೊಂಡ ಹಾಗೆ ಅವನಿಗೆ ಸ್ವಪ್ನವಾಯಿತು.

ಆ ವೇಳೆಗೆ ದೇವೇಂದ್ರವಿಜಯನಿಗೆ ಸಂಪೂರ್ಣವಾಗಿ ಪ್ರಜ್ಞೆ ತಪ್ಪಿತ್ತು. ಅವನ ಕ್ಷೀಣತಮವಾದ ದೃಷ್ಟಿಗೂ ಆಗಿನ ಅಪರಿಸ್ಫುಟವಾದ ದೃಶ್ಯಕ್ಕೂ ನಡುವೆ ಎಲ್ಲವನ್ನೂ ಆವರಿಸಿಕೊಂಡ ಮಸೀಮಯವಾದ ಪರದೆಯು ಬಿದ್ದಿತು.

ಶ್ರೀ

ಮಾಯಾವಿ

೪ನೆಯ ಭಾಗ

ಒಂದನೆಯ ಪರಿಚ್ಛೇದ

ಮೂರ್ತಿಮತಿಯಾದ ಪ್ರತಿಹಿಂಸೆ

ದೇವೇಂದ್ರವಿಜಯಸಿಗೆ ಪ್ರಜ್ಞೆ ಬಂದಿತು; ನೋಡಿದನು, ಅವನ ಇದಿರಾಗಿ ಮುಕ್ತ ಪೃಥ್ವಿಯ ನಾಲ್ಕು ದಿಕ್ಕುಗಳೂ ಪ್ರಭಾತ ರವಿಯ ಪಿರಣ್ಯ ಪ್ರವಾಹದಿಂದ ಪುಲಕಿತವಾಗಿಯೂ, ಪ್ರದ್ಯೋತಿತವಾಗಿಯೂ ಕಾಣುತ್ತಿದೆ. ಅವನು ತರಂಗರಹಿತವಾದ ಸುಯ ಪಕ್ಷದಲ್ಲಿ ನೌಕೆಯ ಮೇಲೆ ಮಲಗಿದ್ದಾನೆ. ಅಂಬುಗರು ಪತ್ತಿರದಲ್ಲಿಯೇ ಕುಳಿತು ಶಬ್ದ ಮಾಡುತ್ತಿ, ಜೇಗ ಜೇಗ ಜಲ್ಲೆಹಾಕುತ್ತಾ ದೋಣಿಯನ್ನು ಬಹು ವೇಗವಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ನಡೆಸಿಕೊಂಡು ಹೋಗುತ್ತಿದ್ದಾರೆ. ನದಿಯ ಎರಡು ಪಾರ್ಶ್ವಗಳಲ್ಲಿಯೂ ನೀರವ; ದೂರದ ಹಳ್ಳಿಯೊಳಗೆ ಆಟಪಾಟಗಳಲ್ಲಿ ಆಸಕ್ತರಾದ ಮಿಡುಗರ ಹಾಸ್ಯ ಕಲ್ಲೋಲ; ಸಿದ್ದೆಯಿಂದೆದ್ದ ಯಾವುದೊ ಹಾಲು ಹಸುಳೆಯ ರೋದನ ಧ್ವನಿ; ಇಷ್ಟು ಮಾತ್ರ ಬಂದೊಂದು ಸಲ ಅಸ್ಪುಟವಾಗಿ ಕೇಳಿಸುತ್ತಿದ್ದುವು. ಸವಿಾಪದಲ್ಲಿಯೇ ಇದ್ದ ಬಂದಾಸೊಂದು ದೇವದಾರು ವೃಕ್ಷದ ಮೇಲೆ ಕೋಗಿಲೆಯೊಂದು ಕುಳಿತು ಕಾಂತಿವಸನೆಯಾದ ಧರಣಿಯ ನಗ್ನಪಕ್ಷವನ್ನು ಶಬ್ದ ತರಂಗದಿಂದ ತೋಯಿಸಿ, ಅಭಿಮಾನ ವಶದಿಂದ ಮೌನಧಾರಿಣಿಯಾಗಿರುವ ಪ್ರಿಯಳನ್ನು ಕುರಿತು ಬಹು ಶ್ರಮದಿಂದ ಪ್ರೇಮ ಸಂಭಾಷಣೆಮಾಡುತ್ತಿದೆ. ಆದರ ಆ ವೇದನಾಗೀತವು, ಆ ಸುಂದರವಾದ, ಸ್ತಬ್ಧವಾದ, ಮಂಗಳಕರವಾದ, ಕಿರಣಮಾಲೆಯಿಂದ ಪ್ರಕಾಶಮಾನವಾದ ಪ್ರಭಾತಕಾಲದ ಅಖಂಡ ಪ್ರಶಾಂತಿಯ ಮಧ್ಯೆ

ಬಹು ಮಧುರವಾಗಿ ಕೇಳಿಸುತ್ತಿದೆ. ಹಾಗೆಯೇ ನದಿಯ ದಡದಲ್ಲಿ ಏರಿಳಿವಳವಾಗಿ ನಿಂತಿರುವ ಉದ್ದುದ್ದನೆಯ ಮರಗಳ ನೆರಳು ಮತ್ತಷ್ಟು ಉದ್ದವಾಗಿ, ಬಹು ದೂರದವರೆಗೆ ನದಿಯ ವಕ್ಷದಲ್ಲಿ ಹರಡಿಕೊಂಡಿದೆ.

ದೇವೇಂದ್ರವಿಜಯನು, ವಿಸ್ಮಯದಿಂದ ಮುಗ್ಧಚಿತ್ತನಾಗಿ ಇವೆಲ್ಲವನ್ನು ನೋಡುತ್ತಲೂ ಕೇಳುತ್ತಲೂ ಇದ್ದನು. ಸ್ವಲ್ಪ ಹೊತ್ತಾದ ಮೇಲೆ, ಹೇಗೋ ಅವನಿಗೆ ಸ್ವಲ್ಪ ಚೈತನ್ಯವುಂಟಾಯಿತು; ಅದರ ಕಾರಣವು ಹೀಗೆಯೇ ಸರಿ—ಎಂದು ಅವನು ತಿಳಿದುಕೊಳ್ಳ ಲಾರದೆ ಇದ್ದನು. ಆಗಲೂ ತನಗೆ ಎಚ್ಚರಿಕೆಯಾಗಿರುವುದೆಂಬ ವಿಷಯ ದಲ್ಲಿ ಆತನಿಗೆ ಸಂಶಯವೇ ಹೆಚ್ಚಾಗಿದ್ದಿತು. ಇವೆಲ್ಲವೂ ಒಂದು ಸ್ವಪ್ನದ ರೂಪಾಂತರವಿರಬಹುದೇ ಹೊರತು ಮತ್ತೇನೂ ಅಲ್ಲವೆಂದು ಅವನು ಭಾವಿಸಿಕೊಂಡನು.

ತನಗೆ ಒದಗಿಬಂದಿದ್ದ ಆ ವಿಪತ್ತಿನ ವಿಚಾರವನ್ನು ಅನುಪೂರ್ವಿಕ ವಾಗಿ ಸ್ಮರಣೆಗೆ ತಂದುಕೊಳ್ಳಲು ಅವನಿಗೆ ಯೇಗೂ ಸಾಧ್ಯವಾಗಲಿಲ್ಲ. ಅವನು ಬಹು ಶ್ರಮದಿಂದ ಅದರಲ್ಲಿ ಕೊಂಚ ಕೊಂಚ ಭಾಗವನ್ನು ಚಾಲ್ತಿಪಿಸಿಕೊಳ್ಳುತ್ತಿದ್ದನು; ಆದರೂ ಆ ದಸ್ಯು ರಮಣಿಯ ಮತ್ತೂ ಆ ಆಶ್ಚರ್ಯಕರೋಗಿಯ ಮುಖಭಾವಗಳು ಅವನಿಗೆ ಸರಿಯಾಗಿ ಚಾಲ್ತಿಪ ಕಕ್ಕೆ ಬರಲೇ ಇಲ್ಲ; ಅವಸನ್ನವಾಗಿ ನೆಲದಮೇಲೆ ಬಿದ್ದಿದ್ದ ತನ್ನ ಶರೀರವನ್ನೆತ್ತಿ ಅಪ್ಪಿಕೊಂಡು, ಆ ಕೊರಡಿಯಿಂದ ಸಾಗಿಸಿಕೊಂಡು ಬಂದ ದೀರ್ಘಾಕಾರದ ಆ ಅಪರಿಚಿತ ವ್ಯಕ್ತಿಯ ಮುಖವು ಬಂದೊಂದು ಸಲ ಚಾಲ್ತಿಪಕಕ್ಕೆ ಬರುತ್ತಿದ್ದಿತು; ಆದರೆ ಅವನು ಅದನ್ನು ಹೇಗೂ ನಂಬುತ್ತಿರಲಿಲ್ಲ. ಆ ಮೊದಲು ಈವರೆಗೂ ಸಮಸ್ಯಾಪೂರ್ಣವಾದೊಂದು ಅಪೂರ್ವದೃಶ್ಯವು ಅವನ ಕಣ್ಣಿದಿರಿಗೆ ಅಭಿನಯಗೊಳ್ಳುತ್ತಿರುವುದೆಂದೇ ಅವನು ಮನಸಾ ದೃಢವಾಗಿ ಭಾವಿಸಿದನು. ಈಗಲೂ ಅದೇ ಹೊಗೆ, ಅದೇ ಘಾಟು. ಅವನಿಗೆ ಉಸಿರಾಡದಂತೆ ಮಾಡುತ್ತಿರುವಂತೆ ತೋರು ವುದು. ಅವನು ಬಹು ಕಷ್ಟದಿಂದ ಉಸಿರಾಡಿಸುತ್ತಿದ್ದನು; ಅವನ ತಲೆಯೂ ಅವನ ಹೃದಯವೂ ಏನೋ ಭಾರವಾಗಿರುವಂತೆ ತೋರು

ತ್ತಿದ್ದಿತಾಗಿ ಅವನು ಪ್ರಯತ್ನವಮಾಡಿದರೂ ನೆಟ್ಟಗೆ ಎದ್ದು ಕುಳ್ಳಿರಲಾಗುತ್ತಿರಲಿಲ್ಲ. ದುಸ್ಸಹವಾದ ಮತ್ತೂ ಉನ್ಮಾದಕರವಾದ ಒಂದು ಬಗೆಯ ಅಮಲು ಮಸ್ತಿಷ್ಕದಮೇಲೆ ಸಂಪೂರ್ಣವಾಗಿ ಅಧಿಕಾರಮಾಡುತ್ತಿದ್ದಿತು. ಅವನು ಆ ಮತ್ತಿನ ಮಹತ್ವದಿಂದ—"ಇದೆಂತಹ ಭಯಂಕರವಾದ ಜಟಿಲ ರಹಸ್ಯ! ಗಂಡ ಹೆಂಡಿರು ಸೇರಿ ಈ ರೀತಿಯಾಗಿ ಮೋಸ ಮಸಲತ್ತುಗಳಿಂದ ಕಾಲಹರಣ ಮಾಡುತ್ತಿದ್ದಾರೇನು? ಆ ಹೆಂಗಸು ನೋಡುವುದಕ್ಕೆ ಎಷ್ಟೋ ಸುಂದರಳು! ಅವಳನ್ನು ನೋಡಿದವರು ಯಾರು ತಾನೇ ಅವಳ ಹೃದಯದಲ್ಲಿ ಇಂತಹ ಕಾಲಕೂಟವು ತುಂಬಿರುವುದೆಂದು ಹೇಳುವರು? ನಿಶ್ಚಯವಾಗಿಯೂ ಅವರಿಬ್ಬರೂ ಒಂದಾಗಿ, ನನ್ನನ್ನು ಕೊಂದು ನನ್ನ ಬಳಿ ಇರುವ ಅಲ್ಪ ಸ್ವಲ್ಪವನ್ನೆಲ್ಲಾ ಅಪಹರಿಸಬೇಕೆಂದು ಆಲೋಚಿಸಿದ್ದರಾದೀತು. ಆದರೆ ಏನಾಗಿಹೋಯಿತು! ಆ ಭಯಂಕರ ಮೃತ್ಯುವಿನಿಂದಲೂ, ಆ ಕ್ರೂರರಾದ ಆ ಕೊಲೆಪಾತಕರಿಂದಲೂ ನನ್ನನ್ನು ಉದ್ಧಾರಮಾಡಿದವರು ಯಾರಾಗಿದ್ದೀತು? ಈಗ ನಾನು ಇರುವುದೆಲ್ಲಿ? ಹೋಗುತ್ತಿರುವುದೆಲ್ಲಿಗೆ? ನನ್ನನ್ನು ಈ ದೋಣಿಯ ಮೇಲಕ್ಕೆ ಕರೆದು ತಂದವರು ಯಾರು?" ಎಂದು ಅಸ್ಫುಟ ಸ್ವರದಿಂದ ಹೇಳಿಕೊಳ್ಳುತ್ತಿದ್ದನು.

ನೌಕೆಯು ದ್ರುತತರ ವೇಗದಿಂದ ಹೋಗುತ್ತಿದ್ದ ಕಾರಣ, ನದಿಯ ಪಕ್ಷದಲ್ಲ ತುಂತುರು ಹನಿಗಳಿಂದ ತೊಯಿದ ಇದಿರು ಗಾಳಿಯು ದೇವೇಂದ್ರವಿಜಯನ ಸರ್ವಾಂಗದಲ್ಲಿಯೂ ಪ್ರಬಲ ವೇಗದಿಂದ ಬೀಸಿ, ಅವನ ದುರ್ಬಲವಾದ ಮಸ್ತಿಷ್ಕದಲ್ಲಿ ಕ್ಷಣೇ ಕ್ಷಣೆ ಸ್ಪಷ್ಟ ರೂಪವಾಗಿ ಶಕ್ತಿ ಸಂಚಾರವನ್ನುಂಟುಮಾಡುತ್ತಿದ್ದಿತು. ದೇವೇಂದ್ರವಿಜಯನು ಒಬ್ಬ ಅಂಬಿಗನನ್ನು ಕೂಗಿ,—ನೀವು ನನ್ನನ್ನು ಎಲ್ಲಿಗೆ ಕರೆದುಕೊಂಡು ಹೋಗುವಿರಿ? ನನ್ನನ್ನು ಈ ದೋಣಿಗೆ ಎತ್ತಿಕೊಂಡುಬಂದವರಾದರೂ ಯಾರು?—ಎಂದು ಕೇಳಿದನು.

ಆ ಅಂಬಿಗರು ಅವನ ಮಾತಿಗೆ ಕಿವಿಗೊಡಲೇ ಇಲ್ಲ; ಝಪ್ ಝಪ್ ಎಂದು ಶಬ್ದವಾಗುವ ಹಾಗೆ ಜಲ್ಲೆಯನ್ನಾಡಿಸುತ್ತಾ ದ್ರುತತರ ವೇಗದಿಂದ ದೋಣಿಯನ್ನು ಮುಂದರಿಸುತ್ತಿದ್ದರು.

ದೇವೇಂದ್ರವಿಜಯನು ಮೊದಲಿಗಿಂತಲೂ ಗಟ್ಟಿಯಾಗಿ, ನೀವು ನನ್ನನ್ನು ಎಲ್ಲಿಗೆ ಕರೆದುಕೊಂಡುಹೋಗುತ್ತೀರಿ? ಎಂದು ಪುನಃ ಕೇಳಿದನು.

ದೋಣೀ ನಡೆಸುವವರಲ್ಲಿ ಒಬ್ಬನು—ನಾವು ನಿಮ್ಮನ್ನು ಸರಿಯಾದ ಸ್ಥಳಕ್ಕೇ ಕರೆದುಕೊಂಡುಹೋಗುತ್ತೇವೆ, ಅದಕ್ಕಾಗಿ ನೀವು ಆಲೋಚಿಸಬೇಡಿ; ತಾವು ಸ್ವಲ್ಪ ಸುಮ್ಮನೆ ಕುಳಿತುಕೊಳ್ಳಬೇಕು, ಎಂದು ಹೇಳಿದನು.

ಯುವಕನು ಬೇಸರದಿಂದ—ಯಾವಲ್ಲಿಗೆ ಹೋಗುವುದು? ಯಮಪುರಿಗೇನೂ ಅಲ್ಲವಷ್ಟೆ? ಆ ಭಯಂಕರ ಮೃತ್ಯುದರ್ಶನದ ನಂತರ ಇದೇನು ಯಮಪುರಿಯ ಪ್ರಯಾಣವಲ್ಲವಷ್ಟೆ?—ಎಂದಂದುಕೊಂಡು, ನನ್ನನ್ನು ಎಲ್ಲಿಗೆ ಕರೆದುಕೊಂಡುಹೋಗುವುದೆಂಬುದನ್ನು ಹೇಳದಿದ್ದರೆ, ನಾನು ನಿಮ್ಮ ಸಂಗಡ ಬರುವುದಿಲ್ಲ. ನನ್ನನ್ನು ಇಲ್ಲಿಯೇ ಇಳಿಸಿಬಿಡಿ ಎಂದು ಮುಷ್ಕರ ಹಿಡಿದನು.

ಈ ಬಗೆಯಾದ ಆತಂಕವನ್ನು ಕಂಡು ದೋಣೀ ನಡೆಸುವವರ ಮುಖ್ಯಸ್ಥನು ಮುಂದರಿದುಬಂದನು. ಬಂದವನೇ ದೇವೇಂದ್ರವಿಜಯು ನನ್ನು ಕುರಿತು ಏನೀತಭಾವದಿಂದ—ನಿಮ್ಮ ಊರಿಗೇ ನಿಮ್ಮನ್ನು ಕರೆದುಕೊಂಡುಹೋಗುತ್ತಿದ್ದೇವೆ; ನಮಗೆ ನಿಮ್ಮ ಸ್ಥಳವು ಗೊತ್ತು; ತಾವು ಈಗ ಚಿಂತಿಸಬೇಡಿ; ಸ್ವಲ್ಪ ಮಟ್ಟಿಗೆ ನಿಶ್ಚಿಂತರಾಗಿ ಕುಳಿತು ಕೊಳ್ಳಿರಿ; ತಮಗೆ ಇನ್ನೂ ಅಮಲು ಇಳಿದಿಲ್ಲ, ಎಂದು ಹೇಳಿದನು.

ಆ ಮುಖ್ಯಸ್ಥನು ತನ್ನ ಮಾತುಗಳನ್ನು ಸಾಧ್ಯವಾದ ಮಟ್ಟಿಗೂ ಸರಸವನ್ನಾಗಿಯೇ ಮಾಡಿ ಹೇಳಿದನು. ಆದರೆ ದುರದೃಷ್ಟವಶದಿಂದ ಅದು ದೇವೇಂದ್ರವಿಜಯನಿಗೆ ಕೇವಲ ನೀರಸವಾಗಿಯೂ ಮೈಯುರಿಸುವಂತಹುದಾಗಿಯೂ ತೋರಿತು. ಅದರಿಂದ ಅವನು ಕೋಪಿಸಿಕೊಂಡು ಆ ಮುಖ್ಯಸ್ಥನನ್ನು ಕುರಿತು—ನಿನ್ನ ತಲೆ, ಮೂರ್ಖ, ನನ್ನನ್ನು ನಮ್ಮ ಊರಿಗೆ ಸೇರಿಸುವುದಕ್ಕೆ ನಾನು ಇರುವುದೆಲ್ಲಿ ಎಂಬುದನ್ನು ನೀನೇನು

ಬಲ್ಲೆ?—ಎಂದು ಹೇಳಿ ಎದ್ದು ನಿಲ್ಲುವುದಕ್ಕೆ ಪ್ರಯತ್ನಿಸಿದನು. ಪ್ರಯತ್ನ ಮಾಡಿದುದೆಷ್ಟೋ ಆಷ್ಟೇ, ಏಳುವುದಕ್ಕಾಗಲಿಲ್ಲ; ಅರ್ಧಶಾಯಿತಾವಸ್ಥೆಯಲ್ಲಿಯೇ ಕುಳಿತುಬಿಟ್ಟನು. ಈಗಲೂ ತನಗೆ ಅಮಲು ಇಳಿದಿಲ್ಲವೆಂದು ಆ ಅಂಬಿಗನು ಹೇಳಿ ತನಗೆ ಕ್ಯೋಥೋದ್ರೀಕಮಾಡಿದನಲ್ಲಾ ಅದು ಮಿಥ್ಯಾಪವಾದವಲ್ಲ; ಸಂಪೂರ್ಣವಾಗಿಯೂ ಸಿಚ್ಚಯ; ಎಂದು ಆಗ ಅವನಿಗೆ ತೋರಿತು. ಆಗಲೂ ಅವನ ತಲೆ ಸುತ್ತುತ್ತಿರುವಂತೆ ಇದ್ದಿತು; ಅವನ ಕಾಲುಗಳೆರಡೂ ಅವನ ದೇಹದ ಭಾರವನ್ನು ಹೊರುವುದಕ್ಕೆ ತ್ರಾಣವಿಲ್ಲವೆಂಬುದನ್ನು ಪ್ರಕಾಶಪಡಿಸುತ್ತಿವೆಯೋ ಎನ್ನುವಂತೆ ತುಂಬಾ ಅವಶವಾಗಿದ್ದುವು. ಅವನು ಅಂಬಿಗನ ಮೂರ್ಖತೆಗಿಂತಲೂ ತನ್ನ ಮೂರ್ಖತೆಯೇ ಅಧಿಕವೆಂಬುದನ್ನು ತಿಳಿದು ಬಹುವಾಗಿ ದುಃಖಿತನಾದನು.

ದೇವೇಂದ್ರವಿಜಯನ ಆ ಬಗೆಯ ಭಾವವನ್ನು ಅಂಬಿಗನು ಕಂಡು, ಅವಕ್ಕಾಗಿ ಕೊಂಚವಾದರೂ ವಿಸ್ಮಯಗೊಳ್ಳದೆ, ತಮ್ಮ ಮನೆ ಅತ್ತಲಾಗಿ ಕಾಮದೇವಪುರದಲ್ಲಿ; ತಮ್ಮ ಹೆಸರು ಅರಿಂದಮಬಾಬು ಎಂದಲ್ಲವೆ? ಎಂದು ಕೇಳಿದನು.

ದೇವೇಂದ್ರವಿಜಯನು ಉತ್ತೇಜಿತ ಭಾವದಿಂದ, ನನ್ನ ಹೆಸರು ಅರಿಂದಮಬಾಬೂ ಅಲ್ಲ; ನಮ್ಮ ಮನೆಯೂ ಕಾಮದೇವಪುರದಲ್ಲಿಲ್ಲ—ಎಂದು ಉತ್ತರಕೊಟ್ಟನು.

ಅಂಬಿಗ—ಹಾಗಾದರೆ ಆ ದೊಷ್ಟಮನುಷ್ಯನು ನನಗೆ ಸುಳ್ಳು ಹೇಳಿದನೇನು? ಎಂದು ಕೇಳಿ, ಬಾಬುವಿಗೆ ಇನ್ನೂ ಅಮಲು ಇಳಿದಿಲ್ಲ ಎಂದು ಮನಸ್ಸಿನಲ್ಲಿಯೇ ಭಾವಿಸಿದನು.

ದೇವೇಂದ್ರವಿಜಯ—ಯಾವನೊ ಆ ದೊಷ್ಟಮನುಷ್ಯ? ನನ್ನನ್ನು ದೋಣಿಗೆ ಹತ್ತಿಸಿದವನು ಯಾರು? ನನಗೆ ಯಾವುದೂ ತಿಳಿಯುವ ಹಾಗಿಲ್ಲ. ನೀನು ಈಗಲೇ ನನಗೆ ಎಲ್ಲ ಸಮಾಚಾರಗಳನ್ನೂ ವಿವರವಾಗಿ ಹೇಳು.

ಅಂಬಿಗನು ಹೇಳಲುಪಕ್ರಮಿಸಿದನು—ಬಾಬೂ, ತಾವು ನಿನ್ನೆಯ ರಾತ್ರಿ ಬಹುವಾಗಿ ಮತ್ತೇರಿದವರಾಗಿದ್ದಿರಿ. ತಮಗೆ ಕೊಂಚವಾದರೂ ಜ್ಞಾನವಿರದ ಮಟ್ಟಿಗೆ ಮದ್ಯಪಾನ ಮಾಡಿದ್ದಿರಿ. ಒಂದು ಆಲದ ಮರದ ಕೆಳಗೆ ತುಳಿಯಲ್ಬಟ್ಟವರಂತೆ ಬಿದ್ದುಕೊಂಡಿದ್ದಿರಿ. ಅದು ಹೇಗಾದರೂ ಇರಲಿ, ಅದರಿಂದ ಈಗ ಆಗಬೇಕಾದ್ದೇನು; ಈ ಕಾಲದಲ್ಲಿ ಬಹು ಮಂದಿ ದೊಡ್ಡಮನುಷ್ಯರು ಹೀಗಾಗಿಬಿಟ್ಟಿದ್ದಾರೆ. ಆ ಸ್ಥಳದ ದೊಡ್ಡ ಮನುಷ್ಯರೊಬ್ಬರು ಅಂತಹ ಅವಸ್ಥೆಯಲ್ಲಿದ್ದ ತಮ್ಮನ್ನು ಕಂಡು ನನ್ನನ್ನು ಕೂಗಿದರು. ನನ್ನನ್ನು ಕೂಗಿ—"ಮಾಧುರ, ಒಂದು ಕೆಲಸ ಮಾಡಬೇಕಲ್ಲ, ಈ ದೊಡ್ಡಮನುಷ್ಯನನ್ನು ಊರಿಗೆ ಸೇರಿಸಿ ಬರಬೇಕು. ಯಾರಾದರೂ ಪೋಲೀಸರು ನೋಡಿದ್ದೇ ಆದರೆ ತಾಣೆಗೆ ಎಳೆದುಕೊಂಡು ಹೋದಾರು. ಈ ಮನುಷ್ಯನ ವಾಸಸ್ಥಳವನ್ನು ನಾನು ಬಲ್ಲೆ. ಅಂಗಿಯ ಕಿಸೆಯಲ್ಲಿ ಸಿಕ್ಕಿದ ಕಾಗದಗಳಲ್ಲಿ ಇವನ ವಾಸಸ್ಥಳದ ಹೆಸರು ಬರೆದಿದೆ" ಎಂದು ಹೇಳಿದರು.

ದೇವೇಂದ್ರ—ಆ ದೊಡ್ಡಮನುಷ್ಯನು ಯಾರೆಂಬುವುದು ನಿನಗೆ ಗೊತ್ತೇ?

ಅಂಬಿಗ—ಇಲ್ಲ ಸ್ವಾಮಿ, ನಾನು ಕಾಣೆ.

ದೇವೇಂದ್ರ—ಹಾಗಾದರೆ ಆತನು ನಿನ್ನ ಹೆಸರು ಹಿಡಿದು ಕೂಗಿದ್ದು ಹೇಗೆ?

ಅಂಬಿಗನು ಸ್ವಲ್ಪ ಹಿಂದು ಮುಂದು ಆಲೋಚಿಸಿ—ಅದೆಲ್ಲವೂ ನನಗೆ ಹೇಗೆ ತಿಳಿಯಬೇಕು ಸ್ವಾಮಿ; ಇದಕ್ಕೆ ಮೊದಲು ಆ ದೊಡ್ಡಮನುಷ್ಯ ನನ್ನು ಎಲ್ಲಿಯಾದರೂ ನೋಡಿರುವೆನೇ ಎಂಬುವುದು ಸರಿಯಾಗಿ ಸ್ಮರಣೆಗೆ ಬಾರದು. ಆದರೆ ಆತನೇನೋ ನನ್ನನ್ನು ಚೆನ್ನಾಗಿ ಬಲ್ಲವನೆಂದು ಹೇಳ ಬೇಕು. ಹಾಗಿಲ್ಲವಾದರೆ, ನನ್ನ ಹೆಸರು ಅವನಿಗೆ ತಿಳಿಯುವ ಬಗೆ ಹೇಗೆ? ಹೇಗಾದರೂ ಆಗಲಿ, ಮನುಷ್ಯನು ತುಂಬ ಗೌರವಸ್ಥ, ಕರುಣೆಯೇ ಆತನೆಂದು ಹೇಳಿದರೂ ಸಲ್ಲುತ್ತದೆ; ಇಲ್ಲವಾಗಿದ್ದರೆ ಈ ಕಾಲದ ನಡವಳಿ ಯಲ್ಲಿ ಒಬ್ಬರಿಗೊಬ್ಬರು ಮೇಲುಕೋರುವುದೆಂದರೇನು ಹೇಳಿ. ಈಗಿನ

ಕಾಲದಲ್ಲಿ ಹೆತ್ತ ತಂದೆತಾಯಿಗಳನ್ನೂ ಒಡಹುಟ್ಟಿದ ಅಣ್ಣತಮ್ಮಂದಿರನ್ನೂ ಯಾರೂ ವಿಚಾರಿಸುವುದಿಲ್ಲ. ಇಂತಹ ಕಾಲದಲ್ಲಿ ನಿಮಗೆ ಆತನು ಅನೇಕವಾಗಿ ಉಪಕಾರ ಮಾಡಿದ್ದಾನೆ. ನಿಮ್ಮನ್ನು ಕರೆದುಕೊಂಡು ಬರುವ ಬಾಡಿಗೆಯನ್ನೂ ಸಹ ತನ್ನ ಕೈಯಿಂದ ಈ ಮೊದಲೇ ಕೊಟ್ಟು ಬಿಟ್ಟಿದ್ದಾನೆ, ಎಂದು ಹೇಳಿದನು.

ದೇವೇಂದ್ರವಿಜಯ—ಆ ದೊಡ್ಡಮನುಷ್ಯನ ವಯಸ್ಸನ್ನು ಎಷ್ಟು; ಹೇಗೆ ಕಾಣಿಸುತ್ತಿದ್ದನು. ಮನುಷ್ಯನು ದೀರ್ಘಾಕೃತಿಯವನೆ ಅಥವಾ ಗಿಡ್ಡೀ. ಸ್ಥೂಲಕಾಯನೋ ಅಥವಾ ಕೃಶಕಾಯನೋ? ಗಡ್ಡ ಮೀಸೆಗಳೇನಾದರೂ ಇದ್ದಿತೆ ಅಥವಾ ಇಲ್ಲವೇ ಎಂದು ಮುಂತಾಗಿ ಅನೇಕ ಪ್ರಶ್ನೆಗಳನ್ನು ಕೇಳಿದನು. ಇವನ ಪ್ರಶ್ನೆಗಳಿಗೆಲ್ಲಾ ಅಂಬಿಗನು ಹೇಳಿದ ಉತ್ತರಗಳನ್ನು ಕೇಳಿದಮೇಲೆ ಹಿಂದಿನ ರಾತ್ರಿ ತಾನು ನೋಡಿದ್ದ, ಎಂದೂ ನೋಡದಂತಹ ಆ ಅದ್ಭುತರೋಗಿಯೇ ಈ ದೊಡ್ಡಮನುಷ್ಯನಾಗಿರಬೇಕೆಂದು ಊಹಿಸಿದನು. ಹಾಗೆಯೇ ದೋಣಿಯವನನ್ನು ಕುರಿತು—ನೀನು ಏನೋ ಕಾಗದದ ವಿಚಾರವಾಗಿ ಹೇಳಿದೆಯಲ್ಲವೆ? ಆ ಕಾಗದ ಎಲ್ಲಿದೆ? ನಾನು ಅದನ್ನು ಒಂದು ಸಲ ನೋಡಬೇಕಾಗಿದೆ. ನನಗೆ ಅದನ್ನು ಕೊಡು, ಎಂದನು.

ದೋಣಿಯವನು—ಆ ಕಾಗದವು ನಿಮ್ಮ ಅಂಗಿಯ ಕಿಸೆಯಲ್ಲಿಯೇ ಇದೆ. ಆತನು ವಿಳಾಸವನ್ನು ಒಂದು ಸಲ ಓದಿ ಹೇಳಿ ಆನಂತರ ಅದನ್ನು ಮತ್ತೆ ನಿಮ್ಮ ಕಿಸೆಯಲ್ಲಿಯೇ ಹಾಕಿದನು.

ಕಿಸೆಗೆ ಕೈಹಾಕಿ ನೋಡಿದಾಗ ದೇವೇಂದ್ರವಿಜಯನ ಮುಖವು ವಿವರ್ಣವಾಗಿಹೋಯಿತು. ಅವನು ಉತ್ತೇಜಿತ ಕಂಠದಿಂದ, ಅಯ್ಯೋ, ಸರ್ವನಾಶವಾಯಿತು! ಅವರು ಕಳ್ಳರು; ಅವರೇ ಡಕಾಯಿತರು; ಅವರು ಬಹು ಭಯಂಕರ ಸ್ವಭಾವದವರು; ಮಹಾವಿಶ್ವಾಸಘಾತಕರು. ನೀವುಗಳೂ ಆ ಕೊಲೆಪಾತಕರ ಕಡೆಯವರೆಂದೇ ತೋರುತ್ತಿದೆ; ನನ್ನ ಕೈಯಿಂದ ಯಾರೂ ಬಿಡುಗಡೆ ಹೊಂದಲಾರಿರಿ; ನಿಶ್ಚಯವಾಗಿಯೂ ನೀವು ಇದರ ಫಲಭೋಗ ಮಾಡಿಯೇ ಮಾಡುವಿರಿ, ಎಂದು ಹೇಳಿದನು.

ದೋಣಿಯವನು ಆ ಮಾತಿನ ಅರ್ಥವೇನೆಂದು ತಿಳಿಯದೆ ವಿಸ್ಮಿತನಾಗಿ, ಮತ್ತಷ್ಟು ಕುತೂಹಲದಿಂದ,–ಬಾಬೂ ಏನಾಗಿ ಹೋಯಿತು? ನಮಗೇನೂ ತಿಳಿಯದು, ಎಂದನು.

'ನಿಮಗೆಲ್ಲವೂ ಗೊತ್ತಿದೆ' ಎಂದು ಹೇಳಿ ದೇವೇಂದ್ರವಿಜಯನು ದೋಣಿಯವನ ಮಾತನ್ನು ಮುಗಿಯಿಸಿ, ಹಾಗೆಯೇ ಕ್ರೋಧಭರದಿಂದ–ನನ್ನ ಗಡಿಯಾರ, ಸರಪಳಿ, ವಜ್ರದ ಉಂಗುರ, ಜೇಬಿನಲ್ಲಿ ಸುಮಾರು ಮೂರು ನೂರಕ್ಕೆ ಹೆಚ್ಚಾಗಿಯೇ ಇದ್ದ ರೂಪಾಯಿಗಳು–ಎಲ್ಲವನ್ನೂ ಕಳುವುಮಾಡಿ ತೆಗೆದುಕೊಂಡಿದ್ದಾರೆ. ಅವರು ಸಾಧಾರಣ ಮನುಷ್ಯರಲ್ಲ. ಇಲ್ಲಿ ಎಲ್ಲಿಯಾದರೂ ಒಂದು ಥಾಣೆ ಇರುವುದಾದರೆ ಅಲ್ಲಿಗೆ ನನ್ನನ್ನು ಕರೆದುಕೊಂಡುಹೋಗು. ಈಗಲೇ ಇದರ ಪ್ರತೀಕಾರ ಮಾಡಿಬಿಡುತ್ತೇನೆ, ಎಂದು ಗದ್ದಿಸಿದನು.

ದೇವೇಂದ್ರವಿಜಯನು ಈ ಜೇಬು, ಆ ಜೇಬು ಎಂದು ಹುಡುಕಿದಾಗ ಮೂರು ಕಾಗದಗಳು ಸಿಕ್ಕಿದುವು. ಅವುಗಳಲ್ಲಿ ಎರಡು ತನ್ನ ಹೆಸರಿಗೆ ಬರೆದ ಕಾಗದಗಳು. ಹಸ್ತಾಕ್ಷರಗಳು ಬೇರೆ ಬೇರೆ. ಮತ್ತೊಂದರಮೇಲೆ ಕಾಮದೇವಪುರದಲ್ಲಿರುವ ಅರಿಂದಮನ ವಿಳಾಸ ಬರೆದಿತ್ತು. ದೇವೇಂದ್ರವಿಜಯನು ಕೇವಲ ಕುತೂಹಲಿಯಾಗಿ ಆ ಮೂರು ಕಾಗದಗಳನ್ನೂ ಓದಿದನು. ಓದಿದಮೇಲೆ ದೋಣಿಯವನನ್ನು ಕುರಿತು—ಸರಿ, ನನ್ನ ಹೆಸರೇ ಅರಿಂದಮ; ನಮ್ಮ ಮನೆ ಕಾಮದೇವಪುರದಲ್ಲಿದೆ; ಆದಷ್ಟು ಬೇಗ ದೋಣಿಯನ್ನು ಅಲ್ಲಿಗೆ ನಡೆಯಿಸು; ಎಂದು ಹೇಳಿದನು.

ಈ ಮಾತನ್ನು ಕೇಳಿ ದೋಣಿಯವನು ಕೊಂಚವೂ ವಿಸ್ಮಯಪಡಲಿಲ್ಲ. ಕಾರಣವೇನೆಂದರೆ, ಈ ಮನುಷ್ಯನಿಗೆ ಇನ್ನೂ ಅಮಲು ಸರಿಯಾಗಿ ಇಳಿದಿಲ್ಲವೆಂದು ಅವನು ಚೆನ್ನಾಗಿ ನಂಬಿದ್ದನು.

ದೋಣಿಯು, ಮೊದಲಿನ ಹಾಗೆಯೇ, ವೇಗವಾಗಿ ಹೋಗುತ್ತಿದ್ದಿತು.

ಎರಡನೆಯ ಪರಿಚ್ಛೇದ

ಕಾಗದ ಪತ್ರಗಳು

ಯಥಾ ಸಮಯದಲ್ಲಿ ದೋಣಿಯು ಹುಗಲಿಯ 'ಷೋಲಾ' ಘಾಟಿಗೆ ಬಂದು ಮುಟ್ಟಿತು. ದೇವೇಂದ್ರವಿಜಯನು ಅದರಿಂದ ಇಳಿದನು; ದೋಣಿಯು ಬಾಡಿಗೆ ಬಂದಿರುವುದೆಂದು ದೋಣಿಯವನು ಮೊದಲೇ ಹೇಳಿದ್ದನಾದ್ದರಿಂದ ಪ್ರಕೃತದಲ್ಲಿ ಅದಕ್ಕಾಗಿ ಕಾತರನಾಗಲಿಲ್ಲ. ದೋಣಿಯವರು ನಿರ್ದೋಷಿಗಳೆಂಬುದರ ಪ್ರಮಾಣವು ಆ ಮೂರು ಕಾಗದಗಳ ಪೈಕಿ ಒಂದರಲ್ಲಿ ಬರೆದಿದ್ದಿತು. ದೇವೇಂದ್ರವಿಜಯನು ಅವರನ್ನು ಬಿಟ್ಟುಬಿಟ್ಟನು.

ಅರಿಂದಮನ ಮನೆಯನ್ನು ಹುಡುಕಿ ಗೊತ್ತುಪಡಿಸುವುದಕ್ಕೆ ದೇವೇಂದ್ರವಿಜಯನಿಗೆ ಸ್ವಲ್ಪವಾದರೂ ಆಯಾಸವಾಗಲಿಲ್ಲ. ಅಲ್ಲಿನವರೆಲ್ಲರೂ ಅರಿಂದಮನನ್ನು ಬಲ್ಲರು. ದೇವೇಂದ್ರವಿಜಯನು ಅರಿಂದಮನ ಮನೆಗೆ ತಲ್ಪಿದಾಗ, ಅರಿಂದಮನು ಹೊರಗಡೆಯ ಕೊಠಡಿಯಲ್ಲಿ ಕುಳಿತು ಕುತೂಹಲಾವಿಷ್ಟನಾಗಿ ವರ್ತಮಾನಪತ್ರವೊಂದನ್ನು ಓದುತ್ತಿದ್ದನು. ಸುಲಭವಾಗಿಯೇ ಆತನ ಭೇಟಿಯಾಯಿತು. ಅರಿಂದಮನು ದೇವೇಂದ್ರವಿಜಯನನ್ನು ಕುಳಿತುಕೊಳ್ಳಜೇಕೆಂದು ಹೇಳಿ, ವರ್ತಮಾನ ಪತ್ರವನ್ನು ಮೇಜಿನಮೇಲೆ ಹಾಕಿಬಿಟ್ಟು, ತಾನು ಸರಿಯಾಗಿ ಕುಳಿತುಕೊಂಡನು.

ದೇವೇಂದ್ರವಿಜಯನು—ಮಹಾಶಯ! ತಾವೇನೆ ಅರಿಂದಮ ಬಾಬು ಎಂಬವರು? ಎಂದು ಕೇಳಿದನು.

ಅರಿಂದಮನು ತಲೆಯಾಡಿಸಿ ಒಪ್ಪಿಕೊಂಡನು.

ದೇವೇಂದ್ರವಿಜಯ—ತಮ್ಮ ವಿಳಾಸಕ್ಕೆ ಒಂದು ಕಾಗದವಿದೆ. ಹೀಗೆಂದು ಹೇಳಿ ಅವನು ಆ ಮೂರು ಕಾಗದಗಳಲ್ಲಿ ಅರಿಂದಮನ ಕಾಗದವನ್ನು ಹುಡುಕಿ ತೆಗೆದನು.

ಅರಿಂದಮನು ಕಾಗದವನ್ನು ಓದಿಕೊಂಡನು. ಕಾಗದದಲ್ಲಿ ಹೀಗೆ ಬರೆದಿತ್ತು:—

"ಪ್ರಿಯ ಮಿತ್ರನಿಗೆ,

ಬಹು ದಿನಗಳಿಂದ ನಿನ್ನ ಸಮಾಚಾರಗಳೊಂದೂ ತಿಳಿಯದೆ ಬಹುವಾಗಿ ವಿಷಾದಿಸುತ್ತೇನೆ; ನನ್ನ ಸಂಪೂರ್ಣ ಕುಶಲವನ್ನು ತಿಳಿದು ನಿಶ್ಚಿಂತನಾಗು. ನೀನಾಗಿ ಮಾಡಿದ ಮಹೋಪಕಾರವನ್ನು ನೀನು ಸಾಯುವವರೆಗೂ, ಎಂದೆಂದಿಗೂ ನಾನು ಮರೆಯಲಾರೆ.

ನಾನು ಅದನ್ನು ಮರೆಯುವತನಕ ನನಗೆ ಏತರಿಂದಲೂ ಸ್ವಾಸ್ಥ್ಯವಿಲ್ಲ: ಅದಕ್ಕೊೀಸ್ಕರವಾಗಿಯೇ ನಿನ್ನ ಮರಣವು ಸಾಧ್ಯವಾದ ಮಟ್ಟಿಗೂ ಬೇಗ ಸನ್ನಿಹಿತವಾಗುವಂತೆ ಮಾಡಲು ಎಲ್ಲ ಪ್ರಯತ್ನಗಳನ್ನೂ ನಡೆಯಿಸುತ್ತೇನೆ.

ನೀನು ಹೇಗೂ ನಾನಿರುವ ಸ್ಥಳವನ್ನು ಗೊತ್ತುಮಾಡಲಾರದವನಾಗಿರುವೆಯೆಂದು ತಿಳಿದಿದ್ದೇನೆ; ಅದಕ್ಕಾಗಿ ಇನ್ನೂ ಎಷ್ಟೋ ಪ್ರಯತ್ನಗಳನ್ನು ಮಾಡುತ್ತಿರುವೆ ಎಂಬುದನ್ನೂ ಬಲ್ಲೆ; ಆದರೆ ಏತರಿಂದಲೂ ಕೃತಕಾರ್ಯನಾಗದಿರುವುದನ್ನು ಕಂಡು ತುಂಬಾ ವಿಷಾದಿಸುತ್ತೇನೆ. ಈ ಕಾಗದವನ್ನು ತರುವ ಶ್ರೀಯುತ ದೇವೇಂದ್ರವಿಜಯಮಿತ್ರನಿಂದ ನನ್ನ ನಿವಾಸಸ್ಥಳವು ಗೊತ್ತಾಗುವುದು. ಆ ದೊಡ್ಡಮನುಷ್ಯನು ನನಗೆ ಚಿಕಿತ್ಸೆಮಾಡಲು ಬಂದಿದ್ದನು. ಇಂತು,

ಫೂಲಸಾಹೇಬ."

ಅರಿಂದಮನು ಈ ಕಾಗದವನ್ನು ಓದಿ, ತನಗಾಗಿ ಫೂಲಸಾಹೇಬನಿಂದ ರಹಸ್ಯಮಯವಾದ ಮತ್ತೊಂದು ಕೌಶಲವು ಸಿದ್ಧವಾಗುತ್ತಿರುವುದೆಂದು ಭಾವಿಸಿದನು. ಹಾಗೆಯೇ ದೇವೇಂದ್ರವಿಜಯನನ್ನು ಕುರಿತು, ತಮಗೆ ಈ ಕಾಗದವು ಎಲ್ಲಿ ಸಿಕ್ಕಿತು? ಎಂದು ಪ್ರಶ್ನೆಮಾಡಿದನು.

ದೇವೇಂದ್ರವಿಜಯ—ಈ ಕಾಗದ ನನಗೆ ಯಾವಲ್ಲಿ ಸಿಕ್ಕಿತು, ಯಾವಾಗ ಸಿಕ್ಕಿತು, ಯಾರು ಕೊಟ್ಟವರು ಇವುಗಳೊಂದನ್ನೂ ನಾನು ಕಾಣೆ. ನನ್ನ ಮಾತು ಕೇಳಿ ನೀವು ವಿಸ್ಮಯಪಡಬೇಡಿ. ನಿಮಗೆ ಎಲ್ಲ ವಿಚಾರಗಳನ್ನೂ ವಿವರವಾಗಿ ಹೇಳದಿದ್ದರೆ, ಈ ವಿಚಾರದಲ್ಲಿ ತಾವು ಏನೂ ತಿಳಿಯಲಾಗುವುದಿಲ್ಲ; ಇದರಲ್ಲಿ ಅನೇಕ ರಹಸ್ಯಗಳು ಅಡಗಿವೆ.

ಅರಿಂದಮ—ಯಾವ ಆಕ್ಷೇಪಣೆಯೂ ಇಲ್ಲದಿರುವ ಪಕ್ಷದಲ್ಲಿ ಆ ಎಲ್ಲ ಸಮಾಚಾರಗಳನ್ನೂ ತಾವು ನನಗೆ ಹೇಳಬಹುದು.

ದೇವೇಂದ್ರವಿಜಯನು ಹಿಂದಿನ ರಾತ್ರಿಯ ಸಮಾಚಾರವನ್ನೆಲ್ಲಾ ಹೇಳಲು ಉಪಕ್ರಮಿಸಿದನು; ಬಂದು ವಿಸರ್ಗಗಳನ್ನೂ ಮರೆಮಾಚದೆ ನಿಷ್ಕಪಟವಾಗಿ ಎಲ್ಲವನ್ನೂ ಹೇಳಿದನು. ಅವನ್ನೆಲ್ಲಾ ಇಲ್ಲಿ ಎತ್ತಿ ಬರೆಯುವುದು ನಿಷ್ಪ್ರಯೋಜನ. ಅವೆಲ್ಲವನ್ನೂ ಕೇಳಿ ಅರಿಂದಮನು ಕೊಂಚವಾದರೂ ವಿಸ್ಮಿತನಾಗಲಿಲ್ಲ; ಫೂಲಸಾಹೇಬನ ವಿಚಾರದಲ್ಲಿ ಸಕಲವೂ ಸಂಭವವೆಂದು ಅವನು ತಿಳಿದಿದ್ದನು. ದೇವೇಂದ್ರವಿಜಯನು ಅವನಿಂದ ತಪ್ಪಿಸಿಕೊಂಡು ಪ್ರಾಣ ಸಹಿತ ಹಿಂದಿರುಗಿದುದೊಂದು ಮಾತ್ರ ಆ ದೊಡ್ಡ ಚರಿತ್ರೆಯಲ್ಲೆಲ್ಲಾ ಸ್ವಲ್ಪ ವಿಸ್ಮಯಕರವಾದ ವಿಷಯ!

ಅರಿಂದಮ—ನೀವು ಇನ್ನೂ ಎರಡು ಕಾಗದಗಳ ವಿಚಾರ ಹೇಳಿದಿರಲ್ಲಾ ಅವನ್ನು ನೀವು ಕಳೆದಿರಲಾರಿರೆಂದು ಊಹಿಸುತ್ತೇನೆ?

ದೇವೇಂದ್ರವಿಜಯ—ಅವು ನನ್ನ ಹತ್ತಿರನೇ ಇವೆ, ತಾವು ನೋಡಬಹುದು ಎಂದು ಹೇಳಿ ದೇವೇಂದ್ರವಿಜಯನು ತನ್ನ ಹೆಸರಿನ ಎರಡು ಕಾಗದಗಳನ್ನೂ ಅರಿಂದಮನ ಕೈಗೆ ಕೊಟ್ಟನು. ಅರಿಂದಮನು ವ್ಯಗ್ರಚಿತ್ತನಾಗಿ ಓದುತ್ತಿದ್ದನು:—

"ದೇವೇಂದ್ರವಿಜಯ,

ನೀನು ನನ್ನನ್ನು ಕಂಡಿಲ್ಲ, ಆದರೆ ನಾನು ನಿನ್ನನ್ನು ಚೆನ್ನಾಗಿ ಬಲ್ಲೆ. ನೀನು ಭವಾನೀಪುರದವನೆಂಬುದನ್ನೂ, ನೀನು ವೇಣೀಮಾಧವಪುರಕ್ಕೆ ಏತಕ್ಕಾಗಿ ಹೋಗಿದ್ದೆ ಎಂಬುದನ್ನೂ, ಅಲ್ಲಿ ಗೋಪಾಲಚಂದ್ರನೊಡನೆ ಆಲೋಚನೆಮಾಡಿ ರೇವತಿಯ ಸಂರಕ್ಷಣೆಗೋಸ್ಕರ ಯಾವನಾದರೊಬ್ಬ ದಕ್ಷನಾದ ಪತ್ತೇದಾರನನ್ನು ನೇಮಕ ಮಾಡಬೇಕೆಂದು ಕಲಿಕತ್ತೆಗೆ ಹಿಂದಿರುಗುತ್ತಿದ್ದುದನ್ನೂ ನಾನು ಬಲ್ಲೆ. ಬಾಬೂ, ನೀನು ನನ್ನ ಆಲೋಚನೆಯನ್ನು ಕೇಳುವುದಾದರೆ, ಶಕ್ತನಾದೊಬ್ಬ ಪತ್ತೇದಾರನ ವಶಕ್ಕೆ ನಿನ್ನ ಕಾರ್ಯಭಾರವನ್ನು ಒಪ್ಪಿಸಬೇಕೆಂದಿರುವುದಾದರೆ, ಹುಗಲೀ ಜಿಲ್ಲೆಯ ಅರಿಂದಮವಸುವನ್ನು ಆ ಕಾರ್ಯದಲ್ಲಿ ಮೊದಲು ನಿಯೋಜಿಸುವ

ಪ್ರಯತ್ನಮಾಡು. ನೀನು ರೇವತಿಯನ್ನು ತುಂಬ ಪ್ರೀತಿಸುವೆಯೆಂದೂ, ಅವಳನ್ನು ನಿನಗೇ ಕೊಟ್ಟು ಮದುವೆಮಾಡುವ ಪ್ರಸ್ತಾಪವಿದ್ದಿತೆಂದೂ, ನಾನು ಬಲ್ಲೆ. ನಿಮ್ಮ ಮಾವನು ಅದಕ್ಕಾಗಿ ಬೇಕಾದಷ್ಟು ಪ್ರಯತ್ನ ಪಟ್ಟಿದ್ದನು; ಆದರೆ ವಿಧಾತನ ಅಭಿಪ್ರಾಯವು ಮತ್ತೊಂದು ರೀತಿ. ಹಣಕ್ಕೆ ತುಂಬ ತೊಂದರೆಯಾಗಿದ್ದ ಕಾರಣ ನಿನಗೆ ಸ್ವಲ್ಪ ಶ್ರಮಕೊಡಬೇಕಾಯಿತು? ವೇಣೀಮಾಧವಪುರದಲ್ಲಿ 'ಕೇಶವಬಾಬು' ಎಂಬ ಹೆಸರನ್ನು ನೀನು ಕೇಳಿರಬಹುದು; ನಾನೇ ಆ ಕೇಶವಬಾಬು.''

ಇನ್ನೊಂದು ಹೆಂಗುಸಿನ ಕೈಬರೆಹದ್ದು; ಹೀಗಿದ್ದಿತು:—

''ದೇವೇಂದ್ರವಿಜಯ,

ನಿನ್ನನ್ನು ಬಿಟ್ಟುಕೊಟ್ಟೆನೆಂದು ತಿಳಿಯಬೇಡ. ನೀನು ನನ್ನ ಕೈಯಿಂದ ಸದ್ಯಕ್ಕೆ ಬಿಡುಗಡೆ ಹೊಂದಿದೆ. ನಾನು ನಿನ್ನನ್ನು ಕ್ಷಮಿಸುವೆನೆಂದು ಭಾವಿಸಬೇಡ. ಗಾಳಕ್ಕೆ ಸಿಕ್ಕಿದ ಮೀನನ್ನು ಹಾಗೂ ಹೀಗೂ ಆಡಿಸಿ, ಕಡೆಗೆ ಮೇಲಕ್ಕೆ ಎತ್ತಿ ಹಾಕುವುದರಿಂದ ಬಹು ಸಂತೋಷವಾಗುತ್ತದೆ. ನಿನ್ನನ್ನು ಕೊಲ್ಲುವುದರಿಂದ ಅಂತಹ ಆನಂದವನ್ನು ಅನುಭವಿಸಬೇಕೆಂದು ಸಂಕಲ್ಪಮಾಡಿರುವುದರಿಂದಲೇ ನಿನ್ನನ್ನು ಈಗ ಬಿಟ್ಟುಕೊಟ್ಟಿದ್ದೇನೆ. ನೀನು ಯಾರ ಕ್ರೋಧಾಗ್ನಿಗೆ ಸಿಕ್ಕಿರುವೆ ಎಂಬುದನ್ನು ನೀನು ಇದುವರೆಗೂ ತಿಳಿದಿಲ್ಲ: ಯಾವ ದಿವಸ ಜುಮಲೆಯು ನಿನ್ನ ಹೃದಯ ರಕ್ತದಿಂದ ತನ್ನ ಕೈತೊಳೆಯುವಂತಾಗುವುದೋ ಅಂದಿನ ದಿನ, ನೀನು ನನಗೆ ಮಾಡಿದ ಅಪಮಾನ, ನಿನ್ನ ಆ ತಿರಸ್ಕಾರ, ಆ ದ್ವೇಷಗಳಿಗೆಲ್ಲ ಸರಿಯಾದ ಪ್ರತೀಕಾರವಾಗುವುದು. ಉಪೇಕ್ಷೆತಳಾದ ರಮಣಿಯು ಕ್ರೂರವಾದ ಸರ್ಪಕ್ಕಿಂತಲೂ ಭಯಂಕರಳು, ಎಂಬುದನ್ನು ಅಂದೇ ತಿಳಿಯುವೆ.

ಸರ್ಪೀ ಜುಮಲೆ.''

ಕೇಶವಬಾಬು ಮತ್ತೂ ಫೂಲಸಾಹೇಬರಿಗೆ ಸಂಬಂಧಿಸಿದ ಕಾರ್ಯ ಕಲಾಪಗಳೆಲ್ಲವೂ ಒಬ್ಬನದೇ ಎಂಬುದನ್ನು ಅರಿಂದಮನು ಮೊದಲೇ ತಿಳಿದುಕೊಂಡಿದ್ದನು. ಇದರಲ್ಲಿ ಆಶ್ಚರ್ಯಕರವಾದ ಸಂಗತಿಯಾಗಲೀ ಹೊಸಪರಿಯಾಗಲೀ ಯಾವುದೂ ಕಾಣಿಸಲಿಲ್ಲ. ಕಾಗದವನ್ನು ಓದಿ ಮುಗಿಯಿಸಿ ಅರಿಂದಮನು,—ದೇವೇಂದ್ರಬಾಬೂ, ನಿಮ್ಮ ಪಿಂದಣ ಜನ್ಮದ

ಕರ್ಮಫಲವು ಬಹು ಒಳ್ಳೆಯದು; ಅದರಿಂದಲೇ ನೀವು ಇಂತಹ ಕೊಲೆ ಪಾತಕಿಗಳ ಕೈಯಿಂದ ಪ್ರಾಣದೊಂದಿಗೆ ನಿಮ್ಮ ಶರೀರವನ್ನು ರಕ್ಷಿಸಿ ಕೊಂಡು ಬಂದಿರಿ, ಎಂದು ಮಂದಹಾಸದಿಂದ ಹೇಳಿದನು.

ದೇವೇಂದ್ರವಿಜಯ—ತಾವು ಅವರನ್ನು ಬಲ್ಲಿರಾ?

ಅರಿಂದಮ—ಇಂತಹ ಮಹಾತ್ಮರೊಬ್ಬಿಬ್ಬರನ್ನು ಅರಿಯಲಾರದವನಾದರೆ ನನ್ನ ಹೊಟ್ಟೆ ಹೊರೆಯುವ ಕೆಲಸವು ಹೇಗಾಗಬೇಕು. ರೇವತಿಯ ಚಿಕ್ಕಪ್ಪನಾದ ಗೋಪಾಲಬಾಬುವಿನ ಸ್ವಭಾವ ಚರಿತ್ರೆಯು ಬಹಿರಾವಾಗಿ ನಿಮಗೇನಾದರೂ ತಿಳಿದಿದೆಯೇ?

ದೇವೇಂದ್ರ—ಅವನು ಒಳ್ಳೆಯ ಮನುಷ್ಯ; ಅಲ್ಲಿನವರೆಲ್ಲರೂ ಅವನನ್ನು ತುಂಬಾ ಗೌರವಿಸುತ್ತಿರುವರು.

ಅರಿಂದಮ—ತಾವು ನನ್ನ ಸಂಗಡ ನಾಲ್ಕಾರು ದಿನ ಇದ್ದು, ನನಗೆ ಸ್ವಲ್ಪ ಸಹಾಯಮಾಡುವ ಪಕ್ಷದಲ್ಲಿ, ನಾನು ರೇವತಿಯ ರಕ್ಷಣೆಗೆ ಸನ್ನಾಹ ಕಲ್ಪಿಸಿಕೊಡಬಲ್ಲೆನು. ಸಮ್ಮತವುಂಟೆ?

ದೇವೇಂದ್ರ—ನನ್ನ ಅಕ್ಷೇಪವೇನೂ ಇಲ್ಲ; ಆದರೆ ನನ್ನಿಂದ ನಿಮಗೆ ಅಷ್ಟು ದೊಡ್ಡ ಸಹಾಯವಾಗುವುದೆಂಬ ಭರವಸೆಯಿಲ್ಲ.

ಅರಿಂದಮ—(ನಗುತ್ತಾ) ಯಾವ ಮನೆಯೊಳಗೆ ನಿನ್ನೆಯ ದಿನ ಶುಭಕರವಾದ ರಾತ್ರಿಯನ್ನು ನೀವು ಕಳೆದಿರೋ ಅಲ್ಲಿಗೆ ನನ್ನನ್ನು ಒಂದು ಸಲ ಕರೆದುಕೊಂಡು ಹೋಗುತ್ತೀರಾ? ದಾರಿ ಗೊತ್ತಿದೆಯೆ?

ದೇವೇಂದ್ರ—ಇಲ್ಲ, ರಾತ್ರಿ ವನಮಧ್ಯದಲ್ಲಿ ಹೋದದ್ದು; ಈಗ ಅದೇ ದಾರಿಯನ್ನು ಗುರ್ತಿಸುವುದು ಕಷ್ಟ. ಆದರೂ ಪ್ರಯತ್ನಪಡುವುದಾದರೆ ಅಲ್ಲಿಗೆ ನಿಮ್ಮನ್ನು ಕರೆದುಕೊಂಡು ಹೋದೇನು.

ಅರಿಂದಮ—ಸರಿ, ನಡೆಯಿರಿ, ಇಂದು ಊಟವಾದ ಮೇಲೆ ಹೊರಟುಬಿಡೋಣ. ಹೇಗಾದರೂ ಆಗಲಿ, ಇಂದು ಅಲ್ಲಿಗೆ ಸೇರಲೇ ಬೇಕು.

ಅನಂತರ ಅವರವರಿಗೆ ಫೂಲಸಾಹೇಬ ಮತ್ತೂ ರೇವತಿಯು ಏಚಾರವಾಗಿ ಅನೇಕ ಮಾತುಕತೆಗಳಾದುವು. ಅವೆಲ್ಲವನ್ನೂ ಬರೆವುದರಿಂದ ಇದು ಬಹು ವಿಸ್ತಾರಗೊಳ್ಳುವುದೆಂದು ತೋರುತ್ತದೆ. ಆರಿಂದ ಮನು ಹೇಳಿದ ಫೂಲಸಾಹೇಬನ ಅತ್ಯಾಶ್ಚರ್ಯಕರವಾದ ಮತ್ತೂ ಅಲೌಕಿಕವಾದ ಗುಣವರ್ಣನೆಯನ್ನು ಕೇಳಿ ದೇವೇಂದ್ರವಿಜಯನು ಅಸಂಭವವೆಂದು ಭಾವಿಸಿದನಲ್ಲದೆ ವಿಸ್ಮಿತನೂ ಚಮತ್ಕೃತನೂ ಆದನು. ಹಾಗೆಯೇ ಫೂಲಸಾಹೇಬನ ಮತ್ತೂ ಬಾವುಲಿಯರ ಪಾತಾಪಹಾರ್ತಿಯು ಅವನ ಧಾರಣಾಚಿತ್ರದಲ್ಲಿ ಭಯಂಕರವಾದ ಆಸುರಸ್ವಭಾವವುಳ್ಳವುಗಳಾಗಿ ಉಜ್ವಲತರವಾಗಿ ಚಿತ್ರಿತವಾಯಿತು. ಆರಿಂದವನು ಆಗ ದೇವೇಂದ್ರವಿಜಯನಿಗೆ ರೇವತಿಯು ಏಚಾರಗಳೊಂದನ್ನೂ ಬಹಿರಂಗಪಡಿಸಲಿಲ್ಲ. ಅದಕ್ಕೆ ಬದಲಾಗಿ ದೇವೇಂದ್ರವಿಜಯನಿಂದ ರೇವತಿಯು ಅಪಹರಣ ಸಂಬಂಧವಾದ ಅನೇಕ ವಿಷಯಗಳನ್ನು ಕೇಳಿ ತಿಳಿದುಕೊಂಡನು.

ಮೂರನೆಯ ಪರಿಚ್ಛೇದ

ಆಶ್ಚರ್ಯಕರವಾದ ಅಂತರ್ಧಾನ

ದೇವೇಂದ್ರವಿಜಯನು ಅಂದು ಆರಿಂದವನಿಂದ ಪ್ರಾರ್ಥಿತನಾಗಿ ಅವರ ಮನೆಯಲ್ಲಿಯೇ ಆಹಾರಾದಿಗಳನ್ನು ಮಾಡಿಕೊಂಡನು. ಊಟವಾದಮೇಲೆ ಸ್ವಲ್ಪ ವಿಶ್ರಮಿಸಿಕೊಂಡನಂತರ ಇಬ್ಬರೂ ಫೂಲಸಾಹೇಬನ ಸಂದರ್ಶನಕ್ಕೊಸ್ಕರ ಹೊರಟರು. ಅವರು ಎಷ್ಟು ಬೇಗನೆ ಫೂಲಸಾಹೇಬನನ್ನು ನೋಡಬಹುದೆಂದು ಭಾವಿಸಿದ್ದರೋ ಅಷ್ಟರ ಮಟ್ಟಿಗೆ ಕಾರ್ಯತಃ ಆಗಲಿಲ್ಲ. ದೇವೇಂದ್ರವಿಜಯನಿಗೆ ಅನೇಕಾವರ್ತಿ ವಾರಿತಪ್ಪಿತು. ಸುಮಾರು ಹೊತ್ತು ಮುಳುಗುವ ಹೊತ್ತಿಗೆ ಅವರು ಫೂಲಸಾಹೇಬನ ಆ ತೋಟದ ಮನೆಯ ಬಳಿಗೆ ಬಂದರು. ಅತ್ತಕಡೆಯಿಂದ ಒಬ್ಬ ರೈತನು ಬರುತ್ತಿದ್ದನು. ಆರಿಂದವನು ಅವನನ್ನು ಕೂಗಿ, ಈ ತೋಟವು ಯಾರದು? ಎಂದು ಕೇಳಿದನು.

ರೈತ—ಜಾನಕೀನಾಥವಸುಗಳದಲ್ಲವೆ!

ಅರಿಂದಮನು ಸ್ವಲ್ಪ ಆಲೋಚಿಸತೊಡಗಿ, ಹಾಗೆಯೇ, ಯಾವ ಜಾನಕೀವಸು? ಅವರಿರುವುದು ಎಲ್ಲಿ? ಎಂದು ಪ್ರಶ್ನೆಮಾಡಿದನು.

ರೈತ—ಅತನು ಸತ್ತುಹೋಗಿದ್ದಾನೆ; ಅವರ ವಾಸಸ್ಥಳವು ವೇಣೀ ಮಾಧವಪುರ. ಅವರೇ ನಮ್ಮ ಜಮೀನಾ ದಾರರು, ಎಂದು ಹೇಳಿ ರೈತನು ಹೊರಟುಹೋದನು.

ಅರಿಂದಮನು ದೇವೇಂದ್ರವಿಜಯನನ್ನು ಕುರಿತು—ರೇವತಿಯ ತಂದೆಯು ಹೆಸರು ಜಾನಕೀನಾಥವಸು ಎಂದಲ್ಲವೆ ದೇವೇಂದ್ರಬಾಬು? ರೇವತಿಯ ಅಪಹರಣದ ಸಂಬಂಧವಾಗಿ ಅನೇಕ ರಹಸ್ಯಗಳು ಅಡಗಿವೆ ಎಂದು ತೋರುತ್ತದೆ. ಈಗ ಅದನ್ನು ತಾವೂ ಕೂಡ ಕೊಂಚ ಕೊಂಚ ತಿಳಿದಿರಬಹುದು. ರೇವತಿಯ ಚಿಕ್ಕಪ್ಪನಾದ ಗೋಪಾಲವಸುವು ಎಷ್ಟು ದೂರ ಒಳ್ಳೆಯವನೆಂದು ತಾವು ತಿಳಿದಿರುವಿರೋ ಅಷ್ಟು ದೂರ ಅತನು ಒಳ್ಳೆಯವನಾಗಿರಕೂಡದೆಂಬುದೇ ಈಶ್ವರನ ಇಚ್ಛೆಯಾಗಿರಬೇಕೆಂದು ತೋರುತ್ತದೆ. ಎಂದಾದರೊಂದು ದಿನ ಅವನು ಅರಿಂದಮನೆಂಬ ಒರೆಗಲ್ಲಿಗೆ ಸಿಕ್ಕಿದಾಗ ಹಿತತ್ವೆಯೋ ಚಿನ್ನವೋ ಗೊತ್ತಾಗುವುದು, ಎಂದನು.

ಆಗಲೇ ಇಬ್ಬರೂ ತೋಟದೊಳಕ್ಕೆ ಪ್ರವೇಶಿಸಿದರು. ಸರಿಯಾಗಿ ನೋಡಿಕೊಳ್ಳುವರಿಲ್ಲದೆ ಉದ್ಯಾನವು ಅರಣ್ಯದ ಹಾಗೆ ಭಯಂಕರವಾಗಿದೆ; ಕಾಡುಗಿಡ ಪುರಗಳಿಂದಲೂ, ಎಲೆ ಬಳ್ಳಿಗಳಿಂದಲೂ, ಮುಳ್ಳು ಪೊದೆಗಳಿಂದಲೂ ಆ ಉದ್ಯಾನವು ಮನುಷ್ಯನು ಸಾಧಾರಣವಾಗಿ ಹೊಗುವುದಕ್ಕಾಗದಹಾಗಾಗಿದೆ. ಸ್ವಲ್ಪದೂರ ಮುಂದರಿದು ಹೋದ ಮೇಲೆ ಪುರಗಳ ಪೊಲ್ಲಾಗದಲ್ಲಿ ಆ ತೋಟದ ಮನೆಯ ಪೊಲ್ಲಾವಣಿಯು ಕೊಂಚ ಭಾಗವು ಕಾಣಿಸಿತು. ಇಬ್ಬರೂ ಬೇಗ ಬೇಗನೆ ಹೊರಟರು. ಪಶ್ಚಿಮಕಡೆ, ಮನೆಯ ಎರಡನೆಯ ಅಂತಸ್ತಿನ ಒಂದು ಕಿಟಕಿ ತೆರದಿದ್ದು ದನ್ನು ಅವರು ಸ್ವಲ್ಪ ದೂರದಿಂದಲೇ ಕಂಡರು. ಅಲ್ಲಿ ರೂಪಲಾವಣ್ಯ ಮಯಿಯೂ ಮುಕ್ತಕೇಶಿಯೂ ಆದ ನಾರೀಮೂರ್ತಿಯು ನಿಂತಿರು

ವುದನ್ನೂ ನೋಡಿದರು. ಅರಿಂದಮನು ಅವಳನ್ನು ನೋಡಿ ದೂರದಿಂದಲೇ ಗುರ್ತಿಸಿದನು. ಇವಳೇ ಆ ಮತಿಬೀಬಿ—ಸ್ವಾಮಿಹಂತ್ರಿ, ಮಾನವ ರೂಪದ ದಾನವಿ, ವಿಧಾತನ ಅತ್ಯದ್ಭುತವಾದೊಂದು ಸೃಷ್ಟಿ. ದೇವೇಂದ್ರ ವಿಜಯನೂ ಅವಳನ್ನು ಗುರ್ತಿಸಿದನು. ಗುರ್ತಿಸಿದವನೇ ನಡುಗಿದನು. ಅವನು ಅರಿಂದಮನನ್ನು ಕುರಿತು 'ಮಹಾಶಯ, ಇವಳೇ ಆ ಡಾಕಿನೀ, ನಾನು ಇವಳ ಮಾತಿನಿಂದಲೇ ಮೋಸಹೋದದ್ದು?' ಎಂದು ಹೇಳಿದನು.

ಅರಿಂದಮ—'ಸರಿ, ನಾನು ಇವಳನ್ನು ಚೆನ್ನಾಗಿ ಬಲ್ಲೆ; ಈಗ ಒಂದು ಕೆಲಸಮಾಡೋಣಾಗಲಿ, ಈಗ ನಾವು ಈ ಕಡೆಯಿಂದ ಹೋಗದೆ ಆ ಉತ್ತರದಿಕ್ಕಿನ ಹಾದಿ ಹಿಡಿದು ಹೋಗೋಣ; ಹಾಗೆ ಮಾಡಿದರೆ ಜುಮಲೆಯು ನಮ್ಮನ್ನು ಕಾಣಲಾರಳು; ಅಲ್ಲದೆ ನಾವೂ ಕೂಡ ಯಾರ ದೃಷ್ಟಿಗೂ ಬೀಳದೆ ಮನೆಯೊಳಕ್ಕೆ ಹೋಗಬಹುದು, ಎಂದು ಮೆಲ್ಲಗೆ ಹೇಳಿದನು.

ಅರಿಂದಮನು ಹೇಳಿದಂತೆ ಕೆಲಸವಾಯಿತು. ಹೇಗೆ ಮಾಡಿದರೆ ಜುಮಲೆಯು ಅವರನ್ನು ಕಾಣುವುದಿಲ್ಲವೋ ಆ ರೀತಿಯಲ್ಲಿ ಅವರು ಮತ್ತೊಂದು ಕಡೆಯಿಂದ ಮನೆಯೊಳಕ್ಕೆ ಪ್ರವೇಶ ಮಾಡಿದರು. ಹಾಗೆಯೇ ನೇರವಾಗಿ ಮೇಲಕ್ಕೆ ಹತ್ತಿ ಯಾವ ಕೊಠಡಿಯಲ್ಲಿ ಜುಮಲೆಯು ನಿಂತಿದ್ದಳೋ ಆ ಕೊಠಡಿಯೊಳಕ್ಕೆ ನುಗ್ಗಿದರು. ಅರಿಂದಮನು ಜುಮಲೆಯನ್ನು ಹಿಡಿಯುವುದಕ್ಕೆ ಹೋದಹಾಗೆಲ್ಲ ಜುಮಲೆಯು ಪಕ್ಕದ ಕೊಠಡಿಗೆ ಓಡಿಹೋದಳು. ಹಾಗೆಯೇ ಅಲ್ಲಿಂದ ಹೊರಕ್ಕೆ ಬಂದು ಹೊರಗಡೆ ಕೈಸಾಲೆಗೆ ನುಗ್ಗಿ ಕೊಠಡಿಯಿಂದ ಕೊಠಡಿಗೆ ಓಡ ತೊಡಗಿದಳು. ಅರಿಂದಮನೂ ಕೂಡ ಅವಳ ಹಿಂದೆಯೇ ಓಡತೊಡ ಗಿದನು. ಕಟ್ಟಕಡೆಗೆ ಜುಮಲೆಯು ಒಂದು ಕೊಠಡಿಯೊಳಕ್ಕೆ ಓಡಿ ಹೋಗಿ, ಬಾಗಿಲು ಮುಚ್ಚಿ ಒಳಗಿನಿಂದ ಅಗಳಿಹಾಕಿದಳು. ಅದೇ ಮುಹೂರ್ತದಲ್ಲಿಯೇ ಅರಿಂದಮನು ಆ ಬಾಗಿಲನ್ನು ಒದ್ದ ಜೋರಿಗೆ ಆ ಬಾಗಿಲು ಆ ಒಂದೇ ಏಟಿಗೆ ತಾಳಲಾರದೆ ಹೋಗಿ ಏಕಟತರವಾಗಿ

ಶಬ್ದಮಾಡುತ್ತ ಒಡೆದು ಬಿದ್ದಿತು. ಅರಿಂದಮನು ಕೊಠಡಿಯೊಳಕ್ಕೆ ಒಂದೇ ಹಾರು ಹಾರಿ ಕುಪ್ಪಳಿಸಿದನು. ಎಂತಹ ಆಶ್ಚರ್ಯ! ಅಲ್ಲಿ ಯಾರೂ ಇಲ್ಲವಲ್ಲ! ಜುಮಲೆಯೂ ಇಲ್ಲ. ಅಥವಾ ಅವಳಿದ್ದ ಕುರುಹು ಗಳೂ ಇಲ್ಲ. ಆ ಕೊಠಡಿಯಿಂದ ಹೊರಕ್ಕೆ ಹೋಗುವುದಕ್ಕೆ ಮತ್ತೆ ಯಾವ ಬಾಗಿಲೂ ಇರಲಿಲ್ಲ; ಇದ್ದ ಒಂದೆರಡು ಕಿಟಕಿಗಳಿಗೂ ಕಬ್ಬಿಣದ ಸಲಾಕಿಗಳನ್ನು ಹಾಕಿದೆ; ಆ ಸಲಾಕಿಗಳಾದರೂ ಬಹು ಭದ್ರತರವಾಗಿ ಬಿಗಿಸಲ್ಪಟ್ಟಿವೆ. ಅರಿಂದಮನು ಅವೆಲ್ಲವನ್ನೂ ಚೆನ್ನಾಗಿ ಅಲ್ಲಾಡಿಸಿ ನೋಡಿ ಪರೀಕ್ಷಿಸಿ ನಿಕ್ಕುತೋರದವನಾದನು; ಅರಿಂದಮನಿಗೆ ಜುಮಲೆಯ ಪೈಶಾಚಶಕ್ತಿಯ ವಿಚಾರದಲ್ಲಿ ಯಾವುದೊಂದು ಸಂದೇಹವೂ ಉಳಿಯಲಿಲ್ಲ. ಒಂದೊಂದಾಗಿ ಅವನು ಕೊಠಡಿಯ ನಾಲ್ಕು ಕಡೆ ಗಳನ್ನೂ ಪರೀಕ್ಷಿಸತೊಡಗಿದನು. ಜುಮಲೆಯಿರುವ ಸ್ಥಳತಿಳಿಯಲಿಲ್ಲ. ಕೊಠಡಿಯಲ್ಲಿ ಅಂತಹ ಯಾವ ಪದಾರ್ಥಗಳೂ ಇರಲಿಲ್ಲ. ಒಂದುಕಡೆ ಒಂದು ಅಲಮಾರು, ಒಂದು ಸಣ್ಣ ಮಂಚದ ಮೇಲೆ ಸಣ್ಣದೊಂದು ಹಾಸುಗೆ—ಇಷ್ಟುಪಾತ್ರ ಅಲ್ಲಿದ್ದುವು. ಅಲಮಾರು ಸ್ವಲ್ಪ ತೆರೆದಿತ್ತು; ಅದನ್ನು ಅವನು ಚೆನ್ನಾಗಿ ತೆರೆದುನೋಡಿದನು. ಅದರಲ್ಲಿಯೂ ಜುಮ ಲೆಯು ಕಂಡುಬರಲಿಲ್ಲ; ಅರಿಂದಮನಿಗೆ ಏನೂ ತೋರದ ಹಾಗಾಗಿ ಅಲ್ಲಿಯೇ ನಿಂತು ಭೂಪ್ರಾಕಾಶಗಳನ್ನು ನೋಡತೊಡಗಿದನು. ಆಗ ಜುಮಲೆಯ ಪುನುಷ್ಯತ್ವದ ವಿಷಯದಲ್ಲಿ ಅವನಿಗೆ ತುಂಬ ಸಂಶಯವು ಅಂಕುರಿಸಿತು.

ಒಂದೂ ಕಾಣದ ರಹಸ್ಯಪೂರ್ಣವಾದ ಅದ್ಭುತ ನಾಟಕದ ಅಲೌಕಿಕ ದೃಶ್ಯವೊಂದು ಇಲ್ಲಿ ಅಭಿನಯಿಸಲ್ಪಟ್ಟ ಹಾಗೆಯೇ, ಅದೇ ಸಮಯದಲ್ಲಿ, ಇದೇ ತರದ ಮತ್ತೊಂದು ಅಭಿನಯವು ಇನ್ನೊಂದು ಕಡೆ ನಡೆಯು ತ್ತಿದ್ದಿತು.

ನಾಲ್ಕನೆಯ ಪರಿಚ್ಛೇದ

ಪಾತಾಳ ಪ್ರವೇಶ

ಜುಮಲೆಯನ್ನು ದಸ್ತಗಿರಿಮಾಡುವುದಕ್ಕಾಗಿ ಅರಿಂದಮನು ಹೊರಟ ಸಮಯದಲ್ಲಿ ದೇವೇಂದ್ರವಿಜಯನು ಒಬ್ಬ ಹೆಂಗಸನ್ನು ನೆರೆ ಹಿಡಿಯುವುದಕ್ಕೆ ತಮ್ಮಂತಹ ಇಬ್ಬರು ವೀರಪುರುಷರು ಪ್ರಯತ್ನಪರರಾಗುವುದು ನಾಚುಗೆಗೇಡೆಂದೂ, ತನ್ನ ಸಹಾಯವು ಅನಾವಶ್ಯಕವೆಂದೂ ಭಾವಿಸಿ ಅಲ್ಲಿಯೇ ನಿಂತುಕೊಂಡಿದ್ದನು. ಹತಭಾಗ್ಯನಾದ ದೇವೇಂದ್ರವಿಜಯನು ಆ "ಒಬ್ಬ ಹೆಂಗಸಿನಿಂದ" ಅಷ್ಟೊಂದು ಅನುಭವವನ್ನು ಹೊಂದಿದ್ದೂ ಕೂಡ, ಅವಳು ಸಾಮಾನ್ಯಳಾದೊಬ್ಬ ಹೆಂಗಸಿನಂತೆ ಅಲ್ಲ; ಅವಳು ಮನುಷ್ಯರೂಪದ ರಾಕ್ಷಸಿ; ರಾಕ್ಷಸಿಗಿಂತಲೂ ಭಯಂಕರಳು ಎಂಬುದನ್ನು ತಿಳಿಯಲಾರದೆ ಇದ್ದನು. ಅರಿಂದಮನು ಜುಮಲೆಯನ್ನು ನಿಜವಾಗಿಯೂ ದಸ್ತಗಿರಿಮಾಡುತ್ತಾನೆ; ಅಷ್ಟರೊಳಗಾಗಿ ತಾನು ಆ ಫೂಲಸಾಹೇಬನನ್ನು ಹಿಡಿದುಬಿಟ್ಟರೆ ಒಂದು ಕೆಲಸವು ಸಂಪೂರ್ಣವಾಗಿ ಮುಗಿದಂತಾಗಿ ಇದರಿಂದ ಅರಿಂದಮನಿಗೂ ಸ್ವಲ್ಪ ಮಟ್ಟಿಗೆ ಸಹಾಯವಾದೀತು. ತನ್ನ ಸಹಾಯವನ್ನು ಕೋರಿಯೇ ಅಲ್ಲವೇ ಅರಿಂದಮನು ತನ್ನನ್ನು ಇಲ್ಲಿಗೆ ಕರೆದುಕೊಂಡು ಬಂದದ್ದು. ಇಂತಹ ಸಂದರ್ಭದಲ್ಲಿ ತಾನು ಅತನಿಗೆ ಸಹಾಯ ಮಾಡದಿದ್ದರೆ ಹೇಗುತ್ತದೆ—ಎಂದು ಮುಂತಾಗಿ ದೇವೇಂದ್ರವಿಜಯನು ಆಲೋಚಿಸಿ, ತಾನು ಫೂಲಸಾಹೇಬನನ್ನು ಹುಡುಕುವುದಕ್ಕೆ ತೊಡಗಿದನು.

ಆ ಸಮಯದಲ್ಲಿ, ಕೆಳಗಡೆ, ಯಾರದೋ ಹೆಜ್ಜೆಯು ಸದ್ದಾಯಿತು. ಕೂಡಲೆ ಅನುಸಂಧಾನಮಾಡುತ್ತಿದ್ದ ದೇವೇಂದ್ರವಿಜಯನು ತಾನು ಅರಸುತ್ತಿದ್ದ ಫೂಲಸಾಹೇಬನಿಗೆ ಸರಿಯಾದ ಪ್ರತೀಕಾರಮಾಡಬೇಕೆಂಬ ಆತುರದಿಂದ ಕೆಳಕ್ಕೆ ಇಳಿದು ಬಂದನು; ಅಲ್ಲಿ ನೋಡಿದನು. ಕಳೆದ ರಾತ್ರಿಯಲ್ಲಿ ಮಹಾರೋಗಿಯಂತಿದ್ದ ದೊಡ್ಡಮನುಷ್ಯನು ಇವನ ಕಡೆ ನೋಡದೆ ಒಂದು ಕೊಠಡಿಯೊಳಕ್ಕೆ ಹೋದನು. ಇದನ್ನು

ನೋಡಿದ ದೇವೇಂದ್ರವಿಜಯನು ಉತ್ತರಕ್ಷಣದಲ್ಲಿಯೇ ಓಡಿಹೋಗಿ, ಆ ಕೊಠಡಿಯ ಬಾಗಿಲ ಬಳಿ ನಿಂತುಕೊಂಡನು.

ದೇವೇಂದ್ರವಿಜಯನು ಹಠಾತ್ತಾಗಿ ಇದಿರಿಗೆ ಬಂದದ್ದನ್ನು ಕಂಡು ಫೂಲಸಾಹೇಬನು ಕೊಂಚವಾದರೂ ವಿಸ್ಮಯಪಡಲಿಲ್ಲ. ದೇವೇಂದ್ರವಿಜಯನ ಮುಖವನ್ನು ನೋಡಿ ಮಂದಹಾಸದೊಂದಿಗೆ, ಏನಯ್ಯಾ, ದೇವೇಂದ್ರಬಾಬು, ಪುನಃ ಬಂದುದು ಯಾವ ಉದ್ದೇಶದಿಂದ? ಎಂದು ಕೇಳಿದನು.

ದೇವೇಂದ್ರವಿಜಯನು—ಪುನಃ ಬಂದುದರ ಉದ್ದೇಶವೆ? ಅದು ಈಗಲೇ ತಿಳಿಯಬರುವುದು; ಘಾತಕಿ, ನಿನ್ನಿಂದ ಸರಿಯಾದ ಬುದ್ಧಿಗಲಿಯುವೆ, ಎಂದು ಸಿಡಿಲಿನಂತೆ ಗರ್ಜಿಸಿದನು.

ಫೂಲಸಾಹೇಬನು ಮೊದಲಿನಂತೆಯೇ ಮಂದಹಾಸದೊಡನೆ,—ಸರಿ, ನೀನು ನನಗೆ ಬುದ್ಧಿಗಲಿಸುವುದಕ್ಕಾಗಿಯೇ ಬಂದೆಯೇನು? ಭಲಾ, ಭಲಾ? ಕೇಳಿ ಬಹು ಸಂತೋಷವಾಯಿತು; ಒಳ್ಳೆಯದು, ಬುದ್ಧಿಗಲಿಸಲು ನೀನು ಒಬ್ಬನೇ ಬಂದಿರುವೆಯೋ ಅಥವಾ ನಿನ್ನ ಸಂಗಡ ಇನ್ನೂ ಯಾರಾದರೂ ಬಂದಿರುವರೋ? ಅರಿಂದಮನು ಬರಲಿಲ್ಲವೆ? ಎಂದು ಕೇಳಿದನು.

ದೇವೇಂದ್ರವಿಜಯನು ಆ ಘಾತಕಿಗೆ ಕಿವಿಗೊಡದೆ ಜೇಬಿನಿಂದ ಪಿಸ್ತೂಲನ್ನು ಹೊರಕ್ಕೆ ತೆಗೆದನು. ಆ ಪಿಸ್ತೂಲನ್ನು ಅವನು ಅರಿಂದಮನಿಂದ ಕೇಳಿ ತೆಗೆದುಕೊಂಡಿದ್ದನು. ಆ ಪಿಸ್ತೂಲನ್ನು ಫೂಲಸಾಹೇಬನ ತಲೆಗೆ ಗುರಿಯಿಟ್ಟು, ಓಡಿಹೋಗುವ ಪ್ರಯತ್ನ ಮಾಡುವೆಯಾದರೆ, ಇದರಿಂದ ನಿನ್ನ ತಲೆಯನ್ನು ಒಡೆದು ಹಾಕುತ್ತೇನೆ, ಎಂದು ಹೇಳಿದನು.

ಫೂಲಸಾಹೇಬನು ಸ್ವಲ್ಪವಾದರೂ ಭಯಪಡದೆ ಮೊದಲಿನಂತೆ ನಗೆಮೊಗದಿಂದ, ಇಲ್ಲ, ಏತಕ್ಕೆ ಓಡಲಿ? ನಿನ್ನ ಭಯದಿಂದಲೆ? ಅಥವಾ ನಿನ್ನ ಪಿಸ್ತೂಲಿನ ಭಯದಿಂದಲೋ? ನನ್ನನ್ನು ಸೆರೆಹಿಡಿಯಬೇಕೆಂದಿದ್ದೀಯಾ? ಎಂದು ಹೇಳಿದನು.

ದೇವೇಂದ್ರ—ಹೂಂ.

ಫೂಲ.—ಯಾವಾಗ?

ದೇವೇಂದ್ರ—ಈಗಲೇ.

ಫೂಲಸಾಹೇಬನು ನಗುವುದಕ್ಕೆ ಉಪಕ್ರಮಿಸಿದನು—ಅದೇ ರೀತಿಯಾದ ಪರಿಹಾಸಕರವಾದ ಮಂದಹಾಸ! ಹೇಳಿದನು,—ನೀನು ಏನೆಂದು ತಿಳಿದಿರುವೆ, ನೀನು ನನ್ನ ಕೈಗೆ ಕೋಳವನ್ನು ತೊಡಿಸತಕ್ಕವನು, ನಾನು ಹೀಗೆಯೇ ಸಾಧು ಪ್ರಾಣಿಯ ಹಾಗೆ ಸುಮ್ಮನೆ ನಿಂತು ಕೋಳಕ್ಕೆ ಕೈನೀಡತಕ್ಕವನು, ಎಂದುಕೊಂಡಿದ್ದೀಯಾ?

ದೇವೇಂದ್ರವಿಜಯ—ನೀನು ಹಾಗೆಯೇ ಮಾಡಬೇಕಾಗುವುದು.

ಫೂಲಸಾಹೇಬ—ಒಂದು ವೇಳೆ ಹಾಗೆ ಮಾಡದಿದ್ದರೆ?

ದೇವೇಂದ್ರ—ನಿನ್ನನ್ನು ಹೊಡೆದುಹಾಕುತ್ತೇನೆ.

ಫೂಲಸಾಹೇಬ—ಜೋಡಿ, ಅಷ್ಟೊಂದು ಪ್ರಯಾಸಪಡಬೇಕಾದ್ದಿಲ್ಲ. ಅದೋ ನಾನು ಈ ಸ್ಥಳದಿಂದ ಕದಲುವುದಿಲ್ಲ; ನಿನ್ನ ಕೋರಿಕೆಯನ್ನು ಕೈಗೂಡಿಸಿಕೋ. ಆದರೆ, ದೇವೇಂದ್ರ, ನಾನೇನೋ ಅಲುಗುವುದಿಲ್ಲ; ನೀನು ನನ್ನನ್ನು ಈ ಸ್ಥಳದಿಂದ ಒಂದು ಕೂದಲ ಎಳೆಯುಷ್ಟಾದರೂ ಕದಲಿಸಬಲ್ಲೆಯೆಂದು ನನಗೆ ತೋರುವುದಿಲ್ಲ.

ದೇವೇಂದ್ರವಿಜಯನು, ಅದರ ಸನ್ನಾಹಗಳು ನನಗಿರಲಿ, ಎಂದು ಹೇಳಿ ಫೂಲಸಾಹೇಬನನ್ನು ಪಿಡಿವುದಕ್ಕೆಂದು ಆತುರದಿಂದ ಮುಂದರಿದನು. ಹಠಾತ್ತಾಗಿ ಏಕಟವಾದ ಒಂದು ಶಬ್ದವಾಯಿತು. ಅದರ ಸಂಗಡಲೇ ಎವೆಯಿಕ್ಕುವುದರೊಳಗಾಗಿ ದೇವೇಂದ್ರವಿಜಯನ ಶರೀರ ವೆಲ್ಲವೂ, ಆ ಸ್ಥಳದಿಂದ, ಭೂಮಿಯೊಳಕ್ಕೆ ಅದೃಶ್ಯವಾಗಿ ಹೋಯಿತು.

ಫೂಲಸಾಹೇಬನು ನಗುತ ನಗುತ ಕೊಠಡಿಯಿಂದ ಹೊರಗೆ ಬಂದನು.

ಐದನೆಯ ಪರಿಚ್ಛೇದ

ಸಿಂಹ ಮತ್ತೂ ಶಾರ್ದೂಲ

ದೇವೇಂದ್ರವಿಜಯನು ಹಠಾತ್ತಾಗಿ ಪಾತಾಳ ಪ್ರವೇಶಮಾಡಿದುದನ್ನೂ ತಾನು ಗೆದ್ದ ಸಂಗತಿಯನ್ನೂ ಜುಮಲೆಗೆ ಹೇಳುವುದಕ್ಕೋಸ್ಕರ ಫೂಲಸಾಹೇಬನು ಅವಸರವಸರವಾಗಿ ಉಪ್ಪರಿಗೆಗೆ ಹತ್ತಿ ಹೋಗಿ, ಯಾವ ಕೊಠಡಿಯಲ್ಲಿ ಜುಮಲೆಯು ಅರಿಂದಮನನ್ನು ಒಂದೇ ತಡೆವೆಗೆ ಮುಂಕನನ್ನಾಗಿ ಮಾಡಿ ಮಾಯವಾಗಿದ್ದಳೋ ಅದೇ ಕೊಠಡಿಯ ಕಡೆಗೆ ಹೋದನು. ಆದೇ ಜುಮಲೆಯು ಮಲಗುವ ಮನೆ. ಅರಿಂದಮನೂ ದೇವೇಂದ್ರವಿಜಯನೂ ಮನೆಯೊಳಕ್ಕೆ ಪ್ರವೇಶ ಮಾಡಿದಾಗ ಫೂಲಸಾಹೇಬನು ಮನೆಯಲ್ಲಿರಲಿಲ್ಲ; ಆದ್ದರಿಂದಲೇ ತನ್ನ ಪರಮಶತ್ರುವಾದ ಅರಿಂದಮನ ಆಗಮನ ವಿಚಾರವೂ ಜುಮಲೆಯ ಅಂತರ್ಧಾನವಿಚಾರವೂ ಫೂಲಸಾಹೇಬನಿಗೆ ಸ್ವಲ್ಪವಾದರೂ ತಿಳಿಯವು. ಫೂಲಸಾಹೇಬನು ಜುಮಲೆಯ ಶಯನಮಂದಿರದ ಒಳಗೆ ಬಂದು ನೋಡಿದನು. ಅಲ್ಲಿ ಜುಮಲೆ ಇರಲಿಲ್ಲ. ಅದರ ರಕ್ಕೆಯ ಬಾಗಿಲುಗಳು ಮುರಿದುಬಿದ್ದಿವೆ. ಫೂಲಸಾಹೇಬನು ವಿಸ್ಮಯಗೊಂಡವನೇ ಕೊಠಡಿಯೊಳಕ್ಕೆ ಹೋದನು. ಕೊಠಡಿಯೊಳಗೆ ಇದಿರುಭಾಗದ ಮೂಲೆಯಲ್ಲಿಯೇ ಅರಿಂದಮನು ನಿಂತಿದ್ದನು; ಫೂಲಸಾಹೇಬನಿಗೆ ಹೊರಗಡೆಯಿಂದ ಅರಿಂದಮನು ಕಾಣಿಸಲಿಲ್ಲ; ಆದರೆ, ಒಳಕ್ಕೆ ಹೋದನೋಲೆ, ಹಠಾತ್ತಾಗಿ ಅರಿಂದಮನನ್ನು ಕಂಡು ಸ್ತಂಭಿತನಾದನು. ಆಗ ಆ ಭಾವವನ್ನು ಅಡಗಿಸಿಕೊಂಡು ಫೂಲಸಾಹೇಬನು ಸ್ನೇಹವಾದ ಸ್ವರದಿಂದ,—ಇದೇನು ಅರಿಂದಮ ಬಾಬುಗಳು! ಹಠಾತ್ತಾಗಿ ದಯಮಾಡಿಸಿದ್ದು ಯಾವ ಉದ್ದೇಶದಿಂದಲೊ? ಎಂದು ಕೇಳಿದನು.

"ಬಹು ದಿನಗಳಿಂದಲೂ ಮಹಾಶಯರ ವರ್ತಮಾನಗಳೊಂದೂ ತಿಳಿಯಲಿಲ್ಲ. ಒಂದು ಸಲ ದರ್ಶನ ಮಾಡಿಕೊಂಡು ಹೋಗೋಣವೆಂದು ಬಂದೆ." ಎಂದು ಅರಿಂದಮನು ನಗುತ್ತಾ ಉತ್ತರ ಹೇಳಿದನು.

ಫೂಲಸಾಹೇಬನು, ಬಂದು ಸಲ ಹೋ, ಹೋ ! ಎಂದು ನಕ್ಕನು. ಆದಾದಮೇಲೆ ಅವನು ನಮ್ಮಿಬ್ಬರಲ್ಲಿ ಒಬ್ಬರನ್ನೊಬ್ಬರು ನೋಡದಿರುವುದಾದರೆ ಪರಸ್ಪರ ಬಹು ಸಂಕಟ ಸಂಭವಿಸುವ ಮಟ್ಟಿಗೆ ನಮ್ಮಿಬ್ಬರ ಮಧ್ಯೆ ಮೈತ್ರಿ ಎಂಬುದು ಘನೀಭೂತವಾಗಿರುತ್ತದೆ. ನಾನೂ ಕೂಡ ನಿನ್ನನ್ನು ಕಾಣದೆ ತುಂಬ ಕಾತರಿಸುತ್ತಿದ್ದೆ. ದೇವೇಂದ್ರವಿಜಯನು ನನ್ನ ಸ್ನೇಹಪತ್ರವನ್ನು ತಂದುಕೊಡಲಿಲ್ಲವೇ ? ಎಂದು ಕೇಳಿದನು.

ಅರಿಂದಮ—ಹೂಂ, ತಂದುಕೊಟ್ಟಿದ್ದರೆ ತಾನೇ ಏನು ?

ಫೂಲಸಾಹೇಬ—ಆ ಕಾಗದ ಸೇರಿದನಂತರವೇ ನೀನು ಬಂದದ್ದು ? ಬಹು ಬೇಗನೆ ಬಂದೆ; ನೀನು ಇಷ್ಟು ಬೇಗ ಬರುವೆಯೆಂದು ನಾನು ನಂಬಿರಲಿಲ್ಲ. ನೀನು ಯಾವ ಕೆಲಸದಲ್ಲಿ ನಿಯುಕ್ತನಾಗಿರುವೆಯೋ ಅದರಲ್ಲಿ ಹೀಗೆ ತತ್ಪರನಾಗಿರಬೇಕಾದದ್ದು ನಿನಗೆ ಅತ್ಯಾವಶ್ಯಕವಾದದ್ದು. ಏನಾದರೂ ಆಗಲಿ, ನೀನು ದೇವೇಂದ್ರವಿಜಯನನ್ನು ಸಂಗಡ ಕರೆದು ತಂದದ್ದು ಸರಿಯಾಗಲಿಲ್ಲ; ನೀನು ಹಾಗೆ ಮಾಡದೆ ಇದ್ದಿದ್ದರೆ ಆ ಬಡ ಪ್ರಾಣಿಯು ಇಂತಹ ಅಕಾಲದಲ್ಲಿ ಪ್ರಾಣಕಳೆದುಕೊಳ್ಳಬೇಕಾಗಿ ಬರುತ್ತಿರಲಿಲ್ಲ. ಅವನು ಈ ಬಾರಿ ಬಹುಮಟ್ಟಿಗೆ ಕಾವೇರಿ ಬಂದಿದ್ದನು. ಅದಕ್ಕಾಗಿ ಅವನನ್ನು ಬಂಡೇ ಏಟಿಗೆ ತಣ್ಣಗೆ ಮಾಡಬೇಕಾಯಿತು.

ಫೂಲಸಾಹೇಬನ ಮಾತುಕೇಳಿ ಅರಿಂದಮನು ಭಯಪಟ್ಟನು ; ನೀನೇನು ಅವನನ್ನು ಕೊಂದುಬಿಟ್ಟೆಯಾ ? ಎಂದು ಕೇಳಿದನು.

ಫೂಲ.—ನಾನೇಕೆ ಅವನನ್ನು ಕೊಲ್ಲುವುದಕ್ಕೆ ಹೋಗಲಿ ? ಅವನು ತನ್ನಷ್ಟಕ್ಕೆ ತಾನೇ ಹತ್ಯೆ ಮಾಡಿಕೊಂಡನು; ಅವನು ಅಷ್ಟು ಬುದ್ಧಿವಂತ! ನಾನು ಅವನನ್ನು ಮುಟ್ಟಿದ್ದು ಸಹಾ ಇಲ್ಲ. ಅವನ ಗತಿ ಏನಾದರೂ ಆಗಲಿ, ಅರಿಂದಮಬಾಬೂ, ನಿನ್ನ ಬಳಿ ಏನಾದರೂ ಅಸ್ತ್ರ ಶಸ್ತ್ರಗಳುಂಟೊ ?

ಅರಿಂದಮ—ಉಂಟು; ಏತಕ್ಕೆ ?

ಫೂಲ.—ಅವು ಇರತಕ್ಕುದೇ ನ್ಯಾಯ. ನಾನು ಈಗ ಇಲ್ಲಿಂದ ಹೊರಟುಹೋಗುವುದಾದರೆ ಪ್ರಾಯಃ ಅವುಗಳಲ್ಲಿ ಒಂದಲ್ಲದಿದ್ದರೆ

ಬಂದರ ರುಚಿಯನ್ನು ನೋಡಬೇಕಾಗಿ ಬರುವುದಲ್ಲವೆ? ಆಷ್ಟೇನು, ನೀನು ನನ್ನನ್ನು ಕೊಂದೇಹಾಕಬಹುದು.

ಅರಿಂದಮ—ನನಗೆ ಆ ಕೋರಿಕೆ ಇಲ್ಲ.

ಫೂಲಸಾಹೇಬ— (ಗಟ್ಟಿಯಾಗಿ ನಕ್ಕು) ಅರಿಂದಮ, ಹಠಾತ್ತಾಗಿ ಇಷ್ಟು ದಯಾಳುತ್ವವೆಲ್ಲಿಂದ ಬಂದಿತು?

ಅರಿಂದಮ—ಹಾಗಾದರೆ ನಿನ್ನಲ್ಲಿ ಯಾವ ಅಸ್ತ್ರವೂ ಇಲ್ಲವೆ?

ಫೂಲ.—ನನ್ನ ದುರದೃಷ್ಟ, ನಾನು ಈಗ ನಿರಸ್ತ್ರನಾಗಿದ್ದೇನೆ. ಇಲ್ಲದಿದ್ದಪಕ್ಷದಲ್ಲಿ ನಿನಗೆ ಈ ರೀತಿ ಪ್ರಶ್ನೆ ಮಾಡುವ ಕಷ್ಟ ಕೊಡತ್ತಿರಲಿಲ್ಲ.

ಅರಿಂದಮ—(ನಗುತ್ತಾ) ಅದು ಹೇಗೆ?

ಫೂಲ.—ಇದ್ದಿದ್ದಪಕ್ಷದಲ್ಲಿ ನೀನು ನನ್ನ ದೃಷ್ಟಿಗೋಚರನಾದ ಕೂಡಲೇ ನಾನು ನಿನ್ನನ್ನು ಈ ಪ್ರಪಂಚದಿಂದ ಪಾರುಮಾಡುತ್ತಿದ್ದೆ.

ಅರಿಂದಮ—ಅದು ನಿಜ.

ಫೂಲ.—ಏನ್ನೂ ಕೊಂಚ ತಿಳಿದಿರಬೇಕೆಂದು ತೋರುತ್ತದೆ. ನಿನ್ನ ಪ್ರಾಣ ತೆಗೆಯುವುದಾಗಿ ನಾನು ಶಪಥಮಾಡಿದ್ದೇನೆ. ಸತ್ತರೆ ನಾನು ಸಾಯಬೇಕು, ಇಲ್ಲವೆ ನೀನು ಸಾಯುವೆ. ಇಷ್ಟರ ಮೇಲಾ, ಏಂದಾದರೂ ಸರಿ, ಪ್ರಾಣಸಹಿತನಾದ ಫೂಲಸಾಹೇಬನನ್ನು ನೀನು ಬಿಡಿಯಬಲ್ಲೆನೆಂಬ ಭಾವನೆಯೇ ಬೇಡ.

ಅರಿಂದಮ—ಈಗ ನಾನು ನಿನ್ನನ್ನು ದಸ್ತಗಿರಿಮಾಡಿದ ಪಕ್ಷದಲ್ಲಿ ಏನು ಮಾಡಬೇಕೆಂದಿರುವೆ?

ಫೂಲ.—ಅರಿಂದಮಬಾಬೂ, ಎಲ್ಲ ಸಮಯದಲ್ಲಿಯೂ ನಾನು ನನ್ನನ್ನು ಕಾಪಾಡಿಕೊಳ್ಳಬಲ್ಲೆ.

ಅರಿಂದಮ—ನಾನು ಈಗಲೇ ನಿನ್ನನ್ನು ದಸ್ತಗಿರಿ ಮಾಡುತ್ತೇನೆ.

ಫೂಲ.—ಬಾಯಿಮಾತಲ್ಲ, ಮನಸ್ಸಿನಲ್ಲಿ ಅಂದುಕೊಂಡಮಾತ್ರಕ್ಕೇ ಫೂಲಸಾಹೇಬನನ್ನು ಹಿಡಿದಹಾಗಾಗಲಿಲ್ಲ. ಅನೇಕರು ಈ ಪ್ರಯತ್ನ ಮಾಡಿದರು.

ಅರಿಂದಮ—ಆ ಅನೇಕರಲ್ಲಿ ನಾನೊಬ್ಬನೇ ಕಾರ್ಯಸಾಧನೆ ಮಾಡಿಕೊಳ್ಳತಕ್ಕವನು. ನಿನಗೆ ಈ ಮೊದಲೇ ಅಲ್ಪಸ್ವಲ್ಪ ನನ್ನ ಪರಿಚಯ ವಾಗಿದೆ.

ಫೂಲಸಾಹೇಬ—ನಾನು ನಿನ್ನನ್ನು ಚೆನ್ನಾಗಿ ಬಲ್ಲೆ; ನಿನ್ನ ಬುದ್ಧಿ, ಕುಶಲತೆ, ಖ್ಯಾತಿ, ನಿಪುಣತೆ, ಶಕ್ತಿ, ಸಾಹಸ, ದಕ್ಷತೆ—ಇವುಗಳಾವುವೂ ನನಗೆ ತಿಳಿಯದುದಲ್ಲ. ನಾನು ನಿನ್ನನ್ನು ಅಷ್ಟುದೂರ ಪರಿಚಯ ಮಾಡಿ ಕೊಂಡಿರುವುದರಿಂದಲೇ ನೀನು ನನಗೊಬ್ಬ ಯೋಗ್ಯನಾದ ಪ್ರತಿದ್ವಂದಿ ಯೆಂದೂ, ಆ ವಿಷಯದಲ್ಲಿ ಸಂಶಯವೇ ಇಲ್ಲವೆಂದೂ ಗ್ರಹಿಸಿದ್ದೇನೆ.

ಹೀಗೆಂದು ಹೇಳಿ ಫೂಲಸಾಹೇಬನು ಯಾವುದೊಂದು ಕಾರಣವೂ ಇಲ್ಲದೆ, ಇದ್ದಕ್ಕಿದ್ದಹಾಗೆಯೇ, ಹಾರಿ ಅರಿಂದಮನ ಕುತ್ತಿಗೆಯ ಮೇಲೆ ಬಿದ್ದನು. ಫೂಲಸಾಹೇಬನು ಹೀಗೆ ಹಠಾತ್ತಾಗಿ ತನ್ನನ್ನು ಆಕ್ರಮಣ ಮಾಡುವನೆಂದು ಅರಿಂದಮನು ಆಲೋಚಿಸಿರಲಿಲ್ಲ. ಅರಿಂದಮನು ಒಂದು ಕೈಯಲ್ಲಿ ಫೂಲಸಾಹೇಬನ ಕುತ್ತಿಗೆಯನ್ನು ಅದುಮಿ ಹಿಡಿದು, ಮತ್ತೊಂದು ಕೈಯಿಂದ ಅವನ ಹಣೆಯ ಮೇಲೆ ಒಂದು ಸಲ ಮುಷ್ಟಿ ಯಿಂದ ಬಲವಾಗಿ ಹೊಡೆದನು. ಸೆತ್ತಿಯೊಡೆದು ರಕ್ತ ಬಂದಿತು.

ಆಮೇಲೆ ಅವರಿಬ್ಬರಲ್ಲಿ, ಪರಸ್ಪರವಾಗಿ, ಮುಷ್ಟಿಪ್ರಹಾರಗಳ ಸರ್ವಣವಾಯಿತು. ದುಂ, ದಾಂ-ಠಕ್, ಠಕಾಸ್ ಶಬ್ದಗಳಿಂದ ಆ ಕೊಠಡಿ ಯಲ್ಲಿ ಕ್ಷಣಕ್ಷಣಕ್ಕೇ ಪ್ರತಿಧ್ವನಿಯಾಗುತ್ತಿದ್ದಿತು; ಮತ್ತೂ ಅವರು ಹೆಚ್ಚಿ ಹಾಕುವಾಗ 'ದುಪಾ-ದಾಪು, ಧಪಾ-ಧಪಾಸ್' ಶಬ್ದಗಳಿಂದ ಕಟ್ಟಡವೇ ಕಂಪಿಸತೊಡಗಿತು. ಇಷ್ಟೊಂದು ಪ್ರಯತ್ನಗಳಾದಾಗ್ಯೂ ಯಾರು ಯಾರನ್ನೂ ಸುಲಭವಾಗಿ ಕೈವಶಪಡಿಸಿಕೊಳ್ಳಲಾರದೇ ಹೋದ ದ್ದೊಂದು ತುಂಬಾ ವಿಸ್ಮಾದಕರವಾದ ವಿಷಯ. ಇದೇ ರೀತಿಯಾಗಿ

ಸುಮಾರು ಅರ್ಧಘಂಟೆ ಕಳೆಯಿತು. ಆದರೂ ಮಲ್ಲಯುದ್ಧವು ಒಂದೇ ರೀತಿಯಾಗಿ ನಡೆಯುತ್ತಲಿದೆ!

ಇಂತಹ ಸಮಯದಲ್ಲಿ ಫೂಲಸಾಹೇಬನು ಹಠಾತ್ತಾಗಿ ಉಡಿಗೆಯೊಳಗಿನಿಂದ ಸೊನೆಯಾದ ಒಂದು ಕಬ್ಬಿಣದ ಸಲಾಕೆಯನ್ನು ತೆಗೆದನು. ನೋಡುವುದಕ್ಕೆ ಅದು ಬಹು ಮಟ್ಟಿಗೆ ದಬ್ಬಳದ ಹಾಗೆಯೇ ಇದ್ದಿತು; ಮೇಲ್ಭಾಗದಲ್ಲಿ ಮಾತ್ರ ಕೊಂಚ ಬಾಗಿದ್ದಿತು. ಆ ಲೋಹದ ಕಂಬಿಯನ್ನು ನೋಡಿದ ಕೂಡಲೇ ಅದು ವಿಷಸಂಬಂಧವಾದದ್ದೆಂದೂ, ಅದರಿಂದ ಸ್ವಲ್ಪ ಗಾಯವಾದರೂ ಸುಲಭವಾಗಿ ಪ್ರಾಣ ತೆಗೆಯುವ ಶಕ್ತಿಯುಳ್ಳದೆಂದೂ ಅರಿಂದಮನು ಊಹಿಸಿದನು.

ಫೂಲಸಾಹೇಬನು ವಿಷಸಂಬಂಧವಾದ ಆ ಸಲಾಕೆಯನ್ನು ಅರಿಂದಮನ ಶರೀರಕ್ಕೆ ಚುಚ್ಚುವ ಪ್ರಯತ್ನ ಮಾಡಿದಾಗ, ಆ ಕ್ಷಣವೇ ಅರಿಂದಮನು ಎರಡು ಕೈಗಳಿಂದಲೂ ಫೂಲಸಾಹೇಬನ ಕೈಹಿಡಿದುಕೊಂಡನು. ಫೂಲಸಾಹೇಬನು ಮತ್ತೊಂದು ಕೈಯಿಂದ ಅರಿಂದಮನ ಮುಖದಮೇಲೆ, ಮೂಗಿನಮೇಲೆ, ಅಲ್ಲಿ ಇಲ್ಲಿ ಎಡೆಬಿಡದೆ ಅಪ್ಪಳಿಸುತ್ತಿದ್ದನು. ಆ ಎಲ್ಲ ಪೆಟ್ಟುಗಳ ಮಧ್ಯೆ ಒಂದು ಪೆಟ್ಟು ಗುರಿತಪ್ಪಿ ತನ್ನ ಆ ಕಬ್ಬಿಣದ ಸಲಾಕೆಯಮೇಲೆ ಬಿದ್ದು ಫೂಲಸಾಹೇಬನ ಇಷ್ಟೆ ಪ್ರಯತ್ನ ಪರಿಶ್ರಮಗಳೆಲ್ಲವನ್ನೂ ನಿಷ್ಫಲಮಾಡಿಬಿಟ್ಟಿತು. ಆ ವಿಷದ ಸಲಾಕೆಯು ಫೂಲಸಾಹೇಬನ ಮಣಿಬಂಧಕ್ಕೆ ನಾಟಿತು.

ಅದು ನಾಟಿದುದೇ ತಡ, ಅಲ್ಲಿಂದಾಚೆಗೆ ಅರಿಂದಮನು ಮತ್ತೇನೂ ಶ್ರಮಪಡಬೇಕಾಗಿಬರಲಿಲ್ಲ. ಒಡನೆಯೇ ಫೂಲಸಾಹೇಬನು ನೆಲಕ್ಕೆ ಉರುಳಿದನು. ಬಲಪೂರ್ಣವಾದ ಅವನ ಶರೀರವು ಒಂದೇ ಬಾರಿಗೆ ದುರ್ಬಲವಾಗಿಯೂ ಅಚೇತನವಾಗಿಯೂ ಆಗುತ್ತ ಬಂದಿತು.

ಅರಿಂದಮನು ವಿಸ್ಮಿತನಾದನು, ಸ್ತಂಭಿತನಾದನು, ನಡುಗಿದನು. ಹಾಗೆಯೇ ದೂರ ಸರಿದು ನಿಂತನು. ಹೃಷ್ಟಪುಷ್ಟವಾದ ತನ್ನ ಶರೀರದ ಪೂರ್ಣ ಬಲಕ್ಕಿಂತಲೂ, ಹರಿತವಾಗಿರುವ ದೊಡ್ಡದೊಂದು ಚೂರಿಗಿಂತಲೂ, ಅಗ್ನಿಯನ್ನೇ ಹೊಟ್ಟೆಯಲ್ಲಿಟ್ಟುಕೊಂಡಿರುವ ಸಾಕ್ಷಾತ್

ಮೃತ್ಯು ಸ್ವರೂಪಿಯಾದ ರಿವಾಲ್ವರಿಗಿಂತಲೂ * ಬಹು ಕ್ಷುದ್ರವಾದ ಪರಿಗಣಿಸುವುದಕ್ಕೂ ಯೋಗ್ಯವಲ್ಲದ ಅದೊಂದು ಜೂರು ಕಬ್ಬಿಣದ ಸಲಾಕಿಗೆ ಎಷ್ಟು ಹೆಚ್ಚಿನ ಶಕ್ತಿ ! ಎಂದು ಮನಸ್ಸಿನಲ್ಲಿಯೇ ಭಾವಿಸಿ ಆಶ್ಚರ್ಯಪಟ್ಟುಕೊಳ್ಳುತ್ತಿದ್ದನು. ಫೂಲಸಾಹೇಬನ ಮೈ ಮುಟ್ಟಿ ನೋಡಿದನು. ಅಲುಗದೇ ಇದ್ದ ಅವನ ಶರೀರವು ಆಗ ಬಲು ತಣ್ಣಗೂ, ಅತ್ಯಂತ ಕಠಿಣವಾಗಿಯೂ ತೋರಿತು. ಇಷ್ಟರೊಳಗಾಗಿ ಶ್ವಾಸೋಚ್ಛ್ವಾಸಗಳ ಗತಿವಿಧಿಯೂ ನಿಂತುಹೋಗಿದೆ! ಆದರೂ ಅರಿಂದಮನು ಫೂಲಸಾಹೇಬನನ್ನು ನಂಬಲಾರದೆ ಹೋದನು. ಕೈಕೋಳಗಳನ್ನೂ ಏಡಿಯನ್ನೂ ತೆಗೆದು ಫೂಲಸಾಹೇಬನ ಕೈಗಳಿಗೂ ಕಾಲುಗಳಿಗೂ ಭದ್ರವಾಗಿ ತೊಡಿಸಿದನು; ಹಾಗೆಯೇ ಸುಂಚವನ್ನು ಎಳೆದು ತಂದು ಅದರ ಒಂದು ಕಾಲನ್ನು ಫೂಲಸಾಹೇಬನ ಬಿಸ್ನಿನ ಮೇಲಿರಿಸಿದನು.

ಆರನೆಯ ಪರಿಚ್ಛೇದ

ಯಥಾ ಸಮಯದಲ್ಲಿ ಅರಿಂದಮ

ಫೂಲಸಾಹೇಬನನ್ನು ಅಂತಹ ಅವಸ್ಥೆಗೆ ಗುರಿಮಾಡಿ ಅರಿಂದಮನು ಅಲ್ಲಿಂದ ಹೊರಟನು. ಹೊರಟವನೇ ದೇವೇಂದ್ರವಿಜಯನನ್ನು ಹುಡುಕಿಕೊಂಡು, ಉತ್ಕಂಠಿತಚಿತ್ತನಾಗಿ ಆ ಮನೆಯ ನಾಲ್ಕೂ ಕಡೆಗಳಲ್ಲಿಯೂ ಸುತ್ತತೊಡಗಿದನು. ದೇವೇಂದ್ರವಿಜಯನ ವಿಚಾರವಾಗಿ ಫೂಲಸಾಹೇಬನು ಹೇಳಿದ್ದುದನ್ನು ಕೇಳಿದ ಮೊದಲು ತುಂಬಾ ಭಯಗೊಂಡಿರಲಿಲ್ಲನು. ಏತಕ್ಕೆಂದರೆ, ಭಯಂಕರ ಸ್ವಭಾವದವನೂ ಕೊಲೆಪಾತಕಿಯೂ ಆದ ಫೂಲಸಾಹೇಬನಿಗೆ ಅಸಾಧ್ಯವಾದ ಕೆಲಸ ಯಾವುದೂ ಇಲ್ಲವೆಂಬುದೇ ಅವನ ನಂಬುಗೆ.

ಉಪ್ಪರಿಗೆಯಮೇಲೆ ಸ್ಥಿತಿಯೊಂದು ಕಡೆಯಲ್ಲಿಯೂ ಚೆನ್ನಾಗಿ ಹುಡುಕಿ ದೇವೇಂದ್ರವಿಜಯನನ್ನಾಗಲೀ ಅಥವಾ ಅವನ ಶವವನ್ನಾಗಲೀ

* ರಿವಾಲ್ವರ್ (Revolver) ಪಿಸ್ತೂಲು ವಿಶೇಷ.

ಕಾಣದೇ ಹೋದುದರಿಂದ ಅರಿಂದಮನು ಕೆಳಗಿನ ಅಂತಸ್ತಿಗೆ ಬಂದು ಅಲ್ಲಿಯು ಎಲ್ಲ ಕೊಠಡಿಗಳನ್ನೂ ಹುಡುಕಲಾರಂಭಿಸಿದನು. ಯಾವ ಕೊಠಡಿಯಲ್ಲಿ ದೇವೇಂದ್ರವಿಜಯನು ಪಾತಾಳ ಪ್ರವೇಶ ಮಾಡಿದ್ದನೋ ಆ ಕೊಠಡಿಗೂ ಅರಿಂದಮನು ಕಟ್ಟಕಡೆಗೆ ಬಂದೇ ಬಂದನು.

ಆ ಸಮಯದಲ್ಲಿ ಅಸ್ಫುಟವಾಗಿ ನರಳುವ ಶಬ್ದವು ಅವನಿಗೆ ಕೇಳಿಸಿತು; ಆದರೆ ಬಹಳ ಹೊತ್ತಿನವರೆಗೆ ಅಲಸಿ ಕೇಳಿದನಾದರೂ ಆ ಶಬ್ದವು ಎಲ್ಲಿಂದ ಬರುತ್ತಿರುವುದೆಂಬುದನ್ನು ಅವನು ನಿಶ್ಚೈಸಲಾಗಲಿಲ್ಲ. ಒಂದೊಂದು ಸಲ 'ಛಪ್, ಛಪಾತ್' ಎಂದು ನೀರಿನ ಸಪ್ಪಳವೂ ಕೇಳಿಸುತ್ತಿದ್ದಿತು. ಆ ಶಬ್ದವೆಲ್ಲವೂ ಬಹು ದೂರದಿಂದ ಕೇಳಿ ಬರುವಂತೆ ಭಾಸವಾಯಿತು; ಆದರೆ ಕೊಠಡಿಯಿಂದ ಹೊರಗೆ ಬಂದರೆ ಏನೂ ಕೇಳಿಸುತ್ತಿರಲಿಲ್ಲ. ಭೀತಿಪುಷ್ಪಲನಾದ ಅರಿಂದಮನು ಕೊಠಡಿಯೊಳಗೆ ನಾಲ್ಕೂ ಕಡೆ ಸುತ್ತುವುದಕ್ಕೆ ಮೊದಲಿಟ್ಟನು. ಒಂದುಕಡೆ ನೆಲದಲ್ಲಿ ಕಪ್ಪಣದಿಂದ ಮಾಡಿದ ಗುಪ್ತದ್ವಾರವಿರುವುದು ಕಾಣಿಸಿತು; ಅದು ಅಕಸ್ಮಾತ್ತಾಗಿ ಮನುಷ್ಯರು ಒಂದು ಚದರಗಡಿದ ಮಟ್ಟಿಗೆ ಚರ್ಚಾಕವಾಗಿದ್ದಿತು. ಆ ಗುಪ್ತದ್ವಾರವನ್ನು ತೆರೆಯುವುದಕ್ಕೋಸ್ಕರ ಅರಿಂದಮನು ತನ್ನ ದೇಹಬಲವೆಲ್ಲವನ್ನೂ ಪ್ರಯೋಗಿಸಿ, ಸಾಧ್ಯವಿರುವ ಮಟ್ಟಿಗೂ ಪ್ರಯತ್ನಿಸಿದನು; ಮತ್ತಿಂದಲೂ ಅದನ್ನು ಹಿಡಿದು ಎತ್ತುವುದಕ್ಕಾಗಲಿಲ್ಲ; ಆದರೆ ಅದರ ಸೀಳೆ ಸ್ವಲ್ಪ ಮಟ್ಟಿಗೆ ಕಾಲೂರಿದಾಗ ಅದು ಕೆಳಗಡೆಗೇ ಸ್ವಲ್ಪ ಕದಲಿ ಕೆಂಪು ಬಿಟ್ಟಿತು. ಮತ್ತಷ್ಟು ಬಲ ಪ್ರಯೋಗವಾದಲಾಗಿ ಬಾಗಿಲು ತೆರೆಯಿತು. ಆ ಕೂಡಲೇ ಸಹಿಸಲಸಾಧ್ಯವಾದ ದುರ್ಗಂಧವು ಅರಿಂದಮನ ನಾಸಿಕಾರಂಧ್ರವನ್ನು ಪ್ರವೇಶಮಾಡಿ, ಅವನಿಗೆ ಅಸ್ವಾಭಾವಿಕವಾದ ಸಮಯದಲ್ಲಿ ತಿಂದ ಆಹಾರವನ್ನೂ ಕೂಡ ವಾಂತಿ ಮಾಡಿಸುವ ಪ್ರಯತ್ನ ಮಾಡಿತು. ಅರಿಂದಮನು ಬಹು ಕಷ್ಟದಿಂದ ಆ ದುರ್ಗಂಧವನ್ನು ಸೈರಿಸಿ ತಲೆಯನ್ನು ತಗ್ಗಿಸಿಕೊಂಡು, ತೀಕ್ಷ್ಣದೃಷ್ಟಿಯಿಂದ ಅದರ ಒಳ ಭಾಗವನ್ನು ನೋಡಿದನು; ಏನೂ ಕಾಣಿಸಲಿಲ್ಲ; ಆ ನರಳುವ ಶಬ್ದ

ಮಾತ್ರ ಆಗ ಸ್ಪಷ್ಟವಾಗಿ ಕೇಳಿಸುವಂತಾಯಿತು. ಅರಿಂದಮನು ಜೇಬಿನಿಂದ ಲಾಂದ್ರವನ್ನು ತೆಗೆದು ಹೊತ್ತಿಸಿ, ಅದರ ಬೆಳಕನ್ನು ಆ ಅಂಧ ಕೂಪದೊಳಕ್ಕೆ ಪ್ರವೇಶವಾಡಿಸಿ ನೋಡಿದನು. ಅಡಿಯಲ್ಲಿ—ಬಹಳ ಆಳದಲ್ಲಿ—ಅಸ್ಪಷ್ಟವಾದ ಮನುಷ್ಯಮೂರ್ತಿಯೊಂದು ಕೊಳಕುನೀರಿನಲ್ಲಿ ಎದೆಯವರೆಗೂ ಮುಳುಗಿ ನಿಂತಿರುವುದು ಕಂಡಿತು. ಅದರೊಳಗಿನಿಂದ ಮೇಲಕ್ಕೆ ಹತ್ತಿಬರುವುದಕ್ಕೆ ಯಾವ ಉಪಾಯವೂ ಇಲ್ಲವೆಂಬುದೂ ಕಂಡಿತು. ಅರಿಂದಮನು, ''ದೇವೇಂದ್ರಬಾಬು–ದೇವೇಂದ್ರಬಾಬು'' ಎಂದು ಗಟ್ಟಿಯಾಗಿ ಕೂಗಿದನು.

''ತಾವು ಬಂದಿರಲ್ಲ. ನಾನು ಸಾಯುವುದರಲ್ಲಿದ್ದೇನೆ—ನನ್ನನ್ನು ಬದುಕಿಸಿ—ಹೂ! ಪ್ರಾಣಹೋಯಿತು—ಉಸ್! ಎಷ್ಟು ಭಯಂಕರ'' ಎಂದು ಒಳಗಡೆಯಿಂದ ಮೆಲ್ಲಗೆ ಉತ್ತರ ಬಂದಿತು.

ಅರಿಂದಮ—ದೇವೇಂದ್ರಬಾಬೂ, ಭಯಪಡಬೇಡಿ, ನೀವು ಇನ್ನೂ ಬದುಕಿರುವಿರಲ್ಲ; ಇದೇ ನನ್ನ ಅದೃಷ್ಟ! ನಾನು ನನ್ನ ಪ್ರಾಣವನ್ನಾದರೂ ಕೊಟ್ಟು ನಿಮ್ಮ ಪ್ರಾಣವನ್ನು ಉಳಿಸುತ್ತೇನೆ.

ಹೀಗೆಂದು ಹೇಳಿ ಅರಿಂದಮನು ಗುಪ್ತದ್ವಾರವನ್ನು ಬಿಟ್ಟು ಎದ್ದು ನಿಂತನು. ಒಳಗಡೆ ಸ್ಪ್ರಿಂಗ್ ಇತ್ತೆಂದು ಕಾಣುತ್ತದೆ. ತಕ್ಷಣದಲ್ಲಿಯೇ ಗುಪ್ತದ್ವಾರದ ಬಾಗಿಲು ತನ್ನಷ್ಟಕ್ಕೆ ತಾನೇ ಝಣಕ್ಕನೆ ಮುಚ್ಚಿಕೊಂಡಿತು.

ಅರಿಂದಮನು ಹೊರಕ್ಕೆ ಓಡಿಬಂದನು. ಮೆಟ್ಟಿಲಿನ ಒಂದು ಪಕ್ಕದಲ್ಲಿ ಬಹಳ ಉದ್ದವಾದೊಂದು ಹಗ್ಗವಿದ್ದಿತು; ಆ ಹಗ್ಗವನ್ನು ಎರಡು ಕೈಗಳಿಂದಲೂ ಎತ್ತಿಕೊಂಡು ಬಂದು ಅದನ್ನು ಆ ಅಂಧಕೂಪದ ಒಳಕ್ಕೆ ಇಳಿಬಿಟ್ಟನು. ಆ ಸಮಯದಲ್ಲಿ ಅದರಿಂದ ಅವನಿಗೆ ಅಷ್ಟರ ಅನುಕೂಲವಾಗುವುದೆಂದು ಅರಿಂದಮನು ಮೊದಲು ಯೋಚಿಸಿರಲಿಲ್ಲ.

ಅರಿಂದಮನು ಉರಿಯುತ್ತಿರುವ ಲಾಂದ್ರವನ್ನೂ ತೆಗೆದುಕೊಂಡು ಆ ಹಗ್ಗದ ಆಧಾರದಿಂದ ಕೆಳಕ್ಕೆ ಇಳಿದನು. ನಡುವೆ ಹಗ್ಗವಿದ್ದುದರಿಂದ

ಗುಪ್ತದ್ವಾರವು ಸಂಪೂರ್ಣವಾಗಿ ಮುಚ್ಚಿಕೊಳ್ಳದೆ ಅರ್ಧಮಟ್ಟಿಗೆ ತೆರೆದೇ ಇದ್ದಿತು.

ಅರಿಂದಮನು ಒಳಗೆ ಇಳಿದು ನೋಡಿದನು. ದೇವೇಂದ್ರವಿಜಯನು ಆ ಭಾವಿಯ ತಳವಾದ ಕೆಸರಿನಲ್ಲಿ ಕೊಂಚ ಕೊಂಚವಾಗಿ ಮುಳುಗಿ ಹೋಗುತ್ತಿದ್ದಾನೆ. ಅವನ ತಲೆಯಲ್ಲಿ ಬಂದು ಕಡೆ ಗಾಯವಾಗಿ ರಕ್ತವು ಹರಿಯುತ್ತಿದೆ; ಆ ಪೆಟ್ಟು ಅಷ್ಟೊಂದು ಅಪಾಯಕರವಾಗಿಲ್ಲವಾದರೂ ಇರತಕ್ಕ ಸ್ಥಿತಿಯು ಅತ್ಯಂತ ಭಯಂಕರವಾದದ್ದು. ಭಯಂಕರವಾದ ಮೃತ್ಯುಪಾಶದ ದೆಸೆಯಿಂದ ದೇವೇಂದ್ರನನ್ನು ಕಾಪಾಡುವುದ ಕ್ಕೋಸ್ಕರ ಅರಿಂದಮನು ಎರಡು ಕೈಗಳಿಂದಲೂ ಅವನನ್ನು ಹಿಡಿದು ಬಹು ಪ್ರಯಾಸದಿಂದ ಏಳೆಯತೊಡಗಿದನು. ಕುತ್ತಿಗೆಯವರೆಗಿನ ಆ ಕೆಸರಿನಿಂದ ಒಬ್ಬ ಮನುಷ್ಯನನ್ನು ಹಿಡಿದು ಎತ್ತುವುದೇನು ಸಾಧಾರಣವೆ?

ಏಳನೆಯ ಪರಿಚ್ಛೇದ

ಸಮಯಕ್ಕೆ ಸರಿಯಾಗಿ ಜುಮಲೆ

ಭಾಪಯೊಳಗಡೆ ದೇವೇಂದ್ರವಿಜಯನಿಗೋಸ್ಕರ ಯಮನಿಗೂ ಮಾನವನಿಗೂ ಹೋರಾಟವಾಗುವ ವೇಳೆಗೆ ಸರಿಯಾಗಿ, ಒಬ್ಬ ಹೆಂಗಸು ಸದ್ದಾಗದ ಹಾಗೆ ಹೆಜ್ಜೆ ಹಾಕುತ್ತಾ ಆ ಕೊಠಡಿಯೊಳಕ್ಕೆ ಬಂದಳು; ಬಂದವಳೇ ಅಂಧಕೂಪದ ಗುಪ್ತದ್ವಾರದ ಹತ್ತಿರ ನಿಂತು ಬಂದಾವರ್ತಿ ಬಗ್ಗಿನೋಡಿ, ಹಾಗೆಯೇ ನಿಶ್ಶಬ್ದವಾದ ನಗೆಯೊಂದಿಗೆ ಅಪೂರ್ವವಾದ ಆ ಭಯಂಕರ ವ್ಯಾಪಾರವನ್ನು ಕಂಡು, ಸದ್ದಾಗದ ಹಾಗೆ ಮೆಲ್ಲಮೆಲ್ಲಗೆ ಹೊರಕ್ಕೆ ಹೊರಟುಹೋದಳು. ಅವಳು ಜುಮಲೆ.

ಜುಮಲೆಯು ಹೊರಗೆಬಂದು ತನ್ನಷ್ಟಕ್ಕೆ ತಾನೇ "ಸರಿ" ಎಂದು ಬಹು ಮೆತ್ತಗೆ ಹೇಳಿಕೊಂಡಳು. 'ಸರಿ' ಎಂಬ ಆ ಶಬ್ದವು ಉಚ್ಚಾರಣೆಯೇ ಆಗದೆ ಗಭೀರವಾದೊಂದು ದೀರ್ಘ ನಿಶ್ವಾಸದಂತೆ ಕೇಳಿಸಿತು.

ಅರಿಂದಮನು ಬಹು ಸಾಹಸಮಾಡಿ ದೇವೇಂದ್ರವಿಜಯನನ್ನು ಒಳಕ್ಕು ಎತ್ತಿದನು. ಆ ವೇಳೆಗೆ ದೇವೇಂದ್ರವಿಜಯನಿಗೆ ಪ್ರಜ್ಞೆತಪ್ಪಿತ್ತು. ಅರಿಂದಮನು ಮೃತಕಲ್ಪನಾದ ದೇವೇಂದ್ರವಿಜಯನ ದೇಹವನ್ನು ಒಂದು ಕೈಯಲ್ಲಿ ಎದೆಗೆ ಅಪ್ಪಿಕೊಂಡು, ಮೇಲಕ್ಕೇರುವ ಪ್ರಯತ್ನ ಮಾಡುವುದರೊಳಗಾಗಿ, ಹರಿತವಾದ ಬಾಕಿನ ಹಾಗಿರುವ ತೀಕ್ಷ್ಣಕಂಠ ದಿಂದ "ಇಂದು ನಿನ್ನಿಂದ ಇಬ್ಬರೂ ಸಾಯಬೇಕು. ಅರಿಂದಮ, ತಲೆ ಯೆತ್ತಿ ನೋಡು, ನನ್ನನ್ನು ಗುರ್ತಿಸಲಾಪೆಯಾ?" ಎಂದು ಯಾರೋ ಕೂಗಿ ಹೇಳಿದರು.

ಅರಿಂದಮನು ಭಯಪಟ್ಟವನಾಗಿ ತಲೆಯೆತ್ತಿ ಮೇಲೆ ನೋಡಿ, "ಯಾರು ನೀನು?" ಎಂದನು.

"ಅಬ್ಬಾ! ನೀನು ನನ್ನನ್ನು ಕಾಣೆಯಾ?"

"ಇಲ್ಲ. ನೀನು ಯಾರು?"

"ನಾನು ಜುಮಲೆ, ನಿನಗೆ ಪರಿಚಿತಳಾದ ಆ ಮತಿಮೀಜ."

ಹಠಾತ್ತಾಗಿ ಹತ್ತಿರದಲ್ಲಿ ಹಾವನ್ನು ಕಂಡರೂ ಜನರು ಅಷ್ಟರ ಮಟ್ಟಿಗೆ ಚಮಕಿತರಾಗರು; ಅಥವಾ ಆ ಕೊಠಡಿಯಲ್ಲಿ ಹಠಾತ್ತಾಗಿ ಸಿಡಿಲುಬಿದ್ದರೂ ಅರಿಂದಮನು ಅಷ್ಟರಮಟ್ಟಿಗೆ ಚಮಕಿತನಾಗುತ್ತಿರಲಿಲ್ಲ ವೆಂದು ತೋರುತ್ತದೆ. ಆದರೆ ಜುಮಲೆಯನ್ನು ಕಂಡು ಅಷ್ಟರ ಮಟ್ಟಿಗೆ ಭಯಪಟ್ಟು ನಡುಗಿದನು. ನೋಡಿದನು, ನೂರಾರು ಭಯೋತ್ಪಾತ ಗಳು ಏಕತ್ರಿಕವಾಗಿ ಮೂರ್ತೀಭವಿಸಿತೋ ಎನ್ನುವಂತೆ ಅವಸತಮನಸ್ಕ ಳಾಗಿ, ಮೇಲ್ಗಡೆ, ಜುಮಲೆಯು ನಿಂತಿದ್ದಾಳೆ. ಅವಳ ಆ ವಿಸ್ತಾರ ವಾದ ಕೃಷ್ಣಸಯನಗಳಲ್ಲಿ ಪ್ರಕಾಶವಾನವಾಗಿ ಜ್ವಲಿಸುತ್ತಿರುವ ನರಕಾಗ್ನಿಯು ಅದೆಷ್ಟು ಭಯಂಕರ! ಸಾಲದುದಕ್ಕೆ ಕೃಷ್ಣವರ್ಣದ ಕೇಶದಾಮವು ಕೆದರಿದೆ, ಗುಂಗುರು ಗುಂಗರಾಗಿದೆ, ವಿಶೇಷವಾಗಿದೆ, ಸೀಳವಾಗಿದೆ—ಇಂತಹ ಕೇಶದಾಮವು ಅವಳ ಮುಖದ ಸುತ್ತಲೂ ಭಯಂಕರಾಕಾರವಾಗಿ ಆವೃತವಾಗಿದೆ. ಜುಮಲೆಯ ಒಂದು ಕೈಯಲ್ಲಿ ಲಾಂದ್ರು, ಇನ್ನೊಂದು ಕೈಯಲ್ಲಿ ಬಂದು ಸಣ್ಣಸೀಸೆ; ಅದರಲ್ಲಿ

ಕೆಂಬಣ್ಣದ ಯಾವುದೋ ದ್ರವಪದಾರ್ಥವು ಥಳಥಳಿಸುತ್ತಿದೆ. ಈ ಪಿಶಾಚಿಯ ಸಂಕಲ್ಪವೇನೋ ಯಾರು ಬಲ್ಲರು?

ತನ್ನ ಅವಸ್ಥೆಯನ್ನು ಸ್ಮರಿಸಿಕೊಂಡು ಅರಿಂದಮನು ಸಿಶ್ಚಯವಾಗಿಯೂ ಭೀತನಾದನು. ಆ ಸಮಯದಲ್ಲಿ ದೇವೇಂದ್ರವಿಜಯನು ಮೂರ್ಛಿತನಾಗಿರದಿದ್ದರೆ, ಪ್ರಳಯ ಸ್ವರೂಪಿಣಿಯಾದ ಆ ಪಿಶಾಚಿಯ ಕೈಯಿಂದ ಪಾರಾಗುವುದಕ್ಕೆ ಸ್ವಲ್ಪವಾದರೂ ಅವಕಾಶವಿರುತ್ತಿದ್ದಿತು. ಈಗ ಅವನೇನು ಮಾಡಿಯಾನು? ಈ ಅವಸ್ಥೆಯಲ್ಲಿರುವ ದೇವೇಂದ್ರವಿಜಯನನ್ನು ಬಿಟ್ಟುಹೋಗುವುದು ಮಾಡಲಾಗದ ಕಾರ್ಯ. ಏನೇನೋ ಆಲೋಚಿಸಿ ಆಲೋಚಿಸಿ ದಿಕ್ಕುತೋರದವನಾದನು; ಕಟ್ಟ ಕಡೆಗೆ, ದೇವೇಂದ್ರವಿಜಯನು ಒಂದುವೇಳೆ ಸತ್ತುಹೋದನಾದರೆ, ಅವನ ಸಂಗಡ ತಾನೂ ಮೃತಿಹೊಂದುವುದಾಗಿ ತನ್ನೊಳಗೆ ತಾನೇ ಪ್ರತಿಜ್ಞೆ ಮಾಡಿಕೊಂಡನು.

ಬಿರುಗಾಳಿಯಿಂದ ಒಡಗೂಡಿದ ಮಳೆಯು ಸಪ್ಪಳಿಂತೆ ತರಂಗಾಯಿತವಾದ ನಗೆಯೊಂದಿಗೆ ಜುಮುಲೆಯು, ಅರಿಂದಮ, ಈಗ ನಿನ್ನ ಅನುಗ್ರಹವೊಂದರಮೇಲೆ, ನಿನ್ನ ಕರುಣೆಯೊಂದರಮೇಲೆ, ನಿನ್ನ ಇಚ್ಛೆಯೊಂದರಮೇಲೆ ನಿಮ್ಮಂತಹ ಇಬ್ಬರು ವೀರಪುರುಷರ ಪ್ರಾಣವು ಭರವಸೆಗೊಂಡಿರುವುದೆಂದು ನಿನ್ನಂತಹ ಬುದ್ಧಿಶಾಲಿಗೆ ನಾನು ಸ್ಪಷ್ಟವಾಗಿ ಹೇಳಬೇಕಾಗಿಲ್ಲವೆಂದು ತೋರುತ್ತದೆ, ಎಂದು ಹೇಳಿದಳು.

ಜುಮುಲೆಯ ಬಾಯಿಂದ ಈ ಮಾತುಗಳು ಯಾವ ಧ್ವನಿಯಲ್ಲಿ ಹೊರಟುವೊ ಅದನ್ನು ಕೇಳಿದರೆ ಜುಮುಲೆಯು ಬಹು ಸಂತೋಷದೊಂದಿಗೆ ಮಾತನಾಡುತ್ತಿರುವಳೆಂದು ಸ್ಪಷ್ಟವಾಗಿ ವ್ಯಕ್ತಪಡುತ್ತಿದ್ದಿತು.

ಅರಿಂದಮನು, 'ಹೌದು, ಅದೇನೋ ನಿಜ' ಎಂದನು.

ಜುಮುಲೆಯು ತಲೆಯನ್ನಾಡಿಸುತ್ತಾ, ಹಾಗಾದರೆ ಅರಿಂದಮ, ನನ್ನ ದಯೆಯನ್ನು ಪ್ರಾರ್ಥಿಸುವನಾಗು, ನಿನ್ನ ಪ್ರಾಣಭಿಕ್ಷೆಯನ್ನು ಕೋರುವನಾಗು—ಕ್ಷಮೆಯನ್ನು ಬೇಡು; ಕರುಣೆಯುಂಟಾದ ಪಕ್ಷದಲ್ಲಿ—ಕ್ಷಮಿಸಿದರೂ ಕ್ಷಮಿಸಬಲ್ಲೆನು, ಎಂದು ಹೇಳಿದಳು.

ಅರಿಂದಮ—ಪಿಶಾಚಿಯಲ್ಲಿ ದಯಾಭಿಕ್ಷವೆ! ಜುಮಲೆ, ಅಂತಹ ಪಡ್ಡನು ಯಾವನು?

ಜುಮಲೆ—(ತೀವ್ರಸ್ವರದಿಂದ) ಹಾಗಾದರೆ ಈ ಸಂತೋಷವನ್ನೂ ಪಡು.

ಅರಿಂದಮ—ನೀನು ಏನು ಮಾಡುವೆ? ನಿನ್ನ ಉದ್ದಿಶ್ಯವಾದರೂ ಏನು?

ಜುಮಲೆ—ನನ್ನ ಉದ್ದಿಶ್ಯವಾದರೊ ನಿನ್ನನ್ನು ಕೊಲ್ಲುವುದು—ಈಗಲೇ—ಈ ಕ್ಷಣದಲ್ಲಿಯೇ.

ಅರಿಂದಮ—ಹೇಗೆ?

ಜುಮಲೆ—ಹೀಗೆ.

ಜುಮಲೆ ಆ ಶೀಸೆಯನ್ನು ಮೇಲಕ್ಕೆ ಎತ್ತಿಹಿಡಿದಳು. ಅನಂತರ ಕಿಲಕಿಲನೆ ನಗುತ್ತಾ, ಇದರಲ್ಲಿ ಏನಿದೆಯೋ ಗೊತ್ತಿದೆಯೆ—ಇಲ್ಲವೆ? ಇದರಲ್ಲಿರುವುದನ್ನು ನಿನ್ನ ಮೈಮೇಲೆ ಚಲ್ಲುತ್ತೇನೆ, ಇದು ಅಗ್ನಿಶಿಖೆಯಂತೆ ನಿನ್ನನ್ನು ಸುಡುವುದು; ಇದು ಕರಗಿದ ಸೀಸಕ್ಕಿಂತಲೂ ಭಯಂಕರವಾದದ್ದು. ಅದನ್ನೂ ಇದನ್ನೂ ಹೋಲಿಸಿ ನೋಡಿದರೆ ಇದರ ಇದಿರಿನಲ್ಲಿ ಕರಗಿದ ಸೀಸವು ಹಿಮುದಗಡ್ಡೆಯೇ ಸರಿ, ಎಂದಳು.

ಅರಿಂದಮ—ನಿನ್ನ ಮನೋಭಾವದಿಂದ-ನಿನ್ನ ಕಲ್ಪನೆಗಳಿಂದ ನಿನ್ನ ಕುಟಿಲತೆ ಮತ್ತೂ ಕಠೋರತೆಗಳಿಂದ ನೀನು ರಾಕ್ಷಸಿಗಿಂತಲೂ ಭಯಂಕರಿಯಾದವಳು; ನಿನಗೆ ತೋರಿದಹಾಗೆ ಮಾಡು. ನಾನು ಸಾಯುವುದಕ್ಕೆ ಸಿದ್ಧನಾಗಿದ್ದೇನೆ.

ಜುಮಲೆ—ಕೇಳು ಅರಿಂದಮ; ಮರಣವೆಂಬುದು ಬಾಯಲ್ಲಿ ಹೇಳುವುದಕ್ಕೆ ಎಷ್ಟು ಸುಲಭವೋ, ಕಾರ್ಯತಃ ಅಷ್ಟು ಸುಲಭವಾದುದಲ್ಲ. ಇದು ಅಂತಿಂತಹ ಮರಣವಲ್ಲ—ಉರಿದು ಬೊಬ್ಬೆಯಾಗಿ ಸುಟ್ಟುಹೋಗುವ ಮರಣ. ಹಾಗಾದರೆ ಸಾಯಿ, ಅರಿಂದಮ. ನೀನು ಯಾತನೆಯಿಂದ ಅಸ್ಥಿರನಾಗಿ, ಗಟ್ಟಿಗೆ ಚೀತ್ಕಾರಮಾಡುವೆ, ಆಗ

ನಾನು ಅಷ್ಟೇ ಗಟ್ಟಿಯಾಗಿ ಹೊ! ಹೂ!! ಹೂ!!! ಎಂದು ನಗುತ್ತಿರುತ್ತೇನೆ. ಎಂತಹ ಆನಂದ! ನಿನ್ನ ಎರಡು ಕಣ್ಣುಗಳಿಗೂ ಎರಡು ತೊಟ್ಟು ಹಾಕುತ್ತೇನೆ, ಕುರುಡನಾಗುತ್ತಿ—ಕಣ್ಣುಗಳನ್ನು ಕಿತ್ತು ಎಸೆದರೂ ಆ ಯಾತನೆ ಹೋಗುವುದಿಲ್ಲ; ಆನಂತರ ನಾಯುವೆ! ಕೊಂಚ ಕೊಂಚವಾಗಿ ಭಯಂಕರ ಬಾಧೆಯಿಂದ ಭಯಾನಕ ಮರಣ!

ಜುಮುಲೆಯು ಪುನಃ ನಗುವುದಕ್ಕೆ ಮೊದಲು ಮಾಡಿದಳು. ಆ ತೀವ್ರವಾದ ನಗೆಯು ಬಹು ಭಯಂಕರವಾಗಿಯೂ ಅಮಂಗಳ ಕರವಾಗಿಯೂ ತೋರಿತು. ಆ ನಗೆಯನ್ನು ಕೇಳಿ ಎಂತಹ ಪ್ರಬಲ ಸಾಯಸಿಯ ಹೃದಯವಾದರೂ ಭಯದಿಂದ ಕಂಪಿಸುವುದು.

ಅರಿಂದಮನು ಭಯಪಟ್ಟನು. ಜುಮುಲೆಯು ಬರಿಯ ಮಾತಿನಿಂದ ಭಯಪಡಿಸುವಳಲ್ಲ, ಕಾರ್ಯತಃ ಹಾಗೆಯೇ ಮಾಡತಕ್ಕವಳು, ಎಂದು ತಿಳಿದುಕೊಂಡನು. ಈ ಪಿಶಾಚಿನ ದೆಸೆಯಿಂದ ಬದುಕಿಕೊಳ್ಳುವುದು ಹೇಗೆ?

''ಅರಿಂದಮ, ಇಲ್ಲಿ ನೋಡು'' ಎಂದು ಹೇಳಿ ಜುಮುಲೆಯು ಸ್ವಲ್ಪ ಸ್ವಲ್ಪವಾಗಿ ನೀಲಿಯನ್ನು ಓರೆಮಾಡುತ್ತಾ ಬಂದಳು. ಜುಮುಲೆಗೆ ಗೊತ್ತಾಗದೆಯೇ ಒಂದು ತೊಟ್ಟು ಅರಿಂದಮನ ಕೈಮೇಲೆ ಬಿದ್ದಿತು. ಕರಗಿದ ನೀಲದಹಾಗೆ, ಆ ಒಂದು ತೊಟ್ಟು ಆ ಸ್ಫಟಿಕವನ್ನು ಸುಡಲುಪಕ್ರಮಿಸಿತು. ಅರಿಂದಮನು ಬೆಡುಗಚ್ಚಿಕೊಂಡು, ಮಾತನಾಡದೆ, ಉಸಿರಾಡುವುದನ್ನೂ ತಡೆದು ಬಹು ಕಷ್ಟದಿಂದ ಆ ಬಾಧೆಯನ್ನು ಸಹಿಸಿಕೊಂಡಿದ್ದನು. ಯಾತನಾಸೂಚಕವಾದ ಯಾವುದೊಂದು ಶಬ್ದವೂ ಆಗ ಅವನ ಮುಖದಿಂದ ಹೊರಡಲಿಲ್ಲ.

''ನೋಡು ಅರಿಂದಮ, ಇನ್ನು ಏಳಂಬವಿಲ್ಲ, ಇಲ್ಲಿ ನೋಡು, ಮುಚ್ಚಳ ತೆಗೆದಿದ್ದೇನೆ; ಈಗಲೇ ನಿನ್ನ ಮೈಮೇಲೆ ಇದನ್ನು ಚೆಲ್ಲಿ ಬಿಡುತ್ತೇನೆ; ಇನ್ನೂ ಅವಕಾಶವಿದೆ; ಪ್ರಾಣಭಿಕ್ಷೆ ಬೇಡಿಕೊ'' ಎಂದು ಜುಮುಲೆ ಹೇಳಿದಳು.

ಅರಿಂದಮ—(ದೃಢಸ್ವರದಿಂದ) ಈ ಪ್ರಾಣವಿರುವವರೆಗೂ ಅದು ನಾಗದು.

ಜುಮಲೆ—ನಾನು ನಿನ್ನನ್ನು ಬಿಟ್ಟರೂ ಬಿಡಬಲ್ಲೆ; ಪ್ರಾಣಭಿಕ್ಷೆಯನ್ನು ಬೇಡು.

ಅರಿಂದಮ—ನೀನು ಪಿಶಾಚಿ.

ಜುಮಲೆ—(ಮಂದಹಾಸದಿಂದ) ಛೆ ಅರಿಂದಮ! ನಿನಗೆ ಕಣ್ಣಿದ್ದೂ ಫಲವಿಲ್ಲ; ನಾನು ಇಷ್ಟು ಸುಂದರಿ, ನನಗೆ ಇಷ್ಟೊಂದು ಸೌಂದರ್ಯವಿದೆ, ಹೀಗಿದ್ದೂ ನನ್ನನ್ನು ಪಿಶಾಚಿಯೆಂದೆಯಲ್ಲ!

ಅರಿಂದಮನು ಯಾವ ಮಾತನ್ನೂ ಆಡಲಿಲ್ಲ.

ಜುಮಲೆ—ಈಗಲಾದರೂ ಪ್ರಾಣಭಿಕ್ಷೆಯನ್ನು ಬೇಡು.

ಆಗಲೂ ಅರಿಂದಮನು ಮೌನದಿಂದಿದ್ದನು.

ಜುಮಲೆ—ಇನ್ನು ಹೇಳುವುದಿಲ್ಲ, ಇದೇ ಕಡೆಯ ಮಾತು; ಈಗಲಾದರೂ ಪ್ರಾಣಭಿಕ್ಷೆಯನ್ನು ಬೇಡು. ನಿನ್ನಂತಹ ಸುಪ್ರಸಿದ್ಧನಾದ ಶ್ರೇಷ್ಠ ಪತ್ತೇದಾರನು ನನ್ನಲ್ಲಿ ಪ್ರಾಣಭಿಕ್ಷೆಯನ್ನು ಬೇಡುವುದಾದರೆ ನಾನು ಮರುಮಾತಾಡದೆ ಸಮ್ಮತಿಸುತ್ತೇನೆ, ಅದರಿಂದ ನನಗೆ ತುಂಬ ಗೌರವವುಂಟು; ಆದ್ದರಿಂದಲೇ ನಾನು ಹೀಗೆ ಹೇಳುತ್ತಿದ್ದೇನೆ.

ಅರಿಂದಮನು ಆಗಲೂ ನೀರವ.

ಎಂಟನೆಯ ಪರಿಚ್ಛೇದ

ಆಪತ್ಕಾಲದಲ್ಲಿ

ಏನು ಮಾಡಿದರೂ ಅರಿಂದಮನು ತನ್ನಲ್ಲಿ ಪ್ರಾಣಭಿಕ್ಷೆ ಬೇಡುವುದಿಲ್ಲ ಪೆಂಬುದು ಜುಮಲೆಯ ಅನುಭವಕ್ಕೆ ಬಂದಿತು. ಇದರಿಂದ ಅವಳು ಕೋಪಗೊಂಡವಳಾಗಿ ಸೀಸೆಯೊಳಗೆ ದ್ರವರೂಪವಾಗಿದ್ದ ವಿಟ್ರಿಯಲ್ (Vitriol—ಗಂಧಕ ದ್ರಾವಕ)ವನ್ನು ಸುರಿಯುವುದಕ್ಕೆ ಯತ್ನಿಸಿದಳು; ಆ ಸಮಯದಲ್ಲಿ ಅವಳ ಪಿಂಭಾಗದಿಂದ ಬಂದು ವ್ಯಕ್ತಿಯು ಬಲಾತ್ಕಾರವಾಗಿ ಅವಳಿಂದ ಆ ಸೀಸೆಯನ್ನು ಕಿತ್ತುಕೊಂಡಿತು. ಹಾಗೆ ಸೀಸೆಗೋಸ್ಕರವಾಗಿ ಕಸರಾಡುವಾಗ ಆ ದ್ರವರೂಪದ ಅಗ್ನಿಯ ಕೊಂಚ ಭಾಗವು ಜುಮಲೆಯ ಕೈಮೇಲೆ ಬಿದ್ದಿತು. ಯಾತನೆಯಿಂದ ಚೀತ್ಕಾರ ಮಾಡುತ್ತಾ ಜುಮಲೆಯು ಅಲ್ಲಿಂದ ಓಡಿಹೋದಳು.

ಆ ಅನಿರೀಕ್ಷಣೀಯವಾದ ಘಟನೆಯನ್ನು ಅರಿಂದಮನು ಬಾಯಿ ಬಿಡುವುದಕ್ಕಿಂತಲೇ ಕಂಡು ಪರಮೇಶ್ವರನಿಗೆ ಒಂದು ಲಕ್ಷ ಪ್ರಣಾಮಗಳನ್ನು ತನ್ನೊಳಗೆ ತಾನೇ ಸಮರ್ಪಿಸಿದನು. ಇಷ್ಟು ದೊಡ್ಡ ವಿಪತ್ತು ಇಷ್ಟು ಬೇಗನೆ, ಇಷ್ಟು ಸುಲಭವಾಗಿ ತೊಲಗಿಹೋಗುವುದೆಂದು ಅವನು ಊಹಿಸಿರಲಿಲ್ಲ. ಅವನು ದೇವೇಂದ್ರವಿಜಯನ ಮೂರ್ಛಿತ ಶರೀರವನ್ನು ಎದೆಗೆ ಆನಿಸಿಕೊಂಡು ಬೇಗಬೇಗನೆ ಮೇಲಕ್ಕೆ ಹತ್ತಿಬಂದನು. ಹಾಗೆಯೇ ಆ ವಿಪತ್ತನ್ನು ತೊಲಗಿಸಿದ ಅಪರಿಚಿತ ವ್ಯಕ್ತಿಗೆ ಯಥೇಷ್ಟವಾಗಿ ಕೃತಜ್ಞತಾ ಪ್ರಕಾಶಪಡಿಸಿದನು.

ಆ ಅಪರಿಚಿತ ವ್ಯಕ್ತಿಯ ವಯಸ್ಸನ್ನು ಇಪ್ಪತ್ತೇಳು ವರ್ಷಗಳಾಗಿರಬಹುದು. ಆತನ ಶರೀರವು ದೀರ್ಘವಾಗಿಯೂ ಪ್ರಶಸ್ತವಾಗಿಯೂ ಇತ್ತು. ಆತನ ಭಾವಭಂಗಿಗಳಿಂದಲೂ, ಮುಖಾಕೃತಿಯಿಂದಲೂ, ಕರುಣಾದೃಷ್ಟಿಯಿಂದಲೂ ಸೌಶೀಲ್ಯವೇ ವ್ಯಕ್ತಪಡುತ್ತಿದ್ದಿತು. ಆತನು ಧರಿಸಿದ್ದ ಆ ಕೊಳಕು ಬಟ್ಟೆ, ತಲೆಯಲ್ಲಿ ಬರಟಾಗಿರುವ ನೀಳವಾದ ಕೂದಲು, ಕಣ್ಣಿನ ಪಕ್ಕದಲ್ಲಿನ ಕೃಷ್ಣವರ್ಣ, ಕೈಕಾಲುಗಳಲ್ಲಿರುವ ಉದ್ದುದ್ದವಾದ ಉಗುರು ಇವುಗಳಿಂದ, ಆತನ ವಿಷಯವಾಗಿ ಉದಿಸಿದ

ಸದ್ಭಾವನೆಯು ಆ ಕೂಡಲೇ ಅರಿಂದಮನ ಮನಸ್ಸಿನಿಂದ ತೊಡೆದು ಹೋಯಿತು. ಇದೂ ಅಲ್ಲದೆ ಶರೀರದಲ್ಲಿ ಒಂದೊಂದು ಕಡೆ ಕೊಳೆ ತುಂಬಿದೆ; ಕಿವಿಯ ಕೆಳಗಡೆ ಕುತ್ತಿಗೆಯ ಸುತ್ತಲೂ, ಹಣೆಯಲ್ಲಿಯೂ ಸಹ ಸುಲಿದು ತೆಗೆದರೆ ಎದ್ದು ಬರುವಷ್ಟು ಕೊಳೆಯಾಗಿದೆ. ಆತನ ಮುಖ ಮತ್ತೂ ಕಣ್ಣುಗಳ ಭಾವವನ್ನು ನೋಡಿ, ಆತನು ಮುಸಲ್ಮಾನ ಜಾತಿಯವನೆಂದು ಅರಿಂದಮನು ಊಹಿಸಿದನು. ಇವನು ಫೂಲಪಾಯೇಜಿ ಸಿಗೆ ಏನಾಗಬೇಕೋ ಯಾರು ಬಲ್ಲರು?

ಏನಾದರೂ ಆಗಲಿ, ಇಬ್ಬರೂ ಸೇರಿ ದೇವೇಂದ್ರವಿಜಯಸಿಂಗೆ ಪ್ರಜ್ಞೆ ಬರುವಂತೆ ಮಾಡುವುದಕ್ಕೋಸ್ಕರ ಬಹುವಾಗಿ ಪ್ರಯತ್ನಪಡಾಡ ತೊಡಗಿದರು. ಬಹಳ ಹೊತ್ತಿನ ಮೇಲೆ ಅವರ ಪ್ರಯತ್ನವು ಫಲಕಾರಿ ಯಾಯಿತು. ದೇವೇಂದ್ರವಿಜಯನು ಎದ್ದು ಕುಳಿತನು.

ಅರಿಂದಮನು ಆ ಅಪರಿಚಿತ ವ್ಯಕ್ತಿಯು ಪರಿಚಯ ಮಾಡಿಕೊಳ್ಳು ವುದಕ್ಕೋಸ್ಕರ ಆಶಿಸಿದನು. ಆ ಮನುಷ್ಯನನ್ನು ನೋಡಿದ ಮೊದಲು ಅವನ ತಲೆಯಲ್ಲಿ ಒಂದು ಬಗೆಯ ಘೋರತರ ಸಂದೇಹವು ಬಹುವಾಗಿ ಚಾಂಚಲ್ಯಗೊಳ್ಳುತ್ತಿದ್ದಿತು. ಆ ಸಂದೇಹವೇ ಅದೃಷ್ಟ ಬಲದಿಂದ ನಿಜವಾಗಿ ಪರಿಣಮಿಸುವುದಾದರೆ ತಾನು ಜುಮಲೆಮನ್ನೂ ಫೂಲ ಸಾಹೇಬನನ್ನೂ ಹಿಡಿಯುವುದಕ್ಕಾಗಿ ಪಟ್ಟ ಪ್ರಯಾಸವು ಕೊಂಚ ವಾದರೂ ವ್ಯರ್ಥವಾಗುವುದಿಲ್ಲವೆಂದುಕೊಂಡು ಅರಿಂದಮನು ಕುತೂಹಲಯುತನಾಗಿ ಹೊಸಬನ ಹೆಸರು ಕೇಳಿದನು. ಪ್ರತ್ಯುತ್ತರವಾಗಿ ಆತನು ಹೇಳಿದ ಹೆಸರನ್ನು ಕೇಳಿದ ಕೂಡಲೇ ಮಂತ್ರವಾದಿಯು ಮಂತ್ರದಂಡದಿಂದ ಒಂದು ಲೋಟಾ ಮುಸಿಯನ್ನು ಮುಟ್ಟಿದ ಕೂಡಲೇ ಅದು ಒಂದು ಲೋಟಾ ಹಾಲಿನ ಆಕಾರ ತಾಳುವ ರೀತಿಯಲ್ಲಿ ಅರಿಂದ ಮನ ಎಲ್ಲ ಊಹೆಗಳೂ ಒಂದೇ ಬಾರಿಗೆ ಸತ್ಯವಾಗಿ ಮಾರ್ಪುಗೊಂಡುವು. ಅವನು ಬಹು ಗಟ್ಟಿಗೆ ವಿಸ್ಮಿತನಾಗಿ ವಿಸ್ಮಯ ದೃಷ್ಟಿಯಿಂದ ಆತನ ಆಪಾದ ಮಸ್ತಕವನ್ನೂ ನಿರೀಕ್ಷಿಸತೊಡಗಿದನು. ಆತನ ಹೆಸರು ಸಿರಾಜ-ಉದ್ದೀನ ಎಂದು. ಯಾವನನ್ನು ಉದ್ಧಾರ ಮಾಡುವುದಾಗಿ

ಬಂದಾಸೊಂದು ದಿನ ಅರಿಂದಮನು ಕುಲಸಚೆಗೆ ವಾಗ್ದಾನ ಮಾಡಿದ್ದನೋ ಅವನೇ ಇವನು.

ಸಿರಾಜುದ್ದೀನನು ಹೇಳಿದನು—ನಾನು ತಮ್ಮನ್ನು ಯಾವಾಗಲೂ ನೋಡಿಲ್ಲ; ಆದರೆ (ದೇವೇಂದ್ರವಿಜಯನನ್ನು ತೋರಿಸಿ) ಈ ದೊಡ್ಡ ಮನುಷ್ಯನನ್ನು ನಿನ್ನೆಯ ರಾತ್ರೆ ಇಲ್ಲಿ ಒಂದು ಸಲ ನೋಡಿದ್ದೆನು. ಹೊಗೆಯಿಂದ ತುಂಬಿ, ಗಾಳಿಯುಸಂಚಾರಕ್ಕೂ ಅವಕಾಶವಿಲ್ಲದ ಒಂದು ಕೊಠಡಿಯಲ್ಲಿ ಈತನು ಪುರಣಯಾತನೆಯಿಂದ ಗಟ್ಟಿಯಾಗಿ ಅರಚಿ ಕೊಳ್ಳುತ್ತಿದ್ದನು. ಆ ಸಮಯದಲ್ಲಿ ನಾನು ಕಿಡಕಿಯನ್ನೊಡೆದು ಈತನನ್ನು ಉಳಿಸಿದೆ. ನಾನು ಆಗ ಆ ಕೊಠಡಿಯ ಪಾರ್ಶ್ವದ ಕೊಠಡಿಯಲ್ಲಿಯೇ ಬಂದಿಯಾಗಿದ್ದೆನು; ಇಲ್ಲವಾಗಿದ್ದರೆ ನಿನ್ನೆಯ ದಿನ ಚುಮುಲೆಯ ಕೈಯಿಂದ ಇವನ ಜೀವನವು ಕೊನೆಗಾಣುತ್ತಿದ್ದಿತು.

ಅರಿಂದಮ—ಆ ಸಮಯದಲ್ಲಿ ನೀನು ಪಾರ್ಶ್ವದ ಕೊಠಡಿಯಲ್ಲಿ ಬಂದಿಯಾಗಿದ್ದೆನೆಂದು ಹೇಳುತ್ತಿರುವೆ. ನಿನ್ನನ್ನು ಬಂದಿಯನ್ನಾಗಿ ಮಾಡಿದವರು ಯಾರು?

ಸಿರಾಜ—ಫೂಲಸಾಹೇಬ.

ಅರಿಂದಮ—ಯಾವ ಅಭಿಪ್ರಾಯದಿಂದ ಫೂಲಸಾಹೇಬನು ನಿನ್ನನ್ನು ಬಂದಿಯನ್ನಾಗಿ ಮಾಡಿಟ್ಟಿರುವನೆಂಬ ಆ ವಿಚಾರವಾಗಿ ನಿನಗೇನಾದರೂ ತಿಳಿದಿದೆಯೆ?

ಸಿರಾಜ—ಇಲ್ಲ, ನನಗೆ ಅದು ತಿಳಿಯದು, ಆದರೆ ಫೂಲಸಾಹೇಬನ ಭೀಷಣ ಸ್ವಭಾವವನ್ನು ನೋಡಿದರೆ ಆದೇ ತರದ ಯಾವುದೋ ಒಂದು ಭೀಷಣಾಭಿಪ್ರಾಯವನ್ನು ಅವನಿಗೆ ಇದ್ದೇ ತೀರಬೇಕೆಂದು ತೋರುತ್ತದೆ.

ಅರಿಂದಮ—ಇಂದು ನೀನು ಬಡುಗಡೆ ಹೊಂದಿದ್ದು ಹೇಗೆ?

ಸಿರಾಜ—ಇಂದು ಕೂಡ ನಾನು ಉಪ್ಪರಿಗೆಯ ಒಂದು ಕೊಠಡಿಯಲ್ಲಿ ಸಿರ್ಬಂಧಿಸಲ್ಪಟ್ಟಿದ್ದೆನು. ಒಂದು ಮುರಿದ ಮಂಚದ ಮೇಲೆ

ಮಲಗಿಕೊಂಡು ನನ್ನ ಹಣೆಯಬರಹವನ್ನು ಕುರಿತು ಆಲೋಚಿಸುತ್ತಲಿದ್ದೆನು. ಆ ಸಮಯದಲ್ಲಿ ಕೊಠಡಿಯ ಹೊರಗಡೆ ಮೂಲೆಯಲ್ಲಿ ಯಾರದೋ ಪೆಜ್ಜೆಯ ಸದ್ದು ಕೇಳಿಸಿತು. ಆ ಮೂಲೆಯಲ್ಲಿ ಒಂದು ಸಣ್ಣ ಬಾಗಿಲಿತ್ತು. ಅದು ಹಠಾತ್ತಾಗಿ ತೆರೆಯಿತು. ಹಾಗೆಯೇ ಜುಮಲೆಯು ಆ ಕೊಠಡಿಯೊಳಕ್ಕೆ ಬಂದಳು; ನಾನು ಆ ಪಿಶಾಚಿಯನ್ನು ನೋಡಿ ಸಿದ್ರೆ ಮಾಡುವವನಂತೆ ಮಲಗಿದ್ದೆನು. ಅವಳು ಬಹಳ ಹೊತ್ತಿನವರೆಗೂ ನನ್ನ ಕೊಠಡಿಯಲ್ಲಿ ಸುಮ್ಮನೆ ಕುಳಿತಿದ್ದಳು. ಅನಂತರ ಒಂದು ಸಲ ಆ ಸಣ್ಣ ಬಾಗಿಲ ಮೂಲಕ ಕೊಠಡಿಯಿಂದ ಹೊರಕ್ಕೆ ಹೋದಳು, ಪುನಃ ಒಳಗೆ ಬಂದಳು, ಪುನಃ ಹೋದಳು, ಮತ್ತೆ ಬಂದಳು. ಮೂರು ನಾಲ್ಕು ಸಲ ಈ ರೀತಿ ಮಾಡಿ, ಅನಂತರ ಪುನಃ ಬರಲಿಲ್ಲ. ಜುಮಲೆಯು ಹೀಗೆ ಭಯದಿಂದ ಕಂದಿ ಕುಂದಿದ್ದುದನ್ನು ನಾನು ಒಂದೆ ಒಂದೂ ಕಂಡವನಲ್ಲ. ಇಂದು ಪುನಃ ಯಾವುದಾದರೊಂದು ಹೊಸತರದ ಘಟನೆಯು ಸಂಘಟಿಸಿರಬೇಕೆಂದು ನನ್ನ ಮನಸ್ಸಿಗೆ ಸ್ವಲ್ಪ ಸಂಶಯವಾಯಿತು; ಅಥವಾ ಹಾಗೆ ಸಂಘಟಿಸುವ ಸೂಚನೆಯಾದರೂ ತೋರಿರಬೇಕು, ಎಂದಂದುಕೊಂಡೆನು. ಜುಮಲೆಯು ಪುನಃ ಒಳಗಿರುಗಿ ಬಾರದುದನ್ನು ಕಂಡು ನಾನು ಮೆಲ್ಲ ಮೆಲ್ಲಗೆ ಎದ್ದುನೋಡಿದೆ; ಜುಮಲೆಯು ಹೊರಟುಹೋಗುವಾಗ ಕೊಠಡಿಯ ಮೂಲೆಯಲ್ಲಿದ್ದ ಆ ಸಣ್ಣ ಬಾಗಿಲನ್ನು ಮುಚ್ಚದೆ ಹಾಗೆ ತೆರೆದು ಹೋಗಿದ್ದಳು; ಜುಮಲೆಯ ಇದೊಂದು ಅಜಾಗ್ರತೆಯಿಂದ ನನಗೆ ತುಂಬ ಭರವಸೆಯುಂಟಾಯಿತು. ಈ ಸಮಯದಲ್ಲಿ ದುಷ್ಟನಾದ ಘೂಲಸಾಹೇಬ ಮತ್ತೂ ಪಾಕಿನಿಯಾದ ಜುಮಲೆಯರಿಗೆ ಕಾಣದ ಹಾಗೆ ಓಡಿಹೋಗಬಹುದೆಂದು ತೋರಿತು. ಹೀಗೆ ಉದ್ರೇಕಪಟ್ಟು ನಾನು ಆ ಬಾಗಿಲ ಮೂಲಕ ಕೊಠಡಿಯಿಂದ ಹೊರಕ್ಕೆ ಬಂದು ಕಗ್ಗತ್ತಲೆಗೆ ಸಿಕ್ಕಿದೆನು. ಆ ಸ್ಥಳದಲ್ಲಿ, ನನ್ನನ್ನೇ ನಾನು ಕಾಣದ ಹಾಗೆ ಕತ್ತಲೆ ದಟ್ಟವಾಗಿ ಕವಿದಿದ್ದಿತು. ಆಗ ಜುಮಲೆಯ ಮರೆವು ನಿಜವಾದ ಮರೆವೆಂದು ಭಾವಿಸದೆ ನಾನು ಮಾಡಬೇಕಾದುದನ್ನು ಕುರಿತು ಆಲೋಚಿಸಿದೆನು. ಅನುಭವದಿಂದ ಎಲ್ಲವೂ ಸರಿಹೋಯಿತು. ಜುಮ

ಲೆಯು ನನ್ನನ್ನು ಆ ಕೊಠಡಿಯಿಂದ ಈ ಅಂಧಕಾರದ ಕೊಠಡಿಯಲ್ಲಿ ಬಂದಿಯನ್ನಾಗಿ ಮಾಡಬೇಕೆಂದು ಈ ರೀತಿ ಮಾಡಿರಬಹುದೆಂದು ಊಹಿಸಿದೆನು. ಆದರೂ ಧೈರ್ಯಮಾಡಿ ಮುಂದರಿಯುತ್ತಾ ಬಂದೆನು; ಬಹು ಇಕ್ಕಟ್ಟಾದ ದಾರಿ, ಮಧ್ಯಭಾಗದಲ್ಲಿ ನಿಂತು ಎರಡು ಕೈಗಳನ್ನೂ ಚಾಚಿದರೆ ಎರಡು ಪಕ್ಕದ ಗೋಡೆಗಳೂ ಕೈಗೆ ನಿಲುಕುವ ಹಾಗಿದ್ದಿತು. ಮೇಲ್ಚಾವಣಿಯು ಛಿದ್ರಶೂನ್ಯವಾಗಿದ್ದಿತು. ನಾನು ಸ್ವಲ್ಪ ದೂರ ಬಂದ ಮೇಲೆ ಇದಿರಿಗೆ ಸ್ವಲ್ಪ ತಡೆಯಾಯಿತು. ಮೆಲ್ಲಮೆಲ್ಲಗೆ ಅದನ್ನು ತಟ್ಟಿನೋಡಿದೆ, ಅದು ಗೋಡೆಯಲ್ಲ ಒಂದು ಮರದ ಬಾಗಿಲು. ಅದನ್ನು ಬಹಳ ಬಲವಾಗಿ ತಳ್ಳಿದರೂ ತೆಗೆಯುವುದಕ್ಕೆ ಆಗಲಿಲ್ಲ; ಅದರೆ ಸ್ವಲ್ಪ ಬಲವಾಗಿ ನನ್ನ ಕಡೆಗೆ ಎಳೆಯಲಾಗಿ ಅದು ತೆರೆಯಿತು. ಮತ್ತೂ ಸಂಧ್ಯಾಕಾಲದ ಕಾಂತಿಹೀನವಾದ ಬೆಳಕು ಕಣ್ಣಿಗೆ ಬಿದ್ದಿತು. ಆಗ ನಾನು ಆ ಮಾರ್ಗವಾಗಿ ಹೊರಕ್ಕೆ ಹೊರಟು ಮತ್ತೊಂದು ಕೊಠಡಿಗೆ ಬಂದೆನು. ಕೂಡಲೇ ಆ ಬಾಗಿಲು ತನ್ನಷ್ಟಕ್ಕೆ ತಾನೇ ಮುಚ್ಚಿಕೊಂಡಿತು. ಅಂತಹ ಆಶ್ಚರ್ಯಕರವಾದ ಬಾಗಿಲನ್ನು ನಾನು ನೋಡಿದ್ದೇ ಇಲ್ಲ; ಹೊರಕ್ಕೆ ಬಂದು ತಿರುಗಿನೋಡಿದಾಗ ಅದು ಒಂದು 'ಆಲಮೇರಾ'ವಿನಂತೆ ಮಾರ್ಪಟ್ಟಿದ್ದಿತು. ಏನಾದರಾಗಲಿ, ಆ ಕೊಠಡಿಯಲ್ಲಿ ಯಾರೂ ಇರಲಿಲ್ಲ. ನಾನು ಕೂಡಲೆ ಕೆಳಗಿಳಿದು ಬಂದೆ. ಹೊರಗಿನಿಂದಲೇ ಈ ಕೊಠಡಿಯಲ್ಲಿನ ನಡವಳಿಯನ್ನೆಲ್ಲಾ ಕಂಡು ಸ್ತಂಭಿತನಾದೆನು. ಓಡಿಬಂದು ಜುಮಲೆಯ ಕೈಯೊಳಗಿಂದ ಸೀಸೆಯನ್ನು ಕಸಿದುಕೊಂಡೆನು.

ಅರಿಂದಮ—ನೀನು ನಮಗೆ ಮಾಡಿದ ಉಪಕಾರವನ್ನು ನಾವು ಒದುಕಿರುವವರೆಗೂ ಮರೆಯಲಾಗುವುದಿಲ್ಲ. ನೀನು ಬಾರದೇ ಇದ್ದಿದ್ದರೆ ಜುಮಲೆಯು ನಿಜವಾಗಿಯೂ ಅಗ್ನಿದ್ರಾವಕದಿಂದ ನಮ್ಮಿಬ್ಬರನ್ನೂ ಸುಟ್ಟು ಕೊಲ್ಲುತ್ತಿದ್ದಳು. ನೀನು ಕುಲಸಮಳನ್ನು ಬಲ್ಲೆಯಾ?

ಅರಿಂದಮನ ಬಾಯಲ್ಲಿ ಕುಲಸಮಳ ಹೆಸರನ್ನು ಕೇಳಿ, ಸಿರಾಜುದ್ದೀನನು ಏನೋ ಬಂದು ಬಗೆಯಾಗಿಹೋದನು. ಕೇಳಿದನು, ಕುಲಸಮಳು ಯಾರು?

ಅರಿಂದಮ—ತಿಳಿಯದೆ, ತವಿಾಜುದ್ದೀನರ ಮಗಳು.

ಸಿರಾಜ—ಬಲ್ಲೆ; ಆದರೆ ಈ ಫೂಲಸಾಹೇಬನ ದೆಸೆಯಿಂದ ಅವರಲ್ಲಿ ಯಾರೂ ಉಳಿದುಕೊಂಡಿರುವಂತೆ ತೋರಲಿಲ್ಲ.

ಅರಿಂದಮ—ಕುಲಸಮೆ ಬದುಕಿದ್ದಾಳೆ. ಕುಲಸಮೆಯ ತಂದೆ ಸತ್ತುಹೋದನು.

ಸಿರಾಜ—ಈ ವಿಚಾರವನ್ನು ಕುರಿತು ಇಲ್ಲಿ ಇವರ ಬಾಯಿಂದಲೇ ಕೊಂಚ-ಕೊಂಚ ಕೇಳಿದ್ದೇನೆ. ಆದೂ ಅಲ್ಲದೆ ಅರಿಂದಮನೆಂಬ ಯಾವನೋ ಪತ್ತೇದಾರನು ಇವರ ತಂತ್ರಗಳೆಲ್ಲವನ್ನೂ ಹೊರಗೆಡಹಿದ ನೆಂದೂ ಕೇಳಿದೆ. ಈಗ ಆತನ ಭಯದಿಂದಲೇ ಇವರು ಇಲ್ಲಿ ತಲೆಮರಸಿ ಕೊಂಡಿದ್ದಾರೆ. ಏನಾದರೂ ಆಗಲಿ, ಕುಲಸಮಳ ವಿಚಾರವಾಗಿ ತಮಗೆ ಇನ್ನೇನಾದರೂ ತಿಳಿದಿದೆಯೆ? ಕುಲಸಮಳ ಪತ್ತೆಹಚ್ಚಿದವನು ತಮಗೆ ಹೇಗೆ ತಿಳಿಯಿತು? ಆ ಪತ್ತೇದಾರನೇ ಕುಲಸಮಳನ್ನು ಕಾಪಾಡಿದನೆಂದು ಕೇಳಿದೆ, ನಿಶ್ಚಯವೆ?

ಅರಿಂದಮ—ಅರಿಂದಮನೆಂಬುದು ನನ್ನ ಹೆಸರೇ. ಕುಲಸಮಳು ನಿರಾಪದಳಾಗಿದ್ದಾಳೆ; ಅಕೆಗಾಗಿ ನೀನು ಉದ್ವಿಗ್ನನಾಗಬೇಕಾಗಿಲ್ಲ.

ಅನಂತರ ಕುಲಸಮೆ ಮತ್ತು ಫೂಲಸಾಹೇಬರ ವಿಚಾರವಾಗಿ ತನಗೆ ತಿಳಿದಿದ್ದುದನ್ನೆಲ್ಲಾ ಅರಿಂದಮನು ಸಂಕ್ಷೇಪವಾಗಿ ಹೇಳಿದನು.

ಸಿರಾಜ—ಹಾಗಾದರೆ ಫೂಲಸಾಹೇಬ ಮತ್ತೂ ಜುಮಲೆಯರನ್ನು ದಸ್ತಗಿರಿ ಮಾಡುವ ತಂತ್ರವೇನಾದರೂ ನಡೆದಿದೆಯೆ?

ಅರಿಂದಮ—ಜುಮಲೆಯನ್ನು ಇಂದು ಪುನಃ ಹಿಡಿಯಬಹುದೆಂದು ತೋರುವುದಿಲ್ಲ. ಫೂಲಸಾಹೇಬನನ್ನು ಹಿಡಿದು ಮೇಲ್ಮಹಡಿಯ ಕೊಠಡಿಯಲ್ಲಿ ಇಟ್ಟುಬಂದಿದ್ದೇನೆ. ಅವನನ್ನು ಹಿಡಿದುಹಾಕಿದಾಗ ಅವನು ತನ್ನ ವಿಷದ ಸೂಜಿಯನ್ನು ತನ್ನ ಕೈಗೇ ಚುಚ್ಚಿಕೊಂಡಿದ್ದನು. ಈ ವೇಳೆಗೆ ಅವನು ಮೃತನಾಗಿರಬಹುದೆಂದು ತೋರುತ್ತದೆ. ನಡೆಯಿರಿ, ಮೂವ್ವರೂ ಮೇಲಕ್ಕೆ ಹೋಗೋಣ.

* * * * *

ಮೂರು ಮಂದಿಯೂ ಫೂಲಸಾಹೇಬನನ್ನು ನೋಡುವುದಕ್ಕೆ ಹೊರಟರು. ಅರಿಂದಮನು ಫೂಲಸಾಹೇಬನಿಗೆ ಕೈಕೋಳಗಳನ್ನು ತೊಡಿಸಿ ಯಾವ ಕೊಠಡಿಯಲ್ಲಿ ಉರುಳಿಸಿ ಬಂದಿದ್ದನೋ ಈಗ ಆ ಕೊಠಡಿಗೆ ಮೂರು ಮಂದಿಯೂ ಪ್ರವೇಶಿಸಿದರು.

ಅಲ್ಲಿ ಫೂಲಸಾಹೇಬನು ಇರಲಿಲ್ಲ; ಎಲ್ಲರೂ ಬಹಳ ಹೊತ್ತಿಗೆ ವಿಸ್ಮಯಗೊಂಡರು. ನೋಡಿಯೂ ಕೇಳಿಯೂ ಅರಿಂದಮನು ತಾನು ಕೇವಲ ದಡ್ಡನೆಂದು ಭಾವಿಸಿಕೊಂಡನು.

ಒಂಬತ್ತನೆಯ ಪರಿಚ್ಛೇದ

ಗುಪ್ತದ್ವಾರ

ಬಹಳ ಹೊತ್ತಿನ ಮೇಲೆ ಸಿರಾಜುದ್ದೀನನು— ತಾವು ಫೂಲಸಾಹೇಬನನ್ನು ಬಂಧಿಸಿ ಇಟ್ಟಿದ್ದದ್ದು ಇದೇ ಸ್ಥಳದಲ್ಲಿಯೆ? ನಾನು ಇದಕ್ಕೆ ಮೊದಲು ಇಲ್ಲಿಗೆ ಒಂದು ಸಲ ಬಂದಿದ್ದೇನಷ್ಟೆ? ಆಗ ಈ ಕೊಠಡಿಯಲ್ಲಿ ಯಾರೂ ಇರಲಿಲ್ಲ.

ಅರಿಂದಮ—ಇದೇ ಕೊಠಡಿಯಲ್ಲಿಯೇ. ಬಾಗಿಲು ಒಡೆದಿರುವುದು ಕಾಣುವುದಿಲ್ಲವೇ? ಈ ಕೊಠಡಿಗೆ ಮಹತ್ತರವಾದ ಗುಣವೊಂದಿದೆ, ಜುಮಲೆಯು ಈ ಕೊಠಡಿಯೊಳಕ್ಕೆ ನುಗ್ಗಿ ಫಾಯಾಪ್ರತಿಮೆಯು ಹಾಗೆ ಅದೃಶ್ಯಳಾದಳು; ಈಗ ಪುನಃ ಇದೊಂದು ಅಸಂಭವ ವ್ಯಾಪಾರವು ನಡೆದಿದೆ.

ಸಿರಾಜ—ಈ ಕೊಠಡಿಗೆ ಒಂದು ಗುಣ ಇರುವುದೆಂದರಲ್ಲ. ನಾನು ಆ ಅಂಧಕಾರಮಯವಾದ ಸಣ್ಣ ಮಾರ್ಗವಾಗಿ ಹೊರಟು ಈ ಕೊಠಡಿಯಲ್ಲಿಯೇ ಹೊರಕ್ಕೆ ಬಂದದ್ದು. ಇಲ್ಲಿ ಕಾಣಿಸುವ ಅಲಮಾರು ಏನ ಒಳಗಡೆ ಬಂದು ದಾರಿಯಿದೆ. ನಾನು ತಮಗೆ ಗುಪ್ತದ್ವಾರದ ವಿಷಯವಾಗಿ ಹೇಳಿದೆನಲ್ಲಾ ಆ ಗುಪ್ತದ್ವಾರವು ಈ ಅಲಮೇರಾನ ಒಳಗೆ ಇದೆ. ಇಲ್ಲಿ ನೋಟು ಬಂದು ಹೇಳಿ ಅಲಮಾರುವನ್ನು ಅತನು

ಎಳೆದು ತೆರೆದನು ಮತ್ತು ಒಳಗಡೆ ಇರುವ ಒಂದು ಮರದ ಚಕ್ಕೆಯನ್ನು ಸ್ವಲ್ಪ ಬತ್ತಿದ ಕೂಡಲೇ ಅದು ಸ್ವಲ್ಪ ದೂರ ಒಳಭಾಗಕ್ಕೆ ಸರಿಯಿತು. ಹಾಗೆಯೇ ಒಳಗಡೆಯು ಆ ಅಂಧಕಾರ ಮಾರ್ಗವು ಗೋಚರವಾಯಿತು. ಜುಮುಲೆಯು ಈ ಮಾರ್ಗವಾಗಿಯೇ ನಿಮ್ಮ ಬಳಿಯಿಂದ ಅಂತರ್ಹಿತಳಾಗಿ ನನ್ನ ಕೊಠಡಿಗೆ ಬಂದು ಕುಳಿತಿದ್ದಳು ಎಂದು ಹೇಳಿದನು.

ಅರಿಂದಮ—ಹಾ! ಈಗ ತಾನೇ ಎಲ್ಲವೂ ತಿಳಿಯಿತು.

ಹೀಗೆಂದು ಹೇಳಿ ಅರಿಂದಮನು ದೇವೇಂದ್ರನಿಜಯ ಮತ್ತು ಸಿರಾಜುದ್ದೀನರನ್ನು ಸಂಗಡ ಕರೆದುಕೊಂಡು ಆ ಅಲಮೇರಾಮನ ರಹಸ್ಯಮಾರ್ಗವಾಗಿ ಒಳಕ್ಕೆ ಪ್ರವೇಶಿಸಿದನು. ಯಾವ ಕೊಠಡಿಯಲ್ಲಿ ತಾನು ಬಂದಿಯಾಗಿದ್ದನೋ ಆ ಕೊಠಡಿಯೊಳಕ್ಕೆ ಸಿರಾಜುದ್ದೀನನು ಅರಿಂದಮನನ್ನು ಕರೆದುಕೊಂಡುಹೋದನು. ಆ ಕೊಠಡಿಯಿಂದ ಹೊರಕ್ಕೆ ಹೋಗುವುದಕ್ಕೆ ಯಾವ ಮಾರ್ಗವೂ ಇರಲಿಲ್ಲವಾಗಿ ಆ ಗುಪ್ತ ಮಾರ್ಗದಿಂದಲೇ ಎಲ್ಲರೂ ಹಿಂದಿರುಗಿದರು.

ಅನಂತರ ಮೂರು ಮಂದಿಯೂ ಸೇರಿ ಕೊಠಡಿಗಳನ್ನೆಲ್ಲಾ ಒಂದೊಂದನ್ನಾಗಿ ಹುಡುಕುತ್ತಾ ಅಲೆದಾಡಿದರು. ಫೂಲಸಾಹೇಬನನ್ನಾಗಲೀ ಅಥವಾ ಜುಮುಲೆಯನ್ನಾಗಲೀ ಬಿಲ್ಲಿಯೂ ಕಾಣಲಿಲ್ಲ.

ಇತ್ತಲಾಗಿ ಸಂಧ್ಯೆಯು ಕಳೆಯುತ್ತ ಬಂದುದನ್ನು ಕಂಡು ರಾತ್ರಿಯು ಕತ್ತಲೆಯು ದಟ್ಟವಾಗಿ ವನಭೂಮಿಯನ್ನೆಲ್ಲಾ ಆವರಿಸಿ ಬಿಟ್ಟಿತು. ದೂರದ ಊರಿನ ಕಲರವವು ಬರುಬರುತ್ತ ಕಡಿಮೆಯಾಗುತ್ತ ಬಂದಿತು. ಆಗ ಎಲ್ಲರೂ ನಿರುದ್ಯಮಚಿತ್ತರಾಗಿ ಆ ತೋಟದ ಮನೆಯನ್ನು ಬಿಟ್ಟು ಹೊರಕ್ಕೆ ಬಂದರು.

ಅಂದಿನ ಅನುಸಂಧಾನವು ಅಲ್ಲಿಗೇ ಮುಗಿಯಿತು. ಮೂವ್ವರೂ ಮಗಲಿಗೆ ಪ್ರಯಾಣಮಾಡಿದರು.

ಹತ್ತನೆಯ ಪರಿಚ್ಛೇದ

ಭೂಗರ್ಭದಲ್ಲಿ

ಇಲ್ಲಿ ಫೂಲಸಾಹೇಬ ಮತ್ತೂ ಜುಮಲೆಯರ ವಿಷಯವಾಗಿ ಒಂದೆರಡು ಮಾತು ಹೇಳಿದರೆ ಅಸಂಗತವಾಗದೆಂದು ತೋರುತ್ತದೆ.

ಜುಮಲೆಯನ್ನು ಕಂಡುಹಿಡಿಯಬೇಕೆಂದು ಅರಿಂದಮ, ದೇವೇಂದ್ರ ವಿಜಯ ಮತ್ತೂ ಸಿರಾಜುದ್ದೀನ ಈ ಮೂರು ಮುಂದಿಯೂ ಸೇರಿ ಈ ಕೊತಡಿ, ಆ ಕೊತಡಿ ಎಂದು ಸುತ್ತುತ್ತಿದ್ದಾಗ, ಅದೇ ಸಮಯದಲ್ಲಿ ಪಾತಾಳಪುರಿಯ ಮಧ್ಯೆ, ಒಂದು ಕೊತಡಿಯಲ್ಲಿ ಜುಮಲೆಯು ಏಷಣ್ಣ ಮುಖದಿಂದ ಸಿಂತು ಸತನೇತ್ರಳಾಗಿ, ಮೂರ್ಛೆಗೊಂಡು ಅಚೇತನನಾಗಿ ಬಿದ್ದಿರುವ ಫೂಲಸಾಹೇಬನ ಶರೀರವನ್ನು ಬಹು ಕಾತರಳಾಗಿ ನೋಡುತ್ತಿದ್ದಳು. ಆ ಪಾತಾಳಪುರಿಯ ಒಂದು ಪಾರ್ಶ್ವದಲ್ಲಿ ಒಂದು ಸಣ್ಣ ದೀಪವು ಅಲ್ಲಿಯ ದಟ್ಟವಾದ ಅಂಧಕಾರದ ಮಧ್ಯೆ ಬಹು ತೇಜೋ ಹೀನವಾಗಿ ಉರಿಯುತ್ತಿದ್ದಿತು. ಆ ದೀಪದ ಸಣ್ಣ ಜ್ವಾಲೆಯು ದಟ್ಟವಾದ ಅಂಧಕಾರದ ಮಧ್ಯೆ ಸಿಂಧೂರದ ಹಾಗೆ ಅಚ್ಚಕೆಂಪಾಗಿದ್ದಿತು. ಆ ಪಾತಾಳಪುರಿಯ ನಾಲ್ಕೂ ಕಡೆ ಮುಚ್ಚಲ್ಪಟ್ಟಿದ್ದಿತು. ಯಾವ ಮಾರ್ಗವಾಗಿ ಅದರೊಳಕ್ಕೆ ಪ್ರವೇಶ ಮಾಡಬೇಕೆಂಬುದನ್ನು ಜುಮಲೆಯು ಮಾತ್ರ ಬಲ್ಲಳು. ನಮಗೆ ಅದನ್ನು ತಿಳಿದಿರಬೇಕಾದ ಆವಶ್ಯಕತೆಯೇನೂ ಕಂಡುಬರಲಿಲ್ಲ.

ಜುಮಲೆಯು ಸೀಸೆಯಿಂದ ಎರಡು ಮೂರು ತರದ ಔಷಧಿಗಳನ್ನು ತೆಗೆದು ಎರಡು ಮೂರು ಸಲ ಫೂಲಸಾಹೇಬನ ಬಾಯಿಗೆ ಹಾಕಿದಳು. ಔಷಧವು ಕಟವಾಯಿಂದ ಹರಿದು ನೆಲದ ಪಾಲಾಯಿತು.

ಇದರಿಂದ ಕೊಂಚವಾದರೂ ಪ್ರಯೋಜನವಾಗದ ಕಾರಣ ಜುಮಲೆಯು ಪರಿತವಾದೊಂದು ದೊಡ್ಡ ಚಾಕುವನ್ನು ಎತ್ತಿ ಕೊಂಡಳು. ಆ ಚೂರಿಯಿಂದ ಫೂಲಸಾಹೇಬನ ಬಲದ ಕೈಯಲ್ಲಿ ಗಾಯ ಮಾಡಿದಳು. ರಕ್ತಪ್ರವಾಹವು ಪ್ರಬಲವೇಗದಿಂದ ಹರಿಯಿತು. ಬರು

ಬರುತ್ತ ರಕ್ತಧಾರೆಯು ಕಡಿಮೆಯಾದಾಗ ಜುಮಲೆಯು ಆ ಗಾಯಕ್ಕೆ ಬಾಯಿಹಾಕಿ ರಕ್ತವನ್ನು ಹೀರಿ ಉಗುಳುತ್ತ ಬಂದಳು. ಹೀಗೆ ಬಹಳ ಹೊತ್ತು ಮಾಡಿದ ಮೇಲೆ ಫೂಲಸಾಹೇಬನಿಗೆ ಸ್ವಲ್ಪ ಜ್ಞಾನ ಬಂದಿತು. ಅವನು ಮೃತಶಯ್ಯೆಯಲ್ಲಿರುವ ದುರ್ಬಲ ರೋಗಿಯು ಹಾಗೆ ಏಳುವುದಕ್ಕಾಗಿ ಬಾರಿಬಾರಿಗೂ ವ್ಯರ್ಥವಾಗಿ ಬಲಸ್ರಯೋಗ ಮಾಡುತಲಿದ್ದನು. ಕಡೆಗೆ ನಿಶ್ಚೇಷ್ಟನಾಗಿ ಬಿದ್ದುಕೊಂಡು ಜುಮಲೆಯನ್ನು ತೀಕ್ಷ್ಣ ದೃಷ್ಟಿಯಿಂದ ನೋಡಿ—ಪಿಶಾಚಿ, ನೀನು ಯಾರೆ? ನೀನು ನನ್ನನ್ನು ಇದಾವ ನರಕಕ್ಕೆ ತಂದುಬಿಟ್ಟಿಯೆ? ಹೋಗು-ಹೋಗು-ಹೋಗು. ಇಲ್ಲಿಂದ ಈಗಲೇ ದೂರಕ್ಕೆ ತೊಲಗಿಹೋಗು; ನರಕಕ್ಕೆ ತಂದಿರುವೆ. ಇಲ್ಲಿಯೂ ನಾನು ಸುಖಿಯಾಗಿರಲು ಬಿಡಲೊಲ್ಲೆಯಲ್ಲೆ! ಎಂದು ಗದ್ದಿಸಿದನು.

ಹೀಗೆಂದು ಹೇಳಿ ಫೂಲಸಾಹೇಬನು ಮತ್ತೊಂದು ಕಡೆಗೆ ಮುಖವನ್ನು ತಿರುಗಿಸಿಕೊಂಡು ಬುಸಬುಸಗುಟ್ಟತೊಡಗಿದನು.

ಜುಮಲೆಯು ಆ ಗಾಯಕ್ಕೆ ಕಟ್ಟುಕಟ್ಟಿ, ಫೂಲಸಾಹೇಬನಿಗೆ ಪುನಃ ಮತ್ತೆ ಯಾವುದೋ ಔಷಧ ಕುಡಿಸಿದಳು. ಅದರಿಂದ ಸ್ವಲ್ಪ ಹೊತ್ತಿನೊಳಗಾಗಿ ಫೂಲಸಾಹೇಬನ ದುರ್ಬಲ ಶರೀರದ ದೌರ್ಬಲ್ಯವು ಬಹು ಮಟ್ಟಿಗೆ ಕಡಿಮೆಯಾಯಿತು. ಫೂಲಸಾಹೇಬನು ಮೆಲ್ಲಮೆಲ್ಲಗೆ ಎದ್ದು ಕುಳಿತನು.

ಜುಮಲೆ—ಈಗ ಹೇಗಿದೆ? ಇನ್ನೂ ಏನಾದರೂ ಬಾಧೆಯುಂಟೆ?

ಫೂಲಸಾಹೇಬ—(ಕ್ಷೀಣಸ್ವರದಲ್ಲಿ) ತಲೆಯಲ್ಲಿ ತುಂಬ ನೋವಾಗಿದೆ. ನೀನು ನನ್ನನ್ನು ಇಲ್ಲಿಗೇಕೆ ಕರೆದು ತಂದೆ?

ಜುಮಲೆ—ಅರಿಂದಮನ ವರ್ತಮಾನವು ಮರೆತುಹೋಯಿತೇನು? ಮೊದಲು ಅರಿಂದಮನು ನನ್ನನ್ನು ಪಿಡಿವುದಕ್ಕೋಸ್ಕರವಾಗಿ ಪ್ರಯತ್ನ ಪಟ್ಟಾಗ ನೀನು ಇಲ್ಲಿ ಇರಲಿಲ್ಲ. ಅವನು ನನ್ನ ಮಲಗುವ ಮನೆಯ ವರೆಗೂ ಹಿಂದಟ್ಟಿ ಬಂದನು. ನಾನು ಆ ಕೊಠಡಿಯಲ್ಲಿ ಅಲಮೇರಾವಿನ ಗುಪ್ತದ್ವಾರದ ಮಾರ್ಗವಾಗಿ ಸಿರಾಜುದ್ದೀನನ ಕೊಠಡಿಗೆ ಹೋಗಿ

ತಪ್ಪಿಸಿಕೊಂಡೆ; ಆಗ ಸಿರಾಜುದ್ದೀನನು ನಿದ್ರಿಸುತ್ತಿದ್ದನು. ಸ್ವಲ್ಪ ಹೊತ್ತಿನ ಮೇಲೆ ನಾನು ಪುನಃ ಆ ಗುಪ್ತದ್ವಾರದ ಹಿಂದುಗಡೆ ಇದ್ದುಕೊಂಡು ಆಲಿಸಿ ಕೇಳಿದೆ. ಅರಿಂದಮನಿಗೂ ನಿನಗೂ ಏನೋ ಮಾತುಕತೆಗಳಾಗುತ್ತಿದ್ದುವು. ಒಡನೆಯೇ ನಿಮ್ಮಿಬ್ಬರಿಗೂ ಕೈಕೈ ಕಲೆಯಿತು; ನಾನು ಪಕ್ಕದಲ್ಲಿಯೇ ಇದ್ದು ನೋಡುತ್ತಿದ್ದೆನು. ಕಡೆಗೆ ನೀನು ನಿನ್ನ ವಿಷದ ಸಲಾಕಿಯನ್ನು ಕೈಗೆ ಚುಚ್ಚಿಕೊಂಡು ಪ್ರಜ್ಞೆತಪ್ಪಿ ಬಿದ್ದುಕೊಂಡೆ. ಅರಿಂದಮನು ನಿನ್ನ ಕೈಕಾಲುಗಳಿಗೆ ಕೋಳಗಳನ್ನೂ ಬೇಡಿಯನ್ನೂ ತೊಡಿಸಿ ನಿನ್ನನ್ನು ಕೆಡಪಿಬಿಟ್ಟು ಹೋದನು. ಅವನು ಹೊರಟುಹೋದ ಮೇಲೆ ನಾನು ಒಬ್ಬಳೇ ನಿನ್ನನ್ನು ಎತ್ತಿಕೊಂಡು ಈ ಕೊಠಡಿಗೆ ತಂದೆನು. ಇಲ್ಲಿಗೆ ಬಂದನಂತರ ಇದರ ಪಾರ್ಶ್ವದಲ್ಲಿಯ ಅಂಧಕೂಪದೊಳಗೆ ಮನುಷ್ಯನು ನರಳಾಡುವ ಸದ್ದು ಕೇಳಿಸಿತು; ಆದರೆ ಇಲ್ಲಿಂದ ಯಾವುದೂ ಕಾಣಿಸಲಿಲ್ಲ. ಆ ನರಳಾಟದ ಕಾರಣವೂ ಸಹ ಸರಿಯಾಗಿ ಗೊತ್ತಾಗದೇ ಹೋದ್ದರಿಂದ ಇಲ್ಲಿಂದ ಮೇಲಕ್ಕೆ ಹೋಗಿ ನೋಡಿದೆನು. ಇದರ ಮೇಲಾಗ್ಗದ ಕೊಠಡಿಯಲ್ಲಿರುವ ಅಂಧಕೂಪದ ಬಾಗಿಲೊಳಗೆ ಬಂದು ಹಗ್ಗವು ಕಟ್ಟಿತ್ತು. ಒಳಗಡೆ ಬಗ್ಗಿ ನೋಡಲಾಗಿ ಎಲ್ಲವೂ ಗೊತ್ತಾಯಿತು. ಆಗ ಆ ಗಂಧಕ ದ್ರಾವಕದಿಂದ ಅರಿಂದಮ ಮತ್ತು ದೇವೇಂದ್ರವಿಜಯರನ್ನು ಸುಟ್ಟು ಕೊಲ್ಲಬೇಕೆಂದು ಪ್ರಯತ್ನಿಸಿದೆನು; ಆದರೆ ಕಾರ್ಯತಃ ಏನೂ ಸಾಗಲಿಲ್ಲ. ಸಿರಾಜುದ್ದೀನನ ಕೊಠಡಿಯಿಂದ ಹೊರಟುಬಂದಾಗ ಆ ಗುಪ್ತ ದ್ವಾರವನ್ನು ಮುಚ್ಚಿ ಬರುವುದು ಮರೆತುಹೋಯಿತು. ಇಂತಹ ಸಮಯದಲ್ಲಿ ಸಿರಾಜುದ್ದೀನನು ಬಂದು ನನ್ನ ಕೈಯಿಂದ ಸೀಸೆಯನ್ನು ಕಸಿದು ತೆಗೆದುಕೊಂಡನು. ಆಗಲೇ ಪ್ರತೀಕಾರ ಮಾಡುವುದು ಸುಲಭವಲ್ಲವೆಂದು ಯೋಚಿಸಿ ಇಲ್ಲಿಗೆ ಬಂದು ನಿನ್ನ ಶುಶ್ರೂಷೆ ಮಾಡ ತೊಡಗಿದೆನು. ಬಹು ವಿಧವಾಗಿ ಪ್ರಯತ್ನಪಟ್ಟು, ಏತರಿಂದಲೂ ನಿನಗೆ ಜ್ಞಾನ ಬಾರದಿರುವುದನ್ನು ಕಂಡು, ತುಂಬ ಯೋಚನೆಗೆ ಕಾರಣ ವಾಯಿತು. ಕಡೆಗೆ ನಿನ್ನ ಕೈಯೊಳಗಿನ ಯಾವ ನರಕ್ಕೆ ಆ ಸೂಜಿ ತಗಲುದ್ದಿತೋ ಆ ನರವನ್ನು ಚೂರಿಯಿಂದ ಕತ್ತರಿಸಿಹಾಕಿದೆನು;

ಹಾಗೆಯೇ ಆ ಗಾಯಕ್ಕೆ ಬಾಯೊಟ್ಟಿ ರಕ್ತವನ್ನು ಹೀರಿ ತೆಗೆದೆನು. ರಕ್ತದ ಸಂಗಡ ವಿಷದ ಕಾರ್ಯವು ಬಹು ಮಟ್ಟಿಗೆ ತೊಲಗಿಹೋಯಿತು. ನಂತರ ನಿನಗೆ ಪ್ರಜ್ಞೆ ಬಂದಿತು.

ಫೂಲಸಾಹೇಬ—ಹಾಗಾದರೆ ಸಿರಾಜುದ್ದೀನನೂ ಕೈತಪ್ಪಿ ಹೋದ! ಈ ಸಿರಾಜುದ್ದೀನನ ನೆಪದಿಂದ ಕುಲಸಪೆಯು ಬಳಿಯಲ್ಲಿ ಹತ್ತೆಂಟು ಸಾವಿರ ರೂಪಾಯಿ ಬರಮಾಡಿಕೊಳ್ಳಬಹುದು ಎಂದು ಕೊಂಡಿದ್ದೆನು; ಈಗ ಅದಕ್ಕೂ ಮಾರ್ಗವಿಲ್ಲ.

ಜುಮಲೆ—ಅರಿಂದಮನು ಬದುಕಿರುವವರೆಗೆ ನಮ್ಮ ಸಂಕಲ್ಪ ಗಳೊಂದೂ ಸಿದ್ಧಿಸೇರುವ ಹಾಗಿಲ್ಲ.

ಫೂಲಸಾಹೇಬ—ಈಗ ಅದು ಚೆನ್ನಾಗಿ ತಿಳಿಯಬಂದಿತು; ಅರಿಂದ ಮನನ್ನು ಕೊಂದುಹಾಕದಿದ್ದರೆ ನಮ್ಮಗಳ ಆಯುಷ್ಯವು ಸುಪ್ರಸನ್ನ ವಾಗುವುದೇ ಇಲ್ಲ. ಏನು ಮಾಡಿದರೆ ಅರಿಂದಮನು ಬೇಗ ಸಾಯುವ ನೆಂಬೋ, ಆ ಪ್ರಯತ್ನವನ್ನು ಬಲ್ಲಕ್ಕೂ ಹೊಡಲು ಮಾಡುತ್ತೇನೆ.

ಶ್ರೀ

ಮಾಯಾವಿ

ನೀನೆಯ ಭಾಗ

ಒಂದನೆಯ ಪರಿಚ್ಛೇದ

ಭಯಂಕರ ಸನ್ನಾಹ

ಅನಂತರ ಎರಡು ತಿಂಗಳು ಕಳೆಯಿತು. ಆ ಎರಡು ತಿಂಗಳ ಮುಧ್ಯೆ ಪಾತಕರ ಹೃದಯದಲ್ಲಿ ಸಿದ್ರಿಸುತ್ತಿರುವ ವಿಸ್ಮಯವನ್ನು ಎಚ್ಚರಗೊಳಿಸುವಂತಹ ಘೋಷಣೆಯೂ ರೋಮಾಂಚಕರವೂ ಆದ ಯಾವ್ದೊಂದು ಘಟನೆಯೂ ಘಟಿಸಲಿಲ್ಲ. ಈ ಮುಧ್ಯೆ, ಸಿರಾಜುದ್ದೀನನಿಗೂ ಕುಲಸಮೆಗೂ ಮದುವೆಯಾಗಿ ಆ ದಂಪತಿಗಳು ಸುಖಸಂತೋಷಗಳಿಂದಿರುವರೆಂಬುದನ್ನು ಕೇಳಿ, ಉದಾರಚಿತ್ತರಾದ ನಮ್ಮ ಪಾತಕ ಪಾತಕಿಯರು ನಿಶ್ಚಿಂತರಾಗುವರೆಂದು ಊಹಿಸುತ್ತೇವೆ. ಹಾಗೆಯೇ ಫೂಲಸಾಹೇಬನನ್ನು ಹುಡುಕುವುದರಲ್ಲಿ ಶ್ರೇಷ್ಠ ಪತ್ತೇದಾರನಾದ ಅರಿಂದಮನ ಎರಡು ತಿಂಗಳ ದೀರ್ಘ ಕಾಲವು ವ್ಯರ್ಥವಾಗಿ ವ್ಯಯವಾಯಿತೆಂಬುದನ್ನು ಕೇಳಿ ಪಾತಕ ಪಾತಕಿಯರು ಮರುಗಬಹುದು. ಆದರೆ ಅರಿಂದಮನು ನಿರುತ್ಸಾಹಿಯಾಗಿ ಕೆಲಸಮಾಡದೆ ಕುಳಿತಿರಲಿಲ್ಲ. ಕಾಲವು ಕಳೆದುಹೋದಹಾಗೆಲ್ಲಾ ಅರಿಂದಮನು ಫೂಲಸಾಹೇಬನಿಗೋಸ್ಕರ ಅಧೈರ್ಯಗೊಳ್ಳುತ್ತಿರುವನು. ಈ ಎರಡು ತಿಂಗಳುಗಳಲ್ಲಿ ಆತನಿಗೆ ಆಹಾರದಲ್ಲಿ ರುಚಿಯಿಲ್ಲ; ನಿದ್ರೆಯಲ್ಲಿ ಸುಖವಿಲ್ಲ; ಮನಸ್ಸಿಗೆ ಶಾಂತಿಯಿಲ್ಲ; ಈ ಕಾರಣದಿಂದಲೇ ಅವನಿಗೆ ಆರೋಗ್ಯದ ಕಡೆ ಗಮನವೇ ಇಲ್ಲ. ಇಷ್ಟು ಪರಿಶ್ರಮಗೊಂಡರೂ ಕೈಗೊಂಡ ಕಾರ್ಯಸಾಧನೆಯ ವಿಚಾರದಲ್ಲಿ ಕೊಂಚವಾದರೂ ಸಾರ್ಥಕತೋರಲಿಲ್ಲ.

ಇತ್ತಲಾಗಿ ಅರಿಂದಮನು ಫೂಲಸಾಹೇಬನನ್ನು ಹಿಡಿವುದರಲ್ಲಿ ತನಗೆ ಪ್ರಾಣಾಪಾಯ ಸಂಭವಿಸಿದರೂ ಸಂಭವಿಸಲೆಂದು ಪ್ರಯತ್ನಪಡುತ್ತಿರುವನು. ಇದೇ ಸಮಯದಲ್ಲಿ ನಗರದ ಹೊರಭಾಗದಲ್ಲಿ ಗಹನವಾದೊಂದು ಅರಣ್ಯ; ಅದರ ಮಧ್ಯದಲ್ಲಿ ಅರಿಂದಮನ ಮರಣವನ್ನು ಬಯಸುವ ಭಯಂಕರವಾದೊಂದು ದುರಾಲೋಚನೆ ನಡೆಯುತ್ತಿದೆ.

ಅರಿಂದಮನು ನಿರಾಜುದ್ದೀನನನ್ನು ಯಾವ ಮನೆಯಿಂದ ಬಿಡಿಸಿದನೋ ಆ ಮನೆಯನ್ನು ಅತಿಕ್ರಮಿಸಿ ಈಶಾನ್ಯಮುಖವಾಗಿ ಬಹುದೂರ ನಡೆದರೆ ವಿಸ್ತಾರವಾದೊಂದು ವನವಿನ ತೋಟವು ಕಾಣಿಸುವುದು. ಆ ತೋಟದ ಹೆಸರು 'ಕಾಂಪಾ' ಎಂದು. 'ಕಾಂಪಾ'ವಿನ ನಾಲ್ಕು ಕಡೆಗಳಲ್ಲಿಯೂ ದೊಡ್ಡ ದೊಡ್ಡ ಮರಗಳು! ವಿಸ್ತಾರವಾದ ಅರಣ್ಯ!! ಅದರಲ್ಲಿ ಗಭೀರವಾದ ನಿಸ್ತಬ್ಧತೆ!!!

ರಾತ್ರಿ; ಚಂದ್ರೋದಯವಾಗಿದೆ; ಬಹುಳ ಸಪ್ತಮಿಯ ಕ್ಷೀಣ ಚಂದ್ರ. ಕ್ಷೀಣಚಂದ್ರನ ಬೆಳಕು ವನಮಧ್ಯೆ ಅಷ್ಟು ಚೆನ್ನಾಗಿ ಪ್ರವೇಶ ಮಾಡುವುದು ಸಾಧ್ಯವಿರಲಿಲ್ಲ; ಅಲ್ಲಲ್ಲಿ ಕೊಂಚ ಕೊಂಚ; ನೋಡಿದರೆ ಕೇವಲ ಅಸ್ಪಷ್ಟವಾಗಿ ಕಾಣಿಸುತ್ತಿದೆ; ಆದರೆ, ಆ ವನದ ಪಾರ್ಶ್ವದಲ್ಲಿ, ಕಾಳೂರಾಯನ ಹಳೆಯ ಮನೆ ಇರುವ ಭಾಗದಲ್ಲಿ, ಬಹು ಮಟ್ಟಿಗೆ ಬಯಲಾಗಿರುವುದರಿಂದ ಅಲ್ಲಿ ಚಂದ್ರಿಕೆಯು ನಿರ್ವಿಘ್ನವಾಗಿ ವ್ಯಾಪಿಸಿತ್ತು. ಏನಾದರೇನು, ಆ ಭೀಷಣ ಸ್ಥಳದಲ್ಲಿ ಬೆಳದಿಂಗಳೂ ಬಹು ಭಯಂಕರವಾಗಿ ತೋರುತ್ತಿರುವುದು.

ಈ ಅಡವಿಯ ಮಧ್ಯೆ ಇರುವ ನಿರ್ಜನವಾದ ಮಂದಿರವು ಒಬ್ಬ ಡಕಾಯಿತನಿಂದ ಸ್ಥಾಪಿತವಾದದ್ದು. ಬಹು ದಿನಗಳಿಗೆ ಮುಂಚೆ ಈ ಮನೆಯಲ್ಲಿ ಲೆಕ್ಕವಿಲ್ಲದಷ್ಟು ನರಬಲಿಗಳು ನಿರಾಂತಕವಾಗಿ ನಡೆದುಹೋಗಿರುವುದು ಮಾತ್ರವಲ್ಲದೆ ಎಷ್ಟೋ ಜನರ ತಲೆಗಳನ್ನು ಅವರವರ ಶರೀರದಿಂದ ಬೇರ್ಪಡಿಸುವುದಕ್ಕಾಗಿ ರಹಸ್ಯವಾದ ಸಮಾಲೋಚನೆಗಳೂ ಇಲ್ಲಿ ನಡೆದಿರುವವು. ಈ ದಿನ, ಈ ಬಹುಳ ಸಪ್ತಮಿಯ ಮಧ್ಯರಾತ್ರಿಯಲ್ಲಿ ಅನೇಕರು ಒಟ್ಟುಗೂಡಿ ಮಂದಿರದ ಬಾಗಿಲನ್ನು ಮುಚ್ಚಿ ಅಂತಹದೇ

ಒಂದು ಭಯಂಕರ ದುರಾಲೋಚನೆಯಲ್ಲಿ ಮಗ್ನರಾಗಿದ್ದಾರೆ. ಈ ದುರಾಲೋಚನೆಗಾರರ ನಡುವೆ ಸಿಕ್ಕಿದ ಹೊಗೆಯಸೊಪ್ಪು ಮತ್ತೂ ಸಿದ್ಧಪತ್ರೆ ಇವು ಕ್ಷಣ ಕ್ಷಣಕ್ಕೂ ಸುಟ್ಟು ಬೂದಿಯಾಗುತ್ತಲಿವೆ. ಮಂದಿರದೊಳಗೆ ನಾಲ್ಕೂ ಕಡೆಯಲ್ಲಿ ಗಾಳಿಯ ಸಂಚಾರಕ್ಕೂ ಅವಕಾಶ ಬಿಲ್ಲದ ಹಾಗೆ ಬಾಗಿಲುಗಳನ್ನೂ ಕಿಟಕಿಗಳನ್ನೂ ಮುಚ್ಚಿದ್ದುದರಿಂದ ಹೊಗೆಯು ಮಂದಿರದಲ್ಲಿಯೇ ನಿಬಿಡವಾಯಿತು. ಒಂದು ಕಡೆಯಲ್ಲಿ ಒಂದು ದೀಪವಿದ್ದಿತು. ಅದು ಆ ಧೂಮರಾಶಿಯನ್ನು ಭೇದಿಸಿಕೊಂಡು ತನ್ನ ಬೆಳಕನ್ನು ಏನಾದರ ಗೊಳಿಸುವುದು ಅಸಾಧ್ಯವೆಂದರಿತು ಕ್ರಮ ಕ್ರಮವಾಗಿ ಕಾಂತಿಹೀನವಾಗುತಲಿತ್ತು. ಇಂತಹ ಸಮಯದಲ್ಲಿ ಮುಚ್ಚಿದ್ದ ಬಾಗಿಲನ್ನು ಯಾರೋ ತಟ್ಟುವ ಶಬ್ದವು ಮಂದಿರ ಮಧ್ಯದಲ್ಲಿ ಪ್ರತಿಧ್ವನಿತವಾಯಿತು.

ಒಳಗಿದ್ದವರಲ್ಲಿ ಒಬ್ಬನು—"ಯಾರದು?" ಎಂದನು.

"ನಾನು" ಎಂದು ಹೊರಗಡೆಯಿಂದ ಉತ್ತರ ಬಂದಿತು.

ಮೊದಲು ಮಾತನಾಡಿದ ಆ ಮುಂಗೋಪಿಯು ತನ್ನ ಸೊಟ್ಟು ಮೋರೆಯನ್ನು ಮತ್ತಷ್ಟು ಸಕ್ಕಮಾಡಿಕೊಂಡು,—ಅಯ್ಯಾ, 'ನಾನು' ಎಂದರೆ ತಿಳಿಯುವ ಒಗೆ ಹೇಗೆ? ಎಂದು ಜೋರಿನಿಂದ ಗಟ್ಟಿಯಾಗಿ ಹೇಳಿದನಲ್ಲದೆ, ಆಗಂತುಕನನ್ನು ಉದ್ದೇಶಿಸಿ—"ನಿನ್ನ ಸಂಬರು?" ಎಂದನು.

"ಸಂಬರು ೧."

"ನಮ್ಮ ಒಟ್ಟು ಸಂಬರು?"

"ಹದಿಮೂರು."

ಕೂಡಲೇ ಮಂದಿರದ ಬಾಗಿಲು ತೆರೆಯಲ್ಪಟ್ಟಿತು. ಒಬ್ಬನು ಒಳಕ್ಕೆ ಪ್ರವೇಶಮಾಡಿದನು. ಈ ಮನುಷ್ಯನು ನಮಗೆ ಅಪರಿಚಿತನಲ್ಲ; ಚಿರಪರಿಚಿತನಾದ ಫೂಲಸಾಹೇಬ!

ಫೂಲಸಾಹೇಬನು ತನಗೋಸ್ಕರವಾಗಿ ಸಿದ್ಧವಾಗಿದ್ದ ಸ್ಥಳದಲ್ಲಿ ಹೋಗಿ ಕುಳಿತನು. ಯಾರೂ ಯಾವ ಮಾತನ್ನೂ ಆಡಲಿಲ್ಲ. ಸ್ವಲ್ಪ

ಹೊತ್ತಿನವೇಲೆ ಫೂಲಸಾಹೇಬನು ಭೂಮಾವೃತವಾದ ಆ ಸ್ತಬ್ಧತೆಯನ್ನು ಭಂಗಪಡಿಸಿ ನಮ್ಮವರೆಲ್ಲರೂ ಬಂದಿರುವರೆ? ಎಂದು ಕೇಳಿದನು.

ಒಬ್ಬನು ಅಲ್ಲಿದ್ದವರನ್ನೆಲ್ಲ ಎಣಿಸಿ, ಹೂಂ ಎಂದು ಉತ್ತರ ಕೊಟ್ಟನು.

ಫೂಲಸಾಹೇಬ—ಇಂದಿನ ನಮ್ಮ ಉದ್ದೇಶವು ಯಾರಿಗೂ ತಿಳಿಯದ ಏಚಾರವಲ್ಲ, ಅಲ್ಲವೆ?

ಎಲ್ಲರೂ—ಸರಿಯಾದ ರೀತಿಯಲ್ಲಿ ಹಗೆ ತೀರಿಸಿಕೊಳ್ಳುವುದು.

ಫೂಲಸಾಹೇಬ—ನಮ್ಮ ಹಗೆತನಕ್ಕೆ ಗುರಿಯಾದವನು ಯಾರು?

ಎಲ್ಲರೂ—"ಅರಿಂದಮ" ಎಂದು ಒಟ್ಟಿಗೆ ಹೇಳಿದರು. ಪುನಃ ಎಲ್ಲರೂ ನೀರವ. ಆಗ ಆ ಏಸ್ತಾರವಾದ ಮನೆಯು "ಗಂ ಗಂ" ಎನ್ನುವಂತಿದ್ದಿತು.

ಎರಡನೆಯ ಪರಿಚ್ಛೇದ

ಭೀಷಣ ದುರಾಲೋಚನೆ

"ನೀವುಗಳೆಲ್ಲರೂ ಯಾವುದಾದರೊಂದು ರೀತಿಯಲ್ಲಿ ಆ ಅರಿಂದಮನಿಂದ ಭಂಗಪಟ್ಟೇ ಇರುವಿರಿ. ನೀವು ಅವರ ಪ್ರತೀಕಾರಕ್ಕಾಗಿ ಯಾವ ಪ್ರಯತ್ನವನ್ನೂ ಮಾಡದೇ ಇರುವುದಾದರೆ ಅದಕ್ಕೆ ಏಂಬಿಡಿದ ಹೇಡಿತನವೂ ಉಂಟೇನು? ಎರಡನೆಯ ನಂಬರಿನವನು ಯಾರು? ನನ್ನ ಇದಿರಾಗಿ ಬಂದು ನಿಲ್ಲು" ಎಂದು ಫೂಲಸಾಹೇಬನು ಹೇಳಿದನು.

ನೇರಿದ್ದ ಗುಂಪಿನ ಮಧ್ಯದಿಂದ ಒಬ್ಬನು ಎದ್ದುಬಂದು ಫೂಲಸಾಹೇಬನ ಇದಿರಾಗಿ ನಿಂತನು. ಆ ವ್ಯಕ್ತಿಯು ಬಹು ದೀರ್ಘ; ಅಲ್ಪ ಸ್ವಲ್ಪವಾಗಿ ಸುಧಾರಣೆಗೊಂಡ ತಾಳೆಯ ಮರವೆಂದೇ ಹೇಳಬಹುದು. ಇಷ್ಟು ದೀರ್ಘಾಕಾರನಾದವನನ್ನು ಕಾಣುವುದು ಅತಿವಿರಳ. ಮುಖವನ್ನು ನೋಡಿದ ಪಾತ್ರದಿಂದಲೇ 'ಯಮನ ಯಾಮುನೀ ವಿನೋದ

ಕತೆ'ಯಲ್ಲಿ ಉದ್ಧೃತನಾದ ದೈತ್ಯರಾಜನ ಸ್ಮರಣೆಯು ತಾನಾಗಿ ಬರುವುದು.

ಫೂಲಸಾಯೇಬನು ಅವನನ್ನು ಕುರಿತು ಯಾಜಮಾನ್ಯದ ದರ್ಪದಿಂದ, ಆರಿಂದಮನು ನಿನಗೆ ಏನು ಮಾಡಿದನು? ಎಂದು ಪ್ರಶ್ನೆ ಮಾಡಿದನು.

ಅನೇ ನಂಬರಿನವ—ಅವನು ನನ್ನ ಬಡದ ಕೈಯನ್ನೇ ಮುರಿದು ಹಾಕಿದ್ದಾನೆ.

ಫೂಲ.—ಅವನು ನಿನ್ನ ಕೈ ಮುರಿದದ್ದು ಹೇಗೆ?

ಅನೇ ನಂಬರಿನವ—ಆರಿಂದಮನಿಗೂ ನನಗೂ ಒಂದು ದಿನ ಕೈಕೈ ಕಲೆತಿತು. ಆಗ ಆ ಲವಡೀಮಗನು ನನ್ನ ಕೈ ತಿರುಗಿಸಿ ಹಿಡಿದುಕೊಂಡು ನನ್ನನ್ನು ಎತ್ತಿಹಾಕಿದ್ದರಿಂದ ಕೈಮುರಿದು ಹೋಯಿತು.

ಫೂಲ.—ಹಾಗಾದರೆ ಅವನ ಮೇಲೆ ನಿನಗೆ ಸಂಪೂರ್ಣ ದ್ವೇಷವು ಇದ್ದೇಯಿರಬಹುದು?

ಅನೇ ನಂಬರಿನವ—ಆ ಮಾತನ್ನು ಪುನಃಪುನಃ ಹೇಳಬೇಕೆ? ಸಮಯ ಸಿಕ್ಕಿ, ಆ ಸೂಳೇಮಗನ ತಲೆಯನ್ನೇ ಅಗಿದು ತಿಂದುಬಿಟ್ಟಾಗ ನನ್ನ ದ್ವೇಷವು ಕೊಂಚ ಮಟ್ಟಿಗೆ ಕಡಿಮೆಯಾದರೂ ಆಗಬಹುದು.

ಫೂಲ.—ಒಳ್ಳೆಯದು, ಕುಳಿತುಕೋ. ಇದರ ಮುಧ್ಯೆ ಮೂರನೆಯ ನಂಬರಿನವನಾರು?

"ನಾನು" ಎಂದು ಹೇಳುತ್ತ, ಒಬ್ಬನು ಎದ್ದುಬಂದು ಎರಡನೆಯವನು ಅಡುವರೆಗೂ ನಿಂತಿದ್ದ ಸ್ಥಳದಲ್ಲಿ ನಿಂತುಕೊಂಡನು; ಆದರೆ ಎರಡನೆಯವನ ಸ್ಥಾನವನ್ನೆಲ್ಲಾ ಆಕ್ರಮಣ ಮಾಡಲಿಲ್ಲವೆಂಬುದು ವ್ಯಸನಕರವಾದ ವಿಚಾರ. ಅಕ್ಕಪಕ್ಕಗಳಲ್ಲಿನ ರೀತಿಯು ಹಾಗಿರಲಿ; ಮೇಲ್ಭಾಗದಲ್ಲಿ ಬಹು ಭಾಗವು ಉಳಿದುಹೋಗಿತ್ತು. ಈ ವ್ಯಕ್ತಿಯು ಎರಡನೆಯ ನಂಬರು ವ್ಯಕ್ತಿಗಿಂತ ಉದ್ದದಲ್ಲಿ ಬಹು ಕಡಿಮೆ. ಗಾತ್ರದಲ್ಲಿ ಅವನಿಗಿಂತ ಬಹು ದಪ್ಪನಾಗಿದ್ದನು. ತೂಕದಲ್ಲಿ ನಾಲ್ಕುರಷ್ಟು ಹೆಚ್ಚೆಂದು

ಹೇಳಿದರೂ ಹೇಳಬಹುದು. ಅತಿ ನಿರಕ್ತಿಯೂ ಬಹು ಕಪಟ ಸ್ವಭಾವವೂ ಒಂದಾಗಿ ಸೇರಿ ಮುಖವು ಕಾಂತಿಹೀನವಾಗಿದ್ದಿತಲ್ಲದೆ ಬಹು ಕಾಲದ ವರೆಗೂ ಅವು ಅಲ್ಲಿಯೇ ನೆಲೆಯಾಗಿರಲು ಸಂಕಲ್ಪಮಾಡಿಕೊಂಡಿದ್ದಂತೆ ತೋರುತ್ತಿದ್ದಿತು.

ಫೂಲಸಾಹೇಬನು ಅವನನ್ನು ಕುರಿತು, ಆರಿಂದಮನು ನಿನಗೆ ಮಾಡಿದ ಅಪಕಾರವೇನು ? ಎಂದನು.

ಆ ವ್ಯಕ್ತಿಯು ತನ್ನ ಮೂಗಿನ ಕಡೆಗೆ ಕೈತೋರಿಸಿದನು. ನಿಶ್ಚಯವಾಗಿಯೂ ಆ ದುಷ್ಟನ ಮೂಗು ಕುಸಿದುಹೋಗಿತ್ತು.

ಫೂಲ.—ಏನೆ ಹೀಗಾಯಿತು ?

೩ನೇ ನಂಬರಿನವ—ಅವನು ನನ್ನ ಮೂಗು ಕೊಯ್ದುಹಾಕಿದ್ದಾನೆ.

ಫೂಲ.—ನಿನ್ನ ಮೂಗಿಗೆ ಪ್ರತಿಯಾಗಿ ಅವನ ಮೂಗನ್ನು ಅಪೇಕ್ಷಿಸುವೆಯೋ ಹೇಗೆ ?

೩ನೇ ನಂಬರಿನವ—ನನ್ನ ಮೂಗಿಗೆ ಬದಲಾಗಿ ನಾನು ಅವನ ಪ್ರಾಣವನ್ನೇ ಅಪೇಕ್ಷಿಸುತ್ತೇನೆ.

ಫೂಲ.—ಒಳ್ಳೆಯದು, ನೀನು ಹೊರಡು, ನಾಲ್ಕನೇ ನಂಬರಿನವನು ಯಾರಪ್ಪ ?

ದಳಮಧ್ಯದಿಂದ ದುರ್ಬಲನಾದ ಮನುಷ್ಯನೊಬ್ಬನು ಎದ್ದು ಕುಂಟುತ್ತ ಬಂದು ಫೂಲಸಾಹೇಬನಿಗೆ ನಿಂತನು.

ಫೂಲ.—ನಿನಗೇನಾಯಿತು ?

೪ನೇ ನಂಬರಿನವ—ನನ್ನ ಕಾಲು ಮುರಿದಿರುತ್ತಾನೆ. ಇದರ ಪ್ರತೀಕಾರ ಮಾಡದೆ ನಾನು ಬಿಡುವುದಿಲ್ಲ.

ಫೂಲ.—ಏದನೆಯ ನಂಬರಿನವನೆಲ್ಲ ?

೫ನೇ ನಂಬರಿನವ—ನಾನು ಇಲ್ಲಿದ್ದೇನೆ, ಎಂದು ಮುಂದೆ ಬಂದನು.

ಫೂಲ.—ನಿನ್ನ ಸಮಾಚಾರವೇನು? ಹೇಳು?

೫ನೇ ಸಂಬುನಸನು ತನ್ನ ಬಲಗೈಯನ್ನು ಫೂಲಸಾಹೇಬನ ಇದಿರಿಗೆ ಎತ್ತಿ ಹಿಡಿದನು. ಆ ಕೈಯಲ್ಲಿ ಹೆಬ್ಬೆರಳ ಏನಾ ಮುತ್ತಾವ ಬೆರಳೂ ಇರಲಿಲ್ಲ.

ಫೂಲ.—ಅರಿಂದಮನು ಒಟ್ಟಿಗೆ ನಿನ್ನ ನಾಲ್ಕು ಬೆರಳುಗಳನ್ನೂ ಹೇಗೆ ಕತ್ತರಿಸಿದನು?

೫ನೇ ಸಂಬುನಸ—ನಿನ್ನೂಲನ ಗೋಲಿಯಿಂದ. ನಾನು ಅವನನ್ನು ಮುಷ್ಟಿಯಿಂದ ಹೊಡೆಯುವುದಕ್ಕೆಂದು ಓಡುಹೋಗುತ್ತಿದ್ದಾಗ ಅವನು ದೂರದಲ್ಲಿದ್ದುಕೊಂಡೇ ನೋಟ ನಿನ್ನೂಲಿನಿಂದ ಹೊಡೆದು ರಕ್ಷಿಸುವ್ಯದರೊಳಗಾಗಿ ನನ್ನ ಮುಷ್ಟಿಯ ಅರ್ಧ ಭಾಗವನ್ನು ಹಾರಿಸಿಬಿಟ್ಟನು. ನನಗೆ ಅದರ ಸುಳಿವೇ ತಿಳಿಯಲಿಲ್ಲ.

ಫೂಲ.—ಆರನೆಯ ಸಂಬುನಸನು ಎದ್ದುಬರಲಿ.

ಆರನೆಯ ಸಂಬುನಸನು ಕೂಡಲೇ ಎದ್ದುಬಂದನು. ಫೂಲ ಸಾಹೇಬನು ಅವನನ್ನು ಕುರಿತು, ನೀನು ಬಂತಪ ಸಂಕಟದಿಂದ ನಮ್ಮ ಗುಂಪಿಗೆ ಬಂದುಸೇರಿದೆ? ಅರಿಂದಮನು ನಿನಗೆ ಹಿಂಟುಮಾಡಿದ ಅನಿಷ್ಟವೆಂತಾದ್ದು? ಎಂದು ಕೇಳಿದನು.

೬ನೇ ಸಂಬುನಸ—ಅರಿಂದಮನು ನನ್ನ ಬಂದು ಪಾರ್ಶ್ವದ ಹಲ್ಲುಗಳನ್ನೆಲ್ಲಾ ಉದುರಿಸಿಬಿಟ್ಟನು.

ಫೂಲ.—ಏನೇನಾದರೂ ಹಿಂಟಿದೀ?

೬ನೇ ಸಂಬುನಸ—ಮುತ್ತಿನ ನನ್ನ ತಂದೆಯನ್ನು ಗಲ್ಲಿಗೆ ಹಾಕಿಸಿದನು.

ಈ ಸ್ಪಷ್ಟವಾದ ಏಕಟಾಕಾರವನ್ನು ನೋಟಿದರೆ ಇವನ ತಂದೆಗೆ ಫಾಸಿಂಶಿಕ್ಷೆಯಾಗುವುದರಲ್ಲಿ ಆಶ್ಚರ್ಯವೇನಿದೆ?

ಫೂಲ.—ಹಾಗಾದರೆ, ನೀನು ಅರಿಂದಮನ ರಕ್ತದರ್ಶನ ಮಾಡದೆ ಹೇಗೂ ಸಮಾಧಾನಗೊಳ್ಳುವಂತೆ ತೋರುತ್ತದೆ.

ಒನೇ ನಂಬರಿನವ—ಆ ಮಾತನ್ನು ಇನ್ನೂ ಬಂದು ಬಾರಿ ಹೇಳಿರಿ.

ಫೂಲ.—ಏಳನೆಯ ನಂಬರಿನವನೆಲ್ಲಿ—ಬಿದ್ದು ಬಾ.

ಒನೇ ನಂಬರಿನವ—ನಾನು ಏಳನೆಯ ನಂಬರಿನವನು.

ಫೂಲ.—ಅರಿಂದಮನು ನಿನಗೇನಾದರೂ ಮುರಿದನೋ?

ಒನೇ ನಂಬರಿನವ—ಏನೂ ಇಲ್ಲ.

ಫೂಲ.—ಹಾಗಾದರೆ ನಿನಗೇನಾಯಿತು?

ಒನೇ ನಂಬರಿನವ—ಏನೂ ಇಲ್ಲ.

ಫೂಲ.—ಹಾಗಾದರೆ ನೀನು ನಮ್ಮ ಗುಂಪಿಗೆ ಸೇರಿದ ಕಾರಣ ವೇನು?

ಒನೇ ನಂಬರಿನವ—ನಾನು ಅರಿಂದಮನನ್ನು ಮನಸಾ ದ್ವೇಷಿಸುತ್ತೇನೆ.

ಫೂಲ.—ಏತರಿಂದ ದ್ವೇಷ?

ಒನೇ ನಂಬರಿನವ—ಬಂದು ದಿನ ಅವನು ನನ್ನನ್ನು ಮುಂಕನನ್ನಾಗಿ ಮಾಡಿ ತನ್ನ ಕೆಲಸವನ್ನು ಸುಲಭವಾಗಿ ಸಾಧಿಸಿದನು.

ಫೂಲ.—ಅದು ಹೇಗೆ ಹೇಳು?

ಒನೇ ನಂಬರಿನವ—'ಲೋಕ'ನೆಂಬ ನನ್ನ ಸಂಗಾತಿಯೊಬ್ಬನು ಬಂದು ಬಾರಿ ಬಬ್ಬನನ್ನು ಕೊಂದುಹಾಕಿದನು. ನಾವುಗಳು ಎಲ್ಲಿ, ಯಾವಾಗ ಕೊಲೆ ನಡೆಸಿದರೂ ಪರಸ್ಪರ ಮುರಿಮಾಬದೆ ಹೇಳುತ್ತಿದ್ದೆವು. ಯಾವ ಕೆಲಸ ಮಾಡಬೇಕಾದರೂ ಇಬ್ಬರೂ ಆಲೋಚಿಸಿಯೇ ಮಾಡುತ್ತಿದ್ದೆವು. ಬಂದು ದಿನ ಲೋಕನು ಕೊಲೆಮಾಡಿ ಬಂದಿದಾನೆ. ಆದೇ ಸಾಯಂಕಾಲದಲ್ಲಿ ಆ ತಾಯಿಗಂಡ ಅರಿಂದಮನು ಲೋಕನಂತೆಯೇ ವೇಷಧಾರಿಯಾಗಿ ಬಂದು ನನ್ನಿಂದ ಆ ಮಾತು ಈ ಮಾತುಗಳನ್ನಾಡಿಸಿ ಆ ಖೂನಿಯ ವಿಚಾರವನ್ನೆಲ್ಲಾ ಪೂರ್ತಿಯಾಗಿ ತಿಳಿದುಕೊಂಡು ಲೋಕನಿಗೆ ಹನ್ನೆರಡು ವರ್ಷಗಳಕಾಲ ದ್ವೀಪಾಂತರವಾಸದ ಶಿಕ್ಷೆ ಮಾಡಿಸಿದನು. ಲೋಕನು ತನಗೆ ಶಿಕ್ಷೆಯಾದುದಕ್ಕೆ ನಾನೇ ಕಾರಣನಾದೆನೆಂಬುದನ್ನು

ತಿಳಿದು ದ್ವೀಪಾಂತರಕ್ಕೆ ಹೊರಡುವಾಗ—ಬದುಕಿ ಹಿಂದಿರುಗಿ ಬಂದರೆ ನಿನ್ನನ್ನು ಕೊಂದು ಗಲ್ಲಿಗೂ ಸಿದ್ಧನಾಗುವೆನು, ಎಂದು ಜೈದು, ಬೆದರಿಸಿ ಹೋದನು. ಅವನೇನಾದರೂ ಬದುಕಿಬಂದರೆ ಆದಿನ ತಾನು ಹೇಳಿದಂತೆ ನಡೆಯಿಸುವಂತಹ ಭಯಂಕರನೇ ಸರಿ. ಅವನು ಬರುವುದರೊಳಗಾಗಿ ನಾನು ಬಂದು ಬೇಳೆ ಅರಿಂದಮನನ್ನೇ ಕಡೆಗಾಣಿಸಿಬಿಟ್ಟಿದ್ದರೆ, ನನ್ನ ಸ್ನೇಹಿತನಿಗೆ ನನ್ನಮೇಲಿರುವ ಕೋಪವು ಬಹುಮಟ್ಟಿಗೆ ಕಡಮೆಯಾದರೂ ಆಗಬಹುದು.

ಫೂಲ.—ಒಳ್ಳೆಯದು ನೀನು ನಡೆ. ಎಂಟನೆಯ ಸಂಬರಿಸವನು ಎದ್ದುಬರಲಿ.

ಏಳನೆಯವನ ಸ್ಥಳದಲ್ಲಿ ಎಂಟನೆಯವನು ಬಂದು ನಿಂತನು.

ಫೂಲ.—ನಿನ್ನ ಸವಾಚಾರವೇನು?

ಎಂಟನೆಯವ—ವಿಷಮ ಸವಾಚಾರ.

ಫೂಲ.—ಇರಬಹುದು; ಅದೇನು?

ಎಂಟನೆಯವ—ನಾನು ರಾತ್ರಿ ನಿದ್ರೆಮಾಡಲಾರೆ. ನಿದ್ರೆಹತ್ತಿತೋ ಇಲ್ಲವೊ ಸ್ವಪ್ನಗಳು! ಎಲ್ಲ ಸ್ವಪ್ನಗಳಲ್ಲಿಯೂ ಅರಿಂದಮನು ಇದ್ದೇ ಇರುವನು. ಒಂದು ಸ್ವಪ್ನದಲ್ಲಿ ಅರಿಂದಮನು ನನ್ನನ್ನು ಪರ್ವತದಿಂದ ಕೆಳಕ್ಕೆ ನೂಕುವನು; ಒಂದೊಂದು ಬಾರಿ ಅವನು ನನ್ನನ್ನು ಪುಷ್ಕರಿಣಿಯ ಕೆಸರಿನಲ್ಲಿ ಅದ್ದಿಹಿಡಿದಿರುವನು; ಒಂದೊಂದು ಸಲ ಅವನು ನನ್ನ ಕೈಕಾಲುಗಳನ್ನು ಹಿಡಿದುಕಟ್ಟಿ ಉರಿಯುತ್ತಿರುವ ಕಾಷ್ಠದಮೇಲೆ ಎತ್ತಿಹಿಡಿಯುವನು. ಹೀಗೆಯೇ ಇನ್ನೂ ಬಗೆಬಗೆಯಾದ ಭಯಂಕರ ಸ್ವಪ್ನಗಳಾಗುವವು. ಅವುಗಳು ಮರೆಯಲಸಾಧ್ಯವಾದವುಗಳು. ಅರಿಂದಮನು ಸಾಯುವವರೆಗೆ ನನಗೆ ಈ ದುಷ್ಟ ಸ್ವಪ್ನಗಳಿಂದ ಬಿಡುಗಡೆಯಿಲ್ಲವೆಂದು ಭಾವಿಸಿದ್ದೇನೆ.

ಫೂಲ.—ಒಳ್ಳೆಯದು ನೀನು ಹೋಗು; ಒಂಬತ್ತನೆಯವನಾರು?

ಒಂಬತ್ತನೆಯವ—ನಾನು.

ಫೂಲ.—ನಿನ್ನ ಸಮಾಚಾರವೇನು ?

ಒಂಬತ್ತನೆಯವ—ಮೂರು ವರುಷ ಆರು ತಿಂಗಳು.

ಫೂಲ.—ಹೇಗೆ ?

ಒಂಬತ್ತನೆಯವ—ಕಠಿಣ ಪರಿಶ್ರಮದೊಡನೆ.

ಫೂಲ.—ಹತ್ತನೆಯವನಾರು ?

ಹತ್ತನೆಯವ—ನಾನು.

ಫೂಲ.—ನಿನ್ನ ವ್ಯಾಪಾರವೇನು ?

ಹತ್ತನೆಯವ—ಒಂಬತ್ತನೇ ನಂಬರಿನವನಿಗಿಂತಲೂ ಒಂದೂವರೆ ವರುಷ ಹೆಚ್ಚು ; ಆದರೆ ಅಷ್ಟು ದಿನ ಅನುಭವಿಸಲಿಲ್ಲ. ಒಂದು ತಿಂಗಳು ಮುಗಿವುದರೊಳಗಾಗಿ ಬಂದೀಖಾನೆಯಿಂದ 'ಪರಾರಿ'ಯಾಗಿ ಬಂದಿದ್ದೇನೆ.

ಫೂಲ.—ಹಾಗಾದರೆ ನೀನೀಗ ನರಿಯಾದ ಕೆಲಸಗಾರ. ಹನ್ನೊಂದನೆಯವನು ಯಾರು ?

ಹನ್ನೊಂದನೆಯ ನಂಬರಿನ ಒಬ್ಬ ಹುಡುಗನೆದ್ದು ಬಂದನು. ಅವನ ವಯಸ್ಸು ಇನ್ನೂ ಹದಿನೇಳರ ಒಳಗಾಗಿತ್ತು. ಇವನ ಮುಖಾಕೃತಿಯೂ ದೃಷ್ಟಿಯೂ ಬಹು ಭಯಾನಕ. ಇವನ ಮುಖವನ್ನು ಯಾರಾದರೂ ಹಠಾತ್ತಾಗಿ ನೋಡಿದಪಕ್ಷದಲ್ಲಿ ಏಷಮಯವಾದ ಸರ್ಪವನ್ನು ಕಂಡರೆ ಹೇಗೋ ಹಾಗೆ ಅವರ ಹೃದಯವು ಭಯಂಭರಿತವಾಗುವುದು. ಅವನ ಕಯ್ಯಲ್ಲಿ ಬಲು ಹರಿತವಾದ ಒಂದು ದೊಡ್ಡ ಚೂರಿಯಿರುವುದು. ಅವನನ್ನು ಕುರಿತು ಯಾವುದೊಂದು ಪ್ರಶ್ನೆಮಾಡಲಿಲ್ಲವಾದರೂ ಅವನು ತಾನಾಗಿಯೇ ಕಯ್ಯೊಳಗಿನ ಚೂರಿಯನ್ನು ಆಡಿಸುತ್ತಾ, ''ನಾನು ಅರಿಂದಮನನ್ನು ಸುಮ್ಮನೆ ಬಿಡುವುದಿಲ್ಲ. ನಮ್ಮ ತಂದೆಯು ಬಬ್ಬನನ್ನು ದೂರ ಸಾಗಿಸಿಕೊಂಡು ಹೋಗಿ ಕೊಲೆಮಾಡಿದನೆಂದು ಹೇಳಿ ಅರಿಂದಮನು ನಮ್ಮ ತಂದೆಯನ್ನು ಗಲ್ಲಿಗೆ ಹಾಕಿಸಿರುವನು. ಇದು ನಡೆದು ಇಂದಿಗೆ ಮೂರು ವರ್ಷವಾಯಿತು. ಆ ವೊದಲು ಈ ಚೂರಿ

ಯೊಂದಿಗೆ ಕ್ಷಣಕಾಲವೂ ಆಗಲಿರಲಾರದ ಮಟ್ಟಿಗೆ ಮೈತ್ರಿಯನ್ನು ಬೆಳಸಿದ್ದೇನೆ. ಇದನ್ನು ಅರಿಂದಮನ ಹೃದಯದಲ್ಲಿ ಹೊಗಿಸದೆ ಬಿಡುವುದಿಲ್ಲ'' ಎಂದನು.

ಇಂತಹ ಮಗನ ತಂದೆಗೆ ಗಲ್ಲಿನಿಂದ ಮರಣವಾಗುವುದೇನೂ ಆಶ್ಚರ್ಯವಲ್ಲವೆಂಬುವುದು ಸರ್ವಸಮ್ಮತವಾದದ್ದು.

ಇದಾದಮೇಲೆ ಹನ್ನೆರಡನೆಯ ಸಂಬರಿನವನು ಎದ್ದುಬಂದನು. ಅವನು ವಯಸ್ಸಿನಲ್ಲಿ ವೃದ್ಧ. ವೃದ್ಧನಾಗಿದ್ದರೂ ಈ ವಯಸ್ಸಿನಲ್ಲಿ ಕೂಡ ಮೂರು ನಾಲ್ಕು ಮಂದಿ ಬಲಿಷ್ಠ ಯುವಕರನ್ನಾದರೂ ಮುರಿದು ಕೆಡಹುವ ಶಕ್ತಿಯುಂಟೆಂಬುದು ಅವನ ದೀರ್ಘದೇಹದಿಂದಲೂ ವಿಸ್ತಾರವಾದ ಮೈಕಟ್ಟಿನಿಂದಲೂ ಸ್ಪಷ್ಟವಾಗಿ ತೋರುತಲಿದ್ದಿತು. ಅವನ ಆಕೃತಿಯೊಡನೆ ಪ್ರಕೃತಿಯೂ ಸರಿಯಾಗಿ ಹೊಂದಿಕೊಂಡಿದ್ದಿತು. ಗುಳಿಗೆ ಇಳಿದಂತಿರುವ ಅವನ ಆ ಕಾಡಿಗೆಗಣ್ಣಿನ ತೀವ್ರವಾದ ನೋಟ, ಕಪಾಲದ ಮೂಳೆಗಳು ಕಾಣಿಸುತ್ತಿರುವ ಮುಖದ ಭಯಂಕರ ಭಾವ– ಇವುಗಳನ್ನು ನೋಡಿದರೆ ಆ ವಿಷಯದಲ್ಲಿ ಸಂಶಯವೇ ಉಳಿಯುವಂತಿಲ್ಲ. ಅವನು ಬಂದವನೇ—''ಅರಿಂದಮನ ವಿಷಯದಲ್ಲಿ ಅಸಮಾಧಾನ ಪಡುವುದಕ್ಕೆ ನನಗೆ ಕಾರಣವುಂಟೋ ಇಲ್ಲವೋ ಎಂಬುದನ್ನು ಹೇಳುವ ಕುತೂಹಲವು ನನಗಿಲ್ಲ. ಅವನನ್ನು ನಿಮ್ಮೆಲ್ಲರಿಗಿಂತಲೂ ಹೆಚ್ಚಾಗಿ ನಾನು ದ್ವೇಷಿಸುತ್ತೇನೆ. ಇದನ್ನು ಕೇಳಿ, ನೀವು ನಿಶ್ಚಿಂತರಾಗಿರಬಹುದು. ಸಂಬುಸ ಪಕ್ಷದಲ್ಲಿ ನಾನೂ ನಿಶ್ಚಿಂತನಾಗಿರುತ್ತೇನೆ. ನಾನೂ ಸಂತೋಷದಿಂದ ನಿಮ್ಮೊಂದಿಗೆ ಇರುತ್ತೇನೆ. ಹಾಗಿಲ್ಲದಪಕ್ಷದಲ್ಲಿ ನಾನು ನನ್ನ ದಾರಿನೋಡಿಕೊಳ್ಳುತ್ತೇನೆ. ಅರಿಂದಮನಿಗೆ ಯಮಪುರದ ಮಾರ್ಗವನ್ನು ನಿಷ್ಕಂಟಕವಾಗಿರುವಂತೆ ಮಾಡಿಕೊಡುವ ನಾಮಫಲ್ಯವು ನನಗೊಬ್ಬನಿಗೇ ಜೀಕಾದಷ್ಟು ಇರುತ್ತಿದೆ'' ಎಂದು ಹೇಳಿದನು.

ಅನಂತರ ಹದಿಮೂರನೆಯ ಸಂಬರಿನವನು ಎದ್ದುನಿಂತುಕೊಂಡನು. ಫೂಲಸಾಹೇಬನು ಅವನನ್ನು ನೋಡಿ,—ನೀನೇನೂ

ಹೇಳಬೇಕಾಗಿಲ್ಲ, ನಿನ್ನ ವಿಷಯವಾಗಿ ನಾನೇ ಅನೇಕ ವಿಚಾರಗಳನ್ನು ಬಲ್ಲೆನು ಎಂದು ನಗುತ್ತಾ ಹೇಳಿದನು.

ಆ ಅಸಾಮಿಯು ಅದೇ ಗೋರಾಚಾಂದ. ಹೆಸರು ಕೇಳಿದ ಮಾತ್ರದಿಂದಲೇ ಮನುಷ್ಯಸಿಂಧನನೇ ಎಂಬುದು ಸಾತಕ ಪಾತಕಿಯರ ಚ್ಹಾಪಕಕ್ಕೆ ಬರುವುದರಲ್ಲಿ ಸಂಶಯವಿಲ್ಲ.

ಗೋರಾಚಾಂದನು ಕುಳಿತುಕೊಂಡಮೇಲೆ ಫೂಲಸಾಹೇಬನು ಎದ್ದುನಿಂತು, ಈ ರೀತಿಯಾಗಿ ಹೇಳಿದನು. ನಾನು ಅರಿಂದಮನನ್ನು ಏತಕ್ಕಾಗಿ ದ್ವೇಷಿಸುವೆನೆಂಬುದು ನಿಮ್ಮಲ್ಲಿ ಯಾರಿಗೂ ತಿಳಿಯದು. ಅವನು ನನ್ನ ಹಾಗೆಯೇ ಶಕ್ತಿವಂತ, ನನ್ನ ಹಾಗೆಯೇ ಯುಕ್ತಿವಂತ, ನನ್ನ ಹಾಗೆಯೇ ಬುದ್ಧಿವಂತ ಮತ್ತೂ ನನ್ನ ಹಾಗೆಯೇ ಎಲ್ಲ ಕೆಲಸ ಗಳಲ್ಲಿಯೂ ದಕ್ಷ. ಈ ಒಂದು ಕಾರಣದಿಂದಲೇ ನಾನು ಅವನನ್ನು ದ್ವೇಷಿಸುತ್ತೇನೆ. ನಾನು ಬದುಕಿರುವಾಗ ನನ್ನಂಥವನೇ ಇನ್ನೊಬ್ಬ ಮನುಷ್ಯನು ಈ ಪ್ರಪಂಚದಲ್ಲಿರುವುದೆಂದರೆ ನನಗೆ ಸೈರಣೆಯೇ ಇಲ್ಲ. ಇದು ಈಚೀಚೆಗೆ ನನಗೆ ತುಂಬ ಅಸಹ್ಯಕರವಾಗಿ ತೋರುತ್ತಿದೆ. ಸಾಧ್ಯವಾಗುವುದಾದರೆ ಅತನು ಈ ಪೃಥ್ವಿಯನ್ನು ಬಿಟ್ಟುಹೋಗ ಬೇಕು; ಅಲ್ಲಿಗೆ ನಾನು ನಿರಾಪದನಾಗಿರುತ್ತೇನೆ. ಇಲ್ಲವಾದರೆ ನಾನು ಲೋಕಾಂತರ ಹೊಂದಬೇಕು; ಆದರಿಂದ ಅತನು ನಿಶ್ಚಿಂತನಾಗುತ್ತಾನೆ. ಈ ಎರಡರಲ್ಲಿ ಒಂದನ್ನು ನಾನು ಮಾಡಿ ಮುಗಿಸದಿದ್ದರೆ ನಿಶ್ಚಿಂತ ನಾಗಿರುವುದು ಸಾಧ್ಯವಿಲ್ಲ. ಎಲ್ಲಿಯ ನೀರು ಯಾವಲ್ಲಿ ನಿಲ್ಲುವುದೋ ನೋಡೋಣ. ಈ ವಿಚಾರವು ಹಾಗಿರಲಿ, ಈಗ ಇಲ್ಲಿ ಸೇರಿರುವವರಲ್ಲಿ ತಮ್ಮ ಜೀವಿತಕಾಲದಲ್ಲಿ ಒಂದಾದರೂ ಕೊಲೆಮಾಡದಿರುವವರು ಯಾರು ? ಯಾರಾದರೂ ಇದ್ದೀರಾ ?

ಯಾರೂ ಯಾವ ಉತ್ತರವನ್ನೂ ಕೊಡಲಿಲ್ಲ; ಎಲ್ಲರೂ ಕೊಲೆ ಗಾರರು—ಎಲ್ಲರೂ ದಸ್ಯುಗಳು !

ಅನುಕೂಲವೇ ಆಯಿತು. ಇಂತಹ ಕೆಲಸಗಳಿಗೆಲ್ಲಾ ನಿಮ್ಮಂತಹ ಜನರೇ ಅವಶ್ಯಕ. ಅರಿಂದಮನನ್ನು ಕೊಲೆಮಾಡುವ ವಿಷಯದಲ್ಲಿ

ಎಲ್ಲರೂ ಈಗ ಶಪಥಮಾಡಬೇಕಾಗಿದೆ, ಎಂದು ಫೂಲಸಾಹೇಬನು ಹೇಳಿದನು.

ಅದನ್ನು ಕೇಳಿ ಆ ಕೊಲೆಪಾತಕಿಗಳೆಲ್ಲರೂ ಅರಿಂದಮನ ಪ್ರಾಣ ತೆಗೆವ ವಿಚಾರವಾಗಿ ಶಪಥಮಾಡಿದರು; ಮತ್ತೂ ಆ ಕೂಡಲೇ ಫೂಲ ಸಾಹೇಬನಿಂದ ಒಬ್ಬೊಬ್ಬರೂ ಒಂದೊಂದು ಹರಿತವಾದ ಸನೀನು ಗಳನ್ನು ಬಹುಮಾನಪಡೆದರು.

ಅಂದು ನಡೆದುದು ಅಷ್ಟೇ.

ಮೂರನೆಯ ಪರಿಚ್ಛೇದ

ಮೋಹಿನಿಯ ಕಡೆಯ ಪ್ರಯತ್ನ

ದೇವೇಂದ್ರವಿಜಯನು ಸಮಾಧಾನಗೊಂಡು ರೇವತಿಯ ಸಮಾಚಾರವನ್ನು ತಿಳಿದುಕೊಳ್ಳುತ್ತ ಇನ್ನೂ ಅರಿಂದಮನ ಮನೆಯಲ್ಲಿಯೇ ಇರಲು ನಿರ್ಬಂಧಿತನಾಗಿದ್ದನು. ದಿನಗಳು ಕಳೆದುಹೋದ ಹಾಗೆಲ್ಲಾ ದೇವೇಂದ್ರವಿಜಯನು ರೇವತಿಗೋಸ್ಕರವಾಗಿ ವ್ಯಗ್ರನಾಗುವನು. ರೇವತಿಯನ್ನು ಹುಡುಕುವ ವಿಚಾರವಾಗಿ ದೇವೇಂದ್ರನು ಏನನ್ನಾದರೂ ಕೇಳಿದ್ದೇ ಆದರೆ ಅರಿಂದಮನು ಬಾಯಲ್ಲಿ ನಯವಾಗಿ ಸಮಾಧಾನ ಹೇಳುವುದೂ ಅಲ್ಲದೆ, ಆಸೆಯನ್ನೂ ಹೆಚ್ಚಿಸುವನು; ಇಷ್ಟೇ ಏನಾ ಕಾರ್ಯತಃ ಆ ವಿಚಾರವಾಗಿ ಯಾವುದೂ ನಡೆಯದಿರುವುದನ್ನು ನೋಡಿ ದೇವೇಂದ್ರವಿಜಯನು ಮನಸಾ ಅಸಂತುಷ್ಟನಾಗುತ್ತ ಬಂದನು. ಒಂದೊಂದು ವೇಳೆ ಅರಿಂದಮನ ಸಹವಾಸವೇ ತನಗೆ ಯೋಗ್ಯವಾದುದಲ್ಲವೆಂದು ಭಾವಿಸಿಕೊಳ್ಳುವನು. ಆ ಸಮಯದಲ್ಲಿ ಮನುಷ್ಯನಿಗೆ ಉಚಿತವಾದ ಕೋಪವೂ, ರೇವತಿಯ ಉದ್ಧಾರಕ್ಕೋಸ್ಕರವಾಗಿ ಮತ್ತೆ ಯಾವ ಶ್ರೇಷ್ಠನಾದ ಪತ್ತೇದಾರನನ್ನಾದರೂ ನಿಯಮಿಸುವ ಕಲ್ಪನೆಯೂ ಆತನ ಮನಸ್ಸಿನಲ್ಲಿ ಬಹು ಪ್ರಬಲವಾಗಿಯೂ ತೀವ್ರವಾಗಿಯೂ ಆಗಿ ಹೋಗುತಲಿರುವುವು. ಆದರೆ ಮುಖದಲ್ಲಿ ಯಾವುದೂ ವ್ಯಕ್ತಗೊಳುತ ತಲಿರಲಿಲ್ಲ. ಆ ಭಾವಗಳು ಮುಖದಲ್ಲಿ ಪ್ರಕಾಶಗೊಳ್ಳದಿದ್ದರೂ

ಒಂದೊಂದು ವೇಳೆ ಆತನ ಮಾತುಗಳು ಅವನ ಮನೋಭಾವವನ್ನು ಅರಿಂದಮನಿಗೆ ಪರಿಚಯ ಮಾಡಿಕೊಡುತ್ತಿದ್ದುವು. ಒಂದೆರಡು ಸಮಯಗಳಲ್ಲಿ ದೇವೇಂದ್ರವಿಜಯನ ಮನೋಭಾವವು ಅರಿಂದಮನ ಅನುಭವಕ್ಕೂ ಬಂದಿತು. ಫೂಲಸಾಹೇಬನನ್ನು ಹಿಡಿದು ತರುವ ವಿಷಯವಾಗಿ ಪ್ರಯತ್ನ ಮಾಡಿದಾಗ ದೇವೇಂದ್ರವಿಜಯನು "ಆಗಲಿ," "ಇಲ್ಲ" ಮುಂತಾಗಿ ಹೇಳಿದನೇ ಹೊರತು, ಕೆಲಸದ ಹೊತ್ತಿನಲ್ಲಿ ಕೆಲವು ಬಾರಿ 'ಹಾಜರಿ'ಯಾಗಿಯೂ ಮತ್ತೆ ಕೆಲವುಸಾರಿ 'ಗೈರ್‌ಹಾಜರಿ'ಯಾಗಿಯೂ ಆಗಿಬಿಡುತ್ತಿದ್ದನು. ಅರಿಂದಮನ ಆ ಸುಳ್ಳು (?) ಸಮಾಧಾನದ ಮಾತುಗಳಿಂದ ಒಂದೊಂದು ಸಲ ದೇವೇಂದ್ರವಿಜಯನ ಬೇಸರವೂ ಧೈರ್ಯವೂ ಹದ್ದುಮೀರಿ ಕಡೆಗೆ ನೀರವವಾದ ಕ್ರೋಧವಾಗಿ ರೂಪಾಂತರಗೊಳ್ಳುವಂತಾಗುತಿದ್ದಿತು. ಅದರೊಂದಿಗೆ ದೇವೇಂದ್ರವಿಜಯನು ಊರಿಗೆ ಹಿಂದಿರುಗಿ ಹೋಗಲು ಸನ್ನಾಹಗೊಳ್ಳುತ್ತಿದ್ದನು. ತಡೆಯಲಾರದ ಬೇಸರ, ದಾರುಣವಾದ ಉತ್ಕಂಠತೆ, ದುಸ್ಸಹವಾದ ಉದ್ವೇಗ, ಮತ್ತೂ ಕೃಶವಾದಂತಿರುವ ಧೈರ್ಯ—ಇವುಗಳ ಮಧ್ಯೆ ದೇವೇಂದ್ರವಿಜಯನಿಗೆ ಬಹು ದೀರ್ಘವಾಗಿ ತೋರುತ್ತಿದ್ದ ಆ ದಿನಗಳು ಬರುಬರುತ್ತ ದೀರ್ಘತಮವಾಗುತ್ತ ನಡೆಯುತ್ತಿದ್ದುವು.

* * *

ಒಂದು ದಿನ ದೇವೇಂದ್ರವಿಜಯನು ಯಾವುದೋ ಕೆಲಸದ ಮೇಲೆ ಹೊರಕ್ಕೆ ಹೋಗಿದ್ದನು; ಅರಿಂದಮನು ಮಧ್ಯಾಹ್ನದ ಊಟವಾದ ಮೇಲೆ, ಮಲಗಿ ಸ್ವಲ್ಪ ವಿಶ್ರಮಿಸಿಕೊಳ್ಳುವುದಕ್ಕೆ ಸಿದ್ಧನಾಗಿರುವಷ್ಟರಲ್ಲಿ ಸೇವಕನು ಬಂದು, ಹೆಂಗಸೊಬ್ಬಳು ತಮ್ಮನ್ನು ನೋಡುವುದಕ್ಕೆ ಬಂದಿರುವಳು ಎಂದು ಹೇಳಿದನು. ಆ ಹೆಂಗಸನ್ನು ಅಲ್ಲಿಗೇ ಕರೆದು ಕೊಂಡು ಬರಬೇಕೆಂದು ಅರಿಂದಮನು ಭೃತ್ಯನಿಗೆ ಅಪ್ಪಣೆ ಮಾಡಿದನು.

* * *

ಸಲ್ಪ ಹೊತ್ತಿನೊಳಗಾಗಿ ಮುಖದಮೇಲೆ ಫರದೆ ಎಳದುಕೊಂಡ ಹೆಂಗಸೊಬ್ಬಳು ಅರಿಂದಮನ ಇದಿರಿಗೆ ಬಂದಳಾದರೂ ಮನೆಯೊಳಕ್ಕೆ

ಬಾರದೆ ಬಾಗಿಲ ಬಳಿಯಲ್ಲಿಯೇ ಕುಳಿತುಕೊಂಡಳು. ಅವಳ ಉಗಿನ ವೇಷ ಭೂಷಣಗಳು ಮಲಿನವಾಗಿಯೂ ತುಂಬ ಅಪರಿಷ್ಕಾರವಾಗಿಯೂ ಇದ್ದುವು. ಅತಿರೂಕ್ಷವಾಗಿದ್ದ ಒಂದೆರಡು ಕೇಶಗುಚ್ಛಗಳು ಕಿವಿಯ ಕಡೆಯಿಂದ ಮುಂಭಾಗಕ್ಕೆ ಬಂದು ಬಿದ್ದಿದ್ದುವು. ಅವಳು ಗೌರವಾಂಗಿಯಾಗಿದ್ದರೂ, ಬೂದುಮುಚ್ಚಿದ ಕೆಂಡದಹಾಗೆ, ಅವಳ ಮೈಬಣ್ಣದಲ್ಲಿ ಕೊಂಚವಾದರೂ ಕಾಂತಿಯಿರಲಿಲ್ಲ. ದಾವಾಗ್ನಿಗೆ ಸಿಕ್ಕಿದ ಚಿಗುರಿನಂತೆ ಅವಳ ದೇಹವು ಬಾಡಿ ಕಳೆಗುಂದಿತ್ತೆಂದು ಹೇಳುವುದೂ ಸರಿಯಾದ ಸಾಮ್ಯವೆಂದು ತೋರುವುದಿಲ್ಲ.

ಅರಿಂದಮನು ಅವಳನ್ನು ನೋಡಿ ಮುಸ್ಕುರಿಸಿದನು. ಮನೆಯೊಳಗೆ ಹಾಸಿಗೆಯಲ್ಲಿ ಮಲಗಿದ್ದಾತನು ಹಾಗೆಯೇ ಎದ್ದು ಬಂದು ತಲೆದಿಂಬನ್ನೆಳೆದು ಒರಗಿಕೊಂಡು—"ನೀವು ಯಾರು?" ಎಂದು ಪ್ರಶ್ನೆ ಮಾಡಿದನು.

ಹೆಂಗಸು ಮುಖಭರದೆಯೊಳಗಿನಿಂದಲೇ—ನಾನು ಫೂಲಸಾಹೇಬನ ಸ್ತ್ರೀ ಎಂದು ಮೃದುಸ್ವರದಿಂದ ಹೇಳಿದಳು.

ಹೆಂಗಸು ಆ ರೀತಿಯಲ್ಲಿ ಬಂದುದನ್ನು ನೋಡಿ ಮುಸ್ಕುರಿತನಾಗಿದ್ದ ಅರಿಂದಮನು, ಬಂದವಳು 'ಫೂಲಸಾಹೇಬನ ಸ್ತ್ರೀ' ಎಂಬುದನ್ನು ಕೇಳಿ ಮತ್ತೂ ಮುಸ್ಕುರಿತನಾದನು! ಕೊಂಚ ಹೊತ್ತು ಸ್ತಬ್ಧನೆಂದೇ ತೋರಿತು. ವೇಷವನ್ನು ಮರೆಸಿಕೊಂಡಿರುವ ಚಾಮುಲೆಯಾಗಿರಬಹುದೆ? ಎಂದು ಒಂದು ಸಲ ಸಂದೇಹಿಸಿದನು. ಆದರೆ ಈ ಕಂಠಸ್ವರವು ಅವಳದಲ್ಲ. ಚಾಮುಲೆಯ ಕಂಠಸ್ವರವನ್ನು ಒಂದಾವರ್ತಿ ಕೇಳಿದವರು ಅದನ್ನು ಎಂದೆಂದಿಗೂ ಮರೆಯುವುದು ಸಾಧ್ಯವಿಲ್ಲ. ಅವಳ ಕಂಠಸ್ವರದಲ್ಲಿ ಎಂದೂ ಮರೆಯಲಾಗದ ಒಂದು ಬಗೆಯ ತೀಪ್ರತೆಯು ಮುದ್ರಿತವಾಗಿರುವುದು. ಈ ಕಂಠಸ್ವರದಲ್ಲಿ ಆ ತೀಪ್ರತೆಯಿಲ್ಲ. ಹಾಗಾದರೆ ಇವಳ್ಯಾರು? ಸಂಶಯಗ್ರಸ್ತನಾದ ಅರಿಂದಮನು ಆ ಹೆಂಗಸಿಗೆ ಏಂತಹ ಉತ್ತರ ಕೊಡಬೇಕೋ ತೋರದವನಾಗಿ, ಹುಬ್ಬುಗಂಟಿಟ್ಟು, ಸೀರಾ ಭಾನದಿಂದ ಅವಳ ಕಡೆ ನೋಡುತ್ತಿದ್ದನು.

ಅರಿಂದಮನು ನೀರವನಾದುದನ್ನು ನೋಡಿ ಆ ಅವಗುಂಠನ ವತಿಯು, ನೀವು ಫೂಲಸಾಹೇಬನನ್ನು ಕಾಣಿರಾ? ಎಂದು ತಾನೇ ಮಾತಿಗೆ ಮೊದಲಿಟ್ಟಳು.

ಅರಿಂದಮ—ಬಲ್ಲೆ.

ರಮಣಿ—ನಾನು ಅವನ ಹೆಂಡತಿ, ನನ್ನ ಹೆಸರು ಮೋಹಿನೀ.

ಅರಿಂದಮ—ಇದು ಈಗ ತಿಳಿಯಿತು.

ರಮಣಿ—ಫೂಲಸಾಹೇಬನು ಬಂದೀಖಾನೆಯಿಂದ ತಪ್ಪಿಸಿ ಕೊಂಡು ಹೋದದ್ದು ನಿಮಗೆ ಚ್ಞಾಪಕವುಂಟೆಯೆ?

ಅರಿಂದಮ—ಇ

ರಮಣಿ—ಅವನು ನಿಮ್ಮನ್ನು ಕೊಲೆ ಮಾಡುವುದಾಗಿ ಶಪಥ ಮಾಡಿದುದು ನಿಮಗೇನಾದರೂ ಚ್ಞಾಪಕವುಂಟೆಯೆ?

ಅರಿಂದಮ—ಜೆನ್ಯಾಗ ಚ್ಞಾಪಕವಿದೆ.

ರಮಣಿ—ಹಾಗಾದರೆ ನೀವು ಕೇವಲ ಸಾಧುಗಳಹಾಗೆ ನಿಶ್ಚಿಂತರಾಗಿ ಕುಳಿತಿರುವುದೆ?

ಅರಿಂದಮ—ಆಲೋಚಿಸಿ ತಾನೇ ಮಾಡುವುದೇನು? ಈ ಎರಡು ತಿಂಗಳಿಂದ ಹುಡುಕಿದರೂ ಅವನೆಲ್ಲಿರುವನೆಂಬುದೇ ತಿಳಿಯಲಿಲ್ಲ.

ರಮಣಿ—ಅದು ತಿಳಿಯದೇ ಹೋದರೂ ನಿಮ್ಮಂತಹ 'ಛಾರಿ' ಪತ್ತೇದಾರರು ಸುಮ್ಮನೆ ಕುಳಿತಿರುವುದು ನ್ಯಾಯವೆ? ಎರಡು ತಿಂಗಳಲ್ಲಿ ಸಾಧ್ಯವಾಗದ್ದು ಎರಡು ದಿನಗಳಲ್ಲಿ ಸಾಧ್ಯವಾದರೂ ಆಗಬಹುದು.

ಅರಿಂದಮ—ಅದು ಏನಾದರೂ ಆಗಲಿ, ನೀನು ಫೂಲಸಾಹೇಬನ ಹೆಂಡತಿ; ಇದರಿಂದ ನಿನಗೇನು ಲಾಭ?

ರಮಣಿ—ಲಾಭವೆ? ಅನೇಕವಾಗಿ; ಅದು ಬಹಳ ಮಾತುಗಳು; ಅವುಗಳು ಈಗ ಬೇಕಾದುದಿಲ್ಲ. ಆವಶ್ಯಕವಾದುದನ್ನು ಮಾತ್ರ ಹೊರಲು ಕೇಳಿರಿ. ಫೂಲಸಾಹೇಬನು ನಿಮ್ಮನ್ನು "ಖೂನಿ" ಮಾಡುವ ಉದ್ದೇಶ್ಯದಿಂದ ಪ್ರಾಣಪಣಪ್ರಯತ್ನ ಮಾಡುತ್ತಿದ್ದಾನೆ; ಅವನೆಂಥವ

ನಾದರೂ ಆಗಲಿ, ಈ ಸಾರಿ, ಹಿಡಿದ ಹಟವನ್ನು ಸಾಧಿಸದೆ ಬಿಡಲಾರ ನೆಂದು ತೋರುತ್ತದೆ. ಆ ವಿಚಾರವಾಗಿ ನಿಮ್ಮನ್ನು ಎಚ್ಚರಿಸಿ ಹೋಗೋಣವೆಂದೇ ನಾನು ಬಂದದ್ದು. ಎಚ್ಚರಿಕೆ! ಫೂಲಸಾಹೇಬನು ಬಹು ಭಯಂಕರ ಮನುಷ್ಯ. ಅವನು ಬಹು ರೂಪಿ; ಮನುಷ್ಯ ಮಾತ್ರ ನೆಂದು ಹೇಳುವುದಕ್ಕಾಗುವುದಿಲ್ಲ. ಅವನು ಮಾನವರೂಪದ ಪಿಶಾಚ; ಅವನು ದಾನವ; ಅವನು ಘಾತುಕ; ಅವನೇ ಕೊಲೆಪಾತಕ; ಅವನು ಭಯಂಕರ ಸರ್ಪ; ಅವನೇ ವಿಷದ ಹೆಬ್ಬುಲಿ; ಸ್ವಲ್ಪ ಎಚ್ಚರದಪ್ಪಿದರೂ ಅವನು ಹಾವಾಗಿ ಕಚ್ಚಿಬಿಡುವನು, ಇಲ್ಲವೆ ಹುಲಿಯಾಗಿ ತಿಂದು ಬಿಡುವನು; ಅಥವಾ ಪಿಶಾಚನಾಗಿ ಕುತ್ತಿಗೆ ಹುರಿಯುವನು. ಮತ್ತೂ.....

ಅರಿಂದಮ—(ಮೋಹಿನಿಯ ಮಾತು ಪೂರೈಸಗೊಡದೆ) ಈಗ ಅವಶ್ಯಕ ವಾದ ಸುದ್ದಿ ಹೇಳುತ್ತೀನೆಂದು ಹೇಳಿದೆಯಲ್ಲವೆ?

ರಮಣಿ—ಹೌದು, ಚಾಲ್ಲಾಪಕವನೆ. ಫೂಲಸಾಹೇಬನು ನಿಮ್ಮನ್ನು ಕೊಲ್ಲುವುದಕ್ಕಾಗಿ ಬಂದು ಹಗಡದ ದಸ್ಯುಗಳನ್ನು ಸಂಗ್ರಹಿಸಿದ್ದಾನೆ. ಅವರೆಲ್ಲರೂ ನಿಮ್ಮನ್ನು ಕೊಲ್ಲುವುದಾಗಿ ಫೂಲಸಾಹೇಬನ ಹತ್ತಿರ ಪ್ರಮಾಣ ಮಾಡಿದ್ದಾರೆ. ಸ್ವಲ್ಪ ಸಾವಧಾನ ತಪ್ಪಿದರೂ, ಯಾರು ಯಾವ ಸಮಯದಲ್ಲಿ ಬಂದು ನಿಮ್ಮ ಹೃದಯದಲ್ಲಿ ಕತಾರಿಯನ್ನು ನೆಡುವ ರೆಂಬುದು ನಿಮಗೆ ಗೊತ್ತಾಗುವುದಿಲ್ಲ. ಎಚ್ಚರಿಕೆ! ಹಗಲೂ ರಾತ್ರಿಯೂ ಎಚ್ಚರದಿಂದಿರಬೇಕು. ಬಹು ಭಯಂಕರ ಮನುಷ್ಯರವರು. ಎಲ್ಲರೂ ಕೊಲೆಗಾರರು; ಕೊಲೆ ಮಾಡುವುದು, ಗಾಯಮಾಡಿಸುವುದು ಇವುಗಳಲ್ಲಿ ಅವರಿಗೆ ಎಳ್ಳಷ್ಟೂ ಸಂಕೋಚವಿಲ್ಲ.

ಅರಿಂದಮ—ಅವರು ಯಾರೆಂಬುದು ತಿಳಿದಿದೆಯೆ?

ರಮಣಿ—ಇಲ್ಲ; ಅವರು ಒಬ್ಬೊಬ್ಬರಲ್ಲ, ಒಟ್ಟು ಹದಿಮೂರು ಮಂದಿ. ಎಲ್ಲರೂ ಯಮದೂತರೇ!

ಅರಿಂದಮ—ಅವರ ವಾಸಸ್ಥಾನವಾದರೂ ಗೊತ್ತಿರುವುದೆ?

ರಮಣಿ—ಅವರಿಗೆ ಇಂತಹುದೇ ವಾಸಸ್ಥಾನವೆಂಬ ನಿಬಂಧನೆ ಯಿಲ್ಲ. ಯಾವ ದಿನ ಅವರು ಒಟ್ಟಾಗಿ ಯಾವ ಕಡೆಗೆ ಹೊರಡುವರೋ

ಆ ದಿನವೆಲ್ಲಾ ಅದೇ ಅವರ ವಾಸಸ್ಥಾನ. ಅವರೆಲ್ಲರೂ ಸೇರಿ ಹಗಲೂ ರಾತ್ರಿಯೂ ಯಾವಸನಸ್ಸೋ ಹುಡುಕಿಕೊಂಡು ಅಲೆಯುತ್ತಿರುತ್ತಾರೆ.

ಅರಿಂದಮ—ಅವರ ಪ್ರಯತ್ನಗಳೆಲ್ಲಕ್ಕೂ ನನ್ನ ಮರಣವೇ ಲಕ್ಷ್ಯ ವೆಂಬುದು ಹೇಗೆ ?

ರಮಣಿ—ಅದರಲ್ಲಿ ಇನ್ನೂ ಸಂದೇಹವಿರುವುದೆ ?

ಅರಿಂದಮ—ಅವರೊಳಗಣ ಮಾತ್ಸರ್ಯ ಸಮಾಚಾರವಾದರೂ ತಿಳಿದಿರುವುದೆ ?

ರಮಣಿ—ಅವರ ಪರಾಮರ್ಶಗಳಲ್ಲಿ ಒಂದನ್ನು ಮಾತ್ರ ಕೊಂಚಾರ ಕೇಳಿದೆನು; ಅವರು ಹೇಗೆ ಭಯಂಕರರೋ ಆ ಪರಾಮರ್ಶನೂ ಹಾಗೆಯೇ ಭಯಂಕರವಾದದ್ದು.

ಅರಿಂದಮ—ಅಂತಹ ಪರಾಮರ್ಶ ?

ರಮಣಿ—ಈ ದಿನ ರಾತ್ರಿ ಅವರು ನಿಮ್ಮನ್ನು ಈ ಸ್ಥಳದಲ್ಲಿಯೇ ಕೊಲ್ಲುವುದಕ್ಕಾಗಿ ಬರುತ್ತಾರೆ.

ಅರಿಂದಮ—(ಮುಂದೆ ಮಾತನಾಡಗೊಡದೆ) ಈ ಸ್ಥಳದಲ್ಲಿ ? ನನ್ನ ಮನೆಯಲ್ಲಿಯೆ ?

ರಮಣಿ—ಯಾಕೆ ? ಇನ್ನೂ ನಂಬಿಕೆ ಇಲ್ಲವೇನು ?

ಅರಿಂದಮ—ಎಲ್ಲರೂ ಬರುತ್ತಾರೆಯೇ ?

ರಮಣಿ—ಎಲ್ಲರೂ; ಎಲ್ಲರೂ ಶಪಥಮಾಡಿದ್ದಾರೆ.

ಅರಿಂದಮ—ಯಾವಾಗ ಬರುತ್ತಾರೆ ?

ರಮಣಿ—ಈ ರಾತ್ರಿ.

ಅರಿಂದಮ—ಅದು ಗೊತ್ತು. ರಾತ್ರಿ ಎಷ್ಟು ಹೊತ್ತಿಗೆ ?

ರಮಣಿ—ರಾತ್ರಿ ಎರಡು ಗಂಟೆಯ ಮೇಲೆ!

ಅರಿಂದಮ—ಸರಿ.

ರಮಣಿ—ಅಯ್ಯಾ, ಇಂದಿನ ದಿನ ನೀವು ಬದುಕುವ ಉಪಾಯ ಮಾಡಿದರೆ ಸಾಲದು. ಅವರನ್ನು ಹಿಡಿಯುವ ಪ್ರಯತ್ನವೇನಾದರೂ

ನಡೆದೀತೇನೋ ನೋಡುತ್ತೇನೆ; ನೀವು ಪಕ್ಕಾ ಪತ್ತೇದಾರರೆಂಬುದು ನನಗೆ ದೃಢಪಡಬೇಕಾದರೆ ಆಗಲೇ. ಈಗಲಿಂದಲೇ ಬೇಕಾದಷ್ಟು ಜನ ಪೋಲೀಸಿನವರನ್ನು ಕರೆದುಕೊಂಡುಬಂದು ಮನೆಯಲ್ಲಿ ಹುಡುಕಿಸಿ. ನನ್ನ ಸಲಹೆಯನ್ನೂ ಕೇಳಿ.

ಆರಿಂದಮ—ಹಾಗೆಲ್ಲ ಮಾಡಿದರೆ ಪೂಲಸಾಹೇಬನು ನಿಕ್ಕಿ ಹೋಗುವನು. ಅತನು ನಿನ್ನ ಸ್ನಾಮಿಯಲ್ಲವೆ?

ರಮಣಿ—ಪೂಲಸಾಹೇಬನು ನನ್ನ ಸ್ನಾಮಿ ಎಂಬ ಮಾತನ್ನು ಇಷ್ಟೊಂದು ಪ್ರಮೆತ್ನಪೂರ್ವಕವಾಗಿ ನನಗೆ ಜಜ್ಞಾಪಿಸಬೇಕಾಗಿರಲಿಲ್ಲ. ನಾನು ಪೂಲಸಾಹೇಬನ ಪೆಂಡತಿ, ಪೂಲಸಾಹೇಬನು ನನ್ನ ಪತಿ ಅಥವಾ ಸ್ನಾಮಿ ಎಂಬುದು ನನಗೆ ತಿಳಿಯದೆ? ತೀಕ್ಷ್ಣ ಬುದ್ಧಿಯುಳ್ಳ ಪತ್ತೇದಾರರೆಂದು ಹೆಸರುಗೊಂಡ ನೀವು ಕೇವಲ ಬುದ್ಧಿ ಇಲ್ಲದವರ ಹಾಗೆ ಈಗ ಏಕೆ ಪ್ರಾತನಾಡುವುದೆ?

ಆರಿಂದಮ—ಹಾಗಾದರೆ ನೀನು ಪೂಲಸಾಹೇಬನಿಗೆ ಕೆಡಕಾಗಲಿಸ್ಸುತ್ತೀಯೇನು? ಏಕೆ ಕಾರಣ?

ರಮಣಿ—ಕಾರಣವೆ? ಅವನು ನನ್ನ ಪರಮ ಶತ್ರು. ಪ್ರಪಂಚದಲ್ಲಿ ಮನುಷ್ಯ ಮನುಷ್ಯರಿಗೆ ಇಷ್ಟರ ದ್ವೇಷವುಂಟಾಗುವುದೆಂದು ನಾನು ತಿಳಿದಿರಲಿಲ್ಲ. ಪೂಲಸಾಹೇಬನಿಗೆ ನೀವು ಇಷ್ಟು ಪಟ್ಟಿಗೆ ಶತ್ರುಗಳಾಗಿರುವೆನೇ ಅದಕ್ಕಿಂತ ಹೆಚ್ಚಾಗಿ ಪೂಲಸಾಹೇಬನು ನನಗೆ ಶತ್ರುವಾಗಿದ್ದಾನೆ. ಅವನು ನೆರೆಸಿಕ್ಕಿದಾಗ ನಾನು ಕೊಂಚ ಸುಖವಾಗಿದ್ದೆನು; ಈಗ ನನ್ನ ಯಾತನೆಗಳಿಂದ ನನ್ನ ಹೃದಯವು ಬೆಂದು ಬೂದಿಯಾಗಿ ಹೋಗುತ್ತಿದೆ.

ಆರಿಂದಮ—ಪೂಲಸಾಹೇಬನನ್ನು ದಸ್ತಗಿರಿಮಾಡಿದರೆ ನಿನಗೆ ಸಂತೋಷವೊ?

ರಮಣಿ—ಅವನನ್ನು ಕೊಂದರೆ ಸಂತೋಷ.

ಆರಿಂದಮ—ಗಂಡನಮೇಲೆ ಇಷ್ಟು ಕೋಪಗೊಳ್ಳುವುದಕ್ಕೆ ಕಾರಣವೇನು?

ರಮಣಿ—ಆ ಮಾತುಗಳಿಂದ ನಿಮಗೇನೂ ಉಪಯೋಗವಿಲ್ಲ; ನಿನ್ನು ಹೊರಡುತ್ತೇನೆ. ನಾನು ಹೇಳಿದುದೆಲ್ಲ ಜೆನ್ನಾಗಿ ನೆನಪಿರಲಿ.

ಸೋಫಿಸಿಯು ಥಟ್ಟನೆ ಎದ್ದು ಅಲ್ಲಿಂದ ಸರಸರನೆ ಹೊರಟು ಹೋದಳು.

ಅರಿಂದಮನು ಬೀದಿಯಕಡೆ ಕಿಟಕಿಯೊಂದರಲ್ಲಿ ಬಗ್ಗಿ ನೋಡಿದನು. ಸೋಫಿಸಿಯು ಮುಖಫರದೆಯನ್ನು ತೆಗೆದುಹಾಕಿದ್ದಾಳೆ; ಹಾರು ಹಾರುತ್ತ ಓಡಿಹೋಗುತ್ತಿದ್ದಾಳೆ. ಆ ದಾರಿಯಲ್ಲಿ ಹೋಗುತ್ತಿದ್ದ ದಾರಿಗರೊಬ್ಬಬ್ಬರು ದಾರಿಯಲ್ಲಿಯೇ ನಿಂತು, ಆವಾಕ್ಕಾಗಿ ಸೋಫಿಸಿಯನ್ನೇ ನೋಡುತ್ತಿದ್ದಾರೆ.

ನಾಲ್ಕನೆಯ ಪರಿಚ್ಛೇದ

ಅರಿಂದಮನ ಸನ್ನಾಹ

ತಾನಾಗಿ ಬಂದೊದಗಿದ ಈ ಘಟನೆಯು ನಿರತಿಶಯವಾದ ಅದ್ಭುತ ರಸಾತ್ಮಕವಾದುದೆಂಬುದು ಅರಿಂದಮನಿಗೆ ಅಸಂಭವವಾಯಿತು. ಮಾತು ಕತೆಗಳಿಗೆ ಸೊದಲೇ ಸೋಫಿಸಿಯು ಹುಚ್ಚಳಿರಬಹುದೆಂದು ಊಹಿಸಿದ್ದನು. ಅನಂತರ ಅವಳು ದಾರಿಯಲ್ಲಿ ಹೊರಟ ರೀತಿಯನ್ನು ನೋಡಿದ್ದರಿಂದ ತನ್ನ ಊಹೆಯು ಸ್ವಲ್ಪವಾದರೂ ನಿರಾಧಾರವಾದುದಲ್ಲವೆಂಬುದು ದೃಷ್ಟಪಟ್ಟಿತು. ಇಷ್ಟಾದರೂ ಅರಿಂದಮನು ಅವಳ ಮಾತು ಕತೆಗಳನ್ನು ಹುಚ್ಚಳ ಮಾತೆಂದು ಅಲಕ್ಷ್ಯಮಾಡಲಿಲ್ಲ. ಅತನಂತೆ ಸಾಹಸಿಯೂ ಚತುರನೂ ಸಮ್ಮೋಹಕನೂ ಆದವನು ಪುರುಷ ಪ್ರಯತ್ನವಾಡದೆ ದೇವರನ್ನೇ ಭಾರಹಾಕುವುದು ಕೇವಲ ನಿಂದಾರ್ಹವಾದ ಕಷಯವಾಗಿದ್ದರೂ, ಅತನು ಅನೇಕ ಸಮಯಗಳಲ್ಲಿ ದೇವರ ದಯೆಯ ನೆಲೆಯೇ ನಿರ್ಧಾರನಾಗಿರುತ್ತಿದ್ದನು. ಈ ಪ್ರಪಂಚದಲ್ಲಿ ದೈವಸಹಾಯದ ಹೊರತು ಕೇವಲ ಪುರುಷ ಪ್ರಯತ್ನದಿಂದ ಯಾವುದೂ ಸಾಧ್ಯವಾಗುವುದಿಲ್ಲವೆಂಬುದೂ, ದೈವದ ಸಹಾಯವೊಂದಿದ್ದರೆ ಎಂತಹ

ಗುರುತರ ಘಟನೆಯಾದರೂ ಪ್ರಬಲ ಪ್ರಯತ್ನವಿಲ್ಲದೆಯೇ ಕೈಗೂಡುವು ದೆಂಬುದೂ ಆತನ ಅನುಭವಕ್ಕೆ ಬಂದ ವಿಷಯಗಳಾಗಿದ್ದುವು.

ಆ ಅಪರಿಚಿತನಾದ ಉನ್ಮಾದಿಸಿಯ ಮಾತಿನಲ್ಲಿ ಅವನು ವಿಶೇಷ ವಾದ ಸಂಬುಗೆಯಿಟ್ಟ. ದಸ್ಯು ನಳವನ್ನು ಮುರಿಯುವುದಕ್ಕಾಗಿ ಯಾರೂ ಎಂದೂ ಮನಸ್ಸಿನಲ್ಲಿ ಸಹ ಆಲೋಚಿಸದಿರುವಂತಹ ಮಹತ್ತಾ ದೊಂದು ಸನ್ನಾಹ ಮಾಡತೊಡಗಿದನು. ಸನ್ನಾಹವು ತೀರಾ ಹೊಸ ಬಗೆ; ಅದರಿಂದ ಬಹು ಮಟ್ಟಿಗೆ ಜಯವೇ ಉಂಟು; ಮೇಲಾಗಿ ಇದರಲ್ಲಿ ಭಯ, ಶಾರೀರಕ ಪರಿಶ್ರಮ ಮುಂತಾದುವು ಇಲ್ಲವೆಂದರೂ ಬಾಧಕವಿಲ್ಲ.

ಅರಿಂದಮನು ಯೋಗೇಂದ್ರನಾಥನನ್ನು ನೋಡುವುದಕ್ಕೆಂದು ತಾಣಕ್ಕೆ ಬಂದನು. ಆ ಸಮಯದಲ್ಲಿ ಯೋಗೇಂದ್ರನಾಥನು ಅಲ್ಲಿಯೇ ಇದ್ದನು. ಅರಿಂದಮನು ಯೋಗೇಂದ್ರನಾಥನಿಗೆ ಫೂಲನಾಮೇಜಿನ ಈ ಸೂಚನೆ ಕಲ್ಪಿಸಿದ. ಬಿಚಾರವಿಲ್ಲದನ್ನು ಹೇಳಿದನಾದರೂ ತಾನು ಅವನನ್ನು ದಸ್ಯುವಿಮರ್ದನವುದಕ್ಕೊಸ್ಕರ ನಿಶ್ಚಯಿಸಿಕೊಂಡಿರುವ ಉಪಾಯದ ವಿಷಯವಾಗಿ ಒಂದು ಮಾತನ್ನೂ ಹೇಳಲಿಲ್ಲ.

ಯೋಗೇಂದ್ರನಾಥನು—ವ್ಯಾಪಾರವು ಸಫಲವಾದದ್ದಿಲ್ಲ. ನಿಮ್ಮ ಮನಸ್ಸಿಗೊಪ್ಪಕ್ಕೆ ಡಕಾಯಿತರು ಪ್ರವೇಶಿಸಿದುವೆ? ಚೆನ್ನಾಯಿತು! ಈ ಸಾರಿ ತಮ್ಮ ಏಜೆ ಬುದ್ಧಿಗೆಲ್ಲವೂ ಪಕ್ಕಗೊಳ್ಳುವು, ಎಂದು ಹೇಳಿದನು.

ಅರಿಂದಮ—ಹದಿನೈದರು ಮಂದಿ ಡಕಾಯಿತರುಗಳು ಭಯಪಡು ವಂತಹ ಶಿಕ್ಷೆಯು ಅರಿಂದಮನಿಗೆ ಇದುವರೆಗೂ ಆಗಿಲ್ಲ. ಈಗ ಬಂದಿರುವ ಸಮಾಚಾರವು ನಿಜವಾದುದೇ ಆದರೆ, ಅರಿಂದಮನು ಆ ಹದಿನೈದು ಮಂದಿಯನ್ನೂ ಕಬ್ಬಿಣದ ಒಳೆಗಳಿಂದ ಅಲಂಕರಿಸಿ ನಾಳಿನ ಉದಯಸಮಯಕ್ಕೆ ಸರಿಯಾಗಿ ಚಿತ್ರ ಕರೆದುತರುವುದನ್ನು ನೀನೇ ನೋಡುವೆ.

ಯೋಗೇಂದ್ರ—ಅರಿಂದಮಬಾಬು! ಅವರು ಹದಿನೈದರು ನಿಮಿಷದಲ್ಲಿಯೇ ತಾವು ಖಂಡಿಕೆಮಾಡಬಹುದಾ? ಫೂಲಸಾಹೇಬನೂ ಅವರಲ್ಲಿ ಒಬ್ಬನು; ಫೂಲಸಾಹೇಬನಿಂದ ಅರಿಸಲ್ಪಟ್ಟ ಹನ್ನೆರಡು ಜನ; ಒಬ್ಬೊಬ್ಬನೂ ಬರಡನೆಯ ಫೂಲಸಾಹೇಬನೇ ಬಂದಿಹನು ನೆನಪಿರಲಿ.

ಅರಿಂದಮ—ಸಂಶಯವಿಲ್ಲ.

ಯೋಗೇಂದ್ರ—ಪ್ರಾಣಗಾದರೆ?

ಅರಿಂದಮ—ಪುನಃಪುನಃ 'ಪ್ರಾಣಗಾದರೆ' ಏಕೆ?

ಯೋಗೇಂದ್ರ—ಈಗ ಯಾವ ಉಪಾಯವನ್ನು ಆಲೋಚಿಸಿರುವಿರಿ?

ಅರಿಂದಮ—ಅತ್ಯಲ್ಪಕಾಲದಲ್ಲಿ? ಇಲ್ಲವೇ ಅವರನ್ನು ಒಂದುಗಳನ್ನಾಗಿ ಮಾಡುವುದಕ್ಕೋ?

ಯೋಗೇಂದ್ರ—ಎರಡೂ ಪ್ರಕಾರಗಳಿಗೂ.

ಅರಿಂದಮ—ಇನ್ನೂ ಸಮಯವಿರುವುದು, ಬಂದಲ್ಲಿನಿನ್ನಲೆ ಬಂದು ಉಪಾಯ ಮಾಡಿಕೊಂಡರಾಯಿತು.

ಯೋಗೇಂದ್ರ—ಸಮಯವಿನ್ನೆಲ್ಲಿ ಬಂತು? ಅವರು ಬರುವುದು ಈ ರಾತ್ರಿಯೋ ಅಲ್ಲವೆ? ಈಗ ನನ್ನ ಕಡೆಯಿಂದ ತಮಗೆ ಬಹಳ ಜನರು ಬೇಕೋ ಹೇಳಿರಿ.

ಅರಿಂದಮ—ಒಬ್ಬನೂ ಬೇಡ.

ಯೋಗೇಂದ್ರ—(ವಿಸ್ಮಿತನಾಗಿ) ಅದು ಹೇಗೆ?

ಅರಿಂದಮ—ಈ ಜನರನ್ನು ಕಟ್ಟಿಕೊಂಡು ಸಾಸ್ತ್ರವು ಮಾಡಲಿ?

ಯೋಗೇಂದ್ರ—ಒಂಟಿಯಾಗಿದ್ದುಕೊಂಡು ತಾವೇ ಏನು ಮಾಡಲಾಹಿರಿ?

ಅರಿಂದಮ—ಸಾಧ್ಯವಾದುದನ್ನು!

ಯೋಗೇಂದ್ರ—ಏನು? ಮುಚ್ಚರಂತೆ ಮೂರ್ತನಾಡುವಿರಲ್ಲ? ಊಹೆಗಳ ಮೇಲೆ ಊಹೆಗಳನ್ನೂ ಚಿತೆಗೊಡಿಸಿ ಮೂರ್ತನಾಡುವುದರಿಂದಲೂ,

ಕಾತು ನಾಡುಗಳೆನ್ನದೆ ಅಲೆದಾಡುವುದರಿಂದಲೂ ನಿಮ್ಮ ಮೆದುಳು ಕೆಟ್ಟಿರಬಹುದೆಂದು ತೋರುತ್ತದೆ.

ಅರಿಂದಮ—(ನಗುತ್ತಾ) ಹಾಗೂ ಆಗುವುದು!

ಯೋಗೇಂದ್ರ—ನಿಮಗೆ ಬಲ್ಲ ವಿಚಾರಗಳೆಲ್ಲಯೂ ಪರಿಹಾಸ. ಕೆಲಸದ ಪ್ರಸ್ತಾಪದಲ್ಲಿ ಪರಿಹಾಸಮಾಡುವುದು ಬುದ್ಧಿವಂತರ ಲಕ್ಷಣವಲ್ಲ. ನೀವು ಒಂಟಿಯಾಗಿದ್ದರೆ ಆ ಹದಿಮೂರು ಮಂದಿಯನ್ನು ಏನೂ ಮಾಡಲಾಗುವುದಿಲ್ಲ.

ಅರಿಂದಮ—ದೇವೇಂದ್ರವಿಜಯಸಿದ್ಧಾನೆ.

ಯೋಗೇಂದ್ರ—ಆದಿನ ಘಟನೆಯಲ್ಲಿ ಅತನ ಬುದ್ಧಿಬಲಗಳ ಪರಿಚಯವಾಗಿದೆ. ಆ ದಿನದಂತೆಯೇ ಈ ದಿನವೂ ಅತನು ತಮಗೆ ನೆರವಾಗುವುದಾದರೆ ತಮ್ಮ ಏಳ್ಗೆಗೆ ಅತಂಕವೇ ಇಲ್ಲ.

ಅರಿಂದಮ—ಯೊಸಬ. ಅದು ಹಾಗಿರಲಿ; ದೇವೇಂದ್ರವಿಜಯನ ಮುಖಕಣ್ಣಿಭಾವ ಮತ್ತೂ ಮಾತುಕತೆಗಳನ್ನು ನೋಡಿದರೆ ಅತನ ಬುದ್ಧಿಶಕ್ತಿಯು ಬಹಳ ಪರಿಷ್ಕಾರವಾಗಿರುವುದೆಂಬುದು ತಿಳಿಯುವುದು. ಅವನು ಸನ್ಯಾಸಿಯೆ ಈ ಬರಡು ತಿಂಗಳುಗಳಿಂದ ಅಲೆದಾಡಿದುದರಿಂದ ಶತ್ರೋದಾರಿಯನ್ನು ಕಲಿಯುವೇಕೆಂಬ ಕುತೂಹಲವು ಅವನಿಗೆ ಉಂಟಾಗಿರುತ್ತದೆ. ಬುದ್ಧಿಶಕ್ತಿಗಳು ಪ್ರಬಲವಾಗಿಲ್ಲದಿರುವುದಾದರೆ ಯಾವನೂ ಈ ಬಹುಸ್ಯ ವೃತ್ತಿಗೆ ಆಸೆಪಡುವುದಿಲ್ಲ. ಯಾರಲ್ಲಿ ಸ್ವಲ್ಪವಾದರೂ ಬುದ್ಧಿಯಿರುವುದೋ, ಯಾರಲ್ಲಿ ಚತುರತೆಯ ಚಿಹ್ನೆಯಾದರೂ ಇರುವುದೋ, ಯಾರ ಶರೀರದಲ್ಲಿ ಬಲವಿರುವುದೋ ಅಂಥವರು ಬಂತಹ ಕೆಲಸಗಳೆಂದರೆ ಸ್ವಲ್ಪ ಮಟ್ಟಿಗಾದರೂ ಆಸಂತರಾಗಿಯೇ ಆಗುವರು.

ಯೋಗೇಂದ್ರ—ನಿಮ್ಮ ದೇವೇಂದ್ರವಿಜಯನು ಚತುರನಲ್ಲವೆಂದಾಗಲೀ, ಬುದ್ಧಿವಂತನಲ್ಲವೆಂದಾಗಲೀ, ಬಲಶಾಲಿಯಲ್ಲವೆಂದಾಗಲೀ ನನ್ನ ಅಭಿಪ್ರಾಯವಲ್ಲ. ಅವನು ಈ ಗುಣಗಳಿಂದ ಕೂಡಿರುವನಾದರೂ

ಆ ಹದಿಮೂರು ಮಂದಿಗೆ ನೀವಿಬ್ಬರು ಇದಿರಾಗಿ ನಿಂತು ಹೋರಾಡ ಲಾಗುವುದೆ? ಅದೂ ಅಲ್ಲದೆ ಆ ಹದಿಮೂರು ಜನರಲ್ಲಿ ಸ್ವಯಂ ಫೂಲಸಾಹೇಬನು ಒಬ್ಬನಾಗಿ ಬಿದ್ದೇ ಇರುವನಲ್ಲವೆ?

ಅರಿಂದಮ—ಒಂದು ದಿನ ನಾನೊಬ್ಬನೇ ಇಪ್ಪತ್ತೊಂದು ಜನರಿಗೆ ಬಂತಪ ದುರ್ದಶೆಯನ್ನು ತಂದೆನೆಂಬುದು ಮರೆತುಹೋಯಿತೆ?

ಯೋಗೇಂದ್ರ—ಇಲ್ಲ, ಅದು ಚಾಲ್ತಿಸಕವಿದೆ. ನಿಮ್ಮ ಬುದ್ಧಿ ಬಲವು ಅಸಾಧಾರಣವಾದದ್ದು. ಆದರೆ ಫೂಲಸಾಹೇಬನು ಸಾಮಾನ್ಯ ಮನುಷ್ಯನಲ್ಲ; ಅದ್ಭುತವಾದ ಪೀಗೆ ಪಕ್ಷಿವಿದೆ.

ಅರಿಂದಮ—ಯೋಗೀಶ, ನನಗೆ ಒಂದು ವಿಷಯದಲ್ಲಿ ಸಹಾಯವು ಬೇಕಾಗಿದೆ. ಕೆಲವು ಬಲೆಕ್ಟ್ರಿಕ್ ಬ್ಯಾಟರಿಗಳ ಅವಶ್ಯಕತೆಯುಂಟಾಗಿದೆ; ನಾಯಂಕಾಲದೊಳಗಾಗಿ ತರಿಸಿಕೊಡಬಲ್ಲೆಯಾ?

ಯೋಗೇಂದ್ರ—ಇಲೆಕ್ಟ್ರಿಕ್ ಬ್ಯಾಟರಿಯಿಂದ ಏನು ಮಾಡುತ್ತೀರಿ?

ಅರಿಂದಮ—(ನಗುತ್ತಾ) ಮಾಡುವುದೇನು? ಸ್ವಲ್ಪ ಮಟ್ಟಿಗೆ ವಿಜ್ಞಾನ ಶಾಸ್ತ್ರ ಪರಿಚಾರವಾದ ಸಮಾಲೋಚನೆ ಮಾಡುವುದು.

ಯೋಗೇಂದ್ರ—ನಿಮ್ಮ ಮನೋಗತವನ್ನು ತಿಳಿಯುವುದು ಕಷ್ಟ. ನೀವು ಬಹು ಮರ್ಮಿಗಳು.

ಅರಿಂದಮ—ತಮಗೂ ಹಾಗೆಯೆ?

ಯೋಗೇಂದ್ರ—ಅಲ್ಲದೆ ಏನು? ಇಲೆಕ್ಟ್ರಿಕ್ ಬ್ಯಾಟರಿಗಳಲ್ಲದೆ ಬೇರೆ ನಾದರೂ ಆವಶ್ಯಕವೋ?

ಅರಿಂದಮ—ಹದಿನಾಲ್ಕು ಜತೆ ಕೈಕೋಳಗಳು ಮತ್ತೂ ಸರಪಳಿಗಳು. ಎಲ್ಲವೂ ಗಟ್ಟಿಮುಟ್ಟಾಗಿರಬೇಕು.

ಯೋಗೇಂದ್ರ—ಒಂದೇಕೆ ಹೆಚ್ಚಾಗಿ?

ಅರಿಂದಮ—ಆ ಹದಿಮೂರು ಜನರೊಡನೆ ಬುದ್ಧಿಯಿಲ್ಲದೆ ಮಾಡಿದರೂ ಮಾಡಬಹುದು. ಹಾಗಿಲ್ಲವಾದರೆ ಫೂಲಸಾಹೇಬನಿಗೆ ಎರಡು ಜತೆ ಕೋಳಗಳು ಆವಶ್ಯಕವಾದರೂ ಆಗಬಹುದು.

ಯೋಗೇಂದ್ರ—ಅರಿಂದಮಬಾಬು, ನಾನೇನೂ ಹೇಳಲಾರೆ. ನಿಮ್ಮ ಮಾತುಗಳು ನನಗೆ ಒಪ್ಪಿಗೆಯಿಲ್ಲ. ಹೆಚ್ಚು ಜನರು ಬೇಕಿಲ್ಲ ವೆಂದರೇನು? ನಾನು ತಾಣೆಯಿಂದ ಹನ್ನೆರಡು ಜನರನ್ನು ಕಳುಹಿಸಿ ಕೊಡುತ್ತೇನೆ. ಈ ರಾತ್ರಿಯ ಮಟ್ಟಿಗೆ ಅವರು ನಿಮಗೆ ಸಹಾಯಕರಾಗಿ ನಿಮ್ಮ ಮನೆಯಲ್ಲಿ ಕಾಯ್ದುಕೊಂಡಿರಲಿ; ಅಂತಹ ಸಮಯಗಳಲ್ಲಿ ಅವರಿಂದ ಬಹು ಮಟ್ಟಿಗೆ ಸಹಾಯವಾಗುವುದು.

ಅರಿಂದಮ—ಬಿಟ್ಟಿನೂ ಬೇಕಿಲ್ಲ. ನನ್ನ ಪ್ರಯತ್ನದಲ್ಲಿ ನಂಬಿಗೆ ಇಲ್ಲವೇನು?

ಯೋಗೇಂದ್ರ—ನಿಮಗೆ ಹೇಗೆ ಇಷ್ಟವೋ ಹಾಗೆ ಮಾಡಿರಿ. ನಾನು ಮತ್ತೇನೂ ಹೇಳುವುದಿಲ್ಲ.

ಅರಿಂದಮ—ನಾನು ಹೊರಡುತ್ತೇನೆ. ನನ್ನ ಹೊತ್ತು ಕಳೆಯಲಾರೆ. ಎಲೆಕ್ಟ್ರಿಕ್ ಬ್ಯಾಟರಿಗಳನ್ನೂ ಕೈಕೋಳಗಳನ್ನೂ ಸಂಕೋಲೆಗಳನ್ನೂ ಆದಷ್ಟು ಬೇಗ ಕಳುಹಿಸಿಕೊಡಿ.

ಯೋಗೇಂದ್ರ—ಬಲ್ಲೆವು, ಅರ್ಧ ಗಂಟೆಯೊಳಗಾಗಿ ಬಂದು ಸೇರುವುವು.

ಐದನೆಯ ಪರಿಚ್ಛೇದ

ಸ್ವಾಗತ ಸನ್ನಾಹ

ಯೋಗೇಂದ್ರನಾಥನು ಕಚೇರಿಯಿಂದ ಹೊರಟ ಅರಿಂದಮನು ನಿಜ ನಿವಾಸಕ್ಕೆ ಬಂದು ನೋಡಿದನು. ದೇವೇಂದ್ರಬಿಜಯನು ಇನ್ನೂ ಬಂದಿರಲಿಲ್ಲ. ಅರಿಂದಮನು ಬಂದು ಹೊಗೆಯ ಸುತ್ತನ್ನು ತೆಗೆದು ಕೊಂಡು ಜೈತಕಖಾನೆಯ ಬಾಗಿಲ ಬಳಿ ಕುಳಿತು ಯಾವುದೊಂದು ಯೋಚನೆಯೂ ಇಲ್ಲದೆ ಹೊಗೆಬತ್ತಿಯನ್ನು ಹೊತ್ತಿಸುತ್ತಿದ್ದನು.

ಯೋಗೇಂದ್ರನಾಥನು ಕೊಟ್ಟುಕಳುಹಿದ ಇಲೆಕ್ಟ್ರಿಕ್ ಬ್ಯಾಟರಿಗಳೂ ಕೈಕೋಳಗಳೂ ಸಂಕೋಲೆಗಳೂ ತಲೆಹೊರೆಗಳಾಗಿ ಯಥಾ

ಸಮಯದಲ್ಲಿ ಬಂದು ತಲ್ಪುದುವು. ಅರಿಂದಮನು ಒಂದೊಂದನ್ನೂ ತೆಗೆದುಕೊಂಡು, ಹಿಂದು ಮುಂದು ತಿರುಗಿಸಿನೋಟ, ಒಳಕ್ಕೆ ತೆಗೆದು ಕೊಂಡು ಹೋದನು. ಕೈಕೋಳಗಳೂ ಸಂಕೋಲೆಗಳೂ ಆವಶ್ಯಕ ವಾದಾಗ ಕೂಡಲೇ ಸಿಕ್ಕುವ ಹಾಗೆ ಮಂಚದಮೇಲೆ ಅವನ್ನು ಜೋಪಾನಪಡಿಸಿದನು.

ಅನಂತರ ಇಲೆಕ್ಟ್ರಿಕ್ ಬ್ಯಾಟರಿಗಳನ್ನು ಹೊಲಕ್ಕೆ ಹೋಗುವ ಮೆಟ್ಟಿಲುಗಳ ಅಡಿಯಲ್ಲಿರಿಸಿದನು. ಹಾಗೆಯೇ ಬ್ಯಾಟರಿಗಳಿಗೆ ತಂತಿ ಗಳನ್ನು ಸೇರಿಸಿ ಮುಖಮಟ ಮೆಟ್ಟಿಲಿನ ನಾಲ್ಕೂ ಕಡೆಯಲ್ಲಿಯೂ ಮತ್ತು ರೈಲಂಗಗೂ ಜಂಟಿಸಿಬಿಟ್ಟನು. ತನ್ನ ಮಲಗುವ ಮನೆಯ ರಕ್ಷಣಾಗಾಲು ಗಳಿಗೂ ಬಂದು ತಂತಿಯನ್ನು ಜಂಟಿಸಿ ಇಲೆಕ್ಟ್ರಿಕ್ ಬ್ಯಾಟರಿ ಯೊಂದಿಗೆ ಕೂಡಿಸಿದನು.

ಇದೆಲ್ಲವನ್ನೂ ಅರಿಂದಮನು ಸರಿಪಡಿಸುವ ಹೊತ್ತಿಗೆ ರಾತ್ರಿ ಒಂಬತ್ತು ಗಂಟೆಯಾಯಿತು. ರಾತ್ರಿ ಒಂಬತ್ತು ಗಂಟೆಯಮೇಲೆ ದೇವೇಂದ್ರವಿಜಯನು ಮನೆಗೆ ಬಂದನು.

ಅರಿಂದಮನು ದೇವೇಂದ್ರವಿಜಯನನ್ನು ಕುರಿತು—ಫೂಲ ಸಾಹೇಬನು ಇಂದು ಬಿಲ್ಲಿಗೆ ವಿಜಯ ಮಾಡಿಸುತ್ತಾನೆ, ಎಂದನು.

ದೇವೇಂದ್ರವಿಜಯನು, ಆಗತಾನೇ ಆಕಾಶದಿಂದ ಉರುಳಿಕೊಂಡ ವನಂತೆ ಗಾಬರಿಯಾಗಿ, ಫೂಲಸಾಹೇಬ! ಇಲ್ಲಿ ಬಿಲ್ಲಿಗೆ ಬರುವನು? ಎಂದು ಕೇಳಿದನು.

ಇಲ್ಲಿ—ನಮ್ಮ ಮನೆಗೆ.

ಈಗ ಅವನೆಲ್ಲಿ?

ಅವನು ಬಿಲ್ಲಿಯಾದರೂ ಇರಲಿ, ಇಂದು ನಮ್ಮ ಮನೆಗೆ ಬರು ತ್ತಾನೆ.

ತನ್ನ ಮನೆಗೇಯೇ?

ಹೌದು; ನಮ್ಮ ಮನೆಗೇ.

ಸಿಕ್ಕಿಸೋಳುವುದಕ್ಕೆ?

ಬಹು ಸುಟ್ಟಿಗೆ ಸಿಕ್ಕಿ ಸೋಳುವುದಕ್ಕೋ.

ನಿಮ್ಮ ಮಾತು ನನಗೆ ತಿಳಿಯುವುದೇ ಇಲ್ಲ.

ಬಾ, ತಿಳಿಯಿಸುತ್ತೇನೆ ಎಂದು ಅರಿಂದಮನು ನಗುತ್ತಾ ಹೇಳಿದನು.

* * *

ಅರಿಂದಮನು ದೇವೇಂದ್ರಬಿಜಯನನ್ನು ಕರೆದುಕೊಂಡು ಮಂಟಪದ ಮೇಲಕ್ಕೆ ಹೋಗುವ ಸೋಪಾನದ ಬಳಿಗೆ ಕರೆದು ತಂದನು. ಹಾಗೆಯೇ ಇಲೆಕ್ಟ್ರಿಕ್ ಬ್ಯಾಟರಿಯ ಸಹಾಯದಿಂದ ಸುಟ್ಟು ಸೋಲಿಸಿ ತಂತಿಗಳೊಳಗೆ ಅಲ್ಪ ಪರಿಮಾಣದಲ್ಲಿ ವಿದ್ಯುಚ್ಛಕ್ತಿಯು ಪ್ರವಹಿಸುವಂತೆ ಮಾಡಿಬಿಟ್ಟು—ಈಗ ನೀನು ಮೆಟ್ಟಿಲಿನ ಮೇಲೆ ಹತ್ತಿ ಸ್ವಲ್ಪ ಸಿಲ್ಲು ಸೋಡುವ, ಎಂದನು.

ಅರಿಂದಮನು ಸಮಸ್ಸಿನಲ್ಲಿ ದೇವೇಂದ್ರಬಿಜಯನಿಗಿಂತ ಬಹಳ ಹಿರಿಯನಾದುದರಿಂದಲೂ, ಈ ಎರಡು ತಿಂಗಳ ಕಾಲದಿಂದ ಬಳೆದು ಬಂದ ಸ್ನೇಹದಿಯ ದೆಸೆಯಿಂದಲೂ ಆತನೊಡನೆ ಮಾತನಾಡುವಾಗ, 'ತಾವು,' 'ತಮ್ಮ' ಮುಂತಾದ ಗೌರವ ಸೂಚಕವಾದ ಮಾತು ಕತೆಗಳಿಗೆ ಬದಲಾಗಿ ಸ್ನೇಹ ಸೂಚಕವಾದ 'ನೀನು,' 'ನಿನ್ನ' ಮುಂತಾದ ಶಬ್ದಗಳನ್ನೇ ಉಪಯೋಗಿಸುತ್ತಿರುವನು. ಅರಿಂದಮನ ಮಾತು ಕೇಳಿದ ದೇವೇಂದ್ರಬಿಜಯನು ಕೂಡಲೇ ದಪ್ಪದಿಂದ ಪಾಶ್ಚಾದಲ್ಲಿದ್ದ ಸೋಲಂಗನ್ನು ಹಿಡಿದು ಮೆಟ್ಟಿಲನ್ನು ಹತ್ತಿದನು; ಅವೊಡನೆಯೇ ಯಾತನಾಮಯವಾದ ತೀವ್ರತರ ಚೀತ್ಕಾರವೂರ್ವಕವಾದ ಅವನ ಆರ್ತನಾದವು ಆ ಮಂಟಪದಲ್ಲಿ ಪ್ರತಿಧ್ವನಿತವಾಯಿತು. ದೇವೇಂದ್ರಬಿಜಯನು ಮೆಟ್ಟಿಲಿಂದ ಐದು ಮೊಳಗಳ ದೂರಕ್ಕೆ ಹಾರಿಬಿದ್ದನು.

ಅನಂತರ ಅರಿಂದಮನು ದೇವೇಂದ್ರಬಿಜಯನಿಗೆ ಬಲ್ಲವನ್ನೂ ಹೇಳಿದನು. ದೇವೇಂದ್ರನು ಕೇಳಿ ಮಂದಸ್ಮಿತನಾದನು. ಅರಿಂದಮನು,

ನೀನು ಒಂದು ಬ್ಯಾಟರಿಯ ಶಕ್ತಿಯನ್ನು ಪರಾತ್ಪ ನೋಡಿದೆ; ಹತ್ತು ಬ್ಯಾಟರಿಗಳೂ ಒಟ್ಟುಗೂಡಿ ಕೆಲಸ ಮಾಡುವಾಗ ಸೊಟ್ಟಲಸಮೇಲೆ ಒಂದು ಸಲ ಕಾಲೂರಿದರೆ ಸಾಕು—ಇನ್ನೊಂದು ಕಾಲನ್ನು ಕದಲಿಸುವುದಕ್ಕೂ ತ್ರಾಣವಿರುವುದಿಲ್ಲವೆಂದು ತಿಳಿ. ಫೂಲಸಾಹೇಬನು ನಿಕ್ಕಿಯದಾಗಿ ರೇವತಿಯ ಉಚ್ಚಾರವಾದ ಬಲ್ಲ ವ್ಯತ್ಯಾಂತವನ್ನೂ ತಿಳುಹಿಸುವ ವರೆಗೆ ಅವನನ್ನು ಈ ಸೊಟ್ಟಲಸಮೇಲೆ, ಈ ಯಾತನಾಮಯವಾದ ಅವಸ್ಥೆಯಲ್ಲಿಯೇ ಬಿಲ್ಲಿಸುವೆನು. ದಾರುಣವಾದ ಈ ಬಾಧೆಯು ದೆಸೆಯಿಂದ ಅವನು ತನ್ನ ರಹಸ್ಯ ಸಮಾಚಾರಗಳೆಲ್ಲವನ್ನೂ ತಾನಾಗಿ ಪ್ರಕಾಶಪಡಿಸುವನು, ಎಂದು ಹೇಳಿದನು.

ಇದೆಲ್ಲವನ್ನೂ ಕೇಳಿ ದೇವೇಂದ್ರಬಾಬುವಿನ ಮನಸ್ಸಿನಲ್ಲಿ ತುಂಬ ಆನಂದವಾಯಿತು. ಅವನ ಮುಖಭಾವವನ್ನು ನೋಡಿದ ಅರಿಂದಮನಿಗೆ ಇದು ತಿಳಿಯದೇ ಇರಲಿಲ್ಲ. ಹೇಳಿದನು—ನೀನು ನೋಡುತ್ತಿರುವ ಈ ಘಟನೆಯಿಂದ ರೇವತಿಯ ಉದ್ಧಾರ ಕಾರ್ಯವು ಬಹು ಸ್ವಲ್ಪ ಮಾತ್ರ ಉಳಿದಿರುವುದೆಂದೇ ಜೋಡಿಯಾಗುವುದು, ಎಂದು.

ದೇವೇಂದ್ರ—ತಮ್ಮ ಅಲೋಚನೆಗಳ ಮುಸ್ಸೆ ಸ್ಪಷ್ಟೀಕರಿಸುವ ಶಕ್ತಿಯು ಇನ್ನೂ ನನಗೆ ಸಾಲದು. ತಾವು ಹೇಳುತ್ತಿರುವುದೆಲ್ಲ ತಿಳಿಯುವುದಕ್ಕಾದರೂ ತಿಳಿದವನಂತೆ ಒಂದು ಬಗೆಯಾಗಿ ಅಭಿಸ್ಪೈಸುತ್ತಿದ್ದೇನೆ. ಫೂಲಸಾಹೇಬನು ಇಲ್ಲಿಗೇಕೆ ಬರುವನು?

ಅರಿಂದಮ—ನನ್ನನ್ನು ಕೊಲ್ಲುವುದಕ್ಕೆ.

ದೇವೇಂದ್ರ—ಅವನಿಗೆ ಅಷ್ಟು ಧೈರ್ಯವೆ?

ಅರಿಂದಮ—ಫೂಲಸಾಹೇಬನ ಉಚ್ಚಾರದಲ್ಲಿ ಒದೊಂದು ಧೈರ್ಯವೂ ಮಾತಲ್ಲವೆಂದಲ್ಲ.

ದೇವೇಂದ್ರ—ರಾತ್ರಿ ಎಷ್ಟು ಹೊತ್ತಿಗೆ?

ಅರಿಂದಮ—ರಾತ್ರಿ ಎರಡು ಗಂಟೆಯ ನಂತರ.

ದೇವೇಂದ್ರ—ಹೇಗೆ ಬರುವನು?

ಅರಿಂದಮ—ಕಳ್ಳನಂತೆ ಗುಟ್ಟಾಗಿ ಬರುವುದಿಲ್ಲ. ಡಕಾಯಿತರ ದಳಪತಿಯೇತನಾಗಿ, ಡಕಾಯಿತಿ ಮಾಡಲು ಬರುವ ಹಾಗೆಯೇ, ತನ್ನ ಗುಂಪಿನವರೊಡಗೂಡಿ ಬರುತ್ತಾನೆ.

ದೇವೇಂದ್ರ—ಅವನಿಗೆ ಈಗ ಗುಂಪೆಲ್ಲಿ ಜತೆಯಾಯಿತು!

ಅರಿಂದಮ—ಈ ಬರಡು ತಿಂಗಳಿಂದ ಅವನು ಯಾವ ಪ್ರಯತ್ನವನ್ನೂ ಮಾಡದೆ ಕುಳಿತು ಕಾಲಹರಣ ಮಾಡುತ್ತಿದ್ದಾನೇನು? ಒಳಗೊಂದೊಳಗೇ ಬಲ್ಲವನನ್ನೂ ಸಿದ್ಧಮಾಡಿಕೊಂಡಿದ್ದಾನೆ.

ದೇವೇಂದ್ರ—ಹಾಗಾದರೆ ಇದು ಬಹು ಭಯಂಕರ ಸಮಾಚಾರವೇ ಸರಿ. ಈ ಸುದ್ದಿಯು ತಮಗೆ ಹೇಗೆ ತಿಳಿಯಿತು?

ಆಗ ಅರಿಂದಮನು ತಾನು ಪೋಲಿಸಿನಿಂದ ಕೇಳಿದುದನ್ನೆಲ್ಲಾ ದೇವೇಂದ್ರನಿಗೆ ಹೇಳಿದನು. 'ಪೋಲಿಸಿ' ಎಂಬ ಹೆಸರನ್ನು ಬಿಟ್ಟು ಹುಚ್ಚಳ ಮಾತುಗಳಲ್ಲಿ ಅರಿಂದಮನು ಬಹಳ ಪ್ರಶಾಸಪಟ್ಟುದನ್ನು ನೋಡಿ ಅನೇಕರು ಅರಿಂದಮನು ಸರಿಯಾದ ಕೆಲಸವಾತನಲ್ಲವೆಂದೆನ್ನುವುದು. ಆದರೆ ಬಹು ದಿನಗಳಿಂದಲೂ ಪತ್ತೇದಾರಿಯ ಕೆಲಸದಲ್ಲಿ ಪಳಕಗೊಂಡಿದ್ದ ಅರಿಂದಮನಿಗೆ ಆ ಅಸಾಧಾರಣವಾದ ನೈಪುಣ್ಯವೂ, ಅಸಹ್ಯ–ಸುಲಭವಾದ ವಿಲೋಡನಾಶಕ್ತಿಯೂ ಇದ್ದುದಾಗಿ ಬಂದು ಮಾತು ಹೊರಬಿತ್ತೆಂದರೆ ಅದು ಕಾಲಕ್ರಮದಲ್ಲಿ ಹೇಗೆ ಹೇಗೆ ಪರಿಣಮಿಸುವುದೆಂಬುದನ್ನು ಅತಿಸುಲಭವಾಗಿ ನಿರ್ಧರಿಸುತ್ತಿದ್ದನು. ಪೋಲಿಸಿಯು ಸ್ವಂತ ವಿಚಾರವಾಗಿ ಯಾವುದೊಂದು ಮಾತನ್ನೂ ಹೊರಪಡಿಸದೆ ಬಿದ್ದಾಡಿದರೂ ಅವಳ ಮಾತಿನ ಭಾವದಿಂದ ಪೋಲಿಸಿನು ಯಾವುದೋ ವಿಚಾರದಲ್ಲಿ ಫೂಲಸಾಹೇಬನಿಂದ ಭಯಗೊಳಿಸಲ್ಪಟ್ಟವಳಾಗಿರಬೇಕೆಂದೂ ಇಂತಹ ಸಂದರ್ಭಗಳಲ್ಲಿ ಆ ವಿಚಾರವು ವಿದಿತವಾತ್ಮಕವೂ, ಸ್ಪಷ್ಟವಾಗಿ ಮರ್ಮಭೇದಕವೂ ಆಗಿರಬೇಕೆಂದೂ ಅರಿಂದಮನು ತಿಳಿದುಕೊಳ್ಳದಿರಲಿಲ್ಲ.

ಆರನೆಯ ಪರಿಚ್ಛೇದ

ಗುಪ್ತದ್ವಾರ

ರಾತ್ರಿ ಹನ್ನೊಂದು ಗಂಟೆಗೆ ಕೊಠಡಿಯೇ ಅರಿಂದಮ ಮತ್ತು ದೇವೇಂದ್ರ ವಿಜಯರು ಆಹಾರಾದಿಗಳನ್ನು ಮುಗಿಯಿಸಿಕೊಂಡು ಬೇರೆಯವಾಗಲನ್ನು ಮುಚ್ಚಿ ಅಗಳಿಯಾಕಿ ಭದ್ರಪಡಿಸಿ ಮಹಡಿಯಮೇಲಿನ ಒಂದು ಕೊಠಡಿಯಲ್ಲಿ ಕುಳಿತು ಹರಟೆಯಾಡತೊಡಗಿದರು.

ದೇವೇಂದ್ರವಿಜಯನು ಆಟವಾಡುವಾಗ ಬಹಳಂದೊಮ್ಮೆ ಅನ್ಯ ಮನಸ್ಕನಾಗುತ್ತಲಿದ್ದನು. ಒಂದೊಂದು ಸಲ ಆಟಕ್ಕೆ ಮನಸೊಡದೆಯೇ ಪೂಲಸಾಹೇಬನ ಪದಪ್ಪಸಿಯನ್ನು ಆಲಿಸಲು ವಾಕ್ಯಂಲಿತನಾಗುತ್ತಿದ್ದನು; ಪೂಲಸಾಹೇಬನ ಪರಿವಾರದವರ ಭಯಂಕರ ಮೂರ್ತಿಗಳನ್ನು ಮನಸ್ಸಿನಲ್ಲಿಯೇ ಕಲ್ಪಿಸಿಕೊಳ್ಳಲು ಉದ್ಯುಕ್ತನಾಗುತ್ತಲಿದ್ದನು. ಅರಿಂದಮನು ಆಟದಲ್ಲಿಯೇ ಮನಸ್ಸಿಟ್ಟಿದ್ದ ಕಾರಣ ಯಾರಿಗೂ ಗೆಲ್ಲುತ್ತಲೇ ಇದ್ದನು. ಇಷ್ಟರಲ್ಲಿಯೇ ಬೇಹಕ್ಕೂ ಮೃತ್ಯುವಿಗೂ, ಹಾಗೆಯೇ ಜೂರಿಗೂ ರಕ್ತಕ್ಕೂ, ಸಂಗಾತವು ಸನ್ನಿಹಿತವಾಗಿರುವುದೆಂದೇ ಹೇಳಬಹುದಾದಂತಹ ಮಹಾಪಹತ್ತಿನ ಭಾರವನ್ನು ಅರಿಂದಮನು ತಾಳಿದ್ದನಾದರೂ ಅದಕ್ಕಾಗಿ ಅತನ ಮುಖದಲ್ಲಿ ಉದ್ವೇಗದ, ಆತಂಕೆಯ ಅಥವಾ ಚಿಂತೆಯ ಚಿಹ್ನೆಗಳೊಂದೂ ಕಾಣಿಸುತ್ತಿರಲಿಲ್ಲ.

ರಾತ್ರಿ ಒರಟು ಗಂಟೆಯು ಬೇಳೆಗೆ ಆಟವು ಮುಗಿಯಿತು. "ಇನ್ನು ಅವರು ಬರುವ ವೇಳೆಯಾಯಿತು; ಇನ್ನೊಂದು ಗಂಟೆಯೊಳಗಾಗಿ ಅವರ ಶುಭಾಗಮನವಾಗುವುದು. ನಾವಿಬ್ಬರೂ ಇಲ್ಲಿಯೇ ಇದ್ದುಕೊಂಡು ಅವರನ್ನು ಸತ್ಕರಿಸುವುದಕ್ಕೆ ಬೇಕಾದ ಸಲಕರಣಗಳನ್ನು ಸಿದ್ಧಪಡಿಸಿಕೊಳ್ಳೋಣ ಬಾ" ಎಂದು ಅರಿಂದಮನು ಹೇಳಿದನು.

ದೇವೇಂದ್ರ—ನಾನು ಎಲ್ಲಿ ಸಿಲ್ಲಬೇಕೋ ಹೇಳಿರಿ.

ಅರಿಂದಮ—ಕೆಳಗೆ ಮೆಟ್ಟಿಲಿನ ಪಾರ್ಶ್ವದಲ್ಲಿರುವ ಕೊಠಡಿಯಲ್ಲಿ ನೀನು ಇರಬೇಕು. ನೀನು ಹೊರಡುವಾಗ್ಗೆ ರಜ್ಜುರಿನ ಪಾದರಕ್ಷೆ

ಗಳನ್ನು ಹಾಕಿಕೊಂಡೇ ಹೋಗು. ಅವನ್ನು ದಪ್ಪ ರಬ್ಬರಿನಿಂದ ತಯಾರು ಮಾಡಿರುವುದರಿಂದ ಮುಟ್ಟಲಲ್ಲಿ ಪ್ರವಹಿಸುವ ವಿದ್ಯುತ್ಪ್ರವಾಹದಿಂದ ನಿನಗೆ ಬಾಧೆಯಾಗುವುದಿಲ್ಲ.

ಹೀಗೆ ಹೇಳಿ ಅರಿಂದಮನು ಒಂದು ಜತೆ ರಬ್ಬರಿನ ಪಾದರಕ್ಷೆ ಗಳನ್ನೂ ಕೈಚೀಲಗಳನ್ನೂ ತಂದನು. ಅವುಗಳನ್ನು ಅವರಿಬ್ಬರೂ ಅಲಂಕರಿಸಿಕೊಂಡರು.

ದೇವೇಂದ್ರ—ಕೊಠಡಿಯಲ್ಲಿ ನಾನಿದ್ದು ಮಾಡಬೇಕಾದುದೇನು ?

ಅರಿಂದಮ—ಆ ಕೊಠಡಿಯ ತೆಂಕಲು ಮೂಲೆಯಲ್ಲಿ ಒಂದು ಹಗ್ಗವು ನೇತಾಡುತ್ತಿದೆ. ಹದಿಮೂರು ಮಂದಿ ಹುಟ್ಟಲನ್ನೇಲೆ ಹತ್ತಿದ ತಂದು ನಿನಗೆ ತೋರಿದ ಕೂಡಲೇ ಆ ಹಗ್ಗವನ್ನು ಬಿಚ್ಚಿದು ಬಿಡುಮಾಡು. ಆನಂತರ ಅವಶ್ಯಕವಾದುದನ್ನು ನಾನು ಮಾಡುತ್ತೇನೆ.

ದೇವೇಂದ್ರ—ಒಂದು ವೇಳೆ ಹದಿಮೂರು ಮಂದಿಯಲ್ಲಿ ಒಬ್ಬನು ತೊರಗಡೆ ಕಾವಲಿಗಾಗಿ ನಿಲ್ಲಬಹುದು.

ಅರಿಂದಮ—ಅವರಿಗೆ ಕಾವಲಿರುವುದಕ್ಕೆ ಬೇರೆ ಜನವುಂಟು. ಆ ಕೆಲಸವನ್ನು ಜುಮ್ಮಲಿಯು ಜೆನ್ನಾಗಿ ನಿರ್ವಹಿಸಬಲ್ಲಳು. ಜುಮ್ಮಲಿ ಮಲ್ಲಿ ಪೂಲಸಾಹೇಬಿಗೆ ಸಂಪೂರ್ಣ ಭರವಸೆ.

ದೇವೇಂದ್ರ—ಹೇಗೇ ಆಗಲಿ, ಹದಿಮೂರು ಮಂದಿಯೂ ಒಟ್ಟಿಗೆ ಸೋಪಾನದ ಮೇಲೆ ಹತ್ತುವರೇನು ?

ಅರಿಂದಮ—ಹೌದು, ಹದಿಮೂರು ಮಂದಿಯೂ ಒಟ್ಟಾಗಿಯೇ ಹತ್ತುವರು. ಪೂಲಸಾಹೇಬನ ಸ್ವಭಾವವನ್ನು ನೋಡಿದರೆ, ಅವನು ಕಳ್ಳರ ಹಾಗೆ ಸೊಲ್ಲ ಸೊಲ್ಲಗೆ ಮುರೆಯಾಡುಕೊಂಡು, ಭಯದಿಂದ ಕೆಲಸಮಾಡತಕ್ಕವನೆಂದು ತೋರುವುದಿಲ್ಲ. ತನ್ನ ಏರ ತ್ತಿದ ಅಧಿಪತ್ಯವನ್ನೆಂದಿಗೂ ಅವನು ಮಣ್ಣುಪಾಲು ಮಾಡಲಾರನು. ಖೈದಿಗಳನ್ನೂ ಸಂಗಡ ಕರೆದುಕೊಂಡು ನನ್ನ ಮಲಗುವ ಮನೆಯೊಳಕ್ಕೆ ಬಂದು, ನನ್ನ ಹಾಸುಗೆಯ ಸುತ್ತಲೂ ನಿಂತು, ಅವರ ಹದಿಮೂರು

ಚೂರಿಗಳೂ ಒಂದೇ ಮುಹೂರ್ತದಲ್ಲಿ ನನ್ನ ಹೃದಯದೊಳಗೆ ಪ್ರವೇಶಿಸು ವಂತೆ ಮಾಡುವುದರಿಂದ ತನ್ನ ಶೌರ್ಯವು ಸರ್ವಾಂಗಸುಂದರವಾಗುವ ಹಾಗೆ ಪ್ರಯತ್ನಮಾಡುವನೆಂದೇ ನನ್ನ ನಂಬುಗೆ. ಇಷ್ಟರಮೇಲೆ ಅವನ ಮನಸ್ಸಿನಲ್ಲಿ ಏನಿರುವುದೆಂಬುದು ಅವನಿಗೇ ಗೊತ್ತು. ಅವನು ಹೇಗೆ ವೇಕಾದರೂ ಭಾವಿಸಿಕೊಂಡು ಬರಲಿ; ಒಂದು ಬಾರಿ ಅವನು ಒಂದಪ್ಪ ಆದರೆ ಪುನಃ ಹಿಂದಿರುಗಿ ಹೋಗಲಾರನು. ದೇವೇಂದ್ರಬಾಬು, ಈ ಪತ್ತೇ ದಾರಿ ಕೆಲಸವು ಮಹಾಕಷ್ಟಕರವಾದದ್ದು. ಬಲ್ಲೆಯೋ ಅಗಲ, ಸ್ವಲ್ಪ ಸಂದೇಹವುಂಟಾದರೂ ಆ ಸಂದೇಹವನ್ನೇ ನಿಜವೆಂಬುದರ ಸ್ಫುರದಲ್ಲೆ ನಿಲ್ಲಿಸಿಕೊಂಡು, ಅದರ ಸಲುವಾಗಿ ತನ್ನ ಆಪಾರವಾದ ಸನ್ನಾಹವನ್ನೆಲ್ಲ ಸಿದ್ಧವಾಡಿಕೊಳ್ಳಬೇಕಾಗುವುದು. ಈಗ ನಿನಗಿರುವ ಈ ಉತ್ತಾಹದಲ್ಲಿ, ನೀನು ಕೆಲವು ದಿನಗಳವರೆಗೆ ನನ್ನೊಡನೆ ಇರುವುದಾದರೆ ನೀನೂ ಒಳ್ಳೆ ಪ್ರಸಿದ್ಧ ಪತ್ತೇದಾರನಾಗಬಹುದು. ನಿನಗೆ ಕೊಂಚ ವೈದ್ಯೋಪಕಾರವೂ ತಿಳಿದಿದೆ; ಈ ಪತ್ತೇದಾರಿಯ ಕೆಲಸ ಮಾಡುವಷ್ಟಿಗೆ ಒಂದೊಂದು ಸಮಯದಲ್ಲಿ ವೈದ್ಯ ವಿದ್ಯೆಯೂ ಸಹಕರಿಸುವುದು.

ದೇವೇಂದ್ರ—ಆದರೆ, 'ಡಾಕ್ಟರ್' ಕೆಲಸದಲ್ಲಿರುವ ಮುಯಾದೆಯು ಈ ಕೆಲಸದಲ್ಲಿಲ್ಲವಲ್ಲ? ಮುಖ್ಯವಾಗಿ ಡಾಕ್ಟರನಾದರೆ, ಅನೇಕ ಜನರಿಗೆ ಅನೇಕ ವಿಧವಾಗಿ ಉಪಕಾರ ಮಾಡಬಹುದು; ಬಹಳ ಮಂದಿ ನಿಂದೇನು ಮೃತ್ಯುಮುಖದಲ್ಲಿರುವ ಒಬ್ಬೊಬ್ಬ ಮನುಷ್ಯನನ್ನು ಬದುಕಿಸ ಬಹುದು.

ಅರಿಂದಮ—ನಿನ್ನ ಈ ಮಾತಿಗೆ ಉತ್ತರವಾಗಿ ನಾನು ಬಹಳ ಮಾತುಗಳನ್ನೇ ಆಡಬೇಕಾಗುವುದು. ಡಾಕ್ಟರನ ಕೆಲಸಕ್ಕಿಂತಲೂ ಪತ್ತೇದಾರಿ ಕೆಲಸವಿಂದ ಸಹಸ್ರ ಗುಣಾಧಿಕವಾಗಿ ಪ್ರಜೆಗಳಿಗೆ ಉಪಕಾರ ವಾಗುವುದು. ಮಾನ ಧನಗಳ ದೆಸೆಯಿಂದ ಮೃತ್ಯು ಮುಖದಲ್ಲಿ ನಿಂತಿರುವ ಒಬ್ಬೊಬ್ಬ ಜನರ ಮಾನ ಧನಗಳನ್ನು ಪತ್ತೇದಾರನು ರಕ್ಷಿಸುವುದರಿಂದ ಆ ಜನರ ಶಾರೀರದಲ್ಲಿ ಸೂತನ ಜೀವನ ಸಂಚಾರವಾಗುವುದಿಲ್ಲವೆ? ಪ್ರೀತಿಪಾತ್ರರಾದ ಮಕ್ಕಳನ್ನು ಕಳೆದುಕೊಂಡು ಶೋಕಾತುರ

ರಾದ ತಂದೆತಾಯಿಯರ ಬರಿಗೈಗಳನ್ನು ಈ ಪತ್ತೇದಾರಿಯು ಎಂದಿನಂತೆ ಪೂರ್ಣ ಮಾಡುವುದು. ದಸ್ಯುಗಳ ಕೈಯಿಂದಲೂ ಕೊಲೆಗಾರರ ನೆಸೆಯಿಂದಲೂ ಅಬಲಾಬಂಧುರಹಿತರಾದ ಎಷ್ಟೋ ಮಂದಿ ಮುಕ್ಕಳ ತಾಯಿತಂದೆಗಳನ್ನೂ, ಅಭಾಗಿನಿಯರಾದ ಎಷ್ಟೋ ಜನ ಹೆಂಗಸರ ಪತಿಗಳನ್ನೂ ಉದ್ಧಾರ ಮಾಡುವುದಕ್ಕೆ ಈ ಪತ್ತೇದಾರಿಯಿಂದ ಸಾಧ್ಯವಾಗುವುದಿಲ್ಲವೆ? ಅಥವಾ ಈ ಕಾರ್ಯಗಳೆಲ್ಲವೂ ಪರೋಪಕಾರವೆನಿಸಿಕೊಳ್ಳುವುದಿಲ್ಲವೋ? ಇವುಗಳಿಗಾಗಿ ಪಡುವ ಶ್ರಮವು ನಿರರ್ಥಕವಾದುದೋ ಏನು? ಎಂತಹ ಪಾಕ್ಷರನಾದರೂ ಸರಿ, ಪರೋಪಕಾರದ ಸಲುವಾಗಿ ಪತ್ತೇದಾರಿಯಂತಹ ಶ್ರಮಸ್ವೀಕಾರ ಮಾಡುವುದಾದರೆ, ಪಾಕ್ಷಿಕ ಏಜೆನ್ಸಿಯ ಅವನ ಸುದುಃಸಿಂದ ಜೀವಗಳೆ ಬಯಲಾಗಿ ಹೋಗುವಂತೆ ಮಾಡುವುದಕ್ಕೊಸ್ಕರ ತೀಕ್ಷ್ಣ ಫಲಕಾರಿಯಾದ ಯಾವುದಾದರ ಔಷಧಿ ಸ್ವೀಕರಣಕ ಚಿಕಿತ್ಸೆಯನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡುವೆನೇ ಹೊರತು ಮಾಡುವನು. ಪತ್ತೇದಾರನಾದವನು ಕುತೂಹಲದಿಂದ ತಾಗಲೀ, ದಯಾಪರನಾಗಿ ಆಗಲೀ, ಈಷ್ಟಾರ್ಥಪರಮಶನಾಗಿಯಾಗಲೀ ತನ್ನ ಶರಣಾಗತರ ಸಕಲ ಭಯಂಕರ ಬಿಡುಕ್ತಿಗಳಿಗೂ ತಾನು ತಲೆಗೊಟ್ಟು, ಸಮಾಜ ಹೀನವಾದ ತನ್ನ ಪ್ರಾಣವನ್ನು ಕೊಲೆಗಾರರ ಚೂರಿಯ ಅಡಿಯಲ್ಲಿ ತಲೆಮಾಡುವುದಕ್ಕೆ ಸ್ವೀಕೃತಿಯಾಗಿ ಪುಟುಪುಟಾಗೆ ಮತ್ತೆ ಯಾರಾದರೂ ಮಾಡುವರೇನೋ ತಿಳಿಯೋಣಿಸು. ಇಷ್ಟಾದರೂ ಸಮ್ಯ ದೇಶದವರು ಪತ್ತೇದಾರರನ್ನು ಗೌರವಿಸುವುದಿಲ್ಲವೆಂಬುದು ನಿಮ. ಅದು ಅವರ ದೋಷವಲ್ಲ; ಅದು ಸಮ್ಯ ಅದೃಷ್ಟ ದೋಷ. ಇಂಗ್ಲೆಂಡಾ, ಫ್ರಾನ್ಸ್, ಅಮೆರಿಕಾ ಮೊದಲಾದ ದೇಶಗಳಲ್ಲಿ ಪತ್ತೇದಾರರು ಸನ್ಮಾನಿತರಾಗಿರುವುದನ್ನೂ ತಿಳ್ಳಿಯ ಅಯಾಳ ಸ್ಥಿರಾದಿಯಾದ ಬಲ್ಲ ಸ್ತ್ರೀಪುರುಷರೂ ಪತ್ತೇದಾರರ ವಿಚಾರದಲ್ಲಿ ತೋರ್ಪಡಿಸುವ ಪ್ರೀತಿ ವಿಶ್ವಾಸಗಳನ್ನೂ ನೋಡುವುದಾದರೆ, ಅವರಾ ಸ್ಥಳದ ನ್ಯಾಯಾಧೀಶನ ಅದೃಷ್ಟ ವಲ್ಲವೂ ಅಂತಹ ಗೌರವಲಾಭವಿಲ್ಲವೆಂದು ತೋರುವುದು. ಈ ವಿಚಾರವೆಲ್ಲವನ್ನೂ ಸಹ್ಮನಿಯಲೇ ಕೇಳುವುದರಿಂದ ಬದು ಆತ್ಮಶ್ಲಾಘನೆ ಯಿಂದೇ ತೋರಬಹುದು; ಆಲ್ಲದೆ ನಾನೇ ಹೇಳುವುದು ಚೆನ್ನಾಗಿ

ಕುದುರೆಗಳಿರುವ ಒಂದು ಅಶ್ವಶಾಲೆಗೆ ಬೆಂಕಿಹೊತ್ತಿದರೆ ಹೇಗಿರುವುದೆಂಬುದನ್ನು ನೀವು ಊಹಿಸಬಲ್ಲಿರಾ? ಊಹಿಸಬಲ್ಲಿರಾದರೆ, ಇದೂ ಬಹಳ ಮಾಡಿ ಅದೇ ಮಾದರಿ, ಎಂದು ಹೇಳಬಹುದು.

ಈ ವೇಳೆಗೆ ಸರಿಯಾಗಿ ಆರಿಂದಮನು ಕೈಯಲ್ಲಿ ಲಾಂದರವನ್ನು ಹಿಡಿದುಕೊಂಡು ಶಯನಮಂದಿರದಿಂದ ಬಂದನು. ಒಂದವನೇ ಸೋಪಾನದ ಮೇಲ್ಚಾಗದಲ್ಲಿ ನಿಂತುಕೊಂಡು, ನಗುಮೊಗದಿಂದ, ಆ ಅಪೂರ್ವ ದೃಶ್ಯವನ್ನು ನೋಡುತ್ತಿದ್ದನು. ಇದೇ ಸಮಯದಲ್ಲಿ ಕೆಳಗಡೆ ಸೋಪಾನದ ಹತ್ತಿರ ಗೋಡೆಗೆ ಒರಗಿ ನಿಂತುಕೊಂಡು ದೇವೇಂದ್ರ ವಿಜಯನೂ ನಗುತ್ತ ಮುಗ್ಧನಾಗಿ ನೋಡುತ್ತಿದ್ದನು.

ಎಂತಹ ಸುಂದರ ದೃಶ್ಯ! ಸೋಪಾನದ ಮೇಲಿಂದ ತಳದ ವರೆಗೂ ಹದಿಮೂರು ಮಂದಿ ಸಾಲಾಗಿ ನಿಂತಿದ್ದಾರೆ! ಅವರ ಬಾಯಲ್ಲಿ ತರ್ಜನ-ಗರ್ಜನಗಳ ಏನಾ ಬೇರೇ ಮಾತು ಹೊರಡದು. ಇದರ ಮೇಲೆ ಅವರದು ಅದೆಂತಹ ವಿಚಿತ್ರ ಮುಖಭಂಗ! ಬಾಧೆಯು ದೆಸೆಯಿಂದ ಕೆಲವರು ನರ್ತನಮಾಡುವರು, ಕೆಲವರು ಆ ಕೈಪಿಡಿಯಿಂದ ಕೈಬಿಡಿಸಿ ಕೊಳ್ಳುವ ಪ್ರಯತ್ನದಲ್ಲಿ ಮುಖ ವಿಕಾರಮಾಡಿಕೊಂಡು ಕುಣಿದಾಡುವರು; ಆದರೆ ಏತರಿಂದಲೂ ಕೃತಕಾರ್ಯರಾಗುವ ಹಾಗಿಲ್ಲ. ಯಾರಿಗೆ ಯಾವ ಸ್ಥಳಕ್ಕೆ ಆ 'ಇಲೆಕ್ಟ್ರಿಕ್ ಬ್ಯಾಟರಿ'ಯು ಸಂಸ್ಪರ್ಶವಾಗುವುದೋ ಅವರಿಗೆ ಅವರ ದೇಹದಿಂದ ಆ ಭಾಗವನ್ನು ತೆಗೆದಂತೆಯೇ ತೋರುವುದು.

ಡಾಕ್ಟರ್ ಫೂಲಸಾಹೇಬನು ಮೆಟ್ಟಿಲಿನ ಮೇಲ್ಚಾಗದಲ್ಲಿ, ಆರಿಂದಮನಿಗೆ ಇದಿರಾಗಿ ನಿಂತಿರುವನು; ಅವನ ಮುಖದಲ್ಲಿ ಯಾತನೆ, ಚೀತ್ಕಾರ ಮೊದಲಾದ ಸಂಕಟ ಸೂಚಕವಾದ ಧ್ವನಿ ಹೊರಡದಿದ್ದರೂ ಅವನ ಮುಖಭಾವವನ್ನೂ, ಪುಷ್ಟವಾದ ಅವನ ದೇಹವು ಮತ್ತಷ್ಟು ಉಬ್ಬಿದಂತಿರುವುದನ್ನೂ ನೋಡಿದರೆ ಅವನಿಗೆ ಸಹಿಸಲಾರದ ಯಾತನಾಸುಖವಾಗುತ್ತಿರುವುದೆಂದೇ ತೋರುವುದು.

ಅರಿಂದಮನು—ಡಾಕ್ಟರ್ ಬಾಬು, ಸೌಖ್ಯವೇ? ಬಹು ದಿನಗಳ ಮೇಲೆ ಇಷ್ಟು ಬೆಳಗ್ಗೆ ದಯಮಾಡಿಸಿದಿರಿ; ಇದು ನನ್ನ ಸೌಭಾಗ್ಯವೇ ಸರಿ; ತಮ್ಮ ಸತ್ಕಾರವು ಉಚಿತ ರೀತಿಯಲ್ಲಿ ನೆರವೇರುತ್ತಿರುವುದೆಂದೂ ತೋರುತ್ತದೆ. ಯಾವ ಕೊರತೆಯೂ ಕಾಣುವುದಿಲ್ಲವಲ್ಲ? ಎಂದು ಕಿರುನಗೆಯೊಡನೆ ಹೇಳಿದನು.

ಪೂಲಸಾಹೇಬನು ಯಾವ ಉತ್ತರವನ್ನೂ ಹೇಳಲಿಲ್ಲ; ತನ್ನ ಮುಖವನ್ನು ಮತ್ತೊಂದು ಕಡೆಗೆ ತಿರುಗಿಸಿಕೊಂಡನು. ಅರಿಂದಮನು ಮೊದಲು ನಿಮ್ಮ ಸ್ನೇಹಿತರನ್ನು ಬಿಡಿಸಿದ ನಂತರ ತಮಗೆ ಮುಕ್ತಿಲಾಭವಾಗುವುದು, ಎಂದು ಹೇಳಿ ಒಟ್ಟಾಗಿಟ್ಟಿದ್ದ ಕೈಕೋಳಗಳನ್ನು ಎತ್ತಿಕೊಂಡು ಕೆಳಗಿಳಿದು ಬಂದನು. ಅವನು ಕೈಗಳಿಗೆ ರಬ್ಬರಿನ ಚೀಲಗಳನ್ನೂ ಕಾಲುಗಳಿಗೆ ರಬ್ಬರಿನ ಪಾದರಕ್ಷೆಗಳನ್ನೂ ಹಾಕಿಕೊಂಡಿದ್ದುದರಿಂದ 'ಬ್ಯಾಟರಿ'ಯಿಂದ ಅವನಿಗೆ ತೊಂದರೆಯಾಗಲಿಲ್ಲ.

ಅರಿಂದಮನು ದೇವೇಂದ್ರವಿಜಯನ ಕೈಗೆ ಕೆಲವು ಕೈಕೋಳಗಳನ್ನು ಕೊಟ್ಟನು; ಇಬ್ಬರೂ ಚತುರತೆಯಾಗಿ ದಸ್ಯುಗಳ ಕೈಗಳಿಗೆ ಕೋಳಗಳನ್ನು ತೊಡಿಸಲು ಆರಂಭಿಸಿದರು. ಕ್ರಮವಾಗಿ ಹನ್ನೆರಡು ಜನರು ಬಂದಿಗಳಾದರು. ಉಳಿದವನೆಂದರೆ ಪೂಲಸಾಹೇಬನು ಮಾತ್ರ.

ಎಂಟನೆಯ ಪರಿಚ್ಛೇದ

ಕೊಲೆಗಾರನ ಹೇಳಿಕೆ

ಇಷ್ಟೆಲ್ಲಾ ಆಗುವ ಹೊತ್ತಿಗೆ ಪೂಲಸಾಹೇಬನ ಯಾತನೆಯು ಸಹಿಸಲಾರದಷ್ಟಾಯಿತು. ಆದರೂ ಅವನು ಸೀರವ; ಅವನ ಕಣ್ಣುಗಳೂ ಮುಖವೂ ಕೆಂಪೇರಿಬಿಟ್ಟಿವೆ.

ಅರಿಂದಮ—ಡಾಕ್ಟರ್ ಸಾಹೇಬ, ನಿನಗೆ ಮುಕ್ತಿಲಾಭವಾಗುವುದಕ್ಕೆ ನನ್ನೂ ಸಾವಕಾಶವುಂಟು. ನಾನು ಕೇಳುವ ಪ್ರಶ್ನೆಗಳಿಗೆಲ್ಲಾ ಸರಿಯಾದ ಉತ್ತರ ಕೊಡದಿರುವೆಯಾದರೆ ಈ ರಾತ್ರಿಯೆಲ್ಲಾ ಇದೇ

ಅವಸ್ಥೆಯಲ್ಲರಬೇಕಾಗುವುದು. ನೀನು ಪೆಟ್ಟಿಗೆಯೊಳಗೆ ಒಬ್ಬ ಹುಡುಗನು ಮೃತದೇಹವನ್ನು ಕಳುಹಿಸಿದೆಯಷ್ಟೆ? ಆ ಹುಡುಗ ಯಾರು?

ಇದನ್ನು ಕೇಳಿ ಫೂಲಸಾಹೇಬನು ನಗಲು ಯತ್ನಿಸಿದನು; ಆದರೆ ಅವನ ಯಾತನೆಯಿಂದ ಆ ನಗೆಯು ಕ್ಷೀಣಸ್ವಾಯಿಯಾದ ವಿಕೃತ ಮುಖಭಂಗಿಯಾಗಿಯೋಯಿತು.

ಫೂಲಸಾಹೇಬ—ಅಂದು ನಿನ್ನಿಂದ ತಪ್ಪಿಸಿಕೊಳ್ಳುವೆನೆಂದು ಆಶ್ಚರ್ಯಚಿತರೊಡನೆ ಓಡುಹೋದ ರೇವತಿಗೆ ಅವಳು ತಂಗಿ—ರೋಪಿಣೀ!

ಅವಳನ್ನು ಕೊಂದವರು ಯಾರು?

ನಾನು. ಸ್ವಹಸ್ತದಿಂದ.

ಏತಕ್ಕಾಗಿ ಕೊಂದದ್ದು?

ನನಗೆ ಕೊಲೆಪಾತಕವೆಂಬುದು ಒಂದು ಬಗೆಯ 'ಸಿಷ್ಟಾ.'

ಆ 'ಸಿಷ್ಟಾ' ಈಗ ಬಿಟ್ಟುಹೋಯಿತೆ?

ನಾನು ಗಲ್ಲಿನ ಹಗ್ಗದಲ್ಲಿ ತೂಗಾಡುವವರೆಗೂ ಅದು ನನ್ನನ್ನು ಬಿಟ್ಟುಹೋಗುವುದಿಲ್ಲ.

ರೇವತಿಯ ಚಿಕ್ಕಪ್ಪನೆಂಥವನು?

ನನಗಿಂತಲೂ ಭಯಂಕರ.

ಏಕೆ ಹಾಗೆ ಹೇಳುವೆ?

ಹಣದಾಸೆಯಿಂದ ಅಣ್ಣನ ಮಕ್ಕಳನ್ನು ಕೊಲ್ಲಬೇಕೆಂದು ಅಪೇಕ್ಷಿಸುವವನು ನನಗಿಂತಲೂ ಭಯಂಕರನಲ್ಲವೆ? ಯಾವ ಸಂಬಂಧವೂ ಅಲ್ಲದ ನಾನು ಆ ಮುದುಗಿಯನ್ನು ಕೊಲ್ಲುವುದೇನು ಮೆಚ್ಚು?

ಈ ಕೆಲಸವಾಡುವುದಕ್ಕಾಗಿ, ರೇವತಿಯ ಚಿಕ್ಕಪ್ಪನು ನಿನ್ನ ಪರಿಶ್ರಮಕ್ಕೊಸ್ಕರ ಎಷ್ಟು ಹಣ ಕೊಡುವಂತೆ ನಿಶ್ಚಯವಾಗಿದೆ?

ಐವತ್ತುಸಾವಿರ ರೂಪಾಯಿ.

ಇದರಲ್ಲಿ ಎಷ್ಟು ಬಂದಿದೆ.

ಒಂದು ಕಾಸೂ ಇಲ್ಲ.

ಏಕೆ ?

ರೇವತಿಯು ಕೊಲೆಯಾಗಿದ ಕಾರಣ.

ಏತಕ್ಕಾಗಲಿಲ್ಲ ?

ನನ್ನ ಕೈಗೆ ಬಂದಿದ್ದ ತುತ್ತನ್ನು ನೀನು ಕಸುಗೊಂಡಿರುವೆ.

ಆವರೆಗೆ ನಾವಕಾಶ ಮಾಡಿದುದೇಕೆ ?

ರೇವತಿಯು ರೂಪವನ್ನು ಕಂಡು ಭ್ರಾಂತನಾಗಿ ; ಮುತ್ತೂ ಒಂದು ಉದ್ದೇಶವಿದ್ದಿತು ; ರೇವತಿಯನ್ನು ನನ್ನವಳನ್ನಾಗಿ ಮಾಡಿಕೊಳ್ಳ ಬೇಕೆಂದೂ, ಅವಳು ನನ್ನ ಇಷ್ಟಾನುಸಾರ ನಡೆಯುವ ಪಕ್ಷದಲ್ಲಿ ರೇವತಿಯ ಚಿಕ್ಕಪ್ಪನು ತಪ್ಪಿತಸ್ಥನಾಗಿ, ಸಮಸ್ತ ಸಂಪತ್ತಿಯೂ ನನಗೇ ದೊರೆಯುವುದೆಂದೂ ಭಾವಿಸಿದ್ದೆನು.

ರೇವತೀ ಮುತ್ತೂ ಅವರ ಚಿಕ್ಕಪ್ಪ ಇವರಲ್ಲ ನೀನು ಕೇಶವ ಬಾಬು ಬಂದು ಹೇಳಿಕೊಂಡಿರುವೆಯೋ ?

ಹೌದು, ನಾನೊಬ್ಬನೇ ; ಕಾರ್ಯ ಸಾಧನೆಗಾಗಿ ನನಗೆ ಅನೇಕ ಹೆಸರುಗಳುಂಟು.

ಮೋಹಿನಿಯು ನಿನಗೆ ಏನಾಗಬೇಕು ?

ಈ ವರ್ತಮಾನಗಳೆಲ್ಲ ನಿನಗೆ ತಿಳಿದ ಬಗೆ ಹೇಗೆ ?

ಮೋಹಿನಿಯು ನಿನ್ನ ಹೆಂಡತಿಯೆ ?

ಮೋಹಿನಿಯು ನನ್ನ ಮೃತ್ಯು !

ಹೀಗೆ ಏತಕ್ಕೆ ಹೇಳುವೆ ?

ಹಾಗಿಲ್ಲವಾಗಿದ್ದರೆ, ನನಗೆ ಈ ದುರ್ದಶೆಯುಂಟಾಗುತಿದ್ದಿತೇನು ?

ಮೋಹಿನಿಯು ಹೇಗೆ ನಿನ್ನ ದುರ್ದಶೆಗೆ ಕಾರಣಳು ?

ಫೂಲಸಾಹೇಬನು ಉತ್ತೇಜಿತನಾಗಿ-ಅರಿಂದಮ, ನನ್ನಲ್ಲಿ ಯಾವ ದನ್ನೂ ಮುರೆಮಾಜಲು ಪ್ರಯತ್ನಪಡಬೇಡ. ನಿನ್ನ ಬಾಯಲ್ಲಿ ಮೋಹಿನಿಯ ಹೆಸರನ್ನು ಕೇಳಿದುದರಿಂದ ನಾನು ಎಲ್ಲವನ್ನೂ ಊಹಿಸಬಲ್ಲೆನು.

ಆ ರಾಕ್ಷಸಿಯು ತಾನಾಗಿ ನನ್ನನ್ನು ಈ ಏಪತ್ತಿಗೆ ಗುರಿಮಾಡಿದಳು; ಇಲ್ಲವಾಗಿದ್ದಿದ್ದರೆ ಇಷ್ಟು ಹೊತ್ತಿಗೆ, ನಿಜವಾಗಿಯೂ ಈಗಿನ ಸ್ಥಿತಿಗೆ ವಿಪರೀತವೇ ಆಗಿರುತ್ತಿದ್ದಿತು. ನೀನು ನನ್ನನ್ನು ಈ ದುರವಸ್ಥೆಯಲ್ಲಿ ನಿಲ್ಲಿಸಿ, ಸಂತೋಷದಿಂದ ಮೇಲೆ ನಿಂತುಕೊಂಡು ಅಪ್ಪಣೆಮಾಡುತ್ತಿರುವ ಹಾಗೆಯೇ ನಾನೂ ನಿನ್ನನ್ನು ಭಯಂಕರ ಮೃತ್ಯುಮುಖದಲ್ಲಿರಿಸಿ ನನ್ನಧಿಕಾರವನ್ನು ತೋರಿಸುತಲಿದ್ದೆನು. ಆ ಮನೆಹಾಳೆಯಾದ ಮೋಹಿನಿಯು ನನ್ನ ಕೋರಿಕೆಗೆ ಭಂಗತಂದನು. ನಿಜವಾಗಿಯೂ ಅವಳು ಇಲ್ಲಿಗೆ ಬಂದು ನಮ್ಮ ರಹಸ್ಯ ಸಮಾಚಾರಗಳನ್ನೆಲ್ಲಾ ನಿನಗೆ ಹೇಳಿದ್ದಾಳೆ. ಆರಿಂದಮ, ಇನ್ನು ಸಾಧ್ಯವಿಲ್ಲ. ನೀನು ನನ್ನನ್ನು ಅಸಹ್ಯವಾದ ಈ ಯಾತನೆಯಿಂದ ಪಾರುಮಾಡು; ಪ್ರಾಣಹೋಗುತ್ತಿದೆ. ಬಹಳ ಸಂಕಟ, ಎಂದು ಹೇಳಿದನು.

ಆರಿಂದಮ—ಇನ್ನು ಸ್ವಲ್ಪ ಸೈರಿಸಿಕೊ. ನೀನು ರೇವತಿಯ ಚಿಕ್ಕಪ್ಪನ ವಿಷಯವಾಗಿ ಹೇಳಿನುದೆಲ್ಲ ನಿಶ್ಚಯವೇ?

ಫೂಲ.—ಒಂದಕ್ಷರವೂ ಸುಳ್ಳಲ್ಲ. ಸಾಯುವುದಕ್ಕೆ ಸಿದ್ಧನಾಗಿರುವಾಗ ಸುಳ್ಳಿಸಿಂದೇನು?

ಆರಿಂದಮ—ಮತ್ತೊಂದು ಮಾತು—ನಿಜವನ್ನೇ ಹೇಳುವೆಯಷ್ಟೆ?

ಫೂಲ.—ಏತಕ್ಕೆ ಹೇಳದಿರಲಿ?

ಆರಿಂದಮ—ಪೆಟ್ಟಿಗೆಯಲ್ಲಿ ರೇವತಿಯು ತಂಗಿಯ ಮೃತ ದೇಹವನ್ನು ಇಟ್ಟು ಕಳುಹಿಸಿದಾಗ, ಅವರಿಗಾಗಲೇ ಹದಿನೆಂಟು ಮಂದಿಯನ್ನು ಕೊಲೆಮಾಡಿರುವುದಾಗಿ ಬಂದು ಕಾಗದ ಬರೆದಿರುತ್ತೀ; ಅದರ ವಿವರಣವನ್ನು ಹೇಳು?

ಫೂಲ.—ಇದೀಗ ನನ್ನ ಗೌರವದ ಮಾತು. ಇದರಲ್ಲಿ ಏಕೆ ಸುಳ್ಳು ಹೇಳಲಿ! ನನ್ನ ಮರಣವು ಸನ್ನಿಹಿತವಾಗಿರುವುದನ್ನು ತಿಳಿದಮೇಲೆ ನನ್ನ ಗೌರವಸೂಚಕವಾದ ಮಾತುಗಳನ್ನು ಏಕೆ ಬಚ್ಚಿಡಬೇಕು? ನಾನು ಮಾಡಿರುವ ಹದಿನೆಂಟು ಕೊಲೆಗಳಿಗಾಗಿ ನಾನು ಹದಿನೆಂಟು

ಸಲಗಲ್ಲಿಗೆ ಏರಬೇಕಾಗಿಲ್ಲವಲ್ಲ. ನನ್ನ ಸ್ಥಳವು ಅಲಹಾಬಾದು. ನಾನು ದರಿದ್ರ ಬ್ರಾಹ್ಮಣ. ಹೆಸರು—ಏನೋದಚಾತುರ್ಯ್ಯ ಚಟ್ಟೋಪಾಧ್ಯಾಯ ನೆಂದು. ಕೊಲೆಗಾರ ಏನೋದಚಾತುರ್ಯ್ಯನ ಕತೆಗಳನ್ನು ನೀನು ಕೇಳಿರಬಹುದು. ಯಾವ ಏನೋದಚಾತುರ್ಯ್ಯನನ್ನು ದಸ್ತಗಿರಿಮಾಡುವ ಕಾರ್ಯ್ಯದಲ್ಲಿ ಎಷ್ಟೋ ಮಂದಿ ಪೋಲೀಸು ಅಧಿಕಾರಿಗಳೂ, ಎಷ್ಟೋ ಜನ ಶಕ್ತರಾದ ಪತ್ತೇದಾರರೂ ಈ ಪೃಥ್ವಿಯಿಂದಲೇ ಪಾರಾಗ ಬೇಕಾಯಿತೋ ಆ ಏನೋದಚಾತುರ್ಯ್ಯನೆಂಬವನು ನಾನೇ. ಯಾವ ಪೋಪಿಸಿಯ ಸುದ್ದಿಯನ್ನು ಕುರಿತು ನೀನು ಪ್ರಸ್ತಾಪಿಸುತ್ತಿರುವೆಯೋ ಅದೇ ಪೋಪಿಸಿಯು ತಂದೆ, ಚಿಕ್ಕಪ್ಪ, ಮಾವ, ಅಣ್ಣ ಇಷ್ಟು ಜನರು ಒಂದೇ ರಾತ್ರಿಯಲ್ಲಿ ನನ್ನಿಂದ ಹತರಾದರು. ಅದು ಇಂದಿಗೆ ಹತ್ತು ವರ್ಷಗಳ ಮಾತು. ಏಧಪೆಯಾದ ಪೋಪಿಸಿಯನ್ನು ಜಾತಿಭ್ರಷ್ಟಳಾಗು ವಂತೆ ಮಾಡಿದ್ದು ನಿಜವಾಗಿಯೂ ಕೇವಲ ಅರ್ಥಲೋಭದಿಂದಲೇ ; ಕಾರಣವೇನೆಂದರೆ ನನ್ನ ಹೃದಯದಲ್ಲಿ ಪ್ರೀತಿ, ವಿಶ್ವಾಸ, ಸ್ನೇಹ, ಮಮತೆ ಮೊದಲಾದ ಯಾವುವೂ ನೆಲೆಯಾಗಿ ನಿಲ್ಲಲಾರವು. ಪೋಪಿಸಿಯು ಮನೆಯು ನಮ್ಮ ಗ್ರಾಮದಲ್ಲಿಯೇ. ಪೋಪಿಸಿಯನ್ನು ಮನೆಯಿಂದ ಹೊರಡಿಸಿಕೊಂಡು ಬಂದಸಂತರ ಪೋಪಿಸಿಯ ತಂದೆಯು ಕೋಪದಿಂದ ನಮ್ಮ ಮನೆಗೆ ಕಿಚ್ಚಿಟ್ಟನು. ಅದರ ಪ್ರತೀಕಾರದ ಸಲುವಾಗಿ ನಾನು ಪೋಪಿಸಿಯ ತಂದೆ, ಚಿಕ್ಕಪ್ಪ, ಮಾವ, ಅಣ್ಣಂದಿರು ಇಷ್ಟು ಮಂದಿ ಯನ್ನೂ ಒಂದೇ ರಾತ್ರಿಯಲ್ಲಿ ಕೊಂದುಹಾಕಿದೆ. ಆ ರಾತ್ರಿಯೇ ನಾನು ಪೋಪಿಸಿಯೊಡನೆ ಆ ಸ್ಥಳವನ್ನು ಬಿಡಬೇಕಾಯಿತು. ಇದಾದಮೇಲೆ ಬಂಬತ್ತು ಮಂದಿ ಪೋಲೀಸಿನವರನ್ನು ತೀರಿಸಿದೆನು. ಅವರೆಲ್ಲರೂ ನನ್ನನ್ನು ಹುಡುಕುವುದರಲ್ಲಿ ದುಸ್ಸಾಹಸಿಕವಾದ ಪ್ರಯತ್ನ ನಡೆಸಿದ್ದರು. ಅನಂತರ, ಅರ್ಥಲೋಭದಿಂದಲೇ ಒಬ್ಬ ಮುಸಲರ ಹುಡುಗಿಯನ್ನು ಮದುವೆಯಾಗಿ, ಅವಳ ತಂದೆಯನ್ನೂ ತೀರಿಸಿದೆ. ಅವಳನ್ನೂ ಕೊಂದುಹಾಕಿದೆ. ಕುಲಸಮೂಳ ತಾಯಿಯನ್ನೂ ಅಣ್ಣನನ್ನೂ ಕೊಂದೆನು. ರೇವತಿಯ ತಂಗಿಯನ್ನೂ ಕೊಂದೆನು, ಬಿಲ್ಲಿಗೆ ಹದಿನೆಂಟಾ ಯಿತು. ಇವುಗಳ ಜತೆಗೆ ತಪ್ಪಾಬುದ್ಧೀನನನ್ನು ಕೊಂದೆನು. ಕಾರಾ

ಗೃಹದಲ್ಲಿ ಪಹರೆಯವನನ್ನು ತೀರಿಸಿದೆನು. ಇನ್ನೂ ಕೊಂಚ ಕಾಲ ಬದುಕಿದ್ದಿದ್ದರೆ ಇನ್ನೂ ಅನೇಕ ಕೊಲೆಗಳನ್ನು ಮಾಡುತ್ತಲಿದ್ದೆ. ಮುಖ್ಯವಾಗಿ ನಿನ್ನನ್ನೂ ಯೋಗೇಂದ್ರನಾಥನನ್ನೂ ಕೊಲ್ಲಬೇಕೆಂಬ ಆಸೆ ಬಲವತ್ತರವಾಗಿದ್ದಿತು. ಪ್ರೇಮಗಳು ಇನ್ನೂ ಬದುಕಿರುವಾಗ ನನಗೆ ಮರಣದಲ್ಲಿ ಸುಖವಿಲ್ಲವಾಗಿದೆ. ಅಯ್ಯೋ! ಬಹು ಬಾಧೆ! ಅರಿಂದಮು ಪ್ರಾಣವೋಗುತ್ತಿದೆ. ನನ್ನ ಶರೀರವು ದುರ್ಬಲವಾಗುತ್ತ ಬಂದಿತು. ಈ ಯಾತನೆಯು ಬಹಳ ಭಯಂಕರ!

ಅರಿಂದಮನು ದೇವೇಂದ್ರವಿಜಯನಿಗೆ ಸಂಜ್ಞೆ ಮಾಡಿದನು. ದೇವೇಂದ್ರವಿಜಯನು ಫೂಲನಾಹೇಬನ ಕೈಗಳಿಗೆ ತಬ್ಬಲಿ ಕೋಳಗಳನ್ನೂ ಕಾಲುಗಳಿಗೆ ತಬ್ಬಲಿ ಸಂಕಲೆಗಳನ್ನೂ ತೊಡಿಸಿದನು.

ಒಂಬತ್ತನೆಯ ಪರಿಚ್ಛೇದ

ಭೀಷಣ ಪ್ರತಿಹಿಂಸೆ

ಯೋಗೇಂದ್ರನಾಥನಿಗೆ ಈ ಸಮಾಚಾರವನ್ನು ತಿಳುಹುವುದಕ್ಕೋಸ್ಕರ ಅರಿಂದಮನು ದೇವೇಂದ್ರವಿಜಯನನ್ನು ಫಾಣಿಗೆ ಕಳುಹಿಸಿದನು. ಒಂದು ಗಂಟೆಯೊಳಗಾಗಿ ಯೋಗೇಂದ್ರನಾಥನು ಆರೇಳು ಮಂದಿ ಕಾನಾಸ್ಟೇಬಲ್ಲರೊಡನೆ ಅರಿಂದಮನ ಮನೆಗೆ ಬಂದನು. ಅಲ್ಲಿ ನಡೆದಿದ್ದ ಏದ್ಯಂತವಾಗಳನ್ನು ನೋಡಿಯೂ ಕೇಳಿಯೂ ಅಪರಿಮಿತವಾದ ಭಸ್ಮವಾದಗಳೊಡನೆ ಅರಿಂದಮನನ್ನು ಪ್ರಶ್ನೆಮಾಡಲು ಅವನಿಗೆ ಸಾಧ್ಯವಾಗಲಿಲ್ಲ.

ಯೋಗೇಂದ್ರನಾಥನು ಎಲ್ಲರನ್ನೂ ಫಾಣಿಗೆ ಕರೆದುಕೊಂಡು ಹೊರಟನು. ಅರಿಂದಮನೂ ದೇವೇಂದ್ರವಿಜಯನೂ ಸಂಗಡಲೇ ಇದ್ದರು. ಫೂಲನಾಹೇಬನ ಏನಾ ಉಳಿದ ದಸ್ಯುಗಳನ್ನು ಕರೆದುಕೊಂಡು ದೇವೇಂದ್ರವಿಜಯನೂ ಕಾನಾಸ್ಟೇಬಲ್ಲರುಗಳೂ ಮುಂದಾಗಿ ನಡೆದರು. ಅವರ ಹಿಂದೆಯೇ, ಫೂಲನಾಹೇಬನೊಂದಿಗೆ ಅರಿಂದಮನೂ ಯೋಗೇಂದ್ರನಾಥನೂ ಹೊರಟರು.

ಆ ವೇಳೆಗೆ ರಾತ್ರಿ ಕಳೆಯುತ ಬಂದಿದ್ದಿತು. ದೂರದಲ್ಲಿನ ಮಾವಿನ ಮರದ ನವಪಲ್ಲವರಾಶಿಯೊಳಗಿನಿಂದ ಒಂದೆರಡು ಕೋಗಿಲೆಗಳು ಕೂಗಿದವ್ರ. ಉಷಃಕಾಲದ ತಂಪಾದ ಗಾಳಿಯು ಬಿದಿರುಪೊದೆಗಳ ಮಧ್ಯೆ ಸರಸರನೆ ಶಬ್ದಮಾಡುತ್ತಿದ್ದಿತು. ತಪೋರಾಶಿಯಂತೆ ಕಾಣಿಸುತಲಿದ್ದ ಮರದ ಬಳಗೂ ಹೊರಗೂ ಲೆಕ್ಕವಿಲ್ಲದಷ್ಟು ಸುಸುಗು ಹುಳುಗಳು ಮಿಣುಗುಟ್ಟುತ್ತಿದ್ದುವ್ರ. ರಸ್ತೆಯಲ್ಲಿ ಇನ್ನೂ ಜನಸಂಚಾರಕ್ಕೆ ಆರಂಭವಿಲ್ಲ. ಇಂತಹ ಸಮಯದಲ್ಲಿ, ನವಿಲಾಪದಲ್ಲಿನ ಮರದಡಿಯಿಂದ ಓಡಿ ಬಂದು, ಎದೆಯಿಕ್ಕುವುದರೊಳಗಾಗಿ ಫೂಲಸಾಹೇಬನ ಹೃದಯದಲ್ಲಿ ಉದ್ದವಾದ ಚೂರಿಯೊಂದನ್ನು ನೆಟ್ಟ ಆ ಹೆಣ್ಣು ಪಿಶಾಚಿಯು ಯಾರಿರ ಬಹುದು? ಅರಿಂದಮನೂ ಯೋಗೇಂದ್ರನಾಥನೂ ಆ ನರಹಂತ್ರಿಯನ್ನು ಹಿಡಿಯುವುದಕ್ಕೆ ಪ್ರಯತ್ನಪಡಾಡುವಷ್ಟರಲ್ಲಿಯೇ ಆ ಡಾಕಿನಿಯು ಅದೇ ಚೂರಿಯನ್ನು ತನ್ನ ಎದೆಗೂ ನಾಟಿಕೊಂಡು ಕಿಲಕಿಲನೆ ನಗುತ್ತಾ ತನ್ನ ಘೋರವಾದ ನಗೆಯಿಂದ ಸಿದ್ರಿಸುತ್ತಿದ್ದ ನಿಶಾದೇವಿಯ ಅಂಧಕಾರ ಮಯವಾದ ವಕ್ಷಸ್ಥಲವನ್ನು ತುಮುರು ತುಮುರಾಗುವಂತೆ ಮಾಡಿದಳು; ಆದರಿಂದ ನವಿಲಿನ ಮರದ ಕೋಗಿಲೆಯು ಮೌನಗೊಂಡಿತು. ಗಾಳಿಯು ನಿಂತುಹೋದಂತೆಯೇ ತೋರಿತು. ಆಕಾಶದಲ್ಲಿನ ನಕ್ಷತ್ರಗಳೆಲ್ಲವೂ ನಿದ್ರೆಯಿಲ್ಲದ ಬಳಲಿದ ನೇತ್ರಗಳಿಂದ ನಿಶಾರಾಕ್ಷಸಿಯ ಈ ಘೋಷಣತಮವಾದ ಅಘಸಯವನ್ನು ಎವೆಯಿಕ್ಕದೆ ನೋಡುತ್ತಿರುವುವು. ಪ್ರಳಯಂಕರಿಯಾದ ನಿಶೆಯು ರಕ್ತಪ್ಲಾವಿತ ಮೂರ್ತಿಯು ಸಮಕ್ಷದಲ್ಲಿ, ಶಬ್ದಹೀನವಾದ ಆಕೆಯು ಗಾಂಭೀರ್ಯದ ನಡುವೆ ನಿಂತು, ನೋಡುವುದಕ್ಕೆ ಅಸಾಧ್ಯವಾಗಿಯೂ ಭಯಂಕರವಾಗಿಯೂ ಇರುವ ಆಕೆಯ ಎರಡು ದೃಶ್ಯಗಳನ್ನೂ ಕಂಡು ಪ್ರಕೃತೀದೇವಿಯು ಶಾಸನ ಭೀತಳಾಗಿರುವ ಅಪರಾಧಿನಿಯಾದ ಬಾಲಕೆಯು ಹಾಗೆ ಗಡಗಡನೆ ನಡುಗುತ್ತಿದ್ದಳು.

ರಕ್ತಪ್ಲುವಾಹವು ಫೂಲಸಾಹೇಬನ ದೇಹವನ್ನೆಲ್ಲಾ ನೆನೆಯಿಸುತ್ತಾ ಹರಿಯಲಾರಂಭಿಸಿತು. ಕೂಡಲೇ, ಅವನು ಅಲ್ಲಿಯೇ ನೆಲಕ್ಕೆ ಉರುಳಿದನು. ತನ್ನದೊಂದು ಚೂರಿಯ ಆಘಾತ ಮಾತ್ರದಿಂದ ಫೂಲ

ಸಾಹೇಬನ ಪ್ರಾಣದೊಡನೆ ಅವನ ಬಂಧನವನ್ನೂ ಪರಿಹರಿಸಿದ ಆ ದಾಸವಿಯನ್ನು ಅರಿಂದಮನು ಗುರ್ತಿಸಿದನು. ಅವಳೇ ಆ ಸೋಫಿಸಿ!

ಸೋಫಿಸಿಯು ಹೃದಯದ ಗಾಯವನ್ನೂ ಸಾಂಘಾತಿಕವಾಗಿಯೇ ಇದ್ದಿತು. ಯೋಗೇಂದ್ರನೂ ಅರಿಂದಮನೂ ಅವಳನ್ನು ಹಿಡಿದು ಕೊಂಡರು. ಮತ್ತೂ ಅವಳ ಕೈಯಿಂದ ರಕ್ತಾಕ್ತವಾದ ಆ ಚೂರಿಯನ್ನು ಕಸಿದುಕೊಂಡರು. ಫೂಲಸಾಹೇಬನ ಹೃದಯದ ರಕ್ತಸ್ರಾವವು ಏತರಿಂದಲೂ ಕಡಿಮೆಯಾಗಲಿಲ್ಲ. ಅವನು ಪ್ರತಿ ಮುಹೂರ್ತದಲ್ಲಿಯೂ ಮೃತ್ಯುವಿಗೆ ಸಮೀಪಗತನಾಗುತ್ತಿರುವನು. ಸೋಫಿಸಿಯು ಅಂತಹ ಸಮಯದಲ್ಲಿಯೂ ಚಪ್ಪಾಳೆ ಹಾಕಿಕೊಂಡು ನಗುತ್ತಾ—ಏನೋದ! ಹೇಗಿದೆ? ನಾನು ಸುಳ್ಳು ಹೊಂಕುವಳೆ? ಆಲೋಚಿಸಿ ನೋಡು, ಎಂತಹ ಸುಖ! ಇದಕ್ಕಿಂತ ಸಂತೋಷವೆ? ಎಂದಳು. ಸೋಫಿಸಿಯು ನಗೆಗೆ ಪಾರವಿಲ್ಲ!

"ಸೋಫಿಸಿ! ನೀನು ನನಗೆ ಬಹಳ ಉಪಕಾರಮಾಡಿದೆ. ಅರಿಂದಮನ ದೆಸೆಯಿಂದ ನನಗೆ ಒದಗಿಬರುತ್ತಿದ್ದ ಗಲ್ಲಿನ ಮರಕ್ಕಿಂತಲೂ ನಿನ್ನ ಚೂರಿಯು ಎಷ್ಟೋ ಉತ್ತಮ" ಎಂದು ಹೇಳಿ, ಫೂಲಸಾಹೇಬನು ಅರಿಂದಮನನ್ನು ಕುರಿತು—"ಅರಿಂದಮ, ನಾನು ಈಗ ಸಾಯುತ್ತೇನೆ. ಇನ್ನಾದರೂ ನೀನು ನಿರ್ಧಯನಾಗಿರಬಹುದೆಂದು ಕನಸಿನಲ್ಲಿಯೂ ಎಣಿಸಬೇಡ. ಜುಮುಲೆಯ ವಿಷಯದಲ್ಲಿ ಜಾಗರೂಕನಾಗಿರು. ಈ ಮೊದಲು ಅವಳನ್ನು ಹುಡುಕುವುದರಲ್ಲಿ ನಿರತನಾಗು. ಮುಖ್ಯವಾಗಿ ಅವಳಿಗೆ ನಿನ್ನ ಮೇಲೆ ವಿಶೇಷ ಕೋಪವಿದೆ. ಅವಳು ನಿನ್ನ ರಕ್ತ ದರ್ಶನ ಮಾಡಿಬಿಡುವುದಾಗಿ ಪ್ರತಿಜ್ಞೆ ಮಾಡಿದ್ದಾಳೆ. ನಾನು ಸಾಯುತ್ತೇನೆ. ಎಷ್ಟೇ ಪ್ರಯತ್ನಮಾಡಿದರೂ 'ಅಧರ್ಮಕ್ಕೆ ಜಯವಿಲ್ಲ' ಎಂಬುದು ಈಗ ಸಿದರ್ಶನಕ್ಕೆ ಬಂದಿತು" ಎಂದು ಹೇಳಿದನು.

ವಿಶೇಷವಾದ ರಕ್ತಪ್ರವಾಹದ ದೆಸೆಯಿಂದ ಫೂಲಸಾಹೇಬನ ಶರೀರದಲ್ಲಿ ಶಕ್ತಿಯು ಬಹು ಬೇಗ ಕುಂದುತ್ತ ಬಂದಿತು. ಕಣ್ಣಿನ ಕಾಂತಿಯು ಕಡಿಮೆಯಾಯಿತು. ನಾಲಿಗೆಯು ಒಣಗುತ್ತಿದ್ದಿತು. ಫೂಲಸಾಹೇಬನು

ಸಾಯುವುದಕ್ಕೆ ಮೊದಲು ಬಹಳ ಹೊತ್ತಿನವರೆಗೂ ಅರಿಂದಮನನ್ನು ಸ್ಥಿರದೃಷ್ಟಿಯಿಂದ ನೋಡುತ್ತಿದ್ದನು. ಆ ದೃಷ್ಟಿಯಲ್ಲಿ ಅರಿಂದಮನಿಗೆ ಮತ್ತಾವುದನ್ನೋ ಕುರಿತು ಹೇಳಬೇಕೆಂದು ಆಸೆಯಿರುವಂತೆ ತೋರುತ್ತಿದ್ದಿತು. ಹೇಳಲಾಗಲಿಲ್ಲ. ಆ ವೇಳೆಗೆ ಫೂಲಸಾಹೇಬನಿಗೆ ಮಾತನಾಡುವ ತ್ರಾಣವೂ ಇಲ್ಲವಾಗಿ ಪ್ರಾಣವು ಕಂಠಗತವಾಗಿತ್ತು. ಒಂದೆರಡು ಸಲ ಮಾತನಾಡುವುದಕ್ಕೆಂದು ಬಾಯನ್ನು ಆಡಿಸಿದುದಷ್ಟೇ ಆಯ್ತೇ; ಯಾವ ಮಾತೂ ಹೊರಬೊರಡಲಿಲ್ಲ; ಆದರೆ ಒಂದು ಬಗೆಯ ಅವ್ಯಕ್ತ ಸ್ವರವು ಮಾತ್ರ ಉಂಟಾಯಿತು; ಆದಾದ ಸ್ವಲ್ಪ ಹೊತ್ತಿನೊಳಗಾಗಿ ದುರಾಂತನಾದ ಫೂಲಸಾಹೇಬನು ಈ ಪ್ರಪಂಚದಿಂದ ಅಸ್ತನಾದನು. ಆದರೆ ಅವನ ಆ ಭಯಂಕರ ಕೀರ್ತಿಚರಿತ್ರೆಯು ಮಾತ್ರ ಅನೇಕರ ಮನಸ್ಸಿನಲ್ಲಿ ಬಹು ಕಾಲದವರೆಗೂ ಜಾಗರಿತವಾಗಿಯೇ ಇರುವುದು.

ಬಹುವಾಗಿ ರಕ್ತಪಾತವಾಗುತ್ತಿದ್ದುದರಿಂದ ಮೋಪಿಸಿಯು ಮರಣವೂ ಜಾಗ್ರತೆಯವಾಗಿಯೇ ಸಂಭವಿಸಿತು. ಏನೇನು ಮಾಡಿದರೂ ರಕ್ತ ಪ್ರವಾಹವನ್ನು ನಿಲ್ಲಿಸಲಾಗಲಿಲ್ಲ. ಫೂಲಸಾಹೇಬನು ಮೃತಿಗೊಂಡ ಕೊಂಚ ಹೊತ್ತಿನೊಳಗಾಗಿ ಮೋಪಿಸಿಯೂ ಇಹಲೋಕವನ್ನು ಬಿಟ್ಟುಹೋದಳು.

* * * * *

ಇದಾದ ನಂತರ ಅರಿಂದಮನು ಫೂಲಸಾಹೇಬನ ಅಂಗಿಯ ಕಿಸೆಯನ್ನು ಹುಡುಕಿದ್ದರಲ್ಲಿ ಎರಡು ಪತ್ರದ ಮುಳ್ಳುಗಳೂ ಬಂದು ಕಾಗದವೂ ಸಿಕ್ಕಿದುವು. ಕಾಗದವು ಬಹು ಪ್ರಯೋಜನಕಾರಿಯಾದದ್ದು. ಅರಿಂದಮನು ಓದಿಕೊಂಡು ಯೋಗೇಂದ್ರನಾಥನ ಕೈಗೆ ಅದನ್ನು ಕೊಟ್ಟನು. ಯೋಗೇಂದ್ರನಾಥನೂ ಕಾಗದವನ್ನು ಓದಿ—"ಕಾಗದವು ಪ್ರಯೋಜನಕರವಾದುದೇ ಹೌದು. ರಹಸ್ಯಮಯವಾದ ಈ ಸಮಸ್ಯೆಯು ಪೂರ್ಣವಾಗುವುದಕ್ಕೆ ಇಷ್ಟು ದಿನವಾಯಿತು" ಎಂದು ಅಭಿಪ್ರಾಯಪಟ್ಟರು.

ಫೂಲಸಾಹೇಬ ಮತ್ತು ಮೋಪಿಸಿ ಇವರ ಶವದೇಹಗಳು ಠಾಣೆಗೆ ಬಯ್ಯಲ್ಪಟ್ಟವು.

ಹತ್ತನೆಯ ಪರಿಚ್ಛೇದ

(* * * *)

ಫೂಲಸಾಹೇಬನು ಸಿಕ್ಕಿಬಿದ್ದನು! ಸತ್ಪ್ರನು. ದಶ್ಯುಗಳೆಲ್ಲರೂ ಸಿಕ್ಕಿದರು. ಕಾನೂನಿನ ಪೋರೆ ಎಲ್ಲರಿಗೂ ದಂಡನೆಯಾಯಿತು. ಆದರೆ, ರೇವತಿಯನ್ನು ಹುಡುಕುವ ಯಾವ ಪ್ರಯತ್ನವೂ ನಡೆಯಲಿಲ್ಲವಾಗಿ ಅರಿಂದಮನು ಹೇಳುತ್ತಿದ್ದ ಥರವಸೆಯು ಮಾತುಗಳೆಲ್ಲವೂ ದೇವೇಂದ್ರವಿಜಯಸಿಗೆ ನಿರರ್ಥಕವೆಂದು ತೋರಲಾರಂಭವಾಯಿತು. ಒಂದು ದಿನ ದೇವೇಂದ್ರವಿಜಯನು—ಎಲ್ಲವೂ ಆಯಿತು. ನನ್ನ ನಾನು ಊರಿಗೆ ಪ್ರಯಾಣ ಮಾಡುತ್ತೇನೆ. ಇಲ್ಲಿ ಈಗ ನನ್ನ ಅವಶ್ಯಕತೆ ಏನಿದ್ದೀತು? ಎಂದು ಅರಿಂದಮನನ್ನು ಸ್ಪಷ್ಟವಾಗಿ ಕೇಳಿಬಿಟ್ಟನು.

ದೇವೇಂದ್ರವಿಜಯನ ಮುಖದಲ್ಲಿಯೂ ಕಣ್ಣುಗಳಲ್ಲಿಯೂ ಕೋಪದ ರೇಖೆಯು ತಲೆದೋರಿದ್ದಿತು. ಅರಿಂದಮನು ದೇವೇಂದ್ರನ ಕಡೆ ನೋಡದೆಯೇ ಅವನ ಮನೋಭಾವವನ್ನು ಅವನ ಧ್ವನಿಯಿಂದಲೇ ತಿಳಿದವನಾಗಿ, "ಅಣ್ಣ, ಆದೇನು! ಇನ್ನು ಕೆಲವು ದಿನಗಳು ನೀನು ಇಲ್ಲಿಯೇ ಇರಬೇಕು. ರೇವತಿಯು ಉದ್ಧಾರವಿನ್ನೂ ಆಗಲಿಲ್ಲವಲ್ಲ?" ಎಂದನು.

ದೇವೇಂದ್ರ—ಆ ವಿಷಯದಲ್ಲಿ ತಾವು ತೊಂದರೆ ತೆಗೆದುಕೊಳ್ಳ ಬೇಕಾದುದು ಅನಾವಶ್ಯಕ.

ಅರಿಂದಮ—ನಿನಗೆ ಕೋಪ ಬಂದಿರುವಂತೆ ತೋರುತ್ತಿದೆ. ದೇವೇಂದ್ರಬಾಬು! ಕೋಪದ ಮಾತುಗಳು ಬೇಕಿಲ್ಲ. ಕೇವಲ ರೇವತಿಯ ಉದ್ಧಾರ ಮಾತ್ರದಿಂದ ಫಲವಿಲ್ಲ. ಅಕೆಯ ಪಿತ್ರಾರ್ಜಿತವಾದ ಸಮಸ್ತ ಸಂಪತ್ತಿನೊಂದಿಗೆ ಅವಳ ಉದ್ಧಾರವಾಗುವ ಪ್ರಯತ್ನ ಮಾಡುತ್ತಿದ್ದೇನೆ. ರೇವತಿಯ ಚಿಕ್ಕಪ್ಪನೆಂತಹನೆಂಬುದನ್ನು ಫೂಲ ಸಾಹೇಬನಿಂದ ಕೇಳಿರುವೆಯಷ್ಟೆ? ಅವನು ಸಾಮಾನ್ಯ ಶತ್ರುವಲ್ಲ: ಎಡಿಸನ್ ತಯಾರಿಸಿದ ಫೂಲಸಾಹೇಬನ ಪ್ರತಿಮೂರ್ತಿಯೇ ಎಂದು ಹೇಳಬೇಕು.

ದೇವೇಂದ್ರ--ಹಾಗಾದರೆ, ಈಗ ಏನು ಮಾಡಬೇಕೆಂದು ತಮ್ಮ ಆಲೋಚನೆ?

ಅರಿಂದಮ—ಬಂದು ಸಲ ರೇವತಿಯು ಚಿಕ್ಕಪ್ಪನನ್ನು ಕಂಡು ಮಾತನಾಡಬೇಕು. ನೀನೂ ಸಂಗಡ ಬಾ. ರೇವತಿಯು ಉದ್ಧಾರದ ಸಲುವಾಗಿ ಒಬ್ಬ ಪತ್ತೇದಾರನನ್ನು ಕರೆದುಕೊಂಡು ಬರುವುದಕ್ಕೆ ನಿನಗೆ ಹೇಳಿದ್ದೆನಷ್ಟೆ? ಈಗ ನೀನು ನನ್ನನ್ನು ಅವನಲ್ಲಿಗೆ ಕರೆದುಕೊಂಡುಹೋಗಿ ಉತ್ತಮನಾದ ಪತ್ತೇದಾರನೆಂದು ಹೇಳಿ ಅವನಿಗೂ ನನಗೂ ಪರಿಚಯ ಮಾಡಿಸು. ಇಷ್ಟು ಸಾಕು. ಅನಂತರ ನನ್ನ ಸರಿಯಾದ ಪರಿಚಯವನ್ನು ಬಹು ಚಾಗ್ರತೆಯಾಗಿ ನಾನೇ ಮಾಡಿಕೊಳ್ಳುವೆನು.

ದೇವೇಂದ್ರ—ಓಹೊ! ರೇವತಿಯು ಚಿಕ್ಕಪ್ಪನು ಅಷ್ಟು ಭಯಂಕರನೆ? ಹಣದಾಸೆಯಿಂದ ತನ್ನ ಅಣ್ಣನ ಮಕ್ಕಳನ್ನೇ ಕೊಲೆಗಾರರಿಗೆ ಒಪ್ಪಿಸಿದವನೆ? ಜನರು ಸಂದೇಹಪಟ್ಟಾರೆಂದು ತಿಳಿದು ಈಗ ಪತ್ತೇದಾರನನ್ನು ಗೊತ್ತುಮಾಡುತ್ತಿರುವನೆ. ಈ ವಿಚಾರದಲ್ಲಿ ಫೂಲಸಾಹೇಬನ ಮಾತುಗಳನ್ನು ನಿಜವೆಂದು ನಂಬುತ್ತೀರಾ?

ಅರಿಂದಮ—ದೇವೇಂದ್ರ, ಈ ಜಗತ್ತಿನಲ್ಲಿ ಎಂತೆಂತಹ ಜನರಿರುವರೆಂಬುದನ್ನು ಬಲ್ಲೆಯಾ? ಈ ಕಾಲದಲ್ಲಿ ಜನರ ಮರ್ಮವರಿಯುವುದು ಬಹು ಕಷ್ಟ. ಮನುಷ್ಯನು ನಿರಾಪದನಾಗಿರಬೇಕಾದರೆ ಮನುಷ್ಯರ ಗುಣಾವಗುಣಗಳನ್ನು ಚೆನ್ನಾಗಿ ಪರಿಶೀಲಿಸಿ ತಿಳಿದುಕೊಳ್ಳುತ್ತಿರುವುದು ಅವಶ್ಯಕ. ನೀನು ಇನ್ನೂ ಹುಡುಗ. ಈ ಪ್ರಪಂಚದ ನಡೆವಳಿಯು ನಿಚಾರಗಳೊಂದೂ ನಿನ್ನವರೆಗೆ ಬಂದಿಲ್ಲ. ಈ ಸಂದರ್ಭದಲ್ಲಿ ಫೂಲ ಸಾಹೇಬನು ನಿಜವನ್ನೇ ಹೇಳಿದ್ದಾನೆಂದು ನನಗೆ ನಂಬುಗೆ.

ದೇವೇಂದ್ರ—ರೇವತಿಯ ಚಿಕ್ಕಪ್ಪನ ಮಾತು ಕಥೆಗಳನ್ನೂ ಭಾವ ಭಂಗಿಗಳನ್ನೂ ನೋಡಿದರೆ ಫೂಲಸಾಹೇಬನು ಹೇಳಿದ ಮಟ್ಟಿಗೆ ಭಯಂಕರನಾಗಿರಲಾರನೆಂದು ನನ್ನ ಅಲ್ಪಬುದ್ಧಿಗೆ ತೋರುತ್ತಿದೆ. ಆತನು ಜನರಲ್ಲಿ ಮಾತನಾಡುವ ಮತ್ತೂ ವ್ಯವಹರಿಸುವ ರೀತಿಗಳನ್ನು ನೋಡಿದರೆ,

ಆತನ ಪರಮ ಶತ್ರುಗಳು ಕೂಡ ಆತನನ್ನು ಗೌರವಿಸದೇ ಇರಲಾರರೆಂದು ಭಾವಿಸುತ್ತೇನೆ.

ಅರಿಂದಮ—ನಾನು ಹೇಳುವುದೂ ಅದೇ. ನೀನು ಅನ್ನೂ ಚಿಕ್ಕವನು. ನನ್ನನ್ನು ಸಂಗಡ ಕರೆದುಕೊಂಡು ಬಂದಾವರ್ತಿ ಆತನ ಬಳಿಗೆ ನಡೆ. ಆ ಮನುಷ್ಯನನ್ನು ತಕ್ಕ ಯುಕ್ತಿಯಿಂದ ಪರಿಷ್ಕಾರವಾಗಿ ತೊಳೆದು ಒರಸಿ ಸಹಜವಾದ ಉಡಿಗೆ ತೊಡಿಗೆಗಳನ್ನು ಹಾಕಿ ನಿನ್ನ ಮುಂದೆ ಬಿಟ್ಟಾಗ, ನೀನು 'ಗೌರವಶಾಲಿ' ಎಂದು ತಿಳಿದಿರುವ ಅದೇ ಮನುಷ್ಯನು ಎಂತಹ ಪಂಗಡಕ್ಕೆ ಸೇರಿದವನು ಎಂಬುದು ತಾನಾಗಿ ವ್ಯಕ್ತಪಡುವುದು. ಆಗ, ನಾನು ಬಹಳವಾಗಿ ವಾಕ್ಯವ್ಯಯಮಾಡ ಬೇಕಾದ ಸಂಭವವಿರಲಾರದು.

ಹನ್ನೊಂದನೆಯ ಪರಿಚ್ಛೇದ

ಸನ್ಮಾರ್ಗದ ತೋರಿಕೆ

ಆ ದಿವಸವೇ ಅರಿಂದಮನು ದೇವೇಂದ್ರವಿಜಯನನ್ನು ಸಂಗಡ ಕರೆದು ಕೊಂಡು ರೇವತಿಯ ಚಿಕ್ಕಪ್ಪನನ್ನು ನೋಡುವುದಕ್ಕಾಗಿ ಪೇಣೇ ಮಾಧವಪುರಕ್ಕೆ ಪ್ರಯಾಣಮಾಡಿದನು. ದೇವೇಂದ್ರವಿಜಯನಿಗೆ ಗೋಪಾಲಚಂದ್ರನ ಮನೆಯ ಪರಿಚಯವಿದ್ದಿತು. ಇಬ್ಬರೂ ಆ ಮನೆಗೆ ಹೋಗಿ, ಅವರ ಹೊರಭಾಗದ ಪಡಸಾಲೆಯಲ್ಲಿ ಕುಳಿತುಕೊಂಡು ಸೇವಕ ನೊಬ್ಬನ ಮೂಲಕವಾಗಿ ಗೋಪಾಲಚಂದ್ರನಿಗೆ ವರ್ತಮಾನ ಕಳು ಹಿದರು. ಆ ಸಮಯದಲ್ಲಿ ಅಂತಃಪುರದಲ್ಲಿದ್ದ ಗೋಪಾಲಚಂದ್ರನು ವರ್ತಮಾನ ತಲ್ಪುದೊಡನೆಯೇ ಹೊರಕ್ಕೆ ಬಂದನು. ಬಂದವನೇ ಆಗಂತುಕರಿಬ್ಬರನ್ನೂ ಮಧುರೋಕ್ತಿಗಳಿಂದ ಎದುರಿಸಿ, ದೇವೇಂದ್ರ ವಿಜಯನನ್ನು ಕುರಿತು ಅವನ ಕ್ಷೇಮಸಮಾಚಾರಗಳ ವಿಷಯವಾಗಿ ಪ್ರಶ್ನೆ ಮಾಡತೊಡಗಿದನು.

ಗೋಪಾಲಚಂದ್ರನಿಗೆ ವಯಸ್ಸಾಗಿದೆ. ಸುಮಾರು ನಾಲ್ವತ್ತೈದಂಟು ವರುಷಕ್ಕೆ ಕಡಿಮೆಯಿಲ್ಲ. ಗೌರವರ್ಣ, ಸೂಕ್ಷ್ಮಲದೇಹ, ಶರೀರದ ಇತರ ಅಂಗಪ್ರತ್ಯಂಗಗಳಿಗಿಂತ ಹೊಟ್ಟೆಯು ಹತ್ತು ಬಾರಿಗೆ ಹಿರಿದಾಗಿದೆ. ಆದರಿಂದ ಇವನು ಬಲ್ಲರೊಡನೆ ಕುಳಿತು ಸರಿಯಾಗಿ ಊಟಮಾಡಲಾಗುತ್ತಿರಲಿಲ್ಲ. ತಲೆಯಲ್ಲಿ ಕೂದಲು ಗಡ್ಡಗಡ್ಡಾಗಿದ್ದುದೂ ಅಲ್ಲದೆ, ಅಲ್ಲಲ್ಲಿ ಉದುರಿಹೋದಹಾಗಿತ್ತು. ಗಡ್ಡ ಏಕಾಸೆಗಳು ಇಲ್ಲವೇ ಇಲ್ಲ. ಕುತ್ತಿಗೆಯಲ್ಲಿ ತುಳಸೀಮಣಿಯ ಹಾರ; ಏಕಾಕ್ಷರವಾದ ಉದರಪ್ರಾಕಾರದ ಮೇಲೆ ಅಲ್ಲಲ್ಲಿ ಬಗೆಬಗೆಯ ವೈಷ್ಣವ ಮುದ್ರೆಗಳ ಛಾಪು.

ಗೋಪಾಲಚಂದ್ರನು ಅರಿಂದಮನನ್ನು ಕುರಿತು, ಮಹಾಶಯ, ದೇವೇಂದ್ರನಿಂದಲೂ ಜಾಮೂಗಳಿಂದ ನನ್ನ ದುರದೃಷ್ಟದ ಪರಿಹಾರವನ್ನೆಲ್ಲಾ ತಾವು ಕೇಳಿರಬಹುದೆಂದು ತೋರುತ್ತದೆ. "ಆಹಾ! ರೇವತಿ! ನನ್ನ ತಾಯಿ! 'ಚಿಕ್ಕಪ್ಪ' ಎಂದರೆ ಕರಗಿತು. ಅವಳಿಗೆ ಮುತ್ತೇನೂ ಬೇಕಿಲ್ಲ! ರೋಮಾಂಚನವೋ, ನನ್ನ ತೊಡೆಯಮೇಲೆಯೇ ಬಳೆದನಳು. ಒಂದು ಗಳಿಗೆ ಯಾದರೂ ನನ್ನನ್ನು ಬಿಟ್ಟಿರ್ಪಳಲ್ಲ. ಆಯ್ಯೋ! ಎಂತಹ ಸರ್ವನಾಶವಾಯಿತು! ಕೃಷ್ಣಾ! ರಾಧಾಮಾಧವ! ರಾಧಾಮಾಧವ! ಪೂರ್ವಜನ್ಮದಲ್ಲಿ ಎಂತಹ ಪಾಪಮಾಡಿದ್ದೆನೋ ತಿಳಿಯದು" ಎಂದು ಕಳವಳಿಸಿದನು.

ಅರಿಂದಮ—ತಮ್ಮಂತಹ ಸಿರೀಹ ಸತ್ಪುರುಷರಿಗೆ ಇಂತಹ ಸಂಕಟಗಳೊದಗುವುದು ಬಹು ವ್ಯಸನಕರವಾದ ವಿಚಾರ. ತಮ್ಮ ಅಶೀವಾದ ಬಲದಿಂದ, ಮಹಾಮಹಿಮರಾದ ತಮ್ಮ ಕಾರ್ಯದಲ್ಲಿ ಸ್ವಲ್ಪ ಮಟ್ಟಿಗಾದರೂ ಕೃತಕಾರ್ಯನಾಗಬಲ್ಲೆನೋ ಏನೋ ಪರೀಕ್ಷಿಸಲೆಂದಿದ್ದೇನೆ. ಈಗ ಮಹಾಶಯರು ದಯಮಾಡಿ ನನ್ನನ್ನು ಈ ಕೆಲಸಕ್ಕೆ ಗೊತ್ತುಪಡಿಸಿಕೊಳ್ಳುವುದಾದರೆ.....

ಗೋಪಾಲ—ಪುನಃ ಗೊತ್ತುಪಡಿಸುವುದೇನು ಬಂತು? ಇದ ಕ್ಕೊಸ್ಕರವಾಗಿಯೇ ನಿಮ್ಮನ್ನು ಬರಮಾಡಿದ್ದು.

ಅರಿಂದಮ—ನಾನು ತಮ್ಮ ಕೆಲಸವನ್ನು ಸಾಧಿಸಿಕೊಟ್ಟುದೇ ಆದರೆ ನನ್ನ ಪರಿಶ್ರಮಕ್ಕಾಗಿ ಮಹಾಶಯರು ಏನು ಕೊಡೋಣಾಗು ತ್ತದೆಂಬುದನ್ನು ನಿಶ್ಚಯವಾಡಿ, ಈಗಲೇ ಒಂದು ಸಮ್ಮತಿ ಪತ್ರವನ್ನು ಬರೆದುಕೊಡಬೇಕು.

ಗೋಪಾಲ—ಇದಕ್ಕೆ ಜೇರೆ ಒಪ್ಪಿಗೆ ಕಾಗದವೆಂದರೇನು? ತಾವು ಕೇಳಿದುದನ್ನು ಒಡನೆಯೇ ಕೊಡುತ್ತೇನೆ. ಹೇಗೆ ಮಾಡಿದರೆ ನೀವು ತೃಪ್ತರಾಗುವಿರೋ ಹಾಗೆ ಮಾಡುತ್ತೇನೆ. ಅದು ನನ್ನ ಕರ್ತವ್ಯ; ಇದಕ್ಕಾಗಿ ನನ್ನ ಸರ್ವಸ್ವವು ವೆಚ್ಚವಾದರೂ ಚಿಂತೆಯಿಲ್ಲ. ನನಗೆ ಅವರಿಬ್ಬರೂ ದೊರೆತರೆಂದರೆ ಆ ಆನಂದದಿಂದ ನನ್ನ ಹೃದಯವು ದಶ ಗುಣವಾಗಿ ಏಸಾರ್ತಗೊಳ್ಳುವುದು.

ಅವರಿಬ್ಬರೂ ದೊರೆಯದೇ ಹೋದಲ್ಲಿ ಹೊಟ್ಟೆಯು ಮತ್ತೂ ದುಂಡಾಗುವುದೆಂದು ಅರಿಂದಮನು ಮನಸ್ಸಿನಲ್ಲಿಯೇ ಭಾವಿಸಿಕೊಂಡು, ಯಾವುದೊಂದು ಕಾಗದಪತ್ರವೂ ಇಲ್ಲದೆ ನಾನು ಏನುತಾನೇ ಮಾಡ ಲಾದೀತು? ಇದಕ್ಕಾಗಿ ತಾವು ಇಷ್ಟು ಹಿಂದು ಮುಂದು ಆಲೋಚಿಸು ವುದಕ್ಕೆ ಕಾರಣವೇನೋ ನನಗೆ ತಿಳಿಯದು, ಎಂದು ವ್ಯಕ್ತವಾಗಿ ಹೇಳಿದನು.

ಗೋಪಾಲ—ಇಲ್ಲ ಇಲ್ಲ; ಹಿಂದು ಮುಂದು ಯೋಚಿಸುವುದೇ ನಿಜ? ಈಗಲೇ ಬರೆದುಕೊಡುತ್ತೇನೆ. ನಾನು ಏನೇನು ಬರೆಯಬೇಕೋ ಮತ್ತೂ ಎಷ್ಟು ರೂಪಾಯಿಗಳಾದರೆ ತಾವು ಸಂತುಷ್ಟಿಗೊಳ್ಳುವಿರೋ ಹೇಳಿರಿ.

ಅರಿಂದಮ—ಒಂದುನೂರು ಎಂದರೆ ಒಪ್ಪಿಗೆಯೆ?

ಗೋಪಾಲ—ಒಂದುನೂರೆ? ನಾನು ನಿಮಗೆ ಐದುನೂರು ಕೊಡುತ್ತೇನೆ.

ಅರಿಂದಮನು—(ಮನಸ್ಸಿನಲ್ಲಿಯೇ ನಗುತ್ತ) ಮಹಾಶಯರ ಹೃದಯವು ಬಹು ಉದಾರವಾದದ್ದು. ಹೇಗಾದರೂ ಆಗಲಿ, ನಾನು ತಮಗಾಗಿ, ಮತ್ತಷ್ಟು ಉತ್ಸಾಹದಿಂದ ಕೆಲಸಮಾಡುತ್ತೇನೆ.

ಗೋಪಾಲ—ಏನೆಂದು ಬರೆಯಬೇಕು?

ಅರಿಂದಮ—ಮತ್ತೇನೂ ವಿಶೇಷವಾಗಿಲ್ಲ; ತಮ್ಮ ಕಾರ್ಯವು ಕೈಗೂಡಿದರೆ ತಾವು ನನಗೆ ಐದುನೂರು ರೂಪಾಯಿಗಳ ಪುರಸ್ಕಾರ ಕೊಡುವುದಾಗಿ ಬರೆದು ನಿಮ್ಮ ಪೂರ್ತಿಯಾದ ಹೆಸರಿನ ಹಸ್ತಾಕ್ಷರ ಹಾಕಿಕೊಟ್ಟರೆ ಸಾಕು.

ಗೋಪಾಲಚಂದ್ರನು ಅದೇ ಅರ್ಥದಲ್ಲಿ ಒಂದು ಸಮ್ಮತಿ ಪತ್ರವನ್ನು ಬರೆದು ತನ್ನ ಹೆಸರಿನ ಸಹಿಮಾಡಿದನು. ಆನಂತರ ಅದನ್ನು ಅರಿಂದಮನ ಕೈಯಲ್ಲಿಕೊಟ್ಟನು.

ಅರಿಂದಮ—'ಯಥೇಷ್ಟವಾಯಿತು' ಎಂದು ಹೇಳಿ ಕೂಡಲೇ ಅದನ್ನು ಕಿಸೆಯಲ್ಲಿ ಹಾಕಿಕೊಂಡು, ಈ ಮೊದಲು ತಮ್ಮ ಕಾರ್ಯದಲ್ಲಿ ಯತ್ನಶೀಲನಾಗಿದ್ದೇನೆ. ಮಹಾಶಯ, ಮೊದಲು ತಮ್ಮ ಮನೆಯನ್ನು ನಾನು ಹುಡುಕಿನೋಡಬೇಕು, ಎಂದನು.

ಈ ಮಾತನ್ನು ಕೇಳಿ ಗೋಪಾಲಚಂದ್ರನು ಹೊ ಹೊ ಹೋ ಎಂದು ಗಟ್ಟಿಯಾಗಿ ನಗತೊಡಗಿದನು. ನಗೆಯ ವೇಗವು ಕಡಮೆಯಾದ ಮೇಲೆ, "ಆದಹಾಗೆಯೇ ಆಯಿತು. ನಿಮ್ಮಂತಹ ಬುದ್ಧಿವಂತರಿಂದ ನನಗೆ ಬಹಳ ಉಪಕಾರವಾಗುವುದೆಂಬುದನ್ನು ನಾನೀಗಲೇ ದಿವ್ಯ ಚಕ್ಷುವಿನಿಂದ ನೋಡುತ್ತಿದ್ದೇನೆ. ಈ ಮನೆಯಲ್ಲಿ ಹುಡುಕುವುದರಿಂದ ಆಗುವುದೇನು? ಈ ಮನೆಯನ್ನು ಹುಡುಕುವುದರಿಂದ ಅವರು ಪತ್ತೆಯಾಗುವುದಿಲ್ಲ. ಈವರೆಗೂ ಅವರು ಈ ಮನೆಯೊಳಗೇ ಅವಿತುಕೊಂಡಿರುವರೆಂದು ಭಾವಿಸಿದಿರಾ?" ಎಂದು ಕೇಳಿದನು.

ಅರಿಂದಮ—ಅವರುಗಳೇ ಸಿಕ್ಕದಿದ್ದರೂ ಹೇಗೆ ಮಾಡಿದರೆ ಅವರು ಸಿಕ್ಕುವರೋ ಅದನ್ನು ಸಿಶ್ಚಯಿಸಬಹುದು. ಅದಕ್ಕಾಗಿಯೇ ನಾನು ಮನೆಯನ್ನು ಹುಡುಕಬೇಕೆಂದು ಹೇಳಿದ್ದು. ಇದಕ್ಕೆ ತಾವೇಕೆ ಅಸಮ್ಮತರಾಗಬೇಕು?

ಗೋಪಾಲ—ಅಸಮ್ಮತಿಯೇನು ಬಂತು ; ಏನೂ ಇಲ್ಲ ; ಮನೆಯೊಳಗಿರುವವರಿಗೆಲ್ಲಾ ಸ್ವಲ್ಪ ತೊಂದರೆಯಾಗುವುದೆಂದು ಹೀಗೆ ಹೇಳಿದೆ.

ಅರಿಂದಮ—ತೊಂದರೆ ಏನೂ ಇಲ್ಲ. ನಾನು ನಿಮ್ಮ ಮನೆಯ ಸ್ನೆಲ್ಲಾ ಹುಡುಕಬೇಕೆಂದಿಲ್ಲ. ಮನೆಯ ಹೆಂಗಸರು ಮಕ್ಕಳು ಇದ್ದ ಲ್ಲಿಯೇ ಇರಲಿ. ನಾನು ಮನೆಯ ನಾಲ್ಕೂ ಕಡೆಯನ್ನು ಬಳಸಿನೋಡ ಬೇಕು. ಇದರಿಂದ ತೊಂದರೆಯಾಗುವುದೇನಿದೆ ?

ಗೋಪಾಲ—ಇದರಿಂದ ತೊಂದರೆ ಇಲ್ಲವಾದರೂ ಹೀಗೆ ನೋಡು ವುದರಿಂದ ಫಲವಾದರೂ ಏನು ? ನನಗೊಂದೂ ತಿಳಿಯುವುದಿಲ್ಲ.

ಅರಿಂದಮ—ಜೇಷ, ಅದನ್ನು ತಾವು ಈಗ ತಿಳಿಯಬೇಕಾದ ಅವಶ್ಯಕವಿಲ್ಲ.

"ಹಾಗಾದರೆ, ನಾನು ಒಂದು ಸಲ ಮನೆಯೊಳಕ್ಕೆ ಹೋಗಿ ಬರುತ್ತೇನೆ" ಎಂದು ಹೇಳಿ, ಗೋಪಾಲಚಂದ್ರನು ತನ್ನ ಸ್ಥೂಲ ದೇಹ ವನ್ನು ಹೊತ್ತುಕೊಂಡು, ಅಮಿಯಹಾಗೆ ಅಂತಃಪುರಕ್ಕೆ ಹೋಗಿ, ಸ್ವಲ್ಪ ಹೊತ್ತಿನಲ್ಲಿಯೇ ಹಿಂದಿರುಗಿಬಂದು ಅರಿಂದಮನನ್ನು ಕುರಿತು, "ಮಹಾಶಯ, ದಯವಾಡಿಸಬೇಕು" ಎಂದನು.

ಮೂವ್ವರೂ ಒಟ್ಟು ಮನೆಯೊಳಕ್ಕೆ ಪ್ರವೇಶವಾಡಿದರು.

ಹನ್ನೆರಡನೆಯ ಪರಿಚ್ಛೇದ

ಸನ್ಮಾರ್ಗದ ಅಭಿನಯ

ಬಳಮನೆಯ ಹಿಂಭಾಗದಲ್ಲಿ ಸಾಧಾರಣವಾದ ಒಂದು ಕೊಳ ವುತ್ತು. ಅದರ ನಾಲ್ಕೂ ಕಡೆಯಲ್ಲಿ ಬಗೆಬಗೆಯಾದ ಫಲವೃಕ್ಷಗಳು. ಹೊರಗಿನ ಜನರ ದೃಷ್ಟಿಯು ಆ ಸ್ಥಳಕ್ಕೆ ಬೀಳದಿರುವುದಕ್ಕಾಗಿ ಆ ಸ್ಥಳದ ನಾಲ್ಕೂ ದಿಕ್ಕಿನಲ್ಲಿ ಎತ್ತರವಾದ ಪೌಳೀಗೋಡೆ. ಈ ಪುಷ್ಕರಿಣಿಯು ಮನೆಯ ಹೆಂಗಸರಿಂದ ವ್ಯವಹರಿಸಲ್ಪಡುತ್ತಲಿದೆ.

ಅರಿಂದಮನು ಗೋಪಾಲಚಂದ್ರ ಮತ್ತು ದೇವೇಂದ್ರವಿಜಯರನ್ನು ಸಂಗಡ ಕರೆದುಕೊಂಡು ಆ ಚಿಕ್ಕ ತೋಟವನ್ನು ಪ್ರವೇಶಿಸಿ ನಟ್ಟಮನಸ್ಸಿನಿಂದ ಪರೀಕ್ಷಿಸತೊಡಗಿದನು. ಹಾಗೆಯೇ ಪರೀಕ್ಷಿಸಿ ನೋಡುತ್ತಬಂದು ಒಂದು ಕಡೆ ಸ್ಥಿರವಾಗಿ ನಿಂತುಕೊಂಡನು. ಅಲ್ಲಿ ಅನೇಕ ಬಾಳೆಯ ಗಿಡಗಳು ಪುಶಸ್ತವಾದ ಎಲೆಗಳಿಂದ ಪರಿಶೋಭಿಸುತಲಿದ್ದುವು. ಅವುಗಳಲ್ಲಿಯೂ ಎರಡು ಮೂರು ಗಿಡಗಳು ಮಿಕ್ಕ ಗಿಡಗಳಿಗಿಂತ ಅತಿಶಯ ಕಾಂತಿಭರಿತವಾಗಿದ್ದುವು. ಅರಿಂದಮನು ಗೋಪಾಲಚಂದ್ರನನ್ನು ಕುರಿತು—ಎಲ್ಲ ಗಿಡಗಳಿಗಿಂತ ಈ ಎರಡು ಮೂರು ಗಿಡಗಳು ಬಹು ಕೋಮಲವಾಗಿವೆ, ಎಂದು ಹೇಳಿದನು.

ಗೋಪಾಲ— ಹೌದು, ಈ ಗಿಡಗಳೇ ಜೇರೆ ಜಾತಿಯವು. ನಮ್ಮ ಬೇಸಾಯಗಾರರಲ್ಲಿ ರಾಮಸನಾತನನೆಂಬವನು ತಮ್ಮ ಮಾವನ ಮನೆಯಿಂದ ಇವುಗಳನ್ನು ತಂದುಕೊಟ್ಟನು. ಪಮಪಾಡಿ, ಮುಂದೆ ಹೋಗಿ ತೋಟವನ್ನು ಬಳಸಿಬರೋಣ, ಎಂದು ಹೇಳಿದನು.

ಅರಿಂದಮ—ಇಲ್ಲ, ನಾನು ಇನ್ನೆಲ್ಲಿಗೂ ಬರುವುದಿಲ್ಲ. ನನ್ನ ಕೆಲಸವು ಇಲ್ಲಿಯೇ ಕೈಗೂಡುವುದು. ಮಹಾಶಯ, ಒಂದು ಕೋರಿಕೆಯುಂಟು. ತಾವು ಈ ಬಾಳೆಯ ಗಿಡಗಳನ್ನು ನನಗೋಸ್ಕರವಾಗಿ ಸಷ್ಟ ಪಡಿಸಿಕೊಳ್ಳಲು ಸಮ್ಮತಿಸಬೇಕು; ಇದಕ್ಕೇನಾದರೂ ಪ್ರತಿಬಂಧಕವುಂಟೇನು? ಎಂದು ಕೇಳಿದನು.

ಗೋಪಾಲ—(ನಗುತ್ತಾ) ಬಹಳ ಚೆನ್ನಾಯಿತು; ನೀವು ಬಹಳ ತಮಾಷೆಗಾರರು!

ಗೋಪಾಲಚಂದ್ರನ ಮಾತು ಮುಗಿಯುವುದರೊಳಗಾಗಿ ಅರಿಂದಮನು ಮೂರು ನಾಲ್ಕು ಗಿಡಗಳನ್ನು ಬಳಿನು ಬೇಸಾಡಿದನು. ಅವಕ್ಕಾಗಿ ಅಷ್ಟು ಬಲಪ್ರಯೋಗ ಮಾಡಬೇಕಾದ ಅವಶ್ಯಕವುಂಟಾಗಲಿಲ್ಲ. ಗೋಪಾಲಚಂದ್ರನು, ಏನು ಮಾಡಿದಿರಿ! ಏನು ಮಾಡಿದಿರಿ! ಎಂದು ಹೇಳುತ್ತ ತುಂಬ ಗಾಬರಿಗೊಂಡನು.

ಅರಿಂದಮನು ಗೋಪಾಲಚಂದ್ರನನ್ನು ಒಂದು ಸಲ ದುರದುರನೆ ನೋಡಿ, ಮತ್ತೊಮ್ಮೆ—'ತಾವು ಸುಮ್ಮನಿರೋಣವಾಗಲಿ' ಎಂದು ಹೇಳಿ, ತನ್ನ ಕಾರ್ಯಸಾಧನೆಗೆ ವಿಶಂಕವಿಲ್ಲದಂತೆ ಪಾಠಿಕೊಂಡು ತನ್ನ ನಡುವೆ ನಲ್ಲಿಟ್ಟುಕೊಂಡುಬಂದಿದ್ದ, ಉದ್ದವಾದ ಅಲಗಿರುವ, ಹರಿತವಾದ ಚೂರಿಯನ್ನು ಹೊರಕ್ಕೆ ತೆಗೆದು ಅದರಿಂದ ಆ ಗಡಿಗೆಕಿದ್ದ ಸ್ಫಟಿಕವನ್ನು ಅಗೆಯ ತೊಡಗಿದನು.

ಅರಿಂದಮನ ಈ ಕಾರ್ಯವನ್ನು ನೋಡಿಯೂ, ಅವನು ಮಾಡಿದ ತಿರಸ್ಕಾರಸೂಚಕವಾದ ಭರ್ತ್ಸನೆಯನ್ನು ಕೇಳಿಯೂ ಗೋಪಾಲ ಚಂದ್ರನ ಮುಖವು ಬಾಡಿ ವಿಷಣ್ಣವಾಯಿತು. ಅವನ ಕೈಕಾಲುಗಳು ನಡುಗಲಾರಂಭಿಸಿದುವು. ಅವನು ಒಂದೊಂದು ಹೆಜ್ಜೆಯಂತೆ ಹಿಂದಕ್ಕೆ ಸರಿಯಲು ಪ್ರಯತ್ನಿಸಿದನು. ಅರಿಂದಮನ ದೃಷ್ಟಿಯು ಅವನ ಕಡೆಗೂ ಇದ್ದಿತಾಗಿ ಅರಿಂದಮನು—ಮಹಾಶಯ, ಪಲಾಯನ ಮಾಡಬೇಡ; ಸ್ಥಿರನಾಗಿರಲ್ಲು. ಇಲ್ಲವಾದರೆ ಇಲ್ಲೆ ನೋಡು, ಒಂದು ಪಿಸ್ತೂಲು ತೋರಿಸಿ, ಒಂದು ಹೆಜ್ಜೆ ಮುಂದಿಟ್ಟರೂ ಪಿಸ್ತೂಲಿನಿಂದ ಹೊಡೆದು ಕಾಲು ಮುರಿಯುತ್ತೇನೆ, ಒಂದು ಗುಂಡಿದನು.

ಗೋಪಾಲ—ಇಲ್ಲ, ಮತಕ್ಕೆ ಬೆದರಲಿ, ಯಾವುದಾಗಿ ಭಯ ಪಡಬೇಕು. ನೀವು ಹೋಲೀಸಪರೇ ಆದರೂ ನನಗೆ ಉಪಕಾರಿಗಳಾದ ಸ್ನೇಹಿತರು, ಒಂದು ಅಂಗಲಾಚಿದನು.

ಅರಿಂದಮನು ನಗುತ್ತಾ, ಅದು ಸಿಶ್ಚಯ, ಒಂದು ಹೇಳಿ, ದೇವೇಂದ್ರವಿಜಯನನ್ನು ನೋಡಿ—ನೀನು ಈ ಪಿಸ್ತೂಲನ್ನು ಸರಿಯಾಗಿ ಹಿಡಿದುಕೊಂಡು ನಿಲ್ಲು. ಜೋಪಾನ, ಅವನು ಒಂದು ಹೆಜ್ಜೆ ಸರಿದರೂ ಒಡನೆ ಸುಟ್ಟುಬಿಡು' ಎಂದನು.

ದೇವೇಂದ್ರವಿಜಯನು ಈ ಅದ್ಭುತರಹಸ್ಯದ ಮರ್ಮವನ್ನು ತಿಳಿಯಲಾರದೆ, ವಿಸ್ಮಿತನಾಗಿ ಅರಿಂದಮನಿಂದ ಪಿಸ್ತೂಲನ್ನು ತೆಗೆದು ಕೊಂಡನು.

ಅರಿಂದಮನು ಚೂರಿಯಿಂದ ಬೇಗ ಬೇಗನೆ ಮಣ್ಣನ್ನು ಅಗೆದು ಎತ್ತಿಹಾಕುತ್ತಿದ್ದನು. ಎರಡು ಮೂರು ಗಿಡಗಳನ್ನು ಕಿತ್ತುಹಾಕ ದ್ದುದರಿಂದಲೇ ಆ ಸ್ಥಳವು ಬಹು ಮಟ್ಟಿಗೆ ಆಳವಾಗಿದ್ದಿತು. ಸದ್ಯಃ ಅರಿಂದಮನ ಅಲ್ಪಪರಿಶ್ರಮದಿಂದಲೇ ಅವನ ಕಾರ್ಯೋದ್ದಾರವಾಯಿತು. ಸ್ವಲ್ಪಹೊತ್ತಿನೊಳಗಾಗಿಯೇ ಆ ಹಳ್ಳದಿಂದ ಅರಿಂದಮನು ಮನುಷ್ಯ ದೇಹದ ಸಂಪೂರ್ಣವಾದ ತೋಳಿನ ಮೂಳೆಯನ್ನು ಹೊರಕ್ಕೆ ತೆಗೆದನು. ಬೆರಳು ಮೊದಲು ಮಾಡಿಕೊಂಡು ಭುಜ ಪರದಲ್ಲಿನ ಸಂಧಿಸ್ಥಾನದವರೆಗೂ ಆ ಮೂಳೆಯಿದ್ದಿತು.

ಅದನ್ನು ನೋಡಿ ಅರಿಂದಮನು ಆನಂದಿತನಾದನು; ದೇವೇಂದ್ರ ವಿಜಯನು ನಡುಗಿದನು; ಗೋಪಾಲಚಂದ್ರಸಿಗಾದರೋ ಈ ಪ್ರಪಂಚ ವೆಲ್ಲವೂ ಸುತ್ತುತ್ತಿರುವಂತೆ ಭ್ರೋಫವಾಯಿತು.

ಗೋಪಾಲಚಂದ್ರನು ಸಹಸಾ ಸಮಾಧಾನ ತಂದುಕೊಂಡು— ಇದೇನು ವ್ಯಾಪಾರ! ಈ ಮೂಳೆಯಸ್ಪಿಲ್ಲಿಗೆ ಯಾರು ತಂದರು? ರಾಧಾಪರಾಧವ! ಎಂದನು.

ಅರಿಂದಮ—ತರುವರರು ಯಾರು—ತಾವೇ ತಂದಿರುವಿರಿ. ಈ ಕೆಲಸವು ತಮ್ಮದೇ. ಇದು ರೋಹಿಣಿಯು ಸತ್ತಳೆಂಬುದಕ್ಕೆ ಸಾಕ್ಷಿ ಯಾಗಿ ಫೂಲಸಾಹೇಬನಿಂದ ಕೊಡಲ್ಪಟ್ಟುದೆಂಬುದು ಜ್ಞಾಪಕಕ್ಕೆ ಬರಲಿಲ್ಲವೇನೊ?

ಗೋಪಾಲ—ಛಿದೆಂತಹ ಪಾತಕ! ನೀವು ಸುಳ್ಳು ಹೇಳು ತ್ತಿರುವಿರಿ.

ಅರಿಂದಮ—ನಮ್ಮಿಬ್ಬರಲ್ಲಿ ಒಬ್ಬನು ಸುಳ್ಳುಗಾರನೆಂಬುದನ್ನು ತಾವು ಹೇಗೆ ತಿಳಿದುಕೊಂಡಿರುವಿರೋ ಹಾಗೆಯೇ ನಾನೂ ತಿಳಿದು ಕೊಂಡಿದೇನೆ. ಈಗ ತಮ್ಮ ಕೈಗಳಿಗೆ ಕೋಳಗಳನ್ನು ತೊಡಿಸಲು ನಾನು ಪ್ರೇರಿತನಾಗಿ ಬಂದಿದ್ದೇನೆ, ಎಂದು ಉತ್ತರ ಹೇಳಿದನು.

ಕೋಳದ ಹೆಸರನ್ನು ಕೇಳಿದುದೇ ತಡ, ಗೋಪಾಲಚಂದ್ರನು ತನ್ನ ದೊಡ್ಡಹೊಟ್ಟೆಯನ್ನು ಕುಗ್ಗಿಸುತ್ತಾ ಹಾರಿಯಾಡಲು ಉಪಕ್ರಮಿ

ಸಿದನು. ಅರಿಂದಮನು ದೇವೇಂದ್ರಸಿಜಯಸಿಗೆ ಸಂಜ್ಞೆಮಾಡಿದನು. ದೇವೇಂದ್ರಬಾಬುವು ಗೋಪಾಲಚಂದ್ರನ ಕೈಗಳೆರಡನ್ನೂ ಭದ್ರವಾಗಿ ಹಿಡಿದುಕೊಂಡನು; ಅರಿಂದಮಬಾಬುವು **ಶ್ರೀಯುತ ಗೋಪಾಲ ಚಂದ್ರವಸುವಿನ ಕೈಗೆ ಕೈಕೋಳಗಳನ್ನು ತೊಡರಿಸಿಯೇಬಿಟ್ಟನು.**

ಹದಿಮೂರನೆಯ ಪರಿಚ್ಛೇದ

ಪ್ರಮಾಣಪತ್ರ

ಗೋಪಾಲಚಂದ್ರನು ಅರಿಂದಮನಸನ್ನು ಕುರಿತು,—ನೀವು ನಮ್ಮವರಾಗಿ ನನ್ನ ಕೈಗೇ ಕೋಳಗಳನ್ನು ತೊಡಿಸುವುದೇ?

ಅರಿಂದಮ—ನಾನು ತಮ್ಮವನೂ ಅಲ್ಲ, ಅವರವನೂ ಅಲ್ಲ; ನಾನು ಪೋಲೀಸು ನೌಕರ. ದೋಷಿಯಾದವನೊಡನೆ ಮರ್ಯಾದೆಯನ್ನು ಕಳೆಯುವ ಇಂತಹ ಸ್ವಪಕಾರವನ್ನೇ ನಡೆಯಿಸಲು ನೇಮಕ ಪಟ್ಟಿರುತ್ತೇನೆ.

ಗೋಪಾಲಚಂದ್ರನು ಕಣ್ಣು ಕೆಂಪಗೆಮಾಡಿಕೊಂಡು—ಯಾವ ಆಧಾರದಿಂದ ನೀವು ನನ್ನನ್ನು ದೋಷಿಯೆಂದು ನಿಶ್ಚಯ ಮಾಡಿದಿರಿ? ಎಂದು ಕೇಳಿದನು.

ಅರಿಂದಮ—'ಅವಶ್ಯಕವಾದ ಪ್ರಮಾಣಗಳು ನನ್ನ ಪತ್ತಿರ ದಲ್ಲಿಯೇ ಇವೆ' ಎಂದು ಹೇಳುತ್ತಾ, ಒಂದು ಕಾಗದವನ್ನು ಹೊರಕ್ಕೆ ತೆಗೆದು ಅದನ್ನು ಗೋಪಾಲವಸುವಿನ ಬಿರಾಗಿ ಹಿಡಿದು—ಮಹಾಶಯ! ಈ ಕಾಗದವು ಯಾರದು? ಗುರ್ತಿಸಬಲ್ಲಿರಾ? ಎಂದು ಕೇಳಿದನು.

ಈ ಕಾಗದವನ್ನು ಅರಿಂದಮನು ಫೂಲಸಾಹೇಬನಿಂದ ಸಂಗ್ರಹಿಸಿದ್ದನು. ಪಶಾತ್ತಾಪಗೆ ಪತ್ತಿರದಲ್ಲಿ ಪಾಪವನ್ನು ನೋಡಿದುದೇ ಆದರೆ ಪಥಿಕನು ಹೇಗೆ ಹೆದರಿ ಪಿಂಜರಿದು ಸಿಲ್ಲುವನೋ, ಆ ಕಾಗದವನ್ನು ನೋಡಿದ ಗೋಪಾಲಚಂದ್ರನ ಅವಸ್ಥೆಯೂ ಬಹಳವಾಗಿ ಹಾಗೆಯೇ ಇದ್ದಿತು. ಗೋಪಾಲಚಂದ್ರನು ಗರ್ಜಿಸತೊಡಗಿದನು. ಮತ್ತೂ

ದೃಢಸ್ವರದಿಂದ ಹೇಳಿದನು—ಎಂದಿಗೂ ಇಲ್ಲ! ಈ ಕಾಗದವು ನನ್ನ ದಲ್ಲ!! ಎಂದು.

ಅರಿಂದಮ—ಸುಮ್ಮನಿರಿ; ಬಹಳ ಗಲಭೆ ಮಾಡಬೇಡಿರಿ. ಈ ಕಾಗದವು ನಿಮ್ಮ ಕೈಯ ಅಕ್ಷರವಲ್ಲವೆ? ಮತ್ತೂ ಇದರ ಅಡಿಯಲ್ಲಿ ರುವ ರುಜುವೋ—ನೋಡಿ ಹೇಳಿರಿ, ಈ ರುಜುವು ನಿಶ್ಚಯವಾಗಿ ನಿಮ್ಮದು ಹೌದೇ ಅಲ್ಲವೇ?

ಗೋಪಾಲ—ಅಲ್ಲ, ಈ ಬರವಣಿಗೆಯು ನನ್ನ ಕೈಬರಹವಲ್ಲ; ಈ ರುಜುವೂ ನನ್ನದಲ್ಲ.

ಗೋಪಾಲಚಂದ್ರನು ಇಷ್ಟಕ್ಕೆ ಮೊದಲು ಅರಿಂದಮನಿಗೆ ಬರೆದುಕೊಟ್ಟಿದ್ದ ಸಮ್ಮತಿ ಪತ್ರವನ್ನು ಅರಿಂದಮನು ತೆಗೆದು ತೋರಿಸಿ—ಇದರ ಬರವಣಿಗೆ ನಿಮ್ಮದೇ ತಾನೇ? ಅಥವಾ ಇದೂ ನಿಮ್ಮದಲ್ಲವೋ? ನೋಡಿ ಹೇಳಿರಿ. ಈ ನಿಮ್ಮ ಕೈಬರಹದೊಂದಿಗೆ ಇದರಲ್ಲಿರುವ ನಿಮ್ಮ ರುಜುವನ್ನು ಸರಿಯಾಗಿ ಹೋಲಿಸಿ ನೋಡಿರಿ, ಎಂದನು.

ಇಷ್ಟಾದರೂ ಗೋಪಾಲಚಂದ್ರನು ಮೊದಲಿನ ಹಾಗೆಯೇ ಸೃಷ್ಟಿಸೆ! ಸೃಷ್ಟಿಸೆ! ಈ ಕಾಗದವನ್ನು ಸೃಷ್ಟಿಸೆ! ನೀವುಗಳು ಬಹು ಭಯಂಕರ ಮನುಷ್ಯರು! ಎಂದು ಹೇಳಿದನು.

ಅರಿಂದಮನು ಮುಗುಳ್ನಗೆ ನಗುತ್ತಾ—ಆದರೂ, ತಮ್ಮನ್ನು ಬಂಧಿಸಿದವರಲ್ಲ, ಎಂದು ಹೇಳಿ—ಮಣಿಮ ತಿಸೆಯಿಂದ ಸ್ವಂತ ಅಣ್ಣನ ಮಗಳನ್ನು ಕೊಲ್ಲಿಸಿದನನು ಮನುಷ್ಯನೆ? ಅನನು ಮನುಷ್ಯರೂಪಿನ ರಾಕ್ಷಸ!! ಎಂದು ಪುನಃ ಹೇಳಿದನು.

* * * * .

ಅರಿಂದಮನು ಯಾವ ಕಾಗದದ ಆಧಾರದಿಂದ ಗೋಪಾಲಚಂದ್ರನನ್ನು ದಸ್ತಗಿರಿಮಾಡಿದನೋ ಆ ಕಾಗದವನ್ನು ನಾವು ನೋಡಿದೆವು. ಆ ಕಾಗದದಲ್ಲಿ ಬೀಗುತ್ತು:—

''ಕೇಶವಬಾಬು,

ಇಂದಿಗೆ ಎರಡು ದಿನಗಳಾದುವು. ತಮ್ಮ ಯಾವುದೊಂದು ವರ್ತಮಾನವೂ ಬರಲಿಲ್ಲವಾಗಿ ಬಹಳ ಕುತೂಹಲಿಯಾಗಿದ್ದೇನೆ. ಸಾವಧಾನ! ಆದಷ್ಟು ಬೇಗನೆ ರೇವತಿಯನ್ನೂ ರೋಹಿಣಿಯನ್ನೂ 'ಖೂನಿ'ಮಾಡಿರಿ. ಅವರು ಖೂನಿಯಾದ ಬಗ್ಗೆ ಯಾವುದಾದರೊಂದು ಗುರುತನ್ನು ನನಗೆ ತಲ್ಪಿಸಿದರೆ ನಾನು ಆ ಕೂಡಲೇ ತಮಗೆ ಸಲ್ಲಬೇಕಾದುದನ್ನು ಸಲ್ಲಿಸುತ್ತೇನೆ.

ಇತಿ,

ಶ್ರೀ ಗೋಪಾಲಚಂದ್ರವಸು.''

ಮತ್ತೂ ಎರಡು ಕಾಗದಗಳು :—

''ಕೇಶವಬಾಬು,

ತಾವು ನನ್ನಲ್ಲಿ ಅವಿಶ್ವಾಸಿಗಳಾಗಿರುವೆಂಬುದು ಗೋರಾಚಾಂದನ ಹೇಳಿಕೆಯಿಂದ ವ್ಯಕ್ತವಾಯಿತು. ಸದ್ಯಃ ನಾನು ತಮಗೆ ಒಂದು ಕಾಸೂ ಕೊಡಲಾರೆ. ಕೊಡಲಾರೆನೇಕೆ—ಕೊಡುವುದಿಲ್ಲ. ಮೊದಲು ಕೆಲಸವಾಗಬೇಬೇಕು. ನನ್ನನ್ನು ನೀವು ಸಂತುಷ್ಟಿಗೊಳಿಸಿದನಂತರ ನಿಮ್ಮ ಪರಿಶ್ರಮಕ್ಕಾಗಿ ಕೊಡುತ್ತೇನೆಂದು ಹೇಳಿರುವ ರೊಕ್ಕವನ್ನು ಉತ್ತರ ಕ್ಷಣದಲ್ಲಿಯೇ ಕೊಡಲುಳ್ಳವನು. ಹೀಗೆ ಮಾಡುವುದೂ ಅಲ್ಲದೆ ನಿಮಗೆ ಪುರಸ್ಕಾರವನ್ನೂ ಮಾಡಬೇಕೆಂದಿದ್ದೇನೆ. ನೀವು ರೇವತಿಯನ್ನೂ ರೋಹಿಣಿಯನ್ನೂ ಆದಷ್ಟು ಬೇಗ 'ಖೂನು'ಮಾಡಿ. ಗೋರಾಚಾಂದನ ಮೂಲಕನಾಗಿ ಗುರ್ತನ್ನು ಕಳುಹಿಸಬೇಕು. ಫಲರಹಿತವಾದ ನಿಮ್ಮ ಈ ಕಾಲಹರಣವು ನನ್ನನ್ನು ಸಾರಗಾಣದ ಆಲೋಚನೆಗೆ ಗುರಿಮಾಡಿರುತ್ತದೆ. ತಾವು ಒಬ್ಬ ಕಾರ್ಯನಿರ್ವಾಹಕರಾದ ಕೆಲಸಗಾರರಾಗಿದ್ದುಕೊಂಡೂ ಹೀಗೆ ಕೆಲಸಮಾಡದೇ ಇರುವುದು ತುಂಬ ವ್ಯಸನಕರವಾದ ವಿಚಾರ. ಬರುವ ವಾರದೊಳಗಾಗಿ ಕಾರ್ಯನಿರ್ವಾಹಮಾಡಿ ನನ್ನ ಕಡೆಯಿಂದ ತಮಗೆ ಬರಬೇಕಾದುದನ್ನೆಲ್ಲಾ ಬರಮಾಡಿಕೊಳ್ಳುವಿರೆಂದು ನಂಬಿರುತ್ತೇನೆ. ಇತಿ.

ಶ್ರೀ ಗೋಪಾಲಚಂದ್ರವಸು.''

"ಕೇಶವಬಾಬು,

ತಾವು ರೇವತಿಯನ್ನೇನೂ ಮಾಡಿರುವುದಿಲ್ಲ. ಈ ಕಾಗದವನ್ನು ಓದಿದ ಕೂಡಲೇ ರೇವತಿಯನ್ನೂ ತೀರಿಸಿ ಆ ಬಗ್ಗೆ ಗುರ್ತನ್ನು ಬೇಗನೆ ಕಳುಹಿಸಿಕೊಡಿರಿ. ರೋಹಿಣಿಯ ಶವದೇಹವನ್ನು ತಾಣೆಗೆ ಕಳುಹಿಸಿ ಎಂತಹ ಪರಾಕ್ರಮವನ್ನು ಪ್ರದರ್ಶನ ಮಾಡಿದಿರೋ ಅಂತಹ ಪರಾಕ್ರಮ ಪ್ರದರ್ಶನಕ್ಕಾಗಿ ರೇವತಿಯ ಶವವನ್ನು ಉಪಯೋಗಿಸಬೇಡಿ. ಅದರಿಂದ ಯಾವ ಫಲವೂ ಇಲ್ಲ. ಪ್ರಯೋಜನಕ್ಕೆ ಬದಲಾಗಿ ವಿಪತ್ತಾಗುವ ಸಂಭವವೇ ಬಹಳವಾಗಿರುತ್ತದೆ. ರೇವತಿಯ ಶವವನ್ನು ಮರೆಮಾಡಿಬಿಡಿರಿ. ರೋಹಿಣಿಯನ್ನು ಕೊಂದುದರಿಂದ ಒಪ್ಪಂದದ ಅರ್ಧಭಾಗ ಹಣ ಕಳುಹಿಸಬೇಕೆಂದು ಹೇಳುತ್ತೀರಿ. ರೋಹಿಣಿಯ ಮರಣದಿಂದ ನನ್ನ ಕೆಲಸವು ಅರ್ಧ ಮಾತ್ರ ಅನುಕೂಲವಾಗಿದ್ದಿದ್ದರೆ ನೀವು ಕೇಳುವ ಹಾಗೆ ಅರ್ಧ ಹಣ ಕಳುಹಿಸಿ ಕೊಡುತ್ತಿದ್ದೆನು. ರೋಹಿಣಿಯೊಬ್ಬಳನ್ನು ಕೊಂದ ಮಾತ್ರದಿಂದ ನನಗೆ ಏನೂ ಉಪಕಾರ ಮಾಡಿದ ಹಾಗಾಗಲಿಲ್ಲ. ಈಗ ನಾನು ತಮಗೆ ಖಂಡಿತವಾಗಿ ಏನನ್ನೂ ಕೊಡಲಾರೆ. ರೋಹಿಣಿಯು ಇಲ್ಲದಿರುವಾಗ ರೇವತಿಯೇ ಸಮಸ್ತ ಸಂಪತ್ತಿಗೂ ಅಧಿಕಾರಿಣಿ ; ನೀವು ಮಾಡಿದ ಕೆಲಸದಿಂದ ರೇವತಿಗೆ ಅನುಕೂಲವಾಯಿತು. ಈ ಸಂದರ್ಭದಲ್ಲಿ ನನಗೇನು ಬಂದ ಹಾಗಾಯಿತು? ರೋಹಿಣಿಯ ಮರಣದ ಸಾಕ್ಷ್ಯವಾಗಿ ತಾವು ಕಳುಹಿಸಿದ್ದ ಒಂದು ಕಯ್ಯನ್ನು ನಮ್ಮ ಒಳಮನೆಯ ಪೆತ್ತಲಿನಲ್ಲಿ ಹೂಳಿಟ್ಟು ಇದೇನೆ. ರೋಹಿಣಿಯ ಕೈಯನ್ನು ಕಳುಹಿಸಿದಂತೆ ರೇವತಿಯ ಒಂದು ಕೈ ತೆಗೆದು ಕಳುಹಿಸಿದರೆ ಫಲವಿಲ್ಲ. ರೋಹಿಣಿಯ ಕೈಯಲ್ಲಿ ಒಂದು ಕಪ್ಪು ಸುಟ್ಟ ಗಾಯದ ಗುರುತು ಇದ್ದುದರಿಂದ ಗುರ್ತಿಸಿದ್ದಾಯಿತು. ಕತ್ತರಿಸಿದ ರೇವತಿಯ ತಲೆಯನ್ನು ಕಳುಹಿಸಿಕೊಡಿ. ಇತಿ,

ಶ್ರೀ ಗೋಪಾಲಚಂದ್ರವಸು."

* * * *

ಅರಿಂದಮನು ಪ್ರಯತ್ನವುರಸ್ಸರವಾಗಿ ಶ್ರೀಯುತ ಗೋಪಾಲಚಂದ್ರಸನ್ನು ಸ್ಥಳದ ತಾಣೆಗೆ ಕಳುಹಿಸಿದನು.

ಅಧರ್ಮದ ಪರಿಣಾಮವು ಹೀಗೆಯೇ ಶೋಚನೀಯವಾಗುವುದು.

ಹದಿನಾಲ್ಕನೆಯ ಪರಿಚ್ಛೇದ

ನಿರುಪಮೆ

ವೇಣೀವಾಧವಪುರದಲ್ಲಿ ಅವಶ್ಯಕವಾಗಿ ಆಗಬೇಕಾಗಿದ್ದ ಕೆಲಸಗಳನ್ನೆಲ್ಲಾ ಮುಗಿಯಿಸಿಕೊಂಡು ಅರಿಂದಮನು ದೇವೇಂದ್ರಪೂಜೆಯನ್ನೂ ಕರೆದುಕೊಂಡು ರಘುನಾಥಪುರಕ್ಕೆ ಬಂದನು. ರಘುನಾಥಪುರವು ಅರಿಂದಮನ **ತಾರೂರು.** ವೇಣೀವಾಧವಪುರದಿಂದ ಹುಗಲೀ ಜಿಲ್ಲೆಗೆ ಬರಬೇಕಾದರೆ ರಘುನಾಥಪುರಕ್ಕೆ ಹತ್ತಿರವಾಗಿಯೇ ಪ್ರಯಾಣ ಮಾಡಬೇಕಾಗುವುದು. ರಘುನಾಥಪುರದಲ್ಲಿರುವವರೆಲ್ಲರಿಗೂ ಹುಗಲಿಯ ಸಮೃದ್ಧಶಾಲೆಯೆಂದರೆ ಅರಿಂದಮನೇ ಸರಿ. ಅಲ್ಲಿ ಅತನಿಗೆ ಯಥೇಷ್ಟವಾದ ಭೂಸಂಪತ್ತಿಯುಂಟು. ಅವನ ವಾಸಗೃಹವು ಏಸ್ಥಾರವಾದದ್ದು. ಅದಕ್ಕೆ ಸರಿಸಮವಾದ ಬರತಂತ್ರಿಯ ಮಹಡಿಯ ಮನೆಯು ಆ ಗ್ರಾಮದಲ್ಲಿ ಇದರ ಏಸಾ ಒಂದೂ ಇಲ್ಲ. ಮನೆಯ ಪಂಭಾಗದಲ್ಲಿ ಮುರಬ್ಬಿಗಳಿಂದ ಶೋಭಿಸುವ ರಮ್ಯವಾದ ಉದ್ಯಾನ. ಅದರಲ್ಲಿ ಮತ್ಸ್ಯಸಮೂಹವನ್ನೊಳಕೊಂಡ ನಿರ್ಮಲವಾದ ನೀರು ತುಂಬಿದ ಏಸ್ಥಾರವಾದ ಸರೋವರ. ಸ್ವಲ್ಪದರಲ್ಲಿ ಹೇಳುವುದೆಂದರೆ, ಸಮೃದ್ಧಿಸಂಪನ್ನನಾದವನಿಗೆ ಏನಾವುದು ಅವಶ್ಯಕವೋ ಅರಿಂದಮನಿಗೆ ಅವುಗಳೊಂದರ ಅಭಾವವೂ ಇರಲಿಲ್ಲವೆನ್ನಬೇಕು.

ಆ ಊರನಲ್ಲಿ ದೇವೇಂದ್ರಪೂಜೆಯನು ಬರದು ದಿನಗಳನ್ನು ಕಳೆದನು. ಊಟ ಉಪಚಾರ ನಿದ್ರೆ ಇವು ಸ್ವಾಭಾವಿಕವಾಗಿ ನಡೆದುವು. ಕಳ್ಳರು, ದರೋಡೆಯವರು ಮುಂತಾದವರನ್ನು ಹಿಡಿಯುವುದರಲ್ಲಿ ಅರಿಂದಮನಿಗೆ ಹೇಗೆ ಆಸಕ್ತಿಯಿದ್ದಿತೋ ಹಾಗೆಯೇ ಏನಾನು ಹಿಡಿವುದರಲ್ಲಿಯೂ ಒಂದು ಬಗೆಯ ಉತ್ಸಾಹವು ಪ್ರಬಲವಾಗಿದ್ದಿತು. ಅತನು ನಿತ್ಯವೂ ಬೆಳಿಗ್ಗೆ ಗಾಳವನ್ನು ತೆಗೆದುಕೊಂಡು ಸರೋವರದ ಸೋಪಾನದಲ್ಲಿ ಕುಳಿತು ಮತ್ಸ್ಯಕುಲವನ್ನು ಧ್ವಂಸಮಾಡತೊಡಗುವನು.

ಒಂದು ದಿನ ಪ್ರಾತಃಕಾಲದಲ್ಲಿ ಅಲ್ಲ–ಮಧ್ಯಾಹ್ನದಲ್ಲಿ ಅರಿಂದಮನು ದೇವೇಂದ್ರವಿಜಯನನ್ನು ಕುರಿತು—ನೀನು ಬರಹು ದಿನಗಳಿಂದಲೂ ಊರಿಗೆ ಹೋಗಬೇಕೆಂದು ಆತುರಪಡುತ್ತಿರುವೆಯಾದ್ದರಿಂದ ನಾಳೆನ ಬೆಳಿಗ್ಗೆ ನಿನ್ನನ್ನು ಕಳುಹಿಸಿ ಒರುತ್ತೇನೆ. ಹಾಗಾಗುವುದಾದರೆ ಇಂದಿನ ರಾತ್ರಿಯು ಭೋಜನವು ಸ್ವಲ್ಪ 'ಜೊಕ್ಕ ಭೋಜನವೇ' ಆಗಿರಬೇಕಾದ್ದು ಅವಶ್ಯಕ. ಹೇಗಾದರೂ ಮಾಡಿ, ಈ ದಿನ ಒಪ್ಪೊತ್ತು ಕಡಿಮೆ ಎಂದರೂ ನಾಲ್ಕಾರು ದೊಡ್ಡ ದೊಡ್ಡ ಮೀನುಗಳನ್ನು ಹಿಡಿಯಬೇಕೆಂದಿದ್ದೇನೆ. ಗಾಳವನ್ನು ತೆಗೆದುಕೊಂಡು ನೀನು ತೋಟಕ್ಕೆ ನಡೆ; ಜಲ್ಲೆಯನ್ನು ಹಾಕಿಕೊಳ್ಳತುಕೊ. ನಾನು ಈಗಲೇ ಬರುತ್ತೇನೆ, ಎಂದು ಹೇಳಿದನು.

ದೇವೇಂದ್ರವಿಜಯ—ನಾನು ಈ ದಿನವೇ ಪ್ರಯಾಣವಾಗಬೇಕಾಗಿತ್ತೇನೆ.

ಅರಿಂದಮ—ಅದೇನು ಒಂತು? ನಾಳೆನ ಬೆಳಿಗ್ಗೆ ಬಂಡಿತ ವಾಗುವುದು ಕಳುಹಿಸಿಕೊಡುತ್ತೇನೆ. ಈ ದಿವಸ ಒಂದೆರಡು ಮೀನುಗಳನ್ನಾದರೂ ನೀನು ಹಿಡಿಯಲೇಬೇಕು. ನಡೆ, ನಾನು ಈಗಲೇ ಬರುತ್ತೇನೆ.

ದೇವೇಂದ್ರವಿಜಯನು ಮೀನಿನ ಬೇಟೆಗೆ ಬೇಕಾದ ಉಪಕರಣ ಗಳೊಡನೆ ತೋಟಕ್ಕೆ ಹೋದನು. ಇದರಲ್ಲಿಯೂ ಅರಿಂದಮನಿಗೆ ಒಂದು ಉದ್ದೇಶವುಂಟು.

* * * *

ಉದ್ಯಾನದಲ್ಲಿ ಭಾಗಶಾಸ್ತ್ರಕ್ಕಾಗಿ ವಾದ ಸ್ವಚ್ಛ ಸರೋವರವು ಸುರ ದೆಲೆಗಳ ನಡುವೆ ಸುಸುಳಿಬಂದ ಜಲಲಸಿಂದ ಸಳನಳಿಸುತ್ತಿದೆ. ವಾಯು ದೇವನ ಮಿಲ್ಲೋಲದಿಂದ ಚಲತವಾದ ತರಂಗಮಾಲೆಯು ದೆಸೆಯಿಂದ ಪ್ರತಿ ಸೂರ್ಯೋದಯದಲ್ಲಿಯೂ ರವಿಕಿರಣವು ಸಹಸ್ರ ಖಂಡಗಳಾಗಿ ಸ್ಫುಟ ಫಲಿಸುತ್ತಿದೆ; ಮತ್ತು ಉದ್ಯಾನವು ಕುಸುಮ ಸೌರಭದಿಂದ ಪೂರ್ಣ ವಾಗಿದೆ.

ದೇವೇಂದ್ರವಿಜಯನು ಗಂಭೀರವಾಗಿ ನಡೆಯುತ್ತ ಸೋಪಾನದ ಹತ್ತಿರ ಹೋಗಿ ನೋಡಿದನು. ಸ್ವಚ್ಛವಾಗಿಯೂ ಅಲಗಾಡುತ್ತಲೂ ಇದ್ದ ನೀರಿನಲ್ಲಿ ತನ್ನ ಬರಿದು ಕಾಲುಗಳನ್ನೂ ಮುಳುಗಿಸಿ ನೀರಿಗೆ ಸುಖಾಪವಾಗಿರುವ ಹೆಬ್ಬಲಹೇಳಿ, ಅಪರೂಪ ರೂಪವತಿಯಾದ ಯುವತಿಯೊಬ್ಬಳು ಕುಳಿತು ಮುಖವನ್ನು ಅತ್ತಕಡೆ ತಿರುಗಿಸಿಕೊಂಡಿದ್ದಾಳೆ. ಸಖಾಸದಲ್ಲಿಯೇ ಇದ್ದ ಪಾಸಿನಪುರದಲ್ಲಿ ಮರೆಯಾಗಿ ದೊಂದು ಕೊಂಬೆಯಮೇಲೆ ಕುಳಿತಿರುವ ಯಾವುದೋ ಮಧುರ ಕಂಠದ ಕೋಗಿಲೆಯು ತನ್ನ ಬರಹಾಕಂಬಾದ ವೇದನಾಗೀತವನ್ನು ಹಾಡಿ ಉದ್ಯಾನವನ್ನೆಲ್ಲಾ ಮುಖರಿತವಾಡುತ್ತಿದೆ. ಸುಂದರಿಯು ಆ ಚಂಚಲ ನೇತ್ರಗಳು ಪಂಚಮತಾನದಲ್ಲಿ ಹಾಡುತ್ತಿದ್ದ ಕೋಗಿಲೆಯನ್ನೇ ನೋಡುವುದರಲ್ಲಿ ಸ್ಥಿರವಾಗಿದ್ದುವು; ದೇವೇಂದ್ರವಿಜಯನು ಅಲ್ಲಿಗೆ ಬಂದುದನ್ನು ಅವಳು ನೋಡಲೇ ಇಲ್ಲ.

ದೇವೇಂದ್ರವಿಜಯನು, ನೋಳ್ಪುದಂತೆ ಸಪುಷವಾಗಿಯೂ ಶೈವಲ ದಂತೆ ತರಂಗತರಂಗವಾಗಿಯೂ, ಭೃಮರವಾಲೆಯಂತೆ ಕಪ್ಪಾಗಿಯೂ ಇರುವ ಆ ಸೌಂದರ್ಯ ನಿಧಿಯ ಜುಟ್ಟಿದ ಕೇಶಪಾಮವು ಗುಚ್ಛಗುಚ್ಛವಾಗಿ ಬೆನ್ನಮೇಲೆ ಹೊರಳುತ್ತಾ ಬಂದು ನೀರಿನಲ್ಲಿ ತೋಯುತ್ತಿರುವುದನ್ನು ನೋಡಿದನು. ಆದರೆ, ಆ ರೀತಿಯಾಗಿ, ಅಲ್ಲಿ ನಿಂತುಕೊಂಡು ನೋಡುತ್ತಿರುವುದು ತೀರಾ ಅನ್ಯಾಯವೆಂದುಕೊಂಡು ಹಿಂದಿರುಗಿದನು. ಆ ಸಮಯದಲ್ಲಿ ಬಂದು ತರಗೆಲೆಗೆ ಕಾಲು ತಗಲಿ ಸ್ವಲ್ಪ ಸದ್ದಾಯಿತು. ಯುವತಿಯು ಅವಸರವಸರವಾಗಿ ಅತ್ತಕಡೆ ತಿರುಗಿನೋಡಿದಳು. ನೋಡಿದುದೇ ಅವಳ ಬಾಯಿಲ್ಲಿ ಮಾತು ಹೊರಡಲಿಲ್ಲ. ಅವಳ ಆಗಿನ ರೀತಿಯನ್ನು ನೋಡಿದರೆ ಓಳಬೇಕೋ, ಮುಳುಗಬೇಕೋ, ಓಡಿ ಹೋಗಬೇಕೋ ಯಾವುದೂ ತೋರದಾಗಾಯಿತೆಂದು ಭಾಸವಾಯಿತು.

ದೇವೇಂದ್ರವಿಜಯನು ಕೂಡ ಆ ನಿರುಪಮೆಯ ಮುಖವನ್ನು ನೋಟ ಮುಗ್ಧನಾದನು; ವಿಸ್ಮಯಗೊಂಡನು; ಬಹ್ವಲತೆಯಿಂದ

ಅಲ್ಲಿಯೇ ಸ್ತಂಭಿತನಾದನು. ಏನ್ಮಯಗೊಂಡ ದೇವೇಂದ್ರಪಜಯನು ಅವಳನ್ನು ಕುರಿತು ವ್ಯಾಕುಲಿತ ಕಂಠದಿಂದ "ನೀನು ಈ ಸ್ಥಳದಲ್ಲಿ!" ಎಂದನು.

ಹದಿನೈದನೆಯ ಪರಿಚ್ಛೇದ

ಪರಿಶಿಷ್ಟ

ಅರಿಂದಮನು ಆ ವೇಳೆಗೆ ಸರಿಯಾಗಿ ಅಲ್ಲಿಗೆ ಬಂದನು. ಈವರೆಗೂ ಅತನು ಮರೆಯಾಗಿದ್ದನೆಂದು ಬೋಧೆಯಾಯಿತು. ಅವನನ್ನು ನೋಡಿ ಆ ಯುವತಿಯು ನಾಚಿಕೆಯಿಂದ ಬೇಗಬೇಗನೆ ಮೆಟ್ಟಿಲುಗಳನ್ನು ಹತ್ತಿ ಹೊರಟುಹೋದಳು. ದೇವೇಂದ್ರಪಜಯನು ಅಪ್ರತಿಭನಾದವನ ಹಾಗಾಗಿ ಇತ್ತಲೂ ಅತ್ತಲೂ ನೋಡತೊಡಗಿದನು. ಅರಿಂದಮನ ಮಂತ್ರಿಪನ್ನು ನೋಡಲು ಅವನಿಗೆ ಸಾಧ್ಯವಿಲ್ಲ!

ಈ ರೀತಿಯನ್ನೆಲ್ಲಾ ನೋಡಿ ಅರಿಂದಮನು—ನಡೆ, ಈಗ ನಿನ್ನು ವಿಧಾನು ಹಿಡಿಯುವುದಾಗುವುದಿಲ್ಲ. ಗಾಮುದ ಹುಡುಗಿಯರೆಲ್ಲರೂ ಈ ಘಾಟಿಗೆ ನೀರಿಗೆ ಬರುವ ವೇಳೆಯಾಯಿತು. ಸಾಯಂಕಾಲದ ನಂತರ ವಾಗಲಿ, ಬಂದನು.

ದೇವೇಂದ್ರಪಜಯನ ಮನಸ್ಸಿನಲ್ಲಿ ದಾರುಣವಾದ ಉತ್ಕಂಠತೆ. ಅವನು ಅರಿಂದಮನನ್ನು ಕುರಿತು ಬಹು ಸಾಹಸವಾಡಿ—ಈಗ ಇಲ್ಲಿಂದ ಹೊರಟುಹೋದವಳನ್ನು ತಾವು ಬಲ್ಲಿರಾ? ಎಂದು ಕೇಳಿದನು.

ಅರಿಂದಮ—ಕಾರಣವೇನು ಹೇಳು?

ದೇವೇಂದ್ರಪಜಯನು ನಿರುತ್ತರನಾಗಿದ್ದನು.

ಅರಿಂದಮ—ಈ ಘಾಟಿಗೆ ಈ ಗಾಮುದ ಹೆಣ್ಣುಮಕ್ಕಳೆಷ್ಟೋ ಬರುತ್ತವೆ. ನಾನು ಅವರನ್ನೆಲ್ಲಾ ಏಕೆ ಗುರ್ತಿಸಲಿ? ಆದರೆ ನಮ್ಮ ಮನೆಯ ಹೆಂಗಸರು ಕಲಕೆಲಸದವರನ್ನು ಗುರ್ತಿಸಬಹುದು!!

ದೇವೇಂದ್ರವಿಜಯ—ಈಗ ನಾನು ಇಲ್ಲಿ ನೋಡಿದವಳು ರೇವತಿಯು ಹಾಗೆಯೇ ಕಾಣುವಳು; ಅವಳು ರೇವತಿ.

ಅರಿಂದಮನು ಗಟ್ಟಿಯಾಗಿ ನಕ್ಕು, ನಿಶ್ಚಯವಾಗಿ? ಅವಳನ್ನು ಕೇಳಿ ಅವಳ ಹೆಸರು ತಿಳಿದುಕೊಂಡೆಯೇನು?

ದೇವೇಂದ್ರವಿಜಯ—ಹೆಸರು ಕೇಳಿ ತಿಳಿಯುವೇಕಾದ ಅವಶ್ಯಕವಿಲ್ಲ. ನನಗೆ ಚೆನ್ನಾಗಿ ಗೊತ್ತಿದೆ. ಅವಳು ರೇವತಿ. ಅದೇ ಮುಖ, ಅದೇ ಕಣ್ಣು, ಅದೇ ರೀತಿ. ಎಲ್ಲವೂ ಅದೇ. ನಾನು ಎಂದೂ ಭ್ರಾಂತಿ ಗೊಂಡುದಿಲ್ಲ.

ತಂತಮ್ಮ ತಪ್ಪು ತಮಗೆ ಎಂದಿಗೂ ಕಾಣಿಸದು. ಅಲ್ಲದೆ ಈ ಎಲ್ಲ ವಿಚಾರಗಳಲ್ಲಿ ಭ್ರಾಂತಿಗೊಳ್ಳುವುದು ಒಳ್ಳೆ ತಪ್ಪೇ ಸರಿ. ಹೇಗಾದರೂ ಆಗಲಿ, ನಾನು ಹಿಡಿಯಬೇಕೆಂದು ನಿನ್ನನ್ನು ಇಲ್ಲಿಗೆ ಕಳುಹಿಸಿದೆನು; ನೀನು ಒಂದೇಬಾರಿಗೆ ಒಬ್ಬ ನಾನಾಕ್ಷಿಯನ್ನೇ ಗಂಟುಹಾಕಿ ಕೊಂಡಿರುವೆ. ಹುಡುಗರ ಸಾಹಸವೇ ಸಾಹಸ! ಎಂದು ಅರಿಂದಮನು ನಗುತ್ತಾ ಹೇಳಿದನು.

ದೇವೇಂದ್ರ—ತಮಗೆ ಎಲ್ಲವೂ ತಿಳಿದಿದೆ. ತಾವ್ರ ಎಲ್ಲವನ್ನೂ ನನಗೆ ಮರೆಮಾಚುತ್ತಿದ್ದೀರಿ. ನಾನು ಈಗ ನೋಡಿದವಳು ರೇವತಿಯು ಹೌದೋ ಅಲ್ಲವೋ ಹೇಳಿರಿ.

ಅರಿಂದಮ—ಅವಳು ರೇವತಿಯೇ ಹೌದು. ಯಾವ ರೀತಿಯಿಂದಲಾದರೂ ರೇವತಿಯನ್ನು ಕರೆದುಕೊಂಡು ಬರುತ್ತೇನೆಂದು ಹೇಳಿ ನಿನಗೆ ಪ್ರಮಾಣಮಾಡಿಕೊಟ್ಟಿದ್ದೆನಷ್ಟೆ; ಹಾಗೆ ಪ್ರತಿಜ್ಞೆಮಾಡುವುದಕ್ಕೆ ಮೊದಲೇ ನಾನು ರೇವತಿಯನ್ನು ಅವಳಿಗೆ ಉಂಟಾಗಿದ್ದ ಆಪತ್ತುಗಳಿಂದ ತಪ್ಪಿಸಿ ಕರೆದುಕೊಂಡು ಬಂದಿದ್ದೆನು. ಒಬ್ಬ ಪೋಲೀಸು ನವಸಿಗೆ ರೇವತಿಯ ಅಪ್ಪನ ವೇಷವನ್ನು ಹಾಕಿ ರೇವತಿಯನ್ನು ಅರ್ಥ ಪಿಶಾಚನಾದ ಯದುನಾಥನಿಂದ ಬಿಡಿಸಿತಂದುವಾಯಿತು. ಅಲ್ಲಿಂದ ರೇವತಿಯನ್ನು ಇಲ್ಲಿಗೆ ಕಳುಹಿಸಿಕೊಟ್ಟೆನು. ಆ ಮೊದಲು ರೇವತಿಯು

ನಮ್ಮ ಮನೆಯಲ್ಲಿಯೇ ಇದ್ದಾಳೆ. ಪ್ರತಿದಿನವೂ ರೇವತಿಯು ಈ ಹೊತ್ತಿ ನಲ್ಲಿ ತೋಟದಲ್ಲಿ ಒಂಟಿಯಾಗಿರುವಳು. ಅವಳನ್ನು ನೀನು ನೋಡಿದರೂ ನೋಡಬಹುದೆಂಬ ಊಹೆಯಿಂದಲೇ ನಾನು ಹಿಡಿಯುವ ನೆವದಿಂದ ನಿನ್ನನ್ನು ಇಲ್ಲಿಗೆ ಕರೆಯಿಸಿದೆನು. ನೀನು ಈಗ ರೇವತಿಯನ್ನು ಕಣ್ಣಾರೆ ಕಂಡಿರುವೆ. ಇನ್ನು ಸಂಶಯವೇನೂ ಉಳಿಯಲಿಲ್ಲವಲ್ಲ? ಎಂದು ಹೇಳಿದನು.

ದೇವೇಂದ್ರವಿಜಯ—ಫೂಲಸಾಹೇಬನು ಸಿಕ್ಕಿಬಿದ್ದ ದಿನದ, ನೀವು ಅವನನ್ನು ಕುರಿತು ರೇವತಿಯು ಕೊಲೆಯಾಗದಿದ್ದುದಕ್ಕೆ ಕಾರಣ ಕೇಳಿದಾಗ, ಫೂಲಸಾಹೇಬನು, ತನ್ನ ಬಾಯಿಯಿಂದ ತುತ್ತನ್ನು ನೀವು ಕಸಿಗೊಂಡಿರೆಂದು ಹೇಳಿದನಲ್ಲವೆ? ಅಂದೇ ನೀವು ರೇವತಿಯನ್ನು ಯಾವುದೋ ನಿರ್ಜನವಾದ ಸ್ಥಳದಲ್ಲಿ ಬಚ್ಚಿಟ್ಟಿರಬೇಕೆಂದು ಭಾವಿಸಿದೆನು.

ಅರಿಂದಮ—ಏನಾದರೂ ಆಗಲಿ; ಈಗ ರೇವತಿಗೆ ಅವಳ ಸೋದರಿಯು ಕೊಲೆಯಾದ ವಿಚಾರವನ್ನು ಹೇಳಬೇಕಾದುದಿಲ್ಲ. ಎಷ್ಟು ದಿನ ಅದು ಅವಳಿಗೆ ತಿಳಿಯದಿರುವುದೋ ಅಷ್ಟೂ ಕ್ಷೇಮ. ಈಗ ರೇವತಿಯ ಮನಸ್ಸಿನ ಸ್ಥಿತಿಯು ಅಷ್ಟು ಸಮರ್ಪಕವಾಗಿಲ್ಲ. ಅವಳಿಗೆ ಒದಗಿದ ಭಯಂಕರವಾದ ದುಶ್ಚಿಂತೆಗಳ ದೆಸೆಯಿಂದ ಅವಳ ಶರೀರವು ಬಹು ದುರ್ಬಲವಾಗಿದೆ. ಈ ಸಮಯದಲ್ಲಿ ಶೋಕದ ಆಘಾತವು ಕೊಂಚ ಮಟ್ಟಿಗಾದರೂ ಅವರ ಶರೀರಾಪತ್ತಿಗೆ ತಂದಾ ಶೋಕವು ಸೀಯವಾಗಬಹುದು. ವಿಶೇಷವಾಗಿ, ರೇವತಿಗೆ ರೋಹಿಣಿಯಲ್ಲಿ ಪ್ರಾಣ. ಅವರ ಚಿಕ್ಕಪ್ಪನ ವಿಚಾರವಾಗಿ ಕೂಡ ಈಗ ಅವಳಿಗೆ ಯಾವ ಸಮಾಚಾರವನ್ನೂ ಹೇಳಬಾರದು. ಈ ವಿಚಾರಗಳೆಲ್ಲವನ್ನೂ ಬಂದು ನಾನು ಹೇಳುತ್ತಿರುತ್ತೇನೆ. ದೇವೇಂದ್ರವಿಜಯ, ರೇವತಿಯ ಮನಃಸ್ಥಿತಿಯಲ್ಲಿ ನಾನು ಹೆಣ್ಣಿನ ಕಡೆಯ ಬಂಧುವಾಗಬೇಕೆಂದಿದ್ದೇನೆ, ಎಂದನು.

ದೇವೇಂದ್ರವಿಜಯ—ಇದು ತಮ್ಮ ಅನುಗ್ರಹ.

—ಶ್ರೀ ಸಮಾಪ್ತಿ—